ಕೆನ್ಯದ ಒಂದು ಜಮೀನು ಫಾರಂನಲ್ಲಿದ್ದ ಮನೆಗೆ ಕಳೆದ ಎನೇ ತಾ॥ ರಾತ್ರಿ ಉದ್ದನೆಯ ಚಾಕು ಮತ್ತು ಶಸ್ತ್ರಗಳನ್ನು ಹಿಡಿದು ನುಗ್ಗಿದ ೩ ಜನ ಆಫ್ರಿಕನ್ನರನ್ನು ಒಳಗಿದ್ದ ಇಬ್ಬರ ಬಿಳಿಯ ಜನಾಂಗದ ಸ್ತ್ರೀಯರು ಗುಂಡು ಹಾರಿಸಿ ಕೊಂದು ಹಾಕಿದರೆಂದು ವರದಿಯಾಗಿದೆ

### ವಾಣಿ ವಿದ್ಯಾಲಯದ ವಾರ್ಷಿಕೋತ್ಸವ

ರಾಜಧಾನಿಯ ಕಾಲೇಜು ರಸ್ತೆಯಲ್ಲಿರುವ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ನಾಳಿದ್ದು ಸಂಜೆ ೪ ಗಂಟೆಗೆ ವಾಣಿ ವಿದ್ಯಾಲಯದ ಎರಡನೆಯ ವಾರ್ಷಿಕೋತ್ಸವವು ನೆರವೇರುವುದು. ಶ್ರೀ ಅಗರಂ ರಂಗಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀಮತಿ ಎನ್ ರಾಜಲಕ್ಷ್ಮಿಯವರಿಂದ ಸಂಗೀತವು ಏರ್ಪಾಡಾಗಿದೆ

### ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎಲ್ ಗೋಪಾಲರಾವ್ ವೀಣಾವಾದನ ಮಧ್ಯಾಹ್ನ ೧ ೩೦ ಕೊಳಲು ೨ ಟಿ. ದಯಾನಿಧಿ ಸಿತಾರ್ ಸಂಜೆ ೬ ೪೦ ಎಸ್ ಬಿ ಶ್ರೀನಿವಾಸಮೂರ್ತಿ ಸಂಗೀತ, ೬ ೧೦ ಗಾನವಿಹಾರ ೭ ೩೦ ದಯಾನಿಧಿ ಸಿತಾರ್ ೭ ೪೦ ಕೃಗಾರಿಕಾ ಅಭಿವೃದ್ಧಿ—ಕನ್ನಡದಲ್ಲಿ ಭಾಷಣ ೮ ಎಲ್ ಗೋಪಾಲರಾವ್ ವೀಣಾವಾದನ ೮ ೪೦ ವೃಂದ ಸಂಗೀತ ೯ ೩೦ ಗಾನಾಮೃತ

## ಸಂತಾನ ಪಡೆಯಲು ರಹದಾರಿ !

ಇಂಗ್ಲೆಂಡಿನ ಡಾ॥ ವಿಲಿಯಂ ಸ್ಮಿತ್ ಎಂಬ ವೈದ್ಯರು ಹೊಸವರ್ಷದ ಭಾಷಣ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ, ಮುಂದೆ ಜನರು ರಹದಾರಿ ಪಡೆದನಂತರ ಸಂತಾನ ಪಡೆಯಲು ಅವಕಾಶ ಹೊಂದಬೇಕಾಗುವುದೆಂದು ತಿಳಿಸಿರುತ್ತಾರೆ. ಪ್ರಪಂಚದಲ್ಲಿ ಈಗ ಮೂರನೇ ಯುದ್ಧದ ಭೀತಿಯು ಅಷ್ಟಾಗಿ ಇಲ್ಲದಿದ್ದರೂ ಜನಬಾಹುಳ್ಯದ ಅಪಾಯ ವಿರುವುದೆಂದೂ ಅವರು ಅಭಿಪ್ರಾಯ ಪಟ್ಟಿರುತ್ತಾರೆ. ಪ್ರತಿ ದಿನವೂ ೫೫ ಸಾವಿರ ಹೊಸ ಮಕ್ಕಳಿಗೆ ಅನ್ನಪ್ರಾಶನ ಮಾಡಬೇಕಾಗುವ ಸ್ಥಿತಿಯಿರುವುದರಿಂದ, ಜನನ ಸಂಖ್ಯೆಯನ್ನು ತಡೆಯಲು ಯಾವುದಾದರೂ ರೀತಿಯ ಅಂತರ ರಾಷ್ಟ್ರೀಯ ಹತೋಟಿಯು ಬೇಕೆಂದು ಅವರು ಸೂಚಿಸಿರುವರು. ಪ್ಲೇಗು ಮುಂತಾದ ವ್ಯಾಧಿ, ಕ್ಷಾಮ, ಅಣುಬಾಂಬು ಧಾಳಿ ಅಥವಾ ಜನರಲ್ಲೇ ಒಪ್ಪಿಗೆ ಇವುಗಳಲ್ಲಿ ಯಾವುದೊಂದರಿಂದಲಾದರೂ ಈ ಹತೋಟಿಯು ಸಾಧ್ಯವಾಗಬಹುದೆಂದ ಅವ ಹೇಳಿರುವರು

## ಮುದ್ರಕ ಅಧಿಕಾರಿ ತನಿಖೆ

ಕೇಂದ್ರ ಸರ್ಕಾರದ ವಾಣಿಜ್ಯ ಶಾಖೆಯ ಮಾಜಿ ಕಾರ್ಯದರ್ಶಿ ಎಸ್ ಎ ವೆಂಕಟರಾಮನ್‌ರವರ ನಡತೆಯನ್ನು ಕುರಿತು ತನಿಖೆ ನಡೆಸಲಾಗುವುದೆಂದು ವರದಿಯಾಗಿದೆ. ಅವರನ್ನು ಈಗ ಸಸ್ಪೆಂಡ್ ಮಾಡಲಾಗಿದೆ

### ಹಾಸನದ ಜಿಲ್ಲಾ ರಾಜಕೀಯ ಸಮ್ಮೇಳನ

ಹಾಸನದ ಜಿಲ್ಲಾ ರಾಜಕೀಯ ಸಮ್ಮೇಳನವು ನಾಳಿದ್ದು ಮಧ್ಯಾಹ್ನ ೨ ಗಂಟೆಗೆ ತಲ್ಲಿನ ಸಿಕ್ಸ್ಟರ್ ಪ್ಯಾಲೇಸ್ ಚಿತ್ರಮಂದಿರದಲ್ಲಿ ನಡೆಯುವುದು. ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಕೆ. ವೀರಣ್ಣಗೌಡರು ಆರಂಭೋತ್ಸವವನ್ನು ನೆರವೇರಿಸುವರು. ನಾಳೆ ಸಂಜೆ ೫ ಗಂಟೆಗೆ ಅಲ್ಲಿನ ಸರ್ಕಾರಿ ಪ್ರೌಢಶಾಲೆಯ ಮೈದಾನದಲ್ಲಿ ಭಾರತಸೇವಾ ದಳದ ಪ್ರದರ್ಶನವು ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು

## ಬಿ.ಸಿ.ಜಿ. ಯಿಂದ ಉಂಟಾಗುವ ವಿಷ ನಿವಾರಣಾ ಕ್ರಮ

ನಿಯೋಗಿ ಭಾರತೀಯ ಆಯುರ್ವೇದ ವಿದ್ವಾನ್ ಡಾ॥ ಎನ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಈ ರೀತಿ ಬರೆಯುತ್ತಾರೆ:—

ಭಾರತದ ಆರೋಗ್ಯ ರಕ್ಷಣಾಧಿಕಾರಿಗಳು ಜನರನ್ನು ಘೋರ ಕ್ಷಯ ವ್ಯಾಧಿಯಿಂದ ಮುಕ್ತರನ್ನಾಗಿ ಮಾಡಬೇಕೆಂಬುದು ಸ್ತುತ್ಯವೇ ಸರಿ. ಇದರಿಗೆ ಆಯುರ್ವೇದ ಶಾಸ್ತ್ರಜ್ಞಾನವಿಲ್ಲದ್ದರಿಂದ ಬಿ. ಸಿ. ಜಿ ಸುನ್ನ ಮಾಡಿ ತಮ್ಮ ಅಜ್ಞಾನಗಳ ಚುಚ್ಚಿ ನಿರ್ದೋಷರನ್ನು ಮಾಡುವ ಸಾಹಸ ಬಂತಿಕ ಮಾಡುತ್ತಿರಲಿಲ್ಲ. ಇವರು ತಮ್ಮ ದೇಶದ್ದೇ ಆದ ವೈದ್ಯ ಜ್ಞಾನದಿಂದ ಬಾಹಿರರಾಗಿರುವುದು ಭಾರತೀಯರ ದುರ್ದೈವ. ಏತನ್ಮಧ್ಯೆ ಆಯುರ್ವೇದ ದೃಷ್ಟಿಯಿಂದ ಬಿ ಸಿ ಜಿ ಪ್ರಯೋಗವು ಆರೋಗ್ಯವಂತನಿಗೆ ಕೇವಲ ವಿಷ ಪ್ರಯೋಗವೇ ಸರಿ. ಇದು ದೇಹದಲ್ಲಿ ಒಹಳ ವರ್ಷಗಳ ವರೆವಿಗೆ ಜೀರ್ಣವಾಗದ ನಿಂತು ಅನೇಕ ಉಪದ್ರವಗಳನ್ನುಂಟು ಮಾಡಿ ದೇಹವನ್ನು ನಿರ್ವೀರ್ಯ ಮಾಡುತ್ತದೆ

ಈ ವಿಚಾರವಲ್ಲಿ ಸರ್ಕಾರವಾಗಲೀ ಆರೋಗ್ಯ ಇಲಾಖೆಯವರಾಗಲಿ ಜನರ ಪ್ರತಿಭಟನೆಗ ಲಕ್ಷ್ಯ ಕೊಟ್ಟಿರುವುದಿಲ್ಲ. ಈಗ ಜನಗಳು ಪಾರಾಗುವುದು ಹೇಗೆ? ಯಾರಿಗೆ ಈ ವಿಷದಿಂದ ಮುಕ್ತರಾಗುವ ಇಚ್ಛೆ ಇದೆಯೋ ಅವರು ಈ ಕೆಳಗಿನ ಔಷಧಿ ಸೇವಿಸ ಬೇಕು. ಈ ಔಷಧಿ ಪ್ರಮಾಣ ದೊಡ್ಡವರಿಗೆ ಅನ್ವಯಿಸುತ್ತದೆ. ಚಿಕ್ಕವರು ವಯಸ್ಸಿಗೆ ತಕ್ಕಂತೆ ಕಡಿಮೆ ಸೇವಿಸಬೇಕು.

೧) ಕಕ್ಕೆ ಚಿಗುರು ಒಂದು ಹಿಡಿ ಇದನ್ನು ಸಾಮಾನ್ಯ ಚಟ್ನಿಯಂತೆ ಮಾಡಿ, ಅನ್ನದೊಂದಿಗೆ ಕಲಸಿ ತಿನ್ನಬೇಕು. ಭೇದಿಯಾಗುತ್ತದೆ. ಮೂರನೇ ದಿನದಿಂದ

೨) ಹಿಪ್ಪಲಿ, ಕೊತ್ತಂಬರಿ, ಸಣ್ಣ ಏಲಕ್ಕಿ, ದೊಡ್ಡ ಏಲಕ್ಕಿ, ಕಾವಿ ಕಲ್ಲು, ಸೆಂವರ್ಚ ಲವಣ ಮೆಣಸು, ಮಡಿವಾಳ, ಜಟಾಮಾಂಸಿ, ಲೋಧ್ರದ ಚಕ್ಕೆ ಇವುಗಳನ್ನೆಲ್ಲಾ ಚೂರ್ಣಿಸಿ, ಮುತ್ತಿಲು ಕೋಲ ಚೂರ್ಣ ಎಂಟು ಔನ್ಸು ನೀರಿನಲ್ಲಿ ಹಾಕಿ ಕುದಿಸಿ ಎರಡು ಔನ್ಸಿಗೆ

## ಗಂಡಸರ ದಾದಿ ವೃತ್ತಿಗೆ ಮದ್ರಾಸ್ ಗೌರ್ನರ ವಿರೋಧ

ದಾದಿಯರ ಉದ್ಯೋಗಕ್ಕೆ ಗಂಡಸರು ಕೂಡಗಹಾಕದೆಂದು ಮದ್ರಾಸಿನ ಗೌರ್ನರ್ ಶ್ರೀ ಪ್ರಕಾಶರವರು ಹೇಳಿರುತ್ತಾರೆ. ದಾದಿಯ ವೃತ್ತಿಯಲ್ಲಿ ಸೂಕ್ಷ್ಮ ಭಾವನೆಯು ಅಗತ್ಯ, ಸಾಧಾರಣವಾಗಿ ಅದು ಮಹಿಳೆಯರ ಉದ್ಯೋಗವಾಗಿದೆ. ಗಂಡಸರು ಈ ಉದ್ಯೋಗದಲ್ಲಿ ಪ್ರವೇಶಿಸಿದರೆ, ಮಹಿಳೆಯರು ಗಂಡಸರ ವೃತ್ತಿಯಲ್ಲಿ ಹೆಚ್ಚು ಹೆಚ್ಚಾಗಿ ಪ್ರವೇಶಿಸುವ ಭೀತಿಯಿರುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ

## ವಜ್ರದುಂಗುರವನ್ನು ನುಂಗಿದ ಕಳ್ಳ

ಲಂಡನ್ನಿನ ವಜ್ರಗಳ ವ್ಯಾಪಾರಿಯೊಬ್ಬನ ಅಂಗಡಿಯೊಳಗೆ ಒಬ್ಬ ವ್ಯಕ್ತಿಯು ಮೊನ್ನೆ ಹೋಗಿ ವಜ್ರದುಂಗುರವನ್ನು ತೆಗೆದುಕೊಂಡು, ಅದರ ಸ್ಥಾನದಲ್ಲಿ ಮತ್ತೊಂದು ಉಂಗುರವನ್ನಿಟ್ಟನೆಂದೂ ಪೋಲೀಸರ ಸಹಾಯವನ್ನು ಅಂಗಡಿಯವನು ಕೋರಲಾಗಿ, ಅವನು ವಜ್ರದುಂಗುರವನ್ನು ನುಂಗಿದನೆಂದೂ, ಅನಂತರ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸಿ ಅದನ್ನು ಹೊರಕ್ಕೆ ತೆಗೆಯಲಾಯಿತೆಂದೂ ವರದಿಯಾಗಿದೆ

---

ತಂಗಿಸಿ, ಶೋಧಿಸಿ ಒಂದು ಔನ್ಸಿನಷ್ಟನ್ನು ಬೆಳಗ್ಗೆ ಮತ್ತು ಸಾಯಂಕಾಲ ಒಂದೊಂದು ಚಮಚ ಜೇನುತುಪ್ಪ ಸೇರಿಸಿ ಕುಡಿಯಬೇಕು. ಈ ರೀತಿ ಇಪ್ಪತ್ತನಾಲ್ಕು ದಿನಗಳು ಸೇವಿಸಿದರೆ, ಬಿ ಸಿ ಜಿ ವಿಷ ಹರ


ಇದರ ಪರಿಚಯವಿದೆಯೇ

**ಮೈಸೂರು ಸಾಬೂನು**

ಸಂಪೂರ್ಣವಾಗಿ ಶುದ್ಧವಾದ, ಬಣ್ಣದ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ ಶ್ರಮ, ಕಾಲ ಗಳ ಉಳಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನು ಕೊಡುತ್ತದೆ

ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ
ಎಲ್ಲ ಕಡೆಯೂ ಸಿಗುತ್ತದೆ

**ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು**



## ಸುಸಜ್ಜಿತವಾದ ಮನೆ ಕ್ರಯಕ್ಕಿದೆ

ನಜರ್‌ಬಾದ್ ಮೊಹಲ್ಲಾ ಒಬ್ಬಿಗೆ ಗೂಡಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟ, ಲೈಟು, ಹೀಟಿಂಗ್ ಸರ್ಕ್ಯೂಟು, ನಲ್ಲಿ ಮತ್ತು ಫ್ಲಷ್ ಲ್ಯಾಟ್ರಿನ್ ಮೊದಲಾದ ಸೌಲಭ್ಯಗಳಿಂದ ಕೂಡಿ ಸುಸಜ್ಜಿತವಾಗಿರುವ "ಕಲ್ಪತರು ಕಾಟೇಜ್" ಎಂಬ ಮನೆಯು ಮಾರಾಟಕ್ಕಿದೆ. ಇಚ್ಛೆಯುಳ್ಳವರು ಮನೆಯ ಮಾಲೀಕರನ್ನು ಮನೆಯ ಬಳಿ ವಿಚಾರಿಸಬಹುದು



# ಆರ್. ಜಿ. ಬ್ರಾಂಡ್
## ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)


Edited, Printed and Published by A R. Nagarajan at Sadhvi Press, D Subbiah Road, Mysore


ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,
ಚೋಳ ಸೀರೆಗಳು ಪೂನಾ, ನಾಗಪೂರ್ ಸೀರೆ ಳಗೆ (ಫೋನ್ ನಂ 446)

★ M. V. ಬೋಜಯ್ಯ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು ಮೈಸೂರು

ಫೋನ್ ನಂ 794 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೦೦] ಮಂಗಳವಾರ ೬-೧-೧೯೫೩ [ಸಂಚಿಕೆ ೧೩೩

# ಬೊಂಬಾಯಿ ಲಾರಿಗಳ ಮುಷ್ಕರ ಮುಕ್ತಾಯ

## ನಗರದಲ್ಲಿ ವಾರ್ಡುಗಳ ವಿಂಗಡಣೆ

### ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೬

ಪೌರಸಭಾ ಚುನಾವಣೆಗಳಿಗೆ ಅನು ಕೂಲವಾಗುವಂತೆ ಈ ನಿಮ್ಮ ನಗರದವ ರ ಕ್ಷೇತ್ರಗಳೂ ಸೇರಿ ಒಟ್ಟು ೪೦ ವಾ ರ್ಡಾಗಿ ನಗರವನ್ನು ವಿಂಗಡಿಸುವ ಬಗ್ಗೆ ಪೌರಸಭೆಯು ವಿಶೇಷ ಅಧಿವೇಶನ ವು ನಿನ್ನೆ ಸಂಜೆ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ವಿಂಗಡಣೆ ಉಪ ಸಮಿತಿಯ ವರದಿಯ ನ್ನು ಕಾಂಗ್ರೆಸ್ ಪಕ್ಷದ ಶ್ರೀ ಪಿ ... ಮುಖ್ಯನವರು ಮಂಡಿಸಿದರು ... ಯ ಕಾಲದಲ್ಲಿ ನಿಮ್ಮ ವರ್ಗದವ ... ಗಳ ಪ್ರತ್ಯೇಕ ಕ್ಷೇತ್ರ ... ನ್ನು ಗೊತ್ತು ಪಡಿಸಬೇಕೆಂ ... ಸೂಚಿಸಿರುವ ವಿಷಯವು ರಾಜ್ಯಾಂ ಗದ ಮೂಲ ಭೂತ ಹಕ್ಕಿನ ನಿಬಂಧನೆ ಗೆ ವಿರೋಧವಾಗುವುದೆಂದೂ, ಎಲ್ಲ ... ಯಾವ ಕ್ಷೇತ್ರದಿಂದಲಾದರೂ ಚು ನಾವಣೆಗೆ ನಿಲ್ಲುವಂತೆ ಅವಕಾಶವಿದ್ದು. ಪೌರಸಭೆಯಲ್ಲಿ ಒಟ್ಟು ೪ ಮಂದಿ ನಿಮ್ನ ವರ್ಗದವರಿಗೆ ಸ್ಥಾನಗಳನ್ನು ಮೀಸಲಾ ಗಿಡುವಂತೆ ವ್ಯವಸ್ಥೆಯಾಗಬೇಕೆಂದೂ ಅ ಭಿಪ್ರಾಯಪಟ್ಟು, ವಾರ್ಡು ಸಮಿತಿಯ ವರದಿ ಬಗ್ಗೆ ತಮ್ಮ ಆಕ್ಷೇಪ ವನ್ನು ಸೂಚಿಸಿದರು.

ನಗರದ ಪೌರಸಭಾ ಕಾನೂನಿನ ಪ್ರಕಾರ ಸಧ್ಯದ ಚುನಾವಣೆ ನಿಮಿತ್ತ ... ರವರೇ ಕ್ಷೇತ್ರಗಳನ್ನು ಗೊತ್ತು ಪಡಿಸುವರೆಂದೂ ಅದನ್ನು ಬದಲಾಯಿ ಸಲು ಪೌರಸಭೆಯವರಿಗೆ ಅವಕಾಶವಿಲ್ಲ ... ಅಧಿಕಾರದ ಬಗ್ಗೆ ಸದಸ್ಯ ಕ್ಷೇ ತ್ರಗಳನ್ನು ಗೊತ್ತುಪಡಿಸಲು ಸಾಧ್ಯ ವಿಲ್ಲವೆಂದೂ, ಈಗ ಮಾಡಿರುವುದೇ ಸಾ ... ಸೆಂದೂ ಆಕ್ಷೇಪಣೆಗಳಿಗೆ ಉತ್ತರವೀ ಯಲಾಯಿತು.

ನಗರದ ಇನ್ನೂ ಹಲವು ಕ್ಷೇತ್ರಗಳ ಪರಿಶೀಲನೆಗಾಗಿ ಇವತ್ತಿಗೆ ಸಭೆಯು ಮುಂದೆ ಹೋಯಿತು

## ಬೊಂಬಾಯಿ ಲಾರಿಗಳ ಮುಷ್ಕರ ಮುಕ್ತಾಯ

... ನೇ ತಾರೀಖಿನಿಂದಲೂ ನ ... ಬೊಂಬಾಯಿಯ ಲಾರಿ ... ವನ್ನು ನಿಲ್ಲಿಸುವಂತೆ ಲಾ ... ಸಂಘವು ಸೂಚನೆಯಿತ್ತ ಪ್ರ ... ನಿನ್ನೆ ನಿಂತಿತು ಸರ್ಕಾರ ವನ್ನು ಪರಿಷತ್ ಸಂಘಾನ ನಡೆಸಬೇಕಾ ... ವನ್ನು ಸಂಘದವರು ಒಪ್ಪಿ ... ಮುಷ್ಕರ ನಿಲ್ಲಿಸಲು ಸೂಚನೆ ...

### ತ್ಯಾಗರಾಜ ಜಯಂತಿ

... ವಾಸಿಯ ರಾಮಾನುಜಾ ರಸ್ತೆ ... ನೇ ನಂಬರು ಮನೆಯ ... ಪರಾತ್ಪರಿ ಸಮ್ಮುಖದಲ್ಲಿ ... ಜಯಂತಿ ಅಂಗವಾಗಿ ಪಾ ... ಜಪ ಮತ್ತು ವಿಶೇಷ ಸೇ ... ಬಾಲಕ ಭಕ್ತಾದಿಗಳಿಂದ ಭ ... ಇದೇ ೧೧ ನೇ ತಾ|| ಉತ್ತ ... ಪುಣ್ಯ ಕಾಲದ ಪ್ರಯುಕ್ತ ... ವ್ಯಾಜಾಶೀರ್ವಾದ ಪೂರ್ವಕ ಇ ... ಪ್ರಾರ್ಥನಾದಿ ದೇವತಾ ಕಾರ್ಯ ... ನಡೆಯುವುದು ಸರ್ವರೂ ಭಾಗಿಗ ... ರೆಂದು ಕೋರಲಾಗಿದೆ

## ಶಾರಾವತಿ ವಿದ್ಯುಚ್ಛಕ್ತಿಯಲ್ಲಿ ಶೇ|| ೩೦ ರಷ್ಟು ಖೋತಾ

ಬೆಂಗಳೂರು ೬

ಕೃಷ್ಣರಾಜ ಸಾಗರದಲ್ಲಿ ನೀರಿನ ಸ ರಬರಾಜು ಈಗ ಕಡಿಮೆಯಾಗುತ್ತಿದೆ. ಹಿಂಷಾ ಮತ್ತು ಶಿವಸಮುದ್ರಗಳಲ್ಲಿ ವಿ ದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ತಕ್ಕಷ್ಟು ನೀರು ಸರಬರಾಜಾಗದೇ ಇ ರುವುದರಿಂದ, ಸಂಸ್ಥಾನದ ಕಾರ್ಖಾನೆಗ ಳಲ್ಲಿರುವ ಈಗ ಸೈಕಲ್ಲಿನ ವಿದ್ಯುಚ್ಛಕ್ತಿಯ ಲ್ಲಿ ಶೇ|| ೩೦ರಷ್ಟು ಖೋತಾವನ್ನು ಮಾ ಡಲಿರುವ ಸಂಭವವಿರುವುದೆಂದು ಸರ್ಕಾ ರಿ ಪ್ರಕಟಣೆಯೊಂದು ತಿಳಿಸಿರುತ್ತದೆ ಹಾಗೆ ಮಾಡುವುದಾದರೆ ಸಂಬಂಧಿಸಿದ ಪ್ರತಿಯೊಬ್ಬರಿಗೂ ೪೮ ಗಂಟೆಗಳ ಮುಂ ಚೆ ನೋಟೀಸು ಕೊಡಲಾಗುವುದೆಂದೂ ಸೂಚಿಸಲಾಗಿದೆ

### ರವೆ, ಮೈದಾ ಮತ್ತು ಗೋಧಿ ಹಿಟ್ಟಿನ ಬೆಲೆ ನಿಗದಿ

ಈ ತಿಂಗಳು ಪ್ರಾರಂಭದಿಂದ ಗೋ ಧಿಯ ಬೆಲೆಯನ್ನು ಹೆಚ್ಚಿಸಿರುವುದರ ಅಂಗವಾಗಿ ರವೆ ಮತ್ತು ಗೋಧಿ ಹಿಟ್ಟಿನ ದರವನ್ನು ಈ ರೀತಿ ಗೊತ್ತುಪಡಿಸಲಾ ಗಿದೆ:— ಸಣ್ಣ ರವೆ ಪೌಂಡಿಗೆ ೬ ಅಣೆ, ಮಿಡಿ ... ರವೆ ೬ ಅಣೆ ೨ ಪೈ, ... ಮೈದಾ ಪೌಂಡಿಗೆ ೭ ಅಣೆ, ಗೋಧಿ ಹಿಟ್ಟು ಎರಡೂವರೆ ಅಣೆ ... ವರ್ಗದ ಗೋಧಿಹಿಟ್ಟು ಬೆಲೆಯನ್ನು ಹೆಚ್ಚಿಸಿಲ್ಲ. ಹಿಂದಿನಂತೆಯೇ ಪೌಂಡಿಗೆ ... ಣೆಯಂತೆ ಮಾರಲಾಗುವುದು

## ಯುಗಾದಿ ದಿನ ಆಂಧ್ರ ಪ್ರಾಂತ ಸ್ಥಾಪನೆಯೇ ?

ಈ ವರ್ಷ ಯುಗಾದಿಯ ಹೊತ್ತಿಗೆ ಆಂಧ್ರ ಪ್ರಾಂತವು ರಚನೆಯಾಗುವುದು ಖಚಿತವೆಂದು ಒಂದು ವರದಿಯು ತಿಳಿಸು ರುತ್ತದೆ ಜಸ್ಟಿಸ್ ವಾಂಛೂರವರು ತಮ್ಮ ವರದಿಯನ್ನು ಈ ತಿಂಗಳು ಅಖೈರಿ ನೊಳಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿ ರುವರು ಅದು ತಲುಪಿದೊಡನೆಯೇ ಕೇಂದ್ರ ಗೃಹ ಮಂತ್ರಿ ಕಟ್ಜೂರವರು ಆಂಧ್ರ ನಾಯಕರನ್ನು ಬರಮಾಡಿಕೊಂ ಡು ಮುಂದಿನ ಕ್ರಮ ಕೈಗೊಳ್ಳುವರೆಂ ದೂ, ಪ್ರಕಾಶಂರವರೇ ಹೊಸ ಪ್ರಾಂತ ದ ಪ್ರಥಮ ಮುಖ್ಯ ಮಂತ್ರಿಗಳಾಗುವ ಸಂಭವವಿದೆಯೆಂದೂ ಹೇಳಲಾಗಿದೆ

## ಕೊಡಗಿಗೆ ವಿದ್ಯುಚ್ಛಕ್ತಿ ಕೊಡಲು ಒಪ್ಪಂದ

ಬೆಂಗಳೂರು ೬

ಮೈಸೂರು ಸರ್ಕಾರದೊಡನೆ ಕೊಡ ಗಿನ ಮುಖ್ಯ ಮಂತ್ರಿ ಶ್ರೀ ಸಿ ಎಂ ಪೂ ಣಚ್ಚ ಗೃಹಮಂತ್ರಿ ಶ್ರೀ ಕೆ ಮಲ್ಲಪ್ಪ ಮತ್ತು ಚೀಫ್ ಕಾರ್ಯದರ್ಶಿ ಶ್ರೀ ಸಿ ನರಸಿಂಹವ ರ್ಗೀಯ ವರ ನಿನ್ನೆ ಮಾ ತುಕತೆ ನಡೆಸಿ, ಮುಂದಿನ ೩ ವರ್ಷಗಳ ಲ್ಲಿ ಕೊಡಗಿಗೆ ೧೦೦೦ ಕಿಲೋವಾಟು ವಿ ದ್ಯುಚ್ಛಕ್ತಿಯನ್ನು ಮೈಸೂರು ಸರ್ಕಾರ ದವರು ಒದಗಿಸಲು ಒಪ್ಪಂದವಾಗಿದೆ ಕೃಷ್ಣರಾಜನಗರದಿಂದ ಪಿರಿಯಾಪಟ್ಟ ಣಕ್ಕೆ ತಂತಿಗಳನ್ನು ಹಾಕಲಾಗ ವುದು ಅದಕ್ಕೆ ತಗಲುವ ೫೦ ಲಕ್ಷ ರೂ ಗಳ ನ್ನು ಕೊಡಗು ಸರ್ಕಾರದವರು ಮುಂ ಗಡವಾಗಿ ಕೊಡುವರು. ಅದರಲ್ಲಿ ಅರ್ಧ ಭಾಗ ಬಡ್ಡಿ ಸಮೇತ ಮತ್ತು ಅರ್ಧ ಬಡ್ಡಿಯಿಲ್ಲದೆ ವಾಪಸು ಮಾಡಲಾಗು ವುದು ಕೊಡಗಿನಲ್ಲಿ ವಿದ್ಯುಚ್ಛಕ್ತಿಯ ನ್ನು ಎಲ್ಲ ಕಡೆಗೂ ಕೊಡಲು ಮೈಸೂ ರು ಸರ್ಕಾರದವರೇ ಏರ್ಪಾಡು. ಮಾ ಡುವರು ಒಪ್ಪಂದಕ್ಕೆ ರುಜುವಾದ ನಂ ತರ ೫ ವರ್ಷ ಅದು ಜಾರಿಯಲ್ಲಿರುವು ದು ಅನಂತರ ಹೊಸ ಒಪ್ಪಂದವಾಗ ಬೇಕು ರುಜುವಾದ ೩|| ವರ್ಷಗಳಲ್ಲಿ ಕೆಲಸವನ್ನೆಲ್ಲಾ ಪೂರೈಸಬೇಕಾಗಿದೆ

### ಟಿ. ಚನ್ನಯ್ಯನವರ ಅಪೀಲು ವಜಾ

ತಾವು ಕಾಂಗ್ರೆಸ್ ಪ್ರತಿನಿಧಿಯಾಗಿ ಚು ನಾಯಿತರಾದುದು ಸರಿಯಲ್ಲವೆಂದು ಬೆಂಗ ಳೂರಿನ ಕಾಂಗ್ರೆಸ್ ಚುನಾವಣಾ ನ್ಯಾಯ ಮಂಡಲಿಯು ಕೊಟ್ಟ ನಿರ್ಧಾರದ ವಿರುದ್ಧ ವಾಗಿ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನ ಯ್ಯನವರು ಹೂಡಿದ್ದ ಅಪೀಲನ್ನು ವಜಾ ಮಾಡಲಾಗಿದೆ

## ಪೌರಸಭಾಧ್ಯಕ್ಷ ಕವಿಮಾಷ ನರ ಕಾರುಗಳಿಗೆ ದಿಕ್ಕು

ದಾವಣಗೆರೆಯ ಪೌರ ಸಭಾಧ್ಯಕ್ಷರ ಮ ತ್ತು ನೂತನ ಕಮಿಷನರುಗಳ ಕಾರಿಗೆ ... ನಿನ್ನೆ ದಿಕ್ಕು ... ಯ ... ರಿ ಪ್ರಾಣಾಪಾಯವೇನೂ ಆಗಲಿಲ್ಲ ಅಧ್ಯಕ್ಷ ರ ಕಾರಿನ ಚಕ್ರಗಳು, ರೇಡಿಯೇಟರುಗಳಿಗೆ ನಷ್ಟ ಆಗಿದೆ ಮತ್ತೊಂದು ಕಾರಿನಲ್ಲಿದ್ದ ಕಮಿಷನರ್ ಶ್ರೀ ಕೆ ನರಸಿಂಹಯ್ಯಂಗಾ ರ್ ಮತ್ತು ಅವರ ಪತ್ನಿಗೆ ಸ್ವಲ್ಪ ಗಾಯಗ ಳಾಗಿವೆ ಕಾರನ್ನು ಅವರ ಅಳಿಯಂದಿರು ಡ್ರ ಯಿವ್ ಮಾಡುತ್ತಿದ್ದರು

## ದುಃಖ ನಿವಾರಣೆಗೆ ತತ್ವಜ್ಞಾನದ ಸಹಾಯ

### ಪೂರ್ವ ತತ್ವಜ್ಞಾನ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಲಕ್ನೋ ೬

ಇಲ್ಲಿ ನಿನ್ನೆ ನಡೆದ ಅಖಿಲ ಭಾರತ ಪೂರ್ವ ತತ್ವಜ್ಞಾನ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಬೆಂಗಳೂರಿನ ವಿಶ್ವವಿದ್ಯಾಲಯ ಭೌತ ಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಎ ವೆಂಕಟೇಶಾಚಾ ರ್ಯರು ಭಾಷಣ ಮಾಡಿ, ಭಾರತದ ಏಳಿಗೆ ಗಾಗಿ ತತ್ವಜ್ಞಾನ ಸಮ್ಮೇಳನಗಳು ನಡೆಯು ವುದು ಅವಶ್ಯಕವೆಂದು ಒತ್ತಿ ಹೇಳಿದರು ಅ ವರು ಈ ರೀತಿ ನುಡಿದರು

ಈಗಿನ ಯುವಕ ಯುವತಿಯರಲ್ಲಿ ಆ ರ್ಯ ಸಂಸ್ಕೃತಿ ಮತ್ತು ತತ್ವ ಶಾಸ್ತ್ರಗಳಲ್ಲಿ ಶ್ರದ್ಧಾ ಭಾವವು ಹುಟ್ಟಿ ತಮ್ಮ ದೈನಂದಿನ ನಡೆ ನುಡಿಗಳನ್ನು ಅದನುಸಾರವಾಗಿ ಅವರು ತಿದ್ದಿಕೊಳ್ಳಲು ಸಾಧ್ಯವಾಗುವಂತಹ ಯೋ ಗ್ಯ ಮಾರ್ಗಗಳನ್ನು ತತ್ವಜ್ಞಾನ ಸಮ್ಮೇಳ ನಗಳಲ್ಲಿ ಚರ್ಚಿಸಬೇಕಾಗಿದೆ ಇಲ್ಲ ದಾದರೆ ನಾಸ್ತಿಕತೆಯು ಹರಡಿ, ಪರಸ್ಪರ ದ್ವೇ ಷಾಸೂಯೆಗಳಿಂದ ಜನಾಂಗವು ಛಿದ್ರಛಿದ್ರ ವಾಗುವುದು ಶ್ರೀ ಮಧ್ವಾಚಾರ್ಯರ ತತ್ವ ವು ಕೇವಲ ಮಾಧ್ವ ಸಂಪ್ರದಾಯ ಒಬ್ಬರಿಗೆ ಮಾತ್ರ ಸೀಮಿತವಾದುದೆಂದು ಭಾವಿಸುವುದು ಸರಿಯಲ್ಲ ಸಮಗ್ರ ಲೋಕಕ್ಷೇಮಕ್ಕಾಗಿ ಅ ವರು ಜ್ಞಾನ ಪ್ರಸಾರ ಮಾಡಿರುತ್ತಾರೆ.

ಜನಾಂಗಗಳಲ್ಲಿ ಈಗ ಬೇರೂರಿರುವ ಪರ ಸ್ಪರ ದ್ರೋಹ ಚಿಂತನೆಯು ಕೊನೆಗಾಣ ಬೇ ಕಾದರೆ ತತ್ವ ಶಾಸ್ತ್ರ ಪ್ರಸಾರವಲ್ಲದೇ ಬೇರೆ ಮದ್ದಿಲ್ಲ

ಪ್ರತಿಯೊಬ್ಬ ಜನರಿಗೂ ... ದಲ್ಲಿ ಪ್ರವೃತ್ತ ಬಂದ ಮಾರ್ಗ ... ವೇದಾಧ್ಯಯನ ... ವುಗಳನ್ನು ಬಾಲಕರು ಗ್ರಹಿಸುವಂತಾಗಲು ಅವುಗಳ ಅರ್ಥವನ್ನು ವಿವರಿಸುವುದು ಅವಶ್ಯಕ ಅವಶ್ಯಾಗಿ ಸಂ ಸ್ಕೃತ ಜ್ಞಾನವು ಬೇಕು.

ವಿಜ್ಞಾನ ಶಾಸ್ತ್ರದ ಬೆಳವಣಿಗೆಯು ಈಗ ಬಹಳವಾಗಿದೆ ಅದು ತತ್ವ ವಿಚಾರದ ಮೇ ಲೆ ಪ್ರಭಾವ ಬೀರಲಿದೆ ಅದುದರಿಂದ ಮಧ್ವಾದಿ ಗುರುಗಳಿಗೂ ಅದರ ಪರಿಚಯವು ಅಗ ತ್ಯ ಅದರ ಪ್ರಕಾರ ... ವಿಜ್ಞಾನಿಗಳಿಂತ ಲೂ ಅತಿಶಯವಾದುದೆಂಬುದನ್ನು ಅಧುನಿ ಕರು ಮರೆಯಬಾರದು

ಪೇಜಾವರದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಸ್ವಾಗತ ಭಾಷಣ ಮಾ ಡಿದರು

## ಪಾಕಿಸ್ತಾನದಲ್ಲಿ ಪಿತೂರಿಗಾರರಿಗೆ ಶಿಕ್ಷೆ

ಪಾಕಿಸ್ತಾನ ಸರ್ಕಾರವನ್ನು ಉರುಳಿಸ ಲು ರಾವಲ್ಪಿಂಡಿಯಲ್ಲಿ ಪಿತೂರಿ ನಡೆಸಿದ ರೆಂಬ ಆಪಾದನೆಗೆ ಗುರಿಯಾಗಿದ್ದ ಅಲ್ಲಿ ನ ಮಾಜಿ ಸೈನ್ಯಾಧಿಕಾರಿ ಮೇಜರ್ ಅ ಕ್ಬರ್‌ಖಾನ್ ಮತ್ತು ೧೪ ಜನರ ಪೈಕಿ ಒಬ್ಬರನ್ನು ಖುಲಾಸೆ ಮಾಡಲಾಗಿದೆ ಅಕ್ಬರ್‌ಖಾನರಿಗೆ ೧೨ ವರ್ಷ ಕಠಿಣ ಶಿಕ್ಷೆಯಾಗಿದೆ ಅವರ ಪತ್ನಿಯೂ ಬೇ ಗಂ ಖಾನವಾಹರ ಪುತ್ರಿಯೂ ಆದ ಬೇ ಗಂ ನಾಸೀಮರ ಖುಲಾಸೆಯಾಗಿದೆ

## ಕಿಚಲೂರವರಿಗೆ ಸ್ಟಾಲಿನ್ನರ ಶಾಂತಿ ಬಹುಮಾನ

ಭಾರತದ ಶಾಂತಿ ಸಮಿತಿಯ ಅಧ್ಯ ಕ್ಷರಾದ ಡಾ|| ಸೈಫುದ್ದೀನ್ ಕಿಚಲೂರವ ರಿಗೆ ರಷ್ಯಾದ ಪ್ರಧಾನಿ ಸ್ಟಾಲಿನ್ನರ ಶಾಂ ತಿ ಬಹುಮಾನವನ್ನು ನಿನ್ನೆ ಮಾಸ್ಕೋ ವಿನಲ್ಲಿ ನಡೆದ ಸಮಾರಂಭದಲ್ಲಿ ಕೊಡ ಲಾಯಿತು ೧| ಲಕ್ಷ ರೂಪಾಯಿಗಳ ಈ ಬಹುಮಾನವನ್ನು ಕಿಚಲೂರವರು ಭಾ ರತದ ಶಾಂತಿ ಸಮಿತಿಗೆ ಉದಾರವಾಗಿ ಕೊಡಲಿರುವರು

## ಜನತೆಯಲ್ಲಿ ಅಧ್ಯಾತ್ಮ ವಿದ್ಯಾಪ್ರಚಾರದ ಆವಶ್ಯಕತೆ

### ಯತಿಗಳ ಬಿನ್ನವತ್ತಳೆಗೆ ಪ್ರಭುಗಳ ಉತ್ತರ

ಉಡುಪಿ ೫

[illegible] ಶ್ರೀಮನ್ ಮಹಾರಾಜರಿಗೆ ಇಲ್ಲಿನ ಅಷ್ಟ ಮಠಗಳ ಯತಿವರ್ಯರುಗಳು ನೆನ್ನೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಶ್ರೀಮನ್ ಮಹಾರಾಜರು ಉತ್ತರವಿತ್ತು, ಜನತೆಯಲ್ಲಿ ಶಾಶ್ವತವಾದ ಸುಖವನ್ನುಂಟುಮಾಡುವ ಅಧ್ಯಾತ್ಮ ವಿದ್ಯೆಯ ಪ್ರಚಾರವು ಎಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿದೆಯೆಂದು ತಿಳಿಸಿ, ಈ ಪವಿತ್ರ ಕಾರ್ಯವನ್ನು ಅತ್ಯಂತ ಪ್ರಾಚೀನ ಧರ್ಮದ ರಕ್ಷಣೆಯೇ ಗುರಿಯಾಗಿ ಉಳ್ಳ ಮಠಾಧಿಪತಿಗಳು ತಮ್ಮ ಸಮ್ಮೇಳನಗಳ ಮೂಲಕವೂ, ಪಾಠಶಾಲೆ ಮುಂತಾದುವುಗಳಲ್ಲಿ ಪ್ರವಚನ ಮೂಲಕವೂ ಸಾಧಿಸಬೇಕೆಂದು ಹೇಳಿದರು

ಮಹಾರಾಜರು ಮುಂದುವರಿದು ಈ ರೀತಿ ತಿಳಿಸಿದರು

ಸಂಪದಭ್ಯುದಯ ಸಾಧಕವಾದ ವಿದ್ಯೆಗಳ ವ್ಯಾಪ್ತಿಯು ದಿನೇ ದಿನೇ ರೂಪುಗೊಳ್ಳುತ್ತಿದೆ ಆದರೇನು? [illegible] ದೂರ ಸರಿಯುತ್ತಿವೆ. ಸಂಪತ್ತೆಲ್ಲವನ್ನು ಸಂಪಾದಿಸಿದರೂ [illegible] ದುರ್ಲಭವಾಗಿದೆ. ಸಂಪತ್ತಿನ ಜೊತೆಗೆ ಅಧ್ಯಾತ್ಮ ಸಂಪತ್ತು [illegible] ಬೆಳೆಯದಿರುವುದೇ ಇದಕ್ಕೆ ಕಾರಣ. [illegible] ಮನುಷ್ಯನಿಗೆ, ದೇಶ ದೇಶಕ್ಕೆ [illegible] ಸಮಾಗಕ್ಕೆ ಪರಿಹಾರವೇ [illegible] ತನ್ನ ಉತ್ತಮವಾದ [illegible] ತಂದುಕೊಡುತ್ತಿವೆ. [illegible] ವೈಜ್ಞಾನಿಕ [illegible] ಬಿನ್ನವತ್ತಳೆಯಲ್ಲಿ ಉಲ್ಲೇಖಿಸಿರುವ ರೀತಿಯಲ್ಲಿ ಕೇವಲ ನಶ್ವರವಾದ [illegible]

[illegible] ಸಂಪದಭ್ಯುದಯವೆಂಬುದು ಸಂಪತ್ತಿನ ಅಭ್ಯುದಯವೇ ಹೊರತು ತನ್ನ ಅಭ್ಯುದಯವಲ್ಲ. ತನಗೆ ಶಾಂತಿ [illegible] ಯಾವುದು ಎಂಬ ವಿಚಾರವು ಪ್ರತಿಯೊಬ್ಬ ಮನುಷ್ಯನ [illegible] ಇದಕ್ಕುತ್ತರ ಮಾತ್ರ ಸುಲಭವಲ್ಲ. ಯಾವುದೋ ಒಂದು ಉತ್ತರವನ್ನು ಕಲ್ಪಿಸುವುದೂ ಒಂದು ತೋರಿಕೆಯಾಗಿ [illegible]

ಭಾರತೀಯರಾದ ನಮಗೆ ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಇದಕ್ಕುತ್ತರವಿರುವುದು. ಇದೇ ಅಧ್ಯಾತ್ಮ ವಿದ್ಯೆ. ಇದು ನಮ್ಮ ಆತ್ಮಸ್ವರೂಪವನ್ನು ತಿಳಿಸಿ ಶಾಶ್ವತವಾದ ಆನಂದವನ್ನುಂಟುಮಾಡುವ ವಿದ್ಯೆ. ಇದನ್ನೇ ನಮ್ಮ ಪೂರ್ವಿಕರಾದ ಆಚಾರ್ಯರು ಶ್ರುತಿ ಸ್ಮೃತಿಗಳ ಸಾರವೇ ಇದೆಂದು [illegible] ಲೋಕಕಲ್ಯಾಣಕ್ಕೋಸ್ಕರ ಅನುಗ್ರಹಿಸಿದರು. ಅಧ್ಯಾತ್ಮದೃಷ್ಟಿಯೇ ಮಾನವನ ಸದ್ಗುಣ [illegible] ಉಗಮ ಭೂಮಿಯಾಗಿದೆ

## ಒರಿಸ್ಸಾ ಜಮೀನುದಾರರ ೧೨೦೦೦ ಎಕರೆ ಭೂದಾನ

ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಒಂದು ಭಾ [illegible] ಜಮೀನುದಾರರಾದ [illegible] ಸಾಹೇಬರು ೧೨೦೦೦ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಭಾರತದಲ್ಲೇ ಇಷ್ಟೊಂದು ಹೆಚ್ಚಾಗಿ ಜಮೀನನ್ನು ಯಾವೊಬ್ಬ ವ್ಯಕ್ತಿಯೂ ಕೊಟ್ಟಿಲ್ಲವೆಂದು ತಿಳಿದು ಬಂದಿದೆ

## ಉಲ್ಕೆಯಿಂದ ಅಮೆರಿಕದ ಜನರಿಗೆ ಯುದ್ಧದ ಭೀತಿ

ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ನೆನ್ನೆ ಮಧ್ಯರಾತ್ರಿ ಭಾರಿ ಉಲ್ಕೆಯೊಂದು ಆಕಾಶದಲ್ಲಿ ಹಾದುಹೋದಾಗ ಅಲ್ಲಿ ಜನರು ಯುದ್ಧವು ಪ್ರಾರಂಭವಾಯಿತೆಂದು ಭಾವಿಸಿ, ತಕ್ಷಣ ನಿಜವಾದ ಸಂಗತಿಯನ್ನು ತಿಳಿಯಲು ಟೆಲಿಫೋನು ಮೂಲಕ ಸಮಾಚಾರವನ್ನು ಕೇಳಿದರೆಂದೂ, ನಿಜಸ್ಥಿತಿ ತಿಳಿದನಂತರ ಅವರಿಗೆ ಶಾಂತಿಯುಂಟಾಯಿತೆಂದೂ ವರದಿಯಾಗಿದೆ

## ರಷ್ಯಾ ಸುದ್ದಿಗಾರರಿಗೆ ಜಪಾನ್ ಪ್ರತಿಬಂಧಕ

ಟೋಕಿಯೋ ನಗರದಲ್ಲಿರುವ ಹಲವು ಸುದ್ದಿಗಾರರುಗಳ ಮೇಲೆ ಜಪಾನ್ ಸರ್ಕಾರದವರು ಪ್ರತಿಬಂಧಕವನ್ನು ವಿಧಿಸಿ, ಅವರು ಕೂಡಲೇ ಟೋಕಿಯೋ ನಗರವನ್ನು ಬಿಟ್ಟು ಹೊರಡುವಂತೆ ಆಜ್ಞೆ ಮಾಡಲ್ಪಟ್ಟರೆ [illegible] ಇನ್ನು ಕೆಲವರನ್ನು ಕಳುಹಿಸುವ ವಿಷಯವು ಪರಿಶೀಲನೆಯಲ್ಲಿರವುದೆಂದೂ ಗೊತ್ತಾಗಿದೆ

### ವರ್ಷಕ್ಕೆ ೪೦ ಸಾವಿರ ಟೆಲಿಫೋನುಗಳು

ಬೆಂಗಳೂರು ವಿಮಾನದಲ್ಲಿರುವ [illegible] ನಗರದಲ್ಲಿ ಈಗ ವರ್ಷ [illegible] ಟೆಲಿಫೋನುಗಳ [illegible] ವರ್ಷ [illegible] ಸಾವಿರಕ್ಕೆ ಏರುವುದೆಂದು ತಿಳಿಸಲಾಗಿದೆ

### ಮಹಿಳಾ ಸದನ

ದೇವರಾಜ ಮೊಹಲ್ಲಾ ಮಹಿಳಾ ಸದನದ ಸಹಾಯಾರ್ಥವಾಗಿ ಸದನದ ವಿದ್ಯಾರ್ಥಿನಿಯರಿಂದ ಒಂದು ವಿವಿಧ ವಿನೋದಾವಳಿಯನ್ನು ನಾಳೆ [illegible] ಕೃಷ್ಣ [illegible] ಭವನದಲ್ಲಿ ಏರ್ಪಡಿಸಿದೆ. ಸ್ತ್ರೀಯರಿಗೆ ಮಾತ್ರ ಪ್ರವೇಶ. [illegible] ವರ್ಷಕ್ಕೆ ಕಡಿಮೆ ವಯಸ್ಸಿನ ಮಕ್ಕಳಿಗೆ ಪ್ರವೇಶವಿಲ್ಲ. ಪ್ರವೇಶದರ ಕೇವಲ [illegible] ಆಣೆ, ನಗರದ ಎಲ್ಲ ಮಹಿಳೆಯರೂ ಸಹಕರಿಸಿ ಸಹಾಯ ಪ್ರೋತ್ಸಾಹಗಳನ್ನು ನೀಡಬೇಕಾಗಿ ಕೋರಲಾಗಿದೆ

### ಆರ್ಯ ಸಮಾಜದ ಅಧಿಕಾರಿ ವರ್ಗ

ರಾಜಧಾನಿಯ ಆರ್ಯ ಸಮಾಜದ ವಾರ್ಷಿಕ ಸಭೆಯು ಮೊನ್ನೆ ನಡೆದು ಶ್ರೀ ಬಿ. ಲಕ್ಷ್ಮೀನಾರಾಯಣಪ್ಪನವರು ಅಧ್ಯಕ್ಷರಾಗಿಯೂ ಶ್ರೀ ನಾರಾಯಣ ಶೆಟ್ಟಪ್ಪನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು


## ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು ಉಬ್ಬಸ ಹಾಗೂ ನಾಯಿ ಕೆಮ್ಮು ಮತ್ತು (TONSIL) ಗಲಾಯಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು


## ಕಾಂಗ್ರೆಸ್ ಅಧಿವೇಶನಕ್ಕೆ ಬ್ರಿಟಿಷ್ ಮಾಜಿ ಪ್ರಧಾನಿ

ಹೈದರಾಬಾದು ದಿನದಲ್ಲಿ ಈ ತಿಂಗಳು ಮಧ್ಯ ಭಾಗದಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನಕ್ಕೆ ಬ್ರಿಟನ್ನಿನ ಮಾಜಿ ಪ್ರಧಾನಿ ಕ್ಲೆಮೆಂಟ್ ಅಟ್ಲಿಯವರು ಬರುವ ನಿರೀಕ್ಷೆಯಿದೆ

## ಪೂರ್ವ ಪಾಕಿಸ್ತಾನದಲ್ಲಿ ಬೀಡಿ ಕಾರ್ಖಾನೆಗಳು

ಪಾಕಿಸ್ತಾನದಲ್ಲಿ ರಹದಾರಿಯಿಲ್ಲದೆ [illegible] ದಾಗುವ ಹೊಗೆಸೊಪ್ಪಿಗೆ ಪ್ರತಿಬಂಧಕವು ಹಾಕಲ್ಪಟ್ಟು ಪೂರ್ವ ಬಂಗಾಳದಲ್ಲಿರುವ ಅನೇಕ ಬೀಡಿ ಕಾರ್ಖಾನೆಗಳು ಹೊಗೆಸೊಪ್ಪಿನ ಅಭಾವಕ್ಕಾಗಿ ಮುಚ್ಚಲ್ಪಟ್ಟಿರುವುದಾಗಿಯೂ ಹತ್ತು ಸಾವಿರ ಜನ ಬೀಡಿ ಕಾರ್ಮಿಕರು ನಿರುದ್ಯೋಗಿಗಳಾಗಿರುವರೆಂದೂ ವರದಿಯಾಗಿದೆ. ಸಾಮಾನ್ಯವಾಗಿ [illegible] ಎಲೆಗೆ [illegible] ರೂಪಾಯಿ ಬೆಲೆಯಿದ್ದು ಈಗ ಅದು [illegible] ಗಳಿಗೆ ಹೆಚ್ಚಿರುವುದೆಂದೂ ಹೇಳಲಾಗಿದೆ

## ಹೆಣ್ಣು ಹುಲಿಯೊಡನೆ ಮುದುಕನ ಹೋರಾಟ

[illegible] ಜಿಲ್ಲೆ [illegible] ಎಂಬ [illegible] ವರ್ಷದ ವೃದ್ಧನು ಊರು [illegible] ಹೆಣ್ಣು ಹುಲಿಯು [illegible] ಅದರೊಡನೆ [illegible] ತನ್ನ ಕೈಲಿದ್ದ [illegible] ಹುಲಿಯು [illegible] ಆಸ್ಪತ್ರೆಯಲ್ಲೇ ವ್ಯಕ್ತಿ [illegible] ವರದಿಯಾಗಿದೆ

## ಬಿಳಿಗಿರಿ ರಂಗನ ಬೆಟ್ಟದ ಜಾತ್ರೆಗೆ ಹೋಗುವವರಿಗೆ ಕಾಲರಾ ಇನಾಕ್ಯುಲೇಷನ್

ಬಿಳಿಗಿರಿ ರಂಗನ ಬೆಟ್ಟದಲ್ಲಿ ಇದೇ ತಿಂಗಳು [illegible] ಪ್ರಾರಂಭವಾಗುವ ಚಿಕ್ಕ ಜಾತ್ರೆಗೆ ಹೋಗಲಿರುವವರು ಕಾಲರಾ ಇನಾಕ್ಯುಲೇಷನ್ ಅನ್ನು ಮಾಡಿಸಿಕೊಳ್ಳಬೇಕೆಂದೂ, ಮೈಸೂರು ಜಿಲ್ಲೆಯ ಎಲ್ಲ ಆಸ್ಪತ್ರೆಗಳಲ್ಲೂ ಅದಕ್ಕಾಗಿ ವ್ಯವಸ್ಥೆ ಮಾಡಲಾಗಿರುವುದೆಂದೂ ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ. ಆ ಪ್ರದೇಶದಲ್ಲಿ ಕಾಲರಾ ಸೋಂಕು ಹರಡುವ ಭೀತಿಯಿರುವುದಾಗಿ ಅವರು ತಿಳಿಸಿರುತ್ತಾರೆ


SRI GAYATHRI

TALKIES

To-morrow Last Day

THE GREATEST SHOW ON EARTH



Edited, Printed and Published by A. R. Nagarajan at Sadhvi Press, D. Subbaiah Road, Mysore


## ವಿಮಾನ ಬಾಲದ ಹೆಣ್ಣು ಮಗು

ಫಿಲಿಪ್ಪೈನ್ ದ್ವೀಪಗಳಲ್ಲೊಂದಾದ ಲುಜಾನಿನ [illegible] ಯಲ್ಲಿ ಒಬ್ಬ ರೈತ ದಂಪತಿಗಳಿಗೆ ವಿಮಾನ ಬಾಲವಿರುವ ಹೆಣ್ಣು ಶಿಶುವು ಜನಿಸಿದುದಾಗಿಯೂ, ಹುಟ್ಟುವಾಗಲೇ ತಾಯಿಯ ಪ್ರಾಣ ಹೋಗಿದ್ದಿತೆಂದೂ ಹೇಳಲಾಗಿದೆ. ಮಗುವು ಒಂದು ಅಡಿ ಉದ್ದವಾಗಿತ್ತೆಂದು ವರದಿಯಾಗಿದೆ

## ಗುಂಡ್ಲುಪೇಟೆ ತಾಲ್ಲೂಕು ಜನರ ಕಷ್ಟ ಸ್ಥಿತಿ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ [illegible] ಯಾಗದೆ ಜೋಳವೂ, ರಾಗಿಯ [illegible] ಬೆಳೆಯೂ ಆಗಿರುವುದಿಲ್ಲ. ಇದರಿಂದ [illegible] ಜನತೆಗೆ ಜೀವನ ಮಾಡಲು ಅಸ್ಸಾಧ್ಯವಾಗಿದೆ. ಆಹಾರವು ಸಿಗದಿರುವುದರಿಂದ [illegible] ಕೊಳ್ಳಲು ಅವರ ಬಳಿ ದುಡ್ಡು ಇಲ್ಲ. ಇಂತಹ [illegible] ದಲ್ಲಿ [illegible] ರಾದರೂ ಒಂದು ರಚನಾತ್ಮಕ ಕಾರ್ಯವನ್ನು ಸರ್ಕಾರದವರು ಕೈಗೊಳ್ಳುವುದು ಉತ್ತಮ. [illegible] ಪುರದ [illegible] ರಿಪೇರಿ ಮಾಡಿಸಿದರೆ [illegible] ಲಾಭ ಜನರಿಗೆ [illegible] ಯುವುದು. ಇಂತಹ ಕೆಲಸವನ್ನು [illegible] ಕೈಗೊಳ್ಳಬೇಕೆಂದು [illegible] ಯ ನಿವಾಸಿಗಳು [illegible]

### ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible]

## ಮೈಸೂರು ಪೇಟೆ ಧಾರಣೆ

| ಪಲ್ಲಗಳಿಗೆ | ರೂ ಇಂದ | [illegible] |
|---|---|---|
| ನೆಲಗಡಲೆ | [illegible] | [illegible] |
| ಎಳ್ಳು | [illegible] | |
| ಹುಚ್ಚೆಳ್ಳು | [illegible] | [illegible] |
| ಹೊಂಗಬೀಜ | [illegible] | |
| ಹರಳು ಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | [illegible] |
| ಉದ್ದು | [illegible] | |
| ಹಲಸಂದೆ | [illegible] | [illegible] |
| ಕೊಬ್ಬರಿ ಮಂಡಿಗೆ | [illegible] | [illegible] |
| ಹುಣಸೆಹಣ್ಣು | [illegible] | [illegible] |
| ಸೀಗೆಕಾಯಿ | [illegible] | |
| ಬೆಲ್ಲ | [illegible] | [illegible] |
| ತೆಂಗಿನಕಾಯಿ [illegible] | | [illegible] |


ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ಫೋ: ನಂ 794 ॥ವಂದೇ ಮಾತರಂ॥ ಬಿಡಿ ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧] ಬುಧವಾರ ೬-೧-೧೯೫೩ [ ಸಂಚಿಕೆ ೧೩೪

# ಬೊಲಿವಿಯದಲ್ಲಿ -ದಂಗೆ ದಮನ-

## ಡಾ॥ ಹಯಾತ್‌ರವರಿಗೆ ಸತ್ಕಾರ

ಮೈಸೂರು ೬

ಮೈಸೂರಿನ ವಿದ್ಯುಚ್ಛಕ್ತಿ ಇಲಾಖೆ [illegible] ಸವರು ಸನ್ನಿವಲ್ಲೀ ನಿವೃತ್ತ [illegible] ಗಲಿರುವ ಪ್ರಮುಖ ವಿದ್ಯುಚ್ಛಕ್ತಿ ಇಂ [illegible] ಡಾ॥ ಹಯಾತ್‌ರವರ ಗೌರ [illegible] ವಾಗಿ ನೆನ್ನೆ ಸಂಜೆ ಪ್ರೋಬ್ಸ್ [illegible] ಸ್ ಫಾರ್ವರ್ಡ್ ಸ್ಕೀಮಿನ ಅವರ [illegible] ಒಂದು ಸತ್ಕಾರ ಕೂಟವನ್ನೇ [illegible] ದ್ದರು ಚೀಫ್ ಎಲೆಕ್ಟ್ರಿಕಲ್ ಇಂ [illegible] ರ್ ಶ್ರೀ ಚಾಂಡಿಯವರು ಅಧ್ಯ [illegible] ದ್ದರು ಅಸಿಸ್ಟೆಂಟ್ ಸೂಪರಿಂ [illegible] ಟೆಂಡ ಶ್ರೀ ಎಸ್ ಕೃಷ್ಣಸ್ವಾ [illegible] ಯವರು ಬಿನ್ನವತ್ತಳೆಯನ್ನು ಅರ್ಪಿ [illegible] ಸಿದ [illegible] ಆಕಾಶವಾಣಿ ವಾದ್ಯ ಗೋಷ್ಠಿ [illegible] ವಲೂ ಡಾ॥ ಮನೋಹರರವ [illegible] ವಲೂ ಸಂಗೀತವೂ ಮತ್ತು ಗುಬ್ಬಿ [illegible] ಯವರಿಂದ ನರ್ತನವೂ ನಡೆ ದುವೆ

ಹಯಾತ್‌ರವರು ಮಾತನಾಡಿ [illegible] ಇಲಾಖೆಯ ಕೆಲಸಗಾರ [illegible] ಡನೆಯೂ ಸಹಕರಿಸಿ ಚೆನ್ನಾಗಿ [illegible] ಮಾಡಬೇಕೆಂದು ಹೇಳಿದರು

[illegible] ಈಗ ೧,೫೦ ೦೦೦ ಕಿಲೊ [illegible] ವಿದ್ಯುಚ್ಛಕ್ತಿಯು ತಯಾ [illegible] ರವುವದರಿಂದ ಹಿಂಸಾ ಮತ್ತು [illegible] ಪ್ರಗಳಿಂದ ಬದಗುತ್ತಿರುವ [illegible] ರ ಕಿಲೊ ವಾಟುಗಳ ಜೊತೆಗೆ [illegible] ವ ಬಾಕಿ ವಿದ್ಯುಚ್ಛಕ್ತಿಯನ್ನು [illegible] ಪರಾಜು ಮಾಡುತ್ತಿದೆಯೆಂ [illegible] ಸ ದಿನೇ ವಿದ್ಯುಚ್ಛಕ್ತಿಗಾಗಿ ಬ [illegible] ವ ಒತ್ತಾಯಗಳನ್ನು ನೊಡಿದರೆ [illegible] ವರ್ಷಗಳೊಳಗೆ ಸಂಪ್ಲಾನಕ್ಕೆ [illegible] ವನ್ನು ವಿದ್ಯುಚ್ಛಕ್ತಿಯು ದೊ [illegible] ವ ಅಭಾವವುಂಟಾಗ ವುದೆಂದೂ ಅ [illegible] ಹೊಸ್ಸೆ ಮರಡು ಯೋಜನೆ [illegible] ಗೊಂಡು ಮೂರು ಘಟ್ಟಗಳ [illegible] ದನ್ನು ಮುಗಿಸಿದರೆ ಅದು ಅನುಕೂ [illegible] ವುದೆಂದು ತಿಳಿಸಿದರು

[illegible] ಎಲ್ ಸೂಪರಿಂಟೆಂಡೆಂಟ [illegible] ಶಿವಪ್ರಕಾಶಂ ರವರು ಅತಿಥಿ [illegible] ಗತವನ್ನು ಬಯಸಿದರು

## ವಿಶ್ವೇಶ್ವರಯ್ಯನವರಿಗೆ ಗೌರವ ಪ್ರಶಸ್ತಿ

[illegible] ವಿಶ್ವವಿದ್ಯಾಲಯದ ಘಟಿಕೋ [illegible] ವ ಷ್ಟೆ ಮಹರಾಸಿಸ ಶ್ರೀಕೃಷ್ಣಸ್ವಾ [illegible] ರಾಜಮನ್ನಾರ್, ಹೈದ [illegible] ಮುಖ್ಯಮಂತ್ರಿ ಶ್ರೀ ಬಿ ರಾಮ [illegible] ರವರಿಗೆ ಗೌರವ ಪ್ರಶಸ್ತಿಯನ್ನು [illegible] ಬಿ ತು ಗೃಹಮಂತ್ರಿಯಲ್ಲಿ ಛಾ [illegible] ವ ಸದಾಜರು ಎಂ ವಿಶ್ವೇಶ್ವರ [illegible] ವೆ ತ್ತು ಅಲ್ಲಾಡಿ ಕೃಷ್ಣಸ್ವಾಮಿ [illegible] ತವರಿಗೂ ಪ್ರಶಸ್ತಿಗಳನ್ನು ಕೊಡ [illegible]

## [illegible]ಕರರು ೧೧ ಘಂಟೆಯೊಳಗೆ ಕಛೇರಿಗೆ ಬರಲು ಸೂಚನೆ

[illegible] ಮಂತ್ರಿ ಶ್ರೀ ಕೆ ಹನುಮಂತ [illegible] ವರ ಮೊನ್ನೆ ಬೆಳಗ್ಗೆ ೧೦ ದಾ ಕಛೇ [illegible] ಪಾಟೀಗೆ ಭೇಟಿಯಿತ್ತಾಗ, [illegible] ಕರರು ಇನ್ನೂ ಬಂದಿಲ್ಲದುದ್ದು [illegible] ದು ಪ್ರತಿಯೊಬ್ಬರೂ ೧೧ ಘಂಟೆ [illegible] ಒಳಗೆ ಕಛೇರಿಯಲ್ಲಿರಬೇಕೆಂದು ಸೋಮ [illegible] ಬೇಕೆಂದು ಅಧಿಕಾರಿಗಳಿಗೆ ಸೂಚನೆ ಕಳಿಸಲಾಗಿದೆ

## ಶ್ರೀ ಗೋವಿಂದರಾವ್ ನಾನಲ್‌ರವರು

ಹೈದರಾಬಾದು ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರ ತ್ತು ೧೯೩೮ರ ಸತ್ಯಾಗ್ರಹದ ಮೊದಲನೇ ಡಿಕ್ಟೇಟರ್, ಇವರ ಹೆಸರಿನಲ್ಲಿ ಕಾಂಗ್ರೆಸ್ಸಿನ ಅಧಿವೇಶನದ ನಗರವನ್ನು ನಿರ್ಮಿಸಲಾಗುತ್ತಿದೆ.

## ಉಡುಪಿಯಲ್ಲಿ ಪ್ರಭುಗಳ ಮೆರವಣಿಗೆ

ಮಂಗಳೂರು ಮತ್ತು ಉಡುಪಿ ಪ್ರವಾಸ ಕೈಗೊಂಡಿದ್ದ ಶ್ರೀಮನ್ಮಹಾರಾಜರನ್ನು ಕಳೆದ ೪ ನೇ ತಾ॥ ಉಡುಪಿಯಲ್ಲಿ ಅವರ ಬಿಡಾರ ಸ್ಥಳದಿಂದ ಶ್ರೀ ಕೃಷ್ಣ ದೇವಾಲಯದ ವರೆಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು ಸಹಸ್ರಾರು ಜನರು ನೆರೆದು ಹರ್ಷ ಧ್ವನಿಗೈದರು ಶ್ರೀ ಕೃಷ್ಣದೇವಾಲಯದಲ್ಲಿ ಅವರು ವಿಶೇಷ ಪೂಜಾದಿಗಳನ್ನು ಸಲ್ಲಿಸಿದರು ಮೊನ್ನೆ ಮಲ್ಪೆ ಬಂದರಿಗೆ ಅವರು ತೆರಳಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಕಂಡು ಆನಂದಪಟ್ಟುದಲ್ಲದೆ, ಸಮುದ್ರ ಸ್ನಾನವನ್ನೂ ಮಾಡಿದರು ಶ್ರೀಮನ್ಮಹಾರಾಜರು ನೆನ್ನೆ ಮೈಸೂರಿಗೆ ಆಗಮಿಸಿದರು

## ರಾಜಕೋಟೆ ಸತ್ಯಾಗ್ರಹದಲ್ಲಿ ೩೦೦ ಜನರ ಬಂಧನ

ಮಾರಾಟ ತೆರಿಗೆ ವಿರುದ್ಧವಾಗಿ ನಡೆದಿರುವ ಚಳುವಳಿ ಸಂಬಂಧವಾಗಿ ರಾಜಕೋಟೆಯಲ್ಲಿ ನೆನ್ನೆ ರಾತ್ರಿ ೫ ಜನ ಪ್ರದರ್ಶನಕಾರರ ದಸ್ತಗಿರಿಯಾಗಿದೆ

## ಬೊಲಿವಿಯಾ ದಂಗೆ ಅಡಗಿಸಲ್ಪಟ್ಟಿತು

ಬೊಲಿವಿಯದಲ್ಲಿ ಕ್ರಾಂತಿಕಾರರು ನಡೆಸಲಿದ್ದ ದಂಗೆಯನ್ನು ಅಲ್ಲಿನ ಸರ್ಕಾರದವರು ಅಡಗಿಸಿರುವರೆಂದು ವರದಿಯಾಗಿದೆ ಅವರ ಚಳವಳಿಯನ್ನು ನೆನ್ನೆ ನಿರ್ನಾಮ ಮಾಡಲಾಯಿತೆಂದು ಗೊತ್ತಾಗಿದೆ ಕಮ್ಯೂನಿಸ್ಟರ ಒಕ್ಕೂಟದ ಬೆಂಬಲ ಮಂತ್ರಿಗಳನ್ನು ಕೊಲ್ಲಲು ಕ್ರಾಂತಿಕಾರಿಗಳು ಸನ್ನಾಹ ನಡೆಸಿದ್ದರೆಂದು, ಒಬ್ಬ ಮಂತ್ರಿ ಮತ್ತು ಸೈನ್ಯದ ಪ್ರಮುಖ ಅಧಿಕಾರಿ ಒಬ್ಬರನ್ನು ಅವರು ಸೆರೆ ಹಿಡಿದಿದ್ದರೆಂದೂ ಹೇಳಲಾಗಿದೆ

## ಮದ್ರಾಸು ನಗರದ ಪೋಲೀಸರ ನಿಶ್ಶಸ್ತ್ರೀಕರಣ

ಶಸ್ತ್ರಗಳನ್ನೊಯ್ಯಲು ಅಧಿಕಾರ ಹೊಂದಿದ್ದ ಮದ್ರಾಸು ನಗರದ ೨೦ ಸಾವಿರ ಪೋಲೀಸರುಗಳನ್ನು ನೆನ್ನೆ ನಿಶ್ಶಸ್ತ್ರರನ್ನಾಗಿ ಮಾಡಲಾಯಿತು ದಸ್ತಗಿರಿಯಾಗಿರುವ ಎತಿರಾಜರವರ ವರ್ತನೆಯನ್ನು ರಾಜಾಜಿಯವರೇ ಖುದ್ದು ತನಿಖೆ ನಡೆಸುತ್ತಿರುವರೆಂದು ಹೇಳಲಾಗಿದೆ

## ಹಣದಾಸೆಗಾಗಿ ತಲೆ ಕಡಿದರು

ಬೆಂಗಳೂರು ಚಾಮರಾಜಪೇಟೆ ದೂರದ ಕ್ಷೇತ್ರದಲ್ಲಿ ಹೊಸ ರಸ್ತೆಯಲ್ಲಿ ಮೊನ್ನೆ ರಾತ್ರಿ ಮುಲಗಪ್ಪ ಶ್ರೀ ಮಾಧವರಾವ್ ಎಂಬುವರ ಬಳಿ ಇದ್ದ ಹಣವನ್ನು ದೋಚಲು ಯಾರೋ ಕಲ್ಲಿನಿಂದ ಅವರ ತಲೆ ಕಡಿದರೆಂದೂ, ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ಅವರು ಕೊಡಿಗೆಯೊಂದಿದುದರಿಂದ ಅಪರಾಧಿಗಳು ಪರಾರಿಯಾದರೆಂದೂ ಹೇಳಲಾಗಿದೆ

## ಧಾನ್ಯದ ಬೆಲೆ ಹೆಚ್ಚಿಸಿರುವ ಆಜ್ಞೆ ರದ್ದುಮಾಡಲು ಮನವಿ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಭಾನುವಾರ ನಡೆದು ಈ ತಿಂಗಳು ೧ ನೇ ತಾರೀಖಿನಿಂದ ರಾಗಿ ಜೋಳ ಮತ್ತು ಗೋಧಿ ಇವುಗಳ ಬೆಲೆ ಹೆಚ್ಚಿಸುವಂತೆ ಹೊರಡಿಸಲಾಗಿರುವ ಆಜ್ಞೆಯನ್ನು ಸರ್ಕಾರದವರು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯದ ನಿರ್ಣಯವನ್ನು ಮಾಡಲಾಯಿತು ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ನಂತರ ಎಲ್ಲರ ಸ್ಥಿತಿಗತಿಗಳೂ ಉತ್ತಮವಾಗುವುವೆಂಬ ನಂಬಿಕೆಯು, ಈ ರೀತಿ ಹಿಂದೆ ಇದೇ ಆಹಾರದ ಬೆಲೆಯು ಏರಿಕೆಯಿಂದ ನಶಿಸುತ್ತ ಬಂದಿರುವುದಾಗಿಯೂ ಕಾರ್ಮಿಕರುಗಳಿಗೆ ದಿಕ್ಕು ತೋಚದಂತಾಗಿದೆಯೆಂದೂ ಹೇಳಲಾಗಿದೆ

## ಪೌರಸಭೆಯಲ್ಲಿ ಸಭಾ ಪರಿತ್ಯಾಗ

### ಆಹಾರದ ಬೆಲೆ ನಿರ್ಣಯದ ಬಗ್ಗೆ ಭಿನ್ನಾಭಿಪ್ರಾಯ

ಮೈಸೂರು ೬

ಸರ್ಕಾರದವರು ಇತ್ತೀಚೆಗೆ ಹಲವು ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರುವ ವಿಚಾರವಾಗಿ ಪರಿಶೀಲನೆ ನಡೆಸಲು ನೆನ್ನೆ ಸೇರಿದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ತಾವು ಮಂಡಿಸಿದ ನಿರ್ಣಯವು ಬಿದ್ದು ಹೋದ ಮೇಲೆ ಶ್ರೀ ಎ ವೆಂಕಟೇಶಯ್ಯನವರು ಇತರ ಆರು ಜನ ಅನುಯಾಯಿಗಳೊಡನೆ ಸಭಾ ಪರಿತ್ಯಾಗ ಮಾಡಿದರು

ಗೋಧಿ, ರಾಗಿ ಮತ್ತು ಜೋಳ ಈ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಪ್ರಜೆಗಳಿಗೆ ಉಂಟಾಗಿರುವ ತೊಂದರೆಗಳನ್ನು ವಿವರಿಸಿ ಶ್ರೀಗಳಾದ ಎಸ್ ಲಿಂಗಣ್ಣ, ಟಿ ಎಚ್ ರಾಜಗೋಪಾಲಯ್ಯಂಗಾರ್, ಮಾರ್ ನೂಡ್ ಜೋಸೆಫ್, ರಂಗಸ್ವಾಮಯ್ಯ, ಎಂ ಸಿ ಮಹದೇವಸ್ವಾಮಿ, ಬಿ ಸಿ ಬಸಪ್ಪ, ಟಿ ಜಿ ದಾಸ್, ಮುಂತಾದವರು ಭಾಷಣ ಮಾಡಿದರು

ಸರ್ಕಾರದವರು ಧಾನ್ಯಗಳ ಬೆಲೆ ಹೆಚ್ಚಿಸಿರುವುದಕ್ಕೆ ಪೌರ ಸಭೆಯು ತೀವ್ರ ಪ್ರತಿಭಟನೆಯನ್ನು ಸೂಚಿಸಿ ಹಳೆಯ ದರವಂತೆಯೇ ಮಾರಬೇಕೆಂದ ಸರ್ಕಾರದವರನ್ನು ಒತ್ತಾಯಪಡಿಸುವುದಾಗಿಯೂ ಅವರು ಹಾಗೆ ಬೆಲೆ ಇಳಿಸದಿದ್ದರೆ ಪೌರಸಭೆ ಸದಸ್ಯರೆಲ್ಲರೂ ರಾಜೀನಾಮೆ ಕೊಡಬೇಕೆಂದೂ ಸೂಚಿಸುವ ನಿರ್ಣಯವನ್ನು ಶ್ರೀ ಎ ವೆಂಕಟೇಶಯ್ಯನವರು ಮಂಡಿಸಿದರು ಶ್ರೀ ಟಿ ಜಿ ದಾಸರು ಅನುಮೋದಿಸಿದರು

ಧಾನ್ಯಗಳ ಬೆಲೆಯನ್ನು ನಿಗದಿ ಮಾಡುವ ಅಧಿಕಾರವು ಸರ್ಕಾರಕ್ಕೆ ಸೇರಿದ್ದೆಂದೂ, ಇದರಲ್ಲಿ ಪೌರಸಭೆಗೆ ಯಾವ ಅಧಿಕಾರವೂ ಇಲ್ಲವೆಂದೂ, ಆದ್ದರಿಂದ ಮುಷ್ಕರ, ಪ್ರತಿಭಟನೆ ಮುಂತಾದ ರೀತಿಗಳಲ್ಲಿ ಸರ್ಕಾರವನ್ನು ವಿರೋಧ ಮಾರ್ಗಕ್ಕೆ ಎಳೆಯುವುದನ್ನು ಬಿಟ್ಟು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಲಹೆ ಕೊಡಬೇಕೆಂದೂ ಶ್ರೀ ಪಿ ಸೀತಾರಾಮಯ್ಯನವರು ಸೂಚಿಸಿದರು

ಇವರ ಮೇಲೆ ಪೌರಸಭಾ ಸದಸ್ಯರು ರಾಜೀನಾಮೆ ಕೊಡುವ ಭಾಗವನ್ನು ಬಿಟ್ಟು, ನಿರ್ಣಯದ ಉಳಿದ ಭಾಗವನ್ನು ಅಂಗೀಕರಿಸಬೇಕೆಂದು ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಸಲಹೆ ಮಾಡಿದರು

ನಿರ್ಣಯವನ್ನು ಓಟಿಗೆ ಹಾಕಿದಾಗ ಎರಡು ಮತದಿಂದ ಅದು ಬಿದ್ದು ಹೋಯಿತು ಇದಕ್ಕಾಗಿ ಅಸಮಾಧಾನಗೊಂಡು ಸಭಾ ಪರಿತ್ಯಾಗ ಮಾಡಲಾಯಿತು

ಧಾನ್ಯಗಳ ಬೆಲೆಯನ್ನು ಇಳಿಸುವಂತೆ ಸರ್ಕಾರವನ್ನು ಕೋರಬೇಕೆಂದು ಶ್ರೀ ಎಂ ರಾಜಯ್ಯನವರು ಸೂಚಿಸಿದ ಮತ್ತೊಂದು ನಿರ್ಣಯವು ಅಂಗೀಕರಿಸಲ್ಪಟ್ಟಿತು

## ಜನವರಿ ೯ ರಿಂದ ವಿದ್ಯುಚ್ಛಕ್ತಿ ಪೋಷಣ

ಇದೇ ತಿಂಗಳು ೯ ನೇ ತಾರೀಖು ಮುಖ್ಯ ರಾತ್ರಿಯಿಂದ ವಿದ್ಯುಚ್ಛಕ್ತಿಯು ಸರಬರಾಜಿನಲ್ಲಿ ಶೇಕಡ ೩೦ ರಷ್ಟು ಪೋಷಣವನ್ನು ಬೆಂಗಳೂರು ಮೈಸೂರು ಮತ್ತು ಇನ್ನಿತರ ನಗರಗಳಲ್ಲಿ ಜಾರಿಗೆ ತರಲಾಗುವುದೆಂದು ವರದಿಯಾಗಿದೆ

## ಮಧ್ವಾಚಾರ್ಯ ಮತ್ತು ವಾದಿರಾಜರ ಭಾವಚಿತ್ರಗಳು

### ಮೈಸೂರು ಮಹಾರಾಜರಿಂದ ಅನಾವರಣ

ಉಡುಪಿ ೫

ಮೈಸೂರಿನ ಶ್ರೀಮನ್ ಮಹಾರಾಜರು ನೆನ್ನೆ ಮಧ್ವಾಚಾರ್ಯ ಮತ್ತು ಶ್ರೀ ವಾದಿರಾಜ ಸ್ವಾಮಿಗಳವರ ಭಾವಚಿತ್ರಗಳನ್ನು ಇಲ್ಲಿನ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಅನಾವರಣ ಮಾಡಿದರು. ಈ ಕಾರ್ಯವು ಅತಿ ಪವಿತ್ರವೆಂದು ತಾವು ಭಾವಿಸಿರುವುದಾಗಿ ಅವರು ಹೇಳಿದರು. ಭಾರತದ ಮಹಾಚಾರ್ಯರಲ್ಲಿ ಮಧ್ವಾಚಾರ್ಯರು ಬಹು ಪ್ರಖ್ಯಾತರು. ಅವರು ಬ್ರಹ್ಮಸ್ವರೂಪದ ತಾರೀಖು ಸ್ಥಿತಿಯನ್ನು ಚೆನ್ನಾಗಿ ವರ್ಣಿಸಿರುವರು. ಅವರ ಶಿಷ್ಯರಾದ ವಾದಿರಾಜರು ಕನ್ನಡದಲ್ಲಿ ಶ್ರೀ ಮಧ್ವಾಚಾರ್ಯರ ಭಾವನೆಗಳನ್ನು ಪ್ರಚುರಗೊಳಿಸಿರುವರೆಂದು ತಿಳಿಸಿದರು. ಶ್ರೀಮನ್ಮಹಾರಾಜರು ಶ್ರೀ ಕೆ ಸೀತಾರಾಮರಾಯರ ಸಹೋದರ ಶ್ರೀ ರಾಮಕೃಷ್ಣರವರ ಸ್ಮಾರಕ ಭವನವನ್ನೂ ನೆನ್ನೆ ತೆರೆದರು

## ನೇಪಾಳದಲ್ಲಿ ಚುನಾವಣೆಗೆ ಭಾರತದ ಅಧಿಕಾರಿ ನೆರವು

ಭಾರತದಲ್ಲಿ ವಯಸ್ಕರ ಮತದಾನದ ಪದ್ಧತಿ ಪ್ರಕಾರ ಚುನಾವಣೆಗಳನ್ನು ಏರ್ಪಾಡು ಮಾಡಿದ ಚುನಾವಣಾ ಕಮೀಷನರ್ ಸುಕುಮಾರಸೇನರವರನ್ನು ನೇಪಾಳ ಸರ್ಕಾರದವರು ಆಹ್ವಾನಿಸಿ, ಅಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲು ಸಲಹೆಯನ್ನು ನೀಡುವಂತೆ ಕೋರಿದ್ದಾರೆ

### ಭಾರತ ವಾಚನ

ರಾಜಧಾನಿಯ [illegible] ರಸ್ತೆಯ [illegible] ಶ್ರೀರಾಮ ಮಂದಿರದಲ್ಲಿ ಪ್ರತಿ ದಿನ ಸಂಜೆ ೭|| ಘಂಟೆಯಿಂದ ೮|| ರವರೆಗೆ ಶ್ರೀ ಬಿ ಎಸ್ ಎಸ್ ಕೌಶಿಕ್ ರವರಿಂದ ಭಾರತ ವಾಚನವೂ ಶ್ರೀ ಕೆ ವೆಂಕಟಸುಬ್ಬಯ್ಯನವರಿಂದ ವ್ಯಾಖ್ಯಾನವೂ ನಡೆಯುತ್ತಲಿದೆ. ಈ ಸತ್ಕಥಾ ಕಾಲಕ್ಷೇಪಕ್ಕೆ ಸರ್ವರೂ ದಯಮಾಡಿಸಿ, ಶ್ರವಣಾನಂದದಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ

### ರೇಷ್ಮೆ ಕಾರ್ಮಿಕರ ಸಭೆ

ರಾಜಧಾನಿಯಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಯ ಆವರಣದಲ್ಲಿ ಇದೇ ೧೧ನೇ ತಾ|| ಬೆಳಗ್ಗೆ ೯ ಗಂಟೆಗೆ ಕಾರ್ಮಿಕರ ಸಂಘದ ಸಾಧಾರಣ ಸದಸ್ಯರ ಸಭೆಯು ಶ್ರೀ ಕೆ ಆರ್ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸದಸ್ಯರು ಸಭೆಗೆ ಬರಬೇಕೆಂದು ಕೋರಲಾಗಿದೆ

### ಸಂಸ್ಥಾನಕ್ಕೆ ಎಂ. ವಿ ಕೃಷ್ಣಪ್ಪನವರ ಆಗಮನ

ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಇದೇ ೧೦ನೇ ತಾ|| ಬೆಂಗಳೂರಿಗೆ ಆಗಮಿಸಿ, ಮಾರನೇ ದಿನ ಕೋಲಾರಕ್ಕೆ ತೆರಳುವರು. ಸಂಸ್ಥಾನದಲ್ಲಿ ೧೦ ದಿನಗಳ ವರೆಗೆ ಇದ್ದು, ಅವರು ರಾಯಚೂರಿಗೆ ಹೋಗುವರು [illegible], ಕೋಲಾರ ಮತ್ತು ಬೆಂಗಳೂರಿಗೆ ಭೇಟಿಯಿತ್ತುವರು

## ಕಾಂಗ್ರೆಸ್ಸಿನಲ್ಲಿ ಪ್ರಜಾಪಕ್ಷದ ಐಕ್ಯವಿಲ್ಲ

ಕಾಂಗ್ರೆಸ್ಸಿನಲ್ಲಿ ಪ್ರಜಾ ಸಮಾಜವಾದಿ ಪಕ್ಷವು ಲೀನವಾಗುವ ಸಂಭವನೀಯ [illegible] ಅಖಿಲ ಭಾರತ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿಯವರಾದ ಮಧುರಿ ಮಾಯಿ ರವರು ತಿಳಿಸಿರುತ್ತಾರೆ. ಕಾಂಗ್ರೆಸ್ಸಿನ ಅಭಿಪ್ರಾಯವೇನೇ ಆಗಿದ್ದರೂ ಸಹ, ಪ್ರಜಾಪಕ್ಷವು ಮಾತ್ರ ಕಾಂಗ್ರೆಸ್ಸಿನಲ್ಲಿ ಐಕ್ಯವಾಗುವುದಿಲ್ಲವೆಂದು ಅವರು ಸ್ಪಷ್ಟಪಡಿಸಿರುತ್ತಾರೆ

## ಕಾಂಗ್ರೆಸ್ ಬಿಟ್ಟುಹೋದವರು ಪುನಃ ಸೇರಲು ಸೂಚನೆ

ಕಾಂಗ್ರೆಸ್ ಸಂಸ್ಥೆಯನ್ನು ಬಿಟ್ಟುಹೋದವರು ಪುನಃ ಸಂಸ್ಥೆಗೆ ಸೇರಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣಗೌಡರು ಕೋರಿರುತ್ತಾರೆ

## ಮೈಸೂರಿನ ಮಂತ್ರಿಗಳು

ಬೆಂಗಳೂರಿನ ಮಲ್ಲೇಶ್ವರದ ಗೀತಾ ಸಾಹಿತ್ಯ ಮಂದಿರದವರು ಮೋಲ್ಡಂಡ ತೆರೊಂಸಾಮಯ [illegible] ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈಗಿನ ಮಂತ್ರಿಮಂಡಲದವರು ಜನರ ಗಂಚಿಯವರು [illegible] ಅವರ ಚಿತ್ರಗಳನ್ನು ಕೊಡಲಾಗಿದೆ. ಬೆಲೆ ಮೂರಾಣೆ

### ನಾಲುಕೋಶ್ವರ ಸ್ವಾಮಿಗಳವರ ಜಯಂತಿ

ರಾಜಧಾನಿಯ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ, ಶ್ರೀ ಸದ್ಗುರು ಸೇವಾ ಮಂಡಲಿಯವರು, ಜನವರಿ ೧೦ನೇ ತಾ|| ಪೂರ್ವ [illegible] ಶ್ರೀ [illegible] ಶೃಂಗೇರಿಯ ಶ್ರೀ ವಿದ್ಯಾಭಿನವ ಶ್ರೀ ನಾಲುಕೋಶ್ವರ ಭಾರತೀ ಸ್ವಾಮಿಗಳವರ ೭೯ನೇ ಜಯಂತಿ ಉತ್ಸವವನ್ನು ಏರ್ಪಡಿಸಿರುತ್ತಾರೆ. ಅಂದು ಸಂಜೆ ೭ ಗಂಟೆಗೆ ಶಾರದಾವಿಲಾಸ ಹೈಸ್ಕೂಲಿನ ಶ್ರೀ ಎಸ್ ರಾಜಗೋಪಾಲ ಅಯ್ಯಂಗಾರ್ಯರು ಭಾರತ ಸಂಸ್ಕೃತಿಯ ಬಗ್ಗೆ ಉಪನ್ಯಾಸ ಮಾಡುವರು. ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯ ಶ್ರೀ ಬಿ ಎಸ್ ವೆಂಕಟರಾಮಯ್ಯನವರಿಂದ ಕಾವ್ಯವಾಚನವೂ, ನಾಳೆ ಸಂಜೆ ೭ ಕ್ಕೆ ಶ್ರೀ ಎಂ ಶಿವರುದ್ರಪ್ಪ ಮತ್ತು ಪಾರ್ಟಿಯವರಿಂದ ಸಂಗೀತವೂ ೧೧ನೇ ತಾ|| ಸಂಜೆ ೬ ಗಂಟೆಗೆ ಶ್ರೀ ತ್ರಿಶಾದ ಶಾಸ್ತ್ರಿ [illegible] ಕೋಟೆಯವರಿಂದ ಸದ್ಭಾವತಿ ಪರಿಣಯ ಎಂಬ ಹರಿಕಥೆಯೂ ನಡೆಯುವುವು

ಒಲಂಪಿಯಾ 8-1-53 ರಿಂದ ಪ್ರಾರಂಭ

ಪ್ರತಿ ದಿನ ೩ ಆಟಗಳು

ಶಂಕರ್ ಥಿಯೇಟರ್ಸ್‌ರವರ ಚಿತ್ರ

✽ ನಿರ್ಮಲ್ ✽

ಪಾತ್ರ — ಪೂರ್ಣಿಮಾ ಅಮರನಾಥ್ ಮತ್ತು ಮಿರ್ಜಾ ಮುಶ್ರಫ್

ಸಂಗೀತ — ಭೂಲೋಕ ರಾಜ

ಬೆಳಗಿನ ಪ್ರದರ್ಶನ 8-1-53 ರಿಂದ ೬ ದಿನಗಳು ಮಾತ್ರ

ಭಗವಾನ್ ಶ್ರೀಕೃಷ್ಣ [illegible] ಎಲ್ಲಾ [illegible]

## ಬ್ರಿಟಿಷ್ ಪ್ರಧಾನಿ ಭವನದ ಮುಂದೆ ಸತ್ಯಾಗ್ರಹ

ಕೆನ್ಯದಿಂದ ಲಂಡನ್ನಿಗೆ ಬಂದಿರುವ ಭಾರತೀಯ ಪ್ರತಿನಿಧಿ ಗುರುಚರಣರಾವ್, ಅವನ ಪತ್ನಿ ಮತ್ತು ೩ ಜನ ಗಂಡು ಮಕ್ಕಳು ನೆನ್ನೆಯಿಂದ ಬ್ರಿಟಿಷ್ ಪ್ರಧಾನಿಯವರ ಭವನದ ಮುಂದೆ ಕುಳಿತು ಸತ್ಯಾಗ್ರಹವನ್ನು ಆಚರಿಸುತ್ತಿರುವರು. ವರ್ಣಭೇದ ನೀತಿಯ [illegible] ದ ಕಾರಣ ಉದ್ಯೋಗವು ಎಲ್ಲಿಯೂ ಸಿಗುತ್ತಿಲ್ಲವೆಂದು ಅವರು ಹೇಳಿರುತ್ತಾರೆ. "ಕೆಲಸವನ್ನು ಕೊಡಿ, ಇಲ್ಲವೇ ಜೈಲಿಗೆ ಹಾಕಿ ಅಥವಾ ಸಾಯಲು ಬಿಡಿ" ಎಂದು ಅವರು ಕೋರಿರುತ್ತಾರೆ

## ಈಜಿಪ್ಟಿನ ಜಮೀನುದಾರನ ಕೊಲೆ

ಈಜಿಪ್ಟಿನ ಮಾಜಿ ಫೋರಿ ಸರೂಳರ ಸಹೋದರಿ [illegible] ತಿಯಾರವರು, ತಮ್ಮ ಅಣ್ಣನ ಆಜ್ಞೆಯನ್ನು ಮೀರಿ ವಿವಾಹವಾದ ರಿಯಾಡ್ ಎಂಬುವನ ತಂದೆ ಬಸಾಲ್‌ಗಾಲಿ ಎಂಬ ಭಾರಿ ಜಮೀನುದಾರನನ್ನು ಹೊಡೆದು ಕೊಲೆಮಾಡಲಾಗಿದೆ. ಇಬ್ಬರು ಕೊಲೆಗಾರರನ್ನು ದಸ್ತಗಿರಿ ಮಾಡಲಾಗಿದೆ. ಮತ್ತೊಬ್ಬನಿಗಾಗಿ ಹುಡುಕಲಾಗುತ್ತಿದೆ

## ಬಸ್ಸಿನಲ್ಲಿ ಕುಳಿತಾಗಲೇ ಹೃದಯ ಸ್ತಂಭನದಿಂದ ಮರಣ

ಬೆಂಗಳೂರಿನಿಂದ ಚಿನ್ನದ ಗಣಿ ನಡುವೆ [illegible] ಬಸ್ಸಿನಲ್ಲಿ ಕಳೆದ [illegible] ತಾ|| ೨೦ [illegible] ಸುಮಾರು ೬೦ ವರ್ಷ [illegible] ಹತ್ತಿ ಸ್ವಲ್ಪ [illegible] ಮಾಡಿದನೆಂದೂ [illegible] ಕಂಡಕ್ಟರು ಟಿಕೆಟ್ [illegible] ಒಂದಾಗ ಅವನು [illegible] ಸತ್ತುಬಿದ್ದಿರುವುದು ಕಂಡುಬಂದಿತೆಂದೂ, ಆತನಿಗೆ ಹೃದಯಸ್ತಂಭನವಾಗಿರಬೇಕೆಂದೂ ವರದಿಯಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ಕ್ಕೆ ಎನ್ ವೆಂಕಟರಾಮನ್ [illegible] ಸಂಗೀತ [illegible] ೪-೦ ವೀಣೆ [illegible] ನಾಗೇಂದ್ರಪ್ಪ ಕ್ಲಾರಿಯೊನೆಟ್ ಸಂಗೀತ [illegible] ಎನ್ ವೆಂಕಟರಾಮರಾವ್ ಸಂಗೀತ [illegible] ಕನ್ನಡಗೀತೆಗಳು [illegible] ಎಸ್ ರಾಮಚಂದ್ರರಾವ್ ಸಂಗೀತ [illegible] ಭಾರತವಾಚನ [illegible] ವೃಷ್ಣಪ್ಪ ಕ್ಲಾರಿಯೊನೆಟ್ [illegible] ಚಿತ್ರಲೋಕ [illegible] ನಗೆಗಡಲು ಕನ್ನಡದಲ್ಲಿ ವಿವಿಧ ವಿನೋದಾವಳಿ

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, ಉಬ್ಬಸ, ಸರಣಾವ ಶೂಲೆ ಮತ್ತು (TONSIL) ಗಲಾಯಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು.

Edited, Printed and Published by A R Nagarajan [illegible] Press, D Subbiah Road, Mysore

## ಶಿಬ್ಬನಲಾಲ್ ಸಾಕ್ಸೇನಾರವರ ದಸ್ತಗಿರಿ

ಉತ್ತರ ಪ್ರದೇಶದ ಕೆ ಎಂ ಪಿ ಪಕ್ಷದ ಮುಖಂಡರಾದ ಶಿಬ್ಬನಲಾಲ್ ಸಾಕ್ಸೇನಾರವರನ್ನು ನೆನ್ನೆ ಗೋರಖಪುರದಲ್ಲಿ ಸ್ಥಾನಬದ್ಧತಾ ಶಾಸನದ ಪ್ರಕಾರ ಬಂಧಿಸಿ ಜೈಲಿಗೆ ಕಳಿಸಿಕೊಡಲಾಯಿತು. ಗುಘಾಲಿ ಎಂಬಲ್ಲಿನ ಸಕ್ಕರೆ ಕಾರ್ಖಾನೆಯಲ್ಲಿ ನಡೆಯುತ್ತಿರುವ ಮುಷ್ಕರಗಾರರನ್ನುದ್ದೇಶಿಸಿ ಅವರು ಮಾಡಿದ ಆಕ್ಷೇಪಣೀಯವಾದ ಭಾಷಣಗಳೇ ದಸ್ತಗಿರಿಗೆ ಕಾರಣವೆಂದು ಹೇಳಲಾಗಿದೆ

## ೪೦ ಸಾವಿರ ರೂ. ದರೋಡೆ ಪ್ರಯತ್ನ

ಕಲ್ಕತ್ತೆಯ ಒಂದು ಬಟ್ಟೆ ಗಿರಣಿ ಸೇವಕನು ಅಲ್ಲಿನ ಇಂಪೀರಿಯಲ್ ಬ್ಯಾಂಕಿನಿಂದ ಕಳೆದ ೩ನೇ ತಾ|| ೩ ಲಕ್ಷ ರೂಗಳ ಪೈಕಿ ೪೦,೦೦೦ ರೂ [illegible] ಹಣದ ಚೀಲವನ್ನು ಇಟ್ಟುಕೊಂಡು ಮೋಟಾರು ಸೈಕಲ್ ಮೇಲೆ [illegible] ಪೋಲೀಸಿನವನೊಬ್ಬನೊಡನೆ ಸಂಚರಿಸುತ್ತಿದ್ದಾಗ ಏಕಾಂಗಿಯಾದ [illegible] ಯುವಕನು ಹಣದ ಚೀಲವನ್ನು ಕಿತ್ತುಕೊಂಡು ಓಡಿಹೋದನೆಂದೂ [illegible] ಹಣದ ಸಮೇತ ಪೋಲಿಸರು [illegible] ಹಿಡಿದರೆಂದೂ ವರದಿಯಾಗಿದೆ

### ಮೈಸೂರು ಪೇಟೆ ಧಾರಣೆ

| | | |
|---|---|---|
| ಪಲ್ಲ ಒಕ್ಕೆ | ರೂ ಇಂದ | ರೂ |
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | |
| ಹರಳು ಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | |
| ಉದ್ದು | [illegible] | |
| ಹುಣಸೆ | [illegible] | [illegible] |
| ಮೆಣಸಿನಕಾಯಿ | | |
| ಮಣ ಒಕ್ಕೆ | [illegible] | [illegible] |
| ಹುಣಿಸೆಹಣ್ಣು | [illegible] | [illegible] |
| ಕೊಬ್ಬರಿಯು | [illegible] | [illegible] |
| ಬೆಲ್ಲ | [illegible] | |
| ತೆಂಗಿನಕಾಯಿ ೧೦೦ಕ್ಕೆ | [illegible] | [illegible] |

SRI GAYATHRI TALKIES

Last Day — To-Day

THE GREATEST SHOW ON EARTH

From To-morrow

Paramount's the Most Comedian Picture In The World

AT WAR WITH THE ARMY

With Dean Martin and Jerry Lewis

— NEXT CHANGE —

SON OF PALE FACE

[illegible]

ರಿ॥ ನಂ 7೫೬ [illegible] ಒಂದು ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೦] ಗುರುವಾರ ೮-೧-೧೯೫೩ [ ಸಂಚಿಕೆ ೧೩೫

# ಕರಾಚಿ ವಿದ್ಯಾರ್ಥಿಗಳ ಮೇಲೆ ಅಶ್ರುವಾಯು

## ಕರಾಚಿ ವಿದ್ಯಾರ್ಥಿಗಳ ಮೇಲೆ ಧಾಳಿ

ವಿದ್ಯಾ ಶುಲ್ಕದಲ್ಲಿ ಕಡಿತ ಮತ್ತು ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಸೌಕರ್ಯಗಳಾಗಬೇಕೆಂಬ ಬೇಡಿಕೆಯನ್ನು ಸಲ್ಲಿಸಲು ಪಾಕಿಸ್ತಾನದ ವಿದ್ಯಾ ಮಂತ್ರಿ ಫಜಲೂರ್ ರಹಮಾನರವರನ್ನು ಭೇಟಿ ಮಾಡುವುದಕ್ಕಾಗಿ ನೆನ್ನೆ ಅವರ ಮನೆಯ ಮುಂಭಾಗದಲ್ಲಿ ಸೇರಿದ್ದ ೪೦೦೦ ವಿದ್ಯಾರ್ಥಿಗಳ ಮೇಲೆ ಕರಾಚಿ ಪೊಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದರೆಂದು ವರದಿಯಾಗಿದೆ. ಹಲವು ಪೊಲೀಸರಿಗೂ ವಿದ್ಯಾರ್ಥಿಗಳಿಗೂ ಗಾಯಗಳಾದವು. ಕೆಲವರನ್ನು ದಸ್ತಗಿರಿ ಮಾಡಲಾಯಿತು. ಅದಕ್ಕೆ ಮೊದಲು ವಿದ್ಯಾರ್ಥಿಗಳು ಕಾಲೇಜು ಬಳಿ ಸಭೆ ನಡೆಸಿ ಮಂತ್ರಿಗಳ ಭವನಕ್ಕೆ ಮೆರವಣಿಗೆ ಹೋದರು. ಮಾರ್ಗ ಮಧ್ಯದಲ್ಲಿ ಪೊಲೀಸರು, ಮೆರವಣಿಗೆ ಅಕ್ರಮವೆಂದು ಹೇಳಿ ಅವರುಗಳು ಚದುರುವಂತೆ ಸೂಚಿಸಿದರು. ಆದರೂ ವಿದ್ಯಾರ್ಥಿಗಳು ಕೇಳದೆ ನುಗ್ಗಿದರು. ಮಧ್ಯಾಹ್ನದ ಮೇಲೆ ಎಲ್ಲೋ ಹೋಗಿದ್ದ ಮಂತ್ರಿಗಳು ವಿದ್ಯಾರ್ಥಿಗಳ ನಿಯೋಗವನ್ನು ಬರಮಾಡಿಕೊಂಡು ಮಾತುಕತೆ ನಡೆಸಿದ ನಂತರ, ವಿದ್ಯಾರ್ಥಿಗಳು ಚದುರಿದರೆಂದು ಹೇಳಲಾಗಿದೆ.

## ಸ್ಟಾಲಿನ್ನರಿಗೆ ಈಡನ್ನರ ಸವಾಲ್

ಕೊರಿಯಾ ಯುದ್ಧವನ್ನು ಮುಕ್ತಾಯ ಮಾಡುವುದರಲ್ಲಿ ಸ್ಟಾಲಿನ್ನರಿಗೆ ಆಸಕ್ತಿಯಿರುವುದು ಪ್ರಾಮಾಣಿಕವೇ, ಎಂಬುದಾಗಿ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಈಡನ್ನರು ಸವಾಲ್ ಹಾಕಿರುತ್ತಾರೆ. ಅದು ನಿಜವಾಗಿದ್ದಿದ್ದರೆ ಸ್ಟಾಲಿನ್ನರು ಈ ಸಮಸ್ಯಾ ಪರಿಹಾರಕ್ಕಾಗಿ ಬಂದಿದ್ದ ಭಾರತದ ನಿರ್ಣಯಕ್ಕೆ ಸದವಕಾಶವನ್ನು ಕೊಡುತ್ತಿದ್ದುದಾಗಿ ಈಡನ್ನರು ಅಭಿಪ್ರಾಯಪಟ್ಟಿರುವರು.

## ಕೊರಿಯಾ ಶಾಂತಿ ಬಗ್ಗೆ ಭಾರತದ ಹೊಸ ಪ್ರಯತ್ನ

ಕೊರಿಯಾ ಶಾಂತಿಗಾಗಿ ಭಾರತದ ಪ್ರಧಾನಿ ನೆಹರೂರವರು ಮತ್ತೊಂದು ಬಾರಿ ಪ್ರಯತ್ನಿಸಲಿರುವರೆಂದೂ, ಶಾಂತಿ ಸ್ಥಾಪನೆಗಾಗಿ ಭಾರತವು ಮಾಡಿದ ಸಲಹೆಯನ್ನು ಪುನರ್ವಿಮರ್ಶಿಸಿದರೆ ಚೀಣವು ಅದನ್ನೊಪ್ಪುವುದೇ ಎಂಬುವನ್ನು ನೆಹರೂರವರು ಆ ರಾಷ್ಟ್ರದ ನಾಯಕರನ್ನು ಕೇಳಲಿರುವರೆಂದೂ ವರದಿಯಾಗಿದೆ. ವಿಶ್ವ ಸಂಸ್ಥೆಯಲ್ಲಿ ಕೊರಿಯಾ ಶಾಂತಿ ನಿರ್ಣಯವನ್ನು ಮಂಡಿಸಿದ ವಿ. ಕೆ. ಕೃಷ್ಣಮೆನನ್ನರನ್ನು ಪೀಕಿಂಗಿಗೆ ನೆಹರೂರವರು ಈ ಸಂಬಂಧದಲ್ಲಿ ಕಳುಹಲಿರುವರೆಂದೂ ಹೇಳಲಾಗಿದೆ.

## ಸಿಂಹಳದಲ್ಲಿ ಚಹಾ ಮತ್ತು ರಬ್ಬರ್ ಕಾರ್ಮಿಕರ ಮುಷ್ಕರ

ಸಿಂಹಳದ ಚಹಾ ಕೈಗಾರಿಕಾ ವೇತನದ ಸಮಿತಿಯವರು ಕಾರ್ಮಿಕರ ವೇತನವನ್ನು ಕಡಿಮೆ ಮಾಡುವಂತೆ ಸರ್ಕಾರಕ್ಕೆ ಸೂಚಿಸಿರುವ ಶಿಫಾರಸನ್ನು ಪ್ರತಿಭಟಿಸಿ ಅಲ್ಲಿನ ಚಹಾ ಮತ್ತು ರಬ್ಬರ್ ತೋಟಗಳ ೫ ಲಕ್ಷ ಕಾರ್ಮಿಕರು ನೆನ್ನೆ ೧ ದಿನದ ಮುಷ್ಕರವನ್ನು ನಡೆಸಿದರೆಂದು ವರದಿಯಾಗಿದೆ.

## ಫ್ರಾನ್ಸಿನಲ್ಲಿ ಹೊಸ ಸರ್ಕಾರ

ಆಂಟೊನಿ ಪೀನೆಯವರು ರಾಜೀನಾಮೆಯಿತ್ತ ೧೭ ದಿನಗಳ ನಂತರ ಈಗ ಫ್ರಾನ್ಸಿನಲ್ಲಿ ಬೇರೆ ಸರ್ಕಾರವು ಸ್ಥಾಪನೆಯಾಗಲಿದೆ. ರೇನೆ ಮೇಯರು ಹೊಸ ಸರ್ಕಾರವನ್ನು ರಚಿಸಲಿರುವರು. ಅವರು ಪ್ರಧಾನಿಯಾಗುವುದನ್ನು ಶಾಸನ ಸಭೆಯು ೩೮೭-೨೦೫ ವೋಟುಗಳಿಂದ ಅಂಗೀಕರಿಸಿರುತ್ತದೆ.

## ದೋಣಿ ಮುಳುಗಿ ೭೦ ಜನರ ಮರಣ

ಫಿಲಿಪ್ಪೈನಿನ ಸೆಬು ದ್ವೀಪದ ಬಳಿ ಮೋಟಾರು ದೋಣಿಯೊಂದು ೫ನೇ ತಾ॥ ಆಕಸ್ಮಿಕವಾಗಿ ಸಮುದ್ರದಲ್ಲಿ ಮುಳುಗಿ, ಅದರಲ್ಲಿದ್ದ ೧೭೦ ಜನರ ಪೈಕಿ ೭೦ ಮಂದಿ ನೀರಿನ ಪಾಲಾದರೆಂದು ವರದಿಯಾಗಿದೆ. ಅವರ ಪೈಕಿ ಹೆಚ್ಚು ಮಂದಿ ಉಪಾಧ್ಯಾಯರು ಮತ್ತು ಅವರ ಕುಟುಂಬದವರು. ಇದ್ದು ರಜಕ್ಕಾಗಿ ತಮ್ಮ ಹಳ್ಳಿಗಳಿಗೆ ಹೋಗುತ್ತಿದ್ದರೆಂದು ಹೇಳಲಾಗಿದೆ.

### ಬಹಿರಂಗ ಸಭೆ

ಮೈಸೂರು ನಗರದ ರೇಷ್ಮೆ ದಾರರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬॥ ಘಂಟೆಗೆ ಟೌನ್‌ಹಾಲ್ ಆವರಣದಲ್ಲಿ ಒಂದು ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ. ರಾಗಿ, ಜೋಳ, ಗೋಧಿಯ ಬೆಲೆಯನ್ನು ಹೆಚ್ಚಿಸಿರುವುದರಿಂದ ಜನರಿಗೆ ಆಗಿರುವ ತೊಂದರೆ, ಸಂಸ್ಕೃತಿ ಪ್ರಸಾರ, ಇವೇ ಮುಂತಾದ ವಿಷಯಗಳ ಬಗ್ಗೆ ಭಾಷಣಗಳಾಗುವುವು. ಮಾಜಿ ಪೌರ ಸಭಾ ಸದಸ್ಯರಾದ ಶ್ರೀ ಎಂ ಆರ್ ಸಿ ಒಕ್ಕಪ್ಪನವರು ಅಧ್ಯಕ್ಷತೆ ವಹಿಸುವರು.

## ಜಲಿಯನ್‌ವಾಲಾ ಬಾಗ್ ಹುತಾತ್ಮರಿಗೆ ಸ್ಮಾರಕ

೧೯೧೯ ರ ಏಪ್ರಿಲ್ ೧೩ ನೇ ತಾ॥ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ಮಡಿದ ಹುತಾತ್ಮರ ಜ್ಞಾಪಕಾರ್ಥವಾಗಿ ೪೦ ಸಾವಿರ ರೂಗಳ ವೆಚ್ಚದ ಸ್ಮಾರಕವೊಂದನ್ನು ನಿರ್ಮಿಸಲು ಸ್ಮಾರಕ ಸಮಿತಿಯವರು ನಿರ್ಧರಿಸಿರುತ್ತಾರೆ.

## ರೈಲ್ವೆ ನೌಕರರಿಗೆ ಡಬ್ಬಲ್ ಓವರ್ ಟೈಂ

ಮೈಸೂರು ಸಂಸ್ಥಾನದ ಮುಖ್ಯ ಕಾರ್ಮಿಕ ಕಮೀಷನರರು, ಮೈಸೂರು ಡಿವಿಷನ್ನಿನ ಸಹಾಯಕ ಕಾರ್ಮಿಕ ಕಮೀಷನರರೊಡಗೂಡಿ, ರೈಲ್ವೆ ವರ್ಕ್‌ಷಾಪಿನ ಮ್ಯಾನೇಜರ್ ಮತ್ತು ವರ್ಕ್‌ಷಾಪು ಕಾರ್ಮಿಕರ ಮುಖಂಡರಾದ ಶ್ರೀ ಎಲ್ ತಿರುವೆಂಗಡಂ ಮತ್ತು ಶ್ರೀ ರಜಾಬ್ ಅಲಿಯವರೊಡನೆ ಮಾತುಕತೆ ನಡೆಸಿದ ಪರಿಣಾಮವಾಗಿ ೧-೪-೫೦ ರಿಂದ ಡಬ್ಬಲ್ ಓವರ್‌ಟೈಂ ಕೊಡಲು ನಿರ್ಧಾರವಾಗಿರುತ್ತದೆ.

## ಫೆಬ್ರುವರಿ ೧೭ ರಿಂದ ಮಹಾ ಮಸ್ತಕಾಭಿಷೇಕ

ಶ್ರವಣಬೆಳಗೊಳದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿಯವರ ಮಹಾ ಮಸ್ತಕಾಭಿಷೇಕವು ಬರುವ ತಿಂಗಳು ೧೭ನೇ ತಾ॥ ಪ್ರಾರಂಭವಾಗಿ, ಮಾರ್ಚಿ ೫ರವರೆಗೂ ನಡೆಯುವುದು. ಕಳಶವನ್ನು ಅಪೇಕ್ಷಿಸುವವರು ಈ ತಿಂಗಳು ೩೧ರೊಳಗೆ ಸಮಿತಿಯವರಿಗೆ ೧೦೧ ರೂ ಗಳ ಮನಿಯಾರ್ಡರ್ ಕಳುಹಿಸಿ, ಪಡೆದುಕೊಳ್ಳಬೇಕು. ಸಮಾರಂಭಕ್ಕಾಗಿ ಸರ್ಕಾರದವರು ೫೦ ಸಾವಿರ ರೂ ಗಳ ಸಾಲವನ್ನು ಕೊಡಲಿರುವರು. ಈ ಸಂದರ್ಭದಲ್ಲಿ ಕಾಲರಾ ಹರಡದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಸಾರ್ವಜನಿಕರು ಸಹಕರಿಸಬೇಕೆಂದೂ ಆರೋಗ್ಯ ಇಲಾಖೆ ಡೈರೆಕ್ಟರ್ ಡಾ॥ ಬಿ. ಚಂದ್ರಶೇಖರಯ್ಯನವರ ಪ್ರಾರ್ಥಿಸಿರುತ್ತಾರೆ.

## ಜಂಟಿ ಮಕ್ಕಳ ಮರಣ

ಸೂರತ್ ಆಸ್ಪತ್ರೆಯಲ್ಲಿ ಹಳ್ಳಿಯ ಜಂಟಿ ಮಕ್ಕಳು ನೆನ್ನೆ ವಿಷಮ ಜ್ವರ ಕಾಯಿಲೆಯಿಂದ ಮೃತವಾದುವೆಂದು ವರದಿಯಾಗಿದೆ. ಅವುಗಳನ್ನು ಪ್ರತ್ಯೇಕ ಮಾಡಲು ಆಸ್ಪತ್ರೆಗೆ ಕರೆತರಲಾಗಿದ್ದಿತು.

## ಹಾಸನ ಜಿಲ್ಲೆಗೆ ಧನ ಸಹಾಯ

ಹಾಸನ ಜಿಲ್ಲೆಯ ರಾಜಕೀಯ ಸಮ್ಮೇಳನದಲ್ಲಿ ನೆನ್ನೆ ಭಾಷಣ ಮಾಡುತ್ತಾ, ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆ ಜಿಲ್ಲೆಯ ಮೈನರ್ ಕೆರೆಗಳ ಜೀರ್ಣೋದ್ಧಾರ, ರಿಪೇರಿ ಮುಂತಾದುವುಗಳಿಗಾಗಿ ೭ ಲಕ್ಷ ರೂ. ಸಹಾಯ ಕೊಡುವುದಾಗಿ ತಿಳಿಸಿದರು.

## [illegible] ಬಳಿ ಟ್ಯಾಕ್ಸಿ ಸ್ಟ್ಯಾಂಡ್

### ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೮

[illegible] ನ್ಸ್‌ಪೆಕ್ಟರ್ ಒಡೆಯರ ವಿಭಾಗ [illegible] ಟ್ಯಾಕ್ಸಿ ಸ್ಟ್ಯಾಂಡನ್ನು ಏರ್ಪಡಿಸ [illegible] ಮೊದಲು ಆಲೋಚಿಸಿದ್ದನ್ನು [illegible] ಹೊಸ ಸ್ಟ್ಯಾಂಡನ್ನು [illegible] ಅದನ್ನು ಏರ್ಪಡಿಸುವ ಬಗ್ಗೆ [illegible] ತದ ಏಲ್ಲ ರಾಷ್ಟ್ರ ಕಲಹೆಗಾರರ ಅ[illegible] ಯವನ್ನು ಪಡೆಯತಕ್ಕದ್ದೆಂದು ನೆ[illegible] ನಡೆದ ಪೌರಸಭೆಯ ಅಧಿವೇಶನದಲ್ಲಿ [illegible] ಮಾಡಲಾಯಿತು. ಕರುಣಾಪುರ [illegible] ಇಟ್ಟಿಗೆಗೂಡುಗಳಲ್ಲಿ ಕಟ್ಟಡಗ[illegible] ಸನೇಶನದ ಅಂದಾಜುಗಳನ್ನು [illegible] ಕರಿಸಲಾಯಿತು. ಮಯೂಜ್ ಷಾ[illegible] ನ ತಂಗಿನ ತೋಟಗಳ ಫಸಲಿನ [illegible] ದ ಟೆಂಡರುಗಳು ಬಹಳ ಕಡಿ[illegible] ಯಾಗಿದ್ದುದರಿಂದ ಇಲಾಖೆಯ ಮೂ[illegible] ಅದನ್ನು ನಡೆಸತಕ್ಕದ್ದೆಂದೂ [illegible] ಮಾಡಲಾಯಿತು.

[illegible] ಕಮೀಷನರರ ಭತ್ಯವ[illegible] ರೂ ಗಳಿಂದ ೧೫೦ ರೂ ಗೆ [illegible] ಒಪ್ಪಲಾಯಿತು. ಆಯು[illegible] ತಾದ ವೈದ್ಯ ಶಾಲೆಗಳಿಗೆ [illegible] ಅನ್ನು ಕೊಡಬಹುದೆಂದು [illegible] ಸಿಸಲಾಯಿತು.

## ಪಶ್ಚಿಮ ಆಫ್ರಿಕದಲ್ಲಿ ಮೈಸೂರಿನವರಿಗೆ ಹುದ್ದೆ

[illegible] ರು ನಗರದ ಸೆಂಟ್ ಫಿಲೋ[illegible] ಸ್ಕೂಲಿನ ಉಪಾಧ್ಯಾಯರಾ[illegible] ಎಸ್ ವಿಜಯರಾಘವಾಚಾ[illegible] ಪಶ್ಚಿಮ ಆಫ್ರಿಕದ ಲೈಬೀರಿ[illegible] ಬ್ಲಿಕ್ ಸಂಸ್ಥಾನದ ಸರ್ಕಾರಿ [illegible] ವಿಜ್ಞಾನ ಮತ್ತು ಗಣಿತ [illegible] ಧ್ಯಾಪಕರನ್ನಾಗಿ ವಿಶ್ವ ಸಂ[illegible] ಪಾರಿಭಾಷಿಕ ಸಹಾಯ ಸಮಿತಿ [illegible] ನೇಮಿಸಿರುತ್ತಾರೆ. ಇದೇ ೧೩ [illegible] ಶ್ರೀ ಆಚಾರ್ಯರು ಮೈಸೂರಿ[illegible] ರಾರಟು ಸಿಲೋನ್, ಮಾರ್ಸೇ[illegible] ರಿಸ್ ಮತ್ತು ಲಂಡನ್ನುಗಳ [illegible] ಗಿ ಲೈಬೀರಿಯದಲ್ಲಿರುವ ಮ[illegible] ಯಾ ನಗರವನ್ನು ತಲುಪುವರು [illegible] ಸದ ಅವಧಿ ಸಧ್ಯಕ್ಕೆ ೪ ವ[illegible] ೧೫೦೦ ರೂ ಸಂಬಳ [illegible] ಟಾರು ಮತ್ತು ಮನೆ ಸೌ[illegible] ಒದಗಿಸಲಾಗುವುದು.

[illegible] ಬಸವರಾಜೂರವರ ನಿಧನ

[illegible] ನಿಯ ನೂರಡಿ ರಸ್ತೆಯಲ್ಲಿ [illegible] ದಿನಸಿ ವ್ಯಾಪಾರಿಗಳಾಗಿದ್ದ [illegible] ಬಸವರಾಜೂರವರು ಇಂ[illegible] ರುವ ಕೃಷ್ಣರಾಜೇಂದ್ರ [illegible] ಹೃದಯ ವೇದನೆಯಿಂದ [illegible] ದರೆಂದು ತಿಳಿಸಲು ವಿಷಾದಿಸು[illegible] ವರು ಶ್ರೀ ಎಂ ಎಸ್. ನಾಗ[illegible] ಮಕ್ಕಳು

## [illegible] ತೊರ ಮತ್ತು ಹೇಮಗಿರಿ ಜಾತ್ರೆಗಳ ರದ್ದು

[illegible] ಪ್ರಯುಕ್ತ ಹೇಮಗಿರಿ ಮ[illegible] ದ ಕುತೊರಿ ಜಾತ್ರೆಗಳನ್ನು ನಿ[illegible] ವುದೆಂದು ಸಂಸ್ಥಾನದ ಬ[illegible] ಆರೋಗ್ಯ ಡೈರೆಕ್ಟರ್, ಶ್ರೀ ಟಿ [illegible] ಯ್ಯನವರು ತಿಳಿಸಿರು[illegible]

## ತೆರಿಗೆ ಹೆಚ್ಚಿಸುವುದರಿಂದ ದೇಶಕ್ಕೆ ಹಾನಿ

### ಮೈಸೂರು ಬ್ಯಾಂಕ್ ಮ್ಯಾನೇಜರ ಅಭಿಪ್ರಾಯ

ಬೆಂಗಳೂರು ೭

ಇಲ್ಲಿನ ರೋಟರಿ ಕ್ಲಬ್ಬಿನಲ್ಲಿ ಭಾಷಣ ಮಾಡುತ್ತಾ, ಮೊನ್ನೆ ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರರಾದ ಶ್ರೀ ಜಿ. ವಿ ನಾರಾಯಣ ರೆಡ್ಡಿಯವರು ಹೆಚ್ಚಿನ ತೆರಿಗೆ ವಿಧಿಸುವುದರಿಂದ ದೇಶಕ್ಕೆ ಹಾನಿಯೆಂದು ತಿಳಿಸಿದರು ಬಂಡವಾಳದ ಮೇಲೆ ತೆರಿಗೆ ಬೇಕಾವುದೆಂದೂ, ೧ ರೂ ಆದಾಯದಲ್ಲಿ ೧೧ ಆಣೆಯನ್ನು ತೆರಿಗೆಯಾಗಿ ಕೊಟ್ಟರೆ ನಿವ್ವಳವು ಏನು ಉಳಿಯುವುದೆಂದು ಪ್ರಶ್ನಿಸಿದರು ಬಾನ ನಿರೋಧ ಕ್ರಮಕ್ಕಾಗಿ ೧೫ ಕೋಟಿ ರೂ.ಗಳನ್ನು ನಷ್ಟ ಮಾಡಿಕೊಳ್ಳುತ್ತಿರುವುದ ನ್ಯಾಯವಲ್ಲವೆಂದು ಅವರು ಅಭಿಪ್ರಾಯಪಟ್ಟರು ಅದನ್ನು ರದ್ದುಗೊಳಿಸಬೇಕೆಂದೂ ಅವರು ಸೂಚಿಸಿದರು

## ೬ ಜನ ರೈತರಿಗೆ "ಕೃಷಿ ಪಂಡಿತ" ಪ್ರಶಸ್ತಿ

ಪ್ರಧಾನಿ ನೆಹರೂರವರು ಮೊನ್ನೆ ದೆಹಲಿಯಲ್ಲಿ ೬ ಮಂದಿ ರೈತರಿಗೆ 'ಕೃಷಿ ಪಂಡಿತ' ಎಂಬ ಪ್ರಶಸ್ತಿಯನ್ನೂ, ಒಂದೊಂದು ಟ್ರ್ಯಾಕ್ಟರ್ ಬಹುಮಾನವನ್ನೂ ಕೊಟ್ಟರು. ಆ ಪೈಕಿ ಕೊಡಗಿನ ಶ್ರೀ ಸಂಗಯ್ಯನವರಿಗೆ ಟ್ರ್ಯಾಕ್ಟರ್ ಜೊತೆ ೨೧೦೦ ರೂ ಬೆಲೆ ಡೀಸಲ್ ಇಂಜನ್ನು ದೊರೆಯಿತು ವನ ಮಹೋತ್ಸವದ ಪ್ರಶಸ್ತಿಗಾಗಿ ಹಲವು ಸಂಸ್ಥೆಗಳಿಗೆ ಗ ರಾಣೆಗಳನ್ನೂ ಕೊಡಲಾಯಿತು ಆ ಪೈಕಿ ಕೋಲಾರ ಜಿಲ್ಲೆಯ, ಶೆಟ್ಟಿ ಮಾದಮಗಲಕ್ಕೆ ಜವಾಹರ್ ಗುರಾಣಿಯು ದೊರೆತಿದೆ.

### ಹರಿಕಥೆ

ರಾಜಧಾನಿಯ ಶ್ರೀಮಿ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿರುವ ಶ್ರೀ ಶಾರದ್ವರು ಸೇವಾ ಮಂಡಲದ ಆಶ್ರಯದಲ್ಲಿ ಇದೇ ೧೧ ನೇ ತಾ|| ನಿಂದ ೧೭ರ ವರೆಗೆ, ಪ್ರತಿ ದಿನ ಸಂಜೆ ೬ ಘಂಟೆಗೆ ಶ್ರೀ ಶ್ರೀಪಾದಶಾಸ್ತ್ರಿ ಕುರ್ತಕೋಟಿ ಸಹೋದರರಿಂದ ಪ್ರಹ್ಲಾದ ಚರಿತ್ರೆ, ಪಾಶುಪತಾಸ್ತ್ರ ದಾನ, ಸುಭದ್ರಾ ಕಲ್ಯಾಣ, ಉತ್ತರ ಗೋ ಗ್ರಹಣ, ಮಾನಾ ಸಾತಿಧ್ಯ ದ್ರೌಪದಿ ವಸ್ತ್ರದಾನ ಮತ್ತು ರುಕ್ಮಿಣೀ ಕಲ್ಯಾಣ, ಈ ಹರಿಕಥೆಗಳು ಏರ್ಪಾಡಾಗಿವೆ

## ಲಂಡನ್ ಸತ್ಯಾಗ್ರಹಿಯ ದಸ್ತಗಿರಿ ಮತ್ತು ಬಿಡುಗಡೆ

ಲಂಡನ್ನಿನಲ್ಲಿರುವ ಬ್ರಿಟಿಷ್ ಪ್ರಧಾನಿಯವರ ಬಂಗಲೆಯ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದ ಗುರುಚರಣದಾಸ್ ಮತ್ತು ಅವರ ಪತ್ನಿಯನ್ನು ಪೊಲೀಸರು ಮೊನ್ನೆ ದಸ್ತಗಿರಿ ಮಾಡಿ, ನ್ಯಾಯಾಸ್ಥಾನದ ಮುಂದೆ ಹಾಜರು ಪಡಿಸಿದರು ನ್ಯಾಯಾಧೀಶರು ಅವರಿಗೆ ಎಚ್ಚರಿಕೆಯಿತ್ತು ಖುಲಾಸೆ ಮಾಡಿದರು

## ಎರಡು ತಲೆ, ಮೂರು ಕೈಕಾಲುಗಳ ಶಿಶು

ರಾಜಕೋಟೆಯ ಆಸ್ಪತ್ರೆಯೊಂದರಲ್ಲಿ ಕೆಲವು ದಿನಗಳ ಹಿಂದೆ ಗಿಲ ವರ್ಷದ ಯುವತಿಯೊಬ್ಬಳು ಎರಡು ತಲೆ ೩ ಕೈ ಮತ್ತು ೩ ಕಾಲುಗಳುಳ್ಳ ಶಿಶುವೊಂದಕ್ಕೆ ಜನ್ಮವಿತ್ತಳೆಂದೂ ಹುಟ್ಟುವ ಮುಂಚೆ ಅದು ಸತ್ತಿತ್ತೆಂದೂ ವರದಿಯಾಗಿದೆ

### ವಾಣಿ ವಿದ್ಯಾಲಯ

ಮೈಸೂರು ಕಾಲೇಜು ರಸ್ತೆಯಲ್ಲಿರುವ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ವಾಣಿ ವಿದ್ಯಾಲಯದ [illegible] ಮಹೋತ್ಸವವು ಶ್ರೀ [illegible] ಅಧ್ಯಕ್ಷತೆಯಲ್ಲಿ ನೆನ್ನೆ [illegible] ಪ್ರಾರ್ಥನೆಯ ನಂತರ ಶ್ರೀ [illegible] ಮಾನ್ [illegible] ಯವರ ಶ್ರೀ [illegible] ಸ್ವಾಗತ [illegible] ಶ್ರೀ [illegible] ಪರಿಚಯ [illegible] ನಡೆಯಿತು [illegible] ಹಳ್ಳಿ ಭಾಷಣಕಾರರು, ಸಂಸ್ಕೃತ ಭಾಷೆಯು ಮತ್ತಷ್ಟನ್ನು ಪಡೆದು ಎಲ್ಲರೂ ಅದನ್ನು ಕಲಿಯಬೇಕೆಂದು ಕೋರಿದರು ವಿವಿಧ ಸ್ಥಳಗಳಲ್ಲಿ ಜನ ಶಿಕ್ಷಣಾವರ್ಧಿಗೆ [illegible] ಹುಮಾನಗಳನ್ನು ವಿನಿಯೋಗ ಮಾಡಿದರ ನಮ್ಮ ದೇಶದಲ್ಲಿ ಅನೇಕ ಭಾಷೆಗಳಿದ್ದರೂ ಭಾರತೀಯ ಭಾಷೆಗಳ ಸಮಾನವಾದ ಒಂದು ಸಂಸ್ಕೃತಿಯು ಇರುವುದೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿ, ಸಂಸ್ಕೃತ ಭಾಷೆಯಲ್ಲಿ ನಮ್ಮ ಸಂಸ್ಕೃತಿಯು ಅಡಕವಾಗಿರುವುದರಿಂದ ಅದರ ಹಿರಿಯನ್ನು ರಾಷ್ಟ್ರ ಭಾಷೆಯಾಗಿ ಅಂಗೀಕರಿಸಿರುವುದರಿಂದ ಅದನ್ನು ಕಲಿಯುವ ಅವಶ್ಯಕತೆ ಬಹಳವಾಗಿದೆಯೆಂದು ಹೇಳಿ ಎಲ್ಲರೂ ಅದನ್ನು ಕಲಿಯಬೇಕೆಂದು ಕೋರಿದರು ವಂದನಾರ್ಪಣೆ ಶ್ರೀ ಗೋಪಾಲಕೃಷ್ಣ ದೇವರಿಗೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳಾದ ನಂತರ ಸಭೆ ಮುಗಿಯಿತು

## ಕಣ್ಣಿನ ಬ್ಯಾಂಕು ಸ್ಥಾಪನೆಗೆ ಶಾಸನ

ಕಣ್ಣಿನ ಬ್ಯಾಂಕಿನ ಸ್ಥಾಪನೆಗಾಗಿ ಸತ್ತವರ ನೇತ್ರಗಳನ್ನು ಸಂಗ್ರಹಿಸುವುದಕ್ಕೆ ಅವಕಾಶ ನೀಡುವ ಮಸೂದೆಯೊಂದನ್ನು ಶಾಸನ ಸಭೆಯಲ್ಲಿ ತರುವ ಅಂಶವನ್ನು ಪರಿಶೀಲಿಸಲಾಗುತ್ತಿದೆಯೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸಿರುತ್ತಾರೆ

## ವಿಮಾನ ಮುರಿದು ೨೭ ಜನರ ಮರಣ

ಬ್ರಿಟನ್ನಿನ ಎರಡು ಇಂಜನ್ನಿನ ವಿಮಾನವೊಂದು ಮೊನ್ನೆ ಉತ್ತರ ಐರ್ಲೆಂಡಿನ ಬೆಲ್‌ಫಾಸ್ಟ್ ನಗರದ ನಿಲ್ದಾಣದಲ್ಲಿ ಮುರಿದು ಬಿದ್ದು ೨೭ ಜನ ಪ್ರಯಾಣಿಕರು ಸತ್ತರು ೭ ಮಂದಿಗೆ ತೀವ್ರ ಗಾಯಗಳಾದುವು

## ರಾಷ್ಟ್ರಾಧ್ಯಕ್ಷರ ಜನನಕ್ಕೆ ಮೈಸೂರು ಸನ್ಮಾನಗಳು

ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರ ಜನನವನ್ನು ಸಜ್ಜುಗೊಳಿಸಲು ಮೈಸೂರಿನ ಚಿತ್ರಕಲಾ ಇನ್‌ಸ್ಟಿಟ್ಯೂಟಿನ ಸಾಮಾನುಗಳನ್ನು ಕಳುಹಿಸಬೇಕೆಂದು ಒಂದಿದ್ದ ಸೂಚನೆ ಪ್ರಕಾರ ಶ್ರೀ ಎಂ ವೀರಪ್ಪನವರ ಚಿತ್ರಗಳನ್ನು ತೆಗೆದುಕೊಂಡು ದೆಹಲಿಗೆ ತೆರಳುತ್ತಾರೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಮೈಸೂರು ಪೇಟೆ ಧಾರಣೆ

| | ಸಗಟು | ಮೂಟೆಗೆ | ರೂ |
|---|---|---|---|
| ಕಡಲೆಬೇಳೆ | [illegible] | [illegible] | [illegible] |
| ಎಳ್ಳು | [illegible] | [illegible] | |
| ಹುಚ್ಚೆಳ್ಳು | [illegible] | [illegible] | [illegible] |
| ತೊಗರಿಬೇಳೆ | [illegible] | [illegible] | |
| ಹೆಸರು ಬೇಳೆ | [illegible] | [illegible] | [illegible] |
| ಹುರುಳಿ | [illegible] | [illegible] | [illegible] |
| ಹೆಸರು | [illegible] | [illegible] | [illegible] |
| ಅವರೆ | [illegible] | [illegible] | [illegible] |
| ಉದ್ದು | [illegible] | [illegible] | |
| ಹಲಸಂದೆ | [illegible] | [illegible] | [illegible] |
| ಮೆಣಸಿನಕಾಯಿ | | | |
| ಮುಂಡಿಗೆ | [illegible] | [illegible] | [illegible] |
| ಸಾಸಿವೆ | [illegible] | [illegible] | [illegible] |
| ಶೇಂಗಾ | [illegible] | | |
| ಬೆಲ್ಲ | [illegible] | | |
| ತೆಂಗಿನಕಾಯಿ ೧,೦೦೦ | [illegible] | [illegible] | [illegible] |


ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

WANTED
An influential Gentleman to work for KATHALOKA on Commission basis
Enquire at—
KATHALOKA,
169 Ramvilas Road
MYSORE

SREE GANESHA TALKIES
Grand Release on 9 1 53
Columbia's
THIEF OF DAMASCUS
(In Brilliant Technicolor)
All [illegible] Adventures of Arabian Nights
All In One
Starring Paul Henreid and John Sutton


## TENDER NOTICE

Sealed tenders for supply of 1000 pallas of Horsegram to the Palace will be received by the undersigned upto 3 P M on Monday the 19th January 1953

Particulars may be obtained from the Muneeb Palace Alothukhana Department, Mysore

H N PALLEGAR,
Huzur Secretary,
to H H the Maharaja of Mysore

Edited, Printed and Published by A R Nagarajan at Sadhvi Press, D Subbiah Road Mysore


ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,
ಕಿಲೋಲ ಸೀರೆಗಳು ಪೂನಾ, ನಾಗಪುರ್ ಸೀರೆಗಳಿಗೆ (ಫೋನ್ ನಂ 446)

★ M. V. ಬೋಜಯ್ಯ ಬಿ ಎ, ಇಂಡಿಯ ಬ್ಯಾಂಕ್ ಎದುರು ಮೈಸೂರು

ಪೋ॥ ಸಂ 792 ಸಿವರಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧] ಶುಕ್ರವಾರ ೯-೧-೧೯೫೩ [ ಸಂಚಿಕೆ ೧೩೩

# ಮದ್ರಾಸು ಪೊಲೀಸರ ಮೇಲೆ ಲಾಠಿ ಪ್ರಹಾರ

## ಪೌರಸಭೆಯಲ್ಲಿ ಪುನಃ ಸಭಾ ಪರಿತ್ಯಾಗ

### ... ಸಮಿತಿ ವರದಿಯ ಪರಿಶೀಲನೆಯ ಪ್ರಸಂಗ

ಮೈಸೂರು ೯

... ಪೌರಸಭೆಯಲ್ಲಿ ನಿನ್ನೆ ವಾರ್ಡ್ ... ವರದಿಯ ಪರಿಶೀಲನೆಯ ... ಮುಂ ... ವಿರೋಧ ಪಕ್ಷದ ... ಜನ ಸದ ... ಸಭಾ ಪರಿತ್ಯಾಗ ಮಾಡಿದರು ... ಸೀತಾರಾಮಯ್ಯನವರು ಮಾ ... ದಿನ ಚರ್ಚೆಯಲ್ಲಿ ಹಲವು ಸದ ... ಮಾಡಿದ ಆಕ್ಷೇಪಣೆಗಳಿಗೆ ಉತ್ತರ ... ಸಮುದಾಯದವರಿಗಾಗಿ ಪ್ರತ್ಯೇಕ ... ಕ್ಷೇತ್ರಗಳನ್ನು ನಿರ್ಧರಿಸಿರು ... ಜನಸಂಖ್ಯೆಯ ನಿಯಮಗಳನುಸಾರ ... ವಿರೋಧವಿಲ್ಲವೆಂ ... ಸಮಿತಿಯ ಶಿಫಾರಸನ್ನು ... ಕೋರಿದರು

... ವೆಂಕಟೇಶಯ್ಯನವರು ... ನೇ ವಿಧಿಯ ... ಎಲ್ಲ ... ಅನ್ವಯವಾಗುವುದರ ಬಗ್ಗೆ ... ಪ್ರಶ್ನಿಸಿದ ... ಶಾಸನ ಸಭೆ ... ವಿಧಿಯು ಸಂಬಂಧಿಸಿರು ... ಭಾವಿಸಿರುವುದಾಗಿ ಹೇಳಿ ... ಸರ್ಕಾರದವರು ಬೆಳಕು ಬೀರ ... ಬೇಕೆಂದು ತಿಳಿಸಿದರು

... ನರಸಿಂಹಯ್ಯಂಗಾರ್ಯರು ಮಾ ... "... ಸ್" ಎಂಬ ಪದದಲ್ಲಿ ... ಲ್ಲದೆ ಪೌರಸಭೆ ಮುಂದಿರುವ ... ಆದರೂ ... ಪಟ್ಟರು ಡಾ॥ ... ಕೃಷ್ಣ ... ರಾಜಯ್ಯ ಮತ್ತು ... ಸಂ ... ನವರು ಮಾತನಾಡಿ ವರದಿ ... ಒಪ್ಪಿ ಅವರಿಂದ ಚುನಾ ... ನಡೆಸಬೇಕೆಂದು ಹೇಳಿದರು

... ಸೀತಾರಾಮಯ್ಯನವರು ವರದಿ ... ಒಪ್ಪನಂತೆ ... ವಾರ್ಡುಗಳಲ್ಲಿರುವ ಹಲ ... ನಿರ್ಬಂಧವಿಲ್ಲದೆ ಯಾರಿಗಾ ... ಸಾಧಿಸುವಂತೆ ಅವಕಾಶವನ್ನು ... ಪ್ರತಿಪಾದಿಸುವ ಬದಲಾಗಿ ... ನಿರ್ಣಯವನ್ನು ಮುಂದಿ ... ವಾರ್ಡುಗಳಲ್ಲಿ ಪ್ರತ್ಯೇ ... ನಿರ್ದೇಶಿಸಿ ... ಅವರು ಹರಿಜನರಿಗೆ ಮಾತ್ರವೇ ... ಬೇಕೆಂಬ ... ಇಲ್ಲದೆ ... ಕೊಡಲು ಅವಕಾಶ ಕಲ್ಪಿಸ ... ವಿರೋಧವನ್ನು ಸೂಚಿಸಲಾ ... ತಿಳಿಸಿದರ ಅಧ್ಯಕ್ಷರೂ ಸದ ... ವಿವರವಿತ್ತರು ಅದನ್ನು ಶ್ರೀ ಕೃಷ್ಣಯ್ಯನವರು ಒಪ್ಪಿದರು ... ಅದೇ ರೀತಿ ... ನಿರ್ದೇಶಗಳಿಗೆ ... ಯನ್ನು ಸೂಚಿಸಿದರು ಒಟ್ಟಿಗೆ ... ತಿದ್ದುಪಡಿಯು ಎನ್ನುತ್ತೋ ...

... ನಿರ್ಣಯವು ಸಭೆಯ ಮುಂ ... ಅಧ್ಯಕ್ಷರು ತಿಳಿಸಿದರು.

ಶ್ರೀ ... ವೆಂಕಟೇಶಯ್ಯನವರು ಇದನ್ನು ... ಸೀತಾರಾಮಯ್ಯನ ... ಸೂಚನೆಯನ್ನು ಅಧ್ಯಕ್ಷರು ... ತಿದ್ದುಪಡಿ ತರಲಾಗಿದೆ ... ಈಗ ಮೂಲ ... ಅದೇ ಎಂದು ವಾದಿಸಿ ... ಮಾತನಾಡುತ್ತಿರುವರೆಂದೂ ... ರಾಮಕೃಷ್ಣಯ್ಯನವರ ಸೂ ... ತಿದ್ದುಪಡಿಯಾಗಿ ತೆಗೆದು ... ಹೇಳಿ, ಅಧ್ಯಕ್ಷರ ... ಪ್ರತಿಭಟನೆ ಸೂಚಿಸಲು ... ಅನೇ ಯರಾಯಿಗಳೂ ... ಮಾಡುವುದಾಗಿ ಹೇಳಿ ... ಹೋದರು ... ನಿರ್ಣಯವು ... ಅಂಗೀಕೃತವಾಯಿತು

## ಸರ್ಕಾರಿ ಆಸ್ಪತ್ರೆಗಳಲ್ಲೆಲ್ಲಾ ವೈದ್ಯ ಶುಲ್ಕ

ಬೆಂಗಳೂರು ೯

ಸಂಸ್ಥಾನದ ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ರೋಗಿಗಳಿಂದಲೂ ರು ೫ ೦ ಇ ಸ್ಸು ಬಡವರು ಬಲ್ಲಿದರೆಂಬ ಭೇದವಿಲ್ಲ ದೆ ವಸೂಲು ಮಾಡಲಾಗುವುದು ಔಷ ಧದ ಬೆಲೆ ಹೆಚ್ಚುತ್ತಿರುವುದೇ ಇದಕ್ಕೆ ಕಾರಣವೆಂದು ತಿಳಿಸಲಾಗಿದೆ ಆಸ್ಪತ್ರೆ ಗಳಲ್ಲಿಯೇ ಚಿಕಿತ್ಸೆಗೆ ಸೇರುವವರು ಪ್ರ ವೇಶ ಧನ ೧ ರೂ ಕೊಡಬೇಕು

ಔಟ್ ಪೇಷಂಟುಗಳಿಗೆ ಈ ರೀತಿ ರು ೫ ೦ ಗೊತ್ತುಮಾಡಲಾಗಿದೆ –ವರ ಮಾನ ೧೦೦ ರೂ ವರೆಗೆ ೧ ಆಣೆ ೧೦೦ ರಿಂದ ೩೦೦ ರೂ ಇದ್ದವರಿಗೆ ೨ ಆಣೆ ಅದಕ್ಕೆ ಹೆಚ್ಚಿದ್ದವರಿಗೆ ೪ ಆಣೆ

## ಕರಾಚಿ ಪೊಲೀಸರ ಗುಂಡಿಗೆ ೧೦ ತರುಣರ ಬಲಿ

ಕರಾಚಿಯಲ್ಲಿ ಮೊನ್ನೆ ವಿದ್ಯಾರ್ಥಿಗಳ ಮೇಲೆ ನಡೆದ ಧಾಳಿಯನ್ನು ಪ್ರತಿಭಟಿ ಸಲು, ನೆನ್ನೆ ಅಲ್ಲಿ ವಿದ್ಯಾರ್ಥಿಗಳ ಪ್ರದ ರ್ಶನವು ನಡೆದಾಗ ಗಲಭೆಯಾಗಿ, ಪೊ ಲೀಸರು, ಕಲ್ಲು ಮತ್ತು ಇಟ್ಟಿಗೆಗಳನ್ನು ಎಸೆದ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಲು ೧೦ ಜನ ಮಡಿದರು ೭೬ ಮಂದಿಗೆ ಗಾಯವಾಗಿದೆ ಅನೇಕ ಪೊ ಲೀಸರಿಗೆ ಪೆಟ್ಟು ಬದ್ದಿದೆ ವಿದ್ಯಾರ್ಥಿಗ ಳು ಒಬ್ಬರ ಮಂತ್ರಿಗಳ ಕಾರನ್ನು ಸುಟ್ಟು ಹಾಕಿದ್ದಾರೆ ಶಸ್ತ್ರ ಸಜ್ಜಿತ ಸೈ ನಿಕರನ್ನು ನಗರದಲ್ಲೆಲ್ಲಾ ಕಾವಲಿರಿಸಲಾ ಗಿದೆ

### ವಿಷ ಮಿಶ್ರ ಆಹಾರ ಸೇವನೆಯಿಂದ ಮರಣ

ಮೈಸೂರು ತಾಲ್ಲೂಕು ಚಟ್ನಹಳ್ಳಿ ಹೋಬಳಿ ಬುಜ್ಜನರಸಿಂಹಪುರದಲ್ಲಿ ಕಳೆದ ಶನಿವಾರ ಆದಿಕರ್ನಾಟ ಜಾತಿಯ ಲಕ್ಷ್ಮ ಯ್ಯ ಮತ್ತು ಇತರ ೫ ಮಂದಿಗಳು ವಿಷ ಮಿಶ್ರವಾದ ಆಹಾರ ಸೇವನೆಗಾಗಿ ರಾ ಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟು ಅವರ ಪೈಕಿ ಲಕ್ಷ್ಮಯ್ಯ ನು ಮೃತನಾದನು ಇತರರು ಗುಣ ಮುಖರಾಗುತ್ತಿರುವರು ಲಕ್ಷ್ಮಯ್ಯನ ಪತ್ನಿಯು ಈಗ ಪರಾರಿಯಾಗಿರುವಳೆಂ ದೂ, ಆಕೆಯ ಪತ್ತೆ ತರದೂದು ನಡೆ ಯುತ್ತಿರುವುದೆಂದೂ ಗೊತ್ತಾಗಿದೆ

## ಆಂಧ್ರದಲ್ಲಿ ಮದ್ರಾಸನ್ನು ಸೇರಿಸಲು ರಕ್ತದ ರುಜು

ಮದ್ರಾಸ ನಗರವನ್ನು ಬಿಟ್ಟು ಆಂ ಧ್ರ ಪ್ರಾಂತವನ್ನು ರಚಿಸಲು ಒಪ್ಪದಿದ್ದ ಕಮ್ಯೂನಿಸ್ಟರು, ಈಗ ಮದ್ರಾಸು ನಗ ರವೂ ಆಂಧ್ರಕ್ಕೆ ಬರಬೇಕೆಂದು ಕೇಳಲು ಹೊರಟಿರುತ್ತಾರೆ ಅದಕ್ಕಾಗಿ ರಕ್ತದಲ್ಲಿ ರುಜು ಮಾಡಿಸುವ ಚಳುವಳಿಯಲ್ಲಿ ಅ ವರು ತೊಡಗಿದ್ದಾರೆ. ಲೇಖನಿಯ ಮೊನೆಚಾದ ಭಾಗದಿಂದ ಕೈ ಬೆರಳಿಗೆ ಚುಚ್ಚಿ ಅದರಿಂದ ಬರುವ ರಕ್ತವನ್ನು ರುಜು ಮಾಡುವ ಮುಂಚೆ ಲೇಖನಿಯ ತುದಿಗೆ ಬಳಿದು ಅದರಿಂದ ರುಜು ಮಾ ಡಿಸಲಾಗುತ್ತಿದೆ ಮದ್ರಾಸು ನಗರವ ನ್ನು ಬಿಟ್ಟು ಬಿಡಲು ಆಂಧ್ರ ಜನ ಸಮು ದಾಯವಲ್ಲಿ ಒಪ್ಪಿಗೆಯಿಲ್ಲದಿರುವುದರಿಂದ ಜನರ ಬಲವನ್ನು ಸಂಪಾದಿಸಲು ಕ ಮ್ಯೂನಿಸ್ಟರು ಈ ರೀತಿಯ ಹೊಸ ಮಾ ರ್ಗವನ್ನು ಅನುಸರಿಸುತ್ತಿರುವರೆಂದು ಹೇ ಳಲಾಗಿದೆ

## ಕಾಂಗ್ರೆಸ್ಸಿನೊಡನೆ ಕೃಷಿಕಾರ್ ಪಕ್ಷದ ಲೀನ

ಪ್ರೊ॥ ಎನ್ ಜಿ ರಂಗಾರವರ ಕೃಷಿ ಕಾರ್ ಲೋಕ ಪಕ್ಷವು ಕಾಂಗ್ರೆಸ್ಸಿನೊಳ ಗೆ ಐಕ್ಯವಾಗುವುದೆಂದು ಗೊತ್ತಾಗಿದೆ ಪ್ರೊ॥ ರಂಗಾರವರು ನೆನ್ನೆ ಡೆಲ್ಲಿಯಲ್ಲಿ ಪಂ ಡಿತ ನೆಹರೂರವರೊಡನೆ ಭೇಟಿ ಮಾಡಿ ದ್ದರು

### ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವ

ರಾಜಧಾನಿಯ ವಾಣೀವಿಲಾಸ ಮೊ ಹಲ್ಲೆಯ ಶ್ರೀರಾಮ ಕೃಷ್ಣಾಶ್ರಮದಲ್ಲಿ ನಾಳೆ ಮತ್ತು ನಾಳಿದ್ದು ಸಂಜೆ ೫ ಗಂಟೆ ಗೆ ಸ್ವಾಮಿ ವಿವೇಕಾನಂದರ ಜನ್ಮ ದಿ ನೋತ್ಸವವನ್ನು ಆಚರಿಸಲಾಗುವುದು ಶನಿವಾರ ಸಂಜೆ ಶ್ರೀ ಎಲ್. ಲಕ್ಷ್ಮೀಪತಿ ಅವರಿಂದ ಭಕ್ತ ಮಯೂರಧ್ವಜ"ಎಂಬ ವಿಷಯವಾಗಿ ಹರಿಕಥೆಯೂ, ಮಾರನೇ ಸಂಜೆ ವಿದ್ವಾಂಸರುಗಳಾದ ರಾಮಚಂ ದ್ರರಾವ್ ಮತ್ತು ರಾಮಯ್ಯಂಗಾರ್ಯರವರಿಂ ದ ದೇವರನಾಮವೂ, ನಂತರ ಶ್ರೀಗಳಾ ದ ಜಿ ಎ ಆಚಾರ್ಯ, ಟಿ ಎಸ್ ಶಾ ಮರಾವ್ ಮತ್ತು ಸ್ವಾಮಿ ವಿಮಲಾನಂ ದಜಿಯವರುಗಳಿಂದ ಭಾಷಣಗಳೂ ನಡೆ ಯುವುವು.

## ಮದ್ರಾಸು ಪೊಲೀಸರ ಮೇಲೆ ಲಾಠಿ ಪ್ರಯೋಗ

### ೧೩೬ ಕಾನ್‌ಸ್ಟೇಬಲ್ಲುಗಳ ಬಂಧನ

ಸಂಬಳ ತೆಗೆದುಕೊಳ್ಳದೆ ಇರುವ ಮದರಾಸು ನಗರದ ಪೊಲೀಸು ನೌಕ ರರ ಸಂಘದ ೪೬ ಜನ ಸದಸ್ಯರೂ ಸೇರಿ ೧೩೬ ಮಂದಿ ಕಾನ್‌ಸ್ಟೇಬಲ್ಲುಗಳನ್ನು ನೆ ನ್ನೆ ದಸ್ತಗಿರಿ ಮಾಡಲಾಯಿತು ವಿಶೇಷ ಪೊಲೀಸರು ಸಂಘದ ಕಛೇರಿಗೆ ನೆನ್ನೆ ನುಗ್ಗಿ ಸಂಘದ ಅಧಿಕಾರ ವರ್ಗದ ಪೈಕಿ ಹಲವರನ್ನು ದಸ್ತಗಿರಿ ಮಾಡುವಾಗ ಪೊ ಲೀಸರು ಅಡ್ಡಿ ಬಂದರೆಂದೂ, ಅವರ ಮೇಲೆ ಲಘುವಾದ ಲಾಠಿ ಪ್ರಹಾರ ಮಾಡಲಾಯಿತೆಂದೂ ಹೇಳಲಾಗಿದೆ ಪೊಲೀಸರ ಸಂಘಕ್ಕೆ ಸರ್ಕಾರವು ಕೊಟ್ಟಿ ದ್ದ ಮನ್ನಣೆಯನ್ನು ರದ್ದುಗೊಳಿಸಲಾ ಗಿದೆ ನಗರದಲ್ಲಿ ಗೂರ್ಖಾ ಸೈನ್ಯದ ಕಾವಲಿದೆ

## ಇಟಲಿ ದೇಶದ ಕನ್ಯೆಯು ಗಂಡಸಾಗುತ್ತಿರುವಳು

ಇಟಲಿಯ ಮಿಲಾನ್ ನಗರದ ಬಳಿ ಒಂದು ಸಣ್ಣ ಊರಿನ ೧೩ ವರ್ಷದ ಮೇರಿಯಾ ಪರೋಟಿ ಎಂಬ ಬಾಲಕಿ ಯು ಕ್ರಮಕ್ರಮವಾಗಿ ಗಂಡಸಾಗುತ್ತಿ ರುವಳೆಂದು ವರದಿಯಾಗಿದೆ ಅವಳು ಹುಟ್ಟಿದಂದಿನಿಂದಲೂ ಅವಳ ಲೈಂಗಿಕ ವಿಷಯದ ಬಗ್ಗೆ ತಂದೆ ತಾಯಿಗಳಿಗೆ ಅ ನುಮಾನವಿದ್ದಿತು ಆಕೆಗೆ ಒಂದು ಸಣ್ಣ ಶಸ್ತ್ರ ಚಿಕಿತ್ಸೆ ನಡೆಯಬೇಕಾಗಿದೆಯೆಂ ದು ಗೊತ್ತಾಗಿದೆ

## ಆನೆಗಳಿಂದ ಕೂಲಿ ಕೆಲಸ

ಕಾಶಿ ಬಳಿ ಚಂದ್ರಪ್ರಭಾ ಅಣೆಕಟ್ಟು ಕಟ್ಟಲಿರುವ ಪ್ರದೇಶದಲ್ಲಿ ಭೂಮಿಯ ನ್ನು ಒಂದೇ ಮಟ್ಟವಾಗಿ ಮಾಡಲು ೬ ಆನೆಗಳಿಂದ ಕೆಲಸ ಮಾಡಿಸಲಾಗುತ್ತಿದೆ ಮನುಷ್ಯರಿಂದ ಮಾಡಿಸಿದರೆ ತಗಲುವ ಕೂಲಿಗಿಂತ ಇದು ಕಡಿಮೆಯೆಂದು ಉ ತ್ತರ ಪ್ರದೇಶ ಸರ್ಕಾರದ ನೀರಾವರಿ ಮಂತ್ರಿ ಶ್ರೀ ತ್ರಿಪಾಠಿಯವರು ಹೇಳಿರು ತ್ತಾರೆ

### ನಾಗಮಂಗಲದಲ್ಲಿ ಉಪ ಚುನಾವಣೆ

ಮೈಸೂರು ಶಿರಿಯ ಶಾಸನ ಸಭಾ ಸದಸ್ಯ ಶ್ರೀ ಎಂ. ಶಂಕರ ಲಿಂಗೇಗೌಡ ರ ನಿಧನದಿಂದ ಖಾಲಿಯಾಗಿರುವ ಶಾಸ ನ ಸಭಾ ಸ್ಥಾನಕ್ಕೆ ಇದೇ ಮಾರ್ಚಿ ೮ ನೇ ತಾರೀಖು ಚುನಾವಣೆಯು ನಡೆ ಯಲಿದೆ ಉಮೇದುವಾರಿಕೆ ಸಲ್ಲಿಸಲು ಈ ತಿಂಗಳು ೨೨ ನೇ ತಾರೀಖು ಕಡೆ ಯ ದಿನ ವಾಪಸ್ಸಿಗೆ ೩೦ ನೇ ತಾರೀ ಖು ಗೊತ್ತುಪಡಿಸಲಾಗಿದೆ

### ವಿದ್ಯುಚ್ಛಕ್ತಿಯಿಂದ ಬಾಲಕನ ಮರಣ

ರಾಜಧಾನಿಯ ವಾಣಿವಿಲಾಸ ಮಾ ರ್ಕೆಟ್ ಹಾಕದ ಮಧ್ಯದಲ್ಲಿ ಕೆಂಪು ದೀ ಪದ ಕಂಭದೊಳಗೆ ಖಾಸಿಂ ಎಂಬುವರ ಮಗ ೧೨ ವರ್ಷದ ಬಾಲಕನು ನೆನ್ನೆ ಸಂಜೆ ಕೈಯಿಟ್ಟಾಗ ವಿದ್ಯುಚ್ಛಕ್ತಿಯು ತಗುಲಿ ಮರಣ ಹೊಂದಿದನೆಂದು ಗೊ ತ್ತಾಗಿದೆ ಕೃಷ್ಣರಾಜ ಪೊಲೀಸರು ಮ ಹಜರು ಕ್ರಮ ನಡೆಸಿದರು

## ಬಿ. ಸಿ. ಜಿ. ವ್ಯಾಕ್ಸಿನೇಷನ್ನಿನ ಅಪಾಯಗಳು

ಮೈಸೂರು ನಿಯೋಗಿ ಪಾರ್ಕಿನ ರಾ॥ ಎಸ್ ಎಸ್ ಸುಬ್ರಹ್ಮಣ್ಯ ಶಾಸ್ತ್ರಿಯವರು ಈ ರೀತಿ ಬರೆಯುತ್ತಾರೆ -

೩-೧-೫೩ನೇ ಸಾಧ್ವಿಯಲ್ಲಿ ಪ್ರಕಟವಾಗಿರುವ ಬಿ ಸಿ.ಜಿ ಬಹಿರಂಗ ಸಭೆ ವರದಿಯಲ್ಲಿ ಸಾರ್ವಜನಿಕರ ಅವಗಾಹನೆ ಬಗ್ಗೆ ಈ ಕೆಳಗಿನ ಅಂಶವನ್ನು ಪ್ರಕಟಿಸಬೇಕಾಗಿ ಪ್ರಾರ್ಥನೆ

ಅಮೇರಿಕದ ಕ್ಷಯ ರೋಗದ ಸಮ್ಮೇಳನದಲ್ಲಿ ಡಾ॥ ಬೇರ್ ಮನ್ಸ್ ರು ಬಿ. ಸಿ. ಜಿ. ಇನಾಕ್ಯುಲೇಷನ್ ಮಕ್ಕಳಿಗೆ ಮಾಡಿದರೆ [illegible]

[illegible]

## ಮನುಷ್ಯನ ಮಾತನ್ನು ಕೇಳಿ, ಹಾಗೆ ನಡೆಯುವ ಯಂತ್ರ

ನ್ಯೂಯಾರ್ಕಿನಲ್ಲಿ ಮನುಷ್ಯನ ಮಾತಿನ ಅರ್ಥವನ್ನು ಗ್ರಹಿಸಿ, ಅದರಂತೆ ನಡೆಯಬಲ್ಲ ಯಂತ್ರವೊಂದನ್ನು ತಯಾರಿಸಿರುವುದಾಗಿ ವರದಿಯಾಗಿದೆ. ಟೆಲಿಫೋನ್ ಮತ್ತು ರೇಡಿಯೊ ಫೋನೋಗ್ರಾಫ್ ಸಂಯೋಜನೆಯುಳ್ಳ ಒಂದು ಸಾಧನವನ್ನು ಈ ರೀತಿ ತಯಾರಿಸಿ, ಅದಕ್ಕೆ ಆಡ್ರಿ ಎಂದು ಹೆಸರಿಡಲಾಗಿದೆ. ಟೆಲಿಫೋನಿನ ೩ ನೇ ನಂಬರನ್ನು ತಿರುಗಿಸುವಂತೆ ಹೇಳಿದಾಗ ಅದು ಹಾಗೆ ಮಾಡುತ್ತದೆ, ೯ ನೇ ಸಂಖ್ಯೆಯನ್ನು ಕೇಳಿದಾಗಲೂ ತಿರುಗಿಸಿತೆಂದು ಹೇಳಲಾಗಿದೆ. ಅದರ ಕೆಲಸವನ್ನು ನೋಡುತ್ತಿದ್ದ [illegible]

[illegible]

### ಚುನಾವಣೆಯಲ್ಲಿ ನೌಕರರ ಪಕ್ಷಪಾತ ಕೂಡದು

[illegible]

## ಮಹಾತ್ಮಾ ಗಾಂಧಿಯವರ ಬಗ್ಗೆ ಚಲನ ಚಿತ್ರ

ಅಮೇರಿಕದ ಏಷ್ಯಾಟಿಕ್ ಸಂಸ್ಥೆಯ ಶ್ಯಾಪ್ಲಿ ಎಸ್ ನೀಲ್ ರವರು ಮಹಾತ್ಮಾ ಗಾಂಧಿಯವರ ಜೀವನವನ್ನು ಚಿತ್ರಿಸುವ ಬಗ್ಗೆ ೨೦ ನಿಮಿಷಗಳಲ್ಲಿ ನೋಡಬಹುದಾದ ಚಲನ ಚಿತ್ರವನ್ನು ತೋರಿಸಿದ್ದಾರೆ

## ಹಿಂದಿಯಲ್ಲಿ ಕೋರ್ಟ್ ವ್ಯವಹಾರ

ಈ ತಿಂಗಳು ೧ ನೇ ತಾ॥ ನಿಂದ ಉತ್ತರ ಪ್ರದೇಶ ಪ್ರಾಂತದ ಹಲವು ಕೋರ್ಟುಗಳಲ್ಲೂ ಮತ್ತು ರೆವಿನ್ಯೂ ಇಲಾಖೆಯಲ್ಲೂ ಇಂಗ್ಲಿಷ್ ಬದಲು ಹಿಂದಿಯನ್ನು ಉಪಯೋಗಿಸುವ ಪ್ರಯೋಗವು ಪ್ರಾರಂಭವಾಗಿದೆ. ಆ ಪ್ರಾಂತದ ಎಲ್ಲ ಕೋರ್ಟುಗಳಲ್ಲೂ ಆ ಭಾಷೆಯನ್ನು ತರುವುದಕ್ಕೆ ಹೈಕೋರ್ಟಿನವರು ಒಪ್ಪಿರುತ್ತಾರೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

TYRE SOLES
BANGALORE
Have You Your Old Tyres for Resoling, which gives a New Tyre Mileage. Drop a Post Card to the undermentioned address. The dealer will call at your doors to fetch tyres.
G. RAMA SWAMY
109 Dewan's Road, Mysore

## ಮೈಸೂರು ಪೇಟೆ ಧಾರಣೆ

| ಪಲ್ಲ ಒಂದಕ್ಕೆ | ರೂ ಇಂದ | ರೂ ವರೆಗೆ |
|---|---|---|
| ನೆಲಗಡಲೆ | [illegible] | [illegible] |
| ಎಳ್ಳು | [illegible] | |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | |
| ಹರಳು ಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | [illegible] |
| ಉದ್ದು | [illegible] | |
| ಕಡಲೆಕಾಳು | [illegible] | [illegible] |
| ಮೆಣಸಿನಕಾಯಿ | | |
| ಮಣಗಲ್ಲು | [illegible] | [illegible] |
| ಕೊತ್ತಂಬರಿ | [illegible] | [illegible] |
| ಸಿಗೆಕಾಯಿ | [illegible] | [illegible] |
| ಬೆಲ್ಲ | [illegible] | [illegible] |
| ತೆಂಗಿನಕಾಯಿ [illegible] | [illegible] | [illegible] |

## ಪ್ರಸಿದ್ಧ ಪತ್ರಿಕೆ

ಮೈಸೂರು ದೇವರಾಜ ಮೊಹಲ್ಲಾ ಚಿಕ್ಕ ಕಟ್ಟೆಗೆ ಮಂಗಳ ವಿಲಾಸಕ್ಕೆ 1222 ನೇ [illegible] ... ಟೆಲಿಫೋನ್ ನಂ. 195 ... 577 ನೇ ನಂಬರಿನಲ್ಲಿ ... [illegible]

ಕಾಳೆಮ್ಮನ ಎದುಗ್ಗೆ ಚಿಕ್ಕಣ್ಣನ ರಾಜು

ಅಬೀದ್ ರವರ ಅನೋಸ್ತಾ ಹರಾಜು ಮಾರಾಟ
1953ನೇ ಜನವರಿ 11ನೇ ತಾ॥ ಭಾನುವಾರ ಬೆಳಿಗ್ಗೆ 10 ಕ್ಕೆ
[illegible]

SREE GANESHA TALKIES
Grand Release on 9 1 53
The Love Magic of Sheherzade The wonders of Alladin, The Strength of Sinbad and the Cunning of Alibaba All In One.
Columbia's
THIEF OF DAMASCUS
(In Brilliant Technicolor)
Starring —Paul Henried and John Futtan

ಜನವರಿ ತಿಂಗಳಲ್ಲಿ ಪ್ರಾರಂಭ
ಮೈಸೂರು,
ರಾಜಕಮಲ್
ಬೆಂಗಳೂರು
ಸಾಗರ್
ಮತ್ತು
ಶಿವಾಜಿ
ಕರ್ನಾಟಕ ಮತ್ತು ಹೈದರಾಬಾದ್ ಸಂಸ್ಥಾನದಲ್ಲಿ ಏಕ ಕಾಲದಲ್ಲಿ

Edited, Printed and Published by A. R. Nagarajan [illegible] Press, D. Subbiah Road, Mysore.

ರೋ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂ ಪುಟ ೧೧] ಶನಿವಾರ ೧೦-೧-೧೯೫೩ [ ಸಂಚಿಕೆ ೧೩೬

# ಕರಾಚಿಯಲ್ಲಿ ಲೂಟಿ, ಬಂದೂಕದ ಕಾಳಗ

## ವಿದ್ಯಾ ಸುಧಾರಣಾ ಸಮಿತಿಯ ವರದಿ

... ಪೋರ್ಟ್) ಬೆಂಗಳೂರು, ೧೦ ... ಧಾಕ್ಷ್ಯರವರು ಕೊಟ್ಟಿರುವ ... ವನ್ನು ಕಾರ್ಯೋಗಿಸಲು ವಿದ್ಯಾ ... ಸಮಿತಿಯು ಇದೇ ತಿಂ ನೇ ತಾ॥ ... ೧೦ ನೇ ತಾ ಸೊಳಗೆ ವರದಿ ... ಒಪ್ಪಿಗೊಳಿಸುವುದೆಂದು ತಿಳಿದುಬಂ ...

## ದಸ್ಮುರೇಟಿವ್ ಮಾರ್ಕೇಟ್ ಸಮಿತಿಗೆ ೬ ತಿಂಗಳ ಅವಧಿ

ಮೈಸೂರು ನಗರದ ಕೆಸ್ಮುಲೇಟಿವ್ ಮಾ ... ಸಮಿತಿಯ ಅವಧಿಯನ್ನು ಸರ್ಕಾರ ... ತಿಂಗಳ ಕಾಲ ವಿಸ್ತರಿಸಿದ್ದಾರೆ ... ಮಂತ್ರಿ ಶ್ರೀ ಎಂ. ವಿ ... ನವರೂ, ಸಂಸ್ಥಾನದ ಆಹಾರ ಮಂ ... ನವರೂ ಈ ದಿನ ಮೈ ... ಗೆ ಆಗಮಿಸಿದರು ಶ್ರೀ ಸಿದ್ದ ... ಪರು ಪುನಃ ಬೆಳಗಿನ ೩೦ ನೇ ಕಾ ... ಕೆ ಪರು.

... ಕ್ರಿ ಮಯೋಕಾಲೇಜ ಕ್ಯಾಂಟಿನ ... ದ ಬಗ್ಗೆ ಈ ದಿನ ಕೆಲವು ... ಮುಖ್ಯ ಮಂತ್ರಿಗಳನ್ನು ಬೇ ... ಮಾತುಕತೆ ನಡೆಸಿದರು ಈ ವಿ ... ಪರಿಶೀಲಿಸುವುದಾಗಿ ಅವರು ತಿ ...

... ಕ್ಯಾಂಟೀನಿನ ವಿಸ್ತರಣ ... ಯದಾದರೆ ... ಇಂದೊನೇ ... ತೀರಿಸಿಕೊಳ್ಳಲಾಗಿದೆ

## ಮಧ್ಯ ಪ್ರದೇಶದಲ್ಲೂ ಗುಂಡಿನ ಪ್ರಕರಣ

... ಪ್ರದೇಶ ಸರ್ಕಾರದವರು ... ದೀಪ ಎಂಬ ತಾಲ್ಲೂಕನ್ನು ... ದ ಬಗ್ಗೆ ಅಲ್ಲಿನ ಜನರು ... ದ ಚಳುವಳಿ ನಡೆಸಿ, ನೆನ್ನೆ ... ಮತ್ತು ತಾಲ್ಲೂಕು ಕಚೇರಿ ... ಪತ್ರಗಳನ್ನು ರವಾನೆಗೆ ವಿರೋ ... ಜನರು ಸೇರುವಿಕೆಯ ... ಸಿದ್ದರಿಂದ, ಜಿಲ್ಲಾಧಿಕಾರಿಗ ... ಇತರ ಸರ್ಕಾರಿ ನೌಕರರ ... ಗಳನ್ನು ಹೊಡೆದು ಗಾಯಪಡಿ ... ಅದಕ್ಕಾಗಿ ಪೋಲೀಸರು ... ೪ ಜನರು ಮಡಿದು ... ಗಾಯಗೊಂಡರೆಂದೂ ವರ ... ಹೇಳಿದೆ

## ವಿದ್ಯುಚ್ಛಕ್ತಿ ಕಂಟ್ರಾಕ್ಟರುಗಳ ಸಮ್ಮೇಳನ

... ತಿಂಗಳು ... ನೇ ತಾ॥ ಬೆಳ ... ಗೆ ರಾಜಧಾನಿಯ ಟೌನ್ ... ವಿದ್ಯುಚ್ಛಕ್ತಿ ಕಂಟ್ರಾಕ್ಟರುಗ ... ನವು ನಡೆಯುವುದು ಶ್ರೀ ... ಅವರು ಆರಂಭೋತ್ಸವವ ... ರುವರು.

## ಕರ್ನಾಟಕ ಸಂಘ

... ಸಂಜೆ ೬ ಗಂಟೆಗೆ ಸದ್ವಿದ್ಯಾ ... ದಲ್ಲಿ ಮೈಸೂರು ಕರ್ನಾಟಕ ... ದ ಕಾರ್ಯಕ್ರಮಗಳನ್ನು ಗೂ ... ಇನ್ನ ಡಾಕ್ಟರುಗಳ ... ಕರೆಯಲಾಗಿದೆ ಕನ್ನಡ ... ಸಮಯಮಾಡಿಕೊಳ್ಳಾಗಿ ವ್ಯವ ... ಮಾಡಿರುತ್ತಾರೆ

## ಗ್ರಾಮಗಳ ಕಾರ್ಖಾನೆ ಅಭಿವೃದ್ಧಿ

... ಸರ್ಕಾರಿ ಪೋರ್ಸಲೇನ್ ... ಅಭಿವೃದ್ಧಿಯ ಬಗ್ಗೆ ... ಯೊಡನೆ ಸರ್ಕಾರದವರು ... ನಡೆಸಿರುತ್ತಾರೆ.

## ಮದ್ರಾಸು ಪೋಲೀಸರ ಸತ್ಯಾಗ್ರಹದ ಮುಕ್ತಾಯ

ಕಳೆದ ಒಂದು ವಾರದಿಂದ ಸಂಬಳ ತೆಗೆದುಕೊಳ್ಳಲು ನಿರಾಕರಿಸಿದ್ದ ಮದ್ರಾಸು ನಗರದ ಪೋಲೀಸರು, ತಮ್ಮ ಸತ್ಯಾಗ್ರಹವನ್ನು ನೆನ್ನೆ ನಿಲ್ಲಿಸಿದರು ... ದ ಪೋಲೀಸರ ಪೈಕಿ ಅನೇಕರು ... ಗಳನ್ನು ತೆಗೆದುಕೊಂಡು ಮರುದಿನ ತಿಕೆ ಲಸದಲ್ಲಿ ತೊಡಗಿರುತ್ತಾರೆ ನೆನ್ನೆ ... ಹಲವು ಪೋಲೀಸರ ದಸ್ತಗಿರಿಯಾಯಿತ

## ಮೂರು ತಲೆಗಳ ಶಿಶು

ಬರ್ದ್ವಾನ್ ಜಿಲ್ಲೆ ... ನಗರದ ಒಬ್ಬ ... ಕಳೆದ ... ಗಳಿಗೆ ಒಂದು ಶಿಶುವಿಗೆ ಜನ್ಮವಿತ್ತರು ... ಹುಟ್ಟುವಾಗಲೇ ಸತ್ತಿತ್ತು ... ಕಾಲಿನಲ್ಲಿ ದೃಷ್ಟಿ ಉಪಯೋಗ ... ಮಗುವಿನ ತಲೆ ಬಾರುವಗಳಿಗೆ ಪೆಟ್ಟು ಬಿದ್ದಿತ್ತು ತಾಯಿಯು ಹುಷಾರಾಗಿರುವಳು

## ಉದ್ಯಾನ ಕಲಾ ಸಂಘದ ಪ್ರಾರಂಭ

ರಾಜಧಾನಿಯ ಉದ್ಯಾನ ಕಲಾ ಸಂಘದ ಪ್ರಾರಂಭೋತ್ಸವವು ನಾಳೆ ಸಂಜೆ ೫॥ ಗಂಟೆಗೆ ಟೌನ್‌ಹಾಲಿನಲ್ಲಿ ನೆರವೇರುವುದು. ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಗ್ರಾಸನವನ್ನು ವಹಿಸುವರು

## ತ್ಯಾಗರಾಜರ ಆರಾಧನೆ ಸಂಗೀತ

ರಾಜಧಾನಿಯ ಸಂಗೀತ ಕಲಾಭಿವರ್ಧಿನಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಶ್ರೀ ತ್ಯಾಗರಾಜ ಸ್ವಾಮಿಗಳವರ ಆರಾಧನಾ ಮಹೋತ್ಸವವು ಜರುಗುವುದು. ಸಂಗೀತ ಶಾಸ್ತ್ರ ವಿಶಾರದ ಶ್ರೀ ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸುವರು ಶ್ರೀ ಹೆಚ್ ಯೋಗಾನರಸಿಂಹರವರು ಶ್ರೀ ತ್ಯಾಗರಾಜರ ಸಂಗೀತ ತತ್ವ ದರ್ಶನ"ದ ಬಗ್ಗೆ ಉಪನ್ಯಾಸ ಮಾಡುವರು ಶ್ರೀಮತಿ ರತ್ನಮ್ಮ ಕೃಷ್ಣಮೂರ್ತಿಯವರ ಗಾಯನವು ಶ್ರೀ ಎಸ್ ಮಹದೇವಪ್ಪನವರ ಪಿಟೀಲು, ಶ್ರೀ ಕೆ.ಎಸ್ ಗೋಪಾಲರಾಯರ ಮೃದಂಗ ಮತ್ತು ಶ್ರೀ ಎಸ್.ಶೇಷಗಿರಿದಾಸ್‌ರವರ ಖಂಜರಿ ಸಮೇತ ನಡೆಯುವುದು. ಸದಸ್ಯರುಗಳಿಗೆ ಮಾತ್ರ ಅವಕಾಶವಿದೆ. ಹೊಸದಾಗಿ ಸದಸ್ಯರಾಗಬಯಸುವವರೂ ಸಹ ಅದೇ ಸಮಯದಲ್ಲಿ ಸೇರಲವಕಾಶವಿದೆ.

## ಆಹಾರದ ಬೆಲೆ ಹೆಚ್ಚಿಸಿರುವುದರಿಂದ ಕೊಳ್ಳುವವರಿಗೆ ಕಷ್ಟ

### ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅಭಿಪ್ರಾಯ

ಬೆಂಗಳೂರು ೧೦

ಆಹಾರದ ಬೆಲೆಯನ್ನು ಹೆಚ್ಚಿಸಿರುವುದರಿಂದ ಕೊಂಡು ತಿನ್ನುವವರಿಗೆ ತುಂಬಾ ಕಷ್ಟವಾಗಿರುವುದೆಂದು, ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ... ವೀರಣ್ಣಗೌಡರ ತಿಳಿಸಿರತ್ತಾರೆ ಬೆಲೆ ಹೆಚ್ಚಿಸಿರುವ ಬಗ್ಗೆ ತಾವು ಮುಖ್ಯ ಮಂತ್ರಿಯವರೊಡನೆ ಮಾತನಾಡುವುದಾಗಿಯೂ ಅವರು ಹೇಳಿದರು

## ಸಿಂಧ್ ಪೋಲೀಸ್ ಮುಖ್ಯ ಅಧಿಕಾರಿ ಕಛೇರಿಗೆ ಬೆಂಕಿ

ಕರಾಚಿಯಲ್ಲಿ ನೆನ್ನೆಯೂ ಗಲಭೆಗಳು ನಡೆದುವು ಉದ್ರಿಕ್ತ ಪ್ರದರ್ಶನಕಾರರು ಸಿಂಧ್ ಪ್ರಾಂತದ ಪೋಲೀಸು ಮುಖ್ಯಾಧಿಕಾರಿ ಕಛೇರಿಗೆ ಬೆಂಕಿಯನ್ನು ಹಚ್ಚಿಸಿದರು ಅವರನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು. ಇದನ್ನು ಪ್ರತಿಭಟಿಸಲು ಕರಾಚಿಯಲ್ಲೆಲ್ಲಾ ನೆನ್ನೆ ಸಂಪೂರ್ಣ ಹರತಾಳವನ್ನಾಚರಿಸಲಾಯಿತು ಐದು ಜನರಿಗಿಂತ ಹೆಚ್ಚಿನ ಗುಂಪು ಸೇರಕೂಡದೆಂದು ಪ್ರತಿಬಂಧಿಸಲಾಗಿದೆ. ಒವರೂ ಜನರ ಅದನ್ನು ಲಕ್ಷಿಸದೆ ನೆನ್ನೆ ಜನರು ... ಪಾರ್ಟ್ ಗಮತ್ತು ಪಿಸ್ತೂಲು ಸಮೇತ ಪೋಲೀಸ್ ಠಾಣೆಗೆ ನುಗ್ಗಿದರೆಂದು ಹೇಳಲಾಗಿದೆ ಕರಾಚಿಗೆ ಸುತ್ತಮುತ್ತಲ ಪ್ರದೇಶಗಳಿಂದ ಸೈನ್ಯಗಳನ್ನು ಕಳುಹಲಾಗಿದೆ. ನೆನ್ನೆ ನಡೆದ ಗುಂಡಿನ ಪ್ರಕರಣದಲ್ಲಿ ಹನ್ನೆರಡು ಮಂದಿ ಮಡಿದಿರುತ್ತಾರೆ.

## ಅಸ್ಸಾಂ ಮುಖ್ಯ ಮಂತ್ರಿಗಳ ಭೇಟಿ

ಅಸ್ಸಾಂ ಸಂಸ್ಥಾನದ ಮುಖ್ಯ ಮಂತ್ರಿ ವಿಷ್ಣುರಾಂ ಮೇಧಿಯವರು ನಾಳೆ ಮಧ್ಯಾಹ್ನ ಬೆಂಗಳೂರಿಗೆ ಆಗಮಿಸಿ, ಒ ಪನಮುಖ್ಯರ್ಕ್ಕೆ ಭೇಟಿಯೀಯುವರು. ನಾಳಿದ್ದು ಅವರು ಮೈಸೂರು ನಗರಕ್ಕೆ ಬಂದು ಅನಂತರ ವಾಪಸು ಬೆಂಗಳೂರಿಗೆ ಹೋಗಿ, ೧೫ ನೇ ತಾ॥ ಹೈದರಾಬಾದಿಗೆ ತೆರಳುವರು.

೧ ಅಂದ್ರ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಇಲಾಖೆಯನ್ನು ತೆರೆದು ಒಬ್ಬ ಪ್ರಾಧ್ಯಾಪಕರನ್ನು ನೇಮಿಸಲು ಭಾರತ ಸರ್ಕಾರದವರು ೬ ಲಕ್ಷ ರೂ ಗಳ ದ್ರವ್ಯ ಸಹಾಯವನ್ನು ಕೊಡಲಿರುವರು.

## ಕರಾಚಿಯಲ್ಲಿ ಬಂದೂಕದ ಕಾಳಗ, ಲೂಟಿ, ಕರ್ಫ್ಯೂ

### ನೂರಾರು ಜನರ ದಸ್ತಗಿರಿ

ಕರಾಚಿಯಲ್ಲಿ ನೆನ್ನೆ ದಿನವೆಲ್ಲಾ ಒಂದು ಕಡೆ ಮಿಲಿಟರಿ ಮತ್ತು ಪೋಲೀಸರೂ ಇನ್ನೊಂದು ಕಡೆ ವಿದ್ಯಾರ್ಥಿಗಳು ಮತ್ತು ಇತರರು ಕಾಳಗವಾಡಿದರು ನಗರದಲ್ಲೆಲ್ಲಾ ಉರಿಯುತ್ತಿರುವ ದ್ವಾಕ್ಷಿ ರಸದ ಸೀಸೆಗಳೂ ಒಡೆದು ಬಿದ್ದಿದ್ದುವು ಒಬ್ಬ ಐರೋಪ್ಯನ ಮಾದಕ ದ್ರವ್ಯದ ಅಂಗಡಿಯು ಲೂಟಿಯಾಯಿತು. ನೆನ್ನೆ ಮಧ್ಯಾಹ್ನ ಅನೇಕ ಮದ್ಯಪಾನದ ಅಂಗಡಿಗಳ ಲೂಟಿಗಳಾದುವು ಹಲವಾರು ಭಾಗಗಳಲ್ಲಿ ಜನರಿಗೂ ಪೋಲೀಸರಿಗೂ ಘರ್ಷಣೆಯಾಗಿ ಎರಡು ಕಡೆಯವರೂ ಬಂದೂಕದ ಕಾಳಗ ನಡೆಸಿ, ಅನೇಕ ದಸಗಳಲ್ಲಿ ತೊಂದರೆಗಳು ಬದ್ದಿದ್ದುವು. ನೆನ್ನೆ ಸಂಜೆ ೫ ರಿಂದ ಬೆಳಗ್ಗೆ ೭ರ ವರೆಗೆ ವಿಧಿಸಿದ ಕರ್ಫ್ಯೂವನ್ನು ಅಧಿಕಾರಿಗಳು ಜಾರಿಗೆ ತರುವುದರಲ್ಲಿ ಬಹಳ ಕಷ್ಟವಾಯಿತು

ನೂರಾರುಗಟ್ಟಲೇ ಜನರನ್ನು ದಸ್ತಗಿರಿ ಮಾಡಲಾಯಿತು ಪೋಲೀಸರು ಮತ್ತು ಮಿಲಿಟರಿ ಲಾರಿಗಳಲ್ಲಿ ... ಕೊಲ್ಲಬೇಕೆಂದು ಆಜ್ಞೆ ಮಾಡಲಾಗಿದೆ ... ಹತೋಟಿ ... ಅಧಿಕಾರಿಗಳು ... ಗಲಭೆಯಾಗುವುದೆಂದು ... ನಗರದಲ್ಲಿರುವ ವಿದೇಶೀ ರಾಯಭಾರಿಗಳ ಕಛೇರಿಗಳ ... ಗಲಭೆಗಳಿಗೆ ... ಪ್ರಚೋದಕರೆಂದು ಅಲ್ಲಿನ ಪೋಲೀಸ್ ಕಮೀಷನರರು ತಿಳಿಸಿರುತ್ತಾರೆ.

## ಆಹಾರ ಮಂತ್ರಿ ಕಿದ್ವಾಯಿಯರ ರಾಜೀನಾಮೆ ?

ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಕೊಡಲಿರುವರೆಂದೂ, ಅವರಿಗೆ ಬೇರೆ ಮಂತ್ರಿ ಖಾತೆಯನ್ನು ಕೊಡಬಹುದೆಂದೂ ವರದಿಯಾಗಿದೆ

## ಶನಿ ಮಹಾತ್ಮೆ ಪುರಾಣ

ರಾಜಧಾನಿಯ ಕನ್ನೇಗೌಡನ ಕೊಪ್ಪಲು ರೈಲ್ವೆ ಕ್ರಾಸಿಂಗ್ ಸಮೀಪದಲ್ಲಿರುವ ಜವಳಿ ಅಂಗಡಿ ಮುಂಭಾಗದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಮಾಯಿಗೌಡರಿಂದ ಶನಿ ಮಹಾತ್ಮೆ ಪುರಾಣ ಪಠಣವೂ, ಶ್ರೀ ಹಿರಿಯಣ್ಣನವರಿಂದ ವ್ಯಾಖ್ಯಾನವೂ ನಡೆಯುವುದು ಸರ್ವರಿಗೂ ಸ್ವಾಗತವಿದೆ.

## ಆಹಾರದ ಬೆಲೆ ಹೆಚ್ಚಿಸಿದ ಬಗ್ಗೆ ಪ್ರತಿಭಟನೆ

ರಾಜಧಾನಿಯ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ನಡೆದು ಸರ್ಕಾರದವರು ಪುನಃ ಆಹಾರದ ಬೆಲೆಯನ್ನು ಏರಿಸಿರುವುದಕ್ಕಾಗಿ ಖಂಡಿಸಲಾಯಿತು ಹೆಚ್ಚಿನ ಬೆಲೆಯನ್ನು ಕೊಡಲು ಬಡ ಜನರು ಮತ್ತು ಮಧ್ಯಮ ವರ್ಗದವರಿಗೆ ಅಸಾಧ್ಯವಾಗಿರುವುದೆಂದೂ, ಸ್ವೇಚ್ಛಾ ರೀತಿಯಲ್ಲಿ ಜನರ ಶೋಷಣೆ ನಡೆಯುತ್ತಿರುವುದೆಂದೂ, ಈ ಹೊಸ ಆಜ್ಞೆಯನ್ನು ಹಿಂತೆಗೆದುಕೊಳ್ಳದಿದ್ದರೆ ಉಗ್ರ ಕ್ರಮವನ್ನು ಕೈಗೊಳ್ಳುವುದು ಅನಿವಾರ್ಯವೆಂದೂ ಸರ್ಕಾರವನ್ನು ಎಚ್ಚರಿಸಲಾಗಿದೆ.

## ಮದ್ರಾಸು ಆಂಧ್ರದ ರಾಜಧಾನಿಯಾಗದು

ಮದ್ರಾಸ್ ನಗರವನ್ನು ತಾತ್ಕಾಲಿಕ [illegible]ಗಿಯಾದರೂ ಹೊಸ ಆಂಧ್ರ ಪ್ರಾಂತ ರಾಜಧಾನಿಯನ್ನಾಗಿ ಮಾಡಲು ಅ[illegible]ಕಾಶವಿಲ್ಲವೆಂದು ನ್ಯಾಯಮೂರ್ತಿ [illegible]ಂಧೂರವರು ತಿಳಿಸಿರುತ್ತಾರೆ ಅವ[illegible] ಮದ್ರಾಸು ಮಂತ್ರಿ ಮಂಡಲದ ಸ[illegible]ರನ್ನು ಭೇಟಿ ಮಾಡಿ ಮಾತುಕತೆ ನ[illegible]ಡಸಿರುತ್ತಾರೆ

### ನಾಳೆ ನೀರು ಸರಬರಾಜಿಲ್ಲ

ನಾಳೆ ಬೆಳಿಗ್ಗೆ [illegible] ಗಂಟೆಯಿಂದ ಮ[illegible]ಧ್ಯಾಹ್ನ [illegible] ರ ವರೆಗೆ ನಗರದಲ್ಲಿ ವಿದ್ಯುಚ್ಛಕ್ತಿಯು ನಿಲ್ಲುವುದರಿಂದ ಆ ಹೊತ್ತಿನಲ್ಲಿ ನೀರು ಸರಬರಾಜಾಗುವ ಪ್ರದೇಶದ ಜನಗಳ ಸೌಲಭ್ಯಕ್ಕಾಗಿ ಈ ರಾತ್ರಿ ನೀರನ್ನು ಬಿಡುವ ಏರ್ಪಾಡು ಮಾಡಲಾಗಿದೆ ನಗರ ನಿವಾಸಿಗಳು ನೀರನ್ನು ಶೇಖರಿಸಿಕೊಳ್ಳುವಂತೆ ಕೋರಲಾಗಿದೆ

### ತಿರುಪ್ಪಾವೈ ಪರೀಕ್ಷೆಗಳು

ಶ್ರೀ ಆಂಡಾಳರವರ ರಚಿಸಿದ ತಿರುಪ್ಪಾವೈ ಮತ್ತು ಮಾಣಿಕ್ಯವಾಚಗರ್‌ರ [illegible] ಪಾವೈ ಇವುಗಳ ಪರೀಕ್ಷೆಗಳು ಇದೇ ಧನುರ್ಮಾಸದಲ್ಲಿ ಈ ದಿನ ಒಂಟಿಕೊಪ್ಪಲಿನಲ್ಲಿರುವ [illegible] ಮಂದಿರದಲ್ಲಿ, [illegible] ನೇ ತಾ|| ಸೋಮವಾರ ಮಧ್ಯಾಹ್ನ [illegible] ಗಂಟೆಗೆ ಲಕ್ಷ್ಮೀಪುರಂ ಮೊಹಲ್ಲದಲ್ಲಿರುವ ಶ್ರೀನಿವಾಸ ತಮಿಳು ಶಾಲೆಯಲ್ಲಿ, [illegible] ಗಂಟೆಗೆ ರಮಾವಿಲಾಸ ಅಗ್ರಹಾರದ [illegible] ಮಠದಲ್ಲಿಯೂ [illegible] ಹೊತ್ತಿಗೆ [illegible] ಜಾಂಬಾ ಅಗ್ರಹಾರದಲ್ಲಿರುವ [illegible] ವಾಸ ಮನೆಯಲ್ಲಿಯೂ ನಡೆಯುವುದ[illegible] ಭಾಗವಹಿಸಿ ಶ್ರೀ ಕುಂಭಕೋಣ ಶ್ರೀ ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಬಹುಮಾನಗಳನ್ನು ಪಡೆಯಬೇಕೆಂದು ಕೋರಲಾಗಿದೆ

### ಫುಟ್‌ಬಾಲ್ ಕ್ಲಬ್ಬಿನ ವಾರ್ಷಿಕೋತ್ಸವ

ರಾಜಧಾನಿಯ ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ಏದನೇ ವಾರ್ಷಿಕೋತ್ಸವವು, ನಾಳೆ ಮಧ್ಯಾಹ್ನ [illegible] ಮ ವಾಹಿನಿಯ [illegible] ಶ್ರೇಷ್ಟಿಯವರ ಛತ್ರದಲ್ಲಿ ನಡೆಯುವುದು ಮೈಸೂರು ನಗರ ಕಾಂಗ್ರೆಸ್ [illegible] ಅಧ್ಯಕ್ಷರಾದ ಶ್ರೀ ಎಸ್ [illegible]ಯ್ಯನವರು ಅಧ್ಯಕ್ಷತೆ ವಹಿಸುವರು ರಾಜಧಾನಿಯ [illegible] ಸದಸ್ಯರಾದ ಶ್ರೀ ಟಿ ವೆಂಕಟರಮಣಯ್ಯನವರು ಆರಂಭ [illegible] ಮಾಡುವರು


**TYRE SOLES**

BANGALORE

Hand over your Old Tyres for resoling which gives a New Tyre Mileage Drop a Post card to the undermentioned address The dealer will be at your doors to take the tyres

**G RAMA SWAMY**

109 [illegible] Road, Mysore


## ಮಾರ್ಷಲ್ ಸ್ಟಾಲಿನ್ನರಿಗೆ ಟ್ರೂಮನ್ನರ ಎಚ್ಚರಿಕೆ

ಅಮೆರಿಕದ ಕಾಂಗ್ರೆಸ್ಸಿನ ಉಭಯ ಸಭೆಗಳಿಗೆ ಅಧ್ಯಕ್ಷ ಟ್ರೂಮನ್ನರು ಸಂದೇಶವನ್ನು ಕಳುಹಿಸಿ, ಜನರಲ್ಲಿ ರಷ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರಿಗೆ ವೈಯಕ್ತಿಕವಾದ ಸಂದೇಶವನ್ನು ಸಹ ಅಡಕಗೊಳಿಸಿ ಇನ್ನೊಂದು ಯುದ್ಧವು [illegible]ವರ ಆಳ್ವಿಕೆ ಮತ್ತು ದೇಶವನ್ನು ನಾಶಪಡಿಸುವುದಾಗಿ ಎಚ್ಚರಿಸಿರುತ್ತಾರೆ ಬಂಡವಾಳ ಮತ್ತು ಕಮ್ಯೂನಿಸ್ಟ್ ದೇಶಗಳಲ್ಲಿ [illegible] ಅನಿವಾರ್ಯವೆಂದು ಲೆನಿನ್ ಹೇಳಿದ್ದುದು ಅಣುಯುಗಕ್ಕೆ ಪೂರ್ವವೆಂದೂ, ಮತ್ತು ಆ ಮಾತು ಅಣು ಶಕ್ತಿಯ [illegible] ತಿಳಿಯದಿದ್ದ ಮನಸ್ಯನ ಅಭಿಪ್ರಾಯವೆಂದೂ ಅವರು ಹೇಳಿ ಅವರು ಆ ವಾಕ್ಯವನ್ನು [illegible]ರಿಸಿದಂದಿನಿಂದ ಈಚೆಗೆ ವ [illegible] ಘಟನೆಯ [illegible] ವಿಸಿರುವುದೆಂದೂ, ಯುದ್ಧದ ಸ್ವರೂಪವೇ ಬದಲಾಗಿರುವುದೆಂದೂ ಆದರಿಂದ [illegible]ಸ್ಟಾಲಿನ್ನರ [illegible] ಮಣ್ಣುಗೂಡ[illegible] ಟ್ರೂಮನ್ನರು ಹೇಳಿರುತ್ತಾರೆ

## ಮಂಗಳೂರು [illegible] ವಿಮಾನ ಬಿದ್ದು ಪ್ರಯಾಣಿಕರ ಮರಣ

[illegible] ವಿಮಾನ [illegible] ಬಳಕ್ಕೆ [illegible] ಕಾರಣ [illegible] ನಡೆಸ[illegible] ಸತ್ತರು [illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಮಧ್ಯಾಹ್ನ [illegible] ಸಂಗೀತ [illegible] ಎಂ ಎಸ್ [illegible] ಸಂಗೀತ [illegible] ಉಸ್ತಾದ್ [illegible] ವೆಂಕಟೇಶಯ್ಯಂಗಾರ್ಯರ [illegible] ನಾಟಕ [illegible]

### ಎಂ ಬಿ ಬಿ ಎಸ್ ಫಲಿತಾಂಶ

ಎಂ ಬಿ ಬಿ ಎಸ್ ಫಲಿತಾಂಶವು [illegible] ಪ್ರಕಟವಾಗಬಹುದೆಂದು ಗೊತ್ತಾಗಿದೆ


**SRI GAYATHRI**

TALKIES

From 10 1—53

Paramount's

**SON OF PALE FACE**

(In Technicolor)

*Starring - Bob Hope*

— NEXT CHANGE

**MARA MARU**



**WANTED**

An influential Gentle man to work for **KATHALOKA** on Commission basis

Enquire at —

**KATHALOKA,**

169 Ramvilasa Road

MYSORE


## ಅತಿಯಾದ ನಗುವಿನಿಂದ ಮರಣ

ಟೋಕಿಯೋವಿನ ಒಂದು ಸಿನಿಮಾ ಮಂದಿರಕ್ಕೆ ಹೋಗಿದ್ದ ಕಿಮಿಕೊ ಹಕಾನಾವಾ ಎಂಬ ಹೆಂಗಸು ನಕ್ಕು ನಕ್ಕು ಕೊನೆಗೆ ಅವಳ ತಲೆಯಲ್ಲಿ ರಕ್ತಸ್ರಾವವಾಗಿ ಮಡಿದಳೆಂದು ವರದಿಯಾಗಿದೆ.

### ನಿಧನ

ತುಮ್ಮನೇರಳೆ ಸಾಹುಕಾರ್ ಬಿ ಎಂ ಸಿದ್ಧಪ್ಪನವರ ವೀರಶೈವ ಅಥಾಲಯದ ಮ್ಯಾನೇಜರರಾದ ಶ್ರೀ ಎಂ ಸದಾಶಿವಪ್ಪನವರು ನೆನ್ನೆ ರಾತ್ರಿ ಹೃದಯ ಸ್ತಂಭನದಿಂದ ಶಿವಸಾಯುಜ್ಯ ಪಡೆದಿರುತ್ತಾರೆ. [illegible] ದಿವರ [illegible] ವಿದ್ಯಾರ್ಥಿಗಳು ಸಂತಾಪ ಸೂಚಕ ಸಭೆ ಸೇರಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು

### ಸಂಸ್ಥಾನಕ್ಕೆ ಸೆಕೆಂಡರಿ ವಿದ್ಯಾಭ್ಯಾಸ ಸಮಿತಿಯವರ ಆಗಮನ

ಭಾರತ ಸರ್ಕಾರದವರು ನೇಮಿಸಿರುವ ಸೆಕೆಂಡರಿ ವಿದ್ಯಾಭ್ಯಾಸ ಸಮಿತಿಯವರು ಇದೇ [illegible] ನೇ ತಾ|| ಸಂಸ್ಥಾನಕ್ಕೆ [illegible] ವಿದ್ಯಾ ಸಂಸ್ಥೆಗಳನ್ನು ಪರಿಶೀಲಿಸಲು [illegible] ದಿನಗಳ ಪ್ರವಾಸ ಕೈಗೊಳ್ಳುವರು

## ಮಂಗಳಾಚರಣ

ರಾಜಧಾನಿಯ ವಿದ್ವಾನ್ ಶ್ರೀ [illegible] ವೆಂಕಟರಮಣ ಶಾಸ್ತ್ರಿಯವರು ಮೇಲ್ಕಂಡ ಶಿರೋನಾಮೆಯುಳ್ಳ [illegible] ಪುಟಗಳ ಹಸ್ತಪತ್ರಿಕೆಯೊಂದನ್ನು ಹೊರಡಿಸಿರುತ್ತಾರೆ ಬ್ರಾಹ್ಮಣರು ನಿತ್ಯ ಕರ್ಮಾನುಷ್ಠಾನ ಮಾಡುವುದು ಅವರ ಕರ್ತವ್ಯವೆಂದೂ, ರಾಜ್ಯದಲ್ಲಿ ಪ್ರಜಾ ಪ್ರಭುತ್ವ ಬಂದಿದ್ದರೂ ಬ್ರಾಹ್ಮಣರ ಕರ್ಮಾನುಷ್ಠಾನಕ್ಕೆ ಅಡಚಣೆ ಬರಬಾರದೆಂದೂ ತಿಳಿಸಿರುತ್ತಾರೆ ಬ್ರಾಹ್ಮಣರ [illegible] ಸ್ವರೂಪವೇನೆಂಬುದನ್ನು ಅವರು ವಿವರಿಸಿರುತ್ತಾರೆ.

## ಮೈಸೂರು ಪೇಟೆ ಧಾರಣೆ

| ಪಲ್ಲ ಒಕ್ಕೆ | ರೂ ಇಂದ | ರೂ ಗೆ |
|---|---|---|
| ನೆಲಗಡಲೆ | [illegible] | [illegible] |
| ಎಳ್ಳು | [illegible] | |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | |
| ಹರಳು ಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | [illegible] |
| ಉದ್ದು | [illegible] | |
| ಹಲಸಂದೆ | [illegible] | [illegible] |
| ಕೊಬ್ಬರಿ [illegible] | | |
| [illegible] ಒಕ್ಕೆ | [illegible] | [illegible] |
| ಹುಣಿಸೆಹಣ್ಣು | [illegible] | [illegible] |
| ಸೀಗೆಕಾಯಿ | [illegible] | [illegible] |
| ಬೆಲ್ಲ | [illegible] | |
| ತೆಂಗಿನಕಾಯಿ [illegible] | [illegible] | [illegible] |

## OFFICE OF THE PRESIDENT, DISTRICT BOARD, MYSORE

Dated 8th Jan 1953

# NOTIFICATION

Applications are invited from duly qualified candidates for the following posts viz ,two posts of Head Masters and one post of Assistant Master for the District Board High Schools and 9 posts of qualified Vaidyas for the District Board Ayurvedic and Unani Hospitals

Applications should reach this office on or before 20 1 1953

| Appointment | Qualification Required |
|---|---|
| 1) Head masters of District Board High Schools in grade of Rs 130 10- 0 plus D A. | B. A or B. Sc & B T (Preference will be given to those having teaching experience-able and qualified Headmasters, who are retired from Government service ) |
| 2) Assistant master in District Board High Schools in grade of Rs 60 5-90 L B 6 150 | B A with History Economics and Politics as optionals |
| 3) Ayurvedic Pandits and Unani Hakims in the District Board Vaidyasalas and New Type Dispensaries in grade of Rs. 50 5-100 plus D A. | L.A.M.S or L U M.S of Government Ayurvedic & Unani College of Mysore or other equivalent examinations |

**H M CHANNABASAPPA**

President,

District Board, Mysore

Edited, Printed and Published by A. R Nagaraja at Sadhvi Press, D Subbiah Road, Mysore

ವಾ॥ ಚಂ 7½ WEEKLY EDITION ಬಿಡಿಪ್ರತಿ 6 ಕಾಸು

# ಸಾಧ್ವಿ

ಸಂಪುಟ ೦೬] ಭಾನುವಾರ ೧೮ ೧-೧೯೫೪ [ ಸಂಚಿಕೆ ೨೦

# ಸಂಸ್ಥಾನ ಸರ್ಕಾರದಿಂದ ಧಾನ್ಯದ ಬೆಲೆ ವಿಮರ್ಶೆ

## ರಾಗಿ ಮತ್ತು ಜೋಳದ ಬೆಲೆಯ ಪುನರ್ವಿಮರ್ಶೆ

**ಪ್ರದೇಶ ಕಾಂಗ್ರೆಸ್ ಸಮಿತಿಗೆ ಮುಖ್ಯಮಂತ್ರಿಯವರ ಭರವಸೆ**

ಬೆಂಗಳೂರು ೧೧

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನೆನ್ನೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ರಾಗಿ ಮತ್ತು ಜೋಳ ಇವುಗಳ ಬೆಲೆ ಹೆಚ್ಚುತ್ತಿರುವುದನ್ನು ಪುನರ್ವಿಮರ್ಶಿಸುವುದಾಗಿ ಭರವಸೆಯಿತ್ತರೆಂದು ಗೊತ್ತಾಗಿದೆ ಬೆಲೆ ಹೆಚ್ಚಿರುವುದು ಬಡಜನರಿಗೆ ತೊಂದರೆಯಾಗಿರುವುದೆಂದೂ ನೆರೆಯ ಮದ್ರಾಸಿನ ಆಂಧ್ರ ಪ್ರದೇಶಗಳಲ್ಲಿ ದೊರೆಯುತ್ತಿರುವ ಜೋಳದ ಬೆಲೆಗಿಂತಲೂ ಇಲ್ಲಿ ಕೊಡುವ ಕೊಂಡು ಜೋಳದ ದರವು ಹೆಚ್ಚಾಗಿರುವುದೆಂದು ಸಭೆಯಲ್ಲಿ ತಿಳಿಸಲಾಯಿತೆಂದು ಗೊತ್ತಾಗಿದೆ

ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಬಡಜನರ ಮೇಲೆ ಶುಲ್ಕ ವಿಧಿಸುವ ವಿಷಯವನ್ನು ಪುನರ್ವಿಮರ್ಶಿಸುವುದಾಗಿ ಮುಖ್ಯ ಮಂತ್ರಿಗಳು ತಿಳಿಸಿದರೆಂದೂ ಗೊತ್ತಾಗಿದೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಬರುವ ತಿಂಗಳು ೧ ನೇ ತಾರೀಖು ಸೇರುವುದು

**ಸಂಸ್ಥಾನದಲ್ಲಿ ಜಹಗೀರ್ ಪದ್ಧತಿ ಸೇರಿ ಭತ್ತದ ದೇಶಾಯ**

ಈ ವಿನ ಆಸರೆಯು ಸದಾ ದೊರೆಯು ವ ಪ್ರದೇಶಗಳಲ್ಲಿ ಭತ್ತವನ್ನು ಜಪಾನಿನ ಪದ್ಧತಿಯಂತೆ ಬೆಳೆಯುವುದಕ್ಕೆ ಪ್ರೋತ್ಸಾಹ ನೀಡಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ಕೇಂದ್ರ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ತಿಳಿಸಿರುತ್ತಾರೆ ಈ ಪದ್ಧತಿಯನ್ನು ಜಾರಿಗೆ ತರುವ ಉದ್ದೇಶದಿಂದ ಶ್ರೀ ಕೃಷ್ಣಪ್ಪನವರು, ಮೈಸೂರು, ಮುಂಬೈ ಜಿಲ್ಲೆಗಳಲ್ಲೂ ಮಂಗಳೂರು, ಆಂಧ್ರ ಮತ್ತು ತಮಿಳುನಾಡಿನ ಹಲವು ಜಿಲ್ಲೆಗಳಲ್ಲೂ ಪ್ರವಾಸ ಮಾಡಲಿರುವರು ಬೊಂಬಾಯಿಯು [illegible] ಈ ಬಗ್ಗೆ ನಡೆಸಿದ ಪ್ರಯೋಗದಿಂದ ಇಲ್ಲಿ ಬರುವ ಬೆಳೆಗೆ ಹೊಸ ಪದ್ಧತಿಯಿಂದ ಸರಾಸರಿ ೪-೫ ರಷ್ಟು ಹೆಚ್ಚು ಫಸಲು ಬಂದಿರುವುದೆಂದು ಅವರು [illegible] ಮದ್ರಾಸು, ಮೈಸೂರು ಮತ್ತು [illegible] ಪ್ರದೇಶಗಳಲ್ಲಿ ಪ್ರದರ್ಶನದ ಕೇಂದ್ರಗಳನ್ನು ತೆರೆದು, ರೈತರಿಗೆ ಗೊಬ್ಬರ ಹಣ ಮುಂತಾದ ಸಹಾಯವನ್ನು ಒದಗಿಸುವುದಾಗಿ ಭರವಸೆಯಿತ್ತಿರುವರು ಪಾರ್ಲಿಮೆಂಟಿನ ಈಗಿನ ಅಧಿವೇಶನ ಮುಕ್ತಾಯವಾದ ನಂತರ ಕೇಂದ್ರ [illegible] ಮಂತ್ರಿಯವರು ದಾಕ್ಷಿಣಾತ್ಯ ಪ್ರದೇಶದ ಚಳುವಳಿಯನ್ನು ಕೈಗೊಳ್ಳುವರೆಂದು ಗೊತ್ತಾಗಿದೆ

## ಉತ್ತರ ಪ್ರದೇಶದಲ್ಲಿ ಬಂಡವಾಳ ಶಾಹಿ ರದ್ದು

ಉತ್ತರ ಪ್ರದೇಶದಲ್ಲಿ ಬಂಡವಾಳ ಶಾಹಿಯನ್ನು ತಪ್ಪಿಸುವ ಬಗ್ಗೆ ಅಲ್ಲಿನ ಶಾಸನ ಸಭೆಯು ನಿರ್ಣಯವೊಂದನ್ನು ಅಂಗೀಕರಿಸಿರುತ್ತದೆ ಅದನ್ನು ಪೂರ್ಣಗೊಳಿಸಿ ತೊಡಗಲು ಸರ್ಕಾರದವರು ಅಧಿನಿಯಮದ ಕಾರ್ಯಕ್ರಮವನ್ನು [illegible] ರೂಪಿಸುವರೆಂದು ಅಲ್ಲಿನ ಕೈಗಾರಿಕಾ ಮಂತ್ರಿ ಹುಕುಂ ಸಿಂಗ್‌ರವರು ತಿಳಿ

## ಧಾನ್ಯಗಳ ಬೆಲೆಯನ್ನು ಇಳಿಸಬೇಕು

**ರೈತರ ಕಾರ್ಯಕರ್ತರ ಸಭೆಯಲ್ಲಿ ನಿರ್ಣಯ**

ಮೈಸೂರು ೧೧

ನಗರದ ರೈತರ ಕಾರ್ಯಕರ್ತರ ಬಹಿರಂಗ ಸಭೆಯು ಶ್ರೀ ಎಂ ಆರ್ ಸಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ನೆನ್ನೆ ನಡೆಯಿತು ಶ್ರೀ [illegible] ಅಪ್ಪಯ್ಯ, ವಿಶ್ವನಾಥ ಮಠ, ಎ ಎಸ್ ತಿಮ್ಮಯ್ಯ, ಬಿ ಶ್ರೀಕಂಠಪ್ಪ, ನೇಮಾಂತಂ ವೆಂಕಟೇಗೌಡ ಮತ್ತು ಬಿ ಜಿ [illegible] ರವರು ಭಾಷಣ ಮಾಡಿ ರಾಗಿ ಜೋಳ ಮತ್ತು ಗೋಧಿ ಬೆಲೆ ಹೆಚ್ಚಿಸಿದ ಬಗ್ಗೆ ಸರ್ಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸಿದರು ಕಾಂಗ್ರೆಸ್ಸು ರೈತರ ಹೆಸರಿನಲ್ಲಿ ಧಾನ್ಯದ ಬೆಲೆಯನ್ನು ಹೆಚ್ಚಿಸಿ ಬಂಡವಾಳದಾರರ ಹಿತಸಾಧನೆಯಲ್ಲಿ ತೊಡಗಿರುವುದೆಂದೂ ಸರ್ಕಾರದವರು ಧಾನ್ಯದ ವ್ಯಾಪಾರದಲ್ಲಿ ಲಾಭಗಳಿಸುತ್ತಿರುವರೆಂದೂ, ಇದರಿಂದ ಜನರ ಶೋಷಣೆಯಾಗುತ್ತಿರುವುದೆಂದೂ ಭಾಷಣಕಾರರು ತಿಳಿಸಿದರು ಈ ನೀತಿಯನ್ನು ಬಿಟ್ಟು ರಾಗಿ ಮತ್ತು ಜೋಳವನ್ನು ರೂಪಾಯಿಗೆ ೬ ಸೇರು, ಅಕ್ಕಿಯನ್ನು ೪ ಸೇರು, ದಪ್ಪಕ್ಕಿ ೪ ಸೇರು ಮತ್ತು ಗೋಧಿಯನ್ನು ೪ ಸೇರಿನಂತೆ ಮಾರಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು

ಸಂಸ್ಕೃತಿ ಪ್ರಚಾರ ಯೋಜನೆಯನ್ನು ಮುಕ್ತಾಯಗೊಳಿಸಬೇಕೆಂದೂ ಕೋರಲಾಯಿತು.

## ದೋಣಿ ತಲೆಕೆಳಗಾಗಿ ೨೪೯ ಜನರು ಸಮುದ್ರದ ಪಾಲು

ದಕ್ಷಿಣ ಕೊರಿಯದ ಪುಸಾನ್ ಮತ್ತು ಯೋಸ್ ಎಂಬ ರೇವುಗಳ ಮಧ್ಯೆ ಮೊನ್ನೆ ರಾತ್ರಿ ದೋಣಿಯೊಂದು ತಲೆಕೆಳಗಾಗಿ ೨೪೯ ಜನ ಪ್ರಯಾಣಿಕರು ಸಮುದ್ರದ ಪಾಲಾದರೆಂದು ವರದಿಯಾಗಿದೆ ೭ ಮಂದಿ ಮಾತ್ರ ರಕ್ಷಿಸಲ್ಪಟ್ಟರು ಹೆಚ್ಚು ಜನರನ್ನು ತುಂಬಿಸಿದ ದೆಸೆಯಿಂದ ದೋಣಿ ಯ ಕ್ಯಾಪ್ಟನ್ನನ ಮೇಲೆ ಮೊಕದ್ದಮೆ ಹೂಡಲು ಅವನನ್ನು ದಸ್ತಗಿರಿ ಮಾಡಲಾಗಿದೆ

**ಎಂ ಎ ಮೈತ್ರಿಯವರ ನಿಧನ**

ರಿಸರ್ವ್ ಬ್ಯಾಂಕಿನ ನಿವೃತ್ತ ಡೆಪ್ಯುಟಿ ಗವರ್ನರ್ ಆದ ಶ್ರೀ ಎಂ ಜಿ ಮೈತ್ರಿಯವರ ಚಿಕ್ಕಪ್ಪಂದಿರಾದ ಶ್ರೀ ಮಹಮದ್ ಅಜೀಜುದ್ದೀನ್ ಮೈತ್ರಿಯವರು ಕಳೆದ ೬ ನೇ ತಾರೀಖು ತಮ್ಮ ೧೧೩ ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

## ಆಹಾರವನ್ನು ಸೇವಿಸದೆ ಇರುವ ಬೆಂಗಳೂರು ಮಹಿಳೆ

ಬೆಂಗಳೂರು ೧೧

ಕೊಡಗಿನ ಧನಲಕ್ಷ್ಮಿಯಂತೆ ಇಲ್ಲಿಯೂ ಒಬ್ಬ ಮಧ್ಯ ವಯಸ್ಕ ಮಹಿಳೆಯು ಅನೇಕ ವರ್ಷಗಳಿಂದ ನೀರನ್ನು ವಿನಹ ಮತ್ತೆ ಯಾವ ಆಹಾರವನ್ನೂ ಸೇವಿಸದೆ ಇರುವರು ಅವರ ಹೆಸರು ನಾಗಲಕ್ಷ್ಮಮ್ಮ ಇವರು ಇಲ್ಲಿನ ಸಿಮೆಂಟ್ ವ್ಯಾಪಾರಿಗಳಾದ ಶ್ರೀ ಕೆ ಆರ್ ಶ್ರೀನಿವಾಸರವರ ಪತ್ನಿ. ಯಾವ ಆಹಾರವನ್ನು ತೆಗೆದುಕೊಂಡರೂ, ಕಾಫಿ, ಟೀ ಅಥವಾ ಚಹಾವನ್ನು ಸೇವಿಸಿದರೂ ಅರ್ಜೀರ್ಣವಾಗುತ್ತದೆ ಅವರು ಪೂರ್ಣ ಆರೋಗ್ಯದಿಂದಿದ್ದು ನಿತ್ಯವೂ ಗೃಹಕೃತ್ಯದ ಎಲ್ಲ ಕೆಲಸಗಳನ್ನೂ ನಡೆಸುತ್ತಿರುವರೆಂದು ಹೇಳಲಾಗಿದೆ ಆಕೆಯು ೨ ಮಕ್ಕಳ ತಾಯಿ

## ಸೌರಾಷ್ಟ್ರದಲ್ಲಿ ಮಾರಾಟ ತೆರಿಗೆ ಸಡಿಲ

ಸೌರಾಷ್ಟ್ರ ಸರ್ಕಾರದವರು ಮಾರಾಟ ತೆರಿಗೆಯ ಬಗ್ಗೆ ವರ್ತಕರಿಗೆ ಎಲ್ಲ ವಿಧವಾದ ರಿಯಾಯಿತಿಗಳನ್ನು ಕೊಟ್ಟಿರುತ್ತಾರೆ ಊಟಕ್ಕಾಗಿ ಉಪಯೋಗಿಸುವ ಎಣ್ಣೆಗೆ ತೆರಿಗೆ ತೆಗೆದುಹಾಕಲಾಗಿದೆ ವನಸ್ಪತಿ ತುಪ್ಪಕ್ಕೆ ೧ ಆಣೆ ಬದಲು ೬ ಕಾಸಿನ ತೆರಿಗೆ ಗೊತ್ತಾಗಿದೆ ಮೋಟಾರು ತಯಾರಿಸಿ ಮಾರುವ ವಾಂದರಕ್ಷಗಳಿಗೆ ತೆರಿಗೆಯಲ್ಲಿ ವೈದ್ಯಕೀಯ ಶಸ್ತ್ರಗಳಿಗೆ ವಿನಾಯಿತಿ ಕೊಟ್ಟಿದೆ ಎಲ್ಲಾ ವಿಧದ ಬಟ್ಟೆ ಮೇಲೂ ರೂಪಾಯಿಗೆ ಅರ್ಧ ಆಣೆ ಕೊಡಬೇಕು ಚಿನ್ನ ಮತ್ತು ಬೆಳ್ಳಿ ಪದಾರ್ಥಗಳಿಗೆ ೩ ಕಾಸಿನಂತೆ ವಿಧಿಸಲಾಗುವುದು ಇದಲ್ಲದೆ ಇನ್ನೂ ಹಲವು ರಿಯಾಯಿತಿಗಳನ್ನು ಕೊಡಲಾಗಿದೆ

## ಸಂಯುಕ್ತ ಕರ್ನಾಟಕ ಪ್ರಾಂತದ ರಚನೆ ಉಚಿತ

ಸಂಯುಕ್ತ ಕರ್ನಾಟಕ ಪ್ರಾಂತ ರಚನೆಯು ಉಚಿತವೆಂದೂ, ಹಲವು ವರ್ಷಗಳಲ್ಲಿ ಅದು ನಿರ್ಮಾಣವಾಗುವುದೆಂದೂ ಕೇಂದ್ರ ಸರ್ಕಾರದ ಉಪ ಗೃಹ ಮಂತ್ರಿ ಬಿ ಎನ್ ದಾತಾರ್‌ರವರು ತಿಳಿಸಿರುವರು

## ಕರಾಚಿಯಲ್ಲಿ ಶಾಂತಿ: ಪುನಃ ಕರ್ಫ್ಯೂ ಜಾರಿ

೩ ದಿನಗಳ ಗಲಭೆ ನಡೆದ ನಂತರ ನೆನ್ನೆ ಕರಾಚಿಯಲ್ಲಿ ಶಾಂತಿಯು ಏರ್ಪಟ್ಟಿತು ಮೊನ್ನೆ ರಾತ್ರಿಯಿಂದ ಬೆಳಗ್ಗೆವರೆಗೆ ಯಾವ ಹೊಸ ಘಟನೆಯೂ ನಡೆದಿಲ್ಲ ಜನಸಂಚಾರವು ಪ್ರಾರಂಭವಾಗಿ, ಹಲವು ಅಂಗಡಿಗಳು ತೆರೆದಿವೆ ನೆನ್ನೆ ಗಲಭೆಗಳಲ್ಲಿ ಮೂರು ಜನರಿಗಿಂತಲೂ ಹೆಚ್ಚು ಮಂದಿಗೆ ಗಾಯವಾಗಿ, ಆಸ್ಪತ್ರೆಗೆ ಗುಂಡಿನೇಟು ಬಿದ್ದ ಹಲವರ ಸ್ಥಿತಿ ಚಿಂತಾಜನಕವಾಗಿದೆ ಒಬ್ಬ ಅಧಿಕಾರಿ ಮತ್ತು ಹಲವು ಪೋಲೀಸರಿಗೆ ಗುಂಡಿನೇಟು ತಗಲಿದೆ ನಗರದಲ್ಲಿ ಪುನಃ ಕರ್ಫ್ಯೂ ಜಾರಿ ಮಾಡಲಾಗಿದೆ ನೆನ್ನೆ ದಿನ ಆಸ್ಪತ್ರೆಯಲ್ಲಿ ಗುಂಡಿನೇಟು ಬಿದ್ದ ಇನ್ನೂ ಇಬ್ಬರು ಮಡಿದರು ಸಿನಿಮಾ ಮಂದಿರಕ್ಕೆ ಬೆಂಕಿ ಹಚ್ಚಲಾಗಿತ್ತು ಮದ್ದುಗುಂಡು ಡಿಪೋಗಳಿಂದ [illegible] ಮೊನ್ನೆ ಸುಮಾರು ೩೦೦ ಬಂದೂಕುಗಳನ್ನು ಲೂಟಿ ಮಾಡಿದರೆಂದೂ, ಅವುಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಗಳಾಗುತ್ತಿರುವುದಾಗಿಯೂ ಗೊತ್ತಾಗಿದೆ ನೆನ್ನೆ ೫೦ ಜನರ ದಸ್ತಗಿರಿಯಾಗಿದೆ ಈ ಘಟನೆಯಲ್ಲಿ ಇದುವರೆಗೆ ೧೭ ಮಂದಿ ಮೃತಪಟ್ಟರೆಂದು ಗೊತ್ತಾಗಿದೆ

## ಹುಚ್ಚು ಹತ್ತಿದ ಗೂಳಿಯಿಂದ ಮನುಷ್ಯನ ಮರಣ

ಕಳೆದ ಗುರುವಾರ ಒಕ್ಕಲಿ ನಗರದಲ್ಲಿ ಗೂಳಿಯೊಂದಕ್ಕೆ ಇದ್ದಕ್ಕಿದ್ದಂತೆ ಹುಚ್ಚಿನ ಆವೇಶ ಬಂದು ಒಬ್ಬನನ್ನು ಕೊಂದಿತು ಅದು ಸಿಕ್ಕಿದಕಡೆಗೆ ಕಣಿದಾಡಿ ಮಾರ್ಗದಲ್ಲಿ ಬಸ್ಸೊಂದನ್ನು ನಿಲ್ಲಿಸಿ, ರಸ್ತೆಯಲ್ಲಿ ಹೋಗುವವರನ್ನು ಚಮರಿಸಿತು ಕೊನೆಗೆ ಅದನ್ನು ಸಾಹಸದಿಂದ ಹಿಡಿದು ಮರಕ್ಕೆ ಕಟ್ಟಿಹಾಕಿದ ಮೇಲೆ ಮೊನ್ನೆ ದಿನ ಸತ್ತುಹೋಯಿತು

**ಟಿ ಟಿ ಶರ್ಮರವರಿಗೆ ನಿಧಿ ಸಮರ್ಪಣೆ**

ವಿಶ್ವಕರ್ನಾಟಕ ಪತ್ರಿಕೆಯ ಸಂಸ್ಥಾಪಕರೂ ಪ್ರಸಿದ್ಧ ಪತ್ರಿಕೋದ್ಯಮಿಗಳೂ ಆದ ಶ್ರೀ ಟಿ ಟಿ ಶರ್ಮರವರಿಗೆ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದವರು ೧೧೫೦ ರೂಗಳ ನಿಧಿಯೊಂದನ್ನು ನೆನ್ನೆ ಅರ್ಪಿಸಿದರು ಶ್ರೀ ಡಿ ವಿ ಗುಂಡಪ್ಪನವರ ಅಧ್ಯಕ್ಷತೆ ವಹಿಸಿದ್ದರು ಶ್ರೀ ಶರ್ಮರವರು ಮಾತನಾಡಿ ಶ್ರೀಗಳಿಂದ ಎಂ ವೆಂಕಟ ಕೃಷ್ಣಯ್ಯ, ಮುದವೀಡು ಕೃಷ್ಣರಾವ್, ಡಿ ವಿ ಗುಂಡಪ್ಪ ಮತ್ತು ಆರ್ ದಿವಾಕರ್ ಇವರುಗಳ ಆಶೀರ್ವಾದದಿಂದ ತಾವು ಪತ್ರಿಕೋದ್ಯಮದಲ್ಲಿ ತೊಡಗುವುದಾಗಿ ಹೇಳಿದರು ಸಂಘದ ಅಧ್ಯಕ್ಷರಾದ ಶ್ರೀ ಆರ್ ಎಸ್ ನಾರಾಯಣ ರವರಿಂದ ಸ್ವಾಗತ ಭಾಷಣ, ಶ್ರೀ ಹೆಚ್ ಎಸ್ ದೊರೆಸ್ವಾಮಿಯವರಿಂದ ವರದಿ ಮತ್ತು ಶ್ರೀ ಹೆಚ್ ಎಸ್ ನಾರಾಯಣ ರಾಯರಿಂದ ವಂದನಾರ್ಪಣೆಗಳಾದುವು

ಲಂಡನ್ನಿನ ಡೈಲಿ ಗ್ರಾಫಿಕ್ ಪತ್ರಿಕೆ ಹೇಳಿಕೆ ಪ್ರಕಾರ ಬಹು ಶೀಘ್ರದಲ್ಲೇ ಚೀಣವು ಜಲಜನಕ ಬಾಂಬನ್ನು ತಯಾರಿಸಲಿರುವುದೆಂದೂ, ಈ ಬಗ್ಗೆ ರಷ್ಯವು ಎಲ್ಲ ಸಾಮಗ್ರಿಗಳನ್ನೂ ಒದಗಿಸಲಿದೆಯೆಂದೂ ಹೇಳಲಾಗಿದೆ

# ವಾರ ಭವಿಷ್ಯ

ತಾ॥ ೧೧-೧-೫೩ ರಿಂದ ೧೭-೧-೫೩ ರ ವರೆಗೆ

ಮೇಷ — ಶತ್ರುಗಳಿಗೆ ಶಿಕ್ಷೆಯನ್ನು ಕಂಡರೆ ಅಂಜಿಕೆ ಹಣಕಾಸಿನ ಸ್ಥಿತಿ ಸಮಾಧಾನಕರ, ನೌಕರಿಯಲ್ಲಿ ಮೇಲಿನವರ ಮೆಚ್ಚಿಗೆ ವ್ಯಾಪಾರಾದಿಗಳಲ್ಲಿ ಅನುಕೂಲ ಪ್ರವಾಸದಲ್ಲಿ ಯಶ ತಾ॥ ೧೧, ೧೨ ಅತಿಥಿಗಳ ಆಗಮನ,ವಸ್ತ್ರ ಖರೀದಿ

ವೃಷಭ — ಆರೋಗ್ಯ ನೆಟ್ಟಗೆ ಮನಸ್ಸಿಗೆ ಉತ್ಸಾಹ ಹಣಕಾಸಿನ ಲಾಭ ವ್ಯಾಪಾರಾದಿಗಳ ಅಭಿವೃದ್ಧಿ ನೌಕರಿಯಲ್ಲಿ ಮನ್ನಣೆ ಪ್ರವಾಸದ ಉದ್ದೇಶ ಸಾಫಲ್ಯ ತಾ॥ ೧೩, ೧೪ ಮನರಂಜನೆ, ವೃಥಾ ಕಾಲಹರಣ

ಮಿಥುನ — ಎಲ್ಲ ದೃಷ್ಟಿಯಿಂದ ಉತ್ತಮವಾದ ಆರೋಗ್ಯ ನೆಟ್ಟಗೆ ಸಾಂಪತ್ತಿಕ ಲಾಭ ವ್ಯಾಪಾರಾದಿಗಳಲ್ಲಿ ಜಯ ಕುಟುಂಬ ಜೀವನದಲ್ಲಿ ಸುಖ ಪ್ರವಾಸದಲ್ಲಿ ಯಶ ತಾ॥ ೧೫, ೧೬ ತಾತ್ಕಾಲಿಕ ಕುತೂಹಲ, ಖರ್ಚು

ಕರ್ಕ — ಖೇದಕರ ಘಟನೆ ನೌಕರಿಯಲ್ಲಿ ವಿರಸ ಪ್ರವಾಸ ನೆಟ್ಟಗಿರದು ವಾಹನಾಪಘಾತ ಹಣದ ಚಿಂತೆ ತಾ॥ ೧೩, ೧೪ ಪತ್ನಿಗೆ ಅಗ್ನಿ ಭಯ, ಶತ್ರುಪೀಡೆ

ಸಿಂಹ — ಆರೋಗ್ಯ ನೆಟ್ಟಗೆ ಆದರೆ ಮನಸ್ಸಿಗೆ ಅಸಮಾಧಾನ ಆರ್ಥಿಕ ಸ್ಥಿತಿ ಬಗ್ಗೆ ಚಿಂತೆ ನೌಕರಿಯಲ್ಲಿ ಕೆಳಗಿನವರ ಅಸಹಕಾರ ಮೇಲ್ಪಟ್ಟವರೊಡನೆ ಕಲಹ ಪ್ರವಾಸಕ್ಕೆ ಉತ್ತಮ ತಾ॥ ೧೧, ೧೨ ಖರ್ಚು, ಸ್ತ್ರೀಯರಿಂದ ವಿರೋಧ

ಕನ್ಯಾ — ಸಿಟ್ಟು ಮತ್ತು ಚಿಂತೆಯ ಆರೋಗ್ಯ ಉತ್ತಮ ಮಕ್ಕಳಿಗೆ ಕ್ಲೇಶ ಉಳಿದ ವಿಷಯಗಳು ಸಮಾಧಾನಕರ ಕೈಗೊಂಡ ಕಾರ್ಯ ಸಿದ್ಧಿ ಆರ್ಥಿಕ ಲಾಭ ವ್ಯಾಪಾರಾದಿಗಳಲ್ಲಿ ಯಶ ಸಫಲ ಪ್ರವಾಸ ತಾ॥ ೧೧, ೧೨ ಮಹತ್ವದ ಪತ್ರ, ಹೊಸ ಪರಿಚಯ

ತುಲಾ — ಸಮಾಜ ಸೇವೆಗೆ ಉತ್ತಮ ಕಾಲ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ಶತ್ರು ನಾಶ. ತಾ॥ ೧೩, ೧೪ ಮಹತ್ವದ ಮಾತುಕತೆ, ಧನಲಾಭ.

ವೃಶ್ಚಿಕ — ಆರೋಗ್ಯ ನೆಟ್ಟಗೆ ಅಜೀರ್ಣ. ತಲೆ ತಿರುಗುವಿಕೆ ಪ್ರವಾಸಕ್ಕೆ ಒಳ್ಳೆಯದಲ್ಲ ಪ್ರಾಣಿಗಳಿಂದ ಹಾನಿ ವಾಹನಾಪಘಾತ ತಾ॥ ೧೪, ೧೬ ಮಿತ್ರ ಸಹಾಯ, ಚಿಂತಾ ನಾಶ

ಧನು — ಮಾನ ಸನ್ಮಾನ ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ ತೀರ್ಥ ಕ್ಷೇತ್ರ ಪ್ರವಾಸ ಹಣದ ಲಾಭ. ಕೋರ್ಟು ಕಾರ್ಯ ಯಶ ತಾ॥ ೧೧, ೧೭ ವಿರೋಧಕರ ವಿಷಯದ ಚರ್ಚೆ

ಮಕರ — ಮನಶ್ಶಾಂತಿಗೆ ಧಕ್ಕೆ ಆರೋಗ್ಯ ಉತ್ತಮ ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ತಪ್ಪು ತಿಳುವಳಿಕೆ ಸುಖ ಪ್ರವಾಸವಿಲ್ಲ ತಾ॥ ೧೩, ೧೪ ಖರ್ಚು, ಘರ್ಷಣೆ

ಕುಂಭ — ಅಪ್ರಿಯ ಘಟನೆಯಿಂದ ಜಿಗುಪ್ಸೆ ಆರೋಗ್ಯ ಉತ್ತಮವಿಲ್ಲ ಆರ್ಥಿಕ ಸ್ಥಿತಿ ಕ್ಲೇಶಕರ ಪರೋಪಕಾರದಲ್ಲಿ ವ್ಯಯ. ತಾ॥ ೧೫, ೧೬ ನೌಕರಿಯಲ್ಲಿ ವೈರ, ಕಲಹ

ಮೀನ — ಹಣಕಾಸಿನ ಸ್ಥಿತಿಯು ಚಿಕ್ಕಟ್ಟು ಆರೋಗ್ಯಕ್ಕೆ ಸ್ವಲ್ಪ ಕ್ಲೇಶ ವ್ಯಾಪಾರಾದಿಗಳಲ್ಲಿ ಸಂಕಟ ನೌಕರಿಯಲ್ಲಿ ಕಲಹ. ತಾ॥ ೧೫, ೧೭ ಮಿತ್ರ ಸಹಾಯ, ಚಿಂತಾ ನಾಶ

# ಭಾರತದ ಸೇನಾಶಾಖೆಯಲ್ಲಿ ಮುಖ್ಯ ಬದಲಾವಣೆ

ಈ ತಿಂಗಳು ೧೪ ನೇ ತಾ॥ ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಸೇನಾನಿ ಜ॥ ಕಾರಿಯಪ್ಪನವರು ನಿವೃತ್ತರಾಗುವ ಸಂದರ್ಭದಲ್ಲಿ ಅವರ ಸ್ಥಾನಕ್ಕೆ ಮಹಾರಾಜಾ ರಾಜೇಂದ್ರ ಸಿಂಹಜಿಯವರನ್ನು ನೇಮಕ ಮಾಡಲಾಗಿರುವುದು ಸರಿಯಷ್ಟೆ ? ರಾಜೇಂದ್ರ ಸಿಂಹಜಿಯವರು ಪ್ರಧಾನ ಸೇನಾನಿಯಾದ ನಂತರ ಅವರ ಸ್ಥಾನಕ್ಕೆ ಪೂನಾದಲ್ಲಿರುವ ದಕ್ಷಿಣ ಭಾರತದ ಮುಖ್ಯ ಸೇನಾನಿಯಾಗಿ ಲೆ॥ ಜ॥ ಶ್ರೀನಾಗೇಶ್‌ರವರು, ಅವರ ಪದಕ್ಕೆ ಲೆ॥ ಜ॥ ಕೆ ಎಸ್ ತಿಮ್ಮಯ್ಯನವರು ಪಶ್ಚಿಮ ಕಮ್ಯಾಂಡ್ ದಳಪತಿಯಾಗುವರು ಲೆ॥ ಜ॥ ಕಾಲ್ವಂತ್‌ಸಿಂಗ್‌ರವರು ಪೂರ್ವ ಕಮ್ಯಾಂಡಿನ ಅಧಿಪತಿಯಾಗುವರು

## ಜವಳಿ ವರ್ತಕರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಜವಳಿ ವರ್ತಕರ ಸಂಘದ ಹೊಸ ಅಧಿಕಾರ ವರ್ಗದ ಚುನಾವಣೆಯು ಗುರುವಾರ ನಡೆದು ಶ್ರೀ ಕೆ ಎಸ್ ಸತ್ಯನಾರಾಯಣ ರಾಯರು ಅಧ್ಯಕ್ಷ, ಶ್ರೀ ಎಂ ಎಸ್ ನಾಗಪ್ಪಶೆಟ್ಟಿ ಉಪಾಧ್ಯಕ್ಷರನ್ನಾಗಿ, ಶ್ರೀ ಬಿ ಎಸ್ ರಂಗಪ್ಪ ಮತ್ತು ಶ್ರೀ ಎ ವಿ ಚೆನ್ನಯ್ಯನವರು ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು

## ಸರಗೂರಿನಲ್ಲಿ ಸೇವಾದಳ ಶಿಬಿರ

ಸರಗೂರಿನಲ್ಲಿ ಭಾರತ ಸೇವಾದಳದ ಸೇವಾ ಶಿಬಿರವು ಕಳೆದ ೭ನೆ ತಾ॥ ರಿಂದ ಪ್ರಾರಂಭವಾಗಿದೆ ಶಿಬಿರ ಜಿಲ್ಲಾ ಸೇವಾ ನಾಯಕ ಶ್ರೀ ಶಿವಾನಂದ ಸ್ವಾಮಿಗಳು ನಡೆಸುತ್ತಾರೆ. ಇದರ ಆರಂಭೋತ್ಸವವನ್ನು ... ನೆರವೇರಿಸುವರು.

# ಹೊಸ ರೀತಿಯ ಶೀಘ್ರ ಲಿಪಿ

ಎಲ್ಲ ಪ್ರಮುಖ ಭಾಷೆಗಳಿಗೂ ಬಳಸಬಹುದಾದ ಹೊಸ ರೀತಿಯ ಶೀಘ್ರ ಲಿಪಿಯನ್ನು ಅಜ್ಮೀರಿನ ಕೆ ಟಾಂಡನ್‌ರವರು ಕಂಡುಹಿಡಿದಿರುತ್ತಾರೆ ರಜಪುತಾನಾ ವಿಶ್ವವಿದ್ಯಾಲಯದಲ್ಲಿ ಅದನ್ನು ಜಾರಿಗೆ ತರಲಾಗಿದೆ ಹೊಸ ಲಿಪಿಯು ಪಿಟ್ಮನ್ ಪದ್ಧತಿಗಿಂತಲೂ ಅತ್ಯುತ್ತಮವೆಂದು ಹೇಳಲಾಗಿದೆ

## ಆಹಾರದ ಬೆಲೆ ಹೆಚ್ಚಿಸಿರುವುದು ಸರಿಯಲ್ಲ

ರಾಜಧಾನಿಯ ಶ್ರೀ ಗಂಗಾಧರೇಶ್ವರ ಯುವಕರ ಸಂಘದ ಅಧ್ಯಕ್ಷ ಶ್ರೀ ಎಂ ಕೆ ಲಿಂಗಯ್ಯನವರು ಈ ರೀತಿ ಬರೆದಿರುತ್ತಾರೆ

ಇದೇ ೧ ನೇ ತಾ॥ ರಿಂದ ರಾಗಿ ಜೋಳ ಮತ್ತು ಗೋಧಿ ಇವುಗಳ ಬೆಲೆಯನ್ನು ಹೆಚ್ಚಿಸಿರುವುದು ಪ್ರಜಾ ವರ್ಗದವರಿಗೆ ಬಹಳ ಅಸಮಾಧಾನವಾಗಿದೆ ಈಗ ಸಂಪಾದನೆಯು ಕಡಿಮೆಯಾಗಿ ಕೆಲಸ ಕಾರ್ಯಗಳು ದೊರೆಯದೆ, ಬಡವರ ಮತ್ತು ಮಧ್ಯಮ ವರ್ಗದವರು ನಿತ್ಯ ಜೀವನದ ವಸ್ತುಗಳನ್ನು ಕೊಳ್ಳುವುದಕ್ಕೆ ಆಗದೆ ಸಂಕಟಪಡುತ್ತಿರುವರು ಆಹಾರದ ಬಗ್ಗೆ ಸರ್ಕಾರ ಹೊಸ ನೀತಿ ಬಜೆಟ್ಟಿನಲ್ಲಿ ತೋರಿಸಿ ಬೇಳೆ ಮುಂತಾದ ಸಹ ಭಕ್ಷ್ಯದ ಬೆಲೆಯನ್ನು ಹೆಚ್ಚಿಸುವ ಕಾರಣವೇನು ? ಬೆಳೆಯುವವರಿಗೆ ಉತ್ತೇಜನ ಕೊಡಬೇಕೆಂಬ ಮಾತು ಸರಿ. ಆದರೆ ... ಕೊಳ್ಳುವವರ ಕಷ್ಟ ... ಧಾನ್ಯಗಳ ಬೆಲೆ ... ನ್ಯಾಯವಾಗಿಯೇ ಇದೆ ಬೆಳೆ ಬೆಳೆಯುವವರಿಗೆ ... ಜನಗಳ ಕಷ್ಟವನ್ನು ಪರಿಹರಿಸಬೇಕೇ ಹೊರತು, ನಾವು ಮಾಡುವುದೆಲ್ಲ ಸರಿಯಾಗಿದೆ, ನಮ್ಮೊಡನೆ ಸಹಕರಿಸಿ ಎಂದು ಬೋಧಿಸುವುದು ನ್ಯಾಯವಲ್ಲ ಜನರ ತಾಳ್ಮೆಯು ಮೀರುತ್ತಿದೆ ದೂರದೃಷ್ಟಿಯಿಂದ ಸರ್ಕಾರವು ಪರಿಶೀಲಿಸಿ ಆಹಾರ ಧಾನ್ಯಗಳ ಬೆಲೆಯನ್ನು ಹಿಂದಿನ ಬೆಲೆಗೆ ಇಳಿಸಬೇಕೆಂದು ಸೂಕ್ತವಾಗಿದೆ


ಎಲ್ಲಾ ಬಗೆಯ

**ಅಲೋಪತಿಕ್ ಔಷಧಿಗಳು**

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

**ರಘುಲಾಲ್ & ಕೋ**

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು


# ಮೈಸೂರು ಪೇಟೆ ಧಾರಣೆ

| | ಪಲ್ಲ ಗಳ್ಳೆ | ಠಿಮ ಇಂದು | ಮೊದಲು |
|---|---|---|---|
| ನೆಲಗಡಲೆ | [illegible] | [illegible] | [illegible] |
| ಎಳ್ಳು | [illegible] | [illegible] | |
| ಹುಚ್ಚೆಳ್ಳು | [illegible] | [illegible] | [illegible] |
| ಹೊಂಗೆಬೀಜ | [illegible] | [illegible] | |
| ಹರಳು ಬೀಜ | [illegible] | [illegible] | [illegible] |
| ಹುರುಳಿ | [illegible] | [illegible] | [illegible] |
| ಹೆಸರು | [illegible] | [illegible] | [illegible] |
| ಅವರೆ | [illegible] | [illegible] | [illegible] |
| ಉದ್ದು | [illegible] | [illegible] | |
| ಹುಣಸೆ | [illegible] | [illegible] | [illegible] |
| ಮೆಣಸಿನಕಾಯಿ ಮಣಗಳ್ಳೆ | [illegible] | [illegible] | [illegible] |
| ಹುಣಸೆಹಣ್ಣು | [illegible] | [illegible] | [illegible] |
| ಬೀಗೆಕಾಯಿ | [illegible] | [illegible] | [illegible] |
| ಬೆಲ್ಲ | [illegible] | [illegible] | [illegible] |
| ತೆಂಗಿನಕಾಯಿ ೧,೦೦೦ ಕ್ಕೆ | [illegible] | [illegible] | [illegible] |

## ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಬಿಲಹರಿ ಮತ್ತು ಶಂಕರಾಭರಣ ಮಧ್ಯಾಹ್ನ ೧ ೩೦ ನಾಗಸ್ವರ ... ಸಂಗೀತ ಸಂಜೆ ೫ ೩೦ ಮೆಂಡ್ ... ಎಸ್ ರಾಮಕೃಷ್ಣಯ್ಯ ಪಿಟೀಲು ೬ ೧೦ ಗಾನ ವಿಹಾರ ೭ ಆಡಮ್ಸ್ ಜಾರ್ಜ್ ... ಮಂಡ್ ... ೭ ೩೦ ಗೀತಾಂಜಲಿ ೭ ೪೦ ಕನ್ನಡದಲ್ಲಿ ಭಾಷಣ ೮ ೪೦ ಮತ್ತು ೯ ೩೦ ... ಸಂಗೀತ ... ಇಂಗ್ಲಿಷಿನಲ್ಲಿ ಭಾಷಣ

## ಮೈಸೂರು ಸಬ್ ಜಡ್ಜರವರ ಕೋರ್ಟು

ಓ ಎಸ್ 92/49-50

ಜಾರಿ ನಂಬರು 17/5[illegible]

ಡಿಕ್ರಿ ಹೋಲ್ಡರ ವಿ ರಾಮಸ್ವಾಮಿ

ಜಡ್ಜಮೆಂಟ್ ಡೆಟರುಗಳು —

1) ಎಸ್ ಕೃಷ್ಣಚಾರ್

2) ಎಸ್ ರಾಮಚಂದ್ರಾಚಾರ್

3) ಎಸ್ ವಿಶ್ವನಾಥಾಚಾರ್

ಮೇಲ್ಕಂಡ ನಂಬರಿನಲ್ಲಿ ಕೋರ್ಟು ಅಪ್ಪಣೆ ಮೇರೆ ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳು 13 1 53ನೇ ತಾರೀಖು ದಿವಸ ಹನ್ನೊಂದು ಗಂಟೆ ಮೊದಲುಗೊಂಡು ಸಾಯಂಕಾಲ ೫ದು ಗಂಟೆ ವರೆವಿಗೆ ಕೋರ್ಟು ಬಳಿ ಹರಾಜು ಮಾಡಲ್ಪಡುತ್ತೆ

ಷೆಡ್ಯೂಲ್ — ಮೈಸೂರು ಸಿಟಿ ಜಹಾಂಬಾದ್ ಮೊಹಲ್ಲಾ ಕಾಮಾಟಗೇರಿಯಲ್ಲಿರುವ ಪೂರ್ವಕ್ಕೆ ದೊರೆಸ್ವಾಮಾಚಾರ್ಯರ ಮನೆ, ಪಶ್ಚಿಮಕ್ಕೆ ಶೆಟ್ಟಯ್ಯನ ಮನೆ, ಉತ್ತರಕ್ಕೆ ರಸ್ತೆ ... ಈ ಮಧ್ಯೆ ಇರುವ ... ಹೆಂಚಿನ ಮನೆ ಮತ್ತು ... ಮುನಿಸಿಪಲ್ ನಂಬರು 546 ... ಖಾಲಿ ಜಾಗ ...

ಎಸ್ ಕೆ ಮೃತ್ಯುಂಜಯ,

ಅಡ್ವೊಕೇಟ್ ಫಾರ್ ಡಿಕ್ರಿ ಹೋಲ್ಡರ್


# ರಾಜಕಮಲ್,

ಮೈಸೂರು

9-1-53 ರಿಂದ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

*** ಅಮ್ಮ ***

(ತಮಿಳು)

ಪಾತ್ರ ಬಿ. ಎಸ್ ಸರೋಜ,

ಎಂ ಎನ್ ನಂಬಿಯಾರ್, ತಿಕ್ಕುರಿ



# TYRE SOLES

BANGALORE

*Hand over your Old Tyres for resoling which gives New Tyre Mileage Drop a Post card to the undermentioned address The dealer will be at your doors to take the tyres*

**G RAMA SWAMY**

109 Dewans Road, Mysore



TWO NEW BOOKS

**By Professor Late HIRIYANNA**

**POPULAR ESSAYS Rs. 5-0-0**

**QUEST AFTER PERFECTION „ 5-0-0**

**KRISHNA & CO., MYSORE**


Edited, Printed and Published by A R Nagarajan at Sadhvi Press, D Subbiah Road, Mysore.

ಫೋ: ೬೦ ||ವಂದೇ ಮಾತರಂ|| ಬಿಡಿ ಪ್ರತಿ ೩ ಕಾಸು

# ಸಾಧ್ವಿ

ಸಂಪುಟ ೧೧] ಸೋಮವಾರ ೧೨-೧-೧೯೫೩ [ಸಂಚಿಕೆ ೮೩೦

# ಜಮ್ಮುವಿನ ಸಭೆ ಮೇಲೆ ಪರಿಷತ್ತಿನವರ ಗುಂಡು

## ಜಮ್ಮು ಪ್ರಜಾ ಪರಿಷತ್ತಿನವರಿಂದ ಗುಂಡಿನ ಪ್ರಯೋಗ

... ಜಮ್ಮುವಿನ ... ಎಂಬಲ್ಲಿ ... ಸಭೆಯ ... ಪ್ರಜಾ ಪರಿ... ಕಲ್ಲುಗಳನ್ನು ಎಸೆದರಲ್ಲದೆ ... ಗುಂಡು ಹಾರಿಸಿದರೆಂದೂ, ಅನೇಕ ... ಅಪ್ರಾಪ್ತ ವಯಸ್ಕರನ್ನು ... ಹಾರಿಸಿದರೆಂದೂ ವರದಿಯಾಗಿದೆ ... ಜನರನ್ನು ಬಂಧಿಸಲಾಗಿದೆ.

## ...ಜಿಪ್ಟಿನ ರಾಜಕೀಯ ಪಕ್ಷಗಳಿಗೆ ಸೈನ್ಯದ ಸವಾಲ್

... ಸೈನ್ಯವು ನಾಗರಿಕ ವಿರೋಧ ... ಸ್ಥಾಪಿಸಿ, ... ರಾಜಕೀಯ ಪಕ್ಷಗಳಿಗೆ ಮುಖ್ಯವಾ... ಸವಾಲು ಹಾಕಿರುತ್ತದೆ ... ಸಂಸ್ಥೆಯ ಅಧ್ಯ... ದೇವರ, ದೇವರುಗಳಲ್ಲಿ ... ಸಾಮ್ರಾಜ್ಯ ... ವಿಮೋಚನೆ, ... ಕೆಲಸ ... ಸಂಸ್ಥೆಯ ಧ್ಯೇಯ

## ...ಕ್ಕೆ ಲಾಲ್ ಪ್ರತ್ಯೇಕ ಸಮಾಜವಾದಿ ಪಕ್ಷ

... ಪ್ರತ್ಯೇಕವಾದ ಪಕ್ಷವ... ಸಲ ... ಸಮಾಜವಾದಿ ... ಗಳು ನಿರ್ಧರಿಸಿರುತ್ತಾರೆ ... ನಂತರ ರಾಷ್ಟ್ರೀಯ ಸಂ... ಪಕ್ಷವನ್ನು ಹೊಂದಿರು...

## ...ಮು ವಿಷಪೂರಿತ ಮಾರುತ ...ನ ೧೦ ಜನರ ಮರಣ

... ಸಂಸ್ಥಾನಗಳ ... ತ್ತಿರುವ ಮಂಜು ... ನಗರ ಹಾವಳಿಯಿಂದ ೧೪ ... ಮಡಿದಿರುವರೆಂದೂ ಅನೇಕ ... ನರಿಗೆ ತೀವ್ರವಾದ ಗಾಯ ... ವೆಂದೂ ಗೊತ್ತಾಗಿದೆ. ... ಲ್ಲಿ ೨೦ ಅಂಗುಲಗಳಷ್ಟು ... ಮಂಜು ಬಿದ್ದಿದೆ

## ...ರಿನ ಕೇಡಿಗೆ ಶಿಕ್ಷೆ

...ರಿನ ಕೇಡಿ ಪಡಿಪೋಲು ... ದಸ್ವಾಮಿ ಎಂಬವನನ್ನು ... ಪ್ರಕಿ... ವಿಸಿ, ಅವನ ಮೇಲೆ ಹೊ... ಯಲ್ಲಿ ನ್ಯಾಯಾಧೀಶ ... ವನಿಗೆ ೭ ವರ್ಷ ಕಠಿಣ ... ವಡಿಪೋಲುವಿಗೆ ೩೦ ... ಶಿಕ್ಷೆಯಾಗಿದ್ದಿತು

## ... ಮುಖಿ ಪಡಿಗೆ ಅಣೆಕಟ್ಟಿನ ಶಂಕುಸ್ಥಾಪನೆ

... ನಹಳ್ಳಿಯ ಹತ್ತಿರ ... ಎಂಬಲ್ಲಿ ಸುವರ್ಣಮು... ಅಣೆಕಟ್ಟಿನ ಶಂಕುಸ್ಥಾಪನಾ ... ವನ್ನು ಮುಖ್ಯಮಂತ್ರಿ ಶ್ರೀ ... ನವರು ನೆನ್ನೆ ನೆರವೇರಿ ... ಅಣೆಕಟ್ಟಿನ ನಿರ್ಮಾಣಕ್ಕೆ ೧|| ... ವೆಚ್ಚವಾಗುವುದೆಂದೂ, ... ಸಹಸ್ರ ಎಕರೆ ಜ... ನೀರನ್ನೊದಗಿಸಬಹುದೆಂದೂ ...

## ಪೂರ್ವ, ಪಶ್ಚಿಮ ಯುದ್ಧದಲ್ಲಿ ಪಾಕಿಸ್ತಾನ ರಣರಂಗ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ... ಜಫರುಲ್ಲಾ ಖಾನರು ಕಳೆದ ನವೆಂಬರ್ ತಿಂಗಳಿನಲ್ಲಿ ವಾಷಿಂಗ್ಟನ್ನಿಗೆ ಭೇಟಿಯಿತ್ತ ಬಗ್ಗೆ ಪಾಕಿಸ್ತಾನ, ಅಮೇರಿಕಾ ಮತ್ತು ಬ್ರಿಟನ್ನಿನ ಪತ್ರಿಕೆಗಳು ಟೀಕೆ ಮಾಡಿ ... ಪಾಕಿಸ್ತಾನ ... ರಕ್ಷಣಾ ಸಂಸ್ಥೆಗೆ ಸೇರಬೇಕೆಂಬ ... ಸಂಭವವು ... ಈ ವ್ಯವಸ್ಥೆಯಿಂದ ಪಾಕಿಸ್ತಾನದ ... ಶಕ್ತಿಯು ಹೆಚ್ಚುವುದೆಂಬ ... ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳಿಗೆ ಯುದ್ಧ ಸಂಭವಿಸಿದರೆ ಪಾಕಿಸ್ತಾನವು ... ರಣರಂಗವಾಗುವುದೆಂಬ ಬಗ್ಗೆ ಅದಕ್ಕೆ ... ಪಾಕಿಸ್ತಾನವು ಮಧ್ಯ ಪ್ರಾಚ್ಯ ರಕ್ಷಣಾ ಸಂಸ್ಥೆಗೆ ಸೇರಿದರೆ ಅದು ಪೂರ್ವ ಪಶ್ಚಿಮ ಯುದ್ಧದಿಂದ ದೂರವಾಗಿರುವುದಾಗಿ ... ತನ್ನ ವಿದೇಶಾಂಗ ನೀತಿಯನ್ನು ... ಪತ್ರಿಕೆಗಳು ಟೀಕಿಸಿವೆ

## ಪಾಕಿಸ್ತಾನದ ಚಿತ್ರದ ಪ್ರದರ್ಶನಕ್ಕೆ ಪ್ರತಿಭಟನೆ

ಪಾಕಿಸ್ತಾನದಲ್ಲಿ ಭಾರತದ ಚಲನ ಚಿತ್ರಗಳ ಪ್ರದರ್ಶನವನ್ನು ನಿಷೇಧಿಸಿರುವುದರಿಂದ, ...ಪುರದ ಒಂದು ಮಂದಿರದಲ್ಲಿ ನೆನ್ನೆ ಪ್ರದರ್ಶಿಸಲಿದ್ದ ಪಾಕಿಸ್ತಾನದ 'ಬೇಕರಾರ್' ಎಂಬ ಚಿತ್ರವನ್ನೂ ಪ್ರದರ್ಶಿಸಕೂಡದೆಂದು ಅಲ್ಲಿನ ಹಿಂದೂ ಮಹಾ ಸಭೆಯವರು ಪ್ರತಿಭಟನೆ ಸೂಚಿಸಲು ಚಿತ್ರಮಂದಿರದವರು ಅದರ ಪ್ರದರ್ಶನವನ್ನು ನಿಲ್ಲಿಸಿ ಅದಕ್ಕೆ ಸಂಬಂಧಪಟ್ಟ ಹಸ್ತ ಪತ್ರಿಕೆಗಳು ಮತ್ತು ಪೋಸ್ಟರುಗಳನ್ನೂ ತೆಗೆದುಹಾಕಿದರೆಂದು ವರದಿಯಾಗಿದೆ

## ಮನುಷ್ಯನ ಆಯುಷ್ಯ ಹೆಚ್ಚಿಸಲು ಶೋಧನೆ

ಮನುಷ್ಯನ ಆಯುಃ ಪ್ರಮಾಣವನ್ನು ಹೆಚ್ಚಿಸುವ ಒಗ್ಗೆ ರಷ್ಯದ ... ಸಂಸ್ಥಾನದ ವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸಿರುತ್ತಾರೆ ಮನುಷ್ಯನು ೧೫೦ ವರ್ಷಗಳ ವರೆಗೆ ಬದುಕಲು ಸಾಧ್ಯವೆಂದು ಅವರು ಹೇಳಿ, ಅದಕ್ಕಾಗಿ ಮುಪ್ಪು ... ಔಷಧವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿರುವರೆಂದು ಹೇಳಲಾಗಿದೆ

## ಬಳ್ಳಾರಿ ಜಿಲ್ಲೆಯ ವಿಭಜನೆಗೆ ವಿರೋಧ

ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರ ನೇತೃತ್ವದಲ್ಲಿ ಕನ್ನಡಿಗರ ನಿಯೋಗವೊಂದು ಈ ದಿನ ಮದ್ರಾಸಿನಲ್ಲಿ ಜಸ್ಟಿಸ್ ವಾಂಛೂರವರನ್ನು ಭೇಟಿ ಮಾಡಿ ಆಂಧ್ರ ಪ್ರಾಂತವನ್ನು ರಚಿಸುವಾಗ ಬಳ್ಳಾರಿ ಜಿಲ್ಲೆಯನ್ನು ವಿಭಜಿಸದೆ ಅದನ್ನು ... ಭಾಗಗಳಿಂದ ... ಬೇಕೆಂದು ಪ್ರಾರ್ಥನೆ ಸಲ್ಲಿಸಿರುವುದಾಗಿ ಗೊತ್ತಾಗಿದೆ

## ಬೋಸರು ಜನ್ಮ ತಾಳಿದ ಮನೆ ರಾಷ್ಟ್ರಕ್ಕೆ ದಾನ

ಕಟಕ್ಕಿನಲ್ಲಿ ಸುಭಾಷ್‌ಚಂದ್ರ ಬೋಸರು ಹುಟ್ಟಿದ ನಿವಾಸದ ಭಾಗವನ್ನು ಅವರ ಅಣ್ಣಂದಿರಾದ ಶರತ್ ಬೋಸರ ಸಂಸಾರದವರು ಭಾರತ ಸರ್ಕಾರಕ್ಕೆ ದಾನವಾಗಿ ಕೊಟ್ಟಿರುತ್ತಾರೆ ಆ ಭಾಗವನ್ನು ರಾಷ್ಟ್ರೀಯ ಪ್ರದರ್ಶನ ಶಾಲೆಯಾಗಿ ಮಾಡಲಾಗುವುದೆಂದು ಹೇಳಲಾಗಿದೆ

## ಹೈದ್ರಾಬಾದಿನ ಮಾಜಿ ಅಧಿಕಾರಿಯ ಪರಾರಿ

ಹೈದರಾಬಾದಿನ ನಿವೃತ್ತ ಖಜಾನೆ ಅಧಿಕಾರಿ ಮಹಮದ್ ಹುಸೇನ್ ಎಂಬುವರು ಹಲವು ಜನರಿಂದ ಎರಡು ಲಕ್ಷ ರೂ. ಗಳನ್ನು ವಸೂಲು ಮಾಡಿಕೊಂಡ ೨೦ ದಿನಗಳ ಹಿಂದೆ ಪಾಕಿಸ್ತಾನಕ್ಕೆ ಓಡಿ ಹೋದರೆಂದು ವರದಿಯಾಗಿದೆ

## ಮದ್ರಾಸಿಗೆ ಈ ಸಾಲಿನಲ್ಲಿ ೨|| ಲಕ್ಷ ಟನ್ ಅಕ್ಕಿ

ಕೇಂದ್ರ ಸರ್ಕಾರದವರು ಈ ವರ್ಷದಲ್ಲಿ ಮದರಾಸಿಗೆ ೨|| ಲಕ್ಷ ಟನ್ ಅಕ್ಕಿಯನ್ನು ಒದಗಿಸಲು ಒಪ್ಪಿರುವರೆಂದೂ ಅಗತ್ಯಬಿದ್ದರೆ ಇನ್ನೂ ಹೆಚ್ಚಾಗಿ ಪಡೆಯುವ ಭರವಸೆಯಿರುವುದಾಗಿಯೂ ಅಲ್ಲಿನ ಆಹಾರ ಸಚಿವರು ತಿಳಿಸಿರುವರು

## ಕಾಂಗ್ರೆಸ್ ಕಾರ್ಯಕರ್ತರ ಸಭೆ

ಇಂದಿನ ಆಹಾರ ಪರಿಸ್ಥಿತಿಯ ಬಗ್ಗೆ ಪರಿಶೀಲನೆ ನಡೆಸಲು ನಗರದ ಕಾಂಗ್ರೆಸ್ ಕೆಲಸಗಾರರ ಸಭೆಯೊಂದನ್ನು ನಾಳೆ ಸಂಜೆ ೬|| ಘಂಟೆಗೆ ನಗರ ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಲಾಗಿದೆ ಕಾಂಗ್ರೆಸ್ ಕೆಲಸಗಾರರೆಲ್ಲರೂ ಹಾಜರಾಗಬೇಕೆಂದು ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಕೋರಿರುತ್ತಾರೆ

## ಎಲ್. ಎಂ. ಪಿ. ಡಿಪ್ಲೊಮಾ ಹಂಚಿಕೆ

ಸ್ವಂ ವ ಪ್ರೋ] ಬೆಂಗಳೂರು ೧

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನ ವಿಶೇಷ ಸಭೆಯು ಈ ದಿನ ಬೆಳಗ್ಗೆ ಸೇರಿತ್ತು ಎಲ್ ಎಂ ಪಿ ಪರೀಕ್ಷೆಯಲ್ಲಿ ತೇರ್ಗಡೆಯಾದ ೯೦ ವಿದ್ಯಾರ್ಥಿಗಳಿಗೆ ಡಿಪ್ಲೊಮಾಗಳನ್ನು ವೈಸ್ ಛಾನ್ಸಲರ್ ಡಾ|| ಬಿ ಎಲ್ ಮಂಜುನಾಥ್‌ರವರು ಹಂಚಿದರು ೮೭ ವಿದ್ಯಾರ್ಥಿಗಳು ಹಾಜರಾಗಿ ಡಿಪ್ಲೊಮಾಗಳನ್ನು ಪಡೆದರು. ಈ ಪೈಕಿ ೨೭ ಮಂದಿ ಹುಡುಗಿಯರು ಶ್ರೀಮತಿ ಸೋನಾಬಾಯಿ ಎಂಬುವರಿಗೆ ೨ ಚಿನ್ನದ ಪದಕಗಳೂ ಮತ್ತು ಶ್ರೀಮತಿ ಪರಿಮಳಮ್ಮ ಎಂಬಾಕೆಗೆ ಒಂದು ಚಿನ್ನದ ಪದಕವೂ ದೊರಕಿತು.

ಅನಂತರ ಸೆನೇಟಿನ ಸಾಮಾನ್ಯ ಸಭೆಯು ಸಮಾವೇಶಗೊಂಡಿತು. ಡಾ|| ಬಿ ಎಲ್ ಮಂಜುನಾಥ್‌ರವರು ಭಾಷಣ ಮಾಡಿ ಹೊಸ ಸೆನೆಟ್ ಸದಸ್ಯರುಗಳನ್ನು ಸ್ವಾಗತಿಸಿದರು ಮತ್ತು ನಿವೃತ್ತರಾಗುವ ಸದಸ್ಯರುಗಳ ಸೇವೆಯನ್ನು ಪ್ರಶಂಸಿಸಿ, ಅವರುಗಳನ್ನು ವಂದಿಸಿದರು.

ಬಿ ಟಿ ಕಾಲೇಜಿನ ಪ್ರೊ|| ಕೆ ಆರ್ ಶೆ... ಅವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಲಾಯಿತು

## ಚರ್ಚಿಲ್ಲರು ನಿವೃತ್ತರಾಗುವುದಿಲ್ಲ

ಬ್ರಿಟನ್ನಿನ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್ಲರು ಸಧ್ಯದಲ್ಲಿ ತಾವು ನಿವೃತ್ತರಾಗುವುದಿಲ್ಲವೆಂದೂ, ತಾವು ದೇಶಕ್ಕೆ ಸಲ್ಲಿಸಬೇಕಾದ ಸೇವೆಯು ಬಹಳವಾಗಿರುವುದೆಂದೂ ತಿಳಿಸಿರುವುದಾಗಿ ಅಮೇರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಜನರಲ್ ಐಸೆನ್‌ಹೋವರ್‌ರವರು ಹೇಳಿರುತ್ತಾರೆ

## ಕರಾಚಿ ಗುಂಡಿನ ಘಟನೆ ಬಗ್ಗೆ ಢಾಕ್ಕಾದಲ್ಲಿ ಹರತಾಳ

ಕರಾಚಿಯ ವಿದ್ಯಾರ್ಥಿಗಳ ಮೇಲೆ ಇತ್ತೀಚೆಗೆ ಪೋಲೀಸರು ಗುಂಡು ಹಾರಿಸಿದ ಬಗ್ಗೆ ಪೂರ್ವ ಪಾಕಿಸ್ತಾನದ ಢಾಕ್ಕಾದಲ್ಲಿ ನೆನ್ನೆ ಸಹಸ್ರಾರು ವಿದ್ಯಾರ್ಥಿಗಳು ಹರತಾಳವನ್ನು ಆಚರಿಸಿ, ಸಭೆ ಮೆರವಣಿಗೆಗಳನ್ನು ನಡೆಸಿ ಖಂಡನಾ ನಿರ್ಣಯವನ್ನು ಮಾಡಿದರು ನಗರದ ಎಲ್ಲ ವಿದ್ಯಾ ಸಂಸ್ಥೆಗಳೂ ಮುಚ್ಚಲ್ಪಟ್ಟಿದ್ದುವು

## ಪಂಜಾಬು ಉಪಾಧ್ಯಾಯರಿಂದ ಉಪವಾಸ ಸತ್ಯಾಗ್ರಹ

ಕಳೆದ ೧೦ ದಿನಗಳಿಂದ ಸತ್ಯಾಗ್ರಹ ನಡೆಸುತ್ತಿರುವ ಪಂಜಾಬು ಪ್ರಾಂತ್ಯದ ಖಾಸಗಿ ಶಾಲೆಗಳ ೧೪,೦೦೦ ಉಪಾಧ್ಯಾಯರುಗಳ ಪೈಕಿ ಒಬ್ಬ ಹುಡುಗಿ ಮತ್ತು ಇನ್ನಿಬ್ಬರು ನೆನ್ನೆ ಅಲ್ಲಿನ ವಿದ್ಯಾ ಸಚಿವರ ಮನೆಯ ಮುಂದೆ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿರುತ್ತಾರೆ ಅವರಿಬ್ಬರನ್ನೂ ೧೫೦ ಮಂದಿ ಉಪಾಧ್ಯಾಯರು ಮೆರವಣಿಗೆಯಲ್ಲಿ ಕರೆದೊಯ್ದರು,

... ರೈತರಿಗೆ ೧ ಮಣ ಅಕ್ಕಿಯನ್ನು ಕೊಟ್ಟರೆ ೧ ಮಣ ... ಗೊಬ್ಬರವನ್ನು ಕೊಡುವ ವ್ಯವಸ್ಥೆಯನ್ನು ಕೇಂದ್ರ ಸರ್ಕಾರದವರು ಮಾಡಿರುವರೆಂದು ವರದಿಯಾಗಿದೆ.

## ವಾಂಚೂರೊಡನೆ ಪ್ರಕಾಶಂರವರ ಭೇಟಿ

ಆಂಧ್ರ ಕೇಸರಿ ಟಿ ಪ್ರಕಾಶಂರವರು ಮೊನ್ನೆ ಜಸ್ಟಿಸ್ ವಾಂಚೂರವರನ್ನು ಭೇಟಿ ಮಾಡಿ ೧೦೦ ನಿಮಿಷಗಳ ಕಾಲ ಮಾತುಕತೆ ನಡೆಸಿದರು. ಮದ್ರಾಸು ನಗರವನ್ನು ಆಂಧ್ರ ಮತ್ತು ತಮಿಳು ನಾಡುಗಳೆರಡರ ರಾಜಧಾನಿಯಾಗಿ ಮಾಡಲು ಅವರು ಒತ್ತಾಯ ಮಾಡಿದರು ೧೦೦ ಪುಟಗಳ ಮನವಿಯನ್ನು ಸಲ್ಲಿಸಿ, ಮದ್ರಾಸು ಸಂಸ್ಥಾನದ ಪೈಕಿ ಆಂಧ್ರವನ್ನು ಬಿಟ್ಟು ಮಿಕ್ಕ ಕಡೆ ನಡೆದಿರುವ ಹೊಸ ಯೋಜನೆಗಳ ಬಗ್ಗೆ ಆಂಧ್ರಕ್ಕೆ ಪರಿಹಾರ ಕೊಡುವಂತೆ ಅವರು ಕೇಳಿದರೆಂದು ಹೇಳಲಾಗಿದೆ ಪ್ರಕಾಶಂರವರು ಪುನಃ ವಾಂಚೂರವರನ್ನು ಭೇಟಿ ಮಾಡುವ ಸಂಭವವಿದೆ ವಾಂಚೂರವರು ಮದ್ರಾಸು ಶ್ರೇಷ್ಠ ನ್ಯಾಯಾಧೀಶರಾದ ಪಿ ವಿ ರಾಜಮನ್ನಾರ್‌ರವರೊಡನೆ ಎರಡು ಪ್ರಾಂತಗಳಿಗೂ ಜಂಟಿ ಹೈ ಕೋರ್ಟಿನ ಏರ್ಪಾಡಿನ ಬಗ್ಗೆ ಮಾತ ಕತೆ ನಡೆಸಿದರು

## ಬರ್ಮಾ ಮತ್ತು ಬ್ರಿಟಿಷ್ ರಕ್ಷಣಾ ಒಪ್ಪಂದ

ಹೊಸ ರಕ್ಷಣಾ ಒಪ್ಪಂದಕ್ಕಾಗಿ ಬ್ರಿಟನ್ ಮತ್ತು ಬರ್ಮಾಗಳ ನಡುವೆ ಮಾತುಕತೆ ಏರ್ಪಡಬೇಕಾಗಿದೆ ಈಗಿನ ಒಪ್ಪಂದದ ಅವಧಿಯು ಇನ್ನು ಹನ್ನೆರಡು ತಿಂಗಳಲ್ಲಿ ಮುಗಿಯಲಿದೆ

### ಅಖಿಲ ಭಾರತ ವೀರಶೈವ ಮಹಾ ಸಭೆ

ಮಂಗಳೂರು ನಗರದಲ್ಲಿ ಬರುವ ಮೇ ತಿಂಗಳು ೧೩,೧೪, ಮತ್ತು ೧೫ನೇ ತಾರೀಖು ಅಖಿಲ ಭಾರತ ವೀರಶೈವ ಮಹಾ ಸಭೆಯು ನಡೆಯುವುದು ವೀರಶೈವ ಬ್ಯಾಂಕೊಂದನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಮಹಾಸಭೆಯವರು ಕೈಗೊಂಡು, ಅದರ ಆರಂಭೋತ್ಸವವೂ ಅಂದೇ ನಡೆಯಲಿರುವುದು


**ಮೋತಿಲಾಲ್ ಟಾಕೀಸ್**

ಮೈಸೂರು

14-1-53 ರಿಂದ ಪ್ರತಿದಿನ 3 ಆಟಗಳು

★ ಅಮರಕವಿ ★

ಪಾತ್ರ — ಎಂ ಕೆ ತ್ಯಾಗರಾಜಭಾಗವತರ್ ಟಿ ಆರ್ ರಾಜಕುಮಾರಿ

ಬೆಳಗಿನ ಪ್ರದರ್ಶನ 13-1-53 ರಿಂದ 4 ದಿನಗಳು ಮಾತ್ರ

**ಜೋರೋ಼ಸ್ ಬ್ಲಾಕ್ ವ್ಹಿಪ್**


## ಸೇಡು ತೀರಿಸಿಕೊಳ್ಳಲು ವಿದ್ಯಾರ್ಥಿಗಳ ವರ್ತನೆ

ಮಚಲೀಪಟ್ಟಣದ ವಿದ್ಯಾರ್ಥಿಗಳಿಗೂ ನುಜೀಡಿನ ವಿದ್ಯಾರ್ಥಿಗಳಿಗೂ ಗುಡ್ಲವೇರಲು ಎಂಬಲ್ಲಿ ಕ್ರೀಡಾ ಪಂದ್ಯವೊಂದು ನಡೆದ ಸಂದರ್ಭದಲ್ಲಿ ಮಚಲೀಪಟ್ಟಣದ ವಿದ್ಯಾರ್ಥಿಗಳು ಮತ್ತೊಂದು ಟೀಮಿನವರನ್ನು ಹೊಡೆದರೆಂದು ತಿಳಿದು ಮಚಲೀಪಟ್ಟಣಕ್ಕೆ ೧೯ ಮೈಲಿ ದೂರವಿರುವ ನುಜೀಡಿನ ೨೦೦ ಮಂದಿ ವಿದ್ಯಾರ್ಥಿಗಳು ಗುಡ್ಲವೇರಲುವಿಗೆ ತೆರಳಿ, ಆಗತಾನೆ ಮಚಲೀಪಟ್ಟಣಕ್ಕೆ ರೈಲಿನಲ್ಲಿ ಹೊರಡಲಿದ್ದ ವಿದ್ಯಾರ್ಥಿಗಳೊಡನೆ ಹೊಡೆದಾಡಿದರೆಂದೂ ಕೆಲವರಿಗೆ ಗಾಯಗಳಾದುವೆಂದೂ ಗೊತ್ತಾಗಿದೆ

## ಮಧ್ಯರಾತ್ರಿ ಹುಟ್ಟಿದ ಮಗುವಿನಿಂದ ಸಮಸ್ಯೆ

ಡಿಸೆಂಬರ್ ೩೧ ಜನವರಿ ೧ರ ಮಧ್ಯರಾತ್ರಿ ೧೨ ಗಂಟೆ ಹೊಡೆಯುತ್ತಿರುವಾಗಲೇ ವಾಷಿಂಗ್ಟನ್ನಿನಲ್ಲಿ ಹುಟ್ಟಿದ ಮಗವು ಸಮಸ್ಯೆಯೊಂದನ್ನು ತಂದೊಡ್ಡಿರುವುದಾಗಿ ಹೇಳಲಾಗಿದೆ ಅದು ಹಿಂದಿನ ವರ್ಷದಲ್ಲಿ ಜನನವಾಯಿತೇ ಅಥವಾ ಹೊಸ ವರ್ಷಕ್ಕೆ ಸೇರಿರುವುದೆ ? ಎಂಬ ವಿಷಯದಲ್ಲಿ ಜಿಜ್ಞಾಸೆ ಹುಟ್ಟಿದೆ ಹೊಸ ವರ್ಷದಲ್ಲಿ ಜನಿಸಿರುವುದೆಂದು ಸ್ಥಿರಪಟ್ಟರೆ ಮಗುವಿಗೆ ಅಲ್ಲಿನ ವ್ಯಾಪಾರಿಗಳು ಬಹುಮಾನಗಳನ್ನು ಕೊಡಬೇಕಾಗುವುದು ಅದು ಕಳೆದ ವರ್ಷ ಹುಟ್ಟಿದ ಪಕ್ಷದಲ್ಲಿ ತಂದೆ ತಾಯಿಗಳಿಗೆ ೬೦೦ ಡಾಲರಿನಷ್ಟು ವರಮಾನ ತೆರಿಗೆ ವಿನಾಯಿತಿಯು ದೊರೆಯಲಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೨೦ ಅನಂತಪದ್ಮನಾಭರಾವ್, ವೀಣಾವಾದನ ಮಧ್ಯಾಹ್ನ ೧ ೩೦ ಕೋಲ್ಲಾರ ಟಿ ಚೌಡಪ್ಪ ಶಂಕರಬಾಯಿ ಹಿಂದೂಸ್ಥಾನಿ ಸಂಗೀತ ಸಂಜೆ ೫ ೪೦ ರತ್ನಮ್ಮ ಕೃಷ್ಣಮೂರ್ತಿ ಸಂಗೀತ ೬ ೧೦ ಗಾನ ವಿಹಾರ ೭ ಹೆಚ್ ಶಾಂತಾಬಾಯಿ ಹಿಂದೂಸ್ಥಾನಿ ಸಂಗೀತ ೭ ೩೦ ಟಿ ರಾಮಕೃಷ್ಣ ರೆಡ್ಡಿ-ಕನ್ನಡದಲ್ಲಿ ಭಾಷಣ ೮ ಎಸ್ ಅನಂತಪದ್ಮನಾಭರಾವ್ ವೀಣಾ ವಾದನ ೮ ೪೦ ವೃಂದ ಸಂಗೀತ ೯ ೧೫ ಇಂಗ್ಲಿಷ್ ಭಾಷಣ ೯ ೪೦ ಗಾನಾಮೃತ


**WANTED**

An influential Gentleman to work for **KATHALOKA** on Commission basis

Enquire at —

**KATHALOKA**,
169 Ramavilasa Road
MYSORE


## ಕೆನ್ಯಾ ಸರ್ಕಾರದ ವಿಸರ್ಜನೆಗೆ ಒತ್ತಾಯ

ಕೆನ್ಯಾ ಸರ್ಕಾರವನ್ನು ಓಡಿಸಿ, ಅಲ್ಲಿನ ಆಫ್ರಿಕನ್ನರು ಮತ್ತು ಏಷ್ಯನ್ನರಿಗೆ ರಾಜ್ಯದ ಅಧಿಕಾರವನ್ನು ವಹಿಸಿಕೊಡುವಂತೆ ಕೆನ್ಯದಲ್ಲಿರುವ ಹಲವು ಪ್ರಮುಖ ಐರೋಪ್ಯರು ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸಿರುತ್ತಾರೆ

### ಚರ್ಚಾ ಕೂಟ

ರಾಜಧಾನಿಯ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ಮೊನ್ನೆ ಒಂದು ಚರ್ಚಾ ಕೂಟವನ್ನೇರ್ಪಡಿಸಲಾಗಿತ್ತು ಬಿ ಟಿ ಕಾಲೇಜಿನ ಅಧ್ಯಾಪಕರಾದ ಶ್ರೀ ಶೇಷಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು ಶಾಲಾ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವಾಗಬೇಕು ಎಂಬ ವಿಷಯವಾಗಿ ಚರ್ಚೆ ನಡೆದು ಬಹುಮಾನ ಹಂಚಲಾಯಿತು ಶ್ರೀಗಳಾದ ಸತ್ಯನಾರಾಯಣ, ನಟರಾಜ ಮತ್ತು ಶ್ರೀಮತಿ ದಾಕ್ಷಾಯಿಣಿಯವರು ಕ್ರಮವಾಗಿ ಒಂದು ಎರಡು ಮತ್ತು ಮೂರನೇ ಸ್ಥಾನಗಳಿಸಿದರು ಬೆಳ್ಳಿ ಬಟ್ಟಲುಗಳನ್ನು ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಉದಾರವಾಗಿ ಕೊಟ್ಟಿದ್ದರು ಬಹುಮಾನ ವಿನಿಯೋಗದ ನಂತರ ವಾಂದನೆಯೊಡನೆ ಸಭೆ ಮುಕ್ತಾಯವಾಯಿತು

## ಅಮೆರಿಕಾ, ಚೀಣಾಗಳಿಂದ ೫ ಲಕ್ಷ ಟನ್ ಕೆಂಪು ಜೋಳ

ಈ ವರ್ಷದಲ್ಲಿ ಭಾರತ ಸರ್ಕಾರದವರು ಅಮೇರಿಕಾ ಮತ್ತು ಚೀನಾಗಳಿಂದ ೫ ಲಕ್ಷ ಟನ್ ಕೆಂಪು ಜೋಳವನ್ನು ಆಮದು ಮಾಡಿಕೊಳ್ಳುವರೆಂದು ಗೊತ್ತಾಗಿದೆ

## ಭಾರತಕ್ಕೆ ಹೊಸ ಅಮೆರಿಕಾ ರಾಯಭಾರಿ

ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸ್‌ರವರ ಸ್ಥಾನದಲ್ಲಿ ನೆಬ್ರಾಸ್ಕ ಸಂಸ್ಥಾನದ ಮಾಜಿ ಗೌರ್ನರಾದ ಪಾಲ್ ಪೀಟರ್‌ಸನ್ನರು ನಿಯಮಿತರಾಗುವರೆಂದು ಗೊತ್ತಾಗಿದೆ

### ದತ್ತಾತ್ರೇಯ ಮಂದಿರದ ಕಟ್ಟಡದ ನಿಧಿಗೆ ಸಹಾಯ

ನಂಜನಗೂಡು ಕಪಿಲಾ ನದಿ ತೀರದಲ್ಲಿರುವ ಶ್ರೀ ದತ್ತಾತ್ರೇಯಸ್ವಾಮಿ ಮಹತ ದೇವ ಮಂದಿರದ ಕಟ್ಟಡದ ನಿಧಿಗಾಗಿ ನಾಟಕರತ್ನ ಜಿ ಎಚ್ ವೀರಣ್ಣನವರ ಗುಬ್ಬಿ ಕಂಪೆನಿಯವರು ತಾರೀಖು ೧೯-೧-೫೩ ರಲ್ಲಿ ಅಕ್ಕ ಮಹಾದೇವಿ ಎಂಬ ಸಹಾಯಾರ್ಥ ನಾಟಕವನ್ನು ಅಭಿನಯಿಸುವ ಸಂದರ್ಭದಲ್ಲಿ ಖುದ್ದು ಕೆಲವು ಗಣ್ಯರು ಬರಲಿರುವುದಾಗಿ ವ್ಯವಸ್ಥಾಪಕರು ತಿಳಿಸುತ್ತಾರೆ


ವಿದ್ಯುಚ್ಛಕ್ತಿ ಜೋತಾ ಪ್ರಯುಕ್ತ

ಪ್ರತಿ ದಿನ 2 ಆಟಗಳು 6 30 ಮತ್ತು 10

**ಪ್ರಭುದೇವಾ ಟಾಕೀಸ್**

14-1-53 ನೇ :: ಬುಧವಾರದಿಂದ

ಶುಭೋದಯರವರ ತೆಲುಗು ಚಿತ್ರ

★ ಆದರ್ಶಂ ★

ಸಾವಿತ್ರಿ, ಜಗ್ಗಯ್ಯ, ರಾಮಶರ್ಮ ಮುಂತಾದವರು


Edited, Printed and Published by A. R Nagarajan at Sadhvi Press, D Subbiah Road Mysore


**ಆರ್. ಜಿ. ಬ್ರಾಂಡ್**

**ಕುಕಿಂಗ್ ಮೀಡಿಯಂ**

( ಅಡಿಗೆ ಸಾಧನ )

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,

ಬುಟ್ಟಿ ಸೀರೆಗಳು ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ 446)

★ **M. V. ಬೋಜಯ್ಯ** ಬಿ ಎ, ಇಂಡಿಯಾ ಬ್ಯಾಂಕ್ ಎದುರು ಮೈಸೂರು

ಫೋ: ... ||ವಂದೇ ಮಾತರಂ|| ಬಿಡಿ ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧] ಮಂಗಳವಾರ ೧೩-೧-೧೯೫೩ [ಸಂಚಿಕೆ ೧೬೪

# ೫ ವರ್ಷದ ಯೋಜನೆಗಾಗಿ ದೇಶದ ವಿಂಗಡಣೆ

## ವಿಶ್ವ ವಿದ್ಯಾಲಯದ ಅಧ್ಯಾಪಕರ ಸಂಬಳ ಪುನರ್ವಿಮರ್ಶೆ

### ಸೆನೆಟ್ ಸಭೆಯಲ್ಲಿ ವೈಸ್ ಛಾನ್ಸಲರ ಭರವಸೆ

[... ಫೋ] ಬೆಂಗಳೂರು ೧೩

... ವಿದ್ಯಾಲಯದ ಸೆನೆಟ್ ಸಭೆಯು ... ಬೆಳಿಗ್ಗೆ ವೈಸ್ ಛಾನ್ಸಲರಾದ ಶ್ರೀ ... ನಂಜುಂಡಯ್ಯನವರ ಅಧ್ಯಕ್ಷತೆ ... ವಿಶ್ವ ವಿದ್ಯಾಲಯದ ... ಬಳವನ್ನು ಪುನರ್ವಿಮರ್ಶಿಸು ... ಪರ್ಯಾಲೋಚನೆಯಲ್ಲಿರುವು ... ಶ್ರೀ ... ತಿಳಿಸಿದರು

... ಶ್ರೀಗಳಿಗೆ ಸಂಬಂಧಪಟ್ಟ ಪ್ರಶ್ನೆ ... ಮತ್ತು ಬಂಬಳಿ ಕೊಡಲಾ ... ವಿಶ್ವ ವಿದ್ಯಾಲಯದ ... ವರ್ಷಕ್ಕೆ ... ವಿಶೇಷ ... ಅಸಿಸ್ಟೆಂಟ್ ಪ್ರೊಫೆಸರರಿಗೆ ... ಕೊಡುತ್ತಿಲ್ಲವೆಂ ... ಪ್ರಶ್ನೆಗೆ ಉತ್ತರವಿತ್ತರು ... ಮತ್ತು ... ಪ್ರಶ್ನೆಗಳ ... ಪರ್ಯಾಲೋಚ ... ಅಧ್ಯಕ್ಷರು ತಿಳಿಸಿದರು

### ಐದು ವರ್ಷ ಯೋಜನೆಗಾಗಿ ದೇಶದ ವಿಂಗಡಣೆ

... ವಾರ್ಷಿಕ ಯೋಜನೆಯನ್ನು ... ಭಾರತ ಸರ್ಕಾರದವರು ... ವಿಭಾಗಗಳಾಗಿ ವಿಂಗಡಿ ... ಕೇಂದ್ರ ಮತ್ತು ... ಮಧ್ಯವರ್ತಿ ಅಧಿಕಾರಿಯೊ ... ನೇಮಿಸಿರುವರೆಂದು ಗೊ ... ಪ್ರದೇಶಕ್ಕೆ ಎಸ್ ವಿ ... ಯವರನ್ನೂ ... ಸಿ ಎಸ್ ... ರಾಯರ ... ಕಾರವರು ಮತ್ತಿತ್ತು ...

... ಅಕ್ರಮವಾಗಿ ಹಣ ಪಡೆದುದು ಪತ್ತೆ

... ಬಂಟ್ ... ಶ್ರೀ ... ಭೇಟಿಯಿತ್ತು ... ಶ್ರೀ ಸಿ ... ರಾಮಯ್ಯ ... ಅಕ್ರಮವಾಗಿ ... ಹೇಳುತ್ತಾರೆಂದು ...

... ಮಂತ್ರಿ ಪದವಿ ಕಾಂಗ್ರೆಸ್ ... ವಹಿಸುವಂತೆ ಹಂಚಿ

... ಶ್ರೀ ಹನುಮಂತಯ್ಯನ ... ಕಂಪನಿಯೊಂದನ್ನು ... ಮತ್ತು ... ಹೇಳಿಕೆಯಿಂದ ... ಆದನ್ನು ... ಅಧ್ಯಕ್ಷರಿಗೆ ಮುಖ್ಯ ಮಂತ್ರಿ ... ವಹಿಸುವಂತೆಯೂ ಕೋರಿದ ...

## ಉಸ್ಮಾನಿಯಾ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ

### ರಾಧಾಕೃಷ್ಣನ್, ನೆಹ್ರೂಜಿ ಮತ್ತು ಅಂಬೇಡ್ಕರರಿಗೆ ಪ್ರಶಸ್ತಿ

ವಿ ಸು ಸಂಸ್ಥೆ, ಹೈದರಾಬಾದ್ ೧೩

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಘಟಿಕೋತ್ಸವವು ನೆನ್ನೆ ನಡೆಯಿತು ಭಾರತದ ಉಪಾಧ್ಯಕ್ಷರಾದ ಡಾ|| ಎಸ್ ರಾಧಾಕೃಷ್ಣನ್ ಕೇಂದ್ರ ಮಾಜಿ ನ್ಯಾಯಾಂಗ ಮಂತ್ರಿ ಡಾ|| ಬಿ ಆರ್ ಅಂಬೇಡ್ಕರ್ ಮತ್ತು ಹೈದರಾಬಾದು ಸರ್ಕಾರದ ಸಲಹೆಗಾರರಾದ ಎಂ ಕೆ ವೆಲ್ಲೋಡಿ ಯವರುಗಳಿಗೆ ಗೌರವ ಪ್ರಶಸ್ತಿಗಳನ್ನು ಕೊಡಲಾಯಿತು

ಪದವೀಧರರನ್ನು ಉದ್ದೇಶಿಸಿ ಡಾ|| ರಾಧಾಕೃಷ್ಣನ್‌ರವರು ಮಾತನಾಡಿ, ಕೆಲವರನ್ನು ಬಿಟ್ಟು ಮಿಕ್ಕ ಎಲ್ಲಾ ಪದವೀಧರರಿಗೂ ಭವಿಷ್ಯವು ಪ್ರಕಾಶಮಾನವಾಗಿರುವುದಿಲ್ಲವೆಂದು ಹೇಳಿದರು ಎಲ್ಲರೂ ವಿಶ್ವವಿದ್ಯಾಲಯದ ವ್ಯಾಸಂಗ ಹೊಂದಬೇಕೆಂಬ ಮತ್ತು ತಪ್ಪ ... ಈ ಹಟ್ಟದಲ್ಲಿ ಓದುವಿಕೆಗೆ ಅಸ ... ರಾದವರನ್ನು ಸೇರಿಸಕೂಡದೆಂದೂ ಅವ ... ಸಿದರು

ರಾಜಕೀಯ ಉದ್ದೇಶ ಸಾಧನೆಗಳಿಗಾಗಿ ವಿದ್ಯಾರ್ಥಿಗಳ ದುರುಪಯೋಗಕ್ಕೆ ಅವಕಾಶ ವಿರಕೂಡದೆಂದೂ, ವಿದ್ಯಾರ್ಥಿಗಳಲ್ಲಿ ಶಿಸ್ತು ಬೆಳೆದು ಅವರಲ್ಲಿ ಉನ್ನತ ವ್ಯಾಸಂಗ ಮುಟ್ಟಿ ... ಅವರು ಹೇಳಿದರು ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ದೊರೆತು ವ್ಯಕ್ತಿಯ ಸ್ವಾತಂತ್ರ್ಯವು ಬೆಳೆಯಬೇಕಾಗಿದೆ, ಪದವೀಧರರಲ್ಲಿ ಉದಾತ್ತ ಮನೋಭಾವ ಸ್ನೇಹ ಗಾಂಧೀಜಿ ಮತ್ತು ಮಾನವೀಯತೆಗಳು ... ಅವರಲ್ಲಿ ರಾಷ್ಟ್ರೀಯತೆಯು ಜಾಗ್ರತಿಯುಂಟಾಗಲಿ ಎಂದು ಅವರು ಹಾರೈಸಿದರು ಅವರಲ್ಲಿ ಸ್ವಾರ್ಥಸಾಧನೆಯು ಬೆಳೆಯಬಾರದೆಂದೂ, ನೇತಾಜಿ ಸಾಧನೆಯ ಭಾವನೆಯುಂಟಾಗಬೇಕೆಂದೂ ಅವರು ಹೇಳಿದರು

### ಸೂಚನೆ

ಉತ್ತರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ -ವ್ಯವಸ್ಥಾಪಕ

### ಸೆನೆಟ್ಟಿನಿಂದ ವಿಶ್ವ ವಿದ್ಯಾಲಯದ ಕೌನ್ಸಿಲ್ಲಿಗೆ ಚುನಾವಣೆ

ಮೈಸೂರು ವಿಶ್ವ ವಿದ್ಯಾಲಯದ ಸೆನೆಟ್ಟಿನಿಂದ ಕೌನ್ಸಿಲ್ಲಿಗೆ ಶ್ರೀಗಳಾದ ಎ ಭೀಮಪ್ಪನಾಯಕ್, ವೈ ಧರ್ಮಪ್ಪ, ಮತ್ತು ಎಂ ಪಿ ಎಲ್ ಶಾಸ್ತ್ರಿಯವರು

## ಮೇಯರ್ ಮತ್ತು ಡೆ|| ಮೇಯರರ ಚುನಾವಣೆ

### ಕಾಂಗ್ರೆಸ್ ಉಮೇದುವಾರರ ಜಯ

ಸ್ವಂ ವಾ ಫೋ] ಬೆಂಗಳೂರು ೧೩

ಇಲ್ಲಿನ ಕಾರ್ಪೊರೇಷನ್ನಿಗೆ ಪ್ರಸಕ್ತ ಸಾಲಿಗೆ ಮೇಯರ್ ಮತ್ತು ಡೆ ಮೇಯರರ ಚುನಾವಣೆಗಳು ಇಂದು ಸೇರಿದ್ದ ಕಾರ್ಪೊರೇಷನ್ನಿನ ಸಭೆಯಲ್ಲಿ ನಡೆದುವು ಶ್ರೀ ಬಿ ವಿ ಬಂಗಾರಪ್ಪನವರು ಅಧ್ಯಕ್ಷತೆ ವಹಿಸಿದ್ದರು ಮೊದಲು ಮೇಯರ್ ಸ್ಥಾನಕ್ಕೆ ಚುನಾವಣೆ ನಡೆದು ಕಾಂಗ್ರೆಸ್ ಸ್ಪರ್ಧಿಯಾದ ಶ್ರೀ ಕೆ ಹನುಮಂತಯ್ಯನವರು ಬಹುಮತದಿಂದ ಆರಿಸಲ್ಪಟ್ಟರು ನಂತರ ನೂತನ ಮೇಯರರ ಅಧ್ಯಕ್ಷತೆಯಲ್ಲಿ ಸಭೆ ಮುಂದುವರಿದು ಉಪಮೇಯರರ ಆಯ್ಕೆಯಾಗಿ ಕಾಂಗ್ರೆಸ್ ಸ್ಪರ್ಧಿ ಶ್ರೀ ಸಿ ಎಚ್ ಅಶ್ವತ್ಥನಾರಾಯಣಶೆಟ್ಟರು ಬಹುಮತದಿಂದ ಚುನಾಯಿತರಾದರು ಮೇಯರ್ ಸ್ಥಾನಕ್ಕೆ ಶ್ರೀ ಡಿ ಎಲ್ ಹೊಸಕೋಟೆಯವರು ಪ್ರತಿಸ್ಪರ್ಧಿಯಾಗಿ ೧೧ ಓಟುಗಳಿಂದಲೂ ಮತ್ತೊಂದಕ್ಕೆ ಶ್ರೀ ... ರವರು ... ಓಟುಗಳಿಂದಲೂ ಸೋತರು

### ಕೆ ಸಿ ರೆಡ್ಡಿಯವರ ಆಗಮನ

ಕೇಂದ್ರದ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಇಂದು ಇಲ್ಲಿಗೆ ಆಗಮಿಸಿದರು ನಾಳೆ ಬೆಳಿಗ್ಗೆ ಅವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಕೆ ವೀರಣ್ಣಗೌಡರೊಡನೆ ಹೈದರಾಬಾದಿಗೆ ತೆರಳುವರು

### ಅತ್ಯಾಚಾರಕ್ಕಾಗಿ ಮಾಜಿ ಪೋಲೀಸರಿಗೆ ಶಿಕ್ಷೆ

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಬಿನ್ನಿ ಮಿಲ್ ಕೆಲಸಗಾರರಾದ ಶ್ರೀ ಟಿ ಅಪ್ಪಾಜಿರಾಯರ ಮನೆಗೆ ಕಳೆದ ವರ್ಷ ಮೇ ೧೧ ನೇ ತಾ|| ನುಗ್ಗಿ ಆವರ ಪತ್ನಿ ಮರಿಯಮ್ಮನವರ ಮೇಲೆ ಅತ್ಯಾಚಾರ ನಡೆಸಿದುದಕ್ಕಾಗಿ ಮಾಜಿ ಪೋಲೀಸ್ ಕಾನ್ಸ್ಟೇಬಲೊಬ್ಬನಿಗೆ ೧ ವರ್ಷ ಕಠಿಣ ಶಿಕ್ಷೆ ೫೦೦ ರೂ ದಂಡವನ್ನು ವಿಧಿಸಲಾಗಿದೆ ದಂಡ ಕೊಡಲು ತಪ್ಪಿದರೆ ಪುನಃ ೬ ತಿಂಗಳ ಕಠಿಣ ಸಜಾ ಅನುಭವಿಸಬೇಕಾಗುವುದು

ಚುನಾಯಿತರಾಗಿರುವರು ಅದೇ ಸಭೆಯಿಂದ ಚಿಕ್ಕಪೇಟೆ ... ಕೌನ್ಸಿಲ್ಲಿಗೆ ಶ್ರೀಗಳಾದ ಎಲ್ ಶ್ರೀನಿವಾಸಮೂರ್ತಿ, ಜಿ ಎ ತಿಮ್ಮಪ್ಪಗೌಡ, ಜಿ ನಾರಾಯಣ ಗೌಡ, ಜವರೆ ಮತ್ತು ಶಿವಪ್ಪನವರು ಆರಿಸಲ್ಪಟ್ಟಿರುವರು

## ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಕಂಟ್ರಾಕ್ಟರುಗಳ ಸೇವೆ

### ಸಮ್ಮೇಳನದಲ್ಲಿ ಮಹಾರಾಜರವರ ಆರಂಭ ಭಾಷಣ

ಮೈಸೂರು ೧೩

ಸಂಸ್ಥಾನದ ವಿದ್ಯುಚ್ಛಕ್ತಿ ಕಂಟ್ರಾಕ್ಟರುಗಳ ಸಮ್ಮೇಳನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರು ಈ ಬೆಳಿಗ್ಗೆ ಜಗನ್ಮೋಹನ ಟೌನ್‌ಹಾಲಿನಲ್ಲಿ ನೆರವೇರಿಸಿದರು ದೇವತಾ ಪ್ರಾರ್ಥನೆಯಾದ ನಂತರ ಕಂಟ್ರಾಕ್ಟರುಗಳ ಸಂಘದ ಅಧ್ಯಕ್ಷರಾದ ಶ್ರೀ ಎಸ್ ರಾಮರಾಯರು ಬಿನ್ನವತ್ತಳೆಯನ್ನು ಓದಿ ಪ್ರಭುಗಳಿಗೆ ಅರ್ಪಿಸಿದರು ತರುವಾಯ ಶ್ರೀಮನ್ಮಹಾರಾಜರವರು ಈ ರೀತಿ ಭಾಷಣ ಮಾಡಿದರು

ಈಗ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಅಲ್ಲಿ ಹೆಚ್ಚಾಗಿ ನೀರಾವರಿ ಕೆಲಸವು ನಡೆಯುತ್ತಿದೆ. ವಿದ್ಯುಚ್ಛಕ್ತಿಯು ದಿನೇ ದಿನೇ ಬಳಕೆಗೆ ಬಂದು, ಹೊಸ ಯೋಜನೆಗಳಿಂದ ವ್ಯವಸಾಯ ಮತ್ತು ಲೋಹ ಮತ್ತು ರಸಾಯನಿಕ ಕೈಗಾರಿಕೆಗಳ ಅವಶ್ಯಕತೆಗಳು ಪೂರೈಸಲ್ಪಡುವುವೆಂದು ನಿರೀಕ್ಷಿಸಲಾಗಿದೆ ಹಳ್ಳಿಗಾಡಿನ ಬಡವರು ಮತ್ತು ತಿಳಿವಳಿಕೆ ಕಡಿಮೆಯಿದ್ದವರು ಅವರ ಉಪಯೋಗವನ್ನು ಯೋಗ್ಯ ರೀತಿಯಲ್ಲಿ ಮಿತವಾಗಿ ಹೊಂದುವ ಬಗ್ಗೆ ವಿದ್ಯುಚ್ಛಕ್ತಿ ಇಂಜನಿಯರುಗಳ ಮತ್ತು ಕಂಟ್ರಾಕ್ಟರುಗಳ ನೆರವು ಅಗತ್ಯವೂ ಮತ್ತು ಅಮೂಲ್ಯವೂ ಆಗಿದೆ ಈ ಪ್ರಶ್ನೆಯನ್ನು ನಿಜ ಸೇವಾ ದೃಷ್ಟಿಯಿಂದ ವಿಚಾರಿಸಬೇಕಾದುದು ಧರ್ಮ

ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾದ ಶ್ರೀ ಜಾರ್ಜ್ ಜಾಂಡಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ನಡೆಯಿತು

### ಹರಿಕಥೆ

ನಾಳೆ ರಾತ್ರಿ ೭ ಘಂಟೆಗೆ ರಾಜಧಾನಿಯ ಶಾರದಾ ವಿಲಾಸದಲ್ಲಿ ಶ್ರೀ ಹೆಚ್ ಎಲ್ ಶಿವಲಿಂಗಸ್ವಾಮಿಯವರಿಂದ ಹರಿಕಥೆಯು ಏರ್ಪಾಡಾಗಿದೆ

### ಧಾನ್ಯದ ಬೆಲೆ ಇಳಿಸಲು ಸಾಧ್ಯವಿಲ್ಲ

ಬೆಂಗಳೂರು ೧೩

ಇತ್ತೀಚೆಗೆ ನಡೆದ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆಹಾರದ ಬೆಲೆಯ ಬಗ್ಗೆ ಚರ್ಚೆ ಮಾತ್ರ ನಡೆದು, ಅದರಲ್ಲಿ ತಾವು ಸರಕಾರದ ನಿಲುವಿನ ಬಗ್ಗೆ ವಿವರಣೆಯನ್ನು ಕೊಟ್ಟುದಾಗಿಯೂ ಈಚೆಗೆ ಹೆಚ್ಚಿಸಿದ ಬೆಲೆಯನ್ನು ಪುನರ್ವಿಮರ್ಶೆ ಮಾಡುವುದಾಗಿ ತಾವು ಸಮಿತಿಗೆ ಭರವಸೆ ಯಾವುದನ್ನೂ ಕೊಡಲಿಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ಸರ್ಕಾರದವರು ಎಲ್ಲ ವಿಷಯಗಳನ್ನೂ ಪರಿಶೀಲಿಸಿ ಬೆಲೆಯನ್ನು ಗೊತ್ತು ಮಾಡಿರುವುದಾಗಿಯೂ, ಬೆಲೆಯನ್ನು ಈಗ ನಿಗದಿ ಪಡಿಸಿರುವ ... ಜನಪ್ರಿಯತೆಯನ್ನು ಪಡೆಯಲು ತಾವು ಸಿದ್ಧರಾಗಿಲ್ಲವೆಂದೂ ಅವರು ಹೇಳಿ, ಆಹಾರದ ಸಬ್ಸಿಡಿಯನ್ನು ಕೊಡುವುದರ ಬದಲು ಆದೇ ಹಟ್ಟಿ ಮುಂತಾದ ನೀರಾವರಿ ಕೆಲಸಕ್ಕೆ ಹಣವನ್ನು ಉಪಯೋಗಿಸಿ ಶಾಶ್ವತವಾದ ಸುಖಕ್ಕಾಗಿ ಪ್ರಯತ್ನಿಸುವುದಾಗಿಯೂ ತಿಳಿಸಿದರು

## ಬಾಲಕಿಯ ಮೇಲೆ ಅತ್ಯಾಚಾರಕ್ಕಾಗಿ ಸಜಾ

ಮೈಸೂರು ೧೨

ಮೈಸೂರು ಮಂಡಿ ಮೊಹಲ್ಲಾ ಕಲಾಸಿಗೇರಿಯ ನಿವಾಸಿ ಮಹಮ್ಮದ್ ಉಸ್ಮಾನ್ ಎಂಬಾತನು ಅದೇ ಕೇರಿಯ ಶೇಖ್ ಉರುಫ್ ಕುಲುಸುಂ ಬಿ ಎಂಬಾಕೆಯ ಐದು ವರ್ಷದ ಮುಮ್ತಾಜ್ ಎಂಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದನೆಂಬ ಆಪಾದನೆ ಮೇಲೆ ಪೋಲೀಸಿನವರು ೧ ನೇ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಯೊಂದನ್ನು ಹೂಡಿದ್ದು ಅದು ಸೆಷನ್ಸಿಗೆ ಕಮಿಟ್ ಆಗಿ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ ವಿ ... ಸ್ವಾಮಯ್ಯನವರು ಆಪಾದಿತನು ತಪ್ಪಿತಸ್ಥನೆಂದು ತೀರ್ಮಾನಿಸಿ ಅವನಿಗೆ ನೆನ್ನೆ ಮೂರು ವರ್ಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ

### ಲಾರಿಯನ್ನು ಅಕ್ರಮವಾಗಿ ತಡೆದುದಕ್ಕೆ ಜುಲ್ಮಾನೆ

ಕಳೆದ ನವೆಂಬರ್ ತಿಂಗಳು ೯ ನೇ ತಾರೀಕು ಮೈಸೂರು ತಾಲ್ಲೂಕು ... ಚನಹಳ್ಳಿ ... ಲಿಂಗೇಗೌಡ ಉರುಫ್ ದೊಡ್ಡ ಲಿಂಗೇಗೌಡ ಮತ್ತು ಚಿಕ್ಕ ನಿಂಗೇಗೌಡ ಎಂಬುವರು ಶ್ರೀ ಎಂ ವೀರರಾಜೆ ಅರಸಿನವರು ತೆಗೆದುಕೊಂಡು ಹೋಗುತ್ತಿದ್ದ ಲಾರಿಯನ್ನು ಅಕ್ರಮವಾಗಿ ತಡೆದರೆಂದು ಮೈಸೂರ ಸೌತ್ ರೇಂಜ್ ಪೋಲೀಸರು ನಗರದ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು ವಿಚಾರಣೆ ನಡೆದು ಆಪಾದಿತರಿಗೆ ತಲಾ ೪೦ ರೂ ಜುಲ್ಮಾನೆ ತಪ್ಪಿದರೆ ೧೫ ದಿನ ಸಾದಾ ಸಜಾ ವಿಧಿಸಲಾಯಿತು

### ಯಕ್ಷಗಾನ

ರಾಜಧಾನಿಯ ಮಂಡಿ ಮೊಹಲ್ಲದಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ಕೇಂದ್ರದಲ್ಲಿ ನಾಳೆ ರಾತ್ರಿ ೮-೩೦ ಘಂಟೆಗೆ ಶ್ರೀ ಕೃಷ್ಣ ಪ್ರಸಾದ ಯಕ್ಷಗಾನ ಮಂಡಲಿಯವರಿಂದ ಗರುಡ ಗರ್ವ ಭಂಗ ಎಂಬ ಯಕ್ಷಗಾನವು ಏರ್ಪಾಡಾಗಿದೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಅಮಾವಾಸ್ಯೆ ಮತ್ತು ಪುರಂದರ ದಾಸರ ಪುಣ್ಯದಿನದ ಪ್ರಯುಕ್ತ ತಾ|| ೧೫ ನೇ ಗುರುವಾರ ಸಂಜೆ ೭ ಘಂಟೆಗೆ ಮೈಸೂರು ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ಪುರಂಧರ ದಾಸರ ಚರಿತ್ರೆ ಎಂಬ ಕಥೆಯನ್ನು ಯಕ್ಷಗಾನ ರೂಪದಲ್ಲಿ ಏರ್ಪಡಿಸಲಾಗಿದೆ

## ಗಣಿತವನ್ನು ಬಲ್ಲ ನಾಯಿ ಮರಿ

ಲಂಡನ್ನಿನ ೭೦ ವರ್ಷದ ಮುದುಕನೊಬ್ಬನ ಬಳಿ ಇರುವ ಬಾಬ್ಲಿನ್ ಎಂಬ ೯ ತಿಂಗಳ ನಾಯಿ ಮರಿಯು ಘಂಟೆಯನ್ನು ತಿಳಿಯಬಲ್ಲದಲ್ಲದೆ ಸುಲಭವಾದ ಲೆಕ್ಕಗಳನ್ನು ಮಾಡುತ್ತದೆಂದೂ, ಇಸ್ಪೀಟು ಎಲೆ ಮತ್ತು ನಗದಿ ದಾಳಗಳ ಮೇಲಿನ ಅಂಕಿಗಳನ್ನು ಗುರುತಿಸುತ್ತದೆಂದೂ ವರದಿಯಾಗಿದೆ ... ದನ್ನು ... ಅವನು ೫ ಶಿಲ್ಲಿಂಗುಗಳಿಗೆ ಕೊಂಡನೆಂದೂ ಇದಕ್ಕೆ ಮುಂಚೆ ಅವನಲ್ಲಿದ್ದ ಒಂದನೆಯ ಬಾಬ್ಲಿನ್ ಎಂಬ ನಾಯಿಯು ಲೆಕ್ಕ ಮಾಡುವುದನ್ನು ತಿಳಿದು ಜೊತೆ 'ಉಂಟು' 'ಇಲ್ಲ' ಎಂಬ ಉತ್ತರಗಳನ್ನೂ ಕೊಡಬಲ್ಲುದಾಗಿದಿತಂತೆ "ಈ ಮರಿಯು ಒಂದಕ್ಕೆ ಒಂದನ್ನು ಸೇರಿಸಿದರೆ ಎರಡಾಗುತ್ತದೆ ಬುದನ್ನು ಸೂಚಿಸಲು ಎರಡು ಬಾರಿ ಬೊಗಳುತ್ತದೂ, ಒಂದರಲ್ಲಿ ಒಂದನ್ನು ಕಳೆದರೆ ಸೊನ್ನೆ ಎಂಬುದನ್ನು ಸೂಚಿಸಲು ಮೌನವಾಗಿರುತ್ತೆಂದೂ ಗೊತ್ತಾಗಿದೆ

### ಶ್ರವಣಬೆಳಗೊಳದ ಉತ್ಸವಕ್ಕಾಗಿ ವಿಶೇಷಾಧಿಕಾರಿಗಳು

ಶ್ರವಣ ಬೆಳಗೊಳದಲ್ಲಿ ನಡೆಯುವ ಮಹಾ ಮಸ್ತಕಾಭಿಷೇಕದ ಸಮಾರಂಭಕ್ಕಾಗಿ ಚನ್ನರಾಯಪಟ್ಟಣದ ಅಮಲ್ದಾರರಾದ ಶ್ರೀ ಎಸ್ ... ಪ್ಪನವರನ್ನು ವಿಶೇಷಾಧಿಕಾರಿಗಳಾಗಿ ನೇಮಿಸಲಾಗಿದೆ

### ಕುಸ್ತಿ ಪಂದ್ಯದ ಫಲಿತಾಂಶ ತೀರ್ಮಾನವಿಲ್ಲ

ನಗರದ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮೊನ್ನೆ ಹಳವಾರಹಳ್ಳಿ ಹತ್ತಾರು ಜನರ ಗರಡಿ ಹೊಂಬಾಳೆಗೌಡರ ಶಾಗಿದ... ಪೈ|| ಕೆಂಚಪ್ಪ ಮತ್ತು ... ವಿ ... ಅಣ್ಣಯ್ಯನವರ ಗರಡಿ ಉಸ್ತಾದ್ ತಿರುಕಪ್ಪನವರ ಶಾಗಿರ್ದ್ ಪೈ|| ಬುಡ್ಡ ಉರುಫ್ ಕಪ್ಪಣ್ಣ ... ಇವರಿಗೆ ನಡೆದ ದೊಡ್ಡ ಜೊತೆ ಕುಸ್ತಿಯ ಜಯಾಪಜಯಗಳು ಇನ್ನೂ ತೀರ್ಮಾನವಾಗಿಲ್ಲವೆಂದು ನಗರದ ಗರಡಿ ಸಂಘದ ಕಾರ್ಯದರ್ಶಿ ಶ್ರೀ ಎ ... ಣ್ಣನವರು ತಿಳಿಸಿರುತ್ತಾರೆ

## ಹೈದರಾಬಾದು ಬಳಿ ಹಳದಿ ಮಳೆ

ಹೈದರಾಬಾದಿನ ನಲಗೊಂಡ ಜಿಲ್ಲೆಯ ಕೊತ್ತಗೂಡೆಂ ಎಂಬಲ್ಲಿ ಕಳೆದ ೮ ನೇ ತಾರೀಖು ಸ್ವಲ್ಪಹೊತ್ತು ಹಳದಿ ಮಳೆಯು ಬಿದ್ದಿತೆಂದೂ, ಮನೆಗಳ ಮೇಲೆಲ್ಲಾ ಹಳದಿ ಬಣ್ಣದ ಕರೆಯು ಇದ್ದುದನ್ನು ಜನರು ನೋಡಿದರೆಂದೂ ವರದಿಯಾಗಿದೆ

### ಕ್ರಿಸ್‌ಮಸ್ ಹಬ್ಬಕ್ಕಾಗಿ ರಜಾ ಕೊಟ್ಟ ಬಗ್ಗೆ ವಿವಾದ

ತಂಜಾವೂರಿನ ಪೌರಸಭಾ ಸರ್ಕಾರಿ ಶಾಲೆಯ ಉಪಾಧ್ಯಾಯಿನಿಯವರು ಕ್ರಿಸ್‌ಮಸ್ ಹಬ್ಬಕ್ಕಾಗಿ ಶಾಲೆಯನ್ನು ಮುಚ್ಚಿ ... ಹಾಕಿ ರಜ ಮುಗಿದ ಮೇಲೆ ಶಾಲೆಯನ್ನು ತೆರೆಯಲು ಬಂದಾಗ ಬಾಗಿಲಿಗೆ ಒಂದು ಬೀಗದ ಜೊತೆಗೆ ಮತ್ತೊಂದು ಬೀಗವನ್ನು ಪೌರಸಭಾಧ್ಯಕ್ಷರು ಹಾಕಿಸಿದುದು ಗೊತ್ತಾಯಿತೆಂದೂ, ಆಕೆಯು ಸ್ವ ಇಷ್ಟದಿಂದ ರಜಾ ಕೊಟ್ಟ ಬಗ್ಗೆ ವಿವರಣೆ ಕೊಡವಂತೆ ಕೇಳಿರುವರೆಂದೂ ವರದಿಯಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

( ... 1—53 )

[illegible]

... ಎಲ್ಲಾ ಬಗೆಯ ಅಲೋಪತಿಕ್ ಔಷಧಿಗಳೂ ನ್ಯಾಯ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು.

## ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಸಿಡಿತ

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಭಾರಿ ಯಂತ್ರವೊಂದು ಮೊನ್ನೆ ಮಧ್ಯಾಹ್ನ ಇದ್ದಕ್ಕಿದ್ದಂತೆಯೇ ಸಿಡಿಯಿತೆಂದೂ, ಮೂರು ಜನರಿಗೆ ಗಾಯಗಳಾದುವೆಂದೂ ವರದಿಯಾಗಿದೆ ದಿನಕ್ಕೆ ೧೫೦೦ ಟನ್ ಕಬ್ಬನ್ನು ಅರೆಯುವ ಈ ಯಂತ್ರವು ಸಿಡಿದು ಕಾರ್ಖಾನೆಗೆ ... ಸಾವಿರ ರೂ ನಷ್ಟವಾಗಿದೆ

### ವಿದ್ಯುಚ್ಛಕ್ತಿ ಖಾತೆಯ ಕೈ ಬದಲಾವಣೆ

ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಇದುವರೆಗೆ ಇದ್ದ ವಿದ್ಯುಚ್ಛಕ್ತಿ ಇಲಾಖಾ ಪೋರ್ಟ್‌ಫೋಲಿಯೋವನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ವಹಿಸಿಕೊಂಡಿರುತ್ತಾರೆ

ಬೆಂಗಳೂರು ಅಠಾರಾ ಕಛೇರಿಯಲ್ಲಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಇಲಾಖೆಯನ್ನು ಇನ್ನು ಮುಂದೆ ಮೈಸೂರು ಸರ್ಕಾರದ ಸೆಕ್ರೆಟೇರಿಯಟ್ ಎಂದು ಕರೆಯಬೇಕೆಂದು ಆಜ್ಞೆ ಮಾಡಲಾಗಿದೆ

### ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ... | |
|---|---|---|
| ಕಡಲೆಕಾಳು | [illegible] | [illegible] |
| ಎಳ್ಳು | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | [illegible] |
| ಹರಳು ಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ತೊಗರಿ | [illegible] | [illegible] |
| ಉದ್ದು | [illegible] | |
| ಹುಣಸೆಹಣ್ಣು | [illegible] | [illegible] |
| ಮೆಣಸಿನಕಾಯಿ | | |
| ನಂ. ... | [illegible] | [illegible] |
| ಕೊಬ್ಬರಿ ... | [illegible] | [illegible] |
| ಹೊಗೆಸೊಪ್ಪು | [illegible] | [illegible] |
| ಬೆಲ್ಲ | [illegible] | [illegible] |
| ತೆಂಗಿನಕಾಯಿ ... | [illegible] | [illegible] |


ಮೋತಿಲಾಲ್ ಟಾಕೀಸ್

ಮೈಸೂರು

14-1-53 ರಿಂದ ಪ್ರದರ್ಶನ ...

★ ಅಮರಕವಿ ★

... ರಾಜಕುಮಾರಿ

ದೈನಿಕ ಪ್ರದರ್ಶನ ...

4 ದಿನಗಳು ಮಾತ್ರ

ಜೋರೋಸ್ ... ಬ್ಲಾಕ್ ...

SRI GAYATHRI TALKIES

From 14-1-53 . For 3 days

Warners

MARA MARU

With — Errol Flynn,

Ruth Roman

ವಿದ್ಯುಚ್ಛಕ್ತಿ ಜೋತಾ ಪ್ರಯುಕ್ತ

ಪ್ರತಿ ದಿನ 2 ಆಟಗಳು 6-30 ಮತ್ತು 10

ಪ್ರಭುದೇವಾ ಟಾಕೀಸ್

14-1-52 ನೇ ಬುಧವಾರದಿಂದ

ಶುಭೋದಯರವರ ತೆಲುಗು ಚಿತ್ರ

ಆದರ್ಶಂ

ಸಾವಿತ್ರಿ, ಜಗ್ಗಯ್ಯ, ರಾಮಶರ್ಮ ಮುಂತಾದವರು

ಒಲಿಂಪಿಯಾ

14-1-53 ರಿಂದ ಪ್ರತಿ ದಿನ 3 ಆಟಗಳು

ಸಂಕ್ರಾಂತಿ ಹಬ್ಬದ ವಿಶೇಷ ಆಕರ್ಷಣೆ !

ರಾಜ್ ಕಮಲ್ ಚಿತ್ರದವರ ಅತ್ಯುತ್ತಮ ಪೌರಾಣಿಕ ಚಿತ್ರ

ರಾಜಾ ರಾಣಿ ದಮಯಂತಿ

ಪಾತ್ರ - ತ್ರಿಲೋಕ್ ಕಪೂರ್, ನಿರೂಪಾರಾಯ್, ಜೀವನ್, ... ಉಷಾ ಕಿರಣ್ ಮತ್ತು ... ಕುಮಾರ್

ಮುಂದಿನ ಪ್ರದರ್ಶನ ... ಮಧುಬಾಲಾ ನಟಿಸಿರುವ ... 


Edited, Printed and Published by A R Nagaraj at Sadhvi Press, D. Subbaiah Road, Mysore

ಪೋ॥ ಸಂ 7೪೭ ||ವಂದೇ ಮಾತರಂ|| ಒಂದಕ್ಕ ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೨೦] ಗುರುವಾರ ೧೫-೧-೧೯೫೩ [ ಸಂಚಿಕೆ ೧೩೯

# ಸದ್ಯಕ್ಕೆ ಆಂಧ್ರದ ವಿನಹ ಬೇರೆ ಪ್ರಾಂತ್ಯಗಳಿಲ್ಲ

## ಧಾನ್ಯದ ಬೆಲೆ ಇಳಿಯುವಿಕೆ ಬಗ್ಗೆ ಕಳವಳ

### ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ನಿರ್ಣಯ

ಮೈಸೂರು ೧೫

ನಗರದ ಕಾಂಗ್ರೆಸ್ ಕಾರ್ಯಕರ್ತರುಗಳ ಸಭೆಯು ನೆನ್ನೆ ಕಾಂಗ್ರೆಸ್ ಕಛೇರಿಯಲ್ಲಿ ಸೇರಿದು ಆಹಾರ ಧಾನ್ಯಗಳ ಬೆಲೆಯನ್ನು ಸರ್ಕಾರದವರು ೧ ನೇ ತಾರೀಖಿನಿಂದ ಹೆಚ್ಚಿಸಿರುವ ಬಗ್ಗೆ ಕಳವಳವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಿತು ಶ್ರೀ ಎಚ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಗಳಾದ ಟಿ ಮರಿಯಪ್ಪ, ಬಿ ನಾರಾಯಣಸ್ವಾಮಿ ಎಂ ಶಂಕರಯ್ಯ, ಎಚ್ ಲಿಂಗಣ್ಣ, ಟಿ ವೆಂಕಟರಮಣಯ್ಯ ಎಂ ಬಿ ಕೃಷ್ಣ, ಎಂ ಆರ್. ಸಿ. ಬಸಪ್ಪ ರಾಮಯ್ಯಂಗಾರ್, ಎಸ್ ಕೆ ಪ್ರಕಾಶರಾವ್ ಮತ್ತು ಡಾ॥ ಬಿ. ಎಸ್ ಸೂರ್ಯನಾರಾಯಣರಾವ್ ಇವರುಗಳು ಭಾಷಣ ಮಾಡಿ, ಜನರ ಕಷ್ಟನಷ್ಟಗಳನ್ನು ವಿವರಿಸಿದರು

ನಂತರ ಸಭೆಯು ನಿರ್ಣಯವೊಂದನ್ನು ಅಂಗೀಕರಿಸಿ ರಾಗಿ, ಜೋಳ ಮತ್ತು ಗೋಧಿಗಳ ಬೆಲೆ ಹೆಚ್ಚಿಸಿರುವುದು ಜನರಿಗೆ ಕೊಳ್ಳುವ ಶಕ್ತಿಯನ್ನು ಮೀರಿರುವುದಾಗಿಯೂ ಇದರಿಂದ ಉಂಟಾಗುವ ತೊಂದರೆಯನ್ನು ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ತಂದು, ಬೆಲೆಯನ್ನು ತಗ್ಗಿಸುವಂತೆ ಮಾಡಿ ಜನರಿಗೆ ಸಹಾಯ ಒದಗಿಸುವಂತೆಯೂ ಶ್ರೀ ಎಚ್ ಚನ್ನಯ್ಯನವರನ್ನು ನಿಯೋಜಿಸಿತು

## ಮಂಡ್ಯದಲ್ಲಿ ಭೀಕರ ದರೋಡೆ

### ದಂಪತಿಗಳನ್ನು ಕಟ್ಟಿಹಾಕಿ, ಹೊಡೆದು ದೋಚಿದ ಪ್ರಸಂಗ

ಮಂಡ್ಯದ ಸಕ್ಕರೆ ಕಾರ್ಖಾನೆಯ ಕಾಲೋನಿಯಲ್ಲಿ ವಾಸವಾಗಿರುವ ಕಾರ್ಖಾನೆಯ ಚೀಫ್ ಕೆಮಿಸ್ಟರಾದ ಶ್ರೀ ಟಿ ಆರ್ ಸುಬ್ಬರಾಯರವರ ಮನೆಗೆ ಕಳೆದ ಸೋಮವಾರ ರಾತ್ರಿ ಕಳ್ಳರು ನುಗ್ಗಿ ಶ್ರೀ ಸುಬ್ಬರಾಯರು ಮತ್ತು ಅವರ ಪತ್ನಿಯವರನ್ನು ಹಗ್ಗದಿಂದ ಕಟ್ಟಿಹಾಕಿ ಅವರ ತಲೆಗಳ ಮೇಲೆ ದೊಣ್ಣೆ ಮುಂತಾದ ಆಯುಧದಿಂದ ಹೊಡೆದು ತೀವ್ರ ಗಾಯಪಡಿಸಿದರೆಂದೂ, ಇದರ ಪರಿಣಾಮವಾಗಿ ದಂಪತಿಗಳಿಬ್ಬರೂ ಪ್ರಜ್ಞೆ ತಪ್ಪಿ ರಕ್ತದ ಮಡುವಿನಲ್ಲಿ ಬಿದ್ದಿದ್ದರೆಂದೂ ವರದಿಯಾಗಿದೆ ಕಳ್ಳರು ಮನೆಯಲ್ಲಿದ್ದ ೬ ಸಾವಿರ ರೂ ಬೆಲೆ ಒಡವೆಗಳು, ಸುಬ್ಬರಾಯರವರ ಪತ್ನಿಯ ಮಾಂಗಲ್ಯ, ಎರಡು ಟ್ರಂಕುಗಳು ಮೊದಲಾದ ವಸ್ತುಗಳೆಲ್ಲವನ್ನೂ ದೋಚಿಕೊಂಡು ಪರಾರಿಯಾದರೆಂದು ಹೇಳಲಾಗಿದೆ ಘಟನೆಯ ಸುದ್ದಿ ತಿಳಿದ ಕೂಡಲೇ ಸಕ್ಕರೆ ಕಾರ್ಖಾನೆ ಅಧಿಕಾರಿಗಳೂ, ವೈದ್ಯರು ಮತ್ತು ಪೊಲೀಸರೂ ಸ್ಥಳಕ್ಕೆ ಬಂದು ನೊಂದವರಿಗೆ ಉಪಚರಿಸಿ ಪ್ರಜ್ಞೆ ಬರುವಂತೆ ಮಾಡಿದರು ಕಳುವಾದ ಟ್ರಂಕುಗಳು ಹತ್ತಿರದ ಬಳಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುದು ಪತ್ತೆಯಾಗಿದೆ

### ಶೃಂಗೇರಿ ಜಹಗೀರಿ ವಿಶೇಷಾಧಿಕಾರಿಗಳು

ಬೆಂಗಳೂರು, ಸ್ಟೇಟ್ ಹುಜೂರು ಖಜಾನೆಯ ಆರ್ ಚಾರ್ಜ್ ಅಧಿಕಾರಿಗಳಾಗಿದ್ದ ಶ್ರೀ ಎ ಕೇಶವ ಅಯ್ಯರ್‌ರವರನ್ನು ಶೃಂಗೇರಿ ಜಹಗೀರಿಯ ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಗಿದೆ

## ಪಂಜಾಬು ಉಪಾಧ್ಯಾಯರ ಮುಷ್ಕರದ ಮುಕ್ತಾಯ

ಹೆಚ್ಚಿನ ಸಂಬಳ ಸಾರಿಗೆ, ಭತ್ಯ ಮೊದಲಾದ ಬೇಡಿಕೆಗಳನ್ನು ಸಲ್ಲಿಸಿ ಕಳೆದ ೧೩ ದಿನಗಳಿಂದ ಮುಷ್ಕರ ಹೂಡಿದ್ದ ಪಂಜಾಬಿನ ೧೩ ಸಾವಿರ ಉಪಾಧ್ಯಾಯರು ನೆನ್ನೆ ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಹಿಂದಿರುಗಿದರೆಂದು ಗೊತ್ತಾಗಿದೆ ಅವರ ಬೇಡಿಕೆಗಳ ಬಗ್ಗೆ ಕೇಂದ್ರ ವಿದ್ಯಾ ಸಚಿವ ಮೌಲಾನಾ ಅಜಾದರು ಸೂಕ್ತ ಭರವಸೆ ನೀಡಿರುವರೆಂದು ತಿಳಿದುಬಂದಿದೆ

## ೧ ರಾತ್ರಿಯಲ್ಲಿ ೨೯೦ ಮೂಟೆ ಭತ್ತ ಹಕ್ಕಿಗಳ ಪಾಲು!

ಆಂಧ್ರದ ನಿಡುಬ್ರೊಲು ಎಂಬಲ್ಲಿಗೆ ಸಮೀಪದ ಒಂದು ಹಳ್ಳಿಯಲ್ಲಿ ತಿರುಪತಯ್ಯ ಎಂಬುವನು ಕೆಲವು ದಿನಗಳ ಕೆಳಗೆ ತನ್ನ ೧೫ ಎಕರೆ ಭೂಮಿಯಲ್ಲಿ ಬಂದ ಭತ್ತದ ಫಸಲನ್ನು ಕುಯ್ದು ಒಣಗಲು ಒಂದು ರಾತ್ರಿ ಬಿಟ್ಟಿದ್ದು ಮಾರನೇ ದಿನ ಬೆಳಿಗ್ಗೆ ಅದನ್ನು ರಾಶಿ ಮಾಡಿ ಮನೆಗೆ ತರಲು ಹೋದಾಗ, ಹಿಂದಿನ ರಾತ್ರಿ ಹಕ್ಕಿಗಳು ಜಮೀನನ್ನು ಆಕ್ರಮಿಸಿ ಎಲ್ಲ ಧಾನ್ಯವನ್ನೂ ತಿಂದುಬಿಟ್ಟಿದ್ದುದು ಗೊತ್ತಾಯಿತೆಂದು ವರದಿಯಾಗಿದೆ ಅವನಿಗೆ ೩೦೦ ಮೂಟೆಗಳಷ್ಟು ಭತ್ತ ಸಿಗುವುದೆಂದು ಅಂದಾಜಾಗಿತ್ತು ಆದರೆ ಈಗ ೧೦ ಮೂಟೆಗಳಷ್ಟು ಸಿಕ್ಕುವುದೂ ದುರ್ಲಭವಾಗಿದೆ ಮಾರನೇ ದಿನ ಹಕ್ಕಿಗಳನ್ನು ಹಿಡಿಯಲು ಬಲೆಯನ್ನು ಬೀಸಲಾಗಿ ಅವು ಅದನ್ನು ಕಂಡು ಬುದ್ಧಿವಂತಿಕೆಯಿಂದ ತಪ್ಪಿಸಿಕೊಂಡು ಓಡಿಹೋದುವೆಂದೂ ಹೇಳಲಾಗಿದೆ.

### ಚಿತ್ರಮಂದಿರಗಳಲ್ಲಿ ಕಡ್ಡಾಯದ ಪೊಲೀಸರ ನೇಮಕ ಕೂಡದು

ಮೈಸೂರು ಸಂಸ್ಥಾನದ ಚಿತ್ರೋದ್ಯಮಿಗಳ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ. ಎಚ್ ತಾರಾಪೂರ್‌ರವರು ಗೃಹ ಸಚಿವರಿಗೆ ಪತ್ರವೊಂದನ್ನು ಬರೆದು ಸಿನಿಮಾಗಳಲ್ಲಿ ಚಿತ್ರ ಪ್ರದರ್ಶನವು ನಡೆಯುವ ವೇಳೆಯಲ್ಲಿ ಪೊಲೀಸರನ್ನು ಕಡ್ಡಾಯವಾಗಿ ನೇಮಿಸಿಕೊಳ್ಳುವ ಪದ್ಧತಿಯನ್ನು ರದ್ದು ಮಾಡಿ, ಮಂದಿರದವರು ಅಪೇಕ್ಷಿಸಿದಾಗ ಮಾತ್ರ ಪೊಲೀಸರನ್ನು ಕಳುಹಿಸುವಂತೆ ವ್ಯವಸ್ಥೆ ಮಾಡಬೇಕೆಂದು ಕೋರಿರುವರು

## ನೆಹರೂರವರಿಗೆ ಅದ್ಭುತ ಸ್ವಾಗತ

ವಿ ಸು ಸಂ॥] ನಾಸಿಕ್ ನಗರ ೧೩

ಪ್ರಧಾನಿ ನೆಹರೂರವರು ನೆನ್ನೆ ರಾಷ್ಟ್ರಾಧ್ಯಕ್ಷರ ವಿಮಾನದಲ್ಲಿ ಹೈದರಾಬಾದಿಗೆ ಆಗಮಿಸಿದರು ಬೇಗಂ ಪೇಟೆ ವಿಮಾನ ನಿಲ್ದಾಣದಲ್ಲಿ ಅವರನ್ನು ಇಲ್ಲಿನ ಕಾಂಗ್ರೆಸ್ ಅಧ್ಯಕ್ಷ ರಮಾನಂದ ತೀರ್ಥ, ಮುಖ್ಯ ಮಂತ್ರಿ ಬಿ ರಾಮಕೃಷ್ಣರಾವ್ ಮುಂತಾದವರು ಸ್ವಾಗತಿಸಿದ ನಂತರ ನೆಹರೂರವರು ವಾಹನದಲ್ಲಿ ೨೦೦ ಮೈಲಿ ದೂರದ ನಾಸಿಕ್ ನಗರಕ್ಕೆ ಮೆರವಣಿಗೆಯಲ್ಲಿ ಹೋದರು. ಲಕ್ಷಗಟ್ಟಲೆ ಜನರು ಹರ್ಷೋದ್ಘಾರದೊಡನೆ ಅಲ್ಲಲ್ಲಿ ಹಾರಗಳನ್ನರ್ಪಿಸಿದರು

ರಾಜಾಜಿ, ಷೇಕ್ ಅಬ್ದುಲ್ಲಾ, ಕೆ ಸಿ. ರೆಡ್ಡಿ, ನಿಜಲಿಂಗಪ್ಪ, ಕಾಮರಾಜ ನಾಡರ್‌ರವರು ಅಧಿವೇಶನಕ್ಕಾಗಿ ಬಂದಿರುವರು

ಮೈಸೂರಿನಿಂದ ಶ್ರೀಗಳಾದ ಹೆಚ್. ಕೆ ವೀರಣ್ಣಗೌಡ, ಎಚ್ ವಿ ಕೃಷ್ಣಮೂರ್ತಿ, ಎಲ್ ಎಸ್. ವೆಂಕಾಜಿರಾಯರು ಮೊದಲಾದ ೫೦ ಮಂದಿ ಪ್ರತಿನಿಧಿಗಳು ಬಂದಿರುವರು ಶ್ರೀ ಹನುಮಂತಯ್ಯ ಮತ್ತು ಸಿದ್ಧವೀರಪ್ಪನವರು ಮುಖಂಡರ ಬಿಡಾರವಾದ ನಿಲೋಫರ್ ಆಸ್ಪತ್ರೆಯಲ್ಲಿ ಇಳಿದುಕೊಳ್ಳದೆ ಪ್ರತಿನಿಧಿಗಳೊಡನೆ ಇಳಿದುಕೊಂಡಿರುವರು.

ಭಾಷಾವಾರು ಪ್ರಾಂತದ ಬಗ್ಗೆ ಹೈಕಮಾಂಡಿನಲ್ಲಿ ಹೆಚ್ಚು ಆಸಕ್ತಿಯಿಲ್ಲ ಆದರೆ ಹಲವರು ಅದಕ್ಕಾಗಿ ಬಲವಾಗಿ ಒತ್ತಾಯ ಪಡಿಸುತ್ತಿರುವರು.

ಭಾಷಾವಾರು ಪ್ರಾಂತಗಳ ಸಂಬಂಧದಲ್ಲಿ ಸದ್ಯಕ್ಕೆ ಆಂಧ್ರ ಪ್ರಾಂತದ ರಚನೆ ಬಗ್ಗೆ ಮಾತ್ರ ಗಮನ ಕೊಡಲಾಗುವುದೆಂದೂ, ಉಳಿದುವನ್ನು ಹಾಗೆಯೇ ಬಿಟ್ಟು ಮುಖ್ಯವಾಗಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವುದು ಮತ್ತು ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವ ವಿಷಯಗಳಿಗೆ ಪ್ರಾಮುಖ್ಯತೆ ಕೊಡಲಾಗುವುದೆಂದೂ ಅಧಿಕಾರಯುತವಾಗಿ ತಿಳಿದುಬಂದಿದೆ.

○ ಮೈಸೂರು ಸರ್ಕಾರದ ಪರವಾಗಿ ಅಲ್ಲಿನ ಅಡ್ವೊಕೇಟ್ ಜನರಲ್ಲರು ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಲು ಹೋದರೆ ಅವರಿಗೆ ಅಲ್ಲಿ ದಿನ ಒಂದಕ್ಕೆ ೩೦೧ ರೂಗಳ ದಿನ ಭತ್ಯವನ್ನು ಕೊಡುವ ವಿಷಯವು ಪರಿಶೀಲನೆಯಲ್ಲಿರುವುದಾಗಿ ಗೊತ್ತಾಗಿದೆ.

## ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆ

### ಸ್ಥಳೀಯ ಸಚಿವರಲ್ಲಿ ಪೌರಸಭಾ ನಿಯೋಗ

ಸ್ವಂ.ಸು ಫೋ॥] ಬೆಂಗಳೂರು ೧೩.

ಮೈಸೂರಿನ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಪೌರಸಭಾ ಕಮೀಷನರ್ ಶ್ರೀ ಎಚ್ ಎಂ ಅಬ್ದುಲ್ ರಹೀಂರವರು ಈ ದಿನ ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಚನ್ನಯ್ಯನವರ ಬಳಿ ನಿಯೋಗ ಬಂದು, ರಾಜಧಾನಿಯ ನೀರಿನ ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು ತಯಾರಿಸಲಾಗಿರುವ ೩೪ ಲಕ್ಷ ರೂ. ವಿನ ಯೋಜನೆಗಾಗಿ ಸರ್ಕಾರದವರು ಅರ್ಧ ಸಹಾಯ ಮತ್ತು ಉಳಿದುದನ್ನು ಸಾಲವಾಗಿ ಕೊಡುವಂತೆ ಕೋರಿದರೆಂದೂ, ಎಲ್ಲಾ ಹಣವನ್ನೂ ಸಾಲವಾಗಿಯೇ ಕೊಡಲಾಗುವುದೆಂದೂ, ಸಹಾಯವಾಗಿ ಕೊಡಲು ಸಾಧ್ಯವಿಲ್ಲವೆಂದೂ ಸಚಿವರು ತಿಳಿಸಿದುದಾಗಿಯೂ ಗೊತ್ತಾಗಿದೆ

○ ಶ್ರೀ ಟಿ ಸಿದ್ದಲಿಂಗಯ್ಯನವರು ನೆನ್ನೆ ಹೈದರಾಬಾದಿಗೆ ತೆರಳಿದರು. ನಾಳೆ ಶ್ರೀ ಎ ಜಿ ರಾಮಚಂದ್ರರಾಯರು ಹೋಗುವರು

○ ವಿದ್ಯಾ ಸುಧಾರಣಾ ಸಮಿತಿಯು ಇಂದು ೩-೪ ಗಂಟೆಕಾಲ ಡಾ॥ ರಾಧಾಕೃಷ್ಣನ್‌ರವರ ಸಲಹೆಗಳ ಆಧಾರದ ಮೇಲೆ ಸುಧಾರಣೆ ಬಗ್ಗೆ ಚರ್ಚೆ ನಡೆಸಿತು

○ ಆಸ್ಟ್ರೇಲಿಯದ ಹೈಕಮಿಷನರ್ ಶ್ರೀ ಡಬ್ಲ್ಯು ಆರ್ ಕ್ರಾಫರ್ಡ್‌ರವರು ಇಂದು ಆಗಮಿಸಿದರು ನಾಳಿದ್ದಿನವರೆಗೆ ಇಲ್ಲಿ ಇರುವರು

## ಪ್ರಜಾ ಸಮಾಜವಾದಿ ಪಕ್ಷಕ್ಕೆ ಇಮಾಂ ರಾಜೀನಾಮೆ

ಸ್ವಂ ಸು ಸಂ॥] ಬೆಂಗಳೂರು ೧೩.

ಪ್ರಜಾ ಸಮಾಜವಾದಿ ಪಕ್ಷದ ಸದಸ್ಯತ್ವಕ್ಕೆ ಆ ಪಕ್ಷದ ಮುಖಂಡರಾದ ಜ॥ ಮಹಮದ್ ಇಮಾಂರವರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ

## ಬಸ್ಸು ಮರಕ್ಕೆ ಡಿಕ್ಕಿ ಹೊಡೆದು ೭ ಜನರು ಭಸ್ಮ

ಗಯೆಯ ಬಳಿ ಬರಾಚಟ್ಟಿ ಮತ್ತು ಷೇರ್‌ಘಟಿ ಎಂಬ ನಗರಗಳ ನಡುವೆ ಹೋಗುತ್ತಿದ್ದ ಒಂದು ಪ್ರಯಾಣಿಕರ ಬಸ್ಸು ನೆನ್ನೆ ಒಂದು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ಅದರ ಪೆಟ್ರೋಲು ಟ್ಯಾಂಕು ಹತ್ತಿಕೊಂಡು, ೭ ಜನರು ಬೆಂದುಹೋದರೆಂದೂ, ೫ ಜನರು ೧೫ ಮಂದಿ ತೀವ್ರ ಗಾಯಹೊಂದಿ ಬೆಂಕಿಯಿಂದ ತಪ್ಪಿಸಿಕೊಂಡು ಬಂದರೆಂದೂ ತಿಳಿದುಬಂದಿದೆ

## ಜಪಾನಿನ ಮೇಲೆ ರಷ್ಯದ ವಿಮಾನಗಳ ಹಾರಾಟ

ಜಪಾನ್ ದ್ವೀಪಸ್ತೋಮದ ಹೊಕ್ಕೈಡೊ ದ್ವೀಪದ ಮೇಲೆ ಕೆಲವು ದಿನಗಳ ಕೆಳಗೆ ರಷ್ಯದ ವಿಮಾನಗಳು ಹಾರಾಟ ನಡೆಸಿದ ಬಗ್ಗೆ ಜಪಾನ್ ಸರ್ಕಾರದವರು ರಷ್ಯಕ್ಕೆ ಎಚ್ಚರಿಕೆಯಿತ್ತು ಇನ್ನು ಮುಂದೆ ರಷ್ಯದ ವಿಮಾನಗಳು ಜಪಾನಿನ ಮೇಲೆ ಹಾರಿಬಂದು ಧಾಳಿ ನಡೆಸಿದಲ್ಲಿ ಅವುಗಳನ್ನು ಗುಂಡು ಹೊಡೆದು ನಾಶಪಡಿಸಲಾಗುವುದೆಂದು ತಿಳಿಸಿರುವರು

## ಮೈಸೂರಿನ ಅರಸರು ಕರ್ನಾಟಕದ ಅಧಿಪತಿಯಾಗಲಿ

ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ವಂದನಾರ್ಪಣೆ ಮಾಡಿದರು.

### ರಸಾಯನ ಶಾಸ್ತ್ರ ಪ್ರದರ್ಶನ

ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ಮೈಸೂರು ವಿದ್ಯಾರ್ಥಿಗಳಾದ ಶ್ರೀ ಎಂ ಎಸ್. ವಿಶ್ವನಾಥರವರು ತೆರೆಯಲಿರುವ ರಸಾಯನ ಶಾಸ್ತ್ರ ಪ್ರದರ್ಶನವನ್ನು ನಗರದ ಮಾಧ್ಯಮಿಕ, ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳು ನೋಡಲು ಎಲ್ಲಾ ಶಾಲೆಗಳಿಗೆ ಮಧ್ಯಾಹ್ನ ೨ ಗಂಟೆಯ ನಂತರ ರಜಾ ಕೊಡಲಾಗುವುದು. ಪ್ರದರ್ಶನದಲ್ಲಿ ಆಸಕ್ತಿ ಇರುವ ಮಕ್ಕಳು ಶಿಕ್ಷಕರ ಸಂಗಡ ಬಂದು ಸಭೆಗೆ ಹಾಜರಾಗಬೇಕೆಂದು ಕೇಳಲಾಗಿದೆ.

### ಜ್ಯೋತಿಷ್ಯವನ್ನು ನಂಬಿ ಅಣ್ಣನ ಮಗುವಿನ ಕೊಲೆ

ಗ್ರಾಮ ಬಳಿ ತಮ್ಮ ಪಟ್ಟಿಯಲ್ಲಿ ಇತ್ತೀಚೆಗೆ ಹಿಂದೆ ಹುಟ್ಟಿದ ಮಗುವೊಂದನ್ನು ಕಳೆದ ಶನಿವಾರ ತಾ|| ಸಮಾಧಿಯಿಂದ ಹೊರಗೆ ತೆಗೆಯಲಾಯಿತೆಂದೂ ಈ ಸಂಬಂಧವಾಗಿ ಕೊಲೆಯ ಮೊಕದ್ದಮೆ ಯನ್ನು ದಾಖಲು ಮಾಡಿಕೊಳ್ಳಲಾಗಿದೆ ಯೆಂದೂ ವರದಿಯಾಗಿದೆ. ಮಗುವಿನ ಚಿಕ್ಕಪ್ಪ ಒಬ್ಬ ಜ್ಯೋತಿಷ್ಯನ ಮಾತಿನಂತೆ ಅದರಿಂದ ಮುಂದೆ ತನಗೆ ಸಂತಾನ ಪ್ರಾಪ್ತಿ ತಿಳಿದು ಅದರ ಕತ್ತನ್ನು ಹಿಸುಕಿ, ಕೊಂದು, ಹೂತುಹಾಕಿದನೆಂದು ಹೇಳಲಾಗಿದೆ.

### ಯುದ್ಧ ನಿರೋಧ ಘೋಷಣೆಗೆ ಪಾಕಿಸ್ತಾನದ ಅಸಮ್ಮತಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳ ಭೇಟಿ ನಡೆಯುವ ಸಂಭವವಿಲ್ಲವೆಂದು ವರದಿಯಾಗಿದೆ. ಭಾರತ ಮತ್ತು ಪಾಕಿಸ್ತಾನಗಳು ಪರಸ್ಪರ ಯುದ್ಧ ಮಾಡುವುದಿಲ್ಲವೆಂದು ಘೋಷಣೆ ಹೊರಡಿಸುವಂತೆ ಪ್ರಧಾನಿ ನೆಹರೂರವರು ತಿಳಿಸಿದುದನ್ನು ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರು ತಿರಸ್ಕರಿಸಿರುವರೆಂದೂ, ಅದರ ಬದಲು ಎರಡು ರಾಜ್ಯಗಳಿಗೆ ಇರುವ ಎಲ್ಲ ವ್ಯಾಜ್ಯಗಳನ್ನು ಮಧ್ಯಸ್ಥಿಕೆ, ರಾಜಿ ಮುಖಾಂತರವಾಗಲಿ ಅಥವಾ ಪಂಚಾಯಿತಿ ಮೂಲಕವಾಗಲಿ ನಿವಾರಿಸಿಕೊಳ್ಳಬಹುದೆಂದು ಸೂಚಿಸಿರುವರೆಂದೂ ಹೇಳಲಾಗಿದೆ. ಪಾಕಿಸ್ತಾನದಲ್ಲಿ ಯುದ್ಧದ ಕೂಗು ಸ್ವಲ್ಪವೂ ಕಡಿಮೆಯಾಗಿರುವುದಿಲ್ಲ.

### ಮಂಗಳೂರು-ಹಾಸನ ರೈಲು ರಸ್ತೆ ಯೋಜನೆ

ಭಾರತದಲ್ಲಿ ಹೊಸದಾಗಿ ರೈಲ್ವೆ ಮಾರ್ಗಗಳನ್ನು ನಿರ್ಮಿಸುವ ಬಗ್ಗೆ ತಯಾರಿಸಲಾಗುತ್ತಿರುವ ಯೋಜನೆಯಲ್ಲಿ ಹಾಸನ ಮತ್ತು ಮಂಗಳೂರುಗಳ ನಡುವೆ ಮಾರ್ಗವನ್ನು ಹಾಕುವ ವಿಷಯವೂ ಅಡಕವಾಗಿರುವುದೆಂದು ಹೇಳಲಾಗಿದೆ. ಅದು ಯಾವಾಗ ಮಂಜೂರಾಗುವುದೆಂಬುದು ಗೊತ್ತಾಗಿರುವುದಿಲ್ಲ.

### ನಾಳೆ ದಾವಣಗೆರೆಯಲ್ಲಿ ಹರತಾಳ

ಕ್ರಮಾಂಕದ ತೆರಿಗೆ ಸಂಬಂಧವಾಗಿ ಬೆಂಗಳೂರಿನಲ್ಲಿ ನಡೆಯಲಿರುವ ವರ್ತಕರ ಸಮ್ಮೇಳನಕ್ಕೆ ಸಹಾನುಭೂತಿ ತೋರಿಸಲು ನಾಳೆ ಎಲ್ಲ ಅಂಗಡಿಗಳನ್ನೂ ಮುಚ್ಚಬೇಕೆಂದು ದಾವಣಗೆರೆ ವರ್ತಕ ಸಂಘದವರು ನಿರ್ಧರಿಸಿರುತ್ತಾರೆ.

### ಕೌಟಿಲ್ಯ ಮಂಡಲಿ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಕೌಟಿಲ್ಯ- ಒಂದು ವಿವರಣೆ, ಎಂಬ ವಿಷಯವಾಗಿ ಚರಿತ್ರೆಯ ಪ್ರೊಫೆಸರ್ ಡಾ|| ಎಂ ವಿ ಕೃಷ್ಣರಾಯರು ಭಾಷಣ ಮಾಡುವರು. ಅಂಡಾಲಜಿ ಪ್ರೊ|| ಶ್ರೀ ಕೆ ಎ. ನೀಲಕಂಠಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು

### ಜಮ್ಮು ಪೋಲೀಸರಿಗೂ ಗಲಭೆಕೋರರಿಗೂ ಘರ್ಷಣೆ

ಮೊನ್ನೆ ದಿನ ಗಲಭೆಕೋರ ಗುಂಪಿನವರು ಜಮ್ಮುವಿನಿಂದ ೩ ಮೈಲಿ ದೂರವಿರುವ ಜೋರಿಯಾನ್ ಎಂಬಲ್ಲಿ ದೊಂಬಿ ನಡೆಸಿದುದರಿಂದ ಪೋಲೀಸರು ಲಾಠಿ ಪ್ರಯೋಗ ಮಾಡಿ, ಅಶ್ರುವಾಯುವನ್ನು ಬಿಟ್ಟರೂ ಪ್ರಯೋಜನವಾಗದೆ ಕಡೆಗೆ ಗುಂಡು ಹಾರಿಸಬೇಕಾಯಿತು. ಇಬ್ಬರು ಸತ್ತು, ಇಬ್ಬರಿಗೆ ಗಾಯ ಗಳಾದವು. ಆ ಪ್ರದೇಶಗಳಲ್ಲಿ ಗುಂಡು ಶಾಸನ ಜಾರಿಯಾದ ಬಂದಾಗ್ಯೂ ಹಲವು ಸ್ಥಳಗಳಲ್ಲಿ ತೊಡಗಿದ್ದುದಲ್ಲದೆ, ಪೋಲೀಸರ ಮೇಲೆ ಕಲ್ಲುಗಳನ್ನು ಬೀರಿದರೆಂದೂ, ಅವರೊಡನೆ ಘರ್ಷಣೆಯನ್ನು ಮಾಡಿದರೆಂದು ವರದಿಯಾಗಿದೆ.

### ನ್ಯೂಜಿಲೆಂಡಿಗೆ ಮೈಸೂರು ಆನೆ

ನ್ಯೂಜಿಲೆಂಡ್ ದೇಶದ ಮಕ್ಕಳ ಸಂತೋಷಾರ್ಥವಾಗಿ ಮೈಸೂರು ಸರ್ಕಾರದವರು ಭವಾನಿ ಎಂಬ ಆನೆಯನ್ನು ಕೊಟ್ಟಿರುತ್ತಾರೆ. ಮೊನ್ನೆ ಮಧ್ಯಾಹ್ನ ಅದು ಬೆಂಗಳೂರಿನಿಂದ ಕಲ್ಕತ್ತಾ ಮೂಲಕ ನ್ಯೂಜಿಲೆಂಡಿಗೆ ತೆರಳಿತು. ಬೆಂಗಳೂರಿನ ಮಹಿಳಾ ಸಮ್ಮೇಳನದವರೂ, ರಾಜಕುಮಾರಿ ಗಾಯತ್ರಿ ದೇವಿಯವರೂ ಅದನ್ನು ಕಾಯಿ ಹಣ್ಣುಗಳಿಂದ ಉಪಚರಿಸಿ, ಅದಕ್ಕೆ ಆರತಿಯನ್ನೂ ಮಾಡಿ ಬೀಳ್ಕೊಟ್ಟರು

### ಸಕ್ಕರೆ ಮತ್ತು ಬೆಲ್ಲದ ರಫ್ತಿಗೆ ಅಡ್ಡಿ

ಸಕ್ಕರೆ ಮತ್ತು ಬೆಲ್ಲದ ರಫ್ತಿಗೆ ಕೇಂದ್ರ ಸರ್ಕಾರದವರು ನಿರ್ಬಂಧ ಹಾಕಿರುತ್ತಾರೆ. ಈ ಕೂಡಲೇ ಅದು ಜಾರಿಗೆ ಬರುವುದು. ಮೊದಲೇ ಒಪ್ಪಿಗೆಯಾಗಿದ್ದ ರಫ್ತಿಗೆ ಈ ಆಜ್ಞೆಯಿಂದ ಅಡಚಣೆಯಾಗುವುದಿಲ್ಲ. ಪ್ರಸ್ತುತ ಸಾಲಿನಲ್ಲಿ ಸಕ್ಕರೆಯ ಉತ್ಪತ್ತಿಯು ಕಡಿಮೆಯಾಗುವುದೆಂದು ಭಾವಿಸಿ ನಿರ್ಬಂಧವನ್ನು ಹಾಕಲಾಗಿದೆ.

### ಪುಸಾನ್ ನಗರದಲ್ಲಿ ಭಾರಿ ಬೆಂಕಿ ಅನಾಹುತ

ದಕ್ಷಿಣ ಕೊರಿಯದ ಪುಸಾನ್‌ನಲ್ಲಿ ಮೊನ್ನೆ ಬೆಂಕಿಯುಂಟಾಗಿ ಊರಿನ ಬಹು ಭಾಗವು ನಾಶವಾಯಿತಲ್ಲದೆ ೬೦ ಸಾವಿರ ಜನರು ನಿರಾಶ್ರಿತರಾದರು. ಹೆಚ್ಚು ಸಾವು ನೋವುಗಳ ಗಣನೆ ಸಿಕ್ಕಿಲ್ಲ.

### ಪಂಚವಾರ್ಷಿಕ ಯೋಜನೆಗೆ ಮೈಸೂರು ಕಾಂಗ್ರೆಸ್ಸಿನ ಬೆಂಬಲ

### ಪ್ರದೇಶ ಸಮಿತಿಯಲ್ಲಿ ನಿರ್ಣಯ

ಸ್ವಂ ಸು ವೋ[ರ] ಬೆಂಗಳೂರು ೧

ಈ ದಿನ ಬೆಂಗ್ಳೆ ವಾಕವೀ ಧರ್ಮಶಾಲೆಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧಿವೇಶನವು ಸೇರಿತ್ತು. ಶ್ರೀ ಹೆಚ್. ಕೆ ವೀರಣ್ಣ ಗೌಡರು ಅಧ್ಯಕ್ಷತೆ ವಹಿಸಿದ್ದರು. ಸುಮಾರು ೬೦ ಜನ ಪ್ರತಿನಿಧಿಗಳು ಬಂದಿದ್ದರು.

ಪ್ರಾರ್ಥನೆಯ ನಂತರ ಸ್ವಾಗತಾಧ್ಯಕ್ಷರಾದ ಶ್ರೀ ಹೆಚ್ ಚಕ್ರಪಾಣಿರವರು ತಮ್ಮ ಭಾಷಣದಲ್ಲಿ ನೂತನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಕೆ ವೀರಣ್ಣ ಗೌಡರ ಸೇವೆಯನ್ನು ಪ್ರಶಂಸಿಸಿ, ಶಿವಪುರದಲ್ಲಿ ನಡೆದ ಮೊದಲನೆಯ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಇವರು ಸಲ್ಲಿಸಿದ ಸೇವೆಯು ಗಮನಾರ್ಹವಾದುದೆಂದು ಹೇಳಿದರು. ಅಲ್ಲಿ ದೊರಕಿದ ಧ್ವಜ ಸತ್ಯಾಗ್ರಹದ ಒಗ್ಗೆ ಸ್ಮಾರಕವೊಂದನ್ನು ನಿರ್ಮಿಸ ಬೇಕು ಎಂದೂ ಸೂಚಿಸಿದರು

ಅಧ್ಯಕ್ಷರಾದ ಶ್ರೀ ಹೆಚ್. ಕೆ ವೀರಣ್ಣಗೌಡರು ಭಾಷಣಮಾಡಿ, ಇಂದಿನ ವಿದ್ಯಮಾನಗಳನ್ನು ವಿವರಿಸಿದರು

ಹಿಂದೆ ಕಾಂಗ್ರೆಸ್ಸಿಗೆ ವಿಶೇಷ ಸೇವೆ ಸಲ್ಲಿಸಿ, ಕಾರಣಾಂತರಗಳಿಂದ ಅದನ್ನು ಬಿಟ್ಟು ಹೋಗಿರುವವರು ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಪುನಃ ಸಂಸ್ಥೆಗೆ ಬಂದು ಸೇರಬೇಕೆಂದು ಅವರು ಮನವಿ ಮಾಡಿಕೊಂಡರು.

ಕಾರ್ಯಕಾರಿ ಮತ್ತು ಚುನಾವಣಾ ಸಮಿತಿಗಳನ್ನು ಚುನಾವಣೆ ಮೂಲಕವೇ ಆರಿಸತಕ್ಕದೆಂದು ನಿರ್ಣಯ ಮಾಡಲಾಯಿತು. ಈ ಸಂಜೆ ಅವುಗಳಿಗೆ ಚುನಾವಣೆಯು ನಡೆಯುವುದು.

ಮಂಡ್ಯ ಜಿಲ್ಲೆಯಿಂದ ಶ್ರೀ ಕೆ ವಿ ಶಂಕರೇಗೌಡರು ಅವಿರೋಧವಾಗಿ ಕಾರ್ಯಕಾರಿ ಸಮಿತಿಗೆ ಆರಿಸಿ ಬಂದಿರುವರು. ಇತರ ಜಿಲ್ಲೆಗಳಲ್ಲಿ ಸ್ಪರ್ಧೆ ಇರುತ್ತದೆ.

ಮೈಸೂರು ನಗರದಿಂದ ಶ್ರೀಗಳಾದ ಎಸ್ ಚನ್ನಯ್ಯ ಮತ್ತು ಕೆ ಎಸ್. ಸೂರ್ಯನಾರಾಯಣರಾಯರುಗಳ ಹೆಸರು ಕಾರ್ಯಕಾರಿ ಸಮಿತಿಗೆ ಸೂಚಿಸಲ್ಪಟ್ಟಿದೆ

ಕಾಂಗ್ರೆಸ್ ಮಹಾ ಸಭೆಯ ಅಧಿವೇಶನದಲ್ಲಿ ಅಂಗೀಕೃತವಾಗಿರುವ ಪಂಚವಾರ್ಷಿಕ ಯೋಜನೆಗೆ ಸಂಪೂರ್ಣ ಸಹಕಾರವನ್ನು ನೀಡಿ ಅದು ಯಶಸ್ವಿಯಾಗುವಂತೆ ಮಾಡಬೇಕೆಂದು ಕೋರುವ ನಿರ್ಣಯವನ್ನು ಶ್ರೀ ಟಿ ಸುಬ್ರಹ್ಮಣ್ಯಂರವರು ಮಂಡಿಸಿದರು. ಶ್ರೀ ಹೆಚ್ ಸಿ ದಾಸಪ್ಪನವರು ಅನುಮೋದಿಸಿದರು. ಸಭೆಯು ಸಂಜೆ ಮುಂದುವರೆಯುವುದು

ಕಾಂಗ್ರೆಸ್ ಸಂಸ್ಥೆಯ ರಚನೆಗೆ ಸಲ್ಲುವ ತಿದ್ದುಪಡಿಗಳನ್ನು ಸೂಚಿಸುವ ವಿಚಾರವಾಗಿ ಪರಿಶೀಲನೆ ನಡೆಸಲು ಸಮಿತಿಯು ಸಂಜೆ ೬ ಗಂಟೆಗೆ ವಿಶೇಷ ಅಧಿವೇಶನವಾಗಿ ಪರಿವರ್ತಿಸಿಕೊಂಡು ನಡೆಯುವುದು

ಸಭೆಗೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ ಮತ್ತು ಇತರ ಎಲ್ಲ ಮಂತ್ರಿಗಳೂ ಬಂದಿದ್ದರು.

ಬಿಸನೀರು ಸಿಕ್ಕುವ ಮನೆಗಳನ್ನು ಬುಲ್ ಡೋಜರು ಮತ್ತು ಡೈನಾಮೆಟ್‌ಗಳ ಸಹಾಯದಿಂದ [illegible]

# ವಾರ ಭವಿಷ್ಯ

ತಾ|| ೧-೨-೫೫ರಿಂದ ೮-೨-೫೫ರ ವರೆಗೆ

ಮೇಷ — ವಿಶೇಷ ಖರ್ಚು ವಿದ್ಯಾರ್ಥಿಗಳಿಗೆ ವಿಘ್ನ ವ್ಯಾಪಾರಾದಿಗಳಲ್ಲಿ ಸ್ಥಿತಿ ಕಡಿಮೆ ನೌಕರಿಯಲ್ಲಿ ಮೇಲಿನವರ ಕೋಪ ಲಾಟರಿ ರೇಸುಗಳು ಬೇಡ ತಾ|| ೩, ೪, ಶಸ್ತ್ರ ಭಯ ಪಶ್ಚಿಮ ಪ್ರವಾಸ ಅಪಕಾರ

ವೃಷಭ — ಆರೋಗ್ಯ ಉತ್ತಮ ಹಣದ ಲಾಭ ನೌಕರಿಯಲ್ಲಿ ಮೇಲಧಿಕಾರ ಅಪ್ತರ ಭೇಟಿ ಸುಖ ಪ್ರವಾಸ ತಾ|| ೧, ೬ ಮನರಂಜನೆ ಖರ್ಚು

ಮಿಥುನ — ಅನೇಕ ಮಹತ್ವದ ಕಾರ್ಯ ಯಶಸ್ಸು ವಧೂವರರ ವಿವಾಹ ಸತ್ಪುರುಷರ ಸಹವಾಸ ತೀರ್ಥ ಕ್ಷೇತ್ರ ದರ್ಶನ ನೌಕರಿಯಲ್ಲಿ ಪ್ರಗತಿ ತಾ|| ೧, ೨ ಮಿತ್ರರಿಂದ ಸಹಾಯ, ಧನ ಲಾಭ

ಕರ್ಕ — ತೊಂದರೆಗಳು ದೂರವಾಗುತ್ತವೆ ಆರ್ಥಿಕ ಪರಿಸ್ಥಿತಿಯ ಸುಧಾರಣೆ ನೌಕರಿಯಲ್ಲಿ ಸಮಸ್ಯೆ ಪರಿಹಾರ ಪ್ರವಾಸ ಉಂಟು ಅಪ್ತರ ಭೇಟಿ ತಾ|| ೩, ೪ ಲಾಟರಿ ರೇಸುಗಳಲ್ಲಿ ಸ್ವಲ್ಪ ಲಾಭ

ಸಿಂಹ — ಆರೋಗ್ಯ ನೆಟ್ಟಗೆ ಕಾರ್ಯ ವಿಘ್ನ ಪಾಲುಗಾರಿಕೆಯಲ್ಲಿ ತೊಂದರೆ ಕುಟುಂಬ ಜೀವನದಲ್ಲಿ ತಪ್ಪು ತಿಳುವಳಿಕೆ ಅಸಮಾಧಾನ ತಾ|| ೩, ೪ ಧನಲಾಭ ಪ್ರವಾಸ

ಕನ್ಯಾ — ಆರೋಗ್ಯ ಉತ್ತಮ ಪತ್ನಿಯ ಅರೋಗ್ಯಕ್ಕೆ ಸ್ವಲ್ಪ ತೊಂದರೆ ತೊಡನೆ ಕಲಹ ನೌಕರಿಯಲ್ಲಿ ಬುದ್ಧಿ ವಿಕಾರ ಚಿತ್ತ ಉದ್ವಿಗ್ನ ಅನಿರೀಕ್ಷಿತ ಖರ್ಚು ಶುಭಕಾರ್ಯದಲ್ಲಿ ವಿಘ್ನ

ತುಲಾ — ಶುಭ ಮತ್ತು ಮಂಗಲ ಕಾರ್ಯ ಆರೋಗ್ಯ ನೆಟ್ಟಗೆ ಕೋರ್ಟು ಕಾರ್ಯ ಜಯ ಆಸ್ತಿ ಪಾಸ್ತಿ ಬಗ್ಗೆ ಲಾಭ ದಾಯಕ ಘಟನೆ ವ್ಯಾಪಾರಾದಿಗಳಲ್ಲಿ ಧನಲಾಭ ಸುಖ ಪ್ರವಾಸ ತಾ|| ೩, ೪ ಮನರಂಜನೆ, ಬಟ್ಟೆ ಖರೀದಿ

ವೃಶ್ಚಿಕ — ಆರೋಗ್ಯ ನೆಟ್ಟಗೆ ಮಕ್ಕಳ ಆರೋಗ್ಯಕ್ಕೆ ಕ್ಲೇಶ ಚಿಕಿತ್ಸೆಕಾರ್ಯ ತಿ ಇಲ್ಲ ವ್ಯಾಪಾರಾದಿಗಳಲ್ಲಿ ತೊಂದರೆ ಇಲ್ಲ ಇದ್ದವರಲ್ಲಿ ಉತ್ತಮ ತಾ|| ೩, ೪ ಗೆಳೆಯರಿಂದ ಉತ್ತೇಜನ ಪ್ರವಾಸದಿಂದ ಲಾಭ

ಧನು — ವ್ಯಾಪಾರಾದಿಗಳಲ್ಲಿ ಲಾಭ ವಿಘ್ನ, ಆರೋಗ್ಯ ನೆಟ್ಟಗಿರದು ಕೆಲಸದಲ್ಲಿ ಆಕಸ್ಮಿಕ ವಿಘ್ನ ಪ್ರವಾಸದಲ್ಲಿ ಕ್ಲೇಶ ವ್ಯಾಪಾರದ ಹಾನಿ ನೌಕರಿಯಲ್ಲಿ ವಿರಸ ತಾ|| ೫ ೬ ಆರ್ಥಿಕ ಸಹಾಯ ಕ್ಲೇಶ ನಷ್ಟ

ಮಕರ — ತೀರ್ಥಯಾತ್ರೆ ಶುಭ ದೃಷ್ಟಿ ಕಾಲ ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ಪ್ರಶಂಸೆ ಸುಖ ಪ್ರವಾಸ ತಾ|| ೩, ೪ ಶುಭವಾರ್ತೆ, ಶತ್ರುವಿಗೆ ಸೋಲು

ಕುಂಭ — ಉತ್ಸಾಹಕರ ವಾರ ಆರೋಗ್ಯ ಉತ್ತಮ ವಿವಾಹ ಜರುಗುವುದು ಹಣಕಾಸಿನ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಸುಧಾರಣೆ ಮೇಲಧಿಕಾರಿಗಳಿಂದ ಮನ್ನಣೆ ತಾ|| ೩, ೪ ಜಾಗ

## ಅಭಿಪ್ರಾಯ ಸ್ವಾತಂತ್ರ್ಯದ ದುರುಪಯೋಗ ಕೂಡದು

### ಮುಖ್ಯ ಮಂತ್ರಿ ಹನುಮಂತಯ್ಯನವರ ಅಭಿಪ್ರಾಯ

ಶಿವಮೊಗ್ಗ ೩೦

ಅಸಭ್ಯ ವರ್ತನೆ ಮತ್ತು ಹೀಯಾದ ನಡತೆ ಇಲ್ಲವಿರುವುದನ್ನು ಸರ್ಕಾರವು ಸಹಿಸುವ ಪ್ರಶ್ನೆಯಾಗುವುದಿಲ್ಲವೆಂದೂ ಸರ್ಕಾರವು ಹೀಯಾದ ವರ್ತನೆಯನ್ನು ಬಲಾತ್ಕಾರವಾಗಿ ಸಹ ಹಿಂಜರಿಯುವುದಿಲ್ಲವೆಂದೂ ರಾಜ್ಯಾಂಗ ದತ್ತವಾದ ಅಭಿಪ್ರಾಯ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವುದರಿಂದ ದೇಶದ ಏಳಿಗೆಗೆ ಒಳ್ಳೆಯದಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಇಲ್ಲಿನ ಪೌರಸಭೆಯವರು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ತಿಳಿಸಿದರು

ಸಮಾರಂಭವು ನಡೆಯುತ್ತಿದ್ದಾಗ ಕೆಲವರು ಸುಮಾರು ೧೫೦ ಮಂದಿ ಘೋಷಣೆ ಮಾಡುತ್ತಾ ಅಡಚಣೆ ಕಲು ಪ್ರಯತ್ನಪಟ್ಟರು ಸಭೆಯಲ್ಲಿದ್ದ ಪೌರಸಭಾಸದಸ್ಯರಾದ ಶ್ರೀ ಗೋವಿಂದಪ್ಪನವರು ತಮಗೆ ಭಾಷಣ ಮಾಡುವ ಅವಕಾಶಬೇಕೆಂದು ಕೋರಿದರು ಕೊಡಲು ಸಾಧ್ಯವಿಲ್ಲವೆಂದು ತಿಳಿಸಿದ ಮೇಲೆ ಅವರೂ ಮತ್ತು ಇತರ ಸದಸ್ಯರು ಸಭಾಬಹಿಷ್ಕಾರ ಮಾಡಿದರು ಪೊಲೀಸ್ ಅಧಿಕಾರಿಗಳು ಗಲಭೆ ನಡೆಯದಂತೆ ಎಚ್ಚರಿಕೆಯ ಕ್ರಮ ತೆಗೆದುಕೊಂಡಿದ್ದರು

### ಅಭೇರಿ ಮತ್ತು ತರಂಗಿಣಿ ರಾಗಗಳು

ಬೆಂಗಳೂರಿನಲ್ಲಿ ಇತ್ತೀಚಿಗೆ ನಡೆದ ಕರ್ನಾಟಕ ಸಂಗೀತ ಸಮ್ಮೇಳನದಲ್ಲಿ ಅಭೇರಿ ಮತ್ತು ತರಂಗಿಣಿ ರಾಗಗಳನ್ನು ಬೇರೆ ತರಂಗಿಣಿ ರಾಗವು ಆರಾಧಿಸ ಬೇಕಾದದ್ದು ಜನ್ಯವೆಂದೂ ಕಥೆ ಗಳಿಗೆ ಹರಿಕಾಂಭೋಜಿಯ ಜನ್ಯವೆಂದೂ ಮುದ್ದುಸ್ವಾಮಿ ದೀಕ್ಷಿತರ 'ಮಾಯೆ ತ್ವಂ ಯಾಹಿ' ಕೃತಿಯ ಪ್ರಕಾರ ತರಂಗಿಣಿ ರಾಗದಲ್ಲಿದೆಯೆಂದೂ ತೀರ್ಮಾನವಾಗಿತ್ತಷ್ಟೆ ಈ ಬಗ್ಗೆ ರಾಜಧಾನಿಯ ಪರಿಷತ್ ಸಂಗೀತ ವಿದ್ವಾಂಸರ ಕಾರ್ಯದರ್ಶಿ, ಶ್ರೀ ಆರ್ ಸತ್ಯನಾರಾಯಣರವರು ಪ್ರಶ್ನೆ ಮಾಡಿ ಮುಂದಿನ ಸಮ್ಮೇಳನದವರೆಗೆ ಕಳುಹಿ ಸದರಿ ರಾಗಗಳ ಲಕ್ಷಣ ಅವುಗಳ ನಿರ್ಧಾರವನ್ನು ಹೇಗೆ ಮುಂತಾಗಿ ಕೇಳಿದ್ದಾರೆ

---

ನಾಮ ಮಸ್ತಕ

ಮೀನ — ಸ್ಮರಣ ಶಕ್ತಿ ಕಡಿಮೆ ಖರ್ಚು ಹೆಚ್ಚು ಆರೋಗ್ಯ ಸರಿಯಿಲ್ಲ ವ್ಯಾಪಾರಾದಿಗಳಲ್ಲಿ ಉತ್ತೇಜನವಿಲ್ಲ ನೌಕರಿಯಲ್ಲಿ ಮೇಲಧಿಕಾರಿಗಳೊಡನೆ ಭಿನ್ನತೆ ೩, ೪, ಹಣಕಾಸಿನ ಚಿಂತೆ ತಾತ್ಕಾಲಿಕ ಸಮಾಧಾನ ಮಿತ್ರರ ಭೇಟಿ.


## ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗೂರ್ಲು, ಉಬ್ಬಸ, ಕಫಕಾರಿ ಕೂರ ಕೆಮ್ಮು (Tonsil) ಗಳಿಗೂ ಮಕ್ಕಳಿಗೆ ಉಪಯುಕ್ತವಾದ ಔಷಧಿ ದೊರೆಯುತ್ತದೆ ಅನೇಕ ಜನ ಮುನಿಸ್ಪಲ್‌ ಕೌನ್ಸಿಲರುಗಳು ಬೆಂಗಳೂರಿನ ಮೊದಲುಗಳನ್ನು ಕೊಡುತ್ತಾರೆ ಬೆಲೆ ರೂ 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು


## ಭಾರತ ಸೇವಾ ಸಮಾಜ

ಮೈಸೂರಿನ ಕೆಂಪನಂಜಾಂಬಾ ಅಗ್ರಹಾರದಲ್ಲಿರುವ ಭಾರತ ಸೇವಾ ಸಮಾಜದ ಆಶ್ರಯದಲ್ಲಿ ಕಳೆದ ೨೬ನೇ ತಾ|| ರಿಪಬ್ಲಿಕ್ ದಿನವನ್ನು ಆಚರಿಸಲಾಯಿತು ಬೆಳಿಗ್ಗೆ ಕೃಷ್ಣರಾಜ ಬಾಲಿಕಾ ಅಪ್ಪರ್ ಪ್ರೈಮರಿ ಶಾಲಾ ಮುಖ್ಯೋಪಾಧ್ಯಾಯನಿಯವರಿಂದ ಧ್ವಜಾರೋಹಣವೂ, ಸಾಯಂಕಾಲ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹುಮಾನ ವಿನಿಯೋಗ ಸಮಾರಂಭವೂ, 'ಸಮಾಜ ಸೇವಾ' ಎಂಬ ಕೈಬರಹ ಪತ್ರಿಕೆ ಪ್ರಕಟಣೆಯೂ ಆದುವು

### ಸುತ್ತೂರಿನಲ್ಲಿ ರಿಪಬ್ಲಿಕ್ ದಿನಾಚರಣೆ

ನಂಜನಗೂಡು ತಾಲ್ಲೂಕು ಸುತ್ತೂರಿನ ಮಾಧ್ಯಮಿಕ ಶಾಲಾ ಸಂಘದ ಆಶ್ರಯದಲ್ಲಿ ಕಳೆದ ೨೬ನೇ ತಾ|| ರಿಪಬ್ಲಿಕ್ ದಿನವು ನೆರವೇರಿಸಲ್ಪಟ್ಟಿತು ಶ್ರೀ ಎಸ್ ಎಂ ಪ್ರಭುಸ್ವಾಮಿಯವರು, ಅಧ್ಯಕ್ಷತೆ ವಹಿಸಿದರು ಮುಖ್ಯೋಪಾಧ್ಯಾಯರಾದ ಶ್ರೀ ಎ ಎಸ್ ಸುಬ್ಬರಾಯರು ಪಂಚವಾರ್ಷಿಕ ಯೋಜನೆ ಬಗ್ಗೆ ಭಾಷಣ ಮಾಡಿದರು ಶ್ರೀಗಳಾದ ಸುಬ್ರಹ್ಮಣ್ಯ ಮತ್ತು ಜಯದೇವಯ್ಯನವರು ದಿನಾಚರಣೆಯ ಮಹತ್ವವನ್ನು ವಿವರಿಸಿದರು

### ತ್ಯಾಗರಾಜ ಮತ್ತು ಪುರಂದರ ದಾಸರ ಜನ್ಮ ದಿನ

ನಂಜನಗೂಡು ಹೈಸ್ಕೂಲಿನಲ್ಲಿ ಅಲ್ಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎಂ ಎಸ್ ರಂಗಸ್ವಾಮಿ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಕಳೆದ ಗುರುವಾರ ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರ ದಾಸರ ಪುಣ್ಯದಿನವನ್ನು ಆಚರಿಸಲಾಯಿತು ಶ್ರೀಮತಿ ಸ್ವರ್ಣಕುಮಾರಿ ಮತ್ತು ಸಭಿಕರ ಪರಿಂದ ಸಂಗೀತ ಮತ್ತು ಬಾಲಿಕಾ ಬಾಲಕರುಗಳಿಂದ ದಾಸರ ಪದಗಳ ಗಾಯನವನ್ನು ಏರ್ಪಡಿಸಲಾಗಿದ್ದಿತು

### ಕೆ ಸಿ ಸುಬ್ಬಣ್ಣನವರ ಸ್ಮಾರಕ ಚರ್ಚಾ ಸ್ಪರ್ಧೆ

ರಾಜಧಾನಿಯ ಶ್ಯಾನಭಗಹಳ್ಳಿ ತಾ|| ಸಿ ಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರ ಸಂಸ್ಕೃತ ಅಂತರ ವಿದ್ಯಾರ್ಥಿ ಚರ್ಚಾ ಸ್ಪರ್ಧೆಗೆ ಗಿರಿನಾಯಿ ಮೊದಲ ಸ್ಥಾನ ಪಡೆದ ಈ ಸಂಘದ ೫ನೇ ತಾ|| ಏರ್ಪಡಿಸಿರುವ ಭಾಗವಹಿಸುವವರು ತಮ್ಮ ಹೆಸರು ಪ್ರವೇಶ ಧನದೊಡನೆ ಇಪ್ಪರ ಪ್ರತಿನಿಧಿಗಳ ಹೆಸರನ್ನು ಸೂಚಿಸಬೇಕಾಗಿದೆ ಸ್ಪರ್ಧೆಯು ಸಂಸ್ಕೃತ ಸನ್ನಿಧಿ ಮತ್ತು ೬ ಇತರ ವಿಷಯಗಳನ್ನು ಕುರಿತಾಗುವುದು

## ಹೊನ್ನಾಳಿಯಲ್ಲಿ ಕ್ಷಾಮ ಪರಿಹಾರಕ್ಕೆ ೧ ಲಕ್ಷ ರೂ.

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಮಳೆಯಾಗದೆ ತೊಂದರೆಗೆ ಒಳಗಾಗಿರುವವರ ಪರಿಹಾರಾರ್ಥವಾಗಿ ಸರ್ಕಾರದವರು ೧ ಲಕ್ಷ ರೂ. ವನ್ನು ಮಂಜೂರು ಮಾಡಿರುವರು

### ಜೈನ ಮಹಾ ಸಮ್ಮೇಳನ

ಶ್ರವಣಬೆಳಗೊಳದಲ್ಲಿ ಶ್ರೀ ಗೊಮ್ಮಟೇಶ್ವರ ಸ್ವಾಮಿಯವರ ಮಹಾ ಮಸ್ತಕಾಭಿಷೇಕದ ಕಾಲದಲ್ಲಿ ಜೈನ ಮಹಾ ಸಮ್ಮೇಳನವನ್ನು ನಡೆಸಲಾಗುವುದು ಇದಕ್ಕಾಗಿ ಸ್ವಾಗತ ಸಮಿತಿಯೊಂದನ್ನು ಏರ್ಪಡಿಸಲಾಗಿದೆ

### ಕ್ರೈಸ್ಟ್ ಕಾಲೇಜಿನ ವಾರ್ಷಿಕೋತ್ಸವ

ರಾಜಧಾನಿಯಲ್ಲಿರುವ ಕ್ರೈಸ್ಟ್ ಕಾಲೇಜ್ ಆಫ್ ಕಾಮರ್ಸಿನ ೨೨ ನೆಯ ವಾರ್ಷಿಕೋತ್ಸವವು ಈ ತಿಂಗಳು ೧೧ನೆ ತಾರೀಖು ಶುಕ್ರವಾರ ರಂಗಾಚಾರ್ಲು ಪುರಭವನದಲ್ಲಿ ನಡೆಯುವುದು ಸಂಸ್ಥಾನದ ನ್ಯಾಯಾಂಗ ಮತ್ತು ವಿದ್ಯಾ ಸಚಿವರಾದ ಶ್ರೀ ಎ ಜಿ ರಾಮಚಂದ್ರ ರಾಯರು ಅಧ್ಯಕ್ಷತೆ ವಹಿಸುವರು ಕಾಲೇಜಿನ ಹಳೆಯ ವಿದ್ಯಾರ್ಥಿಗಳು ತಪ್ಪದೆ ವಿಳಾಸವನ್ನು ತಿಳಿಸಬೇಕಾಗಿ ಕೋರಲಾಗಿದೆ

### ಹಾಡುಗಾರಿಕೆ ಸ್ಪರ್ಧೆ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಸುಹಾಸಿನಿ ಸದನದಲ್ಲಿ ಶ್ರೀ ಎಂ ಬಿ ಗೋಪಾಲಾಚಾರ್ಯರವರ ಸ್ಮಾರಕದ ಅಂಗವಾಗಿ ಕಳೆದ ತಿಂಗಳು ೨೩ನೇ ತಾ|| ಕನ್ನಡದಲ್ಲಿ ದೇವರನಾಮಗಳ ಹಾಡುಗಾರಿಕೆಯ ಸ್ಪರ್ಧೆಗಳು ನಡೆದುವು ಸ್ಪರ್ಧೆಯಲ್ಲಿ ೧೯ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು ಶ್ರೀಮತಿಗಳಾದ ಎಲ್ ಜಾನಕಿ ಬಿ ವಿಶಾಲಾಬಾಯಿ ಮತ್ತು ಶ್ರೀಮತಿ ಬಿ ಎ ಸತ್ಯವತಿಯವರಿಗೆ ಮೊದಲನೇ ೩ ಬಹುಮಾನಗಳೂ ಶ್ರೀಮತಿ ಎಂ. ಎ ಲೀಲಾವತಿಗೆ ವಿಶೇಷ ಬಹುಮಾನವೂ ಕೊಡಲ್ಪಟ್ಟವು ಸ್ಪರ್ಧೆಯ ಪಾರಿತೋಷಕ ಆಕ್ಕನ ಬಳಗಕ್ಕೆ ದೊರೆಯಿತು

### ಆಕಾಶವಾಣಿ ಶಾಲಾ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಆರಂಭ ಆಕಾಶವಾಣಿ ಮತ್ತು ವಾರ್ತೆಗಳು, ರಾಷ್ಟ್ರಗೀತೆ ಮತ್ತು ವಿವಿಧ ಕಾರ್ಯಕ್ರಮಗಳು ೩ ಪ್ರತಿಗಳಿಗೆ ಶ್ರೀ ಎ ಎಸ್ ಸುಬ್ರಹ್ಮಣ್ಯ ಅಯ್ಯಂಗಾರ್ ರಿಂದ ಪ್ರಸಾರ


ಹೊಳಪಿನ ಹಲ್ಲುಗಳಿಗೆ ಮತ್ತು ಆರೋಗ್ಯಕರವಾದ ವಸಡಿಗೆ ಯಾವಾಗಲೂ

ಚೇತನ ಹಲ್ಲುಪುಡಿ ಯನ್ನೇ ಉಪಯೋಗಿಸಿರಿ

ಅತ್ಯುತ್ತಮವಾದ ವನಸ್ಪತಿಗಳಿಂದಲೇ ತಯಾರಿಸಿರುತ್ತೆ

ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ


Edited, Printed and Published by A K Nagarajan, Sadhvi Press, D Subbiah Road, Mysore

ನೋಂ. ನಂ. 792 [ಮೈಸೂರು ಸರಕಾರದಿಂದ ಮಂಜೂರಾದದ್ದು] ಬಿಡಿಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೦ ] ಸೋಮವಾರ ೨-೨-೧೯೫೩ [ಸಂಚಿಕೆ ೧೫೩

# ಯೂರೋಪಿನಲ್ಲಿ ಭಾರಿ ಬಿರುಗಾಳಿ ಅನಾಹುತ

## ಪಂಚವಾರ್ಷಿಕ ಯೋಜನೆಗೆ ಪ್ರ॥ ಕಾಂಗ್ರೆಸ್ಸಿನ ಸ್ವಾಗತ

ಬೆಂಗಳೂರು ೨

ಭಾರತದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ತಯಾರಿಸಿರುವ ಪಂಚ ವಾರ್ಷಿಕ ಯೋಜನೆಯನ್ನು ಸ್ವಾಗತಿಸುವ ನಿರ್ಣಯವು ನಿನ್ನೆಯ ದಿನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಭೆಯು ಅಂಗೀಕರಿಸಿತು. ದೇಶದ ಬೆನ್ನೆಲುಬಾಗಿರುವ ಹಳ್ಳಿಗಳ ಏಳಿಗೆಗಾಗಿ ಮಹಾತ್ಮಾ ಗಾಂಧಿಯವರು ಸೂಚಿಸಿರುವ ರಚನಾತ್ಮಕ ಕಾರ್ಯಕ್ರಮವನ್ನು ಅನುಸರಿಸುವುದರಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂದು ಪ್ರಾರ್ಥಿಸಲಾಯಿತು.

ಆಹಾರ ಧಾನ್ಯಗಳ ಬೆಲೆಯನ್ನು ಏರಿಸಿರುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಿ, ಆ ವಿಷಯದಲ್ಲಿ ಕಾರ್ಯಕಾರಿ ಸಮಿತಿಯವರು ಪೂರ್ಣವಾಗಿ ವಿಚಾರ ಮಾಡಿ ವರದಿಗಳನ್ನು ಕಳಿಸಬೇಕೆಂದು ಅಗತ್ಯ ಕಂಡ ಬಂದಲ್ಲಿ ಇದರ ಬಗ್ಗೆ ಸೂಕ್ತ ಕ್ರಮವನ್ನು ಸರಕಾರಕ್ಕೆ ನಿವೇದಿಸಲು ಬೇರೆ ಏರ್ಪಾಡನ್ನು ಸೂಚಿಸುವಂತೆ ಸಹ ತೀರ್ಮಾನಿಸಲಾಯಿತು.

**ವೈದ್ಯ ಶುಲ್ಕದ ಪುನರ್ಪರಿಶೀಲನೆ**

ಕ್ರಿಯಲ್ಲಿ ವೈದ್ಯ ಶುಲ್ಕ ವಿಧಿಸುವುದನ್ನು ರದ್ದು ಮಾಡಬೇಕೆಂದು ವೈದ್ಯ ಸಚಿವ ಶ್ರೀ ಕೆ. ಎಸ್. ಸೂರ್ಯನಾರಾಯಣ ರಾಯರು ಕಳುಹಿಸಿದ್ದ ನಿರ್ಣಯದ ಬಗ್ಗೆ ಚರ್ಚೆಯಾಗಿ ಆರೋಗ್ಯ ಮಂತ್ರಿ ಟಿ. ಚನ್ನಯ್ಯನವರು ಉತ್ತರಿಸುತ್ತಾ ಈ ಶುಲ್ಕದಿಂದ ಬಡವರಿಗೆ ತೊಂದರೆಯಾಗುವುದೆಂದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಅದನ್ನು ಪುನರ್ಪರಿಶೀಲಿಸಲಾಗುವುದೆಂದು ತಿಳಿಸಿದರು.

**ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾವಣೆ**

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆ ನಡೆದು ಕೆಳಗೆ ಕಂಡವರು ಆರಿಸಲ್ಪಟ್ಟರು. ಶ್ರೀಗಳಾದ ಆರ್. ಸುಬ್ಬಣ್ಣ, ಎಸ್. ಟಿ. ಕಾರ್ಲೆ, ಎ. ಸಿ. ನಾಗಪ್ಪ ರೆಡ್ಡಿ, ಎಸ್. ಚನ್ನಯ್ಯ, ಹೆಚ್. ಎಂ. ರಂಗಪ್ಪ, ಕೆ. ಎಲ್. ವೀರಪ್ಪಗೌಡ, ಕೆ. ವಿ. ಶಂಕರೇಗೌಡ, ಟಿ. ಸುಬ್ರಹ್ಮಣ್ಯ, ವಿ. ವೆಂಕಟಪ್ಪ, ಪಿ. ಮಹದೇವಪ್ಪ, ನಿಜಲಿಂಗಪ್ಪ, ಕೆ. ಟಿ. ಜಂಬಣ್ಣ. ಇವರೊಳಗೆ ಮೈಸೂರು ಸಭ್ಯರಲ್ಲ. ಇತರರನ್ನು ನಾಮಕರಣ ಮಾಡುವರು.

**ಹಾಸನದ ಬಳಿ ಆರು ಜನ ದ್ರೋಹಿಗಳ ದಸ್ತಗಿರಿ**

ಹಾಸನದ ವಕೀಲರಾದ ಶ್ರೀ ಹೆಚ್. ವಿ. ರಂಗಸ್ವಾಮಿಯವರಿಗೆ ಸೇರಿದ ಕಾಫಿ ತೋಟದಲ್ಲಿ ೨೦೦ ಕೆಂಗಿನ ಕಾಯಿಗಳನ್ನು ಕಾದು ಪಿಂಡ ಬತ್ತದ ಪೈರಿಗೆ ನಷ್ಟವನ್ನು ಮಾಡಿದ್ದು ಬಡೇ ಹಳ್ಳಿಯ ೬ ಜನರನ್ನು ದಸ್ತಗಿರಿ ಮಾಡಲಾಗಿದೆ. ಕೆಂಗಿನ ಕಾಯಿಗಳನ್ನೂ ವಶಪಡಿಸಿಕೊಳ್ಳಲಾಗಿದೆ.

## ಯೂರೋಪಿನಲ್ಲಿ ಭೀಕರ ಬಿರುಗಾಳಿ ಅನಾಹುತ

ಯೂರೋಪಿನಲ್ಲಿ ಅನೇಕ ವರ್ಷಗಳಿಂದಲೂ ಕಂಡರಿಯದಂತಹ ಪ್ರಚಂಡ ಬಿರುಗಾಳಿಯು ಅನಾಹುತವು ಮೊನ್ನೆ ಸಂಭವಿಸಿ ಇಂಗ್ಲೆಂಡ್, ಹಾಲೆಂಡ್, ಬೆಲ್ಜಿಯಂ, ಸ್ವಿಟ್ಸರ್‌ಲೆಂಡ್ ಮತ್ತು ಜರ್ಮನಿಗಳಲ್ಲಿ ಬಹಳ ನಷ್ಟ ಸಂಭವಿಸಿ, ನೂರಾರು ಮನೆಗಳು ಸಮುದ್ರದಲ್ಲಿ ಕೊಚ್ಚಿ ಹೋಯಿವೆಂದೂ, ಅಸಂಖ್ಯಾತ ಜನರು ಮೃತಪಟ್ಟಿರುವರೆಂದೂ ವರದಿಯಾಗಿದೆ. ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಿ ಸಮುದ್ರ ತೀರದಲ್ಲಿದ್ದ ೧೪ ಹಡಗುಗಳು ಅಪಾಯಕ್ಕೀಡಾಗಿವೆ. ಥೇಂಸ್ ನದಿಯಲ್ಲಿ ಒಂದು ಸಬ್ ಮೆರೀನು ಮುಳುಗಿತು.

ಸ್ಕಾಟ್ಲೆಂಡಿನ ಬಳಿ ಸಮುದ್ರದಲ್ಲಿ ಚಂಡಮಾರುತಕ್ಕೆ ಸಿಕ್ಕಿ ಮುಳುಗುತ್ತಿದ್ದ ಪ್ರಿನ್ಸೆಸ್ ವಿಕ್ಟೋರಿಯಾ ಎಂಬ ಹಡಗಿನಿಂದ ೧೯೦ ಪ್ರಯಾಣಿಕರು ಜೀವ ಉಳಿಸಿಕೊಳ್ಳಲು ಸಮುದ್ರಕ್ಕೆ ಹಾರಿದರೆಂದು ವರದಿಯಾಗಿದೆ. ಅವರುಗಳು ಹಲವರು ಸೇರುಗಳನ್ನು ಹಿಡಿದುಕೊಂಡು ರಕ್ಷಣೆಗಾಗಿ ಕೂಗಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ೧೧ ಪ್ರೈಕಿ ೨೦ ಮಂದಿಯನ್ನು ಲೈಫ್ ಬೋಟೊಂದು ರಕ್ಷಿಸಿತೆಂದು ಗೊತ್ತಾಗಿದೆ. ಉತ್ತರ ಐರ್ಲೆಂಡಿನ ಉಪ ಪ್ರಧಾನಿ ಮೇಜರ್ ಜಾರ್ ಸಿಂಕ್ಲೇರರ ವರೂ ಹಡಗಿನಲ್ಲಿದ್ದರೆಂದು ಹೇಳಲಾಗಿದೆ. ಅದರಲ್ಲಿದ್ದವರ ಪೈಕಿ ೧೨೩ ಜನರು ಮೃತಪಟ್ಟರೆಂದು ಗೊತ್ತಾಗಿದೆ.

**ಸ್ವತಃ ಪ್ರಚಾರದಿಂದ ೧೯,೦೦೦ ರೂ ಉತ್ಪತ್ತಿ**

ಟಿ. ನರಸೀಪುರದ ವಿದ್ಯೋದಯ ಪ್ರೌಢಶಾಲೆ ಮತ್ತು ಕಾಲೇಜು ಕಟ್ಟಡದ ನಿಧಿಗಾಗಿ ಮೊನ್ನೆ ದಿನ ಅಲ್ಲಿ ಏರ್ಪಡಿಸಲಾಗಿದ್ದ ಲಲಿತ ಕಲಾ ಪ್ರದರ್ಶನದಿಂದ ಒಟ್ಟು ಹತ್ತೊಂಭತ್ತು ಸಾವಿರ ರೂ ವರಮಾನ ಬಂದಿತೆಂದು ತಿಳಿದುಬಂದಿದೆ.

೧೦ ಕೋಟಿ ದೇವಾಲಯದಲ್ಲಿರುವ ನೇತಾಜಿ ಸುಭಾಸ್ ಚಂದ್ರ ಬೋಸರ ಅಸ್ಥಿಯನ್ನು ಪ್ರಧಾನಿ ನೆಹರೂರವರಿಗೆ ಒಪ್ಪಿಸಲು ಕೋರಿಯಿಂದ ಒಬ್ಬ ಬೌದ್ಧ ಭಿಕ್ಷುವು ಭಾರತಕ್ಕೆ ಹೊರಟಿರುತ್ತಾರೆ.

## ಧಾನ್ಯದ ಬೆಲೆ ಏರಿಕೆ ವಿರುದ್ಧ ಸಾಮೂಹಿಕ ಚಳುವಳಿ

**ಪ್ರಜಾ ಸೋಷಿಯಲಿಸ್ಟ್ ಪಕ್ಷದ ನಿರ್ಧಾರ**

ಬೆಂಗಳೂರು ೨

ಸಂಸ್ಥಾನದ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಇಲ್ಲಿ ಸೇರಿ ಸರ್ಕಾರದವರು ಧಾನ್ಯದ ಬೆಲೆಯನ್ನು ಹೆಚ್ಚಿಸಿರುವುದು, ಆಸ್ಪತ್ರೆಗಳಲ್ಲಿ ಶುಲ್ಕ ವಿಧಿಸಿರುವುದು ಮತ್ತು ಮಾರಾಟ ತೆರಿಗೆ ನೀತಿ ಇವುಗಳನ್ನು ಕುರಿತು ಪರಿಶೀಲನೆ ನಡೆಸಿ ಇವುಗಳಿಂದ ಜನರಿಗೆ ತುಂಬಾ ಕಷ್ಟವು ಸಂಭವಿಸಿರುವುದರಿಂದ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸಲಾಯಿತು. ಸರ್ಕಾರದವರು ಮೇಲ್ಕಂಡ ತಮ್ಮ ಧೋರಣೆಗಳನ್ನು ಬದಲಾಯಿಸದಿದ್ದರೆ ಬರುವ ತಿಂಗಳು ೧ನೇ ತಾರೀಖಿನಿಂದ ಸಂಸ್ಥಾನಾದ್ಯಂತ ಸಾಮೂಹಿಕ ಚಳುವಳಿಯನ್ನು ಹೂಡಲು ಸಹ ನಿರ್ಧರಿಸಲಾಯಿತು. ಶ್ರೀ ಬಿ. ಹುಚ್ಚೇಗೌಡರು ಸಭಾಧ್ಯಕ್ಷತೆ ವಹಿಸಿದ್ದರು.

**ಬೆಂಗಳೂರಿಗೆ ಡಾ॥ ನಗೇಂದ್ರರವರ ವರ್ಗ**

ಮೈಸೂರು. ಆಕಾಶವಾಣಿ ಸ್ಟೇಷನ್ ಡೈರೆಕ್ಟರಾಗಿರುವ ಡಾ॥ ಎ. ಎಂ. ನಗೇಂದ್ರರವರನ್ನು ದೆಹಲಿ ಕೇಂದ್ರದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಪ್ರೋಗ್ರಾಂಸ್ ಆಗಿ ವರ್ಗಾಯಿಸಲಾಗಿದೆ. ಅವರ ಸ್ಥಾನಕ್ಕೆ ಮದ್ರಾಸಿನ ಟಿ. ಶಂಕರರವರು ಬರುವರು.

**ಮಾರಾಟ ತೆರಿಗೆ ತೊಂದರೆ ಪರಿಶೀಲಿಸಲು ಸಮಿತಿ**

ಬೆಂಗಳೂರು ೨

ಸಂಸ್ಥಾನದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಶಿವಮೊಗ್ಗಕ್ಕೆ ಭೇಟಿಯಿತ್ತಾಗ ಅಲ್ಲಿನ ಅನೇಕ ವರ್ತಕರ ಸಂಘದವರು ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದ ಸಂದರ್ಭದಲ್ಲಿ ಸಚಿವರು ಉತ್ತರಿಸುತ್ತಾ ಈಗಿನ ಮಾರಾಟ ತೆರಿಗೆ ಕ್ರಮದಿಂದ ವರ್ತಕರಿಗೆ ಸಂಭವಿಸುವ ತೊಂದರೆಗಳನ್ನು ಪರಿಶೀಲಿಸಲು ಐದು ಜನರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಗುವುದೆಂದು ತಿಳಿಸಿದರು.

## ಕ್ಷಯ ರೋಗ ನಿವಾರಣಾ ಪ್ರಯತ್ನಗಳ ಅಗತ್ಯ

**ರಾಜಕುಮಾರಿ ಅಮೃತಕೌರ್‌ರವರ ಭಾಷಣ**

ಮೈಸೂರು ೨

ಈ ದಿನ ಬೆಳಗ್ಗೆ ಕ್ರಾಫರ್ಡ್ ಭವನದಲ್ಲಿ ಭಾರತದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ್‌ಕೌರರು ಕ್ಷಯ ರೋಗ ನಿವಾರಣಾ ಕಾರ್ಯಕರ್ತರ ೧೦ ನೇ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ದೇಶದ ಅನೇಕ ಭಾಗಗಳಿಂದ ಕಾರ್ಯಕರ್ತರುಗಳೂ, ಆರೋಗ್ಯಾಧಿಕಾರಿ ವರ್ಗದವರೂ ಬಂದಿದ್ದರು.

ಸಂಸ್ಥಾನದ ಆರೋಗ್ಯ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಸ್ವಾಗತ ಭಾಷಣ ಮಾಡಿ ನಮ್ಮ ದೇಶದಲ್ಲಿ ಕ್ಷಯ ರೋಗಕ್ಕೆ ಪ್ರತಿ ವರ್ಷವೂ ೫ ಲಕ್ಷಕ್ಕಿಂತ ಹೆಚ್ಚು ಜನರು ಬಲಿಯಾಗುತ್ತಿರುವರೆಂದೂ ಸುಮಾರು ೨೫ ಲಕ್ಷ ಜನರು ಈ ವ್ಯಾಧಿಯಿಂದ ನರಳುತ್ತಿರುವರೆಂದೂ ತಿಳಿಸಿ, ಇದರ ನಿವಾರಣೆಗೆ ಹೆಚ್ಚು ಹೆಚ್ಚಿನ ಕಾರ್ಯ ಕ್ರಮಗಳನ್ನು ವೈದ್ಯರು ಕೈಗೊಳ್ಳಬೇಕೆಂದು ಸೂಚಿಸಿದರು. ಮೈಸೂರು ಸಂಸ್ಥಾನದಲ್ಲಿ ಕ್ಷಯರೋಗ ನಿವಾರಣೆಗಾಗಿ ರಾಜಮನೆತನದವರೂ, ಸರ್ಕಾರದವರೂ ಮಾಡುತ್ತಿರುವ ಸಹಾಯವನ್ನು ವಿವರಿಸಿದರು.

ರಾಜಕುಮಾರಿಯವರು ತಮ್ಮ ಭಾಷಣದಲ್ಲಿ ಈ ವ್ಯಾಧಿಯು ಘೋರ ಸ್ವರೂಪ ಅದರ ಪರಿಮಾಣ ಮತ್ತು ಅದರಿಂದಾಗುವ ಅನರ್ಥಗಳನ್ನು ಗಮನಿಸಿ ಅದರ ನಿವಾರಣೆಗೆ ಅತ್ಯಂತ ಹೆಚ್ಚಿನ ಗಮನವನ್ನು ಕೊಡಬೇಕೆಂದು ಸೂಚಿಸಿದರು. ಅದನ್ನು ತಡೆಗಟ್ಟಲು ಬಿ. ಸಿ. ಜಿ. ವ್ಯಾಕ್ಸಿನೇಷನ್ ಕ್ರಮವು ಎಲ್ಲಾ ಕಡೆಯಲ್ಲೂ ಜಾರಿಗೆ ಬರುವತ್ತಿರುವುದಕ್ಕಾಗಿ ಸಮಾಧಾನವನ್ನು ವ್ಯಕ್ತಪಡಿಸಿದರು. ಈ ರೋಗವು ಬಾರದಂತೆ ತಡೆಗಟ್ಟಲು ಎಲ್ಲಾ ಜಾಗಗಳಿಗೆ ಸರ್ಕಾರದವರು ಪ್ರೋತ್ಸಾಹ ನೀಡಬೇಕೆಂದು ಅವರು ಸೂಚಿಸಿದರು.

ರೋಗಿಗಳ ಚಿಕಿತ್ಸೆಗಾಗಿ ಆಸ್ಪತ್ರೆಗಳನ್ನು ೧೯೫೬ರಲ್ಲಿ ೫ ಸಾವಿರ ಹಾಸಿಗೆಗಳಿದ್ದು ಈಗ ೧೩ ಸಾವಿರಕ್ಕೆ ಹೆಚ್ಚಿದೆ. ಇನ್ನು ೩ ವರ್ಷಗಳಲ್ಲಿ ಇದು ೫೦೦೦೦ ಆಗಬೇಕೆಂದು ಆಶಿಸಿದರು. ಪ್ರಾಂತಗಳ ಸಂಸ್ಥೆಗಳು ಮುಂದೆ ಬಂದು ಸಹಾಯ ಇದರಿಗೆ ಸೂಕ್ತವಾದ ಗಮನ ಕೊಡಬೇಕೆಂದು ಅವರು ಕೋರಿದರು.

ಈ ವ್ಯಾಧಿಯಿಂದ ಗುಣ ಹೊಂದಿ ಶರೀರ ಶ್ರಮದಿಂದ ಜೀವನವನ್ನು ನಡೆಸಲು ಸಮರ್ಥರಾಗದಿರುವವರಿಗಾಗಿ ಪ್ರತ್ಯೇಕ ವಸತಿಯನ್ನು ಕಲ್ಪಿಸಿ, ಅಲ್ಲಿ ಅವರಿಗೆ ಸುಲಭವಾದ ಉದ್ಯೋಗಗಳನ್ನು ಕೊಡಬೇಕೆಂದೂ ಹೇಳಿಸಿದರು ರೋಗಿಗಳಿಗೆ ಸಂಪೂರ್ಣವಾದ ವಿಶ್ರಾಂತಿ ಮತ್ತು ನಿಯಮಿತವಾದ ಆಹಾರ ವಿಹಾರಗಳನ್ನು ಕಲ್ಪಿಸಿ ಆ ಮೂಲಕವೇ ಅನೇಕರನ್ನು ಗುಣಪಡಿಸಬಹುದೆಂದು ಅಭಿಪ್ರಾಯಪಟ್ಟರು.

ಸಮ್ಮೇಳನದ ಅಧ್ಯಕ್ಷ ಡಾ॥ ಆರ್. ಬಿ. ಲಾಲ್‌ರವರು ಅನಾರೋಗ್ಯ ಪ್ರಯುಕ್ತ ಬರಲಿಲ್ಲವಾದುದರಿಂದ ಅವರ ಪರವಾಗಿ ಡಾ॥ ಎಸ್. ಸಿಂಗ್‌ರವರು ಅಧ್ಯಕ್ಷತೆಯನ್ನು ವಹಿಸಿ ಡಾ॥ ಲಾಲ್‌ರವರ ಭಾಷಣವನ್ನೂ ಪಠಿಸಿದರು.

## ಸಂಸ್ಥಾನದ ಪಂಡಿತರ ಸಮ್ಮೇಳನ

ನಂಜನಗೂಡು ೩೧

ಸಂಸ್ಥಾನದ ಪಂಡಿತರ ೧೭ನೇ ಸಮ್ಮೇಳನವು ಈ ತಿಂಗಳು ೧೫, ೧೬ ಮತ್ತು ೧೭ನೇ ತಾ|| ಇಲ್ಲಿ ಸೇರುವುದು. ಇದಕ್ಕಾಗಿ ರಚಿತವಾಗಿರುವ ಸ್ವಾಗತ ಸಮಿತಿಗೆ ಶ್ರೀ ಬಿ ವಿ ಪಂಡಿತರು ಅಧ್ಯಕ್ಷರಾಗಿರುವರು. ಶ್ರೀಗಳಾದ ಎ ಶಿವರ ಕೆಂಪಯ್ಯ, ಹೆಜ್ಜಿಗೆ ಲಿಂಗಣ್ಣ, ಎ ವಿ ಕೃಷ್ಣಯ್ಯರವರು ಉಪಾಧ್ಯಕ್ಷರಾಗಿರುವರು. ಶ್ರೀ ವಿ ಮಹದೇವಯ್ಯನವರು ಖಜಾಂಚಿಯಾಗಿಯೂ ಶ್ರೀಗಳಾದ ಎಸ್ ಎಂ ಪ್ರಭುಸ್ವಾಮಿ, ಎಂ ಕೃಷ್ಣಯ್ಯ ಮತ್ತು ಹೆಚ್ ಎಂ ವೀರಭದ್ರಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಸಮ್ಮೇಳನದಲ್ಲಿ ಉಪನ್ಯಾಸ ಮಾಡಲಿರುವವರು ೩ ದಿನಗಳ ಮುಂಚಿತವಾಗಿ ಲೇಖನಗಳನ್ನು ಸ್ವಾಗತ ಸಮಿತಿಯವರಿಗೆ ಕಳಹಿಸುವಂತೆ ಕೋರಲಾಗಿದೆ. ಸಮ್ಮೇಳನಕ್ಕಾಗಿ ಬೇಕಾಗುವ ಸಾವಿರ ರೂ ಗಳನ್ನು ಪಂಡಿತರೂ ಅಭಿಮಾನಿಗಳೂ ಉದಾರವಾಗಿ ಕೊಡಬೇಕೆಂದು ಕೋರಲಾಗಿದೆ. ಸಮ್ಮೇಳನಕ್ಕಾಗಿ ಬರುವವರಿಗೆ ಉಚಿತ ಭೋಜನ ಮತ್ತು ಸ್ಥಳ ಸೌಕರ್ಯವನ್ನು ಆಯಾ ಜನರ ಸಂಪ್ರದಾಯಗಳಿಗೆ ಅನುಸಾರವಾಗಿ ಏರ್ಪಡಿಸಲಾಗುವುದು. ಪ್ರತಿನಿಧಿಗಳಾಗುವವರು ಚಂದಾ ೧ ರೂ ಅನ್ನು ೧೨ನೇ ತಾ|| ನೊಳಗೆ ಕಳುಹಿಸಬೇಕು.

## ಮಹಿಳೆಯರಿಂದ ಹಣ ಉಳಿತಾಯದ ವಾರ

ಭಾರತ ಸರ್ಕಾರದ ಕೋರಿಕೆಯ ಪ್ರಕಾರ ಅಖಿಲ ಭಾರತ ಮಹಿಳಾ ಸಮ್ಮೇಳನ ಶ್ರೀ ಕೃಷ್ಣಣಿ ಹನ್ನಾಕೆನ್ನರು ಮಹಿಳೆಯರಲ್ಲಿ ಚಿಲ್ಲರೆ ಹಣದ ಉಳಿತಾಯದ ಚಳುವಳಿ ನಡೆಸಲು ಒಪ್ಪಿರುತ್ತಾರೆ. ಮಾರ್ಚಿ ತಿಂಗಳು ೧೫ ರಿಂದ ೨೧ ರ ವರೆಗೆ ಒಂದು ವಾರಾಚರಣೆಯನ್ನು ೧೫ ನಗರಗಳಲ್ಲಿ ಏರ್ಪಡಿಸಲಾಗುವುದು. ಬೆಂಗಳೂರಿನಲ್ಲೂ ಸಹ ಇದನ್ನು ನೆರವೇರಿಸಲಾಗುವುದು.

### ಫುಟ್‌ಬಾಲ್ ಪಂದ್ಯ

ರಾಜಧಾನಿಯಲ್ಲಿ ನೆನ್ನೆ ನಡೆದ ಸೌತ್ ಇಂಡಿಯಾ ಛಾಂಪಿಯನ್‌ಷಿಪ್ ಫುಟ್‌ಬಾಲ್ ಪಂದ್ಯದಲ್ಲಿ ಬೆಂಗಳೂರಿನ ಜೆ ಇ ಎಸ್ ಟೀಮಿನವರು ಮೈಸೂರಿನ ಯುವಕರ ಸಂಘದವರನ್ನು ೩-೦ ಗೋಲುಗಳಿಂದ ಸೋಲಿಸಿದರು.

## ಸಿಂಕಿಯಾಂಗ್ ಬಳಿ ಚೀಣಾರ ಅಣು ಬಾಂಬು ಕಾರ್ಖಾನೆ

ಚೀಣಕ್ಕೆ ಸೇರಿರುವ ಸಿಂಕಿಯಾಂಗ್ ನಗರದ ಬಳಿ ಚೀಣಾ ಸರ್ಕಾರದವರು ರಷ್ಯನರ ಸಹಾಯ ಪಡೆದು ಅಣುಬಾಂಬು ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಿರುತ್ತಾರೆ. ಅದು ನಿರ್ಮಾಣವಾಗಿರುವ ಸ್ಥಳಕ್ಕೆ ಪೀಸ್ ಗ್ರಾಡ್ (ಶಾಂತಿ ನಗರ) ಎಂದು ಹೆಸರಿಡಲಾಗಿದೆ.

## ಸತ್ತ ಗಿಳಿಗೆ ಸಂಸ್ಕಾರ

ಕಾನ್ಪುರದ ಗಿರಣಿಯೊಂದರ ಕೆಲಸಗಾರ ಕಿಶೋರ್ ಅವಸ್ಥಿ ಎಂಬುವನು ಸಾಕುತ್ತಿದ್ದ ವಿಟ್ಟು ಎಂಬ ೪೪ ವರ್ಷದ ಗಿಳಿಯು ಮೂರು ದಿನಗಳ ಹಿಂದೆ ಮೃತಪಟ್ಟಾಗ, ಅದಕ್ಕಾಗಿ ೭೦೦ ಜನರು ದುಃಖಪಟ್ಟರಿಂದಲೂ, ಗಿರಣಿ ಕೆಲಸಗಾರನು ಗಿಳಿಗೆ ಯಥಾವಿಧಿಯಾಗಿ ಅಂತ್ಯಕ್ರಿಯೆ ನಡೆಸಿ ಗಂಗಾ ನದಿಯಲ್ಲಿ ವಿಸರ್ಜನೆ ಮಾಡಿದನೆಂದು ತಿಳಿಸಲಾಗಿದೆ. ಹಿಂದಿ ಭಾಷೆಯನ್ನು ಚೆನ್ನಾಗಿ ಅರಿತಿದ್ದ ಆ ಗಿಳಿಯು ಯಜಮಾನನು ಮನೆಯಲ್ಲಿಲ್ಲದಿದ್ದಾಗ ಬಂದವರನ್ನು ಸ್ವಾಗತಿಸುತ್ತಿತ್ತು.

## ಹುಚ್ಚು ಹತ್ತಿದ ಮಾಜಿ ನ್ಯಾಯಾಧೀಶರ ಆರ್ಭಟ

ಬೊಂಬಾಯಿಯ ಸ್ಮಾಲ್ ಕಾಸ್ ಕೋರ್ಟಿನಲ್ಲಿ ಕಳೆದ ೨೯ನೇ ತಾ|| [illegible] ಎಂಬ ಮಾಜಿ ನ್ಯಾಯಾಧೀಶರೊಬ್ಬರು ಹುಚ್ಚು ಹಿಡಿದಂತಾಗಿ ಕೋರ್ಟಿನ ನ್ಯಾಯಾಧೀಶರನ್ನು ನಿಂದಿಸಿ, ಸಿಪಾಯಿಯ ಕೈಯನ್ನು ಕಡಿದು ಹತ್ತಿರದಲ್ಲೇ ಇದ್ದ ಪೋಲೀಸ್ ಅಧಿಕಾರಿಯ ಕುತ್ತಿಗೆ ಹಿಡಿದು ಕೊಲ್ಲುವುದರಲ್ಲಿದ್ದರೆಂದು ಹೇಳಲಾಗಿದೆ. ಆ ಮಾಜಿ ನ್ಯಾಯಾಧೀಶರನ್ನು ದಸ್ತಗಿರಿ ಮಾಡಲಾಗಿದೆ.

### ವಿದ್ಯುಚ್ಛಕ್ತಿ ನೀರಾವರಿಗಾಗಿ ಕೇಂದ್ರದಿಂದ ಸಹಾಯ

ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ನೀರಾವರಿ ಕೆಲಸಕ್ಕೆ ಹೆಚ್ಚು ಅವಕಾಶವಿರುವುದೆಂದು ಎಸ್ ವಿ ರಾಮಮೂರ್ತಿಯವರು ಕೇಂದ್ರ ಸರ್ಕಾರಕ್ಕೆ ತಿಳಿಸಿರುವರೆಂದೂ, ಆ ಮೂಲಕ ಸಂಸ್ಥಾನದಲ್ಲಿ ಹೆಚ್ಚು ಬೆಳೆ ಬೆಳೆಯಲು ೧ ಕೋಟಿ ರೂ ಗಳನ್ನು ಸಹಾಯ ಕೊಡಬೇಕೆಂದು ಮೈಸೂರು ಸರ್ಕಾರದವರು ಕೇಂದ್ರದವರನ್ನು ಕೇಳಿರುವರೆಂದೂ, ಈ ವರ್ಷದಲ್ಲಿ ೧೦ ಲಕ್ಷ ರೂ ಗಳನ್ನು ಅವರು ಒದಗಿಸಲಿರುವರೆಂದೂ ವರದಿಯಾಗಿದೆ.

## ಸಂಯುಕ್ತ ಮಹಾರಾಷ್ಟ್ರಕ್ಕಾಗಿ ಉಪವಾಸ

ಭಾರತದ ಹಿರಿಯ ಮುಂದಾಳುಗಳಾಗಿದ್ದ ಗೋಪಾಲ ಕೃಷ್ಣ ಗೋಖಲೆಯವರ ಸೋದರಳಿಯ ಎಸ್ ಜಿ ಗೋಖಲೆಯವರು ಕಳೆದ ೨೬ ನೇ ತಾ|| ರಿಂದ ಸಂಯುಕ್ತ ಮಹಾರಾಷ್ಟ್ರ ಸಂಸ್ಥಾನದ ಸ್ಥಾಪನೆಗಾಗಿ ಉಪವಾಸವನ್ನು ಕೈಗೊಂಡಿದ್ದಾರೆ. ಅವರಿಗೆ ೬೮ ವರ್ಷ ವಯಸ್ಸು. ಅವರು ಅಖಿಲ ಭಾರತ ಭಾಷಾವಾರು ಪ್ರಾಂತಗಳ ಸಮಿತಿ ಕಾರ್ಯದರ್ಶಿಯಾಗಿರುವರು. ತಮ್ಮ ಹಾಸಿಗೆ ಬಳಿ ಅವರು ಪೊಟ್ಟಿ ಶ್ರೀರಾಮುಲುರವರ ಭಾವಚಿತ್ರವನ್ನು ಇಟ್ಟುಕೊಂಡು, ಸಮರ್ಥ ರಾಮದಾಸರ ದಾಸಬೋಧೆಯ ೧೦೦ ಶ್ಲೋಕಗಳನ್ನು ಪಠಿಸುತ್ತಿರುವರು.

ಕರ್ನಾಟಕ ಸಂಸ್ಥಾನದ ಸ್ಥಾಪನೆಯಾಗಬೇಕೆಂದು ಬೇಡಿಕೆಯಿಟ್ಟು ಬೊಂಬಾಯಿ ಶಾಸನ ಸಭೆಯ ಸದಸ್ಯರಾದ ವಿ ವಿ ಪಾಟಿಲರು ೧೪ ದಿವಸಗಳ ಉಪವಾಸವನ್ನು ಕೈಗೊಂಡಿರುತ್ತಾರೆ. ಅವರಿಗೆ ೬೩ ವರ್ಷ ವಯಸ್ಸು.

## ಮಂತ್ರಿಯೊಬ್ಬರ ಚುನಾವಣೆ ರದ್ದು

ಪಾಟಿಯಾಲದ ಸಿವಿಲ್ ಸರಬರಾಜು ಮಂತ್ರಿ ಚೌಧರಿ ಚಕ್ತ್ರರ್ ಸಿಂಗರವರು ಅಲ್ಲಿನ ಶಾಸನ ಸಭೆಗೆ ಚುನಾಯಿತರಾಗಿರುವುದು ಕ್ರಮಬದ್ಧವಲ್ಲವೆಂದು ಸೂಚಿಸಿ ಚುನಾವಣಾ ನ್ಯಾಯಾಲಯದವರು ಅವರ ಚುನಾವಣೆಯನ್ನು ರದ್ದುಗೊಳಿಸಿರುವುದಲ್ಲದೆ ಇನ್ನು ೬ ವರ್ಷ ಕಾಲ ಅವರು ಚುನಾವಣೆಗೆ ನಿಲ್ಲಕೂಡದೆಂದು ನಿಷೇಧ ಮಾಡಿರುತ್ತಾರೆ.

## ರಾಜಕೀಯ ಘೋಷಣೆ ಇರುವ ನೋಟುಗಳು

ನೋಟುಗಳ ಮೇಲೆ ರಾಜಕೀಯ ಘೋಷಣೆಗಳನ್ನು ಬರೆದು ಅವುಗಳನ್ನು ಬದಲ ತೆಗೆದುಕೊಳ್ಳಕೂಡದೆಂದು ಭಾರತ ಸರ್ಕಾರದವರು ಎಚ್ಚರಿಕೆ ಇತ್ತಿರುವರು.

### ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಹೊಸ ಡೈರೆಕ್ಟರುಗಳು

ರಾಜಧಾನಿಯ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗೆ ನೆನ್ನೆ ನಡೆದ ಡೈರೆಕ್ಟರುಗಳ ಚುನಾವಣೆಯಲ್ಲಿ ಕೆಳಗೆ ಕಂಡ ೧೫ ಜನರು [illegible]ರುವರು — ಶ್ರೀಗಳಾದ-ಎಸ್ ಕೆ ಕುಮಾರಸ್ವಾಮಿ, ಕೆ ಸೀತಾರಾಮ್, ಎಸ್ ಸೀತಾರಾಮರಾವ್, ಡಾ|| ಎಲ್ ಎಸ್ ನಾರಾಯಣರಾವ್, ಎಂ ಪಿ ಮಹದೇವಸ್ವಾಮಿ, ಎಂ ಎಲ್ ರಾಮಚಂದ್ರಯ್ಯಂಗ್, ಬಿ ಆರ್ ನಾಯ್ಡು, ಟಿ ನಾರಾಯಣ, ಎಂ ಬಿ ಮಹದೇವಯ್ಯ, ಬಿ ಎಂ ಚಂದ್ರಶೇಖರಯ್ಯ (ವಕೀಲ), ಡಾ|| ಬಿ ಎಸ್ ಸತ್ಯನಾರಾಯಣರಾವ್, ಎಂ ಎಸ್ ಪುಟ್ಟಲಿಂಗು, ಡಾ|| ಎ ವಿ ರಂಗರಾವ್, ಎಲ್ ವೆಂಕಟನಾರಾಯಣಸ್ವಾಮಿ ಮತ್ತು ಬಿ ಎನ್ ತಾಂಡವಮೂರ್ತಿ.

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
407 ಸಯ್ಯಾಜಿರಾವ್ ರೋಡ್,
ಮೈಸೂರು

ಸ್ಟಾರ್ ಬ್ರಾಂಡ್
ಕುಕ್ಕಿಂಗ್ ಮೀಡಿಯಂ
ತಿಂಡಿ ಪದಾರ್ಥಗಳನ್ನು ತಯಾರಿಸಲು ಬಹಳ ಶ್ರೇಷ್ಠವಾದ
ಮೌಲ್ಯಂತ ತುಪ್ಪವನ್ನೇ ಯಾವಾಗಲೂ ಉಪಯೋಗಿಸಿರಿ
— ಬೆಲೆ —

| | | | | | | |
|---|---|---|---|---|---|---|
| 48 | ಪೌಂಡು | ಗ್ರಾಸ್ | ರೂ | 36 | 0 | 0 |
| 9 | | ನೆಟ್ | | 10 | 0 | 0 |
| 5 | | | | 5 | 12 | 0 |
| 2 | | | | 2 | 7 | 0 |
| 1 1/2 | | | | 2 | 0 | 0 |

ಪಿ ಸಿ. ಕಾಳಿಮುತ್ತು ಅಂಡ್ ಬ್ರದರ್ಸ್,
11 ಚಲುವಾಂಬಾ ಅಗ್ರಹಾರ ಮೈಸೂರು

ಹೊಳಪಿನ ಹಲ್ಲುಗಳಿಗೆ ಮತ್ತು ಆರೋಗ್ಯಕರವಾದ
ವಸಡಿಗೆ ಯಾವಾಗಲೂ
ಚೇತನ ಹಲ್ಲುಪುಡಿ ಯನ್ನೇ ಉಪಯೋಗಿಸಿರಿ
ಅತ್ಯುತ್ತಮವಾದ ವನಸ್ಪತಿಗಳಿಂದಲೇ ತಯಾರಿಸಿರುತ್ತೆ
ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ

ಪ್ರಭುದೇವಾ ಟಾಕೀಸ್
6-2-53 ನೇ : ಶುಕ್ರವಾರದಿಂದ



ಬದುಕುವ ಮಾರ್ಗ
(ತೆಲುಗು)
ಪಾತ್ರ - ನಾಗೇಶ್ವರರಾವ್, ರೇಲಂಗಿ, ಶ್ರೀರಂಜನಿ
ಎಸ್ ವಿ ರಂಗರಾವ್ ಮುಂತಾದವರು

Edited, Printed and Published by A R Nagarajan at Sadhvi Press, D Subbiah Road Mysore

ಲಗ್ನದ ಜವಳಿಗಳಿಗೆ
ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ
ಮೈಸೂರು ಸಿಲ್ಕ್, ಧರ್ಮಾವರಂ,
ಆರ್ಣಿ ನವೀನ ಮಾದರಿ [illegible]
(ಫೋನ್ ನಂ 446)
★ M. V. ಬೋಜಯ್ಯ
ಬಿ ಎ, ಇಂಡಿಯನ್ ಬ್ಯಾಂಕ್ ಎದುರು
ಮೈಸೂರು

ಫೋ: ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಮಂಗಳವಾರ ೩-೨-೧೯೫೩ [ ಸಂಚಿಕೆ ೧೫೪

# ಹೈದರಾಬಾದ್ ಮಂತ್ರಿ ಮಂಡಲದ ಪುನರ್ರಚನೆ

## ಮಕ್ಕಳ ಪುಸ್ತಕಗಳ ಪ್ರದರ್ಶನ

ಮೈಸೂರು ೩

ಜಯನಗರದ ಶಿಶುಸಾಹಿತ್ಯ ಸಮಿತಿ ಏರ್ಪಡಿಸಿರುವ ಐದನೇ ಪುಸ್ತಕ ಪ್ರದರ್ಶನವು ನಿನ್ನೆ ಸಂಜೆ ಹೈಸ್ಕೂಲಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ ಎಸ್ ಸ್ವಾಮಿಯವರು ಮಕ್ಕಳ ಪುಸ್ತಕಗಳ ಮತ್ತು ಸಾಮಾಜಿಕ ಕಾರ್ಯಕರ್ತರುಗಳ ಸಮ್ಮುಖದಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಮಕ್ಕಳ ಜ್ಞಾನಾಭಿವೃದ್ಧಿ ಮತ್ತು ಸರ್ವತೋಮುಖವಾದ ಬೆಳವಣಿಗೆಗೆ ಸಹಾಯವಾಗುವ ಅನೇಕ ಪುಸ್ತಕಗಳೂ ಇತರ ಸಾಮಗ್ರಿಗಳೂ ಪ್ರದರ್ಶನದಲ್ಲಿ ಇಡಲ್ಪಟ್ಟಿವೆ. ಇನ್ನು ಒಂದು ವಾರ ಕಾಲ ಈ ಪ್ರದರ್ಶನವನ್ನು ಬಾಲಕ ಬಾಲಕಿಯರೂ, ತಂದೆತಾಯಿಗಳೂ ಬಂದು ನೋಡಬಹುದು

ಬಾಲ ಎಂಬ ಬಾಲಕನಿಂದ ಸುಸ್ವರವಾಗಿ ಮಂಗಳಾಚರಣೆಯಾದನಂತರ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ ... ಸ್ವಾಮಿಯವರು ಅತಿಥಿಗಳನ್ನು ... ಮಕ್ಕಳ ಪುಸ್ತಕ ಪ್ರದರ್ಶನವು ... ಅಭಿವೃದ್ಧಿಯಾಗುತ್ತಿರುವ ... ಅಂಶವನ್ನು ತಿಳಿಸಿ ಮಾಡಿದರು ... ದೇಶದ ಸರ್ಕಾರ ಪ್ರಸಾರ ಸಂಸ್ಥೆ ... ಉಪಯುಕ್ತವಾದ ಹಲವು ಪುಸ್ತಕಗಳನ್ನು ಕೊಟ್ಟಿರುವುದಾಗಿಯೂ, ... ಚೀಣಾ ಮುಂತಾದ ಕಡೆಗಳಿಂದ ... ಶಿಶು ಸಾಹಿತ್ಯ ಗ್ರಂಥಗಳು ಪ್ರದರ್ಶನಕ್ಕೆ ಬಂದಿರುವುದಾಗಿಯೂ ತಿಳಿಸಿದರು.

ಶ್ರೀ ಎಸ್ ಜಿ ... ಅವರು ಇದುವರೆಗೆ ಬೇರೆ ಬೇರೆ ಕಡೆಗಳಲ್ಲಿ ನಡೆದಿರುವ ಪ್ರದರ್ಶನಗಳ ಪರಿಚಯವನ್ನು ಮಾಡಿಕೊಟ್ಟರು. ವಿವಿಧ ಸ್ಪರ್ಧೆಗಳಲ್ಲಿ ... ಬಹುಮಾನಗಳನ್ನು ... ಮಕ್ಕಳ ಪಟ್ಟಿಯನ್ನು ... ಓದಿದರು.

ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ಯರಿಂದ ಧನ್ಯವಾದಗಳಾದನಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಚಲನಚಿತ್ರದ ಪ್ರದರ್ಶನವು ನಡೆಯಿತು

ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದಿದ್ದ ಸಂದೇಶಗಳನ್ನು ಶ್ರೀಮತಿ ... ಕೃಷ್ಣಯ್ಯಂಗಾರ್ಯರು ಓದಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚಿನ ಗಮನ ಕೊಡಬೇಕಾದ ಅವಶ್ಯಕತೆಯನ್ನು ಎತ್ತಿ ಹೇಳಿದರು. ಸ್ವತಂತ್ರವಾದ ಮತ್ತು ಪ್ರೇಮಪೂರಿತವಾದ ವಾತಾವರಣದಲ್ಲಿ ಮಕ್ಕಳು ಬೆಳೆಯಬೇಕೆಂದೂ, ಭಯ ... ಅವುಗಳ ಬೆಳವಣಿಗೆಗೆ ... ಉಂಟಾಗಬಾರದೆಂದೂ ಅವರು ತಿಳಿಸಿದರು

## ಹೈದರಾಬಾದಿನ ಮಂತ್ರಿಗಳ ರಾಜೀನಾಮೆ

ಹೈದರಾಬಾದಿನ ಎಲ್ಲಾ ಸಚಿವರುಗಳು ತಮ್ಮ ರಾಜೀನಾಮೆಗಳನ್ನು ಮುಖ್ಯಮಂತ್ರಿ ಬೂರ್ಗುಲ ರಾಮಕೃಷ್ಣರಾಯರಿಗೆ ಕೊಟ್ಟಿದ್ದಾರೆ ... ಮಂತ್ರಿಮಂಡಲವನ್ನು ಪುನರ್ರಚಿಸಲು ಅವರಿಗೆ ಅವಕಾಶ ... ಇವರ ಉದ್ದೇಶ.

## ಕೊಡಗಿಗೆ ಎಂ.ವಿ ಕೃಷ್ಣಪ್ಪನವರ ಭೇಟಿ

### ಮೈಸೂರಿಗೆ ಹೆಚ್ಚು ಅಕ್ಕಿ ಒದಗಿಸಲು ಕೋರಿಕೆ

ಮೈಸೂರು ೩

ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಶಾಖೆಯ ಉಪ ಸಚಿವರಾದ ಶ್ರೀ ಎಂ ವಿ ಕೃಷ್ಣಪ್ಪನವರು ನಿನ್ನೆ ಮಡಿಕೇರಿಗೆ ಭೇಟಿಯಿತ್ತು ಅಲ್ಲಿ ವ್ಯವಸಾಯ ಸಲಹಾ ಸಮಿತಿಯ ಆರಂಭೋತ್ಸವವನ್ನು ನೆರವೇರಿಸಿದರು. ಮಡಿಕೇರಿ ಕಾಲೇಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಭಾಷಣ ಮಾಡಿದರು. ತರುವಾಯ ಜಪಾನ್ ಪದ್ಧತಿಯ ವ್ಯವಸಾಯ ಪದ್ಧತಿಯನ್ನು ಕುರಿತು ಚಿತ್ರಮತ್ತು ಪ್ರಾತ್ಯಕ್ಷಿಕೆ ನಡೆಸಿ ಕೊಡಗಿನ ಮೂರು ಕಡೆಗಳಲ್ಲೂ ರೈತರ ಸಭೆಯಲ್ಲಿ ಭಾಷಣ ಮಾಡಿದರು. ಅಲ್ಲಿನ ಸಚಿವರು ಮತ್ತು ಅಧಿಕಾರಿಗಳೊಡನೆ ಅಧಿಕ ಆಹಾರ ಬೆಳೆಯುವ ವಿಷಯವಾಗಿ ಚರ್ಚೆ ನಡೆಸಿದರು. ಮೈಸೂರಿಗೆ ಕೊಡಗಿನಿಂದ ಹೆಚ್ಚು ಅಕ್ಕಿಯನ್ನು ಸರಬರಾಜು ಮಾಡಬೇಕೆಂದೂ ಅವರು ಕೋರಲಾಗಿ ಆ ವಿಷಯವನ್ನು ಪರಿಶೀಲಿಸುವುದಾಗಿ ಅಲ್ಲಿನ ಅಧಿಕಾರಿಗಳು ಭರವಸೆಯಿತ್ತರು.

ನಿನ್ನೆ ಸಂಜೆ ಶ್ರೀ ಎಂ ವಿ ಕೃಷ್ಣಪ್ಪನವರು ರಾಜಧಾನಿಗೆ ಆಗಮಿಸಿ ಖಿಲಾರ್ ಪರಸ್ಪರ ಸಹಕಾರ ಸಂಘಕ್ಕೆ ಭೇಟಿಯಿತ್ತರು. ನಿನ್ನೆ ರಾತ್ರಿ ಅವರು ಬೆಂಗಳೂರಿಗೆ ತೆರಳಿದರು. ನಾಳೆ ದಹಲಿಗೆ ಪ್ರಯಾಣ ಮಾಡುವರು

## ಮೂರು ತಿಂಗಳಲ್ಲಿ ಭತ್ತದ ಕಂಟ್ರೋಲ್ ರದ್ದು?

ಇನ್ನು ಮೂರು ತಿಂಗಳುಗಳೊಳಗೆ ಭತ್ತದ ಮೇಲಿನ ಕಂಟ್ರೋಲನ್ನು ರದ್ದುಗೊಳಿಸುವುದಾಗಿ ಮುಖ್ಯ ಮಂತ್ರಿ ಶ್ರೀ|| ಕೆ ಹನುಮಂತಯ್ಯನವರು ತಿಳಿಸಿದ್ದಾರೆ

### ವಿದ್ಯುಚ್ಛಕ್ತಿ ಜೋಕಾ ನಿವಾರಣೆಗೆ ಪ್ರಯತ್ನ

ಶಿವನಸಮುದ್ರದ ಜಲವಿದ್ಯುತ್ ಸ್ಥಾವರದ ... ಸ್ಥಳಗಳಲ್ಲಿ ಪ್ರವಹಿಸುವ ವಿದ್ಯುಚ್ಛಕ್ತಿಯಲ್ಲಿ ಕಾಣಬರುತ್ತಿರುವ ಜೋಕಾವನ್ನು ... ದಿನದೊಳಗೆ ನಿವಾರಿಸಲು ವಿದ್ಯುತ್ ಇಲಾಖೆಯವರು ಪ್ರಯತ್ನಿಸುತ್ತಿರುವದಾಗಿ ಹೇಳಲಾಗಿದೆ

## ಚಿಯಾಂಗರ ರಾಯಭಾರಿಗೆ ಅಮೆರಿಕ ಸರ್ಕಾರದ ಆಹ್ವಾನ

... ಪ್ರದೇಶದ ... ಚೀಣಾ ... ಫಾರ್ಮೋಸಾ ದ್ವೀಪಕ್ಕೆ ... ಪ್ರತಿಬಂಧಕವನ್ನು ತೆಗೆದು ... ಪರಿಶೀಲಿಸ ... ಅಮೆರಿಕಾ ಸರ್ಕಾರದ ... ರಾಷ್ಟ್ರೀಯ ಚೀಣಾದ ರಾಯಭಾರಿ ವೆಲ್ಲಿಂಗ್ಟನ್ ಕೂ ಅವರನ್ನು ... ಆಹ್ವಾನಿಸಿದೆ ... ಪ್ರಧಾನ ಸೇನಾಪತಿ ... ಚಿಯಾಂಗ್ ಕೈಷೇಕರ ... ಅಧಿಕಾರಿಯಾಗಿದ್ದ ... ಫಾರ್ಮೋಸ ... ಭೇಟಿ ...

### ಸಾಯಿಬಾಬಾ ಮಂದಿರದ ವಾರ್ಷಿಕೋತ್ಸವ

ಮೈಸೂರಿನ ಅಶೋಕಾ ರಸ್ತೆಯಲ್ಲಿರುವ ತುಂಗಾ ಆದಪ್ಪಶೆಟ್ಟರ ಛತ್ರದಲ್ಲಿರುವ ಶ್ರೀ ಸಾಯಿ ಬಾಬಾ ಮಂದಿರದ ೮ನೇ ವಾರ್ಷಿಕೋತ್ಸವವು ನಿನ್ನೆಯಿಂದ ೯ನೇ ತಾ|| ವರೆಗೂ ನಡೆಯುವುದು. ದಿನವೂ ಬೆಳಿಗ್ಗೆ ಪೂಜಾದಿಗಳೂ ರಾತ್ರಿ ಭಜನೆ ಪ್ರಾರ್ಥನೆ ಮುಂತಾದುವೂ ನಡೆಯುವುವು. ನಾಳೆ ರಾತ್ರಿ ೯ ಗಂಟೆಗೆ ಶ್ರೀಮತಿ ... ಅವರು ... ಸಂಕೀರ್ತನೆ ಮಾಡುವರು. ೮ನೇ ತಾ|| ರಾತ್ರಿ ಬಾಬಾರವರ ಉತ್ಸವವು ಹಲವು ಬೀದಿಗಳಲ್ಲಿ ಕೊಂಡೊಯ್ಯಲಾಗುವುದು. ೯ನೇ ತಾ|| ರಾತ್ರಿ ೯ ಗಂಟೆಗೆ ಶ್ರೀ ಮುಳಬಾಗಿಲು ನಾರಾಯಣದಾಸರಿಂದ ನಾವಿಕ ಮೋಕ್ಷ ಎಂಬ ಹರಿಕಥೆಯೂ ಉಯ್ಯಾಲೋತ್ಸವವೂ ನಡೆಯುವುವು

### ಮೈಸೂರು ಜಿಲ್ಲೆಯ ಹಲವು ಕಡೆಗಳಲ್ಲಿ ವಿದ್ಯುಚ್ಛಕ್ತಿ ದೀಪಗಳ ನಿಯಂತ್ರಣ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ದಿನೇದಿನೇ ಇಳಿಯುತ್ತಿರುವುದರಿಂದಲೂ ಇದರಿಂದ ವಿದ್ಯುದುತ್ಪಾದನೆಗೆ ನೀರಿನ ಅಭಾವ ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಮೈಸೂರು ನಗರ ಮತ್ತು ಜಿಲ್ಲಾ ಗ್ರಾಮ ಪ್ರದೇಶಗಳಲ್ಲಿ ರಾತ್ರಿ ... ಕಾಲದಲ್ಲಿ ಮಾತ್ರ ರಸ್ತೆ ದೀಪಗಳನ್ನು ಹತ್ತಿಸುವದಾಗಿ ಇಲಾಖೆಯವರು ತಿಳಿಸಿದ್ದಾರೆ

## ಪಾನ ನಿರೋಧ ಕ್ರಮವನ್ನು ಈ ವರ್ಷ ವಿಸ್ತರಿಸುವುದಿಲ್ಲ

ಬೆಂಗಳೂರು ೩

ಪ್ರಸಕ್ತ ಸಾಲಿನಲ್ಲಿ ಪಾನ ನಿರೋಧ ಕ್ರಮವನ್ನು ಉಳಿದ ಜಿಲ್ಲೆಗಳಲ್ಲಿ ಸರ್ಕಾರದವರು ಜಾರಿಗೆ ತರುವುದಿಲ್ಲವೆಂದು ವರದಿಯಾಗಿದೆ. ಪಂಚವಾರ್ಷಿಕ ಯೋಜನೆಗೆ ಹಣವನ್ನು ಒದಗಿಸಬೇಕಾಗಿರುವುದರಿಂದಲೂ ಅತಿ ತೀವ್ರವಾಗಿರುವ ಆಹಾರ ಸಮಸ್ಯೆಯನ್ನು ಮೊದಲು ಪರಿಹರಿಸಬೇಕಾಗಿರುವುದರಿಂದಲೂ ಸರ್ಕಾರದವರು ತಮ್ಮ ಪರಿಣಾಮವನ್ನು ... ಮಾಡಿಕೊಳ್ಳಲು ಸಿದ್ಧವಾಗಿರುವುದಿಲ್ಲವೆಂದು ಹೇಳಲಾಗಿದೆ ... ಆಸ್ಪತ್ರೆ ... ಹೊಸ ... ಮೂಲಗಳನ್ನು ಕಂಡುಹಿಡಿದು ಆದಾಯವನ್ನು ಹೆಚ್ಚಿಸಬೇಕಾಗಿರುವುದು ಅವಶ್ಯಕವಾಗಿರುವುದೆಂದೂ ... ಹೇಳಲಾಗಿದೆ

## ಕಮ್ಯೂನಿಸ್ಟ್ ಚೀಣಾ ಮೇಲೆ ದ್ವಿತೀಯ ರಣರಂಗ

ಅಮೆರಿಕದ ಅಧ್ಯಕ್ಷರಾದ ಐಸೆನ್‌ಹೋವರರು ಫಾರ್ಮೋಸಾ ದ್ವೀಪವನ್ನು ರಕ್ಷಣೆ ಮಾಡುವುದು ಮತ್ತು ಆ ದ್ವೀಪದಿಂದ ಕಮ್ಯೂನಿಸ್ಟ್ ಚೀಣದ ಮೇಲೆ ಧಾಳಿಯಾಗದಂತೆ ಮಾಡುವುದು ಈ ಎರಡು ಕೆಲಸಗಳಿಗಾಗಿ ನಿಯೋಜಿಸಲಾಗಿದ್ದ ಅಮೆರಿಕದ ೭ನೇ ನೌಕಾ ಪಡೆಯನ್ನು ವಾಪಸು ಕರೆಸುವುದಾಗಿ ಕಾಂಗ್ರೆಸ್ ಸಭೆಗಳಿಗೆ ಸಂದೇಶವನ್ನು ಕಳುಹಿಸಿದ್ದಾರೆ. ಇದರಿಂದ ಫಾರ್ಮೋಸಾ ದ್ವೀಪದಲ್ಲಿರುವ ೫ ಲಕ್ಷ ರಾಷ್ಟ್ರೀಯ ಚೀಣಾ ಕಮ್ಯೂನಿಸ್ಟ್ ಚೀಣದ ಮೇಲೆ ಧಾಳಿ ಮಾಡಲು ಅವಕಾಶವಾಗಿ ಕೆಂಪು ಚೀಣಾ ದ್ವಿತೀಯ ರಣರಂಗದಲ್ಲೂ ಕಾದಾಡಬೇಕಾಗುವ ಪರಿಸ್ಥಿತಿಯುಂಟಾಗಿರುವುದೆಂದು ವರದಿಯಾಗಿದೆ. ಈ ಹೊಸ ನೀತಿಯಿಂದ ಜಗತ್ತಿನಲ್ಲಿ ಆಕ್ರಮಣ ಮನೋಭಾವವು ಹೆಚ್ಚಿ ಶಾಂತಿಯು ಸ್ಥಾಪನೆಯಾಗುವುದೆಂದು ಐಸೆನ್‌ಹೋವರರ ಭಾವನೆಯಾಗಿದೆ

## ಜರ್ಮನ್ ಸಮುದ್ರ ಉಕ್ಕಿ ೭೫೦ ಮಂದಿ ಮರಣ

ಅಟ್ಲಾಂಟಿಕ್ ಸಾಗರಕ್ಕೆ ಸೇರಿದ ಜರ್ಮನ್ ಸಮುದ್ರವು ತೀವ್ರ ಮಾರುತದ ಪರಿಣಾಮವಾಗಿ ಉಕ್ಕಿ ಬ್ರಿಟನ್, ಹಾಲೆಂಡ್ ಮತ್ತು ಬೆಲ್ಜಿಯಂ ರಾಜ್ಯಗಳಿಗೆ ನುಗ್ಗಿದುದರಿಂದ ಮರಣದ ಸಂಖ್ಯೆಯು ೭೫೦ಕ್ಕೆ ಏರಿರುವುದಾಗಿಯೂ, ಇನ್ನೂ ಅನೇಕರ ಸಾವುನೋವುಗಳ ವಿವರವೂ ಪ್ರತಿ ಗಂಟೆಯೂ ಒದಗುತ್ತಿರುವುದಾಗಿಯೂ ಗೊತ್ತಾಗಿದೆ. ಹಾಲೆಂಡಿನಲ್ಲಿ ೫೦೦ ಮತ್ತು ಬ್ರಿಟನ್ನಿನಲ್ಲಿ ೨೫೦ ಜನರು ಮಡಿದಿರುವರು. ಭಾರಿ ಅಲೆಗಳಿಂದ ಅನೇಕ ಮನೆಗಳೂ ಆಸ್ತಿಪಾಸ್ತಿಗಳೂ ನಾಶವಾಗಿವೆ

## ಮದ್ರಾಸಿನಲ್ಲಿ ೫೧ ಜನ ಪೋಲೀಸರ ವಜಾ

ಮದ್ರಾಸಿನಲ್ಲಿ ಸಂಬಳಕ್ಕೆ ಬಹಿಷ್ಕಾರ ಹಾಕುವ ಚಳುವಳಿಯನ್ನು ನಡೆಸಿದ ಪೋಲೀಸರ ಸಂಘದ ಕಾರ್ಯಕಾರಿ ಸಮಿತಿಯ ೫೧ ಜನ ಸದಸ್ಯರನ್ನು ಸರ್ಕಾರದವರು ವಜಾ ಮಾಡಿದ್ದಾರೆ. ಸಂಘದಲ್ಲಿರುವ ಅವರುಗಳ ಮೇಲೆ ಈ ಆಪಾದನೆಗಳನ್ನು ಹೊರಿಸಲಾಗಿದೆ.

## ಮಾರಾಟ ತೆರಿಗೆಯ ಬಗ್ಗೆ ಪ್ರತಿಭಟನೆ

ಬೆಂಗಳೂರು ೩

ಸಂಸ್ಥಾನದಲ್ಲಿ ವರಮಾನ ತೆರಿಗೆ ಕೊಡುವ ವರ್ತಕರ ಸಂಘದ ಆಶ್ರಯದಲ್ಲಿ ನೆನ್ನೆ ಸಂಜೆ ಇಲ್ಲಿ ನಡೆದ ಸಭೆಯೊಂದರಲ್ಲಿ ಮಾರಾಟ ತೆರಿಗೆಯು ತಲೆಗಂದಾಯದಂತಿರುವುದೆಂದು ಟೀಕಿಸಿ, ಆ ಪದ್ಧತಿಯನ್ನು ತೀವ್ರವಾಗಿ ಖಂಡಿಸಲಾಯಿತು. ಹಲವು ಜನರು ಭಾಷಣ ಮಾಡಿ ಕಾಂಗ್ರೆಸ್ ಸರ್ಕಾರದಿಂದ ಪ್ರಜೆಗಳಿಗೆ ದಿನೇದಿನೇ ತೊಂದರೆಗಳು ಹೆಚ್ಚುತ್ತಲೇ ಇರುವುದೆಂದೂ ಅದನ್ನು ನಿವಾರಿಸಲು ಅದು ಅಸಮರ್ಥವಾಗಿರುವುದರಿಂದ ಅದನ್ನು ಉರುಳಿಸಲೇಬೇಕೆಂದೂ ತಿಳಿಸಿದರು. ಒಂದೇ ಘಟ್ಟದಲ್ಲಿ ಮಾರಾಟ ತೆರಿಗೆ ವಿಧಿಸುವುದು, ವ್ಯಾಪಾರ ತೆರಿಗೆ ವಿಧಿಸುವ ಮಿತಿಯನ್ನು ೭೫೦೦ ರೂ ಗಳಿಂದ ೩೦ ಸಾವಿರ ರೂ ಗಳಿಗೆ ಹೆಚ್ಚಿಸುವುದು, ವರ್ತಕರ ಲೆಕ್ಕಪತ್ರಗಳ ಆಧಾರದ ಮೇಲೆ ತೆರಿಗೆಯನ್ನು ವಿಧಿಸುವುದು, ತೆರಿಗೆ ಕೊಡದವರನ್ನು ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸುವ ಪದ್ಧತಿಯನ್ನು ತಪ್ಪಿಸುವುದು, ನಿತ್ಯ ಜೀವನದ ವಸ್ತುಗಳಿಗೆ ತೆರಿಗೆ ವಿನಾಯಿತಿ ಕೊಡುವುದು, ತೆರಿಗೆ ಕೊಡುವವರಿಗೆ ಸಿವಿಲ್ ಕೋರ್ಟಿಗೆ ಹೋಗಲು ಅವಕಾಶ ಕಲ್ಪಿಸುವುದು ಮತ್ತು ಮದರಾಸಿನಲ್ಲಿರುವಂತೆ ಇಲ್ಲೂ ಒಂದು ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್ಲನ್ನು ರಚಿಸುವುದು ಈ ನಿರ್ಣಯಗಳು ಅಂಗೀಕೃತವಾದುವು

## ತಿರುವಾಂಕೂರು ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಜಯ

ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ವಾಮ ಪಕ್ಷಕ್ಕೆ ಜಯ ದೊರೆತಿದ್ದ ತಿರುವಾಂಕೂರಿನ ಹಲವಾರು ಕಡೆಗಳಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮೂರರ ಎರಡು ಭಾಗದಷ್ಟು ಬಹುಮತ ಬಂದಿರುತ್ತದೆ. ಮಟ್ಟಾಂಚೇರಿ ಮತ್ತು ಎರ್ನಾಕುಲಂನಲ್ಲಿ ೩೩ ಸ್ಥಾನಗಳ ಪೈಕಿ ಕಾಂಗ್ರೆಸ್ಸಿನವರಿಗೆ ೨೮ ದೊರೆತಿವೆ. ಒಂದು ಕಡೆ ೧೬ ಸ್ಥಾನಗಳ ಪೈಕಿ ೧೪ ಜಾಗಗಳು ಕಾಂಗ್ರೆಸ್ಸಿಗೆ ಬಂದಿವೆ

## ಕಂಪು ಚೀಣಾ ಸಿಂಹಳಗಳಿಗೆ ವ್ಯಾಪಾರ ಒಪ್ಪಂದ

ಅಮೆರಿಕವು ಎಷ್ಟು ಪ್ರತಿಭಟಿಸಿದರೂ, ಅದನ್ನು ಕಡೆಗಣಿಸಿ ಸಿಂಹಳವು ಕಮ್ಯೂನಿಸ್ಟ್ ಚೀಣದೊಡನೆ ಎರಡು ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡು, ಹಲವಾರು ವರ್ಷ ಕಾಲ ಸಿಂಹಳದಲ್ಲಿ ಉತ್ಪನ್ನವಾಗುವ ಶೀಟ್ ರಬ್ಬರನ್ನು ಪೂರ್ಣವಾಗಿ ಚೀಣಕ್ಕೆ ಸರಬರಾಜು ಮಾಡುವುದಾಗಿ ಒಪ್ಪಿಕೊಂಡಿದೆ. ಇದರ ಪರಿಣಾಮವಾಗಿ ಅಮೆರಿಕದ [illegible] ಆಧಾರದ ನೆರವನ್ನು ಸಿಂಹಳಕ್ಕೆ ನಿಲ್ಲಿಸಲಾಗುವುದೆಂದು ಹೇಳಲಾಗಿದೆ

### ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಶ್ರೀ ಕೃಷ್ಣಾ ಪರಮೇಶ್ವರ ಸೊಸೈಟಿಯವರು ನಮಗೆ ಕಳುಹಿಸಿರುವ ಹೊಸ ವರ್ಷದ ಪಾಕೆಟ್ ಕ್ಯಾಲೆಂ

## ರಾಜಘಾಟಿನ ಬಳಿ ಒಂದು ವಾರದ ಸಮಾಧಿ

ಕನ್ನಡ ಪ್ರದೇಶಕ್ಕೆ ಸೇರಿದ [illegible] ವರ್ಷದ ಯೋಗಿ ಶ್ರೀ ನಾರಾಯಣ ಆಚಾರ್ಯ ಎಂಬುವರು ನೀರು ಮತ್ತು ಗಾಳಿ [illegible]ಗಳನ್ನು ಮಾತ್ರ ಸೇವಿಸಿ ಜೀವನ ಧಾರಣೆ ಮಾಡುವುದನ್ನು ಕಲಿತಿರುತ್ತಾರೆ. ಅವರು ದೆಹಲಿಯ ರಾಜಘಾಟಿನ ಬಳಿ ಕಳೆದ ೩೦ನೇ ತಾರೀಖು [illegible] ಗುಂಡಿಯನ್ನು ತೋಡಿ ಅದರಲ್ಲಿ ಸಮಾಧಿಸ್ಥರಾದರೆಂದೂ, ಈ ತಿಂಗಳ ೭ನೇ ತಾರೀಖು ಬೆಳಿಗ್ಗೆ [illegible] ಗಂಟೆಗೆ ಸಮಾಧಿಯಿಂದ ಹೊರಗೆ ಬರುವರೆಂದೂ ವರದಿಯಾಗಿದೆ. ಇಂಗ್ಲಿಷ್ ಭಾಷೆಯನ್ನು ಅವರು ಚೆನ್ನಾಗಿ ಮಾತನಾಡಬಲ್ಲರು. ರಜಾಕಾರರ ಗಲಾಟೆ ಕಾಲದಲ್ಲಿ ಅವರು ಹೈದರಾಬಾದನ್ನು ಬಿಟ್ಟು, ಜನತೆಯಲ್ಲಿ ಶಾಂತಿ ನೆಲೆಸುವಂತೆ ಮಾಡಲು ತಪಶ್ಚರ್ಯೆ ಮಾಡ[illegible] ನಿರ್ಧರಿಸಿದ್ದರೆಂದು ಹೇಳಲಾಗಿದೆ. ಕಳೆದ ೩ ತಿಂಗಳುಗಳಲ್ಲಿ ಪ್ರತಿ ದಿನವೂ ಅವರು [illegible] ಮತ್ತು ೧॥ ಸೇರು ಹಾಲನ್ನು ಮಾತ್ರ ಸೇವಿಸಿದ್ದರು

## ಟ್ರೂಮನ್ನರಿಗೆ ಹೊಸ ಹುದ್ದೆ

ಅಮೆರಿಕದ ಮಾಜಿ ಅಧ್ಯಕ್ಷ [illegible] ವರ್ಷಕ್ಕೆ ೭೫ ಸಾವಿರ ಡಾಲರುಗಳ ಹುದ್ದೆಯೊಂದನ್ನು ನ್ಯೂಯಾರ್ಕಿನ [illegible] ಗಳ ಪ್ರೊಫೆಸ[illegible] ಸಂಘದವರು ಕೊಡಲು ಮುಂದೆ ಬಂದಿರುತ್ತಾರೆ. ಅವರಿಗೆ ಟ್ರೂಮನ್ನರು [illegible] ಉತ್ತರವನ್ನು ಕೊಟ್ಟಿರುವುದಿಲ್ಲ

### ನಿಧನ

ರಾಜಧಾನಿಯ ಚಾಮುಂಡೇಶ್ವರಿ ನಾಟಕ ಕಂಪೆನಿಯ ಸುಪ್ರಸಿದ್ಧ ನಟರಾದ ಶ್ರೀ ಎಂ. ವಿ. ಶಿವಪ್ಪನವರ ಸಹೋದರರೂ, ಸುಪ್ರಸಿದ್ಧ ನಾಟಕ ಮತ್ತು ಸಿನಿಮಾ ನಟರಾದ ಶ್ರೀ ಸುಬ್ಬಯ್ಯನಾಯ್ಡುರವರ ಗುರುಗಳೂ ಆದ ಶ್ರೀ ಎಂ. ವಿ. ಮಾದಪ್ಪನವರು ಕಳೆದ ಶುಕ್ರವಾರ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ

## ಸಂಪಾದನೆಗಾಗಿ ಗಂಡಸು ವೇಷ ತಾಳಿದ ಹುಡುಗಿ

ತಿರುಚಿರಾಪಳ್ಳಿಯ ಒಬ್ಬ ಗುಮಾಸ್ತರ ಮಗಳಾದ ೧೩ ವರ್ಷದ ಬೃಹದಾಂಬಾಳ್ ಎಂಬ ಬಾಲೆ ತಂದೆಯ ಬಡತನದ ಬೇಗೆಯನ್ನು ನೋಡಿ ಸೈರಿಸಲಾರದೆ ತಾನು ದುಡಿದು ಸಂಪಾದನೆ ಮಾಡಿ ತಂದೆಗೆ ಸಹಾಯ ಮಾಡಲು ನಿರ್ಧರಿಸಿ, ಗಂಡಸಿನಂತೆ ತಲೆ ಕೂದಲನ್ನು ಕ್ರಾಪ್ ಮಾಡಿಸಿಕೊಂಡು, ಹುಡುಗರ ಉಡುಪುಗಳನ್ನು ಧರಿಸಿ, ಒಂದು ಹೋಟೆಲಿನ ಕೆಲಸಕ್ಕೆ ಸೇರಿದಳೆಂದೂ, ಕೆಲವು ದಿನಗಳಾನಂತರ ಅದನ್ನು ಬಿಟ್ಟು ಒಬ್ಬ ಮಿಠಾಯಿ ದಾರರಲ್ಲಿ ಅಡಿಗೆ ಕೆಲಸಕ್ಕೆ ಸೇರಿ ತಂದೆಗೆ ಹಣ ಕಳುಹಿಸುತ್ತಿದ್ದಳೆಂದೂ ಹೇಳಲಾಗಿದೆ. ಕಳೆದ ಏಕಾದಶಿ ದಿನ ಆಕೆ ನದಿಗೆ ಹೋದಾಗ ಅವಳ ಹಳೆಯ ಸಂಗಾತಿಯೊಬ್ಬಳು ಅವಳನ್ನು ಪತ್ತೆ ಹಚ್ಚಿ ಅವಳ ತಂದೆಗೆ ಸುದ್ದಿ ತಿಳಿಸಲಾಗಿ ಆತನು ಬಂದು ಮಗಳನ್ನು ಕರೆದುಕೊಂಡು ಹೋದನೆಂದು ವರದಿಯಾಗಿದೆ

## ದೆಹಲಿಯಲ್ಲಿ ಟೆಲಿವಿಷನ್ ಪ್ರಯೋಗ ಶಾಲೆ

ದೆಹಲಿಯಲ್ಲಿ ಒಂದು ಪರೀಕ್ಷಾರ್ಥ ಟೆಲಿವಿಷನ್ ಪ್ರಯೋಗ ಶಾಲೆಯನ್ನು ತೆರೆದು, ಅದು ಎಷ್ಟರ ಮಟ್ಟಿಗೆ ಪ್ರಯೋಜನವಾಗುವುದೆಂಬ ಬಗ್ಗೆ ಪರೀಕ್ಷೆ ನಡಸಲಾಗುವುದೆಂದು ಕೇಂದ್ರ ಸರ್ಕಾರದ ವಾರ್ತಾ ಸಚಿವ ಕೇಸ್ಕರರು ತಿಳಿಸಿರುವರು.

### ಚರ್ಚಾ ಸ್ಪರ್ಧೆ

ರಾಜಧಾನಿಯ [illegible] ವಿದ್ಯಾರ್ಥಿನಿ[illegible] ಸಂಘದ ಆಶ್ರಯದಲ್ಲಿ ನಾಳೆ ಸಂಜೆ [illegible] ಘಂಟೆಗೆ ನಿಲಯದ ಆವರಣದಲ್ಲಿ ಕನ್ನಡ ಚರ್ಚಾ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ನಗರ ನ್ಯಾಯಾಧೀಶರಾದ ಶ್ರೀ ಎಂ. ಡಿ. ಶಿವನಂ[illegible]ನವರು ಅಧ್ಯಕ್ಷತೆ ವಹಿಸುವರು


# ಸ್ಟಾರ್ ಬ್ರಾಂಡ್

### ಕುಕ್ಕಿಂಗ್ ಮೀಡಿಯಂ

ತಿಂಡಿ ಪದಾರ್ಥಗಳನ್ನು ತಯಾರಿಸಲು ಬಹಳ ಶ್ರೇಷ್ಠವಾದ ಮೇಲ್ದರ್ಜೆ ತುಪ್ಪವನ್ನೇ ಯಾವಾಗಲೂ ಉಪಯೋಗಿಸಿ

— ಬೆಲೆ —

| | | | |
|---|---|---|---|
| 48 | ಪೌಂಡು | ಗ್ರಾಸ್ | ರೂ 36 0 0 |
| 9 | ,, | ನೆಟ್ | 10 0 0 |
| 5 | | | [illegible] 12 0 |
| 2 | ,, | | [illegible] 7 0 |
| 1 1/2 | | | 2 0 0 |

ಸಿ. ವಿ. ಕಾಳಿಮುತ್ತು ಅಂಡ್ ಬ್ರದರ್ಸ್,

543 [illegible] ರಸ್ತೆ, ಮೈಸೂರು

ಹೊಳಪಿನ ಹಲ್ಲುಗಳಿಗೆ ಮತ್ತು ಆರೋಗ್ಯಕರವಾದ

ವಸಡಿಗೆ ಯಾವಾಗಲೂ

**ಚೇತನ ಹಲ್ಲುಪುಡಿ** ಯನ್ನೇ ಉಪಯೋಗಿಸಿರಿ

ಅತ್ಯುತ್ತಮವಾದ ವನಸ್ಪತಿಗಳಿಂದಲೇ ತಯಾರಿಸಿರುತ್ತೆ

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ


Edited, Printed and Published by A R Nagarajan

## ಮುಸ್ಲಿಮರಿಗೇ ಪಾಕಿಸ್ತಾನ ಅಧ್ಯಕ್ಷತೆ ಮೀಸಲಾಗಕೂಡದು

ಪಾಕಿಸ್ತಾನದ ಅವಾಮಿ ಮುಸ್ಲಿಂ ಲೀಗಿನ ನಾಯಕರಾದ ಎಚ್. ಎಸ್. ಸುಹ್ರವರ್ದಿಯವರು ಆ ದೇಶದ ರಾಷ್ಟ್ರಪತಿ ಸ್ಥಾನವನ್ನು ಮುಸ್ಲಿಮರಿಗೇ ಮೀಸಲಾಗಿಡುವುದು ಸರಿಯಲ್ಲವೆಂದೂ, ಇದರಿಂದ ಅನೇಕ ತೊಂದರೆಗಳು ಸಂಭವಿಸುವುವೆಂದೂ ಹೇಳಿರುವರು. ಪಾಕಿಸ್ತಾನದಲ್ಲಿ ಸಂಯುಕ್ತ ಚುನಾವಣಾ ಕ್ಷೇತ್ರಗಳನ್ನು ಏರ್ಪಡಿಸಬೇಕೆಂದೂ ಮತ್ತು ಶಾಸನ ಸಭೆಗಳಲ್ಲಿ ಸ್ಥಾನಗಳನ್ನು ಮೀಸಲಾಗಿಡಬಾರದೆಂದೂ ಅವರು ತಿಳಿಸಿರುವರು.

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆ ಪೈ | ರೂ ಆ ಪೈ |
|---|---|---|
| ಕಡಲೆಕಾಯಿ | [illegible] | [illegible] |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಹಲಸಂದೆ | [illegible] | [illegible] |
| ಅವರೆ | [illegible] | [illegible] |
| [illegible] | | |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| ಬೆಲ್ಲ | [illegible] | [illegible] |
| [illegible] | | |

[illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಸಂಗೀತ [illegible] ಗೀತೆಗಳು

## ಕಂಪಾಜಿಟರುಗಳು ಬೇಕಾಗಿದ್ದಾರೆ

ಸಿಲಿಂಡರ್ ಮಿಷನ್ನಿನಲ್ಲಿ ಪ್ರಿಂಟ್ ಮಾಡಬಲ್ಲ, ಅನುಭವವುಳ್ಳ ಕಂಪಾಜಿಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಕೆಳಗೆ ಕಂಡವರಲ್ಲಿ ವಿಚಾರಿಸಿ

ವ್ಯವಸ್ಥಾಪಕ

ಸಾಧ್ವಿ ಪತ್ರಿಕಾ ಕಛೇರಿ

ಮೈಸೂರು


## ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗಡಲೂರ್, ಉಬ್ಬಸ, [illegible] ಮತ್ತು (TONSIL) ಗಳಿಗೂ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು

ಫೋ೯ ನಂ 792 ॥ವಂದೇ ಮಾತರಂ॥ ಬಿಡಿಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧ ] ಬುಧವಾರ ೪-೩-೧೯೫೩ [ಸಂಚಿಕೆ ೧೩೩

## ಟಿ. ಸಿದ್ಧಲಿಂಗಯ್ಯನವರ ರಾಜೀನಾಮೆಯೇ?

ಬೆಂಗಳೂರು ೪

ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ಧಲಿಂಗಯ್ಯನವರು ನೆನ್ನೆ ಶಕ್ತಿ ... ಪ್ರತಿನಿಧಿಯೊಡನೆ ಮಾತನಾಡು ... ಮಂತ್ರಿ ಪದವಿಗೆ ತಾವು ರಾಜೀ... ನಾಮೆ ಕೊಡುವ ವಿಷಯವನ್ನು ಇನ್ನೂ ನಿರ್ಧರಿಸಿಲ್ಲವೆಂದೂ, ತಮ್ಮ ಸ್ನೇಹಿತ ... ರೊಡನೆ ಈ ವಿಷಯವಾಗಿ ಚರ್ಚೆ ನಡೆ ... ಸುವುದಾಗಿಯೂ ತಿಳಿಸಿದರು ... ರವರು ತಾವು ಮಂತ್ರಿಯಾಗಿರುವ ... ತ್ತ ಮತ್ತು ಸಾಗಿಸುವ ಬಗ್ಗೆ ಟೀಂ... ಬನ್ನು ಕರೆದು, ಸಚಿವರ ಸಹೋದರರಾ... ಸಿದ್ಧಬಸಪ್ಪನವರಿಗೆ ಇತರ ಟೆಂ... ದಾರರಿಗಿಂತ ಹೆಚ್ಚಿನ ಸೌಲಭ್ಯಗಳಿಗೆ ... ವನ್ನು ಕೊಡಲಾಯಿತೆಂದು ಶಾಸ... ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ... ಪಣಗಳನ್ನು ಮಾಡಲಾಗಿದ್ದಿತೆಂ... ಇವರು ರಾಜೀನಾಮೆ ಕೊಡದಿದ... ತ ಮಂತ್ರಿಮಂಡಲದ ಸದಸ್ಯರು ಪ್ರ... ಸುತ್ತಿರುವುದಾಗಿಯೂ ಹೇಳಲಾ... ದೆ

### ಸಂಸ್ಥಾನದ ವೈದ್ಯರ ಸಮ್ಮೇಳನ

... ಸೂರು ಸಂಸ್ಥಾನದ ವೈದ್ಯರ ಸ... ಳನವು ಇದೇ ... ಮತ್ತು ... ನೇ ... ಬೆಂಗಳೂರಿನಲ್ಲಿ ಸೇರುವುದು ಭಾ... ಮೆಡಿಕಲ್ ಅಸೋಸಿಯೇಷನ್ನಿನ ... ನಾದ ಡಾ॥ ಬಿ ವಿ ಮುಕಳಿಯವ ... ರಂಭೋತ್ಸವವನ್ನು ನೆರವೇರಿಸು ... ಡಾ। ಬಿ ಆರ್ ರಾಮಲಿಂಗ ... ಅವರು ಅಧ್ಯಕ್ಷತೆ ವಹಿಸುವರು

### ಯೂರೋಪಿನಲ್ಲಿ ಮರಣ ಸಂಖ್ಯೆ ೧೫೦೦ಕ್ಕೆ ಏರಿತು

... ರ್ತ್ ಸಮುದ್ರದಲ್ಲಿ ಪ್ರವಾಹ ... ಹೋಯಿಯನೇಲೆ ನುಗ್ಗಿದ ಪರಿ ... ವಾಗಿ ಯೂರೋಪಿನ ಹಲವು ರಾ... ಒಟ್ಟು ೧೫೦೦ ಮಂದಿ ಮೃ... ಏರಿದ್ದಾರೆಂದು ಹೇಳಲಾಗಿದೆ ಬ್ರಿಟ... ಹಾಲೆಂಡುಗಳಲ್ಲಿ ೨೫ ಸಾವಿರ ... ಎನೆ ವ ಕಳೆದುಕೊಂಡಿದ್ದಾರೆ

### ಸಬ್ ಇನ್‌ಸ್ಪೆಕ್ಟರ ಮೇಲೆ ಕಾನ್‌ಸ್ಟೇಬಲನ ಗುಂಡು

... ಕೋಟೆಯ ಮಹೇರಿ ಎಂಬ ಪೊ... ಠಾಣೆಯಲ್ಲಿ ಕಾನ್‌ಸ್ಟೇಬಲನೊಬ್ಬ ... ಇನ್‌ಸ್ಪೆಕ್ಟರರಾದ ಕೆ ಕೆ ಅಯ್ಯ... ಗ ... ರನ್ನು ಮೊನ್ನೆ ಬಂದೂಕಿ... ನಿಂದ ಹೊಡೆದನೆಂದೂ ಅದರ ... ಪರಿಣಾಮವಾಗಿ ಅವರಿಗೆ ಗಾಯವಾಗಿ ... ಪತ್ರೆಗೆ ಸೇರಿಸಲ್ಪಟ್ಟರೆಂದೂ ಗೊತ್ತಾ... ಗಿದೆ ಕಾನ್‌ಸ್ಟೇಬಲನನ್ನು ವಶಕ್ಕೆಗಿಗ ಮಾ... ಡಲಾಗಿದೆ

### ನಾಲ್ಕು ಕಾಲಿನ ಕೋಳಿಮರಿ

... ಸಾಗರದ ಒಬ್ಬರ ಮ... ನೆಯ ... ಕೋಳಿಯು ಹಾಕಿದ್ದ ಮೊಟ್ಟೆಗ... ಒಂದರಲ್ಲಿ ೪ ಕಾಲಿನ ಮರಿಯು ... ಸಿದೆಂದು ವರದಿಯಾಗಿದೆ ನೋಡ... ಕೊರಕ್ಕೆ ಬಂದ ಆರ್ಧಗಂಟೆಯ ... ಸತ್ತಿತೆಂದೂ ಅದನ್ನು ಬೆಂಗಿ... ಕಾಲೇಜಿನ ಪ್ರಯೋ... ಕಳುಹಿಸಲಾಗಿದೆಯೆಂದೂ ತಿಳಿ... ಗಿದೆ

# - ಅಮೆರಿಕಾ ನೀತಿಗೆ - ಚಿಯಾಂಗರ ಸ್ವಾಗತ

### ಮದ್ಯದ ಸೇವನೆಗೆ ರಹದಾರಿ

ಮಧ್ಯ ಪ್ರದೇಶ ಸರ್ಕಾರದವರು ಅ... ಲ್ಲಿನ ಬುಲ್ಡಾನಾ ಜಿಲ್ಲೆ ಮತ್ತು ಕಾಟ್... ಮುರ್ತಾ ತಹಸೀಲುಗಳಲ್ಲಿ ರಹದಾರಿ ಪಡೆದು ಮದ್ಯಪಾನಕ್ಕೆ ಅನುಮತಿಕೊಡುವ ವ್ಯವಸ್ಥೆಯನ್ನು ನೊನ್ನೆಯಿಂದ ಜಾರಿಗೆ ತಂದಿರುವರು ಅದರ ಪ್ರಕಾರ ನಾಡು ಮದ್ಯವನ್ನು ಸೇವಿಸುವ ರೂಢಿ ಯಿರುವ, ೨೫ ವರ್ಷಕ್ಕೆ ಮೇಲ್ಪಟ್ಟ ಜ... ನರಿಗೆ, ಅಲ್ಪ ಶುಲ್ಕವನ್ನು ತೆಗೆದುಕೊಂಡು ರಹದಾರಿಯನ್ನು ಕೊಡಲಾಗುವುದು ಅಂತಹವರು ತಿಂಗಳಿಗೆ ... ಸೀಸೆಗಿಂತ ಹೆಚ್ಚು ಮದ್ಯ ಸೇವಿಸಲಾಗದು ದಿನಕ್ಕೆ ಒಂದು ಸೀಸೆಯಂತೆ ಮಾತ್ರ ಕೊಳ್ಳಲು ಅವಕಾಶವಿರುವುದು ಮದ್ಯದ ಅಂಗಡಿಗಳನ್ನು ವಾರದಲ್ಲಿ ಮೂರು ದಿನ ಮಾತ್ರ ತೆರೆಯಲಾಗುವುದು. ಮತ್ತು ಅಂಗಡಿಗಳ ಆವರಣದಲ್ಲಿ ಮದ್ಯದ ಸೇವನೆಯನ್ನು ನಿಷೇಧಿಸಲಾಗಿದೆ

### ರಿಸರ್ವ್ ಬ್ಯಾಂಕಿನಲ್ಲಿ ೬೬ ಸಾವಿರ ರೂ. ಅಪಹಾರ

ಕಲ್ಕತ್ತೆಯ ರಿಸರ್ವ್ ಬ್ಯಾಂಕಿನಿಂದ ಕಳೆದ ೧ ನೇ ತಾ॥ ಮಿಲಿಟರಿ ಸಿಬ್ಬಂದಿಗಾಗಿ ಕೊಡಬೇಕಾಗಿದ್ದ ಸಂಬಳದ ನೊತ್ತ ೬೬ ಸಾವಿರ ರೂ ಗಳನ್ನು ಮಿಲಿಟರಿ ಇಲಾಖೆಯ ನೌಕರನು ತೆಗೆದುಕೊಂಡು ಎಣಿಸುತ್ತಿದ್ದಾಗ, ಒಬ್ಬ ಯುವಕನು ಹಠಾತ್ತನೆ ಬಂದು ನೋಟುಗಳ ಚೀಲವನ್ನು ಅಪಹರಿಸಿಕೊಂಡು ಓಡಿಹೋದನೆಂದು ವರದಿಯಾಗಿದೆ ಅಂದು ಬ್ಯಾಂಕಿನವರಿಗೂ ಸಂಬಳದ ದಿನವಾದುದರಿಂದ ಯುವಕನ ಬಗ್ಗೆ ಯಾರೂ ಹೆಚ್ಚು ಗಮನ ಕೊಡಲಿಲ್ಲವೆಂದು ಹೇಳಲಾಗಿದೆ

### ರೂ. ೧ ಕ್ಕೆ ೪ ಸೇರು ಹಾಲು

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರು ಕೃತಕ ಹಾಲನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ ಹಸು, ಎಮ್ಮೆಗಳ ಹಾಲಿನಲ್ಲಿರುವ ಗುಣಗಳು ಅದರಲ್ಲಿ ಕಂಡುಬರುತ್ತವೆ ೧ ಸೇರಿಗೆ ೩ ಆಣೆ ಬೆಲೆಯಂತೆ ಅದನ್ನು ಒದಗಿಸಬಹುದಾಗಿದೆ ಎಂದು ಹೇಳಲಾಗಿದೆ ಹಾಲನ್ನು ಹೆಚ್ಚಾಗಿ ತಯಾರಿಸಲು ಬೇಕಾದ ಯಂತ್ರ ಸಾಮಗ್ರಿಗಳನ್ನು ತರಲು ಸಂಶೋಧನಾಲಯದ ಡಾ॥ ವಿ ಸುಬ್ರಹ್ಮಣ್ಯನವರು ಇಂಗ್ಲೆಂಡಿಗೆ ತೆರಳುವರು

### ಅಮೆರಿಕಾ ನೀತಿ ಬಗ್ಗೆ ಚಿಯಾಂಗರ ಸಂತೋಷ

ಫಾರ್ಮೋಸಾ ದ್ವೀಪದಿಂದ ಚೀನಾ ಪ್ರದೇಶದ ಮೇಲೆ ಧಾಳಿ ಮಾಡಲು ಅವಕಾಶ ಕಲ್ಪಿಸಿ ಅಮೆರಿಕದ ಅಧ್ಯಕ್ಷ ಐಸೆನ್ ಹೋವರರು ಮಾಡಿರುವ ನಿರ್ಧಾರಕ್ಕಾಗಿ ರಾಷ್ಟ್ರೀಯ ಚೀನಾದ ಮುಖಂಡರಾದ ಮಾರ್ಷಲ್ ಚಿಯಾಂಗ್ ಕೈಷೇಕರು ಸಂತೋಷವನ್ನು ವ್ಯಕ್ತಪಡಿಸಿರುತ್ತಾರೆ ಪ್ರಪಂಚದಲ್ಲಿ ಕಮ್ಯೂನಿಸ್ಟರ ಆಕ್ರಮಣವನ್ನು ತಡೆಗಟ್ಟುವ ಕೆಲಸದಲ್ಲಿ ರಾಷ್ಟ್ರೀಯ ಚೀನಾವು ಭಾಗಿಗಳಾಗಿ, ತಮ್ಮ ನಾಡನ್ನು ಪುನಃ ಸ್ವಾಧೀನ ಪಡಿಸಿಕೊಳ್ಳುವ ಯೋಜನೆಯನ್ನು ಇಟ್ಟುಕೊಂಡಿರುವರೆಂದೂ, ಈ ಬಗ್ಗೆ ಇತರ ಯಾವ ರಾಷ್ಟ್ರಗಳಿಂದಲೂ ತಮಗೆ ಸೈನ್ಯ ಸಹಾಯವು ಬೇಕಾಗಿಲ್ಲವೆಂದೂ ಅವರು ತಿಳಿಸಿರುತ್ತಾರೆ ಕೆಂಪು ಚೀನಾದ ಮೇಲೆ ರಾಷ್ಟ್ರೀಯ ಚೀನಾದ ಧಾಳಿಯು ಇನ್ನು ಆರು ತಿಂಗಳಲ್ಲಿ ಆರಂಭವಾಗಬಹುದೆಂದು ಹೇಳಲಾಗಿದೆ ಇನ್ನು ಮುಂದೆ ಕಮ್ಯೂನಿಸ್ಟ್ ಚೀನಾದ ತೀರದಿಂದ ಅಟ್ಟಣಗಳಿಗೆ ಹೋಗುವ ಪರದೇಶಿ ನೌಕೆಗಳನ್ನು ರಾಷ್ಟ್ರೀಯ ಚೀನಾದವರು ತಡೆಗಟ್ಟುವರೆಂದೂ ಹೇಳಲಾಗುತ್ತಿದೆ

ಐಸೆನ್‌ಹೋವರರ, ಮೇಲ್ಕಂಡ ನಿರ್ಧಾರವನ್ನು ಕಳೆದ ಶುಕ್ರವಾರ ಬ್ರಿಟನ್ನಿಗೆ ತಿಳಿಸಲಾಗಿತ್ತೆಂದೂ, ಈ ಬಗ್ಗೆ ಬ್ರಿಟನ್ನು ಕಳವಳವನ್ನು ವ್ಯಕ್ತಪಡಿಸಿತ್ತೆಂದೂ ಅಲ್ಲಿನ ವಿದೇಶಾಂಗ ಮಂತ್ರಿ ಆ ಕೊ ... ನ ಹನ್ನರು ನೆನ್ನೆ ಕಾಮನ್ಸ್ ಸಭೆಯಲ್ಲಿ ತಿಳಿಸಿದರು

### ವಿಮಾನಗಳು ಢಿಕ್ಕಿಯಾಗಿ ೧೩ ಜನರ ಮರಣ

ಅಮೆರಿಕದ ಟೆಕ್ಸಾಸ್ ನಗರದ ಬಳಿ ಎರಡು ಜೆಟ್ ವಿಮಾನಗಳು ವೇಗದಿಂದ ಎದುರುಬದುರಾಗಿ ಬಂದು ಢಿಕ್ಕಿ ಹೊಡೆದ ಪರಿಣಾಮವಾಗಿ ಅವುಗಳಲ್ಲಿದ್ದ ೧೩ ಜನ ಸೈನ್ಯಾಧಿಕಾರ ವ್ಯಕ್ತಿಗಳು ಸತ್ತರು

○ ತುಮಕೂರಿನ ರಾಮಕೃಷ್ಣ ಹರ್ಷ ಸ್ಕೂಗೆ ಸೇರಿದ ಒಂದು ಒಬ್ಬಿಗೆ ಮೊನ್ನೆ ರಾತ್ರಿ ಅಲ್ಲಿನ ಬಸ್ ನಿಲ್ದಾಣದಲ್ಲಿ ಬೆಂಕಿಬಿದ್ದು ಸಂಪೂರ್ಣವಾಗಿ ಸುಟ್ಟು ಹೋಯಿತೆಂದು ವರದಿಯಾಗಿದೆ

### ಆಹಾರ ಸಂಶೋಧನೆಯಲ್ಲಿ ವಿಜ್ಞಾನಿಗಳ ಪಾತ್ರ

#### ಕೇಂದ್ರ ಸಚಿವ ಮಾಳವೀಯರ ಭಾಷಣ

ಮೈಸೂರು ೪

ಆಹಾರ ಕೈಗಾರಿಕೆಗಳಿಗೆ ವಿಜ್ಞಾನದ ಸಹಾಯವನ್ನು ನೀಡಲು ನಗರದ ಕೇಂದ್ರ ಆಹಾರ ಸಂಶೋಧನಾಲಯದವರು ಏರ್ಪಡಿಸಿರುವ ಮೂರನೇ ವಿಚಾರ ಗೋಷ್ಠಿಯ ಉದ್ಘಾಟನೆಯನ್ನು ನಡೆಸಿ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಶ್ರೀ ಕೇಶವದೇವ ಮಾಳವೀಯರವರು, ಈ ದಿನ ಸ್ವತಂತ್ರವಾದ ರಾಷ್ಟ್ರ ಅವಶ್ಯಕವಾದ ಸಂಶೋಧನೆಗಳಿಗೆ ವಿಜ್ಞಾನಿಗಳು ವಿಶೇಷ ಗಮನ ಕೊಡಬೇಕೆಂದು ಹೇಳಿದರು ಆಹಾರದ ಸಮಸ್ಯೆಯನ್ನು ಬಗೆಹರಿಸಲು ವಿಜ್ಞಾನ ಮೂಲಕ ಹಿಂದಿಗಿಂತ ಸಾಧ್ಯವೆಂದು ಅಭಿಪ್ರಾಯಪಟ್ಟರು ನಾವು ಹೊಸದಾಗಿ ಉಪಯೋಗಿಸಲ್ಪಡುತ್ತಿರುವ ಆಹಾರ ಪದಾರ್ಥಗಳ ಬಗ್ಗೆ ಜನರಲ್ಲಿ ಇರುವ ಪರಿಹಾಸ್ಯಭಾವನೆಯು ಇರಲಾಗದಾದರೂ ಪ್ರತಿದೇಶ ಅದಕ್ಕೆ ಸಂಪೂರ್ಣ ಸ್ವಾಗತವು ದೊರೆಯುವುದೆಂದು ಹೇಳಿದರು ವನಸ್ಪತಿ ಪ್ರಸ್ತದ ವಿರೋಧವಾಗಿ ಹರಡಿರುವ ದುರಭಿಪ್ರಾಯಗಳನ್ನು ಅವರು ಖಂಡಿಸಿ ಅದರಲ್ಲಿ ಯಾವ ದೋಷವೂ ಇಲ್ಲದೆ ನಿಜವಾಗಿಯೂ ದೇಹ ಪುಷ್ಟಿಗೆ ಸಹಾಯಕವಾದ ಸತ್ವವಿರುವುದೆಂದು ತಿಳಿಸಿದರು ಇನ್ನೂ ಹೆಚ್ಚಿನ ಪುಷ್ಟಿಯನ್ನು ಕೊಡುವಂತೆ ಮಾಡುವ ಬಗ್ಗೆ ವನಸ್ಪತಿ ಉದ್ಯಮಕ್ಕೆ ಪೌಷ್ಟಿಕಾಂಗವನ್ನು ಸೇರಿಸುವಂತೆ ಏರ್ಪಾಡುಮಾಡಿರುವ ಕಾರ್ಯವನ್ನು ಬರಲಿದೆಯೆಂದು ತಿಳಿಸಿದರು ಆಹಾರ ಕ್ರಮವನ್ನು ಸುಧಾರಿಸಿ ಹೆಚ್ಚು ಭಕ್ಷ್ಯವನ್ನು ಬೆಳೆಯಲು ಪ್ರಯೋಗ ನಡೆಸಬೇಕೆಂದು ಕೋರಿದರು ಈಗ ವ್ಯರ್ಥವಾಗುತ್ತಿರುವ ಆಹಾರದ ಭಾಗಗಳನ್ನು ಸಂಗ್ರಹಿಸಿ ಅವನ್ನು ಉಪಯುಕ್ತವಾದ ರೀತಿಯಲ್ಲಿ ಪರಿವರ್ತಿಸಿ ದೇಹಪುಷ್ಟಿಗೆ ಸಹಾಯಕವಾಗುವಂತೆ ವಿಜ್ಞಾನಿಗಳು ಮಾಡಬೇಕೆಂದು ಕೋರಿದರು

### ಸಂಗೀತ ಕಛೇರಿ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾಸದನದಲ್ಲಿ ಈ ರಾತ್ರಿ ೭ ಘಂಟೆಗೆ ಶ್ರೀ ಮತಿ ಚೊಕ್ಕಮ್ಮ ಮತ್ತು ಪಾರ್ಟಿಯವರಿಂದಲೂ ಮತ್ತು ನಾಳೆ ರಾತ್ರಿ ೭ ಕ್ಕೆ ಬೆಳಕವಾಡಿ ಸಹೋದರರಿಂದಲೂ ಸಂಗೀತವನ್ನು ಏರ್ಪಡಿಸಲಾಗಿದೆ

### ಕೈಗಾರಿಕಾ ನ್ಯಾಯಾಲಯಕ್ಕೆ ರೇಷ್ಮೆ ಕಾರ್ಮಿಕರ ಬೇಡಿಕೆ

ಶ್ರೀ ರಾಮಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಕೈಗಾರಿಕಾ ನ್ಯಾಯಾಲಯಕ್ಕೆ ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆಯ ಕಾರ್ಮಿಕರ ಸಂಘದ ೫ ಬೇಡಿಕೆಗಳನ್ನು ತೀರ್ಮಾನಕ್ಕಾಗಿ ಸರ್ಕಾರದವರು ಒಪ್ಪಿಸಿರುವರು ಸಂಘದ ಅಧ್ಯಕ್ಷ ಶ್ರೀ ಕೆ ಆರ್ ಪ್ರಸಾದ್ ಮತ್ತು ಮತ್ತೊಬ್ಬ ಕಾರ್ಮಿಕ ಶ್ರೀ ಷರೀಫ್ ಉದ್ದೀನರವರನ್ನು ವಜಾ ಮಾಡಿರುವುದು, ಕೆಲಸಗಾರರಿಗೆ ೮ ಗಂಟೆ ಬದಲು ದಿನಕ್ಕೆ ೮ ಗಂಟೆ ಕೆಲಸ ಕೊಡಿಸುವುದು, ಹಲವರು ಪಾಳ್ಯಗಳನ್ನು ತೆಗೆದು ಹಾಕಿಸುವುದು-ಇವೇ ಮುಂತಾದ ಬೇಡಿಕೆಗಳನ್ನು ನ್ಯಾಯಾಲಯದವರು ಇತ್ಯರ್ಥಪಡಿಸಬೇಕಾಗಿದೆ

○ ಕನ್ನಡ ಭಾಷೆಯಲ್ಲಿ ವಾರ್ತಾ ಮತ್ತು ಡಾಕ್ಯುಮೆಂಟರಿ ಚಲನಚಿತ್ರಗಳನ್ನು ತಯಾರಿಸಲು ಏರ್ಪಾಡಾಗಬೇಕೆಂದು ಮೈಸೂರು ಚಲನ ಚಿತ್ರ ಪ್ರೇಮಿಗಳ ಸಂಘದವರು ಕೇಂದ್ರ ವಾರ್ತಾ ಸಚಿವರಲ್ಲಿ ಮನವಿ ...

## ಗ್ರಾಮಾಭ್ಯುದಯ ಸಮಿತಿ ಅಧ್ಯಕ್ಷರ ಲಾಭದ ಹುದ್ದೆ

### ಹೈಕೋರ್ಟಿನಲ್ಲಿ ಗುಬ್ಬಿ ಪೌರ ಸಭಾ ಸದಸ್ಯರ ಚುನಾವಣೆ ರದ್ದು

ಬೆಂಗಳೂರು ೫

ತಾಲ್ಲೂಕು ಗ್ರಾಮಾಭ್ಯುದಯ ಸಮಿತಿಯ ಅಧ್ಯಕ್ಷರಾಗಿರುವುದು ಲಾಭದ ಹುದ್ದೆಯೆಂದು ಪರಿಗಣಿಸಿ ಇಲ್ಲಿನ ಹೈಕೋರ್ಟಿನವರು ಗುಬ್ಬಿಯ ಪೌರಸಭೆಗೆ ಆರಿಸಿ ಬಂದಿರುವ ಶ್ರೀ ಗಟ್ಟಿ ರೇವಣ್ಣನವರ ಚುನಾವಣೆಯನ್ನು ರದ್ದು ಮಾಡಿ, ಅವರ ಪ್ರತಿಸ್ಪರ್ಧಿ ಶ್ರೀ ಜಿ ಎಸ್ ... [illegible]

[illegible]

## ಮೈಸೂರು ಪೇಟೆ ಧಾರಣೆ

| | | |
|---|---|---|
| [illegible] | [illegible] | [illegible] |

## ಹೆಂಡತಿಯನ್ನಿರಿದು ಕರುಳು ಮಾಲೆ ಹಾಕಿಕೊಂಡ

ಕಳೆದ ಸೆಪ್ಟೆಂಬರ್ ೧ನೇ ತಾ|| ರಾತ್ರಿ ತನ್ನ ಹೆಂಡತಿಯನ್ನು ಇರಿದು ಸಾಯಿಸಿ, ಆಕೆಯ ಕರುಳನ್ನು ತೆಗೆದು ಕುತ್ತಿಗೆಗೆ ಮಾಲೆ ಹಾಕಿಕೊಂಡು ಕನ್ನಡಿಯಲ್ಲಿ ನೋಡಿಕೊಂಡ ... [illegible]

[illegible]

## ಕಂಪಾಜಿಟರುಗಳು ಬೇಕಾಗಿದ್ದಾರೆ

[illegible]

ಮ್ಯಾನೇಜರ್
ಸಾಧ್ವಿ ಪತ್ರಿಕಾ ಕಛೇರಿ
ಮೈಸೂರು

## ಯಾಲ್ಟಾ ಒಪ್ಪಂದದ ರದ್ದಿಗೆ ಅಮೆರಿಕದ ಪ್ರಯತ್ನ

[illegible]

## ದಕ್ಷಿಣ ಆಫ್ರಿಕದಲ್ಲಿ ಛಡಿ ಶಿಕ್ಷೆ ಕಾನೂನು

[illegible]

## ವಿವಾಹ ಮಹೋತ್ಸವಗಳು

[illegible]


SRI GAYATHRI TALKIES

From 6-2-53 For ... Paramount's

UNION STATION

Starring — William Holden, Nancy Olson and Barry Fitzgerald

Today Last Day

LADY IN THE IRON MASK

ಮೋತಿಲಾಲ್ ಟಾಕೀಸ್

6-2-53 ರಿಂದ ಪ್ರತಿ ದಿನ 3 ಆಟಗಳು

ಜಮಿನಿಯವರ ಹಿಂದಿ ಚಿತ್ರ

* ಚಂದ್ರಲೇಖ *

[illegible]

THE FIGHTING DEVIL DOGS


Edited Printed and Published by A. R. Nagaraja at Sadhvi Press, D Subbiah Road, Mysore


ಪ್ರಭಾ 6-2-53 ರಿಂದ

ಪ್ರತಿ ದಿನ 3 ಆಟಗಳು

[illegible]

ನನ್ನ ಮನೆ

[illegible]

ಪ್ರಭುದೇವಾ ಟಾಕೀಸ್ ★ 6—2—53 ನೇ ಶುಕ್ರವಾರದಿಂದ

ಬದುಕುವ ಮಾರ್ಗ

( ತೆಲುಗು )

[illegible]

ಫೋ: ನಂ 792 ||ವಂದೇ ಮಾತರಂ|| ಬಿಡಿಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧ ] ಶುಕ್ರವಾರ ೩-೨-೧೯೫೩ [ ಸಂಚಿಕೆ ೧೫೭

# – ಬ್ರಿಟಿಷ್ ಸರ್ಕಾರಕ್ಕೆ – ಈಜಿಪ್ಟಿನ ಎಚ್ಚರಿಕೆ

## ಟಿ. ಸಿದ್ಧಲಿಂಗಯ್ಯನವರ ರಾಜೀನಾಮೆ ಪ್ರಕರಣ

### ಕಾರಣವು ಪ್ರಬಲವಲ್ಲವೆಂದು ಮುಖ್ಯ ಮಂತ್ರಿಯವರ ಹೇಳಿಕೆ

ಸ್ವ ಸು ಫೋ] ಬೆಂಗಳೂರು ೬

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಂದಿನ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಸ್ಥಳೀಯ ಮಂತ್ರಿ ಶ್ರೀ ಟಿ. ಸಿದ್ಧಲಿಂಗಯ್ಯನವರ ತಮಗೆ ರಾಜೀನಾಮೆ ಪತ್ರವು ತಲುಪಿರುವುದೆಂದೂ, ಅದರಲ್ಲಿ ರಾಜೀನಾಮೆ ಬಗ್ಗೆ ಕೊಡಲಾಗಿರುವ ಕಾರಣವು ಪ್ರಬಲವಾದುದಲ್ಲವೆಂದೂ ತಿಳಿಸಿದರು. ಈ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ರವರೂ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಅವಶ್ಯ ಬಿದ್ದರೆ ಶಾಸನ ಸಭಾ ಕಾಂಗ್ರೆಸ್ ಪಕ್ಷ ಸದಸ್ಯರುಗಳ ಸಲಹೆಯನ್ನು ಕೇಳಿ ಮುಂದಿನ ವಾರದ ಹೊತ್ತಿಗೆ ನಿರ್ಧಾರವನ್ನು ತೆಗೆದುಕೊಳ್ಳುವುದಾಗಿಯೂ ಅವರು ಹೇಳಿದರು.

ಈ ಭಾ|| ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರಿಗೆ ಈ ರಾಜೀನಾಮೆ ವಿಷಯ ತಿಳಿಸಲಾಗಿದೆಯೆಂದು ಗೊತ್ತಾಗಿದೆ. ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡು ತ್ತಾ ಶ್ರೀ ಸಿದ್ಧಲಿಂಗಯ್ಯನವರು ಕಾಂಗ್ರೆಸ್ ಮುಖಂಡರ ಹಿತಕ್ಕಾಗಿ ತಾವು ರಾಜೀನಾಮೆಯನ್ನು ಸಲ್ಲಿಸಿರುವುದಾಗಿಯೂ ವಿಷಯಗಳನ್ನು ಮುಖ್ಯ ಮಂತ್ರಿಗಳೇ ತಿಳಿಸಬಹುದೆಂದೂ ತಿಳಿಸಿರುತ್ತಾರೆ.

### ಕಪ್ಪು ಫಿಲಂ ಕಾರ್ಖಾನೆ ಬಂದೋಬಸ್ತು

ಕೃಷ್ಣರಾಜಸಾಗರದಲ್ಲಿ ಸ್ಥಾಪಿಸಬೇಕೆಂದಿರುವ ಕಪ್ಪು ಫಿಲಂ ಕಾರ್ಖಾನೆಯ ೨ ಕೋಟಿ ರೂ ಬಂಡವಾಳದ ಮೈ ಸೂರು ಭಾಗವನ್ನು ಸಾರ್ವಜನಿಕರು ಕೊಡಲು ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಲಾಯಿತು

### ಅಮೆರಿಕಾ ಧ್ವಜವನ್ನು ಇಳಿಸಲಾಯಿತು

ಬೆಂಗಳೂರಿನಲ್ಲಿರುವ ಅಮೆರಿಕದ ಪುಸ್ತಕ ಭಂಡಾರದ ಮುಂದೆ ಹಾರಿಸಲಾಗುತ್ತಿದ್ದ ಧ್ವಜವನ್ನು ಕೇಂದ್ರ ಸರ್ಕಾರದವರ ಸೂಚನೆ ಪ್ರಕಾರ ಇಳಿಸಲಾಯಿತೆಂದು ಸ್ಪ್ಯಾಗ್ ಸುದ್ದಿಯ ಸಂಸ್ಥೆಯ ತಿಳಿಸುತ್ತದೆ

### ಸೌರಾಷ್ಟ್ರ ತೆರಿಗೆ ವಿರುದ್ಧ ಚಳುವಳಿ ಮುಕ್ತಾಯ

ಸೌರಾಷ್ಟ್ರದಲ್ಲಿ ಮಾರಾಟ ತೆರಿಗೆ ವಿರುದ್ಧದ ಚಳುವಳಿಯು ಮುಕ್ತಾಯವಾಗಿರುವುದರಿಂದ, ಈ ಚಳುವಳಿ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದ ಸ್ಥಾನಬದ್ಧ ವ್ಯಕ್ತಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆಯೆಂದು ತಿಳಿದುಬಂದಿದೆ

### ಮಹದೇಶ್ವರ ಬೆಟ್ಟಕ್ಕೆ ಹೋಗುವ ಜನರಿಗೆ ಅನಾರೋಗ್ಯ ಭೀತಿ

ನಾಳೆ ಗಾಲದ ಬಳಿ ಇರುವ ಮಹದೇಶ್ವರ ಬೆಟ್ಟದ ಜಾತ್ರೆಯು ಇದೇ ೯ ನೇ ತಾ|| ನಿಂದ ೧೫ರ ವರೆಗೆ ನಡೆಯಲಿದೆ. ಆ ಪ್ರದೇಶದಲ್ಲಿ ಕಾಲರಾ ರೋಗವು ತಲೆದೋರುವ ಸಂಭವವಿರುವುದರಿಂದ ಅಲ್ಲಿಗೆ ಹೋಗುವವರು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಜಿಲ್ಲಾ ಮತ್ತು ಆಸ್ಪತ್ರೆಗಳಲ್ಲೂ, ಟ್ರಾವಲರ್ಸ್ ಬಂಗಲೆ, ಸಂತೇಮರಳ್ಳಿ ಮತ್ತು ಇತರ ಬಸ್ಸುಗಳಲ್ಲೂ ಇನಾಕ್ಯುಲೇಷನ್ ನಡೆಸಲು ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ

### ಹೊಸ ಮಾದರಿ ರೈಲು ಗಾಡಿ

ಬೆಂಗಳೂರು ೬

ಬೆಂಗಳೂರಿನ ವಿಮಾನ ಕಾರ್ಖಾನೆಯಲ್ಲಿ ತಯಾರಾಗಿದ್ದ ಮಾದರಿಯ ಹೊಸ ರೈಲುಗಾಡಿಯನ್ನು ಹೊಸ ರೀತಿಯಲ್ಲಿ ನಿರ್ಮಿಸಿ ದೆಹಲಿಗೆ ಕೇಂದ್ರ ಸರ್ಕಾರದ ಪರಿಶೀಲನೆಗೆ ಕಳಿಸಲಾಗಿದೆ. ಹೊಸ ಗಾಡಿಯಲ್ಲಿ ಮತ್ತಷ್ಟು ಅನುಕೂಲಗಳು, ವಿಶ್ರಾಂತಿ ಸ್ಥಳಗಳು ಮತ್ತು ಆರಾಮ ಸ್ಥಳಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಪ್ರತಿ ಕಂಪಾರ್ಟ್‌ಮೆಂಟಿನಲ್ಲೂ ಕನ್ನಡಿ, ಬೇಕಾದಾಗ ತೆಗೆಯಲು ಬೇಸಿನ್‌ಗಳನ್ನು ಇಡಲಾಗಿದೆ

#### ಎರಡಂತಸ್ತಿನ ಬಸ್ಸು

ಬೆಂಗಳೂರು ಟ್ರಾನ್ಸ್‌ಪೋರ್ಟ್ ಸಂಸ್ಥೆಯವರು ಹಿಂದೂಸ್ತಾನ್ ವಿಮಾನ ಕಾರ್ಖಾನೆಯವರಿಂದ ತಯಾರಾದ ಎರಡಂತಸ್ತಿನ (ಡಬ್ಬಲ್ ಡೆಕ್) ಎರಡು ಬಸ್‌ಗಳನ್ನು ಕೊಂಡಿದ್ದಾರೆ. ಈ ಬಸ್ಸುಗಳು ಇಷ್ಟರಲ್ಲೇ ಮೆಜೆಸ್ಟಿಕ್-ರಸೆಲ್ ಮಾರ್ಕೆಟ್ ರಸ್ತೆಯಲ್ಲಿ ಸಂಚರಿಸುವುವು. ಇವುಗಳಲ್ಲಿ ೧೦೦ ಜನಕ್ಕೆ ಸ್ಥಳಾವಕಾಶ ಕಲ್ಪಿಸಲಾಗಿದೆ [ಸ್ಪ್ಯಾಗ್ ನ್ಯೂಸ್]

### ಫಿಲಿಪೈನ್ ಕಮ್ಯೂನಿಸ್ಟರ ಮೇಲೆ ಸರ್ಕಾರದ ಧಾಳಿ

ಫಿಲಿಪೈನ್ ದ್ವೀಪದ ಕಮ್ಯೂನಿಸ್ಟರೊಡನೆ ನಡೆಯುತ್ತಿದ್ದ ಮಾತುಕತೆಗಳು ಮುರಿದುಬಿದ್ದುದರಿಂದ ಅಲ್ಲಿನ ಸರ್ಕಾರದ ಸೈನ್ಯ ತಂಡಗಳು ಕಮ್ಯೂನಿಸ್ಟ್ ದಂಗೆಕಾರರ ಮೇಲೆ ಧಾಳಿಯನ್ನು ಆರಂಭಿಸಿವೆ

#### ಉಪನ್ಯಾಸ

ನಾಳೆ ಸಂಜೆ ೫ ಘಂಟೆಗೆ ನಂಜನಗೂಡು ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಮದ್ರಾಸ್ ವಿಶ್ವ ವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ|| ವಿ. ರಾಘವನ್‌ರವರು ಭಾರತೀ ಮಂದಿರದ ಆಶ್ರಯದಲ್ಲಿ ಉಪನ್ಯಾಸ ಮಾಡುವರು.

#### ಹರಿಕಥೆ

ರಾಜಧಾನಿಯ ಶ್ರೀ ಚಾಮರಾಜೇಂದ್ರ ಕರಕುಶಲ ಬೋರ್ಡಿಂಗ್ ಶಾಲೆಯಲ್ಲಿ ನಾಳೆ ಸಂಜೆ ೬|| ಗಂಟೆಗೆ ಕುರ್ತಕೋಟಿ ಕೀರ್ತನ ಕೇಸರಿ ಬ್ರಂ|| ಶ್ರೀ ಶ್ರೀಪಾದ ಶಾಸ್ತ್ರಿಗಳವರಿಂದ ಸುಭದ್ರಾ ಕಲ್ಯಾಣ ಎಂಬ ಹರಿಕಥೆಯು ಏರ್ಪಾಡಾಗಿದೆ

### ಅಬ್ದುಲ್ ಗಫಾರ್ ಖಾನರ ಬಿಡುಗಡೆಗೆ ಸಮ್ಮತಿಯೇ?

ಗಡಿನಾಡಿನ ಖಾನ್ ಅಬ್ದುಲ್ ಗಫಾರ್ ಖಾನರನ್ನು ಬಂಧವಿಮುಕ್ತರನ್ನಾಗಿ ಮಾಡಲು ಪಾಕಿಸ್ಥಾನ ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ. ಹೈದರಾಬಾದಿನ ಕಾಂಗ್ರೆಸ್ ಅಧಿವೇಶನದಲ್ಲಿ ಅವರ ಬಿಡುಗಡೆ ಬಗ್ಗೆ ಒತ್ತಾಯ ಮಾಡಲಾಗಿದ್ದಿತು. ಹೈದರಾಬಾದಿನ ಮಾಜಿ ರಜಾಕಾರರ ನಾಯಕ ಖಾಸಿಂ ರಿಜ್ವಿಯವರನ್ನು ಬಿಡುಗಡೆ ಮಾಡಿದ ಪಕ್ಷದಲ್ಲಿ ಪಾಕಿಸ್ತಾನ ಸರ್ಕಾರದವರು ಭಾರತ ಸರ್ಕಾರವನ್ನು ಕೇಳಿರುವರೆಂದೂ, ರಿಜ್ವಿಯವರ ಬಿಡುಗಡೆಗೆ ಭಾರತ ಸರ್ಕಾರದವರೇ ಒಪ್ಪಬಹುದೆಂದೂ ಹೇಳಲಾಗಿದೆ

### ಸರ್ವೋದಯ ಸಮ್ಮೇಳನದ ಕಾರ್ಯಕ್ರಮ

ಶ್ರೀರಂಗಪಟ್ಟಣದ ಬಳಿ ಪಶ್ಚಿಮವಾಹಿನಿಯಲ್ಲಿ ಇದೇ ತಿಂಗಳು ೧೦, ೧೧ ಮತ್ತು ೧೨ನೇ ತಾ|| ಗಳಲ್ಲಿ ಸರ್ವೋದಯ ಸಮ್ಮೇಳನ ಮತ್ತು ಮೇಳಗಳು ನಡೆಯಲಿವೆ. ಮೈಸೂರಿನ ಹಿರಿಯ ಶಾಸನ ಸಭಾಸದಸ್ಯರೂ, ಸುಪ್ರಸಿದ್ಧ ಕನ್ನಡ ಸಾಹಿತಿಗಳೂ, ರಚನಾತ್ಮಕ ಕಾರ್ಯ ಪ್ರೇಮಿಗಳೂ ಆದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಸಮ್ಮೇಳನದ ಅಧ್ಯಕ್ಷರಾಗುವರು. ೧೦ನೇ ತಾ|| ಸಮ್ಮೇಳನದಲ್ಲಿ ಮೂಲಶಿಕ್ಷಣ, ಸಮಾಜ ಪುನರ್ರಚನೆ, ಗ್ರಾಮ ಕೈಗಾರಿಕೆ ವಿಷಯಗಳು ಚರ್ಚಿಸಲ್ಪಡುವುವು. ೧೧ನೇ ತಾ|| ಭೂದಾನ ಯಜ್ಞ ವಿಚಾರವಾಗಿ, ಆರ್ಥಿಕ ಸಮಾನತೆ, ಸಂಸ್ಥಾನದಲ್ಲಿ ಭೂದಾನ ಪ್ರಚಾರ ಮತ್ತು ಯಾತ್ರೆಯ ವಿಷಯಗಳೂ, ೧೨ನೇ ತಾ|| ಸರ್ವೋದಯ ಮೇಳದ ಅಂಗವಾಗಿ ಮೆರವಣಿಗೆ, ಸಾಮೂಹಿಕ ಸೂತ್ರಯಜ್ಞ, ಭಜನೆ ಗೀತಾ ವಾಚನ, ಸರ್ವೋದಯ ಸಾಹಿತ್ಯ ವಾಚನ ಮುಂತಾದುವು ನಡೆಯುವುವು.

ರಾಜಧಾನಿಯ ಹಿಂದೂಸ್ತಾನ್ ಟ್ರಾವಲರ್ಸ್ ಕಂಪೆನಿಯ ಮಾಲೀಕರಾದ ಶ್ರೀ ಎಲ್. ಗಣೇಶರಾಯರು ಇಟ್ಟಿಗೆಗೂಡಿನಲ್ಲಿರುವ ಶ್ರೀನಿವಾಸ ನಿಲಯ ಎಂಬ ತಮ್ಮ ಹೊಸ ಮನೆಯ ಗೃಹಪ್ರವೇಶೋತ್ಸವವನ್ನು ಮೊನ್ನೆ ನೆರವೇರಿಸಿದರು

## ವೈದ್ಯರುಗಳ ಸಮ್ಮೇಳನ

ಸ್ವಂ ಸು ಫೋ] ಬೆಂಗಳೂರು ೬

ಸಂಸ್ಥಾನ ವೈದ್ಯರ ಸಮ್ಮೇಳನವು ಇಂದು ಇಲ್ಲಿ ಡಾ|| ಬಿ ಆರ್ ರಾಮಲಿಂಗರೆಡ್ಡಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಡಾ|| ಛಾ|| ಪೈ ಮುರುಗರ ಸ್ವಾಗತದ ತರುವಾಯ ಡಾ|| ಮಹೇಶಯವರು ಪ್ರಾರಂಭೋತ್ಸವವನ್ನು ನೆರವೇರಿಸಿ, ವೈದ್ಯಕೀಯ ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ ಸರ್ಕಾರದ ನೀತಿಯನ್ನು ಉಗ್ರವಾಗಿ ಟೀಕಿಸಿದರು. ಭಾರತದಲ್ಲಿ ಈಗಿರುವ ನಾಲ್ಕೈದು ವೈದ್ಯ ಪದ್ಧತಿಗಳಲ್ಲಿ ಯಾವುದಕ್ಕೂ ಸರಿಯಾದ ಉತ್ತೇಜನವು ದೊರೆತಿಲ್ಲವೆಂದೂ ಅನಾದಿ ಕಾಲಗಳಿಂದ ಬಂದಿರುವ ಆಯುರ್ವೇದ ಪದ್ಧತಿಯ ಉತ್ತಮ ಅಂಶಗಳನ್ನು ಆಲೋಚಿಸುವವರು ಹರಿಶೀಲಿಸುವುದು ಅಗತ್ಯವೆಂದೂ ಅವರು ತಿಳಿಸಿದರು

### ವಿದ್ಯಾ ಮಂತ್ರಿಗಳ ಮೇಲಿನ ಅಪಾದನೆಗಳ ಖಂಡನೆ

ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯ ಗಂಧಕದ ವ್ಯಾಪಾರದ ಸಂಬಂಧದಲ್ಲಿ ೧ ಲಕ್ಷ ೬೫ ಸಾವಿರ ರೂ ಗಳನ್ನು ಹೆಚ್ಚಾಗಿ ಕೊಟ್ಟಿರುವರೆಂಬ ಬಗ್ಗೆ ಹಲವು ಪತ್ರಿಕೆಗಳಲ್ಲಿ ಬಂದ ವರದಿಯನ್ನು ಪ್ರಸ್ತಾಪಿಸಿ ವಿದ್ಯಾ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂ (?)ನವರು ಸುದ್ದಿಯು ಆಧಾರ ರಹಿತವಾದುದೆಂದೂ, ವಿದ್ಯಾ ಮಂತ್ರಿಗಳಿಗೂ ಈ ವ್ಯಾಪಾರಕ್ಕೂ ಯಾವ ಸಂಬಂಧವೂ ಇಲ್ಲವೆಂದೂ, ಈಗಿನ ಮಂತ್ರಿವರ್ಗವು ಅಧಿಕಾರಕ್ಕೆ ಬರುವ ಮುಂಚೆಯೇ ವ್ಯಾಪಾರವು ನಡೆದಿತ್ತೆಂದೂ ಈ ಬಗ್ಗೆ ಕಂಪೆನಿಯವರ ಲೆಕ್ಕಾಚಾರದಿಂದ ಹೆಚ್ಚು ಹಣ ಕೊಟ್ಟ ಸತ್ಯವಾಗಿರುವ ಯಾವ ಅಂಶವೂ ವ್ಯಕ್ತಪಟ್ಟಿಲ್ಲವೆಂದೂ ಹೇಳಿದರು

### ಬ್ರಿಟಿಷ್ ಸೈನ್ಯ ಈಜಿಪ್ಟ್ ಬಿಡದಿದ್ದರೆ ರಕ್ತಪಾತ

ಬ್ರಿಟಿಷ್ ಸೈನ್ಯಗಳು ಈಜಿಪ್ಟನ್ನು ತ್ಯಜಿಸದಿದ್ದರೆ ಈಜಿಪ್ಟು ಬ್ರಿಟನ್ನಿನ ವಿರುದ್ಧವಾಗಿ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕಾಗುವುದೆಂದೂ, ಅದರಿಂದ ರಕ್ತಪಾತವಾಗಲೂ ಬಹುದೆಂದೂ ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್‌ರವರ ಸಲಹೆಗಾರರಾದ ಮೇಜರ್ ಸಲೆ ಸಲೇಮ್‌ರವರು ಎಚ್ಚರಿಸಿರುತ್ತಾರೆ. ಸಾಮ್ರಾಜ್ಯಶಾಹಿಗಳು ಈಜಿಪ್ಟನ್ನು ತ್ಯಜಿಸುವಂತೆ ತಾವು ಕೂಗುವುದಾಗಿಯೂ, ಅವರು ಹಾಗೆ ಮಾಡದಿದ್ದರೆ ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಅವರು ಹೇಳುತ್ತಾರೆ

### ಮಕ್ಕಳ ಹಾಲಿನ ನಿಧಿಗಾಗಿ ವಿವಿಧ ವಿನೋದಾವಳಿ

ರಾಜಧಾನಿಯ ಒಂಟಿಕೊಪ್ಪಲಿನ ಭಾರತೀ ಸ್ತ್ರೀ ಸಮಾಜದವರು ಏರ್ಪಡಿಸಿರುವ ಮಕ್ಕಳ ಹಾಲಿನ ನಿಧಿಯ ಸಹಾಯಾರ್ಥವಾಗಿ ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ. ಟಿಕೆಟ್ ಮೂಲಕ ಪ್ರವೇಶವಿದೆ. ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಿದೆ

## ಇಂಗ್ಲೆಂಡಿನ ಪೋಲೀಸನಿಂದ ರಾಣಿಯ ಕಾರಿಗೆ ತಡೆ

ಕಳೆದ ಭಾನುವಾರ ಬ್ರಿಟನ್ನಿನ ರಾಣಿ ಎಲಿಜಬೆತ್ ಮತ್ತು ಅವರ ಪತಿ ಎಡಿನ್‌ಬರ್ಗ್ ಡ್ಯೂಕರು ತೀರಪ್ರದೇಶದಲ್ಲಿ ಸಮುದ್ರದ ಅಲೆಗಳಿಂದ ಮುಳುಗಿದವರ ಸಂಸಾರದವರನ್ನು ಸಂತೈಸಲು ಹೋಗುತ್ತಿದ್ದಾಗ, ಅವರು ಯಾರೆಂಬುದನ್ನು ತಿಳಿಯದೇ ಒಬ್ಬ ಪೋಲೀಸನು ಅವರ ಕಾರನ್ನು ತಡೆದು ವಾಪಸು ಹೋಗುವಂತೆ ತಿಳಿಸಿದನೆಂದೂ, ಯಾರನ್ನೂ ಬಿಡಕೂಡದೆಂದು ತನಗೆ ಆಜ್ಞೆಯಾಗಿದೆಯೆಂದು ಅವನು ತಿಳಿಸಿದನೆಂದೂ ಹೇಳಲಾಗಿದೆ. ವಿಧಿಯಿಲ್ಲದೆ ಅವರ ಕಾರು ಮರಳಿತೆಂದು ಗೊತ್ತಾಗಿದೆ.

### ಶಿವಾಯನಮಃ ನಾಟಕದ ಬಗ್ಗೆ ನ್ಯಾಯಾಧೀಶರ ತೀರ್ಪು

ಮೈಸೂರು ... [illegible] ... ನ್ಯಾಯಾಧೀಶರ ... [illegible] ... ಬಗ್ಗೆ ಯಾವ ... [illegible] ... ಮಾಡಿರುತ್ತಾರೆ.


**SREE GANESHA TALKIES**

From 6-2-53 For 4 days only

Columbia's

**BRAVE WARRIOR**

(In Technicolor)

Starring — John Hall and Christine Larson

*A Sam Katzman Production*


## ಪಾರ್ಲಿಮೆಂಟು ಅಧಿವೇಶನ ಇರುವುದೆಂಬ ಚಿಹ್ನೆ

ಪಾರ್ಲಿಮೆಂಟಿನ ಸಭೆಗಳು ಸೇರುತ್ತಿರುವುದನ್ನು ಸೂಚಿಸುವ ಚಿಹ್ನೆಯನ್ನು ದೆಹಲಿಯಲ್ಲಿ ಏರ್ಪಡಿಸಲಾಗಿದೆ. ಪಾರ್ಲಿಮೆಂಟ್ ಭವನದ ಧ್ವಜಸ್ತಂಭದ ಮೇಲ್ಗಡೆ ಅದರ ಸುತ್ತಲೂ ತಿರುಗುವ ಒಂದು ಗಾಲಿಯನ್ನು ಜೋಡಿಸಿ ಅಧಿವೇಶನ ಕಾಲದಲ್ಲಿ ಮಾತ್ರ ಅದು ಸುತ್ತುವ ವ್ಯವಸ್ಥೆ ಮಾಡಲಾಗಿದೆ.

### ಪೋಲೀಸು ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ಸಮಾಲೋಚನೆ

ಪೋಲೀಸು ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸುವ ವಿಷಯವನ್ನು ಕುರಿತು ಮೊನ್ನೆ ಬೆಂಗಳೂರಿನಲ್ಲಿ ಗೃಹ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೋಲೀಸು ಅಧಿಕಾರಿಗಳ ಸಭೆ ಜರುಗಿತು. ಐ.ಜಿ.ಪಿ. ಶ್ರೀ ... ಬಿ. ರೆಡ್ಡಿಯವರೂ ... ಭಾಗವಹಿಸಿದ್ದರು.

### ಆಕಾಶವಾಣಿ ... ಕಾರ್ಯಕ್ರಮ

[illegible]


ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರ ಸುಲಾಲ್ & ಕೋ

ಔಷಧಿ ವ್ಯಾಪಾರಿಗಳು,

47 ಸಯ್ಯಾಜಿರಾವ್ ರೋಡ್

ಮೈಸೂರು


## ಸಮುದ್ರದ ಅಲೆಯ ಮೇಲೆ ಬ್ರಿಟನ್ನಿನ ಹೋರಾಟ

ಬ್ರಿಟನ್ನಿನ ಪೂರ್ವ ತೀರದಲ್ಲಿ ಸೈನಿಕರು ಮತ್ತು ಸ್ವಯಂ ಸೇವಕರು ಸಮುದ್ರದೊಡನೆ ಪ್ರಬಲವಾದ ಹೋರಾಟವನ್ನು ಪ್ರಾರಂಭಿಸಿ, ಪ್ರವಾಹದ ಅಲೆಗಳು ಬರದಂತೆ ತಡೆಯುವ ಪ್ರಯತ್ನದಲ್ಲಿ ಅನಂತ ಸಾಹಸಪಡುತ್ತಿರುವರು. ಬರುವ ೧೬ನೇ ತಾ|| ಅಗಾಧವಾದ ಅಲೆಗಳು ತೀರದ ಕಟ್ಟಡಗಳನ್ನು ಅಪ್ಪಳಿಸುವ ನಿರೀಕ್ಷೆಯಿರುವುದರಿಂದ ಅವರುಗಳು ಮುನ್ನೆಚ್ಚರಿಕೆ ಕ್ರಮವನ್ನು ಈಗಲೇ ನಡೆಸುತ್ತಿರುವರು.

### ಬೀಡಿ ಕೆಲಸಗಾರರ ಸಂಘ

ಬೆಂಗಳೂರಿನ ಸದಾಶಿವ್ ಪತ್ರಿಕೆಯ ಸಂಪಾದಕರಾದ ಶ್ರೀ ಸೈಯದ್ ಅಬ್ದುಲ್ ಹೈರವರು ಕಳೆದ ೨ನೇ ತಾ|| ಮಂಡಿ ಮೊಹಲ್ಲಾದಲ್ಲಿ ನಡೆದ ಬೀಡಿ ಕಾರ್ಮಿಕರುಗಳ ಸಂಘದ ಸದಸ್ಯರ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಕಾರ್ಮಿಕರು ತಮ್ಮ ಸಂಘವನ್ನು ಬಲಪಡಿಸುವಂತೆ ಅವರು ಸೂಚಿಸಿ ಮಾಲೀಕರು ಅವರ ... ನೆರವಿಗೆ ಬರುವ ಕಾಲ ಸನ್ನಿಹಿತವಾಗಿರುವುದೆಂದು ತಿಳಿಸಿದರು.

## ಮುಂದಿನ ವಾರ ವಾಂಛೂ ವರದಿಯ ಪ್ರಕಟಣೆ

ಆಂಧ್ರ ಪ್ರಾಂತದ ಸಂಬಂಧವಾಗಿ ಜಸ್ಟಿಸ್ ವಾಂಛೂರವರು ತಮ್ಮ ವರದಿಯನ್ನು ಸಿದ್ಧಗೊಳಿಸಿರುತ್ತಾರೆ. ಅದು ಮುಂದಿನ ವಾರ ಹೊರಡಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ.

### ಸತ್ಯ-ದಿನ ಪತ್ರಿಕೆ

ಬೆಂಗಳೂರು ನಗರದಲ್ಲಿ "ಸತ್ಯ" ಎಂಬ ಅಭಿಧಾನದಿಂದ ಕನ್ನಡ ದೈನಂದಿನ ಪತ್ರಿಕೆಯೊಂದು ಕಳೆದ ೩ನೇ ತಾ|| ನಿಂದ ಪ್ರಕಟವಾಗುತ್ತಿದೆ. ಸದರಿ ಪತ್ರಿಕೆಯಲ್ಲಿ ... ಸಮಾಚಾರಗಳೂ, ಸ್ಥಳೀಯ ಸುದ್ದಿಗಳೂ ಮತ್ತು ಇತರ ಲೇಖನಗಳೂ ಪ್ರಕಟವಾಗಿವೆ. ೩ ಮತ್ತು ೪ನೇ ತಾ|| ನ ಸಂಚಿಕೆಗಳು ನಮ್ಮ ಕೈ ಸೇರಿವೆ. ಸತ್ಯಕ್ಕಾಗಿಯೇ ಪತ್ರಿಕೆಯು ಮೀಸಲಾಗಿರುವುದೆಂದೂ, ಸಾಮಾನ್ಯ ಮನುಷ್ಯನ ಸೇವೆಗಾಗಿ ಮೀಸಲಾಗಿರುವುದೆಂದೂ ಸಂಪಾದಕರು ತಿಳಿಸುತ್ತಾರೆ. ಪತ್ರಿಕೆಯು ತನ್ನ ಅಭೀಷ್ಟವನ್ನು ಸಿದ್ಧಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿ ಕನ್ನಡ ನಾಡಿನ ಪತ್ರಿಕೆಗಳಲ್ಲಿ ಉನ್ನತ ಸ್ಥಾನವನ್ನು ಪಡೆಯಬೇಕೆಂದು ನಾವು ಹಾರೈಸುತ್ತೇವೆ. ಬಿಡಿ ಪ್ರತಿಗೆ ಬೆಲೆ ಒಂದು ಆಣೆ.


## ಅಬೀದ್‌ರವರ ಭಾರಿ ಹರಾಜು ಮಾರಾಟ

8-2-1953ನೇ ಭಾನುವಾರ ಬೆಳಗ್ಗೆ 10 ಗಂಟೆಗೆ

ಶೋ ರೂಮ್ ಬಳಿ

[illegible]

# ಚಾಮುಂಡೇಶ್ವರಿ ಟಾಕೀಸ್

7-2-53 ರಿಂದ ಜನೋತ್ಸವ 2 ನೇ ವಾರ

# * ಪ್ರಾಂಗೋದ್ಯೆ *

ಪಾತ್ರ — ಅಂಜಲಿ ನಾಗೇಶ್ವರರಾವ್, (ಸರಾಂಗಿ) ಗರ್ಣೇರ್ ವರಂತ

ಬೆಳಗಿನ ಪ್ರದರ್ಶನ ಶನಿವಾರ ಮತ್ತು ಭಾನುವಾರ

ಕಿಡ್ ಫ್ರಂ ಟೆಕ್ಸಾಸ್

# ಮೋತಿಲಾಲ್ ಟಾಕೀಸ್

6-2-53 ರಿಂದ ಪ್ರತಿ ದಿನ 3 ಆಟಗಳು

ಜೆಮಿನಿಯವರ ಹಿಂದಿ ಚಿತ್ರ * ಚಂದ್ರಲೇಖ *

ಪಾತ್ರ — ಎಂ. ಕೆ. ರಾಧಾ, ರಂಜನ್, ಟಿ. ಆರ್. ರಾಜಕುಮಾರಿ ಅಗ

ಬೆಳಗಿನ ಪ್ರದರ್ಶನ 5-2-53 ರಿಂದ

ಬೊಂಬಾಯಿನ ಚಿತ್ರಕಲಾವಿದನಾದ ಮೋಹನ್ ಲಾಲ್ ಬಾಲಿ ಎಂಬಾತನು ಚಿತ್ರಗಳನ್ನು ತಯಾರಿಸುವ ಕಾರ್ಯಕ್ಕಾಗಿ ತನ್ನ ಉಗುರನ್ನು ಆರು ಅಂಗುಲದಷ್ಟು ಉದ್ದವಾಗಿ ಬೆಳೆಸಿರುವನೆಂದೂ, ಇದನ್ನು ಬೆಳೆಸಲು ಅವನು ಬಹು ಎಚ್ಚರಿಕೆಯಿಂದಿದ್ದು ತಾನು ನಿದ್ರಿಸುವ ವೇಳೆಯಲ್ಲಿ ಉಗುರನ್ನು ಯಾರಾದರೂ ಕತ್ತರಿಸಿಬಿಡಬಹುದೆಂಬ ಶಂಕೆಯಿಂದ ಭದ್ರವಾದ ಬಾಗಿಲು ಹಾಕಲ್ಪಟ್ಟ ಒಂದು ಕೊಠಡಿಯಲ್ಲಿ ಒಬ್ಬನೇ ಮಲಗುತ್ತಿದ್ದನೆಂದೂ ಹೇಳಲಾಗಿದೆ. ಇಷ್ಟು ಉದ್ದದ ಉಗುರನ್ನು ಬೆಳೆಸಲು ಅವನಿಗೆ ೧೪ ವರ್ಷ ಕಾಲ ಹಿಡಿಯಿತೆಂದು ಗೊತ್ತಾಗಿದೆ

### ವಿಮಾನಾಪಘಾತದಲ್ಲಿ ೭ ಜನರ ಮರಣ

ಬರ್ಲಿನ್ನಿನ ಅರಣ್ಯ ಪ್ರದೇಶದ ಮೇಲೆ ಕಳೆದ ಮಂಗಳವಾರ ರಾತ್ರಿ [illegible] ನ ವಿಮಾನವೊಂದು ಆಸ್ಫೋಟಿಸಿ ಅದರಲ್ಲಿದ್ದ ಏಳು ಜನರು ಮೃತಪಟ್ಟರೆಂದು ವರದಿಯಾಗಿದೆ

### ಇಚ್ಛಾನುಸಾರ ಪ್ರಯಾಣದ ಟಿಕೆಟ್ಟಿಗೆ ೩೦ ರೂ.

ಬರುವ ಏಪ್ರಿಲ್ ತಿಂಗಳಿನಿಂದ ರಿಯಾಯಿತಿ ದರದ ಮೇಲೆ ಕೊಡಲಾಗುವ "ಇಚ್ಛಾನುಸಾರದ ಪ್ರಯಾಣದ" ಟಿಕೆಟ್ಟುಗಳ ಯೋಜನೆಯ ಪ್ರಕಾರ ೭ ಸಾವಿರ ಮೈಲಿಯ ಒಂದೊಂದು ಪ್ರಾದೇಶಿಕ ಕೇಂದ್ರಗಳನ್ನು ನಿರ್ಮಿಸಿ, ೩ನೇ ತರಗತಿಯ ಒಂದೊಂದು ಟಿಕೆಟ್ಟಿಗೆ ೩೦ ರೂ ನಂತೆ ಮಾಡಲಾಗುವುದೆಂದೂ ಇನ್ನು ಮುಂದೆಯೂ ಇತರ ವಿಶೇಷ ದಿನಗಳಲ್ಲೂ ಇಂತಹ ಟಿಕೆಟ್ಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗುವುದೆಂದು ಗೊತ್ತಾಗಿದೆ

### ಆಸ್ಫೋಟನೆಯಿಂದ ೫ ವಿದ್ಯಾರ್ಥಿಗಳ ಮರಣ

ದಕ್ಷಿಣ ಭಾರತದ ಎಟ್ಟಿಯಾಪುರದ ಕುರುವಿಕುಳಂ ಬಳಿ ಕಳೆದ ಭಾನುವಾರ ಒಂದು ಕಾಂಪೌಂಡಿನ ಆವರಣದಲ್ಲಿ ೧೦ ಮಂದಿ ಹೈಸ್ಕೂಲು ವಿದ್ಯಾರ್ಥಿಗಳು ಆಡುತ್ತಿದ್ದಾಗ ಆಕಸ್ಮಿಕ ಆಸ್ಫೋಟನವೊಂದು ಸಂಭವಿಸಿ ಸ್ಥಳದಲ್ಲೇ ೪ ಹುಡುಗರು ಮಡಿದರೆಂದೂ, ೧ ಆಸ್ಪತ್ರೆಯಲ್ಲಿ ಮತ್ತೊಬ್ಬನು ಸತ್ತನೆಂದೂ ವರದಿಯಾಗಿದೆ. ಆಸ್ಫೋಟನೆಯು ಸುಮಾರು ೩ ಮೈಲಿ ದೂರ ಕೇಳಿಸಿತೆಂದೂ ಗೊತ್ತಾಗಿದೆ

### ೫ ಲಕ್ಷ ಟನ್ ಬರ್ಮಾ ಅಕ್ಕಿ ತರಿಸಲು ಪ್ರಯತ್ನ

ಪದಾರ್ಥಗಳ ವಿನಿಮಯದ ಆಧಾರದ ಮೇಲೆ ಭಾರತವು ಬರ್ಮಾದಿಂದ ೫ ಲಕ್ಷ ಟನ್ನು ಅಕ್ಕಿಯನ್ನು ತರಿಸಿಕೊಳ್ಳುವ ಬಗ್ಗೆ ಅಲ್ಲಿನ ಸರ್ಕಾರದೊಡನೆ ವ್ಯವಹರಿಸುತ್ತಿದೆಯೆಂದು ವರದಿಯಾಗಿದೆ

#### ಅನ್ನ ಸತ್ಯಾಗ್ರಹ

ರಾಜಧಾನಿಯಲ್ಲಿ ಅನ್ನ ಸತ್ಯಾಗ್ರಹವನ್ನು ಹೂಡಿರುವ ಎರಡನೆ ಗುಂಪಿನ ಶ್ರೀಗಳಾದ ಎಂ ಎಸ್ ತಿಮ್ಮಯ್ಯ ಮತ್ತು ಎಸ್ ಗುಂಡಾಶಾಸ್ತ್ರಿಗಳ ಉಪವಾಸವು, ನಾಳೆ ಪ್ರಾತಃಕಾಲ ೬ ಘಂಟೆಗೆ ಮುಕ್ತಾಯವಾಗುವುದು. ಜನ ಸಂಘದ ನಾಯಕ ಶ್ರೀ ಎಂ ಎಸ್ ಚಂದ್ರಶೇಖರ ಜೋಯಿಸರೂ ಮತ್ತು ಶ್ರೀ ಎಂ ವಿಟ್ಠಲ ಶೆಟ್ಟರೂ ನಾಳೆಯಿಂದ ಸತ್ಯಾಗ್ರಹವನ್ನು ಹೂಡುವರು

### ಚೀಣಾದ ಮೇಲೆ ದಿಗ್ಬಂಧ ಹಾಕಲು ಅಮೆರಿಕಾ ನಿರ್ಧಾರ

ಅಮೆರಿಕದ ಸಂಸ್ಥಾನ ಶಾಖಾ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಲೆಸ್‌ರವರು ಮೊನ್ನೆ ರಹಸ್ಯ ಸಮ್ಮೇಳನವೊಂದನ್ನು ನಡೆಸಿ ನೂತನ ಅಧ್ಯಕ್ಷ ಐಸನ್‌ಹೋವರರ ಸರ್ಕಾರದ ಯೋಜನೆಗಳನ್ನು ವಿವರಿಸಿದರು. ಕೆಂಪು ಚೀಣಾದ ಮೇಲೆ ನೌಕಾ ದಿಗ್ಬಂಧನವನ್ನು ವಿಧಿಸುವ ಬಗ್ಗೆ ಹಲವು ಕ್ರಮಗಳನ್ನು ಸಿದ್ಧಪಡಿಸಿ ಅದನ್ನು ಸಂಸ್ಥಾನ ಇಲಾಖೆಯವರು ತೀವ್ರವಾಗಿ ಪರಿಶೀಲಿಸುತ್ತಿರುವರೆಂದೂ, ಕೆಂಪು ಚೀಣಕ್ಕೆ ದೇಶಾಂತರ್ಗತ ವಸ್ತುಗಳನ್ನು ವಿದೇಶೀ ರಾಷ್ಟ್ರಗಳು ಸರಬರಾಜು ಮಾಡದಂತೆ ನಿರ್ಬಂಧ ವಿಧಿಸಿ, ಅಲ್ಲಿ ಅಭಾವವುಂಟಾಗುವಂತೆ ಮಾಡಲಾಗುವುದೆಂದೂ ಅವರು ತಿಳಿಸಿದರು. ಈ ಕ್ರಮಗಳನ್ನು ಕೈಗೊಳ್ಳುವಾಗ, ಅಮೆರಿಕವು ನಾನಾ ರಾಷ್ಟ್ರಗಳೊಡನೆ ಯುದ್ಧಕಾಲದ ರಹಸ್ಯಗಳ ಸಂಬಂಧವಾಗಿ ಮಾಡಿಕೊಂಡಿರುವ ಒಪ್ಪಂದಗಳೆಲ್ಲವನ್ನೂ ಅದು ರದ್ದು ಮಾಡುವುದೆಂದೂ ಡಲ್ಲೆಸ್‌ರವರು ತಿಳಿಸಿದರು

### ಶಿಶುವನ್ನು ನಾಯಿ ಒಯ್ಯುತ್ತಿದ್ದ ಪ್ರಸಂಗ

ಹಿರಿಯೂರು ಹತ್ತಿರ [illegible] ಗ್ರಾಮದಲ್ಲಿ ಆಗತಾನೆ ಹುಟ್ಟಿದ ಗಂಡು ಮಗುವೊಂದನ್ನು ಯಾರೋ ರಸ್ತೆಯ ಪಕ್ಕದಲ್ಲಿ ಬಿಸಾಡಿದ್ದರೆಂದೂ, ಅದನ್ನು ಬೀದಿಯ ನಾಯಿಯು ಕಚ್ಚಿ ಎಳೆಯುತ್ತಿದ್ದಾಗ ಹಿಂದೂಪುರದ ಲಕ್ಷ್ಮಮ್ಮ ಎಂಬಾಕೆಯು ರಕ್ಷಿಸಿದರೆಂದೂ ವರದಿಯಾಗಿದೆ

### ಜೀವಸಹಿತ ಮೂವರು ಸುಡಲ್ಪಟ್ಟರು

ಶಿವಮೊಗ್ಗದ ಬಳಿ ಸಾಗರದ ಹತ್ತಿರ ಗ್ರಾಮದ ಬೈಂದೂರು ಮಂಜಪ್ಪಗೌಡರ ಮನೆಯಲ್ಲಿ ಕಳೆದ ಸೋಮವಾರ ರಾತ್ರಿ ಬೆಂಕಿ ಪ್ರಮಾದವುಂಟಾಗಿ ಮೂವರು ಜೀವಸಹಿತ ಸುಡಲ್ಪಟ್ಟರೆಂದೂ, ಸುಮಾರು ೩೦ ಸಾವಿರ ರೂ ನಷ್ಟವಾಗಿರುವುದೆಂದೂ ವರದಿಯಾಗಿದೆ

#### ಬಿ ಡು ಗ ಡೆ

ರಾಜಧಾನಿಯ ಟೌನ್ ಹಾಲ್ ಮೈದಾನದ ಮುಂಭಾಗದಲ್ಲಿ ಹಾಕಲಾಗಿರುವ [illegible] ಅನ್ನ ಸತ್ಯಾಗ್ರಹ ಶಿಬಿರದ ಆಶ್ರಯದಲ್ಲಿ ಈ ಸಂಜೆ ೬ ಘಂಟೆಗೆ ಬಹಿರಂಗ ಸಭೆಯು ಅಧ್ಯಕ್ಷ ಡಾ|| ಬಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆಯುತ್ತದೆ

### ಮೈಸೂರುಪತ್ರಿಕೆ ಪ್ರಕಾಶಕರ ಮೇಲಿನ ಮೊಕದ್ದಮೆ ಮುಂದೂಡಲ್ಪಟ್ಟಿತು

ಪತ್ರಿಕಾ ಶಾಸನದ ಪ್ರಕಾರ ಸರ್ಕಾರದವರು ಮೈಸೂರು ಪತ್ರಿಕೆಯ ಪ್ರಕಾಶಕರ ಮೇಲೆ ಹೂಡಿರುವ ಮೊಕದ್ದಮೆಯ ವಿಚಾರಣೆಯು ನೆನ್ನೆ ರಾಜಧಾನಿಯ ಪ್ರಿನ್ಸಿಪಲ್ ಸಷನ್ಸ್ ಜಡ್ಜರ ಮುಂದೆ ವಿಚಾರಣೆಗೆ ಬಂದು, ಆಪಾದಿತರಾದ ಶ್ರೀ ಟಿ ನಾರಾಯಣರವರು ತಮ್ಮ ಹೇಳಿಕೆ ಕೊಡಲು ಕಾಲಾವಕಾಶ ಬೇಕೆಂದು ಪ್ರಾರ್ಥಿಸಿದ್ದರಿಂದ ಮೊಕದ್ದಮೆಯನ್ನು ಬರುವ ತಿಂಗಳು ೩ನೇ ತಾರೀಕಿಗೆ ಮುಂದೂಡಲಾಗಿದೆ

## ನೇಪಾಳದ ಅಭಿವೃದ್ಧಿಗಾಗಿ ಸಲಹಾ ಸಮಿತಿ

ನೇಪಾಳದ ರಾಷ್ಟ್ರೀಯ ದಿನಾಚರಣೆಯ ಸಂಬಂಧದಲ್ಲಿ ಅಲ್ಲಿನ ರಾಜಾ ತ್ರಿಭುವನರು ಮೊನ್ನೆ ಪ್ರಕಾರ ಭಾಷಣ ಮಾಡಿ ಇನ್ನು ಮುಂದೆ ಸಂಸ್ಥಾನದ ಆಡಳಿತದ ಬಗ್ಗೆ ಅಲ್ಲಿನ ಎಲ್ಲ ಪ್ರದೇಶಗಳಿಗೆ ಸೇರಿದ, ಎಲ್ಲ ಪಕ್ಷಗಳ ಪ್ರತಿನಿಧಿಗಳಿಂದ ಕೂಡಿದ ಸಲಹಾ ಸಮಿತಿಯನ್ನು ರಚಿಸಲು ನಿಶ್ಚಯಿಸಿರುವುದಾಗಿ ತಿಳಿಸಿದರು. ಅಲ್ಲಿ ಇದುವರೆಗಿದ್ದ ಸಲಹೆಗಾರ ಸರ್ಕಾರವನ್ನು ರದ್ದು ಮಾಡುವುದಾಗಿಯೂ ಅವರು ಹೇಳಿದರು.

## ಆಭರಣಗಳನ್ನು ಧರಿಸಿದ್ದ ಮಗುವಿನ ಕೊಲೆ

ಬೆಂಗಳೂರಿನ ಬಳಿ ಯಶವಂತಪುರದಲ್ಲಿ ಮಾಣಿಕ್ಯ ಎಂಬಾತನು ವಸತಿಯಲ್ಲಿದ್ದ [illegible] ಎಂಬುವನು ಕಳೆದ [illegible] ವಾರ ಏಳು ತಿಂಗಳ ಗಂಡು ಮಗುವೊಂದನ್ನು, ಆಭರಣಗಳೊಡನೆ ಕದ್ದುಕೊಂಡು ಹೊರಟನು. ಪತ್ತೆಯಿಲ್ಲವೆಂದು [illegible] ಬೆಳಗ್ಗೆ [illegible] [illegible] ಆತನ [illegible] ಮಗುವನ್ನು [illegible] ಕೊಲೆ [illegible] ಗೊತ್ತಾಗಿದೆ. ಮಗುವಿನ ಶವದ ಕಿವಿಗಳಲ್ಲಿ ಒಂದು ಚಿನ್ನದ [illegible] ಬೆರಳುಗಳಲ್ಲಿ ಎರಡು ಉಂಗುರಗಳೂ ಇದ್ದುವೆಂದೂ ಹೇಳಲಾಗಿದೆ.

### ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ರಾಷ್ಟ್ರಭಾಷಾ, ಪ್ರವೀಣ್, ರಾಷ್ಟ್ರಭಾಷಾ ವಿಶಾರದಾ ಮತ್ತು ಪ್ರವೇಶಿಕಾ ಪರೀಕ್ಷೆಗಳು [illegible] ನೇ ಶನಿವಾರದಿಂದಲೂ, ಪ್ರಾಥಮಿಕ, ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು [illegible] ನೇ ಭಾನುವಾರದಿಂದಲೂ ಪ್ರಾರಂಭವಾಗುವುವು. ಹೆಂಗಸರು ಮತ್ತು ಗಂಡಸರು ಇಬ್ಬರಿಗೂ, ಪ್ರಾಥಮಿಕ ಮತ್ತು ಮಧ್ಯಮ ಪರೀಕ್ಷೆಗಳು ಶಾರದಾ ವಿಲಾಸ ಹೈಸ್ಕೂಲಿನಲ್ಲಿಯೂ, ಉಳಿದ ಪರೀಕ್ಷೆಗಳು ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿಯೂ ನಡೆಯುವುವು. ಪ್ರವೇಶ ಪತ್ರಗಳನ್ನು ಜಾವರ [illegible] ರಕ್ಷೆಯಲ್ಲಿರುವ ಹಿಂದೀ ಪ್ರಚಾರ ಸಭೆಯಲ್ಲಿ ಪಡೆಯಬಹುದು.

## ವಾಗ್ಯುದ್ಧದ ಬಗ್ಗೆ ನೆಹರೂ ವಿಷಾದ

ರಾಷ್ಟ್ರಾಧ್ಯಕ್ಷರ ಭಾಷಣದ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುತ್ತಾ ಮೊನ್ನೆ ದಿನ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂರವರು ಶನಿ ಗೂ ಮತ್ತು [illegible] ಶ್ಯಾಮಪ್ರಸಾದ ಮುಖರ್ಜಿಯವರಿಗೂ ನಡೆದ ವಾಗ್ಯುದ್ಧದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ, ನಾವುಗಳೆಲ್ಲರೂ ಸಂಕುಚಿತ ಭಾವನೆಗಳನ್ನೂ ಮತ್ತು ಪಕ್ಷ ಪ್ರತಿ ಪಕ್ಷಗಳು, ವೈಲು ಕೀಳೆಂಬ ಭಾವನೆಗಳನ್ನೂ ತೊರೆದು ಸಭೆಯ ಘನತೆ ಗೌರವಗಳನ್ನು ಕಾಪಾಡಿ, ನಮ್ಮ ಮೇಲಿರುವ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸೋಣವೆಂದು ನುಡಿದರು. ವಿಶ್ವ ಸಂಸ್ಥೆಯಲ್ಲಿ ಕೆಂಪು ಚೀನಕ್ಕೆ ಪ್ರಾತಿನಿಧ್ಯ ದೊರೆಯುವುದರ ಪರವನ್ನು [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ದರು.

## ಸಚಿವರ ಕಾರ್ಯದರ್ಶಿಗೆ ಒಂದು ರೂ. ಗೌರವ ವೇತನ

ಹೈದರಾಬಾದು ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಗೌರವ ಪರ್ಸನಲ್ ಅಸಿಸ್ಟೆಂಟಾಗಿ ನೇಮಕವಾಗಿರುವ ಶ್ರೀ ವಿ. ಹನುಮಂತರಾವ್‌ರವರಿಗೆ ಒಂದು ರೂಪಾಯಿ ಗೌರವ ಧನವನ್ನು ನಿರ್ಧರಿಸಲಾಗಿದೆಯೆಂದೂ, ಅದನ್ನೂ ಸಹಾ ಅವರು ಸಾಂಕೇತಿಕವಾಗಿ ಸಹಿಮಾಡಿ ಅಕೌಂಟೆಂಟ್ ಜನರಲ್‌ರವರಿಗೆ ಒಪ್ಪಿಸಲಿರುವರೆಂದೂ ಗೊತ್ತಾಗಿದೆ

(ಎ ಎ ಎಸ್ )

**WANTED**

A Sales Clerk on Rs 30 p. m. Cash security of Rs 200 essential.

— C T C PUBLICATIONS

Near V. V. Market, Mysore

## ಮಾರಾಟ ತೆರಿಗೆ ವಿರುದ್ಧ ಚಳುವಳಿ

ಅರಸೀಕೆರೆಯ ವರ್ತಕರ ಸಭೆಯೊಂದು ಕಳೆದ ಭಾನುವಾರ ಅಲ್ಲಿನ ಪೌರಸಭಾ ಸದಸ್ಯರಾದ ಶ್ರೀ ಎಚ್. ಎಸ್. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಸಂಸ್ಥಾನದಲ್ಲಿ ವರ್ತಕರೂ ಮತ್ತು ಪ್ರಜೆಗಳೂ ಈಗಾಗಲೇ ಅನೇಕ ವಿಧವಾದ ತೆರಿಗೆ ಹೊರಿಸಲ್ಪಟ್ಟಿರುವಾಗ ಜೊತೆಗೆ ಮಾರಾಟದ ತೆರಿಗೆಯನ್ನೂ ವಿಧಿಸಿರುವುದು ವರ್ತಕರಿಗೂ ಮತ್ತು ಕೊಳ್ಳುವವರಿಗೂ ಒಂದು ಅನಿಷ್ಟವಾಗಿರುವುದೆಂದೂ ನಿರ್ಣಯ ಮಾಡಿ ಸರ್ಕಾರದ ಕ್ರಮವನ್ನು ಎದುರಿಸುವ ಸಲುವಾಗಿ ಒಂದು ಚಳುವಳಿಯನ್ನು ಹೂಡಲು ಅರಸೀಕೆರೆಯಲ್ಲಿ ಸಂಸ್ಥಾನದ ಎಲ್ಲ ವರ್ತಕರ ಸಮ್ಮೇಳನವನ್ನು ನಡೆಸಲು ನಿರ್ಧರಿಸಲಾಯಿತು.

### ಮಹಾರಾಣಿ ಹೈಸ್ಕೂಲು ವಿದ್ಯಾರ್ಥಿನಿಯರ ಸಂಘದ ದಿನಾಚರಣೆ

ವೇಳ್ಯಂಡ ದಿನಾಚರಣೆಯು ನಿನ್ನೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್. [illegible] ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆ ಸ್ವಾಗತ ಭಾಷಣ [illegible] [illegible] ಸಂಘದ ವರದಿಯನ್ನು ಒಪ್ಪಿಸಿದ ತರುವಾಯ ಅಧ್ಯಕ್ಷರು [illegible] ಬಹುಮಾನಗಳನ್ನು ವಿತರಿಸಿದರು. [illegible] [illegible] ದ ಸಂಗೀತ, ನೃತ್ಯ ಮತ್ತು ಕನ್ನಡ ಸಂಸ್ಕೃತ [illegible] [illegible] [illegible] [illegible] [illegible] [illegible] [illegible] [illegible] ವಾಯಿತು.

ಎಲ್ಲಾ ಬಗೆಯ

**ಅಲೋಪಥಿಕ್ ಔಷಧಿಗಳೂ**

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

# ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

307 ಸಯ್ಯಾಜಿರಾವ್ ರೋಡ್,

ಮೈಸೂರು

**ಶೋಭಿಲಾಲ್ ಟಾಕೀಸ್**

ಮೈಸೂರು

20.2.53 ರಿಂದ ಪ್ರತಿದಿನ 3 ಆಟಗಳು

# ಸಿಂದಬಾದ್ ದಿ ಸೈಲರ್

ಪಾತ್ರ - [illegible], [illegible] ಭಗವಾನ್

ಬೆಳಗಿನ ಪ್ರದರ್ಶನ 20.2.53 ರಿಂದ

# ಖಾನ್ ದಾನ್

Edited, Printed and Published by A R Nagarajan at Sadhvi Press, D Subbiah Road, Mysore

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ. ಆಣೆ | ರೂ. ಆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | [illegible] |
| ಹಲಸಂದೆ | [illegible] | [illegible] |
| ಮೆಣಸಿನ | | |
| ಕಾಯಿ ಹುಣಸೆ | [illegible] | [illegible] |
| ಹುಣಸೇಹಣ್ಣು | [illegible] | [illegible] |
| ಕೊಬ್ಬರಿಕಾಯಿ | [illegible] | [illegible] |
| ಬೆಲ್ಲ | [illegible] | |
| ತೆಂಗಿನಕಾಯಿ | | |
| [illegible] | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ರಿಂದ ವೈವಿಧ್ಯ ಸಂಗೀತ [illegible] ಬಾಲ ಜಗತ್, ಮಕ್ಕಳ ಕಾರ್ಯಕ್ರಮ ಸಂಜೆ [illegible] ರಿಂದ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ರಾಷ್ಟ್ರೀಯ ಕಾರ್ಯಕ್ರಮ, [illegible] [illegible] [illegible] ಪಟ್ಟಣ್ಣಾ [illegible] [illegible] ಪ್ರಸಾರ.

**ಚಾಮುಂಡೇಶ್ವರಿ ಟಾಕೀಸ್**

[illegible] ರಿಂದ ದಿನವೂ 3 ಪ್ರದರ್ಶನ

[illegible] [illegible] [illegible] ಚಿತ್ರ

# ಜಮೀನ್ದಾರ್

ಪಾತ್ರ [illegible] [illegible] [illegible] [illegible] [illegible] ಮುಂತಾದವರು

MORNING SHOWS

On Saturday & Sunday

**BAGDAD**

(Technicolor)

**ಅರಮನೆ ಗಜಶಾಲಾ,**

ಮೈಸೂರು

# ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲಾ ಸಂಬಂಧ 1953-54 ನೇ ಸಾಲಿನಲ್ಲಿ ಅಂದರೆ 1953 ನೇ ಏಪ್ರಿಲ್ ಒಂದರಿಂದ [illegible] 1954 ನೇ ಮಾರ್ಚಿ ಆಖೈರುವರೆಗೆ [illegible] [illegible] [illegible] [illegible] [illegible] ಸೀಲ್ ಮಾಡಿದ ಟೆಂಡರುಗಳನ್ನು 1953 ನೇ ಇಸವಿ ಮಾರ್ಚಿ ತಾರೀಖು 25ನೇ ಮಧ್ಯಾಹ್ನ 12 ಘಂಟೆ ಒಳಗಾಗಿ ಗಜಶಾಲಾ [illegible] [illegible] ಆಫೀಸಿಗೆ ಕೊಡತಕ್ಕದ್ದು. ಹೆಚ್ಚಿನ ವಿಷಯಗಳನ್ನು ಗಜಶಾಲಾ [illegible] ವಿಚಾರಿಸಿ ತಿಳಿದುಕೊಳ್ಳುವುದು. ಸೌಜನ್ಯವನ್ನು ಅರಮನೆ ಗಜಶಾಲಾ [illegible] [illegible] [illegible] [illegible].

ಡಿ. ಎಸ್. [illegible]

[illegible] ಅರಮನೆ ಗಜಶಾಲಾ, ಮೈಸೂರು

# ಪ್ರಭುದೇವಾ ಟಾಕೀಸ್

**20—2—53 ರಿಂದ :: ಜಯಭೇರಿ 3 ನೇ ವಾರ**

# ಬದುಕುವ ಮಾರ್ಗ

( ತೆಲುಗು )

ಪಾತ್ರ:-ನಾಗೆ [illegible], ರೇಲಂಗಿ,ಶ್ರೀರಂಜನಿ,

ಎಸ್ ವಿ ರಂಗರಾವ್ ಮುಂತಾದವರು

# ಲಗ್ನದ ಜವಳಿಗಳಿಗೆ

ಹೀರೆಗಳಿಗೆ ಮತ್ತು ಚಾಕ್ಲೇಟ್ ಚಾಲುಗಳಿಗೆ

ಮೈಸೂರು ಸಿಲ್ಕು, ಧರ್ಮಾವರಂ, ಆರ್ಣಿ ನವೀನ ಮಾದರಿ ಸೀರೆಗಳ

(ಫೋನ್ ನಂ 446)

# ★ M. V. ಭೋಜಯ್ಯ

ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರೋ. ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧] ಶನಿವಾರ ೨೧-೩-೧೯೫೪ [ಸಂಚಿಕೆ ೧೬೬

# ಮೈಸೂರು ಖೈದಿಗಳಿಂದ - ಮರಾಮತ್ತು ಕೆಲಸ -

## ಪ್ರಭುಗಳಿಗೆ ಪೌರಸಭಾ ಅಧ್ಯಕ್ಷರ ಶುಭಾಶಯ

ಮೈಸೂರು ೨೧

ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ಸಂತೋಷಾರ್ಥವಾಗಿ ರಾಜಧಾನಿಯ ನಿವಾಸಿಗಳ ಪರವಾಗಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಮತ್ತು ಪೌರಸಭಾ ಕಮೀಷನರ್ ಶ್ರೀ ... ರವರೂ ಈ ದಿನ ಅರಮನೆಗೆ ತೆರಳಿ ಪ್ರಭುಗಳಿಗೆ ವಂದನವನ್ನರ್ಪಿಸಿ, ಶುಭಾಶಯಗಳನ್ನು ... ದರು

ಪ್ರಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ ... ಸ್ವಾಮಿ ಮತ್ತು ಬೆಂಗಳೂರು ... ಮೇಯರರಾದ ಶ್ರೀ ಪಿ ... ಮಂತಯ್ಯನವರೂ ಈ ದಿನ ಬೆಳಿಗ್ಗೆ ಆಗಮಿಸಿ ಪ್ರಭುಗಳನ್ನು ಭೇಟಿ ಮಾಡಿ ಶುಭಾಶಯಗಳನ್ನು ಕೋರಿದರು

## ಸ್ಕೇಟ್ ರ‍್ಯಾಲಿ

ರಾಜಧಾನಿಯ ಟೌನ್ ಹಾಲಿನಲ್ಲಿ ನಾಳೆ ... ೫ ಗಂಟೆಗೆ ಸ್ಕೇಟ್ ರ‍್ಯಾಲಿ ಏರ್ಪಾಡಾಗಿದೆ ವಿದ್ಯಾ ಇಲಾಖೆ ... ಡೈರೆಕ್ಟರಾದ ಶ್ರೀ ಜಿ ಬಿ ಮ... ಪ್ಪರವರು ಸಮಾರಂಭದ ಅಧ್ಯಕ್ಷತೆ ವಹಿಸುವರು ಅದಿನ ಬೆಳಿಗ್ಗೆ ಟೌನ್ ಹಾಲಿನಲ್ಲಿ ಸ್ಕೇಟುಗಳಿಗೆ ಧ್ವಜಾರೋಹಣ ... ಮಾಡುವುದು ಮತ್ತು ... ಸ್ಕೇಟಿಂಗ್ ಸ್ಪರ್ಧೆಗಳು ಜರುಗಿದು ... ನಾಳೆ ಬಹುಮಾನ ಹಂಚಲಾಗುವುದು

---

## ಸಂಸ್ಥಾನದ ಮರಾಮತ್ತು ಕಾರ್ಯಗಳಿಗೆ ಖೈದಿಗಳು

... ಸಭೆಯಲ್ಲಿ ನೆನ್ನೆ ಶಮಾವೇಶ ... ಸಂದರ್ಭದಲ್ಲಿ ... ಮತ್ತು ... ಕೈಗಾರಿಕೆ ಖಾತೆಯ ಉಪ ಸಚಿವರಾದ ... ಹಳ್ಳಿಯರವರು ಪ್ರಶ್ನೆ ... ಸಕ್ಕೆ ಉತ್ತರವಿತ್ತು, ಬೊಂಬಾಯಿ ... ತ್ತು ಮೈಸೂರು ಸಂಸ್ಥಾನಗಳ ... ತ್ತು ಮರಾಮತ್ತು ಕೆಲಸಗಳಿಗಾಗಿ ಖೈದಿಗಳನ್ನು ನೇಮಿಸಿಕೊಳ್ಳುವ ಯೋಜನೆ ... ಸದ್ಯದಲ್ಲೇ ಮಂಜೂರಾಗಲಿದೆ ಎಂದು ತಿಳಿಸಿದರು

## ಟೀ ಮತ್ತು ತಾಂಬೂಲದಿಂದ ಮಾತ್ರ ಜೀವಿಸಿರುವ ಸಾಧು

... ಭಾರತದ ವಿಂಧ್ಯ ಪರ್ವತ ... ಮೇಲಿರುವ ಗಿರ್ನಾರ್ ಬೆಟ್ಟದ ... ವರ್ಷದ ವೃದ್ಧ ಸಾಧುವೊಬ್ಬ ... ವರ್ಷಗಳಿಂದ ಬರೀ ಟೀ ಮ... ತಾಂಬೂಲವನ್ನು ಸೇವಿಸುತ್ತಾ ... ನಲ್ಲಿ ನಿರತರಾಗಿದ್ದಾರೆಂದೂ, ಅವರ ... ಬಳಿ ಇರುವ ... ಆಗಮಿಸಿರುವವರೆಂದೂ ವರದಿ ... ತಪಸ್ಸಿನಲ್ಲಿ ... ಗಳನ್ನು ಕ್ರಮಾತೀತ ... ವಾಗಿ ತಿಂದು ಬಿಟ್ಟಿವೆ ... ಅವರ ... ಸಂಚರಿಸುತ್ತಿರುವರೆಂದು ಗೊತ್ತಾಗಿದೆ ಪಲ್ಲಕ್ಕಿಯನ್ನು ... ಮತ್ತು ಇಬ್ಬರು ... ರೂ ಹೊರುವರು

## ಪ್ರಭುಗಳಿಗೆ ಅಭಿನಂದನೆ

ಆಹಾರ ಕ್ರಿಯಾ ಸಮಿತಿಯ ನಿರ್ಧಾರಗಳು

ಮೈಸೂರು ೨೧

ರಾಜಧಾನಿಯ ಆಹಾರ ಕ್ರಿಯಾ ಸಮಿತಿಯು ಸಭೆಯು ನೆನ್ನೆ ಟೌನ್ ಹಾಲಿನಲ್ಲಿ ಡಾ|| ಬಿ ವಿ ... ದಾಸ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗ ಕಂಡ ನಿರ್ಣಯಗಳನ್ನು ಅಂಗೀಕರಿಸಿತು.

೧) ಶ್ರೀಮನ್ಮಹಾರಾಜರಿಗೆ ಪುತ್ರ ಸಂತಾನವಾದ ಬಗ್ಗೆ ಹರ್ಷವನ್ನು ವ್ಯಕ್ತಪಡಿಸಿ ನೂತನ ರಾಜಕುಮಾರರು ಮತ್ತು ರಾಜ ಮನೆತನದವರಿಗೆ ಶ್ರೇಯಸ್ಸನ್ನು ಕೋರುವುದು, ೨) ಅಭಿಪ್ರಾಯ ಸ್ವಾತಂತ್ರ್ಯದ ವಿರುದ್ಧವಾಗಿ ... ವಿಶೇಷ ಶಾಸನವೊಂದರ ... ಸರ್ಕಾರವು ... ಮೈಸೂರು ಪತ್ರಿಕೆಯ ಮೇಲೆ ಹೂಡಲಾಗಿರುವ ಮೊಕದ್ದಮೆಯನ್ನು ಸರ್ಕಾರದವರು ಕೂಡಲೇ ವಾಪಸು ಪಡೆಯಬೇಕೆಂದು ಒತ್ತಾಯಪಡಿಸುವುದು, ೩) ಬೆಂಗಳೂರು ಮತ್ತು ಮೈಸೂರು ಇಂಜನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳ ಬೇಡಿಕೆಗಳ ಪುರಸ್ಕೃತಿಗಾಗಿ ಬೆಂಗಳೂರಿನ ಶ್ರೀ ವಿ ಆರ್ ನಾಯ್ಡುರವರು ಉಪವಾಸ ಹೂಡಿರುವ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಇಂಜನಿಯರಿಂಗ್ ಶಾಲೆಗಳ ವಿದ್ಯಾರ್ಥಿಗಳಿಗೆ ನ್ಯಾಯದೊರಕಿ ... ಮಧ್ಯವರ್ತಿ ... ಶ್ರೀ ನಾಯ್ಡುರವರ ಉಪವಾಸವು ಸಫಲವಾಗಲೆಂದು ಹಾರೈಸುವುದು ಮತ್ತು ೪) ಆಹಾರ ಕ್ರಿಯಾ ಸಮಿತಿಯವರ ಚಟುವಟಿಕೆಗಳಲ್ಲಿ ನಗರದ ಜನರು ಸಹಕರಿಸುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸುವುದು ಮತ್ತು ಮುಂದೆಯೂ ಅವರ ಸಹಾನುಭೂತಿಯನ್ನು ಕೋರುವುದು.

## ಕೈಲ್ಲಿ ಮತ್ತು ಅಂಚೆ ಶಾಖೆ ವೆಚ್ಚದ ಮೇಲೆ ಹತೋಟಿ

ಕೇಂದ್ರ ಪಾರ್ಲಿಮೆಂಟಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ದೇಶದ ರೈಲ್ವೆ ಮತ್ತು ಅಂಚೆ ಮತ್ತು ತಂತಿ ... ಯಲ್ಲಿ ... ವಿ ... ದೊರೆಯುವಂತಾಗ... ಬೇಕೆಂದೂ, ವಸತಿ ಮೇಲೆ ... ವೆಚ್ಚ ಹತೋಟಿಯಲ್ಲಿ ಇರಬೇಕೆಂದೂ ಸೂಚಿಸಿದ

## ಸಿದ್ದಲಿಂಗಯ್ಯನವರ ರಾಜೀನಾಮೆ ಪರಿಶೀಲನೆ

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ... ಮತ್ತು ನೆನ್ನೆ ಬೆಳಿಗ್ಗೆ ಬೆಂಗಳೂರಿನಲ್ಲಿ ನಡೆದು ಶ್ರೀ ಟಿ ಸಿದ್ದಲಿಂಗಯ್ಯನವರು ಸಚಿವ ಪದವಿಗೆ ಇತ್ತ ರಾಜೀನಾಮೆಯನ್ನು ಪರಿಶೀಲಿಸಿತು ಶ್ರೀ ... ರವರು ಸಭೆಯಲ್ಲಿ ... ಪ್ರಶ್ನೆಗಳನ್ನು ಪ್ರಸ್ತಾಪಿಸಿದರು ... ಶ್ರೀ ... ಮತ್ತು ಟಿ ಸಿದ್ದಲಿಂಗಯ್ಯನವರು ವಿವರಗಳನ್ನಿತ್ತರೆಂದೂ ತಿಳಿದುಬಂದಿದೆ ಯಾವ ತೀರ್ಮಾನಕ್ಕೂ ಬರದೆ ಚರ್ಚೆಯು ಮುಕ್ತಾಯವಾಯಿತೆಂದು ಹೇಳಲಾಗಿದೆ

### ಸಿದ್ದಲಿಂಗಯ್ಯನವರ ಪೋರ್ಟ್‌ಫೋಲಿಯೋಗಳ ಹಂಚಿಕೆ

ಮಾಜಿ ಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ವಹಿಸಲಾಗಿದ್ದ ಪೋರ್ಟ್‌ಫೋಲಿಯೋಗಳನ್ನು ಕೆಳಗೆ ಕಂಡ ರೀತಿ ಹಂಚಲಾಗಿದೆ - ಮುಖ್ಯಮಂತ್ರಿಗಳು - ವಿದ್ಯುಚ್ಛಕ್ತಿ; ನ್ಯಾಯಾಂಗ ಮಂತ್ರಿಗಳು ... ಕಂಪನಿಗಳು, ... ಗಳು ... ಮಂತ್ರಿಗಳು ... ಮತ್ತು ... ಮಂತ್ರಿಗಳು ... ಬೆಂಗಳೂರು ... ಪ್ರೆಸ್ ... ಸ್ಪಿನ್ನಿಂಗ್ ... ಸಹಾಯದ ಕೈಗಾರಿಕೆ ... ಕಮಿಟಿ ಮತ್ತು ... ಕಾರ್ಖಾನೆ

## ೧೬ ಅಂಗುಲ ಉದ್ದದ ಮೀಸೆ

ಕಲ್ಕತ್ತೆಯ ಮಾಜಿ ಪೋಲೀಸಿನವನೊಬ್ಬನು ೧೬ ಅಂಗುಲ ಮೀಸೆಯನ್ನು ಬೆಳೆಸಿರುವನೆಂದು ವರದಿಯಾಗಿದೆ

---

... ಅಧಿಕಾರಿಗಳವರಿಗೆ ... ಗೊತ್ತಾಗಿದೆ ... ಬಟ್ಟೆಯನ್ನು ... ಸಂದರ್ಭದಲ್ಲಿ ಸರ್ಕಾರಕ್ಕೆ ... ಲಕ್ಷ ರೂ ನಷ್ಟ ಸಂಭವಿಸಿರುವುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ನ್ಯಾಯಾಸ್ಥಾನದ ಮುಂದೆ ವಿಚಾರಣೆಗೆ ಗುರಿಪಡಿಸಬೇಕೆಂದೂ ಆ ಸಮಿತಿಯವರು ಸಲಹೆ ಮಾಡಿರುವರು

## ವಿ. ಆರ್. ನಾಯ್ಡುರವರ ಉಪವಾಸ ಮುಕ್ತಾಯ

ಸ್ವಂ ಸಂ ವರದಿ] ಬೆಂಗಳೂರು ೨೧

ಇಲ್ಲಿನ ಇಂಜನಿಯರಿಂಗ್ ಶಾಲಾ ವಿದ್ಯಾರ್ಥಿಗಳ ಹರತಾಳದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಶಾಸನ ಸಭಾ ಸದಸ್ಯರಾದ ಶ್ರೀ ವಿ ಆರ್. ನಾಯ್ಡುರವರು ಕೈಗೊಂಡಿದ್ದ ಉಪವಾಸವನ್ನು ಈ ದಿನ ಮುಕ್ತಾಯಗೊಳಿಸಿದರು. ಇಂಜನಿಯರಿಂಗ್ ಶಾಲಾ ವಿದ್ಯಾರ್ಥಿಗಳು ಈ ದಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ಭೇಟಿ ಮಾಡಿ ಶಾಲೆಯ ಬಹಿಷ್ಕಾರವನ್ನು ಸರ್ಕಾರದವರು ನೇಮಿಸಲಿರುವ ಸಮಿತಿಯೊಂದಕ್ಕೆ ವರ್ಗಾಯಿಸುವುದರಿಂದ ತಮಗೆ ಉಂಟಾಗುವ ಕುಂದುಕೊರತೆಗಳನ್ನು ಮನವಿ ಮಾಡಿಕೊಂಡರು ಈ ವಿಷಯವನ್ನು ಸಹಾನುಭೂತಿಯುತವಾಗಿ ಪರಿಶೀಲಿಸುವ ಬಗ್ಗೆ ಸಚಿವರು ಭರವಸೆ ನೀಡಿದರೆಂದು ಗೊತ್ತಾಗಿದೆ ಮೊತ್ತಂದ ... ವನ್ನು ಪರಿಶೀಲಿಸಿ ಸೂಕ್ತ ಸಲಹೆ ನೀಡಲು ಸರ್ಕಾರದವರು ಕೆಳಗೆ ಕಂಡ ೧೧ ಮಂದಿ ವಿಧಾನ ಸಭಾ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಿರುವರು —

ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಕೆ. ಆರ್ ಮಾಧವರಾವ್, ವಿ ಆರ್. ನಾಯ್ಡು, ಎ ಎಂ ಮಲ್ಲಿಕಾರ್ಜುನಸ್ವಾಮಿ, ... ವೆಂಕಟೇಶ್, ಆರ್ ... ರಾಮಯ್ಯ, ಆರ್ ಸುಬ್ಬಣ್ಣ, ಪಳನಿಯಪ್ಪನ್, ನೇ... ಶಿವಮಾದಯ್ಯ ಮತ್ತು ಕೆ ಸಿ ... ಪ್ಪಯ್ಯ

ಶಾಲಾ ವಿದ್ಯಾರ್ಥಿಗಳಿಗೆ ಸಹಾನುಭೂತಿ ಸೂಚಿಸುವುದಕ್ಕೋಸ್ಕರ ಈ ದಿನ ಇಂಜನಿಯರಿಂಗ್ ಕಾಲೇಜು ವಿದ್ಯಾರ್ಥಿಗಳೂ ಸಹಾ ಮುಷ್ಕರ ಹೂಡಿದ್ದರು. ಅನಂತರ ವಿದ್ಯಾರ್ಥಿಗಳ ತಂಡ ಸೆಕ್ರೆಟೆರಿಯಟ್ಟಿನ ಕಡೆ ನುಗ್ಗಿತು ಪೋಲೀಸರು ... ವನ್ನು ತಡೆದರು ಸಚಿವ ಶ್ರೀ ... ಮಂಜಪ್ಪನವರು ಸಮಾಧಾನ ಹೇಳಿದನಂತರ ವಿದ್ಯಾರ್ಥಿಗಳ ಗುಂಪು ಚದುರಿತು

○ ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಹಂಚುವ ಸಲುವಾಗಿ ೧೦೦ ಮೂಟೆ ಸಕ್ಕರೆಯನ್ನು ಪ್ರಭುಗಳು ಕಳುಹಿಸುತ್ತಾರೆ

## ಮೈಸೂರು ಪೌರಸಭೆಗೆ ೧ ವರ್ಷ ಜೀವದಾನ

ಮೈಸೂರು ೨೧

ಸಂಸ್ಥಾನದ ಸಧ್ಯದ ಪರಿಸ್ಥಿತಿಯಿಂದಲೂ ಮತ್ತು ವಯಸ್ಕರ ಮತದಾನದ ಪದ್ಧತಿ ಪ್ರಕಾರ ಈಗ ಚುನಾವಣೆಯನ್ನು ನಡೆಸಲು ಸಾಧ್ಯವಿಲ್ಲವೆಂದು ಸರ್ಕಾರಕ್ಕೆ ಮನವರಿಕೆಯಾಗಿರುವುದರಿಂದಲೂ ಏಪ್ರಿಲ್ ಒಂದನೇ ತಾರೀಖಿನಂದ ಪುನರ್ರಚಿತವಾಗಬೇಕಾಗಿದ್ದ ರಾಜಧಾನಿಯ ಪೌರಸಭೆಯ ಅವಧಿಯನ್ನು ಬರುವ ಡಿಸೆಂಬರ್ ಅಂತ್ಯದವರೆಗೆ ವಿಸ್ತರಿಸಿ ಸರ್ಕಾರದವರು ಪ್ರಕಟಣೆ ಹೊರಡಿಸಿರುವರು ಈಗಿನ ಪೌರಸಭೆಗೆ ಒಂದು ವರ್ಷ ಜೀವದಾನ ದೊರೆತಂತಾಯಿತು

## ಕಮ್ಯೂನಿಸ್ಟೇತರರ ನೆರವಿಗೆ ಚಿಯಾಂಗರ ಮನವಿ

ಕೆಂಪು ಚೀಣದ ಆಕ್ರಮಣ ನಡೆಸುವ ಸಲುವಾಗಿ ಕಮ್ಯೂನಿಸ್ಟೇತರ ರಾಷ್ಟ್ರಗಳು ತಮಗೆ ಸಹಜವಾದ ಸ್ವಾತಂತ್ರ್ಯ ಬೆಂಬಲ ನೀಡಬೇಕೆಂದು ರಾಷ್ಟ್ರೀಯ ಚೀಣದ ನಾಯಕ ಚಿಯಾಂಗ್ ಕೈಷೇಕರು ವಿನಂತಿ ಹೊಂದಿಸಿರುವರೆಂದು ನ್ಯೂಯಾರ್ಕಿನ ಪತ್ರಿಕೆಯೊಂದು ವರದಿ ಮಾಡಿದೆ. ಈ ಆಕ್ರಮಣದಿಂದ ಕೊರಿಯಾ ಯುದ್ಧವನ್ನು ಪರಿಸಮಾಪ್ತಿ ಗೊಳಿಸಲು ಸಹಾಯವಾಗುವುದೆಂದೂ ಚಿಯಾಂಗರು ತಿಳಿಸಿರುವುದಾಗಿ ಗೊತ್ತಾಗಿದೆ.

## ಸರ್ಕಾರೀ ಡಿಪೋವಿನಲ್ಲಿ ೪೫ ಪಲ್ಲ ಭತ್ತದ ಕಳುವು

ತ.ನ.ಕೂಡಿನಲ್ಲಿ ಸರ್ಕಾರೀ ಸಚೇರಿ [illegible] ಡಿಪೋ ವೊಂದರಲ್ಲಿ ೪೫ ಪಲ್ಲ ಭತ್ತವು ಕಳವಾಗಿರುವ ಬಗ್ಗೆ ಡಿಪೋ ಗುಮಾಸ್ತರು ಮತ್ತು ಜವಾನರನ್ನು ಸಸ್ಪೆಂಡ್ ಮಾಡಿ ಕ್ರಮ ಜರುಗಿಸಿರುವರೆಂದು ವರದಿಯಾಗಿದೆ.

## ಗೋಧಿ ಬೆಲೆ ಇಳಿಮುಖವಾಗುವುದು

ಪ್ರಸಕ್ತ ಸಾಲಿನಲ್ಲಿ ವಿದೇಶಗಳಿಂದ ಭಾರತಕ್ಕೆ ಆಮದು ಮಾಡಲಾಗುವ ಗೋಧಿಯ ಸಾಗಾಣಿಕೆ ವೆಚ್ಚವು ಕಡಿಮೆ ಬೀಳುವುದರಿಂದ, ದೇಶದಲ್ಲಿ ಅದರ ಮಾರಾಟದ ಬೆಲೆ [illegible] ಕಡಿಮೆಯಾಗಲಿರುವುದೆಂದು ಕೇಂದ್ರ [illegible] ದೇಶದ [illegible] ತಿಳಿಸಿರುವರು.

## ಭಾರತಕ್ಕೆ ನೂತನ ಅಮೆರಿಕಾ ರಾಯಭಾರಿ

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸರನ್ನು ವಾಪಸು ಕರೆಸಿ ಅವರ ಸ್ಥಾನದಲ್ಲಿ ಜಾರ್ಜ್ ವಿ ಅಲ್ಲೆನ್‌ರವರನ್ನು ನೇಮಿಸಲಾಗುವುದೆಂದು ಗೊತ್ತಾಗಿದೆ.

## ಭತ್ಯದ ಸಾಗಾಣಿಕೆಗೆ ಅವಕಾಶಕ್ಕಾಗಿ ಮನವಿ

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮುಖ್ಯ ಮಂತ್ರಿಗಳಾದ ಹನುಮಂತಯ್ಯನವರಿಗೆ ಪತ್ರವೊಂದನ್ನು ಬರೆದು ಭತ್ತದ ಸಾಗಾಣಿಕೆಗೆ ಇರುವ ನಿರ್ಬಂಧವನ್ನು ಈಗಿರುವ ಅವಧಿಯು ಮುಗಿದನಂತರ ಮುಂದುವರಿಸಬಾರದೆಂದು ಪ್ರಾರ್ಥಿಸಿದ್ದಾರೆ. ರಾಗಿ, ಜೋಳಗಳ ಮೇಲಿನ ಹತೋಟಿಯನ್ನು ತೆಗೆದಿರುವುದರಿಂದ ಅವುಗಳನ್ನು ಕೊಳ್ಳುವವರಿಗೆ ಕಷ್ಟಮಟ್ಟಿಗೆ ಸೌಲಭ್ಯವಾಗಿರುವುದೆಂದೂ, ಆದರೆ ಹೆಚ್ಚುವರಿ ಭತ್ತದ ಮೇಲೆ ಇನ್ನೂ ಹಿಡಿಟ್ ಹತೋಟಿ ಇರುವುದರಿಂದ ಅದನ್ನು ಸುಲಭವಾಗಿ ಕಂಡುಕೊಳ್ಳಲು ಅವಕಾಶವಿಲ್ಲವೆಂದೂ ಅವರ ಸೂಚಿಸಿರುತ್ತಾರೆ. ಡಿಸೆಂಬರ್‌ನಲ್ಲಿಯೇ ಸುಗ್ಗಿಯು ಆರಂಭವಾಗಿರುವುದರಿಂದ ಅದಾದ ೩ ತಿಂಗಳ ಅವಧಿಯ ನಂತರ ಎಂದರೆ ಈ ತಿಂಗಳ ನಂತರ ಭತ್ತದ ಸಾಗಾಣಿಕೆಗೆ ಯಾವ ಅಡ್ಡಿಯೂ ಇಲ್ಲದಂತೆ ನಿರ್ಧರಿಸಬೇಕೆಂದು ಅವರು ಕೋರಿರುತ್ತಾರೆ.

## ಖಾದಿ ಕೊಳ್ಳುವವರಿಗೆ ವಿಶೇಷ ರಿಯಾಯಿತಿ

ಅಖಿಲ ಭಾರತ ಚರಕಾ ಸಂಘದ ಸೂಚನೆಯಂತೆ [illegible] ರವರಿಗೆ ಖಾದಿ ಕೊಳ್ಳುವವರಿಗೆ ರೂ ೧ ಕ್ಕೆ [illegible] ವಿಶೇಷ ರಿಯಾಯಿತಿ ಕೊಡಲಾಗುವುದು. ಖಾದಿ ಪ್ರೇಮಿಗಳು ಈ ಅವಕಾಶವನ್ನು ಉಪಯೋಗಿಸಿಕೊಂಡು ಖಾದಿ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದು ರಾಜಧಾನಿಯ ಖದರ್ ಪರಿಷತ್ ಸಹಾಯಕ ಸಂಘದ ಕಾರ್ಯದರ್ಶಿಗಳು ಕೋರುತ್ತಾರೆ.

### ಸೀತಾ ಸದನ

[illegible] ಯಲ್ಲಿರುವ ಶ್ರೀ [illegible] ಶ್ರೀನಿವಾಸರಾಯರ "ಸೀತಾ ಸದನ" ದಲ್ಲಿ [illegible] ಸ್ತ್ರೀ ಸಮಾಜದ [illegible] ಆಶ್ರಯದಲ್ಲಿ [illegible] ಶ್ರೀಮತಿ [illegible] ಅಧ್ಯಕ್ಷತೆಯಲ್ಲಿ [illegible] ಶ್ರೀಮತಿ [illegible] (ಅಧ್ಯಕ್ಷೆ) [illegible] ಶ್ರೀಮತಿ [illegible] ಗಳನ್ನು [illegible] ಸಂಘ [illegible] ಶ್ರೀಮತಿ [illegible] (ಕಾರ್ಯದರ್ಶಿ) [illegible]

### ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿ

ಮುಲ್ಕಂಡ ಮಂಡಲಿಯ [illegible] ಮಧ್ಯಾಹ್ನ ೩ ಘಂಟೆಗೆ ಕಾವೇರಿ ಬೆಟ್ಟಂ ಸುಬ್ಬರಾಯ ಶೆಟ್ಟರ ಭವನ [illegible] ಮೈಸೂರು [illegible] ಶ್ರೀ [illegible] ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯುವುದು.



## ನಾಯಿ ಕೆಮ್ಮಿಗೆ ಔಷಧಿ

( WHOOPING COUGH REMEDY )

ಗೂರ್ಲು, ಉಬ್ಬಸ,ಪರಿಣಾಮ.ಸೂರೆ ಮತ್ತು (೧೦೬೩) ಗಳಾಯಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು



## ಕಾಂಗ್ರೆಸ್ ಅಧಿವೇಶನಕ್ಕೆ ೬॥ ಲಕ್ಷ ರೂ. ವೆಚ್ಚ

ಕಳೆದ ತಿಂಗಳು ಹೈದರಾಬಾದಿನ ನಾಂಪಲ್ಲಿ ನಗರದಲ್ಲಿ ನಡೆದ ೫೮ನೇ ಕಾಂಗ್ರೆಸ್ ಮಹಾಧಿವೇಶನಕ್ಕಾಗಿ ೬॥ ಲಕ್ಷ ರೂ ವೆಚ್ಚವಾಯಿತೆಂದೂ, ಅಧಿವೇಶನದ ಸಂಬಂಧದಲ್ಲಿ ಟಿಕೆಟ್ಟುಗಳ ಮಾರಾಟ ಮತ್ತು ಸಹಾಯ ಧನದ ರೂಪದಲ್ಲಿ ಬಂದ ಹಣವು ಮೇಲ್ಕಂಡ ಮೊತ್ತಕ್ಕೆ ಸರಿಯಾಗಬಹುದು ಅಥವಾ [illegible] ನಷ್ಟ [illegible] ಬೀಳಬಹುದೆಂದೂ ಗೊತ್ತಾಗಿದೆ.

## ಮುಂದಿನ ವರ್ಷ ಹಾಸನ-ಮಂಗಳೂರು ರೈಲು ರಸ್ತೆ ಸರ್ವೆ

ಮುಂದಿನ ವರ್ಷ ಸರ್ವೆ ನಡೆಸಲಾಗುವ ಎರಡು ಹೊಸ ರೈಲು ರಸ್ತೆಗಳ ಪೈಕಿ ಹಾಸನ-ಮಂಗಳೂರು ರೈಲು ಮಾರ್ಗವೂ ಒಂದಾಗಿರುತ್ತದೆ.

### ದೀಪದ ಪ್ರಾರಂಭೋತ್ಸವ

ಮೈಸೂರು ತಾಲ್ಲೂಕು ಜಯಪುರದ ಗ್ರಾಮದಲ್ಲಿ, ಜಿಲ್ಲಾಧಿಕಾರಿಗಳಾದ ಶ್ರೀ [illegible] ನವರು ನೆನ್ನೆ ವಿದ್ಯುಚ್ಛಕ್ತಿ ದೀಪಗಳ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಶ್ರೀಮನ್ಮಹಾರಾಜರವರ [illegible] ಸಂತಾನವಾದ [illegible] ವನ್ನು ನೆರವೇರಿಸಲು [illegible] ಜಿಲ್ಲಾಧಿಕಾರಿಗಳು ತಿಳಿಸಿ [illegible] ವಿದ್ಯುಚ್ಛಕ್ತಿಯ [illegible] ಗೆ [illegible] ರವರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

### ಶ್ರೀಮನ್ಮಹಾರಾಜರಿಗೆ ವಕೀಲರ ಸಂಘದ ಶುಭಾಶಯ

ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಬಗ್ಗೆ ರಾಜಧಾನಿಯ ವಕೀಲರ ಸಂಘದವರು ತಮ್ಮ ಹಾರ್ದಿಕ ಆನಂದವನ್ನು ವ್ಯಕ್ತಪಡಿಸಿ ರಾಜಕುಮಾರರಿಗೂ, ರಾಜ ದಂಪತಿಗಳಿಗೂ ಭಗವಂತನು ಸಕಲ ಸನ್ಮಂಗಳಗಳನ್ನುಂಟುಮಾಡಲೆಂದು ಹಾರೈಸಿರುತ್ತಾರೆ.

### ಉಪನ್ಯಾಸ

ನಂಜನಗೂಡು ಭಾರತೀ ಮಂದಿರದ ಆಶ್ರಯದಲ್ಲಿ ಇಲ್ಲಿನ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಸಾಹಿತ್ಯ ವಿದ್ವಾನ್ ವೈ ಚಂದ್ರಶೇಖರ ಶಾಸ್ತ್ರಿಯವರು ನಾಳೆ ಸಂಜೆ ೫.೩೦ ಘಂಟೆಗೆ "ಪುರಾಣಗಳು ಪ್ರತಿಪಾದಿಸುವುದೇನು" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.



ಜಾಹೀರಾತು

## ಮನೆ ಕಟ್ಟುವವರಿಗೆ ಭಂಗಾರದಂತಹ ಸಮಯ

93×11 ಕಟ್ಟಡದಲ್ಲಿರುವ ಮಂಗಳೂರು ಹೆಂಚು, ಇಟ್ಟಿಗೆ, ಕಿಟಕಿ, ಕದ, ತೀರು ಮಂತ ಸಹಿತ ಕಲ್ಲು ಹಗ್ಗಕ್ಕೆ ಸಾಮಾನುಗಳು ಕೂಡಲೇ ಬೆಲೆಗಿವೆ ರೂ 1 600

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು



## ಲಂಡನ್ನಿನಲ್ಲಿ ಭಾರತದ ಗ್ರಾಮ ಕೈಗಾರಿಕೆ ಪ್ರದರ್ಶನ

ಲಂಡನ್ನಿನಲ್ಲಿ ನಡೆಯಲಿರುವ ರಾಣಿ ಎಲಿಜಬೆತ್ತರ ಪಟ್ಟಾಭಿಷೇಕೋತ್ಸವ ನಡೆಯುವ ಸಮಯದಲ್ಲಿ ಭಾರತ ಸರ್ಕಾರದವರು ಇಲ್ಲಿನ ಕುಶಲ ಕಲೆ ಮತ್ತು ಗ್ರಾಮ ಕೈಗಾರಿಕೆಗಳ ವಸ್ತು ಪ್ರದರ್ಶನವೊಂದನ್ನು ನಡೆಸುವರೆಂದು ತಿಳಿದು ಬಂದಿದೆ.

## ಕೃತ್ರಿಮ ಕೌಶಬಂಧ ಸ್ವತೇಗಳ ಬಗ್ಗೆ ಎಚ್ಚರಿಕೆ

ಮದರಾಸಿನಲ್ಲಿ ನಡೆಯುತ್ತಿರುವ [illegible] ಕೃತ್ರಿಮ ಕೌಶಬಂಧ ಸ್ವತೇಗಳ ಬಗ್ಗೆ ನೋಡಿ ಹೋಗದಂತೆ ಅಲ್ಲಿನ ಸರ್ಕಾರದವರು ಜನರನ್ನು ಎಚ್ಚರಿಸಿ ಪತ್ರಿಕಾ ಪ್ರಕಟನೆ ಹೊರಡಿಸಿರುವರು. [illegible] ಸ್ವತೇಗಳನ್ನು ನಡೆಸುವ ಸಂಸ್ಥೆಗಳ ಮೇಲೆ ಕ್ರಮ ಜರುಗಿಸಲಾಗುತ್ತಿದೆಯೆಂದೂ, ಹಲವು ಸಂಸ್ಥೆಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆಯೆಂದೂ ತಿಳಿಸಲಾಗಿದೆ.

### ಸ್ವಾಗತ ಸಮಿತಿ

ರಾಜಧಾನಿಯ ಕೃಷ್ಣರಾಜೇಂದ್ರ ಗಿರಣಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎಂ ಎನ್ ರಾಮಚಂದ್ರರಾಯರ ನಿಧನದ ಬಗ್ಗೆ ಗಿರಣಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀ [illegible] ತಮ್ಮ ಅನುತಾಪವನ್ನು ವ್ಯಕ್ತಪಡಿಸಿ [illegible] ಗಿರಣಿಯ ಮತ್ತು ಕಾರ್ಮಿಕರ ಮೇಲ್ಮೆಗಾಗಿ [illegible] ಸಿರುವ ಸೇವೆಯನ್ನು [illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

### ಲಕ್ಷ್ಮೀಪುರಂ ಮಿಡಲ್ ಸ್ಕೂಲಿನ ಮುಂಚೆ ಬಿಡುವ ವಿಚಾರ

ರಾಜಧಾನಿಯ ಲಕ್ಷ್ಮೀಪುರಂ ಮಿಡಲ್ ಸ್ಕೂಲಿನಲ್ಲಿ ಹುಡುಗರನ್ನು ಮುಂಚಿತವಾಗಿ ಬಿಡಲಾಗುತ್ತಿದೆಯೆಂದು [illegible] ಮುಂಚಿತವಾಗಿ ಬಿಡಲಾಗುತ್ತಿದೆಯೆಂದು [illegible] ಶಾಲೆಯನ್ನು ಮುಂಚಿತವಾಗಿ ಬಿಡಲಾಗುತ್ತಿಲ್ಲವೆಂದು ಅವರು ತಿಳಿಸಿರುವರು.



SRI GAYATHRI TALKIES

From 22-2-53 For 2 days

Paramount's

ATOMIC CITY

With — Gene Barry

Lydia Clarke



Edited, Printed and Published by A R Nagaraju at Sadhvi Press, D Subbaiah Road, Mysore

ನೋಂ. ನಂ 792 WEEKLY EDITION ಬಿಡಿಪ್ರತಿ 6 ಕಾಸು

# ಸಾಧ್ವಿ

ಸಂಪುಟ ೧೭] ಭಾನುವಾರ [ಸಂಚಿಕೆ ೨೩

# ಪೂರ್ವ ಪಂಜಾಬಿನಲ್ಲಿ ರಾಷ್ಟ್ರಪತಿಗಳ ಆಡಳಿತ

## ಆಸ್ಪತ್ರೆ ಶುಲ್ಕ ವಸೂಲಿ ಆಗುವುದು

### ವಾಣಿಜ್ಯ ಸಂಘದ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೨

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಿನ್ನೆ ಇಲ್ಲಿ ಸೇರಿದ್ದ ಸಂಸ್ಥಾನದ ವಾಣಿಜ್ಯ ಸಂಘದ ೩೭ ನೇ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರ ರೋಗಿಗಳಿಂದ ವಸೂಲು ಮಾಡಲಾಗುತ್ತಿರುವ ಒಂದು ಆಣೆ ಶುಲ್ಕವ ... ಆಸ್ಪತ್ರೆಗಳಲ್ಲಿ ಇದ್ದು ಚಿಕಿತ್ಸೆ ಪಡೆ... ರೋಗಿಗಳಿಂದ ವಸೂಲು ಮಾಡುತ್ತಿ... ಶುಲ್ಕವನ್ನು ರದ್ದು ಮಾಡಲು ... ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿ ... ಎಕ್ಸ್‌ರೇ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸೆ ... ಶುಲ್ಕವನ್ನು ಅರ್ಧಕ್ಕೆ ಇಳಿಸಲಾಗುವುದು ... ಈ ಕ್ರಮಗಳಿಲ್ಲವೂ ಪ್ರಿಲ್ ... ರಿಂದ ಜಾರಿಗೆ ಬರುವುವೆಂದೂ ಹೇಳಿದರು ... ಶುಲ್ಕದಲ್ಲೂ ರಿಯಾಯಿತಿ ... ಆವರು ... ಮಾಹೆಯಾನಾ ... ರೂ ಗೆ ... ವರಮಾನವಿರುವವರು ಎಕ್ಸ್‌ರೇ ... ಶುಲ್ಕ ಕೊಡಬೇಕಾಗಿಲ್ಲವೆಂದೂ ... ರೂ ಪಡೆಯುವ ಹೊರ ... ಅರ್ಧ ಶುಲ್ಕವನ್ನು ... ಆದಾಯವಿರುವವರು ... ಶುಲ್ಕವನ್ನು ... ರೂ ಗೆ ... ವರಮಾನವಿರುವವರು ಪೂರ್ತಿ ಶುಲ್ಕವನ್ನು ಕೊಡಬೇಕೆಂದೂ ಹೇಳಿ...

## ಮಾರಾಟ ತೆರಿಗೆ ಪರಿಶೀಲನೆಗೆ ಸಮಿತಿ

... ತೆರಿಗೆಯ ವಿಷಯವನ್ನು ಮುಖ್ಯ ಮಂತ್ರಿಗಳು ಸಭೆಯಲ್ಲಿ ಪ್ರಸ್ತಾಪಿಸಿ ... ಹಲವು ವರ್ಷಗಳು ರಾಜಕೀಯ ಸಾಧನೆಗಾಗಿ ಮಾರಾಟ ತೆರಿಗೆ ... ಬೆಲೆಯನ್ನು ಏರಿಸಿರುವ ... ಸಾಧನಗಳನ್ನಾಗಿ ಮಾಡಿಕೊಂ... ಬಿಡಲಿಕೆಯನ್ನು ತೋರಿಸು... ಆದರೆ ಅದರಿಂದ ಪರಿಹಾರ ... ಮಾರಾಟ ... ಪರಿಶೀಲನೆ ನಡೆಸಲು ಒಂದು ... ಕೂಡಿದ ಸಮಿತಿಯೊಂದನ್ನು ... ಹೇಳಿದರು

## ಕೆನಡಾದಲ್ಲಿ ಮಾರಾಟ ತೆರಿಗೆ ಪೂರ್ಣ ರದ್ದು

ಉತ್ತರ ಅಮೆರಿಕದ ಕೆನಡಾ ರಾಜ್ಯದ ... ಆಯವ್ಯಯ ಪಟ್ಟಿಯ ಪ್ರಕಾರ ... ಮಾರಾಟ ತೆರಿಗೆಯನ್ನು ಪೂರ್ಣ ... ಮಾಡಲಾಗುವುದೆಂದೂ, ... ಅಗ್ಗದ ಬೆಲೆಯಲ್ಲಿ ... ಆದಾಯ ತೆರಿಗೆಯನ್ನು ... ಮತ್ತು ರೇಡಿಯೋ ರಹ ... ವನ್ನು ರದ್ದು ಮಾಡುವುದು ... ಆಯವ್ಯಯದ ಅಂದಾಜ ... ವಾಗಿರುವುದೆಂದೂ ತಿಳಿದು ಬಂದಿದೆ

## ... ಗೆ ಹೋದ ಬಾಲಕಿಯರ ಮಾಯ

... ಬಸವನಗುಡಿಯಲ್ಲಿರು ... ಪಾಠಶಾಲೆಯಲ್ಲಿ ಓದು ... ವರ್ಷ ವಯಸ್ಸಿನ ಟಿ ಎಸ್. ... ಮತ್ತು ... ಬ್ಬರು ವಿದ್ಯಾರ್ಥಿನಿಯರು ... ಶಾಲೆಗೆ ಹೋ... ನೆಗೆ ಹಿಂದಿರುಗದೇ ಇರುವ ... ಪತ್ತೆಯಿಲ್ಲವೆಂದು ವರದಿಯಾ...

## ಬರುವ ಸೋಮವಾರ ನಾಮಕರಣ

ಮೈಸೂರು ೨೨

ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಸಂಬಂಧವಾಗಿ ನಾಳೆ ಬೆಳಗ್ಗೆ ಅರಮನೆಯಲ್ಲಿ ವಿಶೇಷ ರಾಜ ಸಭೆಯೊಂದನ್ನು ಏರ್ಪಡಿಸಲಾಗಿದೆ. ಮುಖ್ಯ ಮಂತ್ರಿಗಳೂ, ಇತರ ಸಚಿವರೂ ಮತ್ತು ಹೈ ಕೋರ್ಟ್ ನ್ಯಾಯಾಧೀಶರೂ ಸಭೆಗೆ ಆಹ್ವಾನಿಸಲ್ಪಟ್ಟಿರುವರು. ರಾಜಕುಮಾರರ ನಾಮಕರಣವು ಬರುವ ಸೋಮವಾರ ಜರುಗುವುದು

### ರಾಮಕೃಷ್ಣ ಪರಮಹಂಸರ ದಿನಾಚರಣೆ

ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನಾಚರಣೆ ಪ್ರಯುಕ್ತ ವಾಣಿವಿಲಾಸ ಮೊಹಲ್ಲಾದ ರಾಮಕೃಷ್ಣಾಶ್ರಮದಲ್ಲಿ ಈ ದಿನ ಸಂಜೆ ೬-೩೦ಕ್ಕೆ ಶ್ರೀ ಎಸ್ ರಾಮಚಂದ್ರರಾಯರಿಂದ ದೇವರನಾಮಗಳೂ, ಶ್ರೀಗಳಾದ ಕೆ ವಿ ರಾಘವಾಚಾರ್, ಎಂ ವಿ ಕೃಷ್ಣರಾವ್ ಮತ್ತು ಸೋಮನಾಥಾನಂದಜೀಯವರಿಂದ ಉಪನ್ಯಾಸಗಳೂ ಏರ್ಪಾಡಾಗಿವೆ

### ಉಪನ್ಯಾಸ

ಮಹಾರಾಜಾ ಕಾಲೇಜಿನ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಜೂನಿಯರ್ ಬಿ ಎ ಹಾಲಿನಲ್ಲಿ ಇಂಗ್ಲೆಂಡಿನ ಮಿಸ್ ಸುಸನ್ನೆ ಬರ್ಹಾರ್ಟ್ ಮತ್ತು ಸ್ವಿಟ್ಜರ್ಲೆಂಡಿನ ಮಿಸ್ ಮೇರಿಯನ್ನೆ ಸ್ಟಿಂಜರ್‌ರವರು ಇಂಟರ್‌ನ್ಯಾಷನಲ್ ವಾಲಂಟರಿ ಸೋಷಿಯಲ್ ಸರ್ವಿಸ್ ಮೂವ್‌ಮೆಂಟ್ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಶ್ರೀ ಎಂ ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸುವರು

## ರಹದಾರಿ ಇಲ್ಲದೆ ೧೦೦ ಮಣ ಧಾನ್ಯ ಸಾಗಲು ಅವಕಾಶ

... ಗಾರರು ತಾವು ಬೆಳೆದ ಧಾನ್ಯ ... ೦ ಮಣಗಳಷ್ಟನ್ನು ರಹದಾರಿ ಇಲ್ಲದೆ ಇಟ್ಟುಕೊಳ್ಳಲು ಅವಕಾಶ ಕಲ್ಪಿಸುವ ಅಧಿಕಾರವನ್ನು ಸಂಸ್ಥಾನ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಇತ್ತಿರುತ್ತದೆ

## ಪೆಪ್ಸು ಮುಖ್ಯ ಮಂತ್ರಿಗಳ ಚುನಾವಣೆ ರದ್ದು

ಪಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಒಕ್ಕೂಟದ ಪ್ರಾಂತ್ಯದ ದ್ವಿಸದಸ್ಯ ಕ್ಷೇತ್ರದಿಂದ ಸಂಸ್ಥಾನ ಶಾಸನ ಸಭೆಗೆ ಚುನಾಯಿತರಾಗಿದ್ದ ಅಲ್ಲಿನ ಮುಖ್ಯ ಮಂತ್ರಿ ಸರ್ದಾರ್ ಜ್ಞಾನಸಿಂಗ್ ರೇರ್‌ವಾಲಾ ಮತ್ತು ಕಾರ್ಮಿಕ ಸಚಿವ ಸರ್ದಾರ್ ... ಸಿಂಗ್ ಗಿಲ್‌ರವರ ಬಗ್ಗೆ ಚುನಾವಣಾ ನ್ಯಾಯಾಲಯದ ಮುಂದೆ ತಕರಾರು ಅರ್ಜಿಗಳು ಹೂಡಲ್ಪಟ್ಟು, ಅದರ ತೀರ್ಪಿನ ಪ್ರಕಾರ ಮೇಲ್ಕಂಡ ಇಬ್ಬರು ಸಚಿವರೂ ತಮ್ಮ ಸ್ಥಾನಗಳನ್ನು ಕಳೆದುಕೊಂಡಿರುವರು. ಆದರೆ ಹೊಸದಾಗಿ ಮರು ಚುನಾವಣೆ ನಡೆಯಲು ಆಜ್ಞೆಯಾಗಿದೆ. ಅಲ್ಲದೆ ಸಂಯುಕ್ತ ಪಕ್ಷದ ... ರು ಜನ ಸದಸ್ಯರ ಮಂತ್ರಿ ಮಂಡಲದ ಸ್ಥಿತಿ ಇರುವವರೆಗೆ ... ಚುನಾವಣೆಯು ರದ್ದಾಗಿದೆ. ಇನ್ನೊಬ್ಬ ಸಚಿವರಾದ ಸರ್ದಾರ್ ... ಸಿಂಗ್‌ರವರ ಮೇಲಿನ ಚುನಾವಣೆ ತಕರಾರು ಅರ್ಜಿಯು ಪರಿಶೀಲನೆಯು ಬಾಕಿ ಇದೆ. ಅಲ್ಲಿನ ಯಾವುದಾದರೂ ಒಂದು ಪಕ್ಷವು ಸುಭದ್ರವಾದ ಸರ್ಕಾರವನ್ನು ಸ್ಥಾಪಿಸುವ ಬಲವನ್ನು ಪಡೆಯುವವರೆಗೆ ಸಂಸ್ಥಾನದಲ್ಲಿ ರಾಷ್ಟ್ರಪತಿಗಳ ಆಡಳಿತವನ್ನು ಜಾರಿಗೆ ತರಬೇಕೆಂದು ಸಲಹೆಗಳು ಬಂದಿರುವುವೆಂದೂ ಗೊತ್ತಾಗಿದೆ

## ಬೊಂಬಾಯಿ ಬಜೆಟ್ಟಿನಲ್ಲಿ ೭॥ ಲಕ್ಷ ರೂ ಹೆಚ್ಚುವರಿ

ಬೊಂಬಾಯಿ ಪ್ರಾಂತ್ಯದ ೫೩-೫೪ ನೇ ಸಾಲಿನ ಆಯವ್ಯಯದ ಅಂದಾಜಿನ ಪ್ರಕಾರ ೭॥ ಲಕ್ಷ ರೂ ಗಳು ಹೆಚ್ಚುವರಿ ಬರುವುದರಿಂದ ಅಲ್ಲಿ ಹೊಸದಾಗಿ ಯಾವ ತೆರಿಗೆಯನ್ನೂ ವಿಧಿಸಲಾಗುವುದಿಲ್ಲವೆಂದೂ, ಅಥವಾ ಈಗಿರುವ ತೆರಿಗೆಗಳನ್ನು ಹೆಚ್ಚಿಸಲಾಗುವುದಿಲ್ಲವೆಂದೂ ಗೊತ್ತಾಗಿದೆ

★ ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟಧಾರಣೋತ್ಸವದ ಮೆರವಣಿಗೆ ನೋಡಲು ದೀಪದ ಕಂಬಗಳ ಮೇಲೆ ಹತ್ತುವುದನ್ನು ತಪ್ಪಿಸುವುದಕ್ಕೋಸ್ಕರ ಕಂಬಗಳಿಗೆಲ್ಲ ಪೆಟ್ರೋಲಿಯಂ ಜೆಲ್ಲಿಯನ್ನು ಬಳಿಯಲಾಗುವುದೆಂದು ವರದಿಯಾಗಿದೆ

## ಕೆಂಪು ಚೀಣೀಯರು ಗಡಿ ಪ್ರದೇಶ ಸೃಜಿಸುತ್ತಿರುವರು

ಕೆಂಪು ಚೀಣಾ ಮತ್ತು ಬರ್ಮಾ ಗಡಿಯಲ್ಲಿ ರಾಷ್ಟ್ರೀಯ ಚೀಣಾ ಸೈನಿಕರು ಯುದ್ಧ ಪರಿಸ್ಥಿತಿಯನ್ನು ಉಂಟುಮಾಡಿರುವುದರಿಂದ ಗಡಿ ಪ್ರದೇಶದಲ್ಲಿ ಕೆಂಪು ಚೀಣಕ್ಕೆ ಸೇರಿದ ಯುನ್ನಾನ್ ಪ್ರಾಂತ್ಯದಲ್ಲಿರುವ ... ಗಡಿಯಿಂದ ೧೫ ಮೈಲಿ ಒಳಕ್ಕಿರುವ ಪ್ರದೇಶಗಳಿಗೆ ಹೋಗಬೇಕೆಂದು ಆಜ್ಞೆಯಾಗಿರುವುದರಿಂದ ಅನೇಕರು ಮನೆ ಮಠಗಳನ್ನು ತ್ಯಜಿಸಿ ಒಳ ಪ್ರದೇಶಕ್ಕೆ ಹೋಗಿರುವರೆಂದು ವರದಿಯಾಗಿದೆ

## ಹೈದ್ರಾಬಾದ್ ವಿಭಜನೆಗೆ ಸಿಕಂದರಾಬಾದ್ ನಿರ್ಣಯ

ಸಿಕಂದರಾಬಾದಿನ ಪೌರಸಭೆಯು ಮೊನ್ನೆ ಸೇರಿ ಆಂಧ್ರ ರಾಜ್ಯದ ನಿರ್ಮಾಣದ ನಿರ್ಧಾರವನ್ನು ಸ್ವಾಗತಿಸಿತು. ಹೈದರಾಬಾದಿನ ಎಂಟು ಜಿಲ್ಲೆಗಳು ಆ ಪ್ರಾಂತ್ಯಕ್ಕೆ ಸೇರುವಂತೆ ಸಂಸ್ಥಾನವನ್ನು ವಿಭಜಿಸಬೇಕೆಂದು ಸಂಸ್ಥಾನ ಸರ್ಕಾರವನ್ನು ಕೋರುವ ನಿರ್ಣಯವು ಅಂಗೀಕೃತವಾಯಿತು

## ಶುಲ್ಕ ಪದವಿ ಹಾಕಿಕೊಂಡ ವೈದ್ಯರಿಗೆ ಜುಲ್ಮಾನೆ

ರಾವಲ್ಪಿಂಡಿಯ ಡಾ|| ಟಾಹಿರ್ ಹಮೀದ್ ಖಾನ್ ಎಂಬ ವೈದ್ಯರು ತಮ್ಮ ಹೆಸರಿನ ಮುಂದೆ ತಾವು ಪಡೆಯದೇ ಇರುವ ಎಂ ಬಿ ಬಿ ಎಸ್ ಮತ್ತು ಡಿ ಎಂ ಆರ್ ಎಸ್ ಎಂಬ ಡಿಗ್ರಿಗಳನ್ನು ಹಾಕಿಕೊಂಡುದಕ್ಕಾಗಿ ಅವರಿಗೆ ೧೫೦ ರೂ ಜುಲ್ಮಾನೆ ವಿಧಿಸಲಾಗಿದೆ

## ೩೬ ವರ್ಷಗಳ ಕಾಲ ಒಂದೇ ಕಛೇರಿಯಲ್ಲಿದ್ದು ನಿವೃತ್ತಿ

ಹಾಸನದ ಜಿಲ್ಲಾ ಕಛೇರಿಯಲ್ಲಿ ಟೈಪಿಸ್ಟರಾಗಿದ್ದ ಶ್ರೀ ಎಚ್ ಶಾಂತಾ ಎಂಬುವರು ಒಂದೇ ಕಛೇರಿಯಲ್ಲಿ ೩೬ ವರ್ಷ ಕಾಲ ಇದ್ದು ಕಳೆದ ಬುಧವಾರ ನಿವೃತ್ತರಾಗಿರುವರು

## ೧೧೫ ವರ್ಷದ ವೃದ್ಧ ಮಹಿಳೆ

ಹೈದರಾಬಾದಿನ ... ಎಂಬ ಊರಿನಲ್ಲಿ ... ಬೇಗಂ ಎಂಬ ೧೧೫ ವರ್ಷದ ವೃದ್ಧ ಮಹಿಳೆಯು ಕಳೆದ ಶುಕ್ರವಾರ ತನ್ನ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳ ನಡುವೆ ೧೧೫ನೇ ವರ್ಷದ ಹುಟ್ಟಿದ ಹಬ್ಬವನ್ನು ಮಾಡಿಕೊಂಡಳೆಂದೂ, ಅವಳ ನೇತ್ರ ದೃಷ್ಟಿಯೂ ಮತ್ತು ಆರೋಗ್ಯವೂ ತೃಪ್ತಿಕರವಾಗಿರುವುವೆಂದೂ ವರದಿಯಾಗಿದೆ

## ಬೆಂಕಿ ಅಪಘಾತದಲ್ಲಿ ನಾಲ್ಕು ಜನರು ಭಸ್ಮ

ಮಳವಳ್ಳಿಗೆ ೯ ಮೈಲಿ ದೂರದಲ್ಲಿರುವ ಮಂಚನಹಳ್ಳಿಯ ಕುಳ್ಳಯ್ಯ ಎಂಬುವರ ಮನೆಗೆ ಕಳೆದ ಬುಧವಾರ ಬೆಂಕಿ ಬಿದ್ದ ಪರಿಣಾಮವಾಗಿ ಕುಳ್ಳಯ್ಯ, ಮುದ್ದಮ್ಮ, ಪುಟ್ಟಮಾದು ಮತ್ತು ಲಿಂಗಯ್ಯ ಎಂಬ ನಾಲ್ಕು ಜನರೂ, ೩ ಎತ್ತುಗಳೂ, ೨೩ ಆಡುಗಳೂ ಜೀವ ಸಹಿತ ಸುಟ್ಟುಹೋದವೆಂದು ವರದಿಯಾಗಿದೆ. ಮೂರು ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆ. ೧೫ ವರ್ಷದ ಬಾಲಕಿಯೊಬ್ಬಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ

# ವಾರ ಭವಿಷ್ಯ

ತಾ|| ೨೨-೩ ೫೩ ರಿಂದ ೧೯-೫೩ ರ ವರೆಗೆ

ಮೇಷ:- ಆರೋಗ್ಯ ಚೆನ್ನಾಗಿರಲಾರದು, ವಿಶ್ವಾಸ ದ್ರೋಹಿಗಳಿಂದ ಹಣಕಾಸಿನ ಬಿಕ್ಕಟ್ಟು ಹೆಚ್ಚು ತಾ|| ೨೫, ೨೬ ಖರ್ಚು ಹೆಚ್ಚು, ಅಪಘಾತ ಸಂಭವ

ವೃಷಭ ಆರೋಗ್ಯ ಉತ್ತಮ, ಆರ್ಥಿಕ ಸ್ಥಿತಿ ಸಾಧಾರಣ, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಸೌಕರ್ಯದಲ್ಲಿ ಸನ್ಮಾನ ತಾ|| ೨೫, ೨೬ ಪ್ರವಾಸ ಸಂಭವ, ವಿಶೇಷ ವಾರ್ತೆ

ಮಿಥುನ ಆರೋಗ್ಯ ಉತ್ತಮ ಬಂಧು ಮಿತ್ರರ ಭೇಟಿ, ಆರ್ಥಿಕ ಸ್ಥಿತಿ ಸಮರ್ಪಕವಾಗಿರವುದು, ವ್ಯಾಪಾರಾದಿಗಳಲ್ಲಿ ಯಶಸ್ಸು ತಾ|| ೨೭, ೨೮ ಅಪ್ತರ ಭೇಟಿ, ಔತಣ

ಕರ್ಕ – ಆರೋಗ್ಯ ಸಮರ್ಪಕ, ಆರ್ಥಿಕ ಸ್ಥಿತಿ ಉತ್ತಮ, ವ್ಯವಹಾರಗಳಲ್ಲಿ ಪ್ರಗತಿ, ಶುಭ ಕಾರ್ಯಗಳು ಜರುಗುವುವು ತಾ|| ೨೫, ೨೬ ಶುಭಕಾರ್ಯ ಗಳು

ಸಿಂಹ.- ಆರೋಗ್ಯದ ಕಡೆ ಎಚ್ಚರವಿರಲಿ, ಹಣಕಾಸಿನ ಬಗ್ಗೆ ಜಾಗರೂಕರಾಗಿರಲಿ, ಪರರನ್ನು ನಂಬುವುದು ಹಾನಿಕರ, ವೃಥಾ ಖರ್ಚುಗಳ ಭೀತಿ ತಾ|| ೨೫, ೨೬ ಅಗ್ನಿ ಭಯ, ನಷ್ಟ

ಕನ್ಯಾ – ಆರೋಗ್ಯ ಉತ್ತಮವಿರಲಾರದು, ಪ್ರವಾಸ ಬೇಡ, ನಷ್ಟ ಸಂಭವ, ಆಹಾರದ ಬಗ್ಗೆ ನಿಗಾ ಇರಲಿ ವ್ಯಾಪಾರಾದಿಗಳಲ್ಲಿ ತೊಂದರೆ ತಾ|| ೨೫ ೨೬ ಧನ ಲಾಭ, ಚಿಂತಾ ನಾಶ

ತುಲ ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಚೆನ್ನಾಗಿರುವುದು, ಶುಭ ಕಾರ್ಯಗಳು ಜರುಗುವುವು ಪ್ರವಾಸ ಸುಖವಾಗಿರುವುದು ತಾ|| ೨೫, ೨೮ ವಿಶೇಷ ಪತ್ರ, ಔತಣ ಭೋಜನ

ವೃಶ್ಚಿಕ.–ಆರೋಗ್ಯ ಉತ್ತಮ ಮಂಗಳ ಕಾರ್ಯಗಳಿಂದ ಶ್ರಮ, ಅಧಿಕ ಖರ್ಚು, ವ್ಯಾಪಾರಾದಿಗಳಲ್ಲಿ ಲಾಭ ತಾ|| ೨೫, ೨೬ ಆಪ್ತರ ಭೇಟಿ, ಅಲ್ಪಪ್ರವಾಸ

ಧನು:- ಆರೋಗ್ಯ ಚೆನ್ನಾಗಿರುವುದಿಲ್ಲ, ಕೈಗೊಂಡ ಕಾರ್ಯಗಳಲ್ಲಿ ತೊಂದರೆ, ಆಸ್ತಿಪಾಸ್ತಿಗಳ ಬಗ್ಗೆ ತೊಂದರೆ ಹಣಕಾಸಿನ ಬಿಕ್ಕಟ್ಟು ತಾ|| ೨೫, ೨೬ ಅಪಘಾತ ಭಯ, ಧನ ಹಾನಿ

ಮಕರ – ಆರೋಗ್ಯ ಉತ್ತಮ, ಸತ್ಪ್ರಯತ್ನದಿಂದ ಪ್ರಗತಿದಾಯಕ ಘಟನೆಗಳಾಗುವುವು. ವ್ಯವಹಾರಗಳಲ್ಲಿ ಯಶಸ್ಸು ತಾ|| ೨೫, ೨೬ ಪ್ರವಾಸ ಸಂಭವ ವಿಶೇಷ ಸುದ್ದಿ

ಕುಂಭ – ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ವ್ಯಾಪಾರಾದಿಗಳಲ್ಲಿ ಪ್ರಗತಿ, ಪ್ರವಾಸ ಸಂಭವ ತಾ|| ೨೭, ೨೮ ಆಪ್ತರ ಭೇಟಿ, ಧನ ಲಾಭ

ಮೀನ ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಮಂಗಳ ಕಾರ್ಯಗಳು ಜರುಗುವುವು ಹಣಕಾಸಿನ ಸ್ಥಿತಿ ಚೆನ್ನಾಗಿರುವುದು ತಾ|| ೨೫, ೨೬ ಅಲ್ಪ ಪ್ರವಾಸ, ಔತಣ ಭೋಜನ

## ಜಪಾನಿ ಪದ್ಧತಿಯಲ್ಲಿ ಭತ್ತ ಬೆಳೆಯುವ ಪ್ರಯೋಗ

ಗಾಂಧಿ ಸ್ಮಾರಕ ನಿಧಿಯ ಮೈಸೂರು ಸಂಸ್ಥಾನ ಶಾಖೆಯ ಆಶ್ರಯದಲ್ಲಿ ಹಾಸನ ಜಿಲ್ಲೆಯಲ್ಲಿರುವ ಕಾರೆಕೆರೆಯಲ್ಲಿ ಜಪಾನಿ ಪದ್ಧತಿಯಲ್ಲಿ ಭತ್ತ ಬೆಳೆಯುವ ವಿಧಾನವನ್ನು ತಾ|| ೨೭ ೩ ೫೩ ರಂದು ಪ್ರದರ್ಶಿಸಲಾಗುವುದು ಗಾಂಧಿ ಸ್ಮಾರಕ ನಿಧಿಯ ಕೃಷಿ ವಿಸ್ತಾರ ಸಮಿತಿಯ ಡೈರೆಕ್ಟರರಾದ ಶ್ರೀ ಪ್ರಾಣಲಾಲ್ ಕಪಾಡಿಯಾ, ಲಕ್ಷ್ಮೀಪುರದ ಸ್ ಪುರುಷೋತ್ತಮ್ ಮತ್ತು ಎಸ್ ಜಿ ಪಾಟೀಲ್‌ರವರು ಭತ್ತ ಬೆಳೆಯುವ ವಿಧಾನವನ್ನು ಪ್ರದರ್ಶಿಸುವರು ಜಪಾನಿ ಪದ್ಧತಿಯನ್ನು ಅನುಸರಿಸಿದರೆ ಒಂದು ಎಕರೆ ಒಂದರಲ್ಲಿ ಬೆಳೆಯಲಾಗ ತ್ತಿರುವ ಭತ್ತದ ಪ್ರಮಾಣವನು ಕನಿಷ್ಠಪಕ್ಷ ನಾಲ್ಕು ಪಟ್ಟು ಹೆಚ್ಚಾಗಿ ಬೆಳೆಯ ಬಹುದೆಂಬುದು ಪ್ರಯೋಗದಿಂದ ಗೊತ್ತಾಗಿದೆ ಸಾರ್ವಜನಿಕರೂ ಮುಖವಾಗಿ ವ್ಯವಸಾಯಗಾರರೂ ಈ ಪ್ರದರ್ಶನವನ್ನು [illegible] ಉಪಯೋಗ ಪಡೆಯಬೇಕೆಂದು [illegible] ಶ್ರೀ [illegible] ದಾಸಪ್ಪನವರು ಕೋರುತ್ತಾರೆ ಪ್ರದರ್ಶನ [illegible] ಬೆಳಿಗ್ಗೆ ೮ ರಿಂದ ಮಧ್ಯಾಹ್ನ [illegible] ವರೆಗೆ [illegible] ಪ್ರದರ್ಶನ [illegible]

### ಸಂತೋಷ ಸಮಾರಂಭ

ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ಸಂತೋಷಾರ್ಥ ನಗರದ ಧರ್ಮದ ಫ್ರೆಂಡ್ಸ್ ಯೂನಿಯನ್ ಸ್ಪೋರ್ಟ್ಸ್ ಕ್ಲಬ್ಬಿನವರು ಕಳೆದ ಶುಕ್ರವಾರ ಒಂದು ಸಂತೋಷ ಸಮಾರಂಭವನ್ನು ಏರ್ಪಡಿಸಿ ನೂತನ ರಾಜಕುಮಾರರಿಗೂ, ರಾಜ ಮನೆತನದವರಿಗೂ ಭಗವಂತನ ಆಯುರಾರೋಗ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸಿದರು ಕ್ಲಬ್ಬಿನ ಸದಸ್ಯರಿಂದ ಶ್ರೀ ನಾಗಪ್ಪನವರು ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು

## ಮಿಡಲ್‌ಸ್ಕೂಲ್ ವಿದ್ಯಾರ್ಥಿಗಳಿಗಾಗಿ

A Guide to M S English

| | |
|---|---|
| Text | 0 8 0 |
| Simplified Grammar | 0 6 0 |
| ಗದ್ಯ ಪದ್ಯಗಳ ಪ್ರಶ್ನೋತ್ತರ | 0 8-0 |
| ಬೆಂಗಳೂರು ಕೆ ಪಬ್ಲಿಕೇಷನ್ಸ್ | |
| 10 ಪ್ರಬಂಧಗಳು | 0-3-0 |
| ಯೋಗಕ್ಷೇಮದ ಕಾಗದದ ಮಾದರಿಗಳು | 0-1-0 |

ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ

C T C PUBLICATIONS MYSORE

Edited Printed and Published by A R Nagarajan at Sadhvi Press, D Subbiah R d, Mysore

## ಚಿಕ್ಕಮಗಳೂರು-ಕಡೂರು ರೈಲು ಹಾಕಲು ಒತ್ತಾಯ

ಕೇಂದ್ರ ಪಾರ್ಲಿಮೆಂಟಿನಲ್ಲಿ ನೆನ್ನೆ ರೈಲ್ವೆ ಆಯವ್ಯಯದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಹಲವು ಸದಸ್ಯರು ಪ್ರಯಾಣದ ದರಗಳನ್ನು ಇಳಿಸಬೇಕೆಂದು ಸಲಹೆ ಮಾಡಿ, ಅದರಿಂದ ಹೆಚ್ಚು ಜನರು ಪ್ರಯಾಣ ಮಾಡುವರೆಂದೂ, ಆ ಮೂಲಕ ರೈಲ್ವೆ ವರಮಾನವು ಅಧಿಕವಾಗುವುದೆಂದೂ ತಿಳಿಸಿದರು ಮೈಸೂರಿನ ಸದಸ್ಯರಾದ ಶ್ರೀ ಸಿ ಪಿ ಬಸಪ್ಪಶೆಟ್ಟರು ರೈಲ್ವೆ ಯೋಜನೆಯಲ್ಲಿ ದಕ್ಷಿಣ ಭಾರತವನ್ನು ಉಪೇಕ್ಷಿಸಲಾಗಿದೆಯೆಂದು ಟೀಕಿಸಿ ಚಿಕ್ಕಮಗಳೂರು-ಕಡೂರು ರೈಲು ಮಾರ್ಗವನ್ನು ನಿರ್ಮಿಸಬೇಕೆಂದು ಒತ್ತಾಯಪಡಿಸಿದರು

### ಮೈ ರಿ ಸ್ಟ್ರೀ ಕಾ ರ

ಬೆಂಗಳೂರು ಸಿಟಿ ನರಸಿಂಹರಾಜ ರಸ್ತೆಯಲ್ಲಿರುವ ಕವಾಸ್‌ಜಿ ಅಂಡ್ ಜನರಲ್ ಏಜನ್ಸೀಸ್ ಸಂಸ್ಥೆಯ ಶ್ರೀ ಎಂ ವಿ ಕೃಷ್ಣಮೂರ್ತಿಯವರು ನಗರಕ್ಕೆ ಬಂದಿರುವ ಮೈಸೂರಿಯನ್ನು ಆದರಿಸಿ [illegible]

### ಆಕಾಶವಾಣಿ ನ [illegible] ಕಾರ್ಯಕ್ರಮ

[illegible] ಸುಬ್ರಹ್ಮಣ್ಯ [illegible] ಮಧ್ಯಾಹ್ನ [illegible] ಸಂಗೀತ [illegible] ಮತ್ತು [illegible]

[illegible]

ಎಲ್ಲಾ ಬಗೆಯ

## ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

## ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

## ಮೈಸೂರು ಪೇಟೆ ಧಾರಣೆ

| | ಕಳ್ಳೆ | ರೂ ಅಣೆ | ರೂ ಗೆ |
|---|---|---|---|
| ಕಡಲೆಕಾಯಿ | | ೨೨ ೧೦ | ೫೯ ೦ ೦ |
| ಎಳ್ಳು | | ೭೧ ೪ ೦ | |
| ಹರಳುಬೀಜ | | ೪೫ ೦ ೦ | ೪೧ ೧೨ ೦ |
| ಹುಚ್ಚೆಳ್ಳು | | ೪೪ ೧೨ ೦ | ೫೭ ೦ ೩ |
| ಹೊಂಗೇಬೀಜ | | ೧೫ ೦ ೦ | ೩೯ ೦ |
| ಹುರುಳಿ | | ೪೬-೩ ೦ | ೪೦ ೦ ೦ |
| ಹಸರು | | ೫೬ ೩-೦ | ೬೩ ೬ ೦ |
| ಅವರೆ | | ೪೦ ೦ ೦ | ೪೦ - ೨ |
| ಹಲಸಂದೆ | | ೪೮ ೩ ೦ | ೬೦ ೩ |
| ಮೆಣಸಿನ ಕಾಯಿ ಪುಡಿ | | ೧೦ ೧೦ ೦ | ೭೯ ೦ ೦ |
| ಹುಣಸೇಹಣ್ಣು | | ೩ ೮ ೦ | ೫ ೨-೦ |
| ಒಣಗೆಕಾಯಿ | | ೩-೧೫ ೦ | ೪ ೧೪ ೦ |
| ಬೆಲ್ಲ | | ೫-೦-೦ | |
| ತೆಂಗಿನಕಾಯಿ | ೧,೧೧೦ಕ್ಕೆ | ೧೫೯ ೦ ೦ | ೫೯ ೦ ೦ |

### ನೂತನ ರಾಜಕುಮಾರರಿಗೆ ಶ್ರೇಯಃ ಪ್ರಾರ್ಥನೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಧರ್ಮ ಪ್ರವರ್ತಕ ಹೊಂಬಾಳೆ ರಂಗಯ್ಯನವರ ಸಾರ್ವಜನಿಕ ಉಚಿತ ವಿದ್ಯಾರ್ಥಿ ನಿಲಯದಲ್ಲಿ, ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಸಂಬಂಧದಲ್ಲ ಈ ದಿನ ಬೆಳಗ್ಗೆ, ವಕೀಲರಾದ ಶ್ರೀ ಎಸ್ ಪುಟ್ಟಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಂತೋಷಕೂಟವೊಂದು ಜರುಗಿತು ನೂತನ ರಾಜಪುತ್ರರಿಗೂ, ರಾಜ ಮನೆತನದವರಿಗೂ ಶ್ರೇಯಃ ಪ್ರಾರ್ಥನೆ ಮಾಡಿದ ನಂತರ ನೆರೆದಿದ್ದವರಿಗೆ ಶ್ರೀ ಹೊಂಬಾಳೆ ರಂಗಯ್ಯನವರು ಸಿಹಿ ತಿಂಡಿ ಮತ್ತು ಫಲಾಹಾರಗಳನ್ನು ಏರ್ಪಡಿಸಿದ್ದರು

## ರಾಜಕಮಲ್ ಮೈಸೂರು

[illegible] ರಿಂದ ಅನೇಕ 6ನೇ ವಾರ

ಪ್ರತಿದಿನ 3 ಪ್ರದರ್ಶನಗಳು

ಗುಬ್ಬಿ ಕರ್ನಾಟಕ ಫಿಲಂಸ್‌ರವರ

ಕನ್ನಡ ಚಿತ್ರ

## ಗುಣಸಾಗರಿ

ಭೂಮಿಕೆ ಸಂಪದಾಯ, ಹೊನ್ನಪ್ಪ

ಜಿ ಎಸ್ ವೀರಣ್ಣ, ಬಾಲಯ್ಯ

ಮೊದಲಾದ್ವರು ಭಾಗವಹಿಸಿದ್ದಾರೆ

## ಕೇಂದ್ರ ಆಹಾರ ಸಂಶೋಧನಾಲಯ

## ಟೆಂಡರ್ ನೋಟೀಸ್

ತಾರೀಖು 1 4 1953 ರಿಂದ 31 3 1954 ರ ವರೆಗೆ ಕೆಳಗೆ ಕಾಣಿಸಿರುವ ಸಾಮಗ್ರಿಗಳನ್ನು ಈ ಸಂಶೋಧನಾಲಯಕ್ಕೆ ಸರಬರಾಜು ಮಾಡುವ ಬಗ್ಗೆ, ಆಲಯದವರಿಂದ ಗೊತ್ತುಮಾಡಲ್ಪಟ್ಟಿರುವ ಅರ್ಜಿ ನಮೂನೆಗಳಲ್ಲಿ ಮೊಹರಾದ ಟೆಂಡರುಗಳನ್ನು ಕರೆಯಲಾಗಿದೆ --

1) ಹೊಸದಾಗಿರುವ ಹಣ್ಣುಗಳು 2) ಹೊಸದಾಗಿರುವ ತರಕಾರಿಗಳು 3) ಒಣಗಿಸಿದ ಹಣ್ಣುಗಳು ಮತ್ತು ಸಂಬಾರ ಪದಾರ್ಥಗಳು 4) ಮೊಟ್ಟೆ ಹೊಸದಾಗಿರುವ ಮಾಂಸ ಮತ್ತು ಕೋಳಿಗಳು.

ಕ್ರಮವಾಗಿ ಭರ್ತಿ ಮಾಡಲ್ಪಟ್ಟಿರುವ ಟೆಂಡರುಗಳು 5 ರೂ ಟೆಂಡರು ಡಿಪಾಜಿಟ್ಟು ( ವಾಪಸು ಮಾಡುವಂತಹುದು ) ನೊಡನೆ, ಡೈರೆಕ್ಟರ್, ಸೆಂಟ್ರಲ್ ಫುಡ್ ಟೆಕ್ನಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಚಾಮುಂಡಿ ಮೊಹಲ್ಲಾ ಪೋಸ್ಟ್ ಆಫೀಸ್, ಮೈಸೂರು- ಇವರಿಗೆ 1953 ನೇ ಮಾರ್ಚಿ 14 ರೊಳಗೆ ತಲುಪಬೇಕು. ಅತಿ ಕಮ್ಮಿಯಾದ ಅಥವಾ ಯಾವುದೇ ಒಂದು ಟೆಂಡರನ್ನು ಒಪ್ಪಿಕೊಳ್ಳಬೇಕೆಂಬ ಬಗ್ಗೆ ಡೈರೆಕ್ಟರರು ಬದ್ಧರಾಗಿರುವುದಿಲ್ಲ

ಲಗ್ನದ ಜವಳಿಗಳಿಗೆ

ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ

ಮೈಸೂರು ಸಿಲ್ಕು ಧರ್ಮಾವರಂ, ಆರ್ಣಿ ನವೀನ ಮಾದರಿ ಜರಿಯಿನ

(ಫೋನ್ ನಂ 446)

★ M. V. ಭೋಜಯ್ಯ

ದಿ ಎ. ಅಂಗಡಿ ಬ್ಯಾಂಕ್ ಎದುರು ಮೈಸೂರು

ಫೋನ್ ನಂ. 792 ವಂದೇ ಮಾತರಂ|| ಬಿಡಿ ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧] ಸೋಮವಾರ ೨೩-೨-೧೯೫೩ [ಸಂಚಿಕೆ ೧೩೮

# ಜಾವಾದಲ್ಲಿ ಸಶಸ್ತ್ರ ಢಕಾಯಿತರ ಹಾವಳಿ

## ಅರಮನೆಯಲ್ಲಿ ಪುತ್ರೋತ್ಸವ ಸಮಾರಂಭ

### ವಿಶೇಷ ರಾಜಸಭೆ

ಮೈಸೂರು ೨೨

ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಸಂದರ್ಭದಲ್ಲಿ ಈ ದಿನ ಅರಮನೆಯಲ್ಲಿ ವಿಶೇಷ ರಾಜಸಭೆಯು ಏರ್ಪಾಡಾಗಿದ್ದಿತು. ಸಚಿವರುಗಳೂ, ಶ್ರೀ ಸ ನ್ಯಾಯಾಧೀಶರೂ, ಸರ್ಕಾರದ ಕೆಲವು ಇಲಾಖೆಗಳ ಕಾರ್ಯದರ್ಶಿಗಳೂ, ಪ್ರೀಸ್ ಇನ್ಸ್‌ಪೆಕ್ಟರ್ ಜನರಲ್ಲರೂ, ಚೀಫ್ ಎಲೆಕ್ಟ್ರಿಕಲ್ ಇಂಜನಿಯರು, ಮೈಸೂರು ಮತ್ತು ಬೆಂಗಳೂರು ಜಿಲ್ಲಾ ಧಿಕಾರಿಗಳು ಮುಂತಾದವರೂ, ಸರ್ದಾರರುಗಳೂ ಆಗಮಿಸಿದ್ದರು. ಅಧ್ಯಕ್ಷತೆಯ ನಿಮಿತ್ತ ಮುಖ್ಯ ಮಂತ್ರಿಗಳು ಬಂದಿರಲಿಲ್ಲ. ನಾಮಕರಣ ಮಹೋತ್ಸವವು ಮಾರ್ಚಿ ಎನೇ ತಾರೀಕು ನಡೆಯುವುದು.

ಅನ್ನ ಸತ್ಯಾಗ್ರಹದ ನಾಲ್ಕನೇ ತಂಡ

ಮೈಸೂರು ಆಹಾರ ಕ್ರಿಯಾ ಸಮಿತಿಯವರು ನಡೆಸುತ್ತಿರುವ ಅನ್ನ ಸತ್ಯಾಗ್ರಹದ ಮೂರನೇ ತಂಡದ ಉಪವಾಸವು ನಾಳೆ ಬೆಳಗ್ಗೆ ೬ ಗಂಟೆಗೆ ಮುಕ್ತಾಯವಾಗುವುದು. ನಾಲ್ಕನೇ ತಂಡವು ಕ್ರಿಯಾ ಸಮಿತಿಯ ಸದಸ್ಯರಾದ ಶ್ರೀ ಟಿ. ಪಿ. ಬಿ. ನಂಜರಾಮಪಿಳ್ಳೆಯವರ ನೇತೃತ್ವದಲ್ಲಿ ಮೈಸೂರು ಫಿಲೋಮಿನಾ ಕಾಲೇಜಿನ ಶ್ರೀ ಕೆ. ವಿ. ವರದರಾಜನ್ ಮತ್ತು ... ನ ವೆಂಕಟರಮಣ ಇವರೊಡನೆ ... ಬೆಳಗ್ಗೆ ೬ ಗಂಟೆಯಿಂದ ೭೨ ಗಂಟೆಗಳ ಕಾಲ ಸತ್ಯಾಗ್ರಹವನ್ನಾರಂಭಿಸುತ್ತದೆ.

## ಮಂತ್ರಿಸಿದ ನೀರಿನಿಂದ ಸರ್ವ ರೋಗ ನಾಶ

ಬೆಂಗಳೂರಿನ ಹತ್ತಿರ ... ತ್ರಿಶರಪುರವೆಂಬ ಹಳ್ಳಿಯಲ್ಲಿ ... ವರ್ಷ ವಯಸ್ಸಿನ ಮುಸಲ್ಮಾನ್ ಯುವಕನೊಬ್ಬನು ಕೆಲವು ದಿನಗಳಿಂದ ... ಜಪ್ಪರದ ಆಶ್ರಯದಲ್ಲಿ ಕುಳಿತು ರೋಗಿಗಳಿಗೆ ಮಂತ್ರಿಸಿದ ನೀರನ್ನು ಕೊಟ್ಟು ವ್ಯಾಧಿಯನ್ನು ನಿವಾರಿಸುತ್ತಿರುವನೆಂದೂ, ಈ ಅದ್ಭುತ ಚಿಕಿತ್ಸೆಯನ್ನು ... ರೋಗಗಳನ್ನು ವಾಸಿ ಮಾಡಿ ... ಜನರು ತಂಡೋಪತಂಡವಾಗಿ ... ಬರುತ್ತಿರುವರೆಂದೂ ವರದಿ ... ಮಂತ್ರಿಸಿದ ನೀರನ್ನು ... ಕುಡಿದು ... ವಾಸಿಯಾಗುವುದೆಂದೂ, ... ಸುಪ್ರಸಿದ್ಧ ಕೈಗಾರಿಕೋದ್ಯಮಿ ... ಅವರಿಗೂ ಚಿಕಿತ್ಸೆಯಿಂದ ಪ್ರಯೋಜನ ಕಂಡಿದೆ ... ಹೇಳಲಾಗಿದೆ. ಮುಸಲ್ಮಾನ್ ... ಕುಷ್ಠ ರೋಗ ... ಸ್ವಪ್ನದಲ್ಲಿ ... ಆತ್ಮಹತ್ಯೆ ಮಾಡಿಕೊಳ್ಳಲು ಸಮುದ್ರದ ಬಳಿ ಹೋದಾಗ ... ಅವನಿಗೆ ಒಬ್ಬ ಮಹಾ ಪುರುಷನ ದರ್ಶನವಾಗಿ, ಆತನು ಯುವಕನ ರೋಗವನ್ನು ವಾಸಿ ಮಾಡಿ, ಸರ್ವ ರೋಗಗಳ ನಿವಾರಿಸುವಂತಹ ಮೂಲ ಮಂತ್ರವನ್ನು ಅವನಿಗೆ ಉಪದೇಶಿಸಿ, ... ಮಾಡುವಂತೆ ತಿಳಿಸಿದನೆಂದು ... ಈ ರೀತಿಯ ಚಿಕಿತ್ಸೆಯಿಂದ ಮುಸಲ್ಮಾನ ಯುವಕನು ತನ್ನ ... ಕಳೆದುಹೋಗಿದ್ದ ಕಣ್ಣುಗಳನ್ನು ... ದಿನದಿಂದಲೂ ತಿಳಿದು ಬಂದಿದೆ.

## ಒಂದೇ ಮನೆ ಇಬ್ಬರಿಗೆ ಭೋಗ್ಯ, ಒಬ್ಬರಿಗೆ ಕ್ರಯ

### ೨೪ ಸಾವಿರ ರೂ. ಮೋಸದ ಪ್ರಕರಣ

ಬೆಂಗಳೂರು ೨೨

ಇಲ್ಲಿನ ಕುಮಾರಾ ಪಾರ್ಕ್, ಬಡಾವಣೆಯಲ್ಲಿ ಉಷಾ ಕೆಮಿಕಲ್ಸ್ ಅಂಡ್ ಅಲೈಡ್ ಇಂಡಸ್ಟ್ರೀಸ್ ಸಂಸ್ಥೆಯ ಮಾಲೀಕರೆಂದು ಹೇಳಲಾದ ಶ್ರೀ ಸುದರ್ಶನ್ ಎಂಬುವರು ಬಿವೆನ್ಯೂ ರಸ್ತೆಯ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ಸ್ ಸಂಸ್ಥೆಯೊಡನೆ ಸಂಪರ್ಕವಿಟ್ಟುಕೊಂಡಿದ್ದು ಅದರ ಮಾಲೀಕರಾದ ಶ್ರೀ ಸಾಲಿಗ್ರಾಂ ಕಪೂರ್‌ರವರಿಗೆ ಮಲ್ಲೇಶ್ವರದಲ್ಲಿ ಯಾರಿಗೋ ಸೇರಿದ ಮನೆಯೊಂದನ್ನು ೧೭ ಸಾವಿರ ರೂ.ಗಳಿಗೆ ಮಾರಿ ಮೋಸ ಮಾಡಿದ ಸುದ್ದಿಯು ವರದಿಯಾಗಿದೆ.

ಸುದರ್ಶನ್‌ರವರು ಆ ಮನೆಯು ತಮಗೇ ಸೇರಿದುದೆಂದೂ, ಅದನ್ನು ಯಾವ ವಿಧದಲ್ಲೂ ಪರಭಾರೆ ಮಾಡಿಲ್ಲವೆಂದೂ ತಿಳಿಸಿ ಶ್ರೀ ಕಪೂರ್‌ರವರಿಗೆ ಕ್ರಯ ಮಾಡಿದನಂತರ ತಾವೇ ಆ ಮನೆಯಲ್ಲಿ ಬಾಡಿಗೆಗೆ ಇರುವುದಾಗಿ ತಿಳಿಸಿ, ಒಂದು ತಿಂಗಳ ಬಾಡಿಗೆ ಬಾಬ್ತು ೨೨೩ ರೂ. ಅನ್ನು ಕೊಟ್ಟು ಅಲ್ಲೇ ಇದ್ದರೆಂದೂ, ನಾಲ್ಕು ತಿಂಗಳ ನಂತರ ಶ್ರೀ ಕಪೂರ್‌ರವರು ಬಾಡಿಗೆ ವಸೂಲಿಗಾಗಿ ಹೋದಾಗ ಸುದರ್ಶನ್‌ರವರು ಆ ಮನೆಯಲ್ಲಿರಲಿಲ್ಲವೆಂದೂ ಹೇಳಲಾಗಿದೆ. ಅಲ್ಲದೆ ಅವರು ಮನೆಯನ್ನು ಒಬ್ಬರಿಗೆ ಆರು ಸಾವಿರ ರೂ.ಗಳಿಗೂ ಮತ್ತೊಬ್ಬರಿಗೆ ೫ ಸಾವಿರಕ್ಕೂ ಭೋಗ್ಯ ಹಾಕಿ ಮೊದಲನೆಯ ಭೋಗ್ಯದಾರರಿಗೆ ಅದನ್ನು ಸ್ವಾಧೀನ ಕೊಟ್ಟಿದ್ದರೆಂದೂ ಗೊತ್ತಾಗಿದೆ. ಪೊಲೀಸರು ತನಿಖೆ ನಡೆಸುತ್ತಿರುವರು.

## ವಿಮಾನಾಪಘಾತದಲ್ಲಿ ಮೈಸೂರು ಇಂಜನಿಯರರ ಮರಣ

ಕಳೆದ ೧೭ನೇ ತಾ|| ಅಸ್ಸಾಮಿನ ಕಾಡಿನಲ್ಲಿ ಮರಣಕ್ಕೀಡಾದ ವಿಮಾನ ದಲ್ಲಿದ್ದು ಮಡಿದವರ ಪೈಕಿ ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಇಂಜನಿಯರಾಗಿದ್ದು ವಿಶೇಷ ಕಾರ್ಯದ ಮೇಲೆ ಅಸ್ಸಾಮಿಗೆ ತೆರಳಿದ್ದ ಬಿ. ಆರ್. ಶ್ರೀನಿವಾಸನ್ನರೂ ಒಬ್ಬರೆಂದು ಗೊತ್ತಾಗಿದೆ.

## ಶ್ರೀಯುಃ ಪ್ರಾರ್ಥನಾ ಪದ್ಯ ಮಾಲಿಕೆ

ಸಿರಿಗೆ ನೆಲೆವೀಡೆನಿಸಿ ಮೆರೆಯುವ
ವರ ಮಹೀಶೂರ ಪುರದಿ ರವಿ ಸುವ
ವರ ಯದುಕುಲ ಶರಧಿ ಚಂದ್ರ ಜಯ
ಚಾಮಭೂಮಿ ಪನ ||
ವರ ತರುಣಿ ಗಿರಿಜೆ ಕರುಣದಿ
ಶರಧಿ ಶಯನನ ಪ್ರೋಲ್ಲಸುವರಸ
ನೆರೆ ಪಡೆದ ವಿಭವ ತೋಷದ ಪ್ರತಿ
ಕಿಯುವ ಎಣ್ಣೆಸಲೇಂ || ೧ ||
ಚಂದ್ರ ಚೂಡನ ಮಾತದಿ ಕರುಣದಿ
ಚಂದ್ರ ಕಮನೆನಿಸಿ ಬಂದಿಸುವ
ಚಂದ್ರಕುಲ ವಂಶಾಬ್ಧಿ ಚಂದ್ರ ಜಯ
ಚಾಮ ತನಯನೆನೆ ||
ಚಂದ್ರಶೇಖರನರಸಿ ಪಾರ್ವತಿ
ಚಂದ್ರ ಸೋದರಿ ಲಕುಮಿ ಹರಸಿ
ಚಂದದಿಂ ಪೋಷಿಸಲಿ ಆಯುರಾರೋಗ್ಯ
ಮಿತ್ತು || ೨ ||
ವಿಜಯ ಶ್ರೀ ಜಯ ಚಾಮ ಭೂಪಗೆ
ವಿಜಯ ಶ್ರೀ ಗಾಯತ್ರಿ ದೇವಿಗೆ
ವಿಜಯ ಶ್ರೀ ಮೀನಾಕ್ಷಿ ದೇವಿಗು ನವ
ರಾಜ ಸೂತೆಗುಂ ||
ವಿಜಯವೀ ಮೈಸೂರು ನಾಡಿಗೆ
ವಿಜಯ ಲಭಿಸಲಿ ಸಕಲ ಜನರಿಗೆ
ವಿಜಯ ಚಾಮುಂಡಾಂಬೆ ಪ್ರೀತಿ ಯರು
ವಂತೆ ವರ್ಧನನ || ೩ ||

ಎಂ. ಎಗ್. ಪಾರ್ವತಮ್ಮ,
ಮೈಸೂರು

## ಜುಲೈ ೧ರೊಳಗೆ ಆಂಧ್ರ ರಾಜ್ಯದ ನಿರ್ಮಾಣ

ಬರುವ ಜುಲೈ ತಿಂಗಳು ಒಂದನೇ ತಾರೀಖಿನೊಳಗಾಗಿ ಆಂಧ್ರ ಪ್ರಾಂತ್ಯದ ರಚನೆಯಾಗಲಿರುವುದಾಗಿ ಮದರಾಸಿನ ವಿದ್ಯಾ ಸಚಿವ ಡಾ|| ಎಂ. ವಿ. ಕೃಷ್ಣರಾಯರು ತಿಳಿಸಿರುವರು.

## ಹಿಂದಿ ಶಿಕ್ಷಣ ಮಾಧ್ಯಮಕ್ಕೆ ಬೊಂಬಾಯಿಯಲ್ಲಿ ವಿರೋಧ

ವಿಶ್ವ ವಿದ್ಯಾಲಯಗಳಲ್ಲಿ ಹಿಂದಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದಕ್ಕೆ ಬೊಂಬಾಯಿನ ವಿಶ್ವ ವಿದ್ಯಾಲಯಗಳ ಶೇಕಡ ೮೦ ಮಂದಿ ಅಧ್ಯಾಪಕರು ವಿರೋಧವನ್ನು ವ್ಯಕ್ತಪಡಿಸಿರುವರೆಂದು ಗೊತ್ತಾಗಿದೆ.

## ಜಾವಾ ದಂಗೆಕೋರರಿಂದ ೧೧೩ ಮನೆಗಳ ನಾಶ

ಪಶ್ಚಿಮ ಜಾವಾದ ಗಾರಟ್ ಎಂಬ ನಗರಕ್ಕೆ ಮೊನ್ನೆ ೪೦೦ ಮಂದಿ ಸಶಸ್ತ್ರ ದಂಗೆಕೋರರು ನುಗ್ಗಿ ೧೧೩ ಮನೆಗಳನ್ನು ನಾಶಮಾಡಿ ೫ ಜನರನ್ನು ಕೊಂದಿರುವರೆಂದು ವರದಿಯಾಗಿದೆ. ಸೈನಿಕರು ಮತ್ತು ಪೊಲೀಸರು ೨ ಘಂಟೆಗಳ ಕಾಲ ಹೋರಾಡಿ ದಂಗೆಕೋರರನ್ನು ಹಿಮ್ಮೆಟ್ಟಿಸಿದರು.

## ಮೈಸೂರಿಗೆ ಧಾನ್ಯ ಒದಗಿಸಲು ಕೇಂದ್ರದ ಶೀಘ್ರಗಮನ

ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡಿರುವ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ಮದರಾಸಿಗೆ ಆಗಮಿಸಿದ ಸಂದರ್ಭದಲ್ಲಿ ಅಲ್ಲಿನ ನಾಗರಿಕರ ಪರವಾಗಿ ಕಾರ್ಪೊರೇಷನ್ನಿನವರು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವೀಯುತ್ತಾ ರಾಷ್ಟ್ರಾಧ್ಯಕ್ಷರು ಆಹಾರಾಭಾವಕ್ಕೆ ಗುರಿಯಾಗಿರುವ ಮದರಾಸು, ಮುಂಬಾಯಿ ಪ್ರಾಂತ್ಯ, ಮೈಸೂರು ಸಂಸ್ಥಾನಗಳಿಗೆ ಧಾನ್ಯವನ್ನೊದಗಿಸಲು ಕೇಂದ್ರ ಸರ್ಕಾರದವರು ಶೀಘ್ರ ಗಮನಕೊಡುವರೆಂದು ತಿಳಿಸಿದರು.

## ದೋಣಿ ಮುಳುಗಿ ೩೦ ಜನರು ಮೃತಪಟ್ಟರು

ಮನಿಲಾದಲ್ಲಿರುವ ಗಾಗ್ಯಾನ್ ನದಿಯಲ್ಲಿ ಕಳೆದ ಶುಕ್ರವಾರ ಒಂದು ದೋಣಿಯು ತಲೆಕೆಳಗಾಗಿ ೩೦ ಮಂದಿ ಮೃತಪಟ್ಟರೆಂದೂ, ಇತರ ಹತ್ತು ಜನರು ರಕ್ಷಿಸಲ್ಪಟ್ಟರೆಂದೂ ವರದಿಯಾಗಿದೆ.

## ಡಿ. ಕೆ. ಭಾರದ್ವಾಜ್‌ರವರ ನಿಧನ

ಸುಪ್ರಸಿದ್ಧ ಕನ್ನಡ ಸಾಹಿತಿಗಳೂ, ಆಯುರ್ವೇದ ವಿದ್ವಾಂಸರೂ ಆದ ಡಿ. ಕೆ. ಭಾರದ್ವಾಜ್‌ರವರು ನೆನ್ನೆ ಬೆಳಗ್ಗೆ ಬೆಂಗಳೂರಿನ ಬಸವನಗುಡಿಯಲ್ಲಿರುವ ತಮ್ಮ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೧ ವರ್ಷ ವಯಸ್ಸಾಗಿತ್ತು. ಅವರು ರಾಜಕೀಯ ಕ್ಷೇತ್ರದಲ್ಲಿಯೂ ದೇಶಕ್ಕೆ ಅಪಾರವಾದ ಸೇವೆ ಸಲ್ಲಿಸಿರುವರು. ಅವರ ಮರಣದಿಂದ ಕನ್ನಡ ನಾಡಿಗೆ ಅಪಾರವಾದ ನಷ್ಟ ಸಂಭವಿಸಿರುತ್ತೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೂ ಬಂಧುವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನೂ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

## ಗರಡಿಗಳವರ ಒಕ್ಕೂಟದ ಸಭೆ

ರಾಜಧಾನಿಯ ಉಸ್ತಾದ್ ಫಕೀರ್ ಅಹಮದ್ ಸಾಹೇಬರ ದೊಡ್ಡ ಗರಡಿಗೆ ಸೇರಿದ ಗರಡಿಗಳವರ ಸಭೆಯೊಂದು ಮೊನ್ನೆ ಕೃಷ್ಣಾ ಸಿನಿಮಾ ಕಟ್ಟಡದ ಮಹಡಿಯ ಮೇಲೆ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮೇಲ್ಕಂಡ ದೊಡ್ಡ ಗರಡಿಗೆ ಸೇರಿದ ನಾನಾ ಗರಡಿಗಳ ಒಕ್ಕೂಟ ಮತ್ತು ಇತರ ಹಲವು ಅಂಶಗಳ ಬಗ್ಗೆ ಪರಿಶೀಲನೆ ನಡೆದ ತರುವಾಯ ಶ್ರೀಮನ್ಮಹಾರಾಜರಿಗೆ ಪುತ್ರೋತ್ಸವವಾದ ಬಗ್ಗೆ ಅವರನ್ನು ಅಭಿನಂದಿಸುವ ಮತ್ತು ನೂತನ ರಾಜಕುಮಾರರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರುವ ನಿರ್ಣಯಗಳಾದುವು.

## ಮಾರಾಟ ತೆರಿಗೆ ಪರಿಶೀಲನಾ ಸಮಿತಿ

### ಪಾನ ನಿರೋಧ ರದ್ದಿನ ಬಗ್ಗೆ ಸಲಹೆ ಮಾಡಲವಕಾಶವಿಲ್ಲ

ಬೆಂಗಳೂರು ೨೨

ಸಂಸ್ಥಾನದಲ್ಲಿ ಮಾರಾಟ ತೆರಿಗೆಯ ಬಗ್ಗೆ ಪರಿಶೀಲಿಸಿ ಸಲಹೆ ನೀಡಲು ರಚಿಸಲ್ಪಟ್ಟಿರುವ ಸಮಿತಿಯಲ್ಲಿ ಕೆಳಗೆ ಕಂಡವರಿರುವರು. — ಮೈಸೂರು ವಾಣಿಜ್ಯ ಸಂಘದ ಅಧ್ಯಕ್ಷರು, ಮೈಸೂರು ಬ್ಯಾಂಕ್ ಮ್ಯಾನೇಜರ್ ಶ್ರೀ ನಾರಾಯಣ ರೆಡ್ಡಿ, ಸರ್ಕಾರದ ಪರವಾಗಿ ಎಕ್ಸೈಜ್ ಕಮಿಷನರು ಮತ್ತು ಆರ್ಥಿಕ ಕಾರ್ಯದರ್ಶಿ, ಶಾಸನ ಸಭಾ ಸದಸ್ಯರ ಪರವಾಗಿ ಶ್ರೀಗಳಾದ ಮ್ಯಾಕ್ಸ್‌ವೆಲ್ ಪಿಂಟೋ, ಟಿ ಸಿ ನಾಗರಾಜಮೂರ್ತಿ, ಪಾಲಹಳ್ಳಿ ಸೀತಾರಾಮಯ್ಯ ಮತ್ತು ಎ. ಭೀಮಪ್ಪನಾಯಕ್ ಸರ್ಕಾರದ ಆರ್ಥಿಕ ಶಾಖಾ ಉಪ ಕಾರ್ಯದರ್ಶಿಯವರು ಸಮಿತಿಯ ಕಾರ್ಯದರ್ಶಿಗಳಾಗಿರುವರು

ಮಾರಾಟ ತೆರಿಗೆಯಿಂದ ಕಂಡುಬಂದಿರುವ ಲೋಪದೋಷಗಳನ್ನು ಪರಿಶೀಲಿಸಿ ಅವುಗಳ ನಿವಾರಣೆಗೆ ಸೂಕ್ತ ಸಲಹೆ ನೀಡುವುದು ಮತ್ತು ಮಾರಾಟ ತೆರಿಗೆಯನ್ನು ರದ್ದು ಮಾಡಿ ಅದರಿಂದ ಬೊಕ್ಕಸಕ್ಕಾಗುವ ನಷ್ಟವನ್ನು ಬೇರೆ ರೀತಿಯಲ್ಲಿ ಭರ್ತಿ ಮಾಡುವುದು— ಈ ಬಗ್ಗೆ ಸಮಿತಿಯು ಸರ್ಕಾರಕ್ಕೆ ಸೂಕ್ತ ಸಲಹೆ ಮಾಡಬಹುದೆಂದು ಮುಖ್ಯ ಮಂತ್ರಿಯವರು ತಿಳಿಸಿ, ಪಾನ ನಿರೋಧವು ಸರ್ಕಾರದ ಅಂಗೀಕೃತ ನೀತಿಯಾಗಿರುವುದರಿಂದ ಅದನ್ನು ರದ್ದು ಮಾಡಬೇಕೆಂತೆ ಸಲಹೆ ಮಾಡಲು ಸಮಿತಿಗೆ ಅವಕಾಶವಿಲ್ಲವೆಂದೂ ಹೇಳಿರುವರು ಸಂಸ್ಥಾನದ ಪ್ರಸಕ್ತ ಸಾಲಿನ ಆಯ ವ್ಯಯದಲ್ಲಿ ಹೆಚ್ಚಿನ ಕೊರತೆ ಬೀಳುವುದೆಂದೂ ಅವರು ಸೂಚಿಸಿದರು

## ಮನುಷ್ಯನ ಶ್ವಾಸಕೋಶದಲ್ಲಿ ಗರ್ಭ ಪಿಂಡ

ಒಸಾಕದ ರೈಲ್ವೆ ಕಾರ್ಮಿಕನೊಬ್ಬನ ಶ್ವಾಸಕೋಶದಲ್ಲಿ ವೇದನೆಯುಂಟಾಗಿ ಶಸ್ತ್ರ ಚಿಕಿತ್ಸೆ ನಡೆಸಲು, ಅವನ ಬಲ ಶ್ವಾಸಕೋಶದಲ್ಲಿ ಒಂದು ಹೆಣ್ಣು ಮಗುವಿನ ಗರ್ಭ ಪಿಂಡವು ಸಿಕ್ಕಿತೆಂದು ವರದಿಯಾಗಿದೆ

### ರಾಜಕುಮಾರರಿಗೆ ಶುಭಾಶಯ

ಶ್ರೀಮನ್ಮಹಾರಾಜರವರಿಗೆ, ಪುತ್ರರತ್ನ ಜನನವಾದುದಕ್ಕಾಗಿ, ಗಂಧದ ಕಾರ್ಖಾನೆ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ಕಳೆದ ೨೦ ನೇ ತಾ|| ಸೇರಿ ಕೃತಜ್ಞತಾ ಪೂರ್ವಕವಾದ ರಾಜಭಕ್ತಿಯನ್ನು ಅರ್ಪಿಸಿ, ಅಮಿತಾನಂದವನ್ನು ವ್ಯಕ್ತಪಡಿಸಿ, ರಾಜಕುಮಾರರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲೆಂದು ಭಗವಂತನನ್ನು ಕೋರಲಾಯಿತು


**ಟೈರ್ ಚಪ್ಪಲಿ**

ನಿಮಗೆ ಬೇಕಾದ ಡಿಸೈನಿನಲ್ಲಿ ಮಾಡಿಕೊಡುತ್ತೇವೆ

ಬೆಲೆ ರೂ 4-8-0 ಮಾತ್ರ

ಹನ್ಸ್ ಫುಟ್‌ವೇರ್

ವಾಣೀವಿಲಾಸ ಮಾರ್ಕೆಟ್ ಛೌಕ.


## ಯುವತಿಯರ ಅಪಮಾನಕ್ಕಾಗಿ ಕತ್ತೆ ಮೇಲೆ ಸವಾರಿ

ಲಾಹೋರಿನಲ್ಲಿ ಯುವತಿಯರ ಮೇಲೆ ಬಲಾತ್ಕಾರದ ಅತ್ಯಾಚಾರಗಳು ಹೆಚ್ಚುತ್ತಿವೆಯೆಂದೂ, ಕಳೆದ ಗುರುವಾರ ಒಬ್ಬ ಯುವಕನು ರಸ್ತೆಯಲ್ಲಿ ಹೋಗುತ್ತಿದ್ದ ಹುಡುಗಿಯ ಬಗ್ಗೆ ಅಶ್ಲೀಲವಾದ ಮಾತುಗಳನ್ನಾಡಿದುದನ್ನು ವರ್ತಕನೊಬ್ಬನು ಕಂಡು ಅವನನ್ನು ಇತರರ ಸಹಾಯದಿಂದ ಹಿಡಿದು ಅವನಿಗೆ ಏನು ಶಿಕ್ಷೆ ವಿಧಿಸಬೇಕೆಂದು ಕೇಳಲು ಎಲ್ಲರೂ ಅವನ ಮುಖಕ್ಕೆ ಮಸಿ ಬಳಿದು ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಬೇಕೆಂದು ಸಲಹೆ ಮಾಡಿದರೆಂದೂ, ಅನಂತರ ಅವನಿಗೆ ಅದೇ ಶಿಕ್ಷೆ ವಿಧಿಸಲಾಯಿತೆಂದೂ ಗೊತ್ತಾಗಿದೆ

### ಮಹಿಳಾ ಉಳಿತಾಯದ ವಾರ

ರಾಷ್ಟ್ರೀಯ ಉಳಿತಾಯದ ಯೋಜನೆಯ ಸಂಬಂಧವಾಗಿ ಕೇಂದ್ರ ಸರ್ಕಾರದವರು ಬರುವ ತಿಂಗಳು ೧೫ ನೇ ತಾರೀಕಿನಿಂದ ೨೨ ರ ವರೆಗೆ ದೇಶದ ಪ್ರಮುಖ ನಗರಗಳಲ್ಲಿ ಮಹಿಳಾ ಉಳಿತಾಯದ ವಾರವನ್ನು ಆಚರಿಸಲು ನಿರ್ಧರಿಸಿರುವರು ಈ ಸಮಾರಂಭವನ್ನು ಮೈಸೂರು, ಬೆಂಗಳೂರು ನಗರಗಳಲ್ಲೂ ನೆರವೇರಿಸಲಾಗುವುದು ಸಂಸ್ಥಾನದ ಎಲ್ಲ ಮಹಿಳಾ ಸಂಸ್ಥೆಗಳೂ ಮಹಿಳಾ ಉಳಿತಾಯದ ವಾರದಲ್ಲಿ ಸಹಕರಿಸಬೇಕೆಂದು ಅಖಿಲ ಭಾರತ ಮಹಿಳಾ ಸಮ್ಮೇಳನದ ಗೌರವ ಪ್ರಧಾನ ಕಾರ್ಯದರ್ಶಿನಿ ಶ್ರೀಮತಿ ರಾಮೇಶ್ವರಮ್ಮ ಕುಪ್ಪಸ್ವಾಮಿಯವರು ಕೋರುತ್ತಾರೆ

### ವಿವಾಹ ಮಹೋತ್ಸವ

ರಾಜಧಾನಿಯ ವಕೀಲರಾದ ಶ್ರೀ ಎಸ್ ರಂಗರಾಮಯ್ಯನವರು ತಮ್ಮ ಜ್ಯೇಷ್ಠ ಪುತ್ರ ಶ್ರೀ ಎ ರಂಗಸ್ವಾಮಿಯವರಿಗೆ ಸೇಲಂ ಜಿಲ್ಲೆಯ ಡೆಂಕಣಿಕೋಟೆಯಲ್ಲಿರುವ ವಕೀಲರಾದ ಶ್ರೀ ಕ ಶಿವಣ್ಣನವರ ಜ್ಯೇಷ್ಠ ಪುತ್ರಿ ಸೌ|| ಅಶ್ವತ್ಥಲಕ್ಷ್ಮಮ್ಮನನ್ನು ತಂದುಕೊಂಡು ನೆನ್ನೆ ಡೆಂಕಣಿಕೋಟೆಯಲ್ಲಿ ವಿವಾಹವನ್ನು ನೆರವೇರಿಸಿದರು

### ಪಂಚಾಂಗ ಸ್ವೀಕಾರ

ಆಸ್ಥಾನ ವಿದ್ವಾನ್ ಕೊಳ್ಳೇಗಾಲದ ವೆಂಕಟಸುಬ್ಬಾ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವ ಶ್ರೀ ವಿಜಯ ನಾಮ ಸಂವತ್ಸರದ ಪಂಚಾಂಗವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಪಂಚಾಂಗದ ಪ್ರತಿಗಳು ಕೊಳ್ಳೇಗಾಲದಲ್ಲಿರುವ ಪಂಚಾಂಗ ಕರ್ತರಲ್ಲಿಯೂ, ಮೈಸೂರು ದೇವರಾಜ ಮಾರ್ಕೆಟ್ಟಿನಲ್ಲಿರುವ ಶ್ರೀ ಬಿ ಆದಿನಾರಾಯಣಶೆಟ್ಟರ ಅಂಗಡಿ ಮತ್ತು ಎಲ್ಲ ಬುಕ್ ಡಿಪ್ಪೋಗಳಲ್ಲೂ ದೊರೆಯುವುವು ಬೆಲೆ ೦-೮-೦


**SRI GAYATHRI**

TALKIES

From 24 2 53 For 2 days

M G Ms

ABBOTT and CASTELLO

IN

**HOLLYWOOD**


## ರಾತ್ರಿ ವೇಳೆಯಲ್ಲಿ ೭ ಲಾರಿಗಳ ದರೋಡೆ

ಕಳೆದ ಗುರುವಾರ ಮಧ್ಯ ರಾತ್ರಿ ಕಲ್ಕತ್ತ-ಮದರಾಸು ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ಗೂಡೂರಿನ ಬಳಿ ೭ ಜನರು ಹನೆ ಮರ ಮತ್ತು ಕಾರು ಡ್ರಮ್ಮುಗಳನ್ನು ರಸ್ತೆಗೆ ಅಡ್ಡಲಾಗಿ ಹಾಕಿ ೭ ಲಾರಿಗಳನ್ನೂ ಮತ್ತು ಒಂದು ಕಾರನ್ನೂ ತಡೆದು ಅವುಗಳೊಳಗಿದ್ದ ೧೫ ಜನರನ್ನು ಮರಗಳಿಗೆ ಕಟ್ಟಿಹಾಕಿ ಮೂರು ಸಾವಿರ ರೂ ನಷ್ಟು ಹಣ ಮತ್ತು ಇತರ ಪದಾರ್ಥಗಳನ್ನು ಅಪಹರಿಸಿಕೊಂಡು ಪರಾರಿಯಾದರೆಂದು ಗೊತ್ತಾಗಿದೆ. ಮರಗಳಿಗೆ ಕಟ್ಟಲ್ಪಟ್ಟಿದ್ದವರ ಪೈಕಿ ಒಬ್ಬನು ಉಪಾಯದಿಂದ ಬಿಡಿಸಿಕೊಂಡು ಉಳಿದವರನ್ನೂ ಬಿಚ್ಚಿದನೆಂದೂ, ತರುವಾಯ ಗೂಡೂರಿನ ಪೋಲೀಸರಿಗೆ ದೂರು ಕೊಡಲಾಗಿ ಅವರು ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ

### ಶ್ರೀ ರಾಮನವಮಿ ಸಮಾರಂಭ

ನಂಜನಗೂಡು ನಾರಾಯಣರಾಯರ ಅಗ್ರಹಾರದಲ್ಲಿರುವ ವೇ|| ಬ್ರ|| ಬೇಳವಾಡಿ ರಾಮಶಾಸ್ತ್ರಿಗಳವರ ಮನೆಯಲ್ಲಿರುವ ಜಾನಕೀ ರಾಮ ಮಂದಿರದಲ್ಲಿ ಬರುವ ತಿಂಗಳು ೨೩ ನೇ ತಾರೀಕು ಸೋಮವಾರದಿಂದ ಶ್ರೀ ರಾಮನವಮಿ ಉತ್ಸವದ ಅಂಗವಾಗಿ ಪ್ರತಿ ದಿನ ಬೆಳಗ್ಗೆ ೭ ರಿಂದ ೧೦ ಘಂಟೆ ವರೆಗೆ ಪುರಾಣ ಪ್ರವಚನವೂ, ಸಂಜೆ ೭ ರಿಂದ ೯ ಘಂಟೆವರೆಗೆ ಭಜನೆಯೂ, ಅನಂತರ ಮಂಗಳಾರತಿಯೂ ಜರುಗುವುವು ಮಹಾಜನರು ದಯಮಾಡಿ ಈ ಕಾರ್ಯವನ್ನು ಸಫಲಗೊಳಿಸಬೇಕೆಂದು ಮಂದಿರದ ಕಾರ್ಯದರ್ಶಿಯವರು ಕೋರುತ್ತಾರೆ


ಅರಮನೆ ಗಜಶಾಲಾ,

ಮೈಸೂರು

## ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲಾ ಶಾಖೆಗೆ ೧೯ 1953-54 ನೇ ಸಾಲಿನಲ್ಲಿ ಅಂದರೆ 1953 ನೇ ಏಪ್ರಿಲ್ ಒಂದರ ಆರಂಭದಿಂದ 1954ನೇ ಮಾರ್ಚಿ ಅಖೈರುವರೆಗೆ ಸೌದೆ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು 1953 ನೇ ಫೆಬ್ರವರಿ ಮಾಹೆ ತಾರೀಖು 25ನೇ ಮಧ್ಯಾಹ್ನ 12 ಘಂಟೆ ಒಳಗಾಗಿ ಗಜಶಾಲಾ ಶಾಖಾ ಪೆಟ್ರೋಲ್ ಪರಿ ಇನ್ ಚಾರ್ಜು ಆಫೀಸರವರ ಆಫೀಸಿಗೆ ಕೊಡತಕ್ಕದ್ದು ಹೆಚ್ಚಿನ ವಿಷಯಗಳನ್ನು ಗಜಶಾಲಾ ಶಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳುವುದು ಸೌದೆಯನ್ನು ಅರಮನೆ ಅಶ್ವಶಾಲಾ ಇಲಾಖೆಯಲ್ಲಿ ಸ್ಟಾಕು ಮಾಡಿ ಸಪ್ಲೈ ಮಾಡತಕ್ಕದ್ದು

**ಡಿ. ಎಸ್. ಈಶ್ವರಪ್ಪ**

ಪೆಟರೇನರಿಯನ್ ಇನ್ ಚಾರ್ಜ್,

ಅರಮನೆ ಗಜಶಾಲಾ ಮೈಸೂರು



Edited, Printed and Published by A R Nagarajan at Sadhvi Press, D Subbiah Road, Mysore


## ದಕ್ಷಿಣಕನ್ನಡ ವಿದ್ಯಾರ್ಥಿಗಳ ಸಂಘದ ಸಂತೋಷ ಕೂಟ

ಮೈಸೂರು ೨೨

ಮೇಲ್ಕಂಡ ಸಂಘದ ಸಂತೋಷಕೂಟವು ನೆನ್ನೆ ಬೆಳಗ್ಗೆ ದಾಸಪ್ರಕಾಶದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥರವರ ಅಧ್ಯಕ್ಷತೆಯಲ್ಲಿ ಜರುಗಿತು ಪ್ರಾರ್ಥನೆಯಾದ ನಂತರ ಪ್ರೊ|| ಕೆ. ನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿಯವರಿಂದ ವರದಿಯು ಒಪ್ಪಿಸಲ್ಪಟ್ಟ ಮೇಲೆ ಸಂಗೀತ, ವಿವಿಧ ವೇಷ ಪ್ರದರ್ಶನ ಮುಂತಾದ ಮನರಂಜನೆ ಕಾರ್ಯಗಳಾದುವು ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿ ಭಾಷಣ ಮಾಡಿದ ನಂತರ ವಂದನಾರ್ಪಣೆಯೊಡನೆ ಸಮಾರಂಭ ಮುಕ್ತಾಯವಾಯಿತು. ಮಧ್ಯಾಹ್ನ ಸರ್ವ ಸದಸ್ಯರ ಸಭೆಯು ನೂತನ ಅಧಿಕಾರವರ್ಗದ ಚುನಾವಣೆ ನಡೆಸಿತು, ವಿದ್ಯಾರ್ಥಿಗಳಿಂದ ಭಾಷಣಗಳಾದ ನಂತರ ಸಂಗೀತವು ಏರ್ಪಾಡಾಗಿದ್ದಿತು

### ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿ

ಮೇಲ್ಕಂಡ ಮಂಡಲಿಯ ಶ್ರೀರಾಮ ಮಂದಿರದ ವಾರ್ಷಿಕೋತ್ಸವವು ನೆನ್ನೆ ಶ್ರೀ ಓ ಗೋಪಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ ಉಪಾಹಾರಗಳನಂತರ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು ಕಾರ್ಯದರ್ಶಿಯವರ ವರದಿಯು ಒಪ್ಪಿಸಲ್ಪಟ್ಟ ಮೇಲೆ ಕಾರ್ಯಕಾರಿ ಸಮಿತಿ ಚುನಾವಣೆಯು ನಡೆಯಿತು. ಅಧ್ಯಕ್ಷರ ಭಾಷಣಾನಂತರ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

### ಸರಸ್ವತಿ ಪೂಜೆ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾ ಹಿಂದಿ ಪ್ರಚಾರ ಸಭೆಯ ಕೇಂದ್ರದಿಂದ ಹಿಂದಿ ಪರೀಕ್ಷೆಗಳಿಗೆ ಕುಳಿತಿರುವ ವಿದ್ಯಾರ್ಥಿಗಳು ಶ್ರೀ ಜಿ ಸಚ್ಚಿದಾನಂದರವರ ಅಧ್ಯಕ್ಷತೆಯಲ್ಲಿ ಕಳೆದ ಬುಧವಾರ ಸರಸ್ವತಿ ಪೂಜೆಯನ್ನು ನೆರವೇರಿಸಿದರು ಬಾಲಕಿಯರಿಂದ ಸಂಗೀತ ವಾದ್ಯಗೋಷ್ಠಿ ನಡೆದ ಮೇಲೆ ಪರೀಕ್ಷಾ ಪ್ರವೇಶ ಪತ್ರಗಳು ಹಂಚಲ್ಪಟ್ಟವು ಪ್ರಮಾಣ ಪತ್ರ ವಿತರಣೆ, ಬಹುಮಾನ ವಿನಿಯೋಗಗಳನಂತರ ಅಧ್ಯಕ್ಷರು ಮಾತನಾಡಿ ಹಿಂದಿಯನ್ನು ಕಲಿಯುವುದರ ಆಗತ್ಯವನ್ನು ವಿವರಿಸಿದರು ಪೂಜೆ, ವಂದನಾರ್ಪಣೆ ರಾಷ್ಟ್ರಗೀತೆ ಮಂಗಳ ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವೀಣಾ ವಾದನ ಎಂ ಎಸ್ ಜಯಮ್ಮ. ಮಧ್ಯಾಹ್ನ ೩ ಹಿಂದೂಸ್ತಾನಿ ಸಂಗೀತ. ೬ ಲಲಿತ ಶಿವರಾಜ್ ಆಫ್‌ರ್. ಸಂಜೆ ೫.೪೫ ಪಿಟೀಲು ಎಂ ಎಸ್. ಸುಬ್ರಹ್ಮಣ್ಯಂ ೭ ಮತ್ತು ೭.೩೦ ಒಂದೂವರೆ ನಂತರ ಸಂಗೀತ, ಲಲಿತ ಶಿವರಾಜ್ ಉಭಯರು ೭.೪೦ ಕೆಲವು ಗೀತ ಸುಗಮ ಸಂಗೀತಗಳು, ಎಂ. ಶಿವರಾಂರವರ ಕನ್ನಡ ಭಾಷಣ ೮ ವೀಣಾವಾದನ, ಎಂ ಎಸ್ ಜಯಮ್ಮ. ೮.೭೦ ಮೈಸೂರು ಸಂಗೀತ ಗಾನಮಾಲೆ.

ರಿಜಿ ನಂ. 792 ಶಿವಮೊಗ್ಗ || ಬಿಡಿ ಪ್ರತಿಗೆ 3 ಕಾಸು

# ಸಾಧ್ವಿ

ಸಂಪುಟ ೧೧] ಮಂಗಳವಾರ ೨೪-೨-೧೯೫೪ [ಸಂಚಿಕೆ ೧೬೯

# ಕೋಲಾರದ ಚಿನ್ನದ ಗಣಿಯಲ್ಲಿ ಗುಂಡು

## ಮಾರ್ಚಿ ೩ರಿಂದ ಮುನಿಸಿಪಲ್ ಕೆಲಸಗಾರರ ಮುಷ್ಕರ

ಮೈಸೂರು ೨೪

ರಾಜಧಾನಿಯ ಮುನಿಸಿಪಲ್ ಕೆಲಸಗಾರರು ಪೌರ ಸಭೆಯವರಿಗೆ ಸಲ್ಲಿಸಿದ್ದ ಬೇಡಿಕೆಗಳು ಇದುವರೆಗೂ ಈಡೇರದ ಕಾರಣದಿಂದಲೂ ಕಳೆದ ತಿಂಗಳು ೨೩ನೇ ತಾರೀಖು ಹರತಾಳ ನಡೆಸಿದ್ದಕ್ಕಾಗಿ ಹಿಡಿದಿರುವ ೩ ದಿನಗಳ ಸಂಬಳವನ್ನು ಕೊಡಲು ನಿರಾಕರಿಸಿರುವುದರಿಂದಲೂ ಕೆಲಸಗಾರರು ಬರುವ ತಿಂಗಳು ೩ನೇ ತಾರೀಖಿನಿಂದ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆಂದೂ, ಸಾರ್ವಜನಿಕರು ಬೆಂಬಲ ನೀಡಬೇಕೆಂದೂ, ಕಾರ್ಯದರ್ಶಿ ಯವರು ಕೋರಿರುತ್ತಾರೆ.

### ಹೊಡೆದಾಡುತ್ತಿದ್ದುದಕ್ಕೆ ಶಿಕ್ಷೆ

ರಾಜಧಾನಿಯ ಕಾಕರವಾಡಿಯಲ್ಲಿ ಕಳೆದ ಶನಿವಾರ ಸಂಜೆ ಹೊಡೆದಾಡುತ್ತಿದ್ದ ಅಬ್ದುಲ್ ವಹೀದ್, ಅಬ್ದುಲ್ ಅಜೀಜ್ ಜನಾಬಿಯುಮ್ಮ, ಖಾದರ್ ಮೊಹಿದ್ದೀನ್ ಮಹಮ್ಮದ್ ದಸ್ತಗಿರ್ ಎಂಬುವರ ಮೇಲೆ ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯು ನಗರ ನ್ಯಾಯಾಧೀಶರು ಈ ದಿನ ಆರೋಪಿಗಳಿಗೆ ತಲಾ ೩ ರೂ ಜುಲ್ಮಾನೆ, ತಪ್ಪಿದರೆ ೩ ದಿನ ಕಠಿಣ ಶಿಕ್ಷೆ ವಿಧಿಸಿರುತ್ತಾರೆ.

### ಸ್ಕೌಟ್ ರ್‍ಯಾಲಿ

ನಗರದ ಸ್ಕೌಟ್ ಕೌನ್ಸಿಲ್ಲಿನ ಆಶ್ರಯದಲ್ಲಿ ಸ್ಕೌಟ್ ರ್‍ಯಾಲಿಯು ಮೊನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ಜಿ ಟಿ ಎ. ಲ್ಲಾ..ರ ಅಧ್ಯಕ್ಷತೆಯಲ್ಲಿ ಜರುಗಿತು. ... ನೆಯಾದನಂತರ ಶ್ರೀ ಎಂ ರಾ... ಮಯ್ಯನವರು ಸ್ವಾಗತ ಭಾಷಣ ಮಾಡಿದರು ... ವಿಲಾಸ ವಿದ್ಯಾರ್ಥಿ ... ಲೆಯು ಜಯಾ ಸ್ಕೌಟನವರಿಗೆ ... ವು ಬಹುಮಾನವೂ, ಸರ್ದಾರ್ ಶ್ರೀನಿ... ರುವ ಉರ್ದು ಪ್ರಾಥಮಿಕ ಶಾಲೆಗೆ ಪ್ರಾಥಮಿಕ ಶಾಲೆಗಳ ಪಾರಿತೋಷಕ ... ಧ್ಯಕ್ಷರಿಂದ ಕೊಡಲ್ಪಟ್ಟವು. ಅಧ್ಯಕ್ಷ ಭಾಷಣ ಮಾಡಿ ಸ್ಕೌಟ್ ಚಳುವಳಿಯ ಮಹತ್ವವನ್ನು ವಿವರಿಸಿದರು ... ರಾಷ್ಟ್ರಗೀತೆಗಳೊಡನೆ ... ಸಂಭವು ಮುಕ್ತಾಯವಾಯಿತು

### ನ್ಯಾಷನಲ್ ಇಂಜನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

...ನಿಯಲ್ಲಿ ಮೊನ್ನೆ ನಡೆದ ಸ್ಕೌಟ್ ... ಸಮಾರಂಭದಲ್ಲಿ ವಿದ್ಯಾ ಇಲಾಖೆ ಡೈರೆಕ್ಟರ್ ಶ್ರೀ ಎ ಬಿ ಮಲ್ಲಾರಾಧ್ಯರು ...ನಿಯರಿಂಗ್ ವಿದ್ಯಾರ್ಥಿಗಳ ಮುಷ್ಕರ ... ಸಮಸ್ಯೆ ಪರಿಹಾರವಾಗಬೇಕೆಂದು ... ಸಮಾಧಾನಗೊಂಡ ವಿದ್ಯಾರ್ಥಿಗಳು ಆ ದಿನ ಬೆಳಗ್ಗೆ ಮುಷ್ಕರವನ್ನು ... ತರಗತಿಗಳಲ್ಲಿ ಹಾಜರಾಗಿ ... ನಡೆಸಿದರು.

### ಪತಿಗೆ ಕ್ಷೌರ ಮಾಡಲಾಗದೆ ವಿವಾಹ ವಿಚ್ಛೇದನ

...ರಂಗೋಲಿನ ವ್ಯಕ್ತಿಯು ತನ್ನ ಪತ್ನಿಯು ತನಗೆ ಪ್ರತಿ ದಿವಸವೂ ಕ್ಷೌರ ಮಾಡಬೇಕೆಂದು ಬಲಾತ್ಕರಿಸುತ್ತಿದ್ದನೆಂದೂ, ...ವಿನ ಕಾಲ ಈ ತೆರನಾದ ಸತಿ ಸೇವೆಯ ಬೇಸತ್ತ ಪತ್ನಿಯು ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ಹಾಕಿ ಬಂಧ ವಿಮುಕ್ತಳಾದಳೆಂದೂ ಗೊತ್ತಾಗಿದೆ

### ಚಿನ್ನದ ಗಣಿಯಲ್ಲಿ ಗುಂಡಿನಿಂದ ಬಾಲಕನ ಮರಣ

ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಸಭೆ ಮೆರವಣಿಗೆಗಳ ಮೇಲೆ ಹಾಕಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ೬೦೦ ಜನರು ಸುಂದರ್ ಮ್ಯಾನೇಜರ್ ಬಂಗಲೆಯ ಬಳಿ ಸಭೆ ಸೇರಿ, ಪೊಲೀಸರ ವಶದಲ್ಲಿ ಬಂಧನದಲ್ಲಿದ್ದ ಇಬ್ಬರನ್ನು ಬಿಡಿಸಿಕೊಳ್ಳಲು ಠಾಣೆ ಕಡೆಗೆ ಮೆರವಣಿಗೆ ಹೊರಟರೆಂದೂ, ಗುಂಪಿನವರನ್ನು ಚದುರಿಸಲು ಪೊಲೀಸರು ಮಾಡಿದ ಪ್ರಯತ್ನಗಳು ವಿಫಲವಾಗಿ ಗುಂಪಿನವರು ಕಲ್ಲು ತೂರಿ ಆರಂಭಿಸಿದುದರಿಂದ ಪೊಲೀಸರು ಐದು ಬಾರಿ ಗುಂಡು ಹಾರಿಸಲಾಗಿ ಒಬ್ಬ ಬಾಲಕನು ಮಡಿದನೆಂದೂ ಗೊತ್ತಾಗಿದೆ. ಕಲ್ಲೇಟಿನಿಂದ ೧೪ ಮಂದಿ ಪೊಲೀಸರಿಗೂ, ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಶ್ರೀ ಬಿ ಪಿ ತಿಮ್ಮಪ್ಪ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಎಲ್ ... ಇವರುಗಳಿಗೂ ಗಾಯಗಳಾಗಿವೆ ಎಂದು ಗೊತ್ತಾಗಿದೆ

### ಅರಮನೆಯಲ್ಲೇ ಕಳ್ಳತನ

ಕಟಕ್ಕಿನ ಬಳಿ ದಾಂಪತ್ರ ಎಂಬಲ್ಲಿನ ರಾಜರ ಅರಮನೆಯಲ್ಲಿ ಕಳೆದ ೧೮ನೇ ತಾರೀಖು ಕಳ್ಳತನವಾಗಿ ಸುಮಾರು ಒಂದು ಲಕ್ಷ ರೂ ಬೆಲೆ ಬಾಳುವಷ್ಟು ನಗ ನಾಣ್ಯಗಳು ಅಪಹರಿಸಲ್ಪಟ್ಟದ್ದುವೆಂದೂ, ಈ ಸಂಬಂಧವಾಗಿ ನಾಲ್ಕು ಜನರನ್ನು ಬಂಧಿಸಿ ೮೦ ಸಾವಿರ ರೂ ಬೆಲೆಯಷ್ಟು ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದೂ ವರದಿಯಾಗಿದೆ

### ಜೀವಂತ ಮೀನು ಹೊಟ್ಟೆಗೆ ಸೇರಿ ಬೆಸ್ತನ ಮರಣ

ಕಾರ್ಕಳಕ್ಕೆ ಸಮೀಪದ ಒಂದು ಹಳ್ಳಿಯಲ್ಲಿ ಅಂಥನಿ ಎಂಬುವನೊಬ್ಬನು ಮೀನು ಹಿಡಿಯಲು ಹೋಗಿ, ಸಿಕ್ಕಿದ ಎರಡು ಮೀನ ಗಳ ಪೈಕಿ ಒಂದು ತಪ್ಪಿಸಿಕೊಳ್ಳಲು ಅದನ್ನು ಹಿಡಿಯುವ ಪ್ರಯತ್ನದಲ್ಲಿ ಇನ್ನೊಂದನ್ನು ತನ್ನ ಹಲ್ಲುಗಳ ನಡುವೆ ಸಿಕ್ಕಿಸಿಕೊಂಡಿದ್ದನೆಂದೂ, ಜೀವಸಹಿತ ಇದ್ದ ಆ ಮೀನು ಹಲ್ಲಿನಿಂದ ನುಣುಚಿಕೊಂಡು ಅವನ ಹೊಟ್ಟೆಯನ್ನು ಹೊಕ್ಕು ಅಲ್ಲಿ ಹುತ್ತಾಡುತ್ತಾ ಅವನಿಗೆ ಬಾಧೆಯನ್ನುಂಟುಮಾಡಿತೆಂದೂ ವರದಿಯಾಗಿದೆ ಕೂಡಲೇ ಅವನಿಗೆ ಚಿಕಿತ್ಸೆ ನಡೆಸಲು ಸಾಧ್ಯವಾಗದಿದ್ದುದರಿಂದ ಅವನು ಮೃತಪಟ್ಟನೆಂದು ಗೊತ್ತಾಗಿದೆ

### ರೈಲಿಗೆ ಸಿಕ್ಕಿ ಯುವಕನ ಆತ್ಮಹತ್ಯೆ

ಬೆಂಗಳೂರು ೨೪

ಇಲ್ಲಿನ ಬಿನ್ನಿ ಮಿಲ್ ತಿರುವಿನಲ್ಲಿ ನೆನ್ನೆ ಬೆಳಗ್ಗೆ ವೆಂಕಟೇಶ ಎಂಬುವರ ಶವವು ರೈಲು ಕಂಬಿ ಬಳಿ ರುಂಡ ಮುಂಡಗಳು ಬೇರ್ಪಟ್ಟು ಬಿದ್ದ ಸುದ್ದಿಯು ವರದಿಯಾಗಿದೆ ಮೃತನ ಮೈಮೇಲಿದ್ದ ಬಟ್ಟೆಯ ಜೇಬಿನಲ್ಲಿ ಒಂದು ಕಾಗದವು ಇದ್ದಿತೆಂದೂ, ಅದರಲ್ಲಿ ಮೃತನು ತನಗೆ ವರಮಾನವು ಸಾಲದೆ ಜೀವನದಲ್ಲಿ ಜಿಗುಪ್ಸೆಯುಂಟಾಗಿ ಈ ಮಾರ್ಗದಲ್ಲಿ ತೊಡಗುವುದಾಗಿ ಬರೆದಿದ್ದನೆಂದೂ ಹೇಳಲಾಗಿದೆ ಈ ಘಟನೆಯ ಕಾರಣದಿಂದ ನೆನ್ನೆ ಬೆಂಗಳೂರು-ಮೈಸೂರುಗಳ ನಡುವೆ ಓಡಾಡುವ ರೈಲುಗಳು ತಡವಾಗಿ ಹೊರಟುವು.

### ಹೆಂಡತಿಯೊಡನೆ ಸಲುಗೆ ಮಾಡಿದ ಮಾವನ ಕೊಲೆ

ಹೈದರಾಬಾದಿನ ಕಬೀರ್ ಎಂಬುವನೊಬ್ಬನು ಕೆಲವು ದಿನಗಳ ಹಿಂದೆ ತನ್ನ ಮಾವನನ್ನು ಕೊಡಲಿಯಿಂದ ಹೊಡೆದು ಸಾಯಿಸಿದ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿ ಜೀವಾವಧಿ ಗಡೀಪಾರು ಶಿಕ್ಷೆ ವಿಧಿಸಲ್ಪಟ್ಟಿದ್ದನು ಇವರ ಮೇಲೆ ಅವನು ಅಲ್ಲಿನ ಹೈಕೋರ್ಟಿನಲ್ಲಿ ಅಪೀಲು ಹೂಡಲಾಗಿ ಅವನ ಮೇಲಿನ ಆಪಾದನೆಗಳಿಗೆ ತೃಪ್ತಿಕರವಾದ ರುಜುವಾತುಗಳಿಲ್ಲವೆಂದು ಖುಲಾಸೆ ಮಾಡಲಾಯಿತು ಕಬೀರನ ಹೆಂಡತಿಯು ಗಂಡನೊಡನೆ ಸಲುಗೆಯಲು ಮಾವನು ಅಡ್ಡಿ ಪಡಿಸುತ್ತಿದ್ದನೆಂಬ ಕಾರಣಕ್ಕಾಗಿ ಮಾವನು ಕೊಲೆ ಮಾಡಲ್ಪಟ್ಟನೆಂದು ಹೇಳಲಾಗಿದೆ

(ಎ. ಪಿ. ಎಸ್)

### ಜಪಾನ್ ಮಾದರಿಯಲ್ಲಿ ಭತ್ತದ ಬೇಸಾಯ

ಸಂಸ್ಥಾನದಲ್ಲಿ ಜಪಾನ್ ಮಾದರಿಯ ಭತ್ತದ ಬೇಸಾಯವನ್ನು ಜನರಿಗೆ ತಿಳಿಪಡಿಸಲಾಗಿ ಬರುವ ಮಾರ್ಚಿ ತಿಂಗಳಿಂದ ಹಲವು ಜಿಲ್ಲೆಗಳಲ್ಲಿ ಪ್ರಚಾರ ಮತ್ತು ಪ್ರಯೋಗಗಳನ್ನು ನಡೆಸಲಾಗುವುದೆಂದೂ, ಇದಕ್ಕಾಗಿ ಈ ವರ್ಷ ಹಲವು ಕಡೆಗಳಲ್ಲಿ ೨೦ ಸಾವಿರ ಎಕರೆ ಜಮೀನನ್ನು ಆರಿಸಿ ವ್ಯವಸಾಯ ನಡೆಸಲಾಗುವುದೆಂದೂ ಆಹಾರ ಶಾಖಾ ಡೈರೆಕ್ಟರು ತಿಳಿಸಿರುವರು.

### ಕಾಂಗ್ರೆಸ್, ಕೆ. ಎಲ್. ಪಿ. ಪಕ್ಷಗಳ ಐಕ್ಯವೇ ?

ಕೃಷಿಕಾರ್ ಲೋಕ ಪಕ್ಷದ ನಾಯಕ ಪ್ರೊಫೆಸರ್ ಎನ್ ಜಿ. ರಂಗಾ ಹುತ್ತು ಕಾಂಗ್ರೆಸ್ ನಾಯಕರುಗಳ ಸಂದರ್ಶನಗಳ ಪರಿಣಾಮವಾಗಿ ಕಾಂಗ್ರೆಸ್ಸಿನೊಡನೆ ಮೇಲ್ಕಂಡ ಪಕ್ಷವನ್ನು ಐಕ್ಯಗೊಳಿಸುವ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಗಿದೆಯೆಂದೂ ಈ ಕ್ರಮವು ಶೀಘ್ರದಲ್ಲೇ ಕಾರ್ಯಗತವಾಗಲಿದೆಯೆಂದೂ ಗೊತ್ತಾಗಿದೆ ಪ್ರಜಾಸೋಷಿಯಲಿಸ್ಟ್ ಪಕ್ಷವನ್ನು ಕಾಂಗ್ರೆಸ್ಸಿನೊಡನೆ ಐಕ್ಯಗೊಳಿಸುವ ಬಗ್ಗೆ ಆ ಪಕ್ಷದ ನಾಯಕರಾದ ಶ್ರೀ ಟಿ. ಪ್ರಕಾಶಂರವರನ್ನು ವಿಶಾಲಾಂಧ್ರ ಪ್ರಾಂತ್ಯ ಕಾಂಗ್ರೆಸ್ಸಿನ ಅಧ್ಯಕ್ಷರಿಗೆ ಸೂಚನೆ ಕೊಡಲಾಗಿದೆಯೆಂದು ತಿಳಿದುಬಂದಿದೆ ಸಾರ್ವತ್ರಿಕ ಚುನಾವಣೆಯಲ್ಲಿ ಕಮ್ಯೂನಿಸ್ಟರನ್ನು ಎದುರಿಸಲು ಮೇಲ್ಕಂಡ ಮೂರು ಪಕ್ಷಗಳೂ ಒಂದಾಗಿ ಸೇರುವ ಸಂಭವವಿರುವುದೆಂದೂ ಹೇಳಲಾಗಿದೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರ ಆಹ್ವಾನದ ಮೇರೆ ಶ್ರೀ ಟಿ. ಪ್ರಕಾಶಂ ರವರು ಹಲವು ಪ್ರಾಮುಖ್ಯ ವಿಷಯಗಳನ್ನು ಕುರಿತು ಮಾತುಕತೆಗಾಗಿ ದೆಹಲಿಗೆ ಆಗಮಿಸಿರುವರೆಂದೂ ವರದಿಯಾಗಿದೆ

### ಉತ್ತರಪ್ರದೇಶ ಅಧ್ಯಾಪಕರ ಆಮರಣಾಂತ ಉಪವಾಸ

ಉತ್ತರ ಪ್ರದೇಶದ ಜಿಲ್ಲಾ ಬೋರ್ಡು ಶಾಲೆಗಳ ಅಧ್ಯಾಪಕರಿಗೆ ಸಂಬಳದ ಬಾಕಿಯನ್ನು ಕೊಡದೆ, ಅವರ ಹಲವು ಬೇಡಿಕೆಗಳನ್ನು ಸರ್ಕಾರದವರು ಉಪೇಕ್ಷಿಸಿರುವುದರಿಂದ ಅಲ್ಲಿನ ಸುಮಾರು ಒಂದು ಸಾವಿರ ಉಪಾಧ್ಯಾಯರು ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಿದರು ... ವರ್ಷದ ಒಬ್ಬ ಉಪಾಧ್ಯಾಯನಿಯೂ, ಇಬ್ಬರು ಅಧ್ಯಾಪಕರೂ ಆಮರಣಾಂತ ಉಪವಾಸ ಮುಷ್ಕರವನ್ನು ಆರಂಭಿಸಿರುವರು.

### ಕಳ್ಳತನವನ್ನು ಪತ್ತೆಹಚ್ಚುವವರೆಗೆ ಉಪವಾಸ

ಆಗ್ರಾದ ಗ್ರಾಮಸೇವಾ ವಿದ್ಯಾಲಯದ ಪ್ರೊ|| ಕಾಶಿನಾಥ ತ್ರಿವೇದಿಯವರು ಪ್ರವಾಸ ಹೋಗಿದ್ದಾಗ ಅವರು ಮನೆಯಲ್ಲಿ ಅಂಗಿ ಜೇಬಿನಲ್ಲಿಟ್ಟಿದ್ದ ೩೦ ರೂ.ಗಳು ಕಳುವಾಗಿದ್ದುದರಿಂದ ಅವರು ಅನಿರ್ದಿಷ್ಟ ಕಾಲದ ಉಪವಾಸವನ್ನು ಆರಂಭಿಸಿರುವರು. ಹಿಂದೆ ಇದೇ ರೀತಿ ಹಲವು ಸಣ್ಣ ಪುಟ್ಟ ಕಳ್ಳತನಗಳು ನಡೆದಿದ್ದುವೆಂದು ಹೇಳಲಾಗಿದೆ ಕಳ್ಳನನ್ನು ಪತ್ತೆಹಚ್ಚಿಕೊಟ್ಟರೆ ಉಪವಾಸವನ್ನು ನಿಲ್ಲಿಸುವುದಾಗಿ ಅವರು ತಿಳಿಸಿದ್ದಾರೆ.

### ಸಿಡಿಲಿನಿಂದ ಇಬ್ಬರ ಮರಣ

ಚನ್ನಪಟ್ಟಣಕ್ಕೆ ೧|| ಮೈಲಿ ದೂರದಲ್ಲಿ ರಸ್ತೆಯ ಪಕ್ಕದ ಮರದ ಬಳಿ ನಿಂತಿದ್ದ ಇಬ್ಬರಿಗೆ ಮೊನ್ನೆ ದಿನ ಮಧ್ಯಾಹ್ನ ಸಿಡಿಲು ಬಡಿದು ಮೃತಪಟ್ಟರೆಂದೂ, ಮತ್ತೊಬ್ಬನಿಗೆ ಗಾಯವಾಯಿತೆಂದೂ ಗೊತ್ತಾಗಿದೆ

○ ಮೂಡಿಗೆರೆ ತಾಲ್ಲೂಕು ಫಲ್ಗುಣಿ ಗ್ರಾಮದ ಶ್ರೀ ... ರವರ ಸೀತಾಲಯದ ಮೂಲವಿಗ್ರಹದ ಕಣ್ಣು, ಕಿವಿ, ಮೂಗು ಮತ್ತು ಬಾಯಿಗಳನ್ನು ಯಾರೋ ಭಿನ್ನಮಾಡಿರುವರೆಂದು ಗೊತ್ತಾಗಿದೆ.

# ದೇವಾಲಯ ಪ್ರತಿಷ್ಠೆಯ ಮಹತ್ವ

## ಕೋಳಲೆ ಶ್ರೀಗಳವರ ಉಪದೇಶ

ಮೂಗೂರು [illegible]

ಟಿ. ನರಸೀಪುರದ ತಾಲ್ಲೂಕು ಮೂಗೂರಿನಲ್ಲಿರುವ ಕಲ್ಯಾಣ ಮಂಟಪದಲ್ಲಿ ಶ್ರೀಗಳವರ ಅಮೃತ ಹಸ್ತದಿಂದ [illegible] ನೇ ಶನಿವಾರದ ದಿವಸ ನೆರವೇರಿಸಲ್ಪಟ್ಟ, ಶ್ರೀ ಗೋಪಾಲಕೃಷ್ಣ ದೇವರ ಮತ್ತು [illegible] ದೇವರ ಪ್ರತಿಷ್ಠಾ ಮಹೋತ್ಸವ ಸಂದರ್ಭದಲ್ಲಿ ಶ್ರೀ ಶ್ರೀಮದ್ವಾ[illegible] ಮಠಾಧೀಶ್ವರರಾದ ಶ್ರೀಮದ್ವಿದ್ಯಾ [illegible] ಪ್ರಸನ್ನ ತೀರ್ಥ ಶ್ರೀಪಾದಂಗಳವರು ಭಕ್ತರಿಗೆ ಅನುಗ್ರಹ ಮಾಡಿದ ಸಂದೇಶ —

ಕಲಿಯುಗದಲ್ಲಿ ಸತ್ಕಾರ್ಯಗಳಿಗೆ [illegible] ಅನುಭವಸಿದ್ಧ [illegible]

[illegible]

ಈ ದಿನ ಅತಿ ವೈಭವದಿಂದ ನಡೆದಿ[illegible]

## ಕೊಲಂಬೋ ಯೋಜನಾ ಮಂಡಲಿ ಅಧ್ಯಕ್ಷತೆಗೆ ಭಾರತೀಯರು

ಸಿಂಹಳದ ಯೋಜನಾ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸದ್ಯದಲ್ಲೇ ನಡೆಯಲಿರುವ ಚುನಾವಣೆಗೆ ಒಬ್ಬ ಭಾರತೀಯರನ್ನು ಉಮೇದುವಾರರಾಗಿ ನಿಲ್ಲಿಸಲಾಗುವುದೆಂದೂ, ಅವರಿಗೆ ಹೆಚ್ಚಿನ ಬೆಂಬಲ ದೊರೆಯಬಹುದೆಂದೂ ವರದಿಯಾಗಿದೆ.

---

[illegible] ದೇವತಾ ಪ್ರತಿಷ್ಠೆಯು ಸಾತ್ವಿಕ [illegible] ಮೆಂದೇ ನಮ್ಮ ನಂಬಿಕೆ. ಭವ್ಯವಾದ ದಿವ್ಯ ದೇವಮಂದಿರವು ಪ್ರಥಮತಃ ಸಾತ್ವಿಕತಾ ದ್ಯೋತಕವು. ದೇವತಾ ಪ್ರತಿಷ್ಠಾ ಕಾರ್ಯಕಲಾಪಗಳು ವಿಧ್ಯುಕ್ತ ರೀತಿಯಿಂದ ಯಾವ ಲೋಪದೋಷಗಳೂ ಇಲ್ಲದೆ ನಡೆದಿರುವುದು ಅತಿ ಶ್ಲಾಘನೀಯ.

ಅಧ್ಯಕ್ಷರು ಅಂದಾಜು ಪಟ್ಟಿಯನ್ನು ಮಂಡಿಸಿ, ಪೌರಸಭೆಗೆ ಇತ್ತೀಚೆಗೆ ಸುಂಕ, ಮನರಂಜನೆ, ಸೂಯಜ್ ಫಾರಂ ಮುಂತಾದ ಪೌರಸಭಾ ಆಸ್ತಿಗಳಿಂದ ಬರುವ ವರಮಾನವು ಕಡಿಮೆಯಾಗಿರುವುದೆಂದೂ, ಪೌರಸಭೆಯ ವೆಚ್ಚವು ಪ್ರತಿ ವರ್ಷವೂ ಹೆಚ್ಚುತ್ತಿರುವುದೆಂದೂ, ವೆಚ್ಚವನ್ನು ಸರಿತೂಗಿಸಲು ಕ್ರಮ ಕೈಗೊಳ್ಳಬೇಕಾಗಿದೆಯೆಂದೂ, ಪೌರಸಭಾ ಆಸ್ತಿಪಾಸ್ತಿಗಳ ವರಮಾನವು ಹೆಚ್ಚಾಗುವಂತೆ ಮಾಡುವುದು ಅಗತ್ಯವೆಂದೂ ಸೂಚಿಸಿದರು. ಹೊಸ ತೆರಿಗೆಯನ್ನು ಈ ವರ್ಷ ಹಾಕುವುದಿಲ್ಲವೆಂದೂ ಸ್ಪಷ್ಟಪಡಿಸಿದರು. ಸಭೆಯ ಮುಂದಿಡಿಸಿದ ಆಯವ್ಯಯ ಪಟ್ಟಿಯು ಈ ರೀತಿ ಇರುತ್ತದೆ

### ಆದಾಯದ ಬಾಬುಗಳು

| | |
|---|---|
| ಪೌರಕರಗಳು ರೂ. | ೧೬,೬೫,೪೮೪ |
| ವಿಶೇಷ ರಾಜ್ಯೋತ್ಸವ ಕೆರಗೆ | ೧,೫೪,೦೦೦ |
| ಪೌರ ಆಸ್ತಿ ವರಮಾನ | ೪,೪೦,೬೨೫ |
| ಗ್ರಾಂಟುಗಳು | ೪,೦೦೦ |
| ಇತರ ಬಾಬು | ೩೧,೯೯೧ |
| ಸಾಲ | ೭,೫೭,೦೦೦ |
| ಹಿಂದಿನ ಶಿಲ್ಕು | ೩೧,೬೭೯ |
| ಒಟ್ಟು ಆದಾಯ | ೩೦,೬೮,೬೪೯ |

### ವೆಚ್ಚದ ಬಾಬುಗಳು

| | |
|---|---|
| ಆಡಳಿತ ರೂ. | ೨,೭೬,೬೪೦ |
| ಸಾರ್ವಜನಿಕರ ರಕ್ಷಣೆ | ೭೫,೩೦೦ |
| ಇಂಜನಿಯರಿಂಗ್ | ೪,೪೬,೬೦೦ |
| ಆರೋಗ್ಯ | ೧೨,೩೬,೧೩೧ |
| ಶಿಕ್ಷಣ | ೩,೦೦೦ |
| ಸಹಾಯ ಧನ | ೨,೦೦೦ |
| ಇತರ ಬಾಬು | ೪೩,೧೩೯ |
| ಸಾರ್ವಜನಿಕ ಸಾಲ | ೭,೨೪,೨೦೦ |
| ಉಳಿದಿರುವ ಶಿಲ್ಕು | ೭೫,೬೭೯ |
| ಒಟ್ಟು ಖರ್ಚು | ೨೯,೯೩,೦೦೦ |

ಆಯವ್ಯಯದ ಪಟ್ಟಿ ಮೇಲೆ ಚರ್ಚೆಯು ನೆನ್ನೆ ೪ ಗಂಟೆಯವರೆಗೆ ನಡೆಯಿತು. ಸದಸ್ಯರು ಮಾತನಾಡಿ, ಸಾರ್ವಜನಿಕ ಆರೋಗ್ಯಕ್ಕಾಗಿ ಪೌರಸಭೆಯು ಬೇಕಾದಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದರೂ ಕೆಲಸವು ತೃಪ್ತಿಕರವಾಗಿ ನಡೆದಿರುವುದಿಲ್ಲವೆಂದೂ, ಜನರ ಆರೋಗ್ಯದ ಕಡೆಗೆ ಹೆಚ್ಚು ಗಮನ ಕೊಡಬೇಕೆಂದೂ ತಿಳಿಸಿದರು. ಇಂಜನಿಯರಿಂಗ್ ಶಾಖೆಯವರು ರಸ್ತೆಗಳ ಮೇಲೆ ಸರಿಯಾದ ಗಮನ ಕೊಟ್ಟಿರುವುದಿಲ್ಲವೆಂದೂ ಹಲವರು ಟೀಕಿಸಿದರು

ನೀರಿನ ಸರಬರಾಜು ವಿಷಯದಲ್ಲಿ ವಿಶೇಷವಾಗಿ ಆಕ್ಷೇಪಣೆಯನ್ನು ಮಾಡಲಾಯಿತು. ಪೌರ ಸಭೆಯವರು ಸರ್ಕಾರದ ನೀರು ತೆರಿಗೆಯ ಏಜೆಂಟರು ಮಾತ್ರವಾಗಿರುವರೆಂದೂ, ಆ ವಿಷಯದಲ್ಲಿ ಅವರ ಮಾತು ನಡೆಯುತ್ತಿಲ್ಲವೆಂ...

## ಯುವರಾಣಿಯವರು ರಾಜಪ್ರಮುಖರು

ಮೈಸೂರು ೨೨

ಶ್ರೀ ಮನ್ಮಹಾರಾಜರವರ ವಿದೇಶ ಪ್ರವಾಸ ಕಾಲದಲ್ಲಿ ಅವರ ಪುತ್ರಿ ಶ್ರೀ ಯುವರಾಣಿ ಶ್ರೀ ಮದ್ಗಾಯತ್ರೀದೇವಿಯವರು ಹಂಗಾಮಿ ರಾಜಪ್ರಮುಖರ ಕಾರ್ಯಭಾರವನ್ನು ನಡೆಸಲಿರುವರೆಂದು ಇತ್ತೀಚೆಗೆ ಗೊತ್ತಾಗಿದೆ. ಈ ನೇಮಕಕ್ಕೆ ಸಂಸ್ಥಾನದ ಸರ್ಕಾರದವರು ಅಂಗೀಕಾರವನ್ನು ಕೊಟ್ಟಿರುವರೆಂದೂ ಹೇಳಲಾಗಿದೆ. ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರನ್ನು ನೇಮಿಸುವ ವಿಷಯವು ಒಂದು ಆಲೋಚನೆಯಲ್ಲಿದ್ದಿತು. ಈಚೆಗೆ ಇದರಲ್ಲಿ ಬದಲಾವಣೆಯಾಗಿರುವುದೆಂದು ತಿಳಿದುಬಂದಿದೆ

ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖಾ ಕಾರ್ಯದರ್ಶಿ, ಶ್ರೀ ಸಿ. ಎಸ್. ವೆಂಕಟಾಚಾರ್ಯರು ನೆನ್ನೆ ಇಲ್ಲಿಗೆ ಆಗಮಿಸಿದರು. ಅವರನ್ನು ಗುಜರಾತ್ ಸೆಕ್ರೆಟರಿಯವರು ಬೆಂಗಳೂರಿನಲ್ಲಿ ಸ್ವಾಗತಿಸಿ ಇಲ್ಲಿಗೆ ಅವರೊಡನೆ ಬಂದರು ಎಂದು ಹೇಳಲಾಗಿದೆ

## ಸೂಚನೆ

ಶ್ರೀ ರಾಮನವಮಿ ಪ್ರಯುಕ್ತ ಸಾಧ್ವಿ ಪತ್ರಿಕೆಗೆ ನಾಳೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

## ಪೌರಸಭೆಗೆ ಟಿ ಎಸ್. ರಾಜಗೋಪಾಲಯ್ಯಂಗಾರ್ಯರ ರಾಜೀನಾಮೆ

ನಗರದ ಪೌರಸಭಾ ಕಾಂಗ್ರೆಸ್ ಪಕ್ಷದ ಸದಸ್ಯರಾಗಿರುವ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರೆಂದೂ, ಈ ಬಗ್ಗೆ ಸಂಬಂಧಪಟ್ಟ ಕಾಂಗ್ರೆಸ್ಸಿನ ಪ್ರಮುಖರಿಗೆ ಅವರು ಪತ್ರ ಬರೆದಿರುವರೆಂದೂ ಗೊತ್ತಾಗಿದೆ

---

ಮೂ ಆಕ್ಷೇಪಣೆ ಮಾಡಲಾಯಿತು. ಪೌರ ಸಭೆಯವರೇ ಜ್ಯುಡಿಷಿಯಲ್ ಫಿಲ್ಟರಿನ ಆಡಳಿತವನ್ನು ವಹಿಸುವಂತೆ ಆಗಬೇಕೆಂದು ಸಲಹೆ ಮಾಡಲಾಯಿತು.

ಸಭೆಯನ್ನು ನಾಳೆದ್ದಿಗೆ ಮುಂದುವರಿಸಲಾಯಿತು

## ಸಂಸ್ಥಾನದಲ್ಲಿ ಡೆಪ್ಯುಟಿ ಮಂತ್ರಿಗಳ ನೇಮಕವೇ ?

ಬೆಂಗಳೂರು ೨೨

ಶ್ರೀ ಟಿ ಸಿದ್ಧಲಿಂಗಯ್ಯನವರು ಕೈಗಾರಿಕಾ ಮಂತ್ರಿತ್ವಕ್ಕೆ ರಾಜೀನಾಮೆಯಿತ್ತಿರುವುದರಿಂದ, ೩ ಜನ ಉಪ ಮಂತ್ರಿಗಳನ್ನು ನೇಮಿಸುವ ವಿಷಯವು ಮಂತ್ರಿಮಂಡಲದ ಪರ್ಯಾಲೋಚನೆಯಲ್ಲಿರುವುದೆಂದು ತಿಳಿದುಬಂದಿದೆ. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯಲ್ಲಿ ಈ ಸಂಬಂಧವಾಗಿ ಹೇಳಿಕೆಯೊಂದನ್ನು ಕೊಡುವ ಸಂಭವವೂ ಇರುವುದೆಂದೂ, ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ, ಶ್ರೀಗಳ. ಹುಚ್ಚುಮಾಸ್ತಿಗೌಡ, ಆರ್ ಸುಬ್ಬಣ್ಣ, ಎಂ ಪಳನಿಯಪ್ಪನ್, ಡಿ ದೇವರಾಜಅರಸ್ ಮತ್ತು ಬಿ. ಟಿ ಕೆಂಪರಾಜ್ ಇವರುಗಳ ಪೈಕಿ ೩ ಜನರನ್ನು ಉಪಮಂತ್ರಿಗಳಾಗಿ ತೆಗೆದುಕೊಳ್ಳಲಾಗುವುದೆಂದೂ ವರದಿಯಾಗಿದೆ

### ಪತ್ರಿಕೋದ್ಯಮದ ಅಸಿ ಪ್ರೊಫೆಸರ್

ಸುಪ್ರಸಿದ್ಧ ಪತ್ರಿಕೋದ್ಯಮಿಗಳಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರನ್ನು ಮೈಸೂರು ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮದ ಅಸಿಸ್ಟೆಂಟ್ ಪ್ರೊಫೆಸರರಾಗಿ ನೇಮಿಸಲಾಗಿದೆ.

## ವಿಮಾನ ಬಿದ್ದು ೩೫ ಜನರ ಪ್ರಾಣ ಹಾನಿ

ನ್ಯೂ ಮೆಕ್ಸಿಕೊವಿನ ರಾಷ್ಟ್ರದಿಂದ ದೂರ ಪ್ರಾಚ್ಯ ಪ್ರದೇಶಕ್ಕೆ ನೆನ್ನೆ ರಾತ್ರಿ ಹೊರಟ ವಿಮಾನವೊಂದು ಕ್ಯಾಲಿಫೋರ್ನಿಯ ಬಳಿ ಬಿದ್ದು ಉರಿದು ಹೋಯಿತೆಂದೂ ಒಳಗಿದ್ದ ೩೦ ಜನ ವಿಮಾನ ಸೈನ್ಯದ ಪ್ರಯಾಣಿಕರೂ ವಿಮಾನಕ್ಕೆ ಸೇರಿದ ೫ ಜನ ನೌಕರರೂ ಮೃತಪಟ್ಟರೆಂದೂ ತಿಳಿದು ಬಂದಿದೆ.

### ರಾಮೋತ್ಸವ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ಆಶ್ರಯದಲ್ಲಿ ಇರ್ವಿನ್ ರಸ್ತೆಯ ಬಳಿ ಶ್ರೀ ಕಾಶಿ ಬೃಂದಾವನದ ವೈಕುಂಠ ಶ್ರೀರಾಮಂದಿರದಲ್ಲಿ ನಾಳೆಯಿಂದ ೧೦ ದಿನಗಳವರೆಗೆ ನಡೆಯುವ ಶ್ರೀ ರಾಮೋತ್ಸವದ ಅಂಗವಾಗಿ ನಾಳೆ ರಾತ್ರಿ ೯ ಗಂಟೆಗೆ ಗವಾಯಿ ಎಸ್. ಎ. ಲತೀಫ್‌ರವರ ಹಿಂದೂಸ್ತಾನಿ ಸಂಗೀತವು ಏರ್ಪಾಡಾಗಿದೆ

## ವಿರೋಧ ಪಕ್ಷದವರಿಂದ ಬೋಗಸ್ ನಿರ್ಣಯಗಳಿಲ್ಲ

### ಶಾಸನ ಸಭೆಯಲ್ಲಿ ಇಮಾಂರವರ ಹೇಳಿಕೆ

ಸ್ವಂ. ಸ. ಪ್ರೋ[ ] ಬೆಂಗಳೂರು ೨೨

ಈ ದಿನ ಶಾಸನ ಸಭೆಯಲ್ಲಿ ಬೇಡಿಕೆಗಳ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ವಿರೋಧ ಪಕ್ಷದ ನಾಯಕರಾದ ಶ್ರೀ ಜೆ. ಎಂ ಇಮಾಂರವರು ತಮ್ಮ ಪಕ್ಷದ ಪರವಾಗಿ ಸೂಚಿಸಲ್ಪಟ್ಟಿರುವ ಬೋಗಸ್ ನಿರ್ಣಯಗಳನ್ನು ಮಂಡಿಸುವುದಿಲ್ಲವೆಂದು ತಿಳಿಸಿದರು. ಪ್ರಜಾಪ್ರಭುತ್ವವಿರುವ ರಾಜ್ಯಗಳಲ್ಲಿ ವಿರೋಧ ಪಕ್ಷದವರು ಮಾತ್ರ ಬೋಗಸ್ ನಿರ್ಣಯಗಳನ್ನು ಮಂಡಿಸುವ ವಾಡಿಕೆಯಿರುವುದಾಗಿಯೂ, ಆಡಳಿತ ಪಕ್ಷದವರು ತಮ್ಮ ಕಡೆಯವರಿಂದಲೇ ಬೋಗಸ್ ನಿರ್ಣಯಗಳನ್ನು ಮಂಡಿಸಿರುವರೆಂದೂ, ತಮ್ಮ ಪಕ್ಷದ ನಿರ್ಣಯಗಳು ಕಡೆಯಲ್ಲಿ ಬರುವುದರಿಂದ ತಾವು ನಿರ್ಣಯಗಳನ್ನು ಮಂಡಿಸಿಯೂ ಸಾರ್ಥಕವಾಗುವುದಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು

ಇಂದಿನ ಸಭೆಗೆ ಮುಖ್ಯ ಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಬಂದಿದ್ದರು. ಪ್ರಶ್ನೋತ್ತರ ಸಮಯದಲ್ಲಿ, ಬಂಗಾರಪೇಟೆಯ ಉಪ ಚುನಾವಣೆಯ ಕಾಲದಲ್ಲಿ ಮಂತ್ರಿಗಳು ಆ ಪ್ರದೇಶದಲ್ಲಿ ಖಾಸಗಿಯಾಗಿ ಪ್ರವಾಸಕೈಕೊಂಡಿದ್ದರೆಂದು ಅವರು ಹೇಳಿದರು. ಚುನಾವಣಾ ಕ್ಷೇತ್ರವೊಂದರ ಬಳಿ ಆರೋಗ್ಯ ಮಂತ್ರಿ, ಶ್ರೀ ಟಿ. ಚನ್ನಯ್ಯನವರು ಇದ್ದುದು ನಿಜವೆಂದೂ, ಆದ ಪದತ್ಯಕ್ಕೆ ಅವರು ಚುನಾವಣೆಯಲ್ಲಿ ಓಟುದಾರರನ್ನು ಪ್ರೇರೇಪಿಸಿದರೆಂದು ಹೇಳುವುದು ಸರಿಯಲ್ಲವೆಂದೂ ತಿಳಿಸಲಾಯಿತು.

'ಸಂಸ್ಥಾನ ಸರ್ಕಾರದ ಕಾರ್ಯಕ್ಕಾಗಿಯೇ ಮಂತ್ರಿಗಳು ಪ್ರವಾಸ ಮಾಡುತ್ತಿರುವುದಿಲ್ಲವೆಂದೂ ಶ್ರೀ ಹನುಮಂತಯ್ಯನವರು ಹೇಳಿದರು

### ಎಚ್. ಜಿ. ಅನಂತರಾಮುರವರ ನಿಧನ

ಮೈಸೂರು ಅರಮನೆ ಕಛೇರಿಯ ಖಜಾನೆ ಅಕೌಂಟೆಂಟರಾಗಿದ್ದ ಶ್ರೀ ಎಚ್. ಜಿ. ಅನಂತರಾಮುರವರು ನೆನ್ನೆ ಬೆಳಿಗ್ಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ಅತ್ಯಂತ ಗಟ್ಟಿರಾಗಿ ಒಂದು ಕೈಗಾಡಿಯಲ್ಲಿ ದಿನದ ಕಛೇರಿಗೆ ಬರುತ್ತಿದ್ದರು. ಅವರಿಗೆ ೪೫ ವರ್ಷ ವಯಸ್ಸಾಗಿತ್ತು. ಹಲವು ದಿನಗಳಿಂದ ಅವರು ಗೂರಲು ವ್ಯಾಧಿಯಿಂದ ನರಳುತ್ತಿದ್ದರು.

## ಸಪ್ತಶತಿ ಪಾರಾಯಣ ಮಾಡುವವರು ಬೇಕು

ಶೃಂಗೇರಿಯಲ್ಲಿ ಬರುವ ತಿಂಗಳು ಎರಡನೇ ತಾರೀಖಿನಿಂದ ನಡೆಯಲಿರುವ ಸಮಾರಂಭಗಳಲ್ಲಿ ಐದು ದಿವಸ ಚಂಡಿ ಪಾರಾಯಣವನ್ನು ಏಕೋತ್ತರ ವೃದ್ಧಿ ಕ್ರಮ ಪ್ರಕಾರ ಮಾಡಬಲ್ಲ ಅನುಷ್ಠಾನಪರರಾದ ವೈದಿಕ ಬ್ರಾಹ್ಮಣರು ಬೇಕಾಗಿದ್ದಾರೆ. ಸಮಾರಂಭದ ನಂತರ ಸೂಕ್ತ ಸಂಭಾವನೆಯು ಕೊಡಲ್ಪಡುವುದು. ವಿವರಗಳಿಗೆ ಮೈಸೂರು ಸಾಧ್ವಿ ಪತ್ರಿಕಾಲಯದಲ್ಲಿ ವಿಚಾರಿಸಬಹುದು.

# ವಾರ ಭವಿಷ್ಯ

೨೨-೨-೫೩ ರಿಂದ ೨೮-೨-೫೩ರ ವರೆಗೆ

ಮೇಷ—ತೃಪ್ತಿಕರವಾದ ವಾರ, ಭೂಮಿ ಕಾಣಿಕೆ ಆದಾಯ, ಕಟ್ಟಡದಲ್ಲಿ ಲಾಭ, ನೌಕರಿಯಲ್ಲಿ ಸುಖ, ಸಹೋದ್ಯೋಗಿಗಳೊಡನೆ ಕಲಹ, ವ್ಯಾಪಾರಗಾರರಿಗೆ ತೊಂದರೆ, ಗೃಹದಲ್ಲಿ ಕ್ಲೇಶ.

ವೃಷಭ — ಸ್ನೇಹಿತರು ಮತ್ತು ಬಂಧುಗಳೊಡನೆ ಕಲಹ, ಹಣಕಾಸಿನ ಅಡಚಣೆ, ಅನಾರೋಗ್ಯ, ಅಧಿಕ ವ್ಯಯ. ನೌಕರರಿಗೆ ತುಂಬಾ ಕ್ಲೇಶ, ವಾರದ ಕೊನೆಯಲ್ಲಿ ಉತ್ತಮ, ಪ್ರವಾಸ ಸಂಭವ

ಮಿಥುನ— ಹಣಕಾಸಿನ ವೃದ್ಧಿಯಿಂದ ಹೊಸ ಅವಕಾಶ, ಗೃಹದಲ್ಲಿ ಸೌಖ್ಯ ವ್ಯಾಪಾರಿಗಳಿಗೆ ಲಾಭ, ವಾರದ ಕೊನೆಯಲ್ಲಿ ಕ್ಲೇಶ, ಅವಮಾನ

ಕರ್ಕ — ಮಕ್ಕಳ ಸಾಯಿ ಬೆಯಿಂದ ಮನಸ್ಸಿಗೆ ಚಿಂತೆ, ಹಣಕಾಸಿನ ಸ್ಥಿತಿ ಅನುಕೂಲ, ಗೃಹ ಸೌಖ್ಯ, ಕಣ್ಣಾರಿ ವ್ಯಾಪಾರದಲ್ಲಿ ಒಳ್ಳೆ ಲಾಭ. ಹಿರಿಯರಿಂದ ಸಹಾಯ

ಸಿಂಹ — ಹಣಕಾಸಿನ ಉತ್ತಮ ಸ್ಥಿತಿ, ದೂರ ಪ್ರವಾಸ ವಿದೇಶಗಳೊಡನೆ ಲಾಭದಾಯಕ ವ್ಯವಹಾರ ಮದುವೆ ವಿವಾಹ, ಚಿನ್ನ ಬೆಳ್ಳಿ ವ್ಯಾಪಾರದಲ್ಲಿ ತೊಂದರೆ. ಗೃಹದಲ್ಲಿ ಕ್ಲೇಶ

ಕನ್ಯಾ—ಹಣಕಾಸಿನ ತೀವ್ರ ದಿವಸ ಸ್ತ್ರೀ ಕ್ಲೇಶ ಪತ್ನಿಯೊಡನೆ ಕಲಹ ತಾಯಿಗೆ ಖಾಯಿಲೆ, ಜಲವರಿಗೆ ಅಪರೀತ್ತ ಹಣದ ಲಾಭ ನೌಕರಿಯಲ್ಲಿ ಪ್ರಶಂಸೆ ಮತ್ತು ವಿಶ್ವಾಸ ವ್ಯಾಪಾರ ಸಾಧಾರಣ ಪತ್ನಿಯ ಆರೋಗ್ಯ ನೆಟ್ಟಗಿರುತ್ತಿಲ್ಲ

ತುಲಾ: ಪತ್ನಿ ಆರೋಗ್ಯಕ್ಕೆ ಧಕ್ಕೆ ತೊಂದರೆ ರಾಯ. ವ್ಯಕ್ತಿಯ ಕೆಟ್ಟ ಸ್ತ್ರೀಯರ ಸಹವಾಸ, ನೌಕರಿಯಲ್ಲಿ ಜಗಳ, ವ್ಯಾಪಾರದಲ್ಲಿ ಉತ್ತಮ. ಲಾಭ ಹಣಕಾಸಿನ ಸ್ಥಿತಿ ಉತ್ತಮ

ವೃಶ್ಚಿಕ — ದೊಡ್ಡ ಅಧಿಕಾರಿಗಳಿಗೆ ವಿದೇಶ ಪ್ರಯಾಣ, ನೌಕರರಿಗೆ ಸಂಬಳ ಬಡ್ತಿ, ಹೊಸ ವ್ಯಾಪಾರಕ್ಕೆ ಉತ್ತಮ ವಾಣಿಜ್ಯದಲ್ಲಿ ಹೆಚ್ಚು ಖರ್ಚು, ಪತ್ನಿಗೆ ಖಾಯಿಲೆ, ಕಳುವು

ಧನು — ಎಲ್ಲರಲ್ಲೂ ಜಯ ಹಣಕಾಸಿನ ಆದಾಯ, ಬಂಧುಗಳ ಆಗಮನ, ವ್ಯಾಪಾರ ಸಂಸ್ಥೆಗಳಲ್ಲಿ ಮೋಸ, ಸಂಸ್ಥೆ ಮುಚ್ಚುವ ಸಂಭವ

ಮಕರ – ಪ್ರಭಾವಯುತ ಸ್ನೇಹಿತರ ಸಹಾಯ, ಉತ್ತಮ ಕೆಲಸ ಸಿಕ್ಕುವ ಸಂಭವ, ವ್ಯಾಪಾರಿಗಳಿಗೆ ಉತ್ತಮ ಪ್ರವಾಸ, ಖರ್ಚು

ಕುಂಭ —ಸರ್ಕಾರದ ಮನ್ನಣೆ ಸಾರ್ವಜನಿಕರಿಂದ ಬಹುಮಾನ, ನೌಕರರಿಗೆ ಹೆಚ್ಚು ಜವಾಬ್ದಾರಿ, ವ್ಯಾಪಾರಗಾರರಿಗೆ ಉತ್ತಮ ಲಾಭ, ಆಭರಣಗಳ ಕಳುವು

ಮೀನ — ಹಿರಿಯರೊಡನೆ ಭಿನ್ನತೆ, ಆದಾಯ ಕಡಿಮೆ, ಖರ್ಚು ಹೆಚ್ಚು, ಪತ್ನಿಗೆ ಅನಾರೋಗ್ಯ, ನೌಕರರಿಗೆ ಉತ್ತಮ, ವ್ಯಾಪಾರದಲ್ಲಿ ಸ್ತ್ರೀಯರನ್ನು

## ದುರ್ಗಾಬಾಯಿಯವರ ಮಗನಂತೆ ನಟನೆ

### ಅಪರಾಧಿಕನ ಮೇಲೆ ಮೊಕದ್ದಮೆ

ಕಟೂರು ವರಪ್ರಸಾದರಾವ್ ಎಂಬಾತನ ಮೇಲೆ ಮಚಲಿಪಟ್ಟಣದ ಪೊಲೀಸರು, ಅಲ್ಲಿನ ನ್ಯಾಯಾಧೀಶರ ಮುಂದೆ ಮೋಸಕ್ಕಾಗಿ ಮೊಕದ್ದಮೆಯನ್ನು ಹೂಡಿರುತ್ತಾರೆ ಮೈಸೂರಿನ ಎಂ ಬಿ ಬಿ ಎಸ್ ವಿದ್ಯಾರ್ಥಿಯು ತಾನೆಂದು ಹೇಳಿಕೊಂಡ ಅಪರಾಧಿಕನು, ಕೇಂದ್ರ ಆಯೋಜನಾ ಸಮಿತಿಯ ಸದಸ್ಯೆ ಶ್ರೀಮತಿ ದುರ್ಗಾಬಾಯಿಯವರ ಶಿಫಾರಸು ಪತ್ರವೊಂದನ್ನೂ, ವಿಶ್ವಸಂಸ್ಥೆಯ ಆರೋಗ್ಯ ಇಲಾಖಾ ಡೈರೆಕ್ಟರು ತನಗೆ ಕೆಲಸ ಕೊಟ್ಟಿರುವರೆಂದು ಹೇಳಲಾದ ಮೋಸದ ಪತ್ರವೊಂದನ್ನೂ ತಂದು, ಜಿಂಗ್ರದ ಹಳ್ಳಿಯಲ್ಲಿ ರಾಜರ ಹತ್ತಿರ ಹೋಗಿ ದ್ರವ್ಯ ಸಹಾಯವನ್ನು ಬೇಡಿದನೆಂದೂ, ಅವರಿಗೆ ಅನುಮಾನ ಹುಟ್ಟಿ ಪೊಲೀಸರಿಗೆ ತಿಳಿಸಲು ಅವನನ್ನು ಪೊಲೀಸರು ಕಳೆದ ಡಿಸೆಂಬರ್ ತಿಂಗಳಿನಲ್ಲಿ ಬಂಧಿಸಿದ್ದರೆಂದೂ ತಿಳಿಲಾಗಿದೆ ಅಪರಾಧಿಕನು ಬೆಂಗಳೂರಿನಲ್ಲಿ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಇದ್ದ ವಯಸ್ಸಿನ ದಾದಿಯೊಬ್ಬಳನ್ನು ಮದುವೆ ಮಾಡಿಕೊಳ್ಳುವುದಾಗಿ ಹೇಳಿ, ತಾನ [illegible] ಬಾಯಿ ಯವರ ಮಗನೆಂದೂ ತನ್ನ ಹೆಸರು ಕೃಷ್ಣ ಎಂದೂ ತಾನು ಬಿ ಎ ಎಲ್ ಎಲ್ ಬಿ ಎಂದೂ ನಂಬಿಸಿ ಆಕೆಯಿಂದ ೧,೦೦೦ ರೂಗಳ ಆಭರಣಗಳನ್ನು ಪಡೆದು ಗಿರವಿ ಇಟ್ಟು [illegible] ವರ್ಷ ಕಾಲ ಆಕೆಯ ಬಳಿ ಇದ್ದು ಒಂದು ಮಗುವು ಜನಿಸಿದನಂತರ ಆಕೆಯೊಡನೆ ಜಗಳವಾಡಿ ಒಂದು ದಿವಸ ಮಾಪುಕೋಗುಳಿಗೆಯನ್ನು ತಿಂದು ಚಿಕಿತ್ಸಾರ್ಥವಾಗಿ ಆಸ್ಪತ್ರೆಗೆ ಸೇರಲ್ಪಟ್ಟು ಅಲ್ಲಿದ್ದ ಒಬ್ಬ ಕರುಣ ವೈದ್ಯ ಡಾ|| ಶಿಕ್ಷ ಎಂಬುವರಿಗೆ ಉನ್ನತ ವಿದ್ಯಾಭ್ಯಾಸದ ವಿದೇಶಿ ವೇತನವನ್ನು ತಮ್ಮ "ತಾಯಿ ದುರ್ಗಾಬಾಯಿ" ಯವರ ಮೂಲಕ ಕೊಡಿಸುವುದಾಗಿ ಹೇಳಿ ಅವರಿಂದ ತಂಬಾ ಧನಸಹಾಯ ಮಾಡಿಸಿದನೆಂದೂ ವರದಿಯಾಗಿದೆ ಕಳೆದ ನವೆಂಬರ್ ೨ನೇ ತಾ|| ಸಂಸ್ಥಾನದ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರನ್ನೂ ಇದೇ ರೀತಿ ಮೋಸಗೊಳಿಸಲು ಯತ್ನಿಸಬಾಗಿ ಅವರಿಗೆ ಅನುಮಾನ ಬಂದು ಅವರು ದೆಹಲಿಗೆ ಟೆಲಿಫೋನ್ ಮಾಡಲು, ಅಂದಿನಿಂದ ಅವನು ಪುನಃ ಹಿಂತಿರುಗಲೇ ಇಲ್ಲವೆಂದೂ ಹೇಳಲಾಗಿದೆ ಇದಲ್ಲದೆ ಬರ್ಮಾ ದೇಶದಲ್ಲೂ ಕೂಡ ಅವನ ದಸ್ತಗಿರಿಯಾಗಿ, ಪೊಲೀಸರಿಂದ ತಪ್ಪಿಸಿಕೊಂಡು ಬಂದಿದ್ದನೆಂದೂ ವರದಿಯಾಗಿದೆ ಅವನು ಗುಂಟೂರು ಜಿಲ್ಲೆಗೆ ಸೇರಿದವನಾಗಿದ್ದು, ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಫೇಲ್ ಆದ ವಿದ್ಯಾರ್ಥಿಯೆಂದೂ ಗೊತ್ತಾಗಿದೆ

### ಕ್ಯಾಲೆಂಡರ್ ಸ್ವೀಕಾರ

ಮೈಸೂರಿನ ಶ್ರೀ ಕೆ ಎಸ್ ರಾಜಗೋಪಾಲ್‌ರವರ ವೈಶ್ಯಕಲಾಮಂದಿರದವರು ಪ್ರಕಟಿಸಿರುವ ಇಂಗ್ಲಿಷ್ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ

## ರೈಲ್ವೆ ಸಂಘಗಳ ಐಕ್ಯ

ಜಯಪ್ರಕಾಶ ನಾರಾಯಣ್‌ರವರು ಅಧ್ಯಕ್ಷರಾಗಿರುವ ಅಖಿಲ ಭಾರತ ರೈಲ್ವೆ ನೌಕರರ ಸಂಘ ಮತ್ತು ರಾಷ್ಟ್ರೀಯ ಕಾರ್ಮಿಕರ ಸಂಘಕ್ಕೆ ಸೇರಿರುವ ರೈಲ್ವೆ ನೌಕರರ ಸಂಘಗಳು ಒಂದಾಗಿರುವುವು ಐಕ್ಯವಾದ ಹೊಸ ಸಂಘಕ್ಕೆ ಶ್ರೀ ಹರಿಹರನಾಥ ಶಾಸ್ತ್ರಿಯವರು ಅಧ್ಯಕ್ಷರಾಗಿಯೂ, ಎಸ್ ಗುರುಸ್ವಾಮಿಯವರು ಕಾರ್ಯದರ್ಶಿಯವರಾಗಿಯೂ ಆರಿಸಲ್ಪಟ್ಟಿರುತ್ತಾರೆ

### ಭೂದಾನ ಯಜ್ಞಕ್ಕೆ ೧ ಲಕ್ಷ ಎಕರೆ ಭೂಮಿ

ಭೂದಾನ ಯಜ್ಞಕ್ಕಾಗಿ ಮೈಸೂರು ಸಂಸ್ಥಾನದಲ್ಲಿ ಇನ್ನು ಒಂದು ವರ್ಷದಲ್ಲಿ ೧ಲಕ್ಷ ಎಕರೆ ಜಮೀನು ಸಂಗ್ರಹವಾಗಬೇಕೆಂದು ಬಿಹಾರಿನ ಚಾಂದಿಲ್ ನಗರದಲ್ಲಿ ಇತ್ತೀಚೆಗೆ ನಡೆದ ಭೂದಾನಯಜ್ಞ ಸಮ್ಮೇಳನದಲ್ಲಿ ನಿರ್ಧಾರವಾಯಿತೆಂದು ಗೊತ್ತಾಗಿದೆ

### ನಿವೃತ್ತಿಗೊಳಿಸಿದ ಬಗ್ಗೆ ಹೂಡಿಕ್ಕೆ ಅಪೀಲು ವಜಾ

ಪಟ್ಟದ ಕಾರಣ ವ್ಯಾಖ್ಯಾನವಿಲ್ಲದೆಂದು ಕಳೆದ ವರ್ಷ ನಿವೃತ್ತಿಗೊಳಿಸಲ್ಪಟ್ಟ ಅಧಿಕಾರಿಗಳ ಪೈಕಿ ಒಬ್ಬರಾದ ಮಾಜಿ ಸಹಾಯಕ ವಾಣಿಜ್ಯ ಕಾರ್ಯದರ್ಶಿ ಶ್ರೀ ಬಿ ರಾಘವೇಂದ್ರರಾಯರು ಹೈಕೋರ್ಟಿನಲ್ಲಿ ಸಲ್ಲಿಸಿದ ಅರ್ಜಿಯನ್ನು ಮೊನ್ನೆ ವಜಾ ಮಾಡಲಾಯಿತು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ತಾ|| 24 3-53

[illegible]


ಶ್ರೀ ದೇವಿ ಸಂಗೀತ ವಿದ್ಯಾಲಯ

[illegible]

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ,

[illegible]


Edited, Printed and Published by A R Nagarajan at Sadhvi Press, D Subbiah Road, Mysore

## ಲೆನಿನ್ ಮತ್ತು ಸ್ಟಾಲಿನರವರ ದೇವಾಲಯ

ರಷ್ಯದ ರಾಜಧಾನಿ, ಮಾಸ್ಕೋದಲ್ಲಿ ಲೆನಿನ್, ಸ್ಟಾಲಿನ್ ಮತ್ತು ಇತರ ದೊಡ್ಡ ಮನುಷ್ಯರ ಗೌರವಾರ್ಥವಾಗಿ ಸರ್ವದೇವ ಮಂದಿರವೊಂದನ್ನು ನಿರ್ಮಿಸಲಾಗುತ್ತಿದೆಂದೂ, ಅಗಾಗಲೇ ರಷ್ಯದ ಶಿಲ್ಪಿಗಳು ಸದರಿ ಕಟ್ಟಡದ ನಕ್ಷೆಗಳನ್ನು ತಯಾರಿಸುತ್ತಿರುವರೆಂದೂ ತಿಳಿದುಬಂದಿದೆ

## ಗೂರಲು ರೋಗಕ್ಕೆ ಹೊಸ ಔಷಧ

ಯಾವ ಔಷಧವನ್ನು ಕೊಟ್ಟರೂ ಗುಣವಾಗದಿದ್ದ ಗೂರಲು ರೋಗವು ಕಾರ್ಟಿಸೋನ್ ಎಂಬ ಔಷಧದಿಂದ ಗುಣವಾದುದು ಕಂಡು ಬಂದಿದೆಯೆಂದು ಅಮೆರಿಕದ ಸುಪ್ರಸಿದ್ಧ ವೈದ್ಯರೊಬ್ಬರು ತಿಳಿಸಿದ್ದಾರೆ ಒಹಳ ಕಾಲದಿಂದ ನರಳುತ್ತಿದ್ದ ರೋಗಿಗಳೂ ಗುಣಹೊಂದಿರುವರೆಂದು ಗೊತ್ತಾಗಿದೆ

### ರಾಮೋತ್ಸವ

ರಾಜಧಾನಿಯ ಚಾಮುಂಡಿಪುರದ ಶ್ರೀ ಶಂಕರ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಎಂದಿನಂತೆ ಈ ಬಾರಿಯೂ ಶ್ರೀ ರಾಮೋತ್ಸವವು ಏರ್ಪಾಡಾಗಿದೆ ಅದರ ಅಂಗವಾಗಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ಸೀತಾರಾಮಚಾರ್ಯರಿಂದ ಹರಿಕಥೆಯು ನಡೆಯುವುದು

### ತುಳಸಿ ರಾಮಾಯಣ ಪಠಣ

ರಾಜಧಾನಿಯ ಒಂಟಿಕೊಪ್ಪಲಿನ ಶ್ರೀ ಆಂಡಾಳ್ ಮಂದಿರದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಬ್ರಹ್ಮಾನಂದರವರಿಂದ ತುಳಸಿ ರಾಮಾಯಣ ಪಠಣವಿದೆ ಅನೇಕ ಸ್ವಾಮಿಗಳು ಭಕ್ತಾದಿಗಳು [illegible] ಭಾಗಿಗಳಾಗಬೇಕೆಂದು ಕೋರಲಾಗಿದೆ


ಇದರ ಪರಿಚಯವಿದೆಯೇ ...

ಮೈಸೂರು ಸಾಬೂನು

[illegible] ಸಾಬೂನು [illegible]




ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ

ಎಲ್ಲ ಕಡೆಯೂ ಸಿಗುತ್ತದೆ

ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು

ಫೋನ್ ನಂ. 794 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಮಂಗಳವಾರ [illegible] [ ಸಂಚಿಕೆ [illegible]

# ರಾಜಾಸ್ಥಾನದ ೪ ಜನ ಸಚಿವರ ರಾಜೀನಾಮೆ

## ಬ್ರಿಟನ್ನಿಗೆ ನಗೀಬರ ಎಚ್ಚರಿಕೆ

ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯಗಳು ಹಿಂತೆಗೆಯಲ್ಪಡದಿದ್ದರೆ [illegible] ಈಜಿಪ್ಟಿನ ಪ್ರಧಾನಿ ಜ|| ನಗೀಬ್‌ರವರು [illegible]

## ನಗೀದಾಸ್ ಮಾಸ್ತರ್‌ರವರ ನಿಧನ

ಬೊಂಬಾಯಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರೂ, [illegible] ನಗೀದಾಸ್ ಮಾಸ್ತರರವರು ನಿನ್ನೆ ಮೃತಿ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ [illegible] ವರ್ಷ ವಯಸ್ಸಾಗಿದ್ದಿತು.

## ಮನೆ ಮೇಲೆ ಮಣ್ಣು, ಕಲ್ಲು ಬೀಳುವ ಪ್ರಸಂಗ

ಶಿವಮೊಗ್ಗಾ [illegible] ಮನೆಯ ಮೇಲೆ ಕೆಲವು ದಿನಗಳ ಹಿಂದೆ ರಾತ್ರಿ ಇದ್ದಿಲು, ಹೆಂಚು, [illegible] ಬೀಳುತ್ತಿದ್ದು, ಕಳೆದ [illegible] ಈ ದೃಶ್ಯವನ್ನು ನೋಡಿದ ಅನೇಕರು ಆಶ್ಚರ್ಯಭರಿತರಾಗಿರುವರೆಂದು ವರದಿಯಾಗಿದೆ.

## ಪ್ರಾಥಮಿಕ ಶಾಲಾ ಮಕ್ಕಳಿಗೆ ವೃತ್ತಿ ಶಿಕ್ಷಣ

ಪ್ರಾಥಮಿಕ ಶಾಲಾ ಮಕ್ಕಳು ತಮ್ಮ [illegible] ಶಾಲಾ [illegible] ಗಂಟೆಗಳಂತೆ [illegible] ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ. [illegible] ಹೇಳಲಾಗಿದೆ.

## ಉರಿಯುವ ಒಲೆ ಮೇಲೆ ಹೆಂಗಸನ್ನು ಕೂರಿಸಿದ್ದು

[illegible] ಒಲೆಯ ಮೇಲೆ ಕೂಡಿಸಿ [illegible] ಆಸ್ಪತ್ರೆಗೆ ಸೇರಿಸಲಾಗಿದೆಯೆಂದು ವರದಿಯಾಗಿದೆ. ಈ ಸಂಬಂಧವಾಗಿ [illegible] ಜಾಮೀನಿನ ಮೇಲೆ ಬಿಡಲು ನಿರಾಕರಿಸಲಾಗಿದೆ.

[illegible] ಕೇಂದ್ರ ಸರ್ಕಾರದವರು [illegible] ಅನುಮತಿ ಇತ್ತಿರುವರೆಂದು ವರದಿಯಾಗಿದೆ.

## ರಾಜಾಸ್ಥಾನದ ನಾಲ್ವರು ಮಂತ್ರಿಗಳ ರಾಜೀನಾಮೆ

ರಾಜಾಸ್ಥಾನದ ಮುಖ್ಯ ಮಂತ್ರಿ ಜೈ ನಾರಾಯಣ್ ವ್ಯಾಸ್ ಮತ್ತು [illegible] ಮುಖ್ಯ ಮಂತ್ರಿ [illegible] ಭಿನ್ನಾಭಿಪ್ರಾಯವು [illegible] ರಾಜೀನಾಮೆಯನ್ನು [illegible] ಮಂತ್ರಿ ಮಂಡಲವನ್ನು [illegible] ವ್ಯಾಸರವರು [illegible] ಮಂತ್ರಿಗಳ [illegible] ಆಲೋಚಿಸಿರುವುದಾಗಿ [illegible] ಮಂತ್ರಿ [illegible] ವಿದ್ಯಾ ಮಂತ್ರಿ [illegible] ರಾಜೀನಾಮೆ ಪತ್ರಗಳನ್ನು ಒಪ್ಪಿಸಿರುತ್ತಾರೆಂದೂ ವರದಿಯಾಗಿದೆ. ಮಂತ್ರಿ ಮಂಡಲದ ಸಂಖ್ಯೆಯನ್ನು ೧೦ ರಿಂದ ಏಳಕ್ಕೆ ಇಳಿಸಲು ಮುಖ್ಯ ಮಂತ್ರಿಗಳು ಅಭಿಪ್ರಾಯ ಹೊಂದಿರುವರು.

## ಸಂತತಿಯನ್ನು ಅಪಾರ್ಥ ಮಾಡಿಕೊಂಡು ಆತ್ಮಹತ್ಯೆ

ಪಶ್ಚಿಮ ಬಂಗಾಳದ ಭಾಗಲ್ಪುರದ [illegible] ಇಂಗ್ಲೆಂಡಿನಲ್ಲಿರುವ ತನ್ನ ಮಗನಿಂದ ಬಂದ [illegible] ಅಪಾರ್ಥ ಮಾಡಿಕೊಂಡು [illegible] ಆತ್ಮಹತ್ಯೆ ಮಾಡಿಕೊಂಡ ವಿಷಯವು ವರದಿಯಾಗಿದೆ. [illegible] ಇಂಗ್ಲೀಷ್ [illegible] ಮಗನೇ ಮಡಿದಿರುವನೆಂದು [illegible] ಗಂಡನು ಮನೆಗೆ ಬಂದ ಮೇಲೆ ಈ ಘಟನೆಯ [illegible] ಹೇಳಲಾಗಿದೆ.

[illegible] ಮೈಸೂರು [illegible]

## ಸಖಿ ನಾರಾಯಣ ಮತ್ತೆ ಅಧ್ಯಕ್ಷ [illegible]

ಸ್ವಂ ಸು ಫೋ[ ] ಬೆಂಗಳೂರು [illegible]

ಶ್ರೀ ಸಖಿ ನಾರಾಯಣರವರನ್ನು [illegible] ಸರ್ಕಾರದ [illegible] ಗಿದೆ.

### ಸರಗೂರು ತಾಲ್ಲೂಕು ಕೇಂದ್ರ ?

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕು ಕೇಂದ್ರವನ್ನು [illegible] ಸರಗೂರಿಗೆ [illegible] ಸರ್ಕಾರದ [illegible] ಗೊತ್ತಾಗಿದೆ.

### ಮೈಸೂರು ಬ್ಯಾಂಕಿನ ಅಧ್ಯಕ್ಷರಾಗಿ [illegible] ಅಯ್ಯ

ಸಂಸ್ಥಾನದ [illegible] ಬೆಂಗಳೂರಿನ [illegible] ಮೈಸೂರು ಬ್ಯಾಂಕಿನ ಅಧ್ಯಕ್ಷರಾಗಿ [illegible]

## ಟಿ. ಪ್ರಕಾಶಂ ಆಂಧ್ರದ ಮುಖ್ಯ ಮಂತ್ರಿಯೇ ?

ಮದ್ರಾಸಿನ ಮಾಜಿ ಮುಖ್ಯ ಮಂತ್ರಿ ಟಿ ಪ್ರಕಾಶಂರವರು ಆಂಧ್ರ ಸಂಸ್ಥಾನದ ಪ್ರಥಮ ಮುಖ್ಯ ಮಂತ್ರಿಗಳಾಗುವರೆಂದೂ, [illegible] ವರದಿಯಾಗಿದೆ. ಆಂಧ್ರದ ಪ್ರಜಾ [illegible] ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ [illegible] ಗೊತ್ತಾಗಿದೆ.

## ಟಿಟೊ ಮತ್ತು ಚರ್ಚಿಲರಿಗೆ ಒಪ್ಪಂದ

ಯುಗೊಸ್ಲೇವಿಯದ ಅಧ್ಯಕ್ಷ ಮಾರ್ಷಲ್ ಟಿಟೊ ಮತ್ತು ಬ್ರಿಟನ್ನಿನ ಪ್ರಧಾನಿ [illegible]

## ನ್ಯಾಯಾಧೀಶರಾಗಿ ರೆವಿನ್ಯೂ ಅಧಿಕಾರಿಗಳ ನೇಮಕ

### [illegible]

ಸ್ವಂ ಸು. ಫೋ[ ] ಬೆಂಗಳೂರು [illegible]

ಈ [illegible] ನ್ಯಾಯಾಂಗ ಮಂತ್ರಿ, ಶ್ರೀ [illegible] ಶ್ರೀ [illegible] ರೆವಿನ್ಯೂ ಅಧಿಕಾರಿಗಳನ್ನು [illegible] ನ್ಯಾಯಾಧೀಶರಾಗಿ [illegible] ರೆವಿನ್ಯೂ ಅಧಿಕಾರಿಗಳಿಗೆ [illegible] ಅಧಿಕಾರವನ್ನು [illegible] ಹೇಳಿದರು.

### ಮೈಸೂರು ನಗರದಲ್ಲಿ [illegible] ತೆರಿಗೆ ವಸೂಲಿ

ಶ್ರೀ [illegible] ರೆವಿನ್ಯೂ ಮಂತ್ರಿ ಶ್ರೀ [illegible] ಮೈಸೂರು [illegible]

## ಮಾರಾಟ ತೆರಿಗೆ ವಸೂಲಿ

### ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಫೋ[ ] ಬೆಂಗಳೂರು [illegible]

ಸರ್ಕಾರಿ ಬಸ್ಸುಗಳ [illegible] ಶ್ರೀ [illegible]

ಮಾರಾಟ ತೆರಿಗೆ ಬಗ್ಗೆ [illegible] ಮೈಸೂರು ನಗರದಲ್ಲಿ [illegible] ಶ್ರೀ [illegible] ನ್ಯಾಯಾಲಯಗಳ [illegible] ತಿಳಿಸಲಾಯಿತು.

## ಲಾಮಾ ಪಡೆ ಮತ್ತು ಟಿಬೆಟ್ ಸೈನ್ಯಗಳಿಗೆ ಘರ್ಷಣೆ

ಟಿಬೆಟ್ಟಿನಲ್ಲಿ ಚೀನಾದಿಂದ ಏರ್ಪಾಡಾಗಿರುವ "ಸೌಹಾರ್ದ ಸೈನ್ಯಗಳಿಗೂ" ಲಾಮಾರವರ ಪಡೆಗಳಿಗೂ ಕೆಲವು ದಿನಗಳ ಹಿಂದೆ ಘರ್ಷಣೆಗಳಾದುವೆಂದೂ, ಹಲವು ಲಾಮಾ ಸೈನಿಕರಿಗೆ ಪೆಟ್ಟು ಬಿದ್ದಿತೆಂದೂ ವರದಿಯಾಗಿದೆ. ಮತ ಸಂಬಂಧವಾದ ನಡವಳಿಕೆಯಲ್ಲಿ ನಾಸ್ತಿಕರು ಪ್ರವೇಶಿಸಿದ ಬಗ್ಗೆ ಲಾಮಾ ಸೈನ್ಯಗಳಿಗೆ ಅಸಂತೃಪ್ತಿ ಇದ್ದಿತೆಂದು ಹೇಳಲಾಗಿದೆ.

### ಕರಿಮುದ್ದನ ಹಳ್ಳಿಯಲ್ಲಿ ಶಾಲೆ

ಹುಣಸೂರು ತಾಲ್ಲೂಕು ಕರಿಮುದ್ದನ ಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ ಕೆಂಡಗಣ್ಣ ಸ್ವಾಮಿಗಳವರ ಗದ್ದಿಗೆ ಶಾಲೆಯು ಇದೇ ೩೦ ಮತ್ತು ೩೧ ನೇ ತಾರೀಕು ಜರುಗಲಿದೆ

### ಹರಿಕಥೆ

ಚನ್ನೆಗೌಡನ ಕೊಪ್ಪಲಿನ ದಿವಂಗತ ಪುಟ್ಟತಾಯಮ್ಮನವರ ಪುಣ್ಯ ಸಮಾರಾಧನೆಯ ಅಂಗವಾಗಿ ಈ ರಾತ್ರಿ ೯ ಘಂಟೆಗೆ, ಕೊಪ್ಪಲಿನ ಸಿದ್ಧಪ್ಪಾಜಿ ದೇವಸ್ಥಾನದ ಬೀದಿಯ [illegible] ನೇ ನಂಬರು ಮನೆ ಮುಂಭಾಗದಲ್ಲಿ ಶ್ರೀ ಎಸ್ ಚನ್ನಬಸಪ್ಪ ಶಾಸ್ತ್ರಿಗಳವರಿಂದ ಶಂಕರಿ [illegible] ಎಂಬ ಹರಿಕಥೆಯು ಏರ್ಪಾಡಾಗಿದೆ. ವಾಸ್ತು ಕಲಾ ಸೇವಾಸಕ್ತ ಟಿ ಜಿ ಲ ನಾಗೇಶಾಚಾರ್ಯರು ಅಧ್ಯಕ್ಷತೆ ವಹಿಸುವರು. [illegible] ಶ್ರೀ ಗಂಗಾಧರನ [illegible] ಬಿ ಜಿ ದಾಸ್ [illegible] ರಾದ ಶ್ರೀ ಎಸ್ ಕೆ [illegible] ದಿವಂಗತರ ವಿಚಾರವಾಗಿ ಭಾಷಣ ಮಾಡುವರು

### ಗಣಪತಿ ದೇವಸ್ಥಾನದ ಆಡಳಿತ ವರ್ಗ

ರಾಜಧಾನಿಯ [illegible] ಗಣಪತಿ ದೇವಸ್ಥಾನದ ಆಡಳಿತ ಮಂಡಲಿಗೆ ಶ್ರೀ ಎಂ ಎಸ್ [illegible] ಗುರವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ ನರಸಿಂಹಮೂರ್ತಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ನಂಜುಂಡಯ್ಯನವರು ಗೌರವ ಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಕೆ. ಪಿ [illegible] ಯವರು ಖಜಾಂಚಿಯಾಗಿಯೂ ಚುನಾಯಿತರಾಗಿರುವರು.

### ಬಿಕರಿಗಿದೆ

ನಂಜನಗೂಡು ಬಡಾವಣೆಯಲ್ಲಿ 1312 ನೇ ಡೋರ್ ನಂಬರ್ ಉಳ್ಳ ಮನೆ ಬಿಕರಿಗಿದೆ [illegible]

ಎಲ್ಲಾ ಬಗೆಯ

**ಅಲೋಪತಿಕ್ ಔಷಧಿಗಳೂ**

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

**ರಘುಲಾಲ್ & ಕೋ**

ಔಷಧಿ ವ್ಯಾಪಾರಿಗಳು,

207. [illegible] ರೋಡ್,

ಮೈಸೂರು

## ಕೆ. ಹಿರಣ್ಣಯ್ಯನವರ ನಿಧನ

ಕನ್ನಡ ರಂಗಭೂಮಿಯ ಪ್ರಖ್ಯಾತ ಹಾಸ್ಯ ನಟರಾದ ಶ್ರೀ ಕೆ. ಹಿರಣ್ಣಯ್ಯನವರು ಮಡಕೇರಿಯಲ್ಲಿ ಕಳೆದ [illegible] ರಾತ್ರಿ ಅಭಿನಯ ಮಾಡುತ್ತಿರುವಾಗಲೇ ಹಠಾತ್ತನೆ ಕುಸಿದು ಬಿದ್ದು ಮೃತಪಟ್ಟರು. "ಬ್ಲಾಕ್ ಮಾರ್ಕೆಟ್" ಎಂಬ ನಾಟಕವನ್ನು ಏರ್ಪಡಿಸಲಾಗಿದ್ದಿತು. ಅಭಿನಯದ ಕೊನೇ ಘಳಿಗೆಯವರೆಗೂ ಅವರು ಪ್ರೇಕ್ಷಕ ವೃಂದವನ್ನು ನಗಿಸುವ [illegible] ದಲಿನಲ್ಲಿ ತೊಡಗಿಸುತ್ತಿದ್ದರು. ಅವರಿಗೆ ಒದಗಿದ ಮರಣವನ್ನು ಕಂಡು ಎಲ್ಲರೂ ಕಣ್ಣೀರನ್ನು ಹರಿಸಿದರು. ಕನ್ನಡ ರಂಗಭೂಮಿಗೆ ಅವರು ಸುಮಾರು ೩೦ ವರ್ಷಗಳಿಂದ ಸೇವೆ ಸಲ್ಲಿಸಿದ್ದರು. ಹಲವಾರು ಹಾಸ್ಯಮಯ ನಾಟಕಗಳನ್ನು ಅವರು ಆಡುತ್ತಿದ್ದರು.

## ಸ್ಕೂಲ್ ಫೈನಲ್ ಪರೀಕ್ಷೆಗೆ ಕುರುಡ ವಿದ್ಯಾರ್ಥಿ

ಮದ್ರಾಸಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ಪೈಕಿ ಇ. ಪಿ ಜೋಸೆಫ್ ಎಂಬ ೨೦ ವರ್ಷದ ಕುರುಡ ವಿದ್ಯಾರ್ಥಿಯೂ ಇರುವನು. ಇತರ ವಿದ್ಯಾರ್ಥಿಗಳು ತಮ್ಮ ಪ್ರಶ್ನೆ ಪತ್ರಿಕೆಗಳನ್ನು ತಾವೇ ಓದಿ ಉತ್ತರ ಬರೆಯ [illegible]. ಕುರುಡ ವಿದ್ಯಾರ್ಥಿಯು [illegible] ಇವನ ಕೈಯಲ್ಲಿ ಉತ್ತರ ಬರೆಸ [illegible] ಅನುಮತಿಯನ್ನು ಪಡೆದಿರುತ್ತಾನೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

**SRI GAYATHRI**

TALKIES

From 25.3.53

20th Century's

**MEET ME AFTER THE SHOW**

In Technicolor,

With — Betty Grable Macdonald Carey

—NEXT CHANGE

**RIO RITA**

Edited, Printed and Published by A. R. Nagarajan at Sadhvi Press, D. Subbiah Road, Mysore

## ಶ್ರೀ ರಾಮೋತ್ಸವ ಕಾರ್ಯಕ್ರಮಗಳು

ರಾಜಧಾನಿಯ ಲಕ್ಷ್ಮೀಪುರದ ೩ ನೇ ಕ್ರಾಸ್ ರಸ್ತೆಯ ೯೪೯ ನೇ ನಂಬರು ಮನೆಯಲ್ಲಿರುವ ಶ್ರೀ ಬೃಹ್ಮಚೈತನ್ಯ ಮಂದಿರದಲ್ಲಿ ನೆನ್ನೆಯಿಂದ ರಾಮೋತ್ಸವವು ಏರ್ಪಾಡಾಗಿದೆ. ಇದರ ಅಂಗವಾಗಿ ಅಖಂಡ ರಾಮತಾರಕ ಜಪ, ಭಜನೆ, ಪೂಜೆ, ಮೊದಲಾದುವು ಮತ್ತು ಸಂಜೆ ವೇ॥ ಬ್ರ॥ ಶ್ರೀ [illegible] ಶ್ರೀಪಾದ ಶಾಸ್ತ್ರಿಗಳು ಮತ್ತು [illegible] ರಿಂದ ಹರಿಕಥೆಯೂ ನಡೆಯುತ್ತವೆ

ಚಾಮುಂಡಿಪುರದ [illegible] ನೇ ನಂಬರು ಮನೆಯಲ್ಲಿ ಬಾಲಕರ ಬೃಹ್ಮಚೈತನ್ಯ ಶ್ರೀರಾಮ ಮಂದಿರದಲ್ಲಿ ಶ್ರೀ ರಾಮನವಮಿಯ ಅಂಗವಾಗಿ ಈ ರಾತ್ರಿ ೯ ಗಂಟೆಗೆ ಶ್ರೀ [illegible] ರಾಜರಾಯರ ಕೊಳಲು ವಾದ್ಯ [illegible] ನಡೆಯುತ್ತದೆ

ರಾಜಧಾನಿಯ [illegible] ರಸ್ತೆಯಲ್ಲಿರುವ ಶ್ರೀಮತ್ಸ್ಯನಾರಾಯಣ ದೇವಾಲಯದಲ್ಲಿ ನೆನ್ನೆಯಿಂದ [illegible] ಉತ್ಸವವು ಏರ್ಪಾಡಾಗಿದೆ. ಇದರ ಅಂಗವಾಗಿ ಪ್ರತಿದಿನ ಬೆಳಗ್ಗೆ ಅಭಿಷೇಕ, ಅರ್ಚನೆಗಳೂ ಸಂಜೆ ರಾಮಾಯಣ ಪಾರಾಯಣ, ಮಂಗಳಾರತಿ, [illegible] ಜರುಗುವುವು. ಗನೇತಾರೀಕು [illegible] ನಡೆಯುವುದು.

ಚಾಮುಂಡಿಪುರದ ಶ್ರೀ [illegible] ದೇವಸ್ಥಾನದಲ್ಲಿ [illegible] ಈ ರಾತ್ರಿ ೯ ಗಂಟೆಗೆ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಭಾರತ ವಾಚನವು ಏರ್ಪಾಡಾಗಿದೆ

ರಾಜಧಾನಿಯ ಶ್ರೀರಾಮಪೇಟೆಯ [illegible] ವೃಕ್ಷ ಬಾಲಕ ಭಕ್ತಮಂಡಲಿಯಲ್ಲಿ ನೆನ್ನೆಯಿಂದ ಶ್ರೀ ರಾಮೋತ್ಸವವು ಆರಂಭವಾಗಿರುತ್ತದೆ [illegible] ಬುಧವಾರ ಪಟ್ಟಾಭಿಷೇಕವು ಜರುಗು[illegible]

## ಪ್ರಸಿದ್ಧ ಪತ್ರಿಕೆ

[illegible] 1953 ನೇ ಏಪ್ರಿಲ್ 1 ರಿಂದ [illegible] 250 [illegible] 195[illegible] ನೇ [illegible] 28 ನೇ [illegible] 3 [illegible]

[illegible] 9 ರಿಂದ 11 ಮತ್ತು [illegible] 3 ರಿಂದ 5 ಗಂಟೆ [illegible]

[illegible] ಸಂಕೀರ್ತನ, ಕಲ್ಯಾಣೋತ್ಸವ, ಶಯನೋತ್ಸವ, ಉಯ್ಯಾಲೋತ್ಸವ, ವಸಂತ [illegible] ಪೂಜೆ ಮತ್ತು ಹೂವಿನ ಪಲ್ಲಕ್ಕಿ ಉತ್ಸವಗಳೂ ನಡೆಯುವುವು. ಈ ಸಂಬಂಧವಾಗಿ ಪ್ರತಿದಿನ ಸಂಜೆ ಭಜನೆ, ಹರಿಕಥೆ, ಸಂಗೀತ ಮೊದಲಾದ ಕಾರ್ಯಕ್ರಮಗಳು ಏರ್ಪಾಡಾಗಿವೆ

ಗುಂಡ್ಲುಪೇಟೆಯ ಶ್ರೀ ರಾಮ ಮಂದಿರದಲ್ಲಿ ನೆನ್ನೆಯಿಂದ ಉತ್ಸವದ ಅಂಗವಾಗಿ ಪೂಜಾದಿಗಳು ಆರಂಭವಾಗಿವೆ [illegible] ಪಟ್ಟಾಭಿಷೇಕವು ಏರ್ಪಾಡಾಗಿದೆ. ಪ್ರತಿ ದಿನ ಸಂಜೆ ಹರಿಕಥೆ, ಭಜನೆ ಮೊದಲಾದುವು ನಡೆಯುತ್ತವೆ

[illegible] ಬೃಂದಾವನದ ಶ್ರೀ ವೈಕುಂಠ ಶ್ರೀರಾಮ ಮಂದಿರದಲ್ಲಿ ಶ್ರೀ ಪುರಂದರ ತ್ಯಾಗರಾಜ ಸಂಗೀತ [illegible] ಉತ್ಸವದ ಅಂಗವಾಗಿ [illegible] ಮತ್ತು ಶ್ರೀ ಹಿರಣ್ಣಯ್ಯನವರಿಂದ ಗಮಕ ಗೋಷ್ಠಿಯನ್ನು ಏರ್ಪಡಿಸಲಾಗಿದೆ

[illegible] ಶ್ರೀ ರಾಮ ಮಂದಿರದಲ್ಲಿ ಈ ಸಂಜೆ [illegible] ಸಂಗೀತವೂ, ನಾಳೆ ಸಂಜೆ [illegible] ಮತ್ತು [illegible] ಗಾಯನವೂ ಏರ್ಪಾಡಾಗಿವೆ

*Sri Kanyokaparameswari Temple*

Ashoka Road Mysore

**TENDER NOTIFICATION**

*Dated 22.3.1953.*

Sealed tenders will be received at the Temple Office upto 5 P.M. on 4-4-1953 for constructing shops attached to the Temple, on the northern side at an estimated cost of Rs. 15,500/- for which earnest deposit of Rs. 750/- is required to be credited to the current account of the Temple at Sri Kanyakaparameswari Co-operative Society, Ltd., Hanumanta Rao Road, Mysore and the challan presented with the tender.

The plan and estimate are kept in the Office of the Temple for inspection and copies thereof would be supplied on payment of their cost on all days between 9 and 12 A.M. and 4 to 8 P.M.

(Sd.) P. GOPALAKRISHNA SETTY,

PRESIDENT

ಲಗ್ನದ ಜವಳಿಗಳಿಗೆ

ಸೀರೆಗಳಿಗೆ ಮತ್ತು ಶಾಕ್ಸ್ಕಿನ್ ಶಾಲುಗಳಿಗೆ

ಮೈಸೂರು ಸಿಲ್ಕು, ಧರ್ಮಾವರಂ, [illegible] ನವೀನ ಮಾದರಿ ನಮೂನೆ

(ಫೋನ್ 446)

★ M. V. ಭೋಜಯ್ಯ ಶ್ರೀ

[illegible] ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಬುಧವಾರ ೨೫–೩–೧೯೫೩ [ ಸಂಚಿಕೆ ೧೯೩

# ಫ್ರೆಂಚ್ ಸರ್ಕಾರವನ್ನು ಉರುಳಿಸಲು ಪಿತೂರಿ?

## ಪೌರಸಭಾಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ

ಮೈಸೂರು ೨೪

ನಗರದ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಿನ್ನೆ ಚುನಾವಣೆಯು ನಡೆಯಿತು. ಕಾಂಗ್ರೆಸ್ಸಿನ ಪರವಾಗಿ ನಿಂತ ಶ್ರೀ ಪಿ. ವೆಂಕಟೇಶಯ್ಯನವರಿಗೆ ೧೬ ಓಟುಗಳೂ ಅವರ ಪ್ರತಿಸ್ಪರ್ಧಿ ಶ್ರೀ ವೆಂಕಟೇಶಯ್ಯನವರಿಗೆ ೬ ಓಟುಗಳೂ ಬಂದು ಕಾಂಗ್ರೆಸ್ ಅಭ್ಯರ್ಥಿಯವರು ೫ ಓಟುಗಳ ಹೆಚ್ಚು ಪಡೆದಿದ್ದರು. ಉಪಾಧ್ಯಕ್ಷರ ಚುನಾವಣೆಯಲ್ಲಿ ಶ್ರೀ ... ಕಾಂಗ್ರೆಸ್ ಸ್ಪರ್ಧಿ, ಅಭ್ಯರ್ಥಿ ಮತ್ತು ವಿರೋಧ ಪಕ್ಷದ ... ಸೂರ್ ಮುಕೇರ್‌ರವರಿಗೆ ೧೫ ಮತ್ತು ೬ ಓಟುಗಳು ಕ್ರಮವಾಗಿ ಬಂದು ಶ್ರೀ ... ರವರು ಚುನಾಯಿತರಾದರು.

ಶ್ರೀಗಳಾದ ಎ. ವೆಂಕಟೇಶಯ್ಯ, ... ಶ್ರೀ ... ಎಂ. ... ದಾಸಗೌಡ, ... ರಂಗಣ್ಣ, ... ಸೂರ್ ಮುಕೇರ್ ಮತ್ತು ... ಆಜಮುದ್ದಿನ್‌ರವರು ಚುನಾಯಿತರಾದವರನ್ನು ಅಭಿನಂದಿಸಿದರು. ಚುನಾಯಿತರಾದವರು ಕೃತಜ್ಞತೆಯನ್ನು ಸೂಚಿಸಿ ಸದಸ್ಯರ ಸಹಕಾರವನ್ನು ಬೇಡಿದರು.

ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷರಾಗಿ ಚುನಾಯಿತರಾಗಿರುವುದು ೨ನೆ ಎರಡನೇ ಬಾರಿ

### ಕೊಲೆ ಅಪಾದನೆಗಾಗಿ ೭ ವರ್ಷ ಸಜಾ

ನಂಜನಗೂಡು ತಾಲ್ಲೂಕಿನ ಇವನ್ನಾ ... ಗ್ರಾಮದಲ್ಲಿ ಕಳೆದ ಮೇ ತಿಂಗಳಿನಲ್ಲಿ ... ಮ್ಮೇಗೌಡ ಎಂಬುವನ ಕೊಲೆ ಸಂಬಂಧದಲ್ಲಿ ರುಜುವಾತು ಬಂದು ಆಪಾದಿತ ಜವರೇಗೌಡನಿಗೆ ಸೆಷನ್ಸ್ ನ್ಯಾಯಾಧೀಶರು ನೆನ್ನೆ ೭ ವರ್ಷ ಕಠಿಣ ಸಜಾ ವಿಧಿಸಿದರು. ಇತರ ೪ ಜನರಿಗೆ ತಲಾ ೬ ತಿಂಗಳು ಕಠಿಣ ಶಿಕ್ಷೆಯನ್ನು ಕೊಡಲಾಯಿತು

### ಬೆಂಕಿ ಅಪಘಾತದಲ್ಲಿ ೧೧ ಜೋಪಡಿಗಳು ಭಸ್ಮ

ಕಳೆದ ಭಾನುವಾರ ನಾಗೇನಹಳ್ಳಿಯಲ್ಲಿ ಬೆಂಕಿ ಅಪಘಾತವಾಗಿ ಆದಿ ಕರ್ನಾಟಕರ ಹನ್ನೊಂದು ಜೋಪಡಿಗಳು ಸುಟ್ಟುಹೋದುವೆಂದು ವರದಿಯಾಗಿದೆ. ೧ ಎತ್ತು ಸತ್ತುಹೋಯಿತು. ಸುಮಾರು ೬–೭ ಸಾವಿರ ರೂಗಳ ನಷ್ಟವಾಗಿರುವುದೆಂದು ಅಂದಾಜಾಗಿದೆ

### ಫ್ರೆಂಚ್ ಸರ್ಕಾರವನ್ನು ಉರುಳಿಸುವ ಪಿತೂರಿ

ಫ್ರೆಂಚ್ ಸರ್ಕಾರವನ್ನು ಉರುಳಿಸುವ ಪಿತೂರಿಯೊಂದನ್ನು ಅಲ್ಲಿನ ಪೋಲೀಸರು ಪತ್ತೆ ಹಚ್ಚಿ ಕಮ್ಯೂನಿಸ್ಟರ ಪ್ರಕಟಣೆ ಮತ್ತು ಕಾರ್ಮಿಕ ವರ್ಗದ ಕಛೇರಿ ಮತ್ತು ಪಕ್ಷದ ನಾಯಕರ ಮನೆಗಳನ್ನು ನೆನ್ನೆ ಶೋಧಿಸಿ, ಹ್ಯೂಮನೈಟ್ ಪತ್ರಿಕೆಯ ಎಡಿಟರ್ ಎಂಬುವರನ್ನು ದಸ್ತಗಿರಿ ಮಾಡಿರುತ್ತಾರೆ. ಪತ್ರಿಕೆಗಳಲ್ಲಿ ನಿ... ಯನ್ನು ಕೆಡಿಸುವ ಪ್ರಯತ್ನ ನಡೆಸುತ್ತಿರುವರೆಂದು ಕಮ್ಯೂನಿಸ್ಟರ ಮನೆಗಳ ಮೇಲೆ ದಾಳಿ ನಡೆಸಲು ಪ್ಯಾರಿಸ್ಸಿನ ಮಿಲಿಟರಿ ನ್ಯಾಯಾಲಯವು ಆಜ್ಞೆ ಮಾಡಿತೆಂದು ಹೇಳಲಾಗಿದೆ. ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ನಾಯಕರ ... ಕಾರ್ಮಿಕ ಮುಖಂಡರು ... ವರ್ಷದ ... ಎಂಬುವರನ್ನು ಪೋಲೀಸರು ಹುಡುಕುತ್ತಿರುವರು

## ಶೃಂಗೇರಿಯಲ್ಲಿ ಅತಿ ರುದ್ರ ಮತ್ತು ಚಂಡಿ ಹೋಮ

ಲೋಕ ಕಲ್ಯಾಣಾರ್ಥವಾಗಿ ಇದೇ ಚೈತ್ರ ಬಹುಳ ತದಿಗೆ ಗುರುವಾರ (೨-೪-೫೩) ಶೃಂಗೇರಿ ಮಹಾ ಸಂಸ್ಥಾನದಲ್ಲಿ ಅತಿ ರುದ್ರ, ಸಹಸ್ರ ಚಂಡೀ, ಗಾಯತ್ರೀ, ಗಣಪತಿ ಇವೇ ಮೊದಲಾದ ಹೋಮಗಳು ವಿಧಿವತ್ತಾಗಿ ನಡೆಯಲು ಏರ್ಪಾಡಾಗಿದೆ. ಹಿರಿಯ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರೂ ಸಹ ಬಹಿರ್ಮುಖರಾಗಿರುವರಲ್ಲದೇ ತಮ್ಮ ಸಾನ್ನಿಧ್ಯದಿಂದಲೇ ಈ ಮಹಾ ಕಾರ್ಯಗಳನ್ನೂ ಅನುಗ್ರಹಿಸುವವರಾಗಿರುತ್ತಾರೆ. ಶ್ರೀಮನ್ಮಹಾರಾಜರೇ ಮೊದಲಾಗಿ ಎಷ್ಟೋ ಹಿಮಾಚಲದಿಂದ ಅನೇಕ ಆಸ್ತಿಕ ಮಹನೀಯರು ಭಾಗವಹಿಸುವವರಾಗಿದ್ದಾರೆ. ಇದಕ್ಕಾಗಿ ಈಗಾಗಲೇ ಸಿದ್ಧತೆಗಳೆಲ್ಲವೂ ಸಾಂಗವಾಗಿ ನಡೆಯುತ್ತಿವೆ

ಇಂತಹ ಮಹಾ ಸಮಾರಂಭವು ಟಿಪ್ಪು ಸುಲ್ತಾನರ ಕಾಲದಲ್ಲಿ ಅವರ ಪ್ರಾರ್ಥನೆ ಮೇರೆಗೆ ಲೋಕ ಕಲ್ಯಾಣಕ್ಕಾಗಿ ಶೃಂಗೇರಿಯಲ್ಲಿ ನಡೆದಿತ್ತೆಂದು ತಿಳಿದು ಬಂದಿದೆ. ಈ ಮಹಾಕಾರ್ಯದಲ್ಲಿ ಧರ್ಮಾಭಿಮಾನಿಗಳೆಲ್ಲರೂ ಭಾಗವಹಿಸುವುದಲ್ಲದೆ ತನು,ಮನ, ಧನದಿಂದ ನೆರವು ನೀಡಿ ವಿಶ್ವಶಾಂತಿಯನ್ನು ಸಾಧಿಸಲು ಸಹಾಯಕರಾಗಬೇಕೆಂದು ಕೋರಲಾಗಿದೆ. ಕಾಲವು ಬಹಳ ಸಮೀಪವಾಗಿರುವುದರಿಂದ ಮಹಾ ಜನರು ತಮ್ಮ ಉದಾರ ಸಹಾಯವನ್ನು ಸ್ಥಳೀಯ ಸಮಿತಿಯ ಕಾರ್ಯದರ್ಶಿಗಳಾದ ಶ್ರೀಮಾನ್ ಬಿ ಎಸ್ ಸುಬ್ಬರಾಯರಿಗಾಗಲೀ, ಕೋಶಾಧ್ಯಕ್ಷರಾದ ಶ್ರೀ ಅಗರಂ ರಂಗಯ್ಯನವರಿಗಾಗಲೀ ಮನಿಆರ್ಡರ್ ಮೂಲಕ ರಶೀತಿ ಪಡೆಯಬಹುದೆಂದು ಈ ಮೂಲಕ ಪ್ರಾರ್ಥಿಸಲಾಗಿದೆ

### ಆಹಾರ ಶಿರಸ್ತೇದಾರರುಗಳ ಹುದ್ದೆ ರದ್ದು

ಬರುವ ತಿಂಗಳು ೧ನೇ ತಾ|| ನಿಂದ ಮೈಸೂರು ಜಿಲ್ಲೆಯ ನಾನಾ ತಾಲ್ಲೂಕುಗಳಲ್ಲಿರುವ ಆಹಾರ ಶಿರಸ್ತೇದಾರರ ಹುದ್ದೆಗಳನ್ನು ವಜಾ ಮಾಡಲಾಗುವುದೆಂದು ವರದಿಯಾಗಿದೆ

## ಮೇರಿ ರಾಣಿಯವರ ನಿಧನ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಅಜ್ಜಿಯೂ ಐದನೇ ಜಾರ್ಜರ ಪತ್ನಿಯೂ ಆದ ಹರ್‌ಮೆಜೆಸ್ಟಿ ಮೇರಿ ರಾಣಿಯವರು ಈ ಬೆಳಗಿನ ಜಾವ ಲಂಡನ್ನಿನಲ್ಲಿ ಮೃತಪಟ್ಟರೆಂದು ವಾರ್ತೆ ಬಂದಿದೆ

### ರೈಲುಗಳ ಡಿಕ್ಕಿಯಾಗಿ ೨೦ ಜನರ ಮರಣ

ಬ್ರೆಜಿಲ್ ದೇಶದ ... ಬಳಿ ಪ್ರಯಾಣಿಕರ ರೈಲೊಂದು ಗೂಡ್ಸ್ ಗಾಡಿಗೆ ನೆನ್ನೆ ಡಿಕ್ಕಿ ಹೊಡೆದ ಪರಿಣಾಮವಾಗಿ ೨೦ ಜನರು ಮಡಿದರು. ನೂರಕ್ಕೂ ಹೆಚ್ಚು ಜನರು ಗಾಯಗೊಂಡಿರುವುದಾಗಿ ವರದಿಯಾಗಿದೆ

### ಗ್ರಾಮಸ್ಥರೊಬ್ಬರ ಕೈಕಾಲು ಕತ್ತರಿಸಿದ ಪ್ರಸಂಗ

ಕನಕಪುರ ತಾಲ್ಲೂಕು ಬಸವನಹಳ್ಳಿ ಗ್ರಾಮದ ಲಿಂಗಯ್ಯ ಉರುಫ್ ತಮ್ಮಯ್ಯ ಎಂಬುವರ ಕೈಕಾಲುಗಳನ್ನು ಅವರಿಗೆ ಆಗದವರೆಂದು ಹೇಳಲಾದ ಕೆಲವರು ಮಚ್ಚು ಕೊಡಲಿಗಳಿಂದ ಕತ್ತರಿಸಿ ಹಾಕಿರುವ ಸುದ್ದಿಯೊಂದು ವರದಿಯಾಗಿದೆ. ಪೋಲೀಸರು ಅಂಗವಿಹೀನರಾದ ಲಿಂಗಯ್ಯನವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿರುತ್ತಾರೆ. ಸುಮಾನಿಗೊಳಗಾಗಿರುವ ... ಕೆಂಚಯ್ಯ, ... ಲಿಂಗಯ್ಯ ಮತ್ತು ಇನ್ನಿಬ್ಬರು ಪರಾರಿಯಾಗಿರುವರೆಂದು ಹೇಳಲಾಗಿದೆ

### ದಂಪತಿಗಳಿಂದ ಅನ್ನ ಸತ್ಯಾಗ್ರಹ

ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ನಡೆಯುತ್ತಿರುವ ಅನ್ನ ಸತ್ಯಾಗ್ರಹದ ೧೩ನೇ ತಂಡದ ಶ್ರೀ ಕೆ.ಪಿ ಇಬ್ರಾಹಿಂ, ಎಂ. ಎ ಮೊಹಿದ್ದೀನ್ ಮತ್ತು ಮೇಣಾಗೋಪಾಲ್‌ರವರ ಉಪವಾಸ ಸತ್ಯಾಗ್ರಹವು ನಾಳೆ ಮುಗಿಯುವುದು. ೨೨ನೇ ತಾ|| ಸತ್ಯಾಗ್ರಹ ಶಿಬಿರದ ಬಳಿ ನಡೆದ ಬಹಿರಂಗ ಸಭೆಯಲ್ಲಿ ಡಾ|| ಬಿ ... ರವರು ಭಾಷಣ ಮಾಡಿ "ಮಂತ್ರಿ ಸ್ಥಾನವನ್ನು ಬಿಟ್ಟು ಹೊರಡಿ' ಚಳುವಳಿಯನ್ನು ಇನ್ನು ಮುಂದೆ ಪ್ರಾರಂಭಿಸಲಾಗುವುದೆಂದು ತಿಳಿಸಿದರು. ನಾಳೆ ಬೆಳಗ್ಗೆಯಿಂದ ಶ್ರೀ ವೆಂಕಟಸುಬ್ಬಯ್ಯ ಶರ್ಮ ಮತ್ತು ಅವರ ಪತ್ನಿ ಶ್ರೀಮತಿ ಕಮಲಮ್ಮನವರು ಸತ್ಯಾಗ್ರಹವನ್ನು ಆರಂಭಿಸುವರು

## ಲಂಚ ನಿರೋಧ ಸಂಬಂಧವಾಗಿ ಕ್ರಮ

### ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ.ಸು ಪೋ[] ಬೆಂಗಳೂರು ೨೪

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಹೆಚ್ ಎಸ್ ರುದ್ರಪ್ಪನವರ ಪ್ರಶ್ನೆಗೆ ಉತ್ತರವಾಗಿ, ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು "ಲಂಚ ನಿರೋಧ ಶಾಖೆಯು ನಡೆಸಿದ ಕಾರ್ಯ ಕ್ರಮಗಳನ್ನು ವಿವರಿಸಿದರು. ೫೧-೫೨ ರಲ್ಲಿ ೪ ಜನ ಗೆಜೆಟೆಡ್ ಮತ್ತು ೨೦ ಜನ ನಾನ್‌ಗೆಜೆಟೆಡ್, ೫೧-೫೨ ರಲ್ಲಿ ೯ ಗೆಜೆಟೆಡ್ ಮತ್ತು ೮೩ ನಾನ್ ಗೆಜೆಟೆಡ್ ಮತ್ತು ೫೨-೫೩ ರಲ್ಲಿ ೧೩ ಜನ ಗೆಜೆಟೆಡ್ ಮತ್ತು ೮೩ ಜನ ನಾನ್ ಗೆಜೆಟೆಡ್ ನೌಕರರ ಮೇಲೆ ಕ್ರಮ ಕೈಗೊಳ್ಳಲಾಯಿತೆಂದೂ, ಇನ್ನೂ ೧೨ ಜನ ಗೆಜೆಟೆಡ್ ಮತ್ತು ೨೫ ಮಂದಿ ನಾನ್ ಗೆಜೆಟೆಡ್ ಅಧಿಕಾರಿಗಳ ತನಿಖೆಯು ತನಿಖೆಯಲ್ಲಿರುವುದಾಗಿಯೂ ಇಲಾಖಾ ಡೈರೆಕ್ಟರು ಲಂಚ ನಿರೋಧವನ್ನು ಇನ್ನೂ ದಕ್ಷತೆಯಿಂದ ನಡೆಸಲು ಒಂದು ಸೂಚನೆಯನ್ನು ಸರ್ಕಾರಕ್ಕೆ ಕಳುಹಿಸಿರುವುದಾಗಿಯೂ ಸಚಿವರು ಹೇಳಿದರು

ಶ್ರೀ ಬಿ ಮಾಧವಾಚಾರ್ಯರ ಪ್ರಶ್ನೆಗೆ ಉತ್ತರವಾಗಿ ಆರೋಗ್ಯ ಮಂತ್ರಿ, ಶ್ರೀ ಚನ್ನಯ್ಯನವರು ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಕಾಯಿಲೆಗಳನ್ನು ಕುರಿತು ಪರಿಶೀಲನೆ ಮಾಡುವ ಬಗ್ಗೆ ಆರೋಗ್ಯದ ಬ್ಯೂರೋ ವನ್ನು ಸ್ಥಾಪಿಸುವ ವಿಷಯವು ಆಲೋಚನೆಯಲ್ಲಿರುವುದಾಗಿ ಹೇಳಿದರು

### ೫|| ವರ್ಷಗಳಲ್ಲಿ ಮಲೇರಿಯಾ ನಿವಾರಣೆಗೆ ಕ್ರಮ

ಮೂರೂವರೆ ವರ್ಷಗಳಲ್ಲಿ ಸಂಸ್ಥಾನದಲ್ಲ ಮಲೇರಿಯಾ ವ್ಯಾಧಿಯನ್ನು ಸಂಪೂರ್ಣವಾಗಿ ತೊಡೆದುಹಾಕುವ ಬಗ್ಗೆ ಯೋಜನೆಯೊಂದನ್ನು ಸರ್ಕಾರದವರು ಮಂಜೂರು ಮಾಡಿರುವುದಾಗಿಯೂ, ಕೇಂದ್ರ ಸರ್ಕಾರದ ಈ ಯೋಜನೆಗೆ ತಗಲುವ ೧೯,೭೯,೬೨೬ ರೂ. ಮೈಸೂರು ಸಂಸ್ಥಾನ ಸರ್ಕಾರದವರು ೮,೬೪,೬೨೬ ರೂಗಳನ್ನು ಒದಗಿಸುವರೆಂದೂ ನೆನ್ನೆ ಶಾಸನ ಸಭೆಯಲ್ಲಿ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ತಿಳಿಸಿದರು. ಆರೋಗ್ಯ ಮತ್ತು ವೈದ್ಯ ಇಲಾಖೆಗೆ ಸಂಬಂಧಿಸಿದಂತೆ ೧,೦೨,೭೫,೦೦೦ ರೂಗಳ ಬೇಡಿಕೆಯನ್ನು ಸಭೆಯು ಅಂಗೀಕರಿಸಿತು. ಈ ಸಂಬಂಧವಾಗಿ ಮೋಟಾರ್ ನಿರ್ಣಯವೊಂದು ಬಂದು, ಆಯುರ್ವೇದ ಮತ್ತು ಯುನಾನಿ ಕಾಲೇಜುಗಳನ್ನು ವಿಶ್ವ ವಿದ್ಯಾನಿಲಯಕ್ಕೆ ಸೇರಿಸಬೇಕೆಂದು ಕೋರಲಾಯಿತು. ಆರೋಗ್ಯ ಮಂತ್ರಿಗಳು ಮಾತನಾಡಿ, ಈ ವಿಷಯವನ್ನು ಪ್ರವೇಶಾರ ಸಮಿತಿಯು ಪರಿಶೀಲಿಸುತ್ತಿರುವುದಾಗಿ ಹೇಳಿದರು. ಮೋಟಾರ್ ನಿರ್ಣಯ ವಾಪಸು ತೆಗೆದುಕೊಳ್ಳಲ್ಪಟ್ಟಿತು

○ ಮೈಸೂರು ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಇದೇ ತಿಂಗಳು ೩೦ನೇ ತಾ|| ಸೋಮವಾರ ಮಧ್ಯಾಹ್ನ ೧ ಗಂಟೆಗೆ ಬೋರ್ಡಿನ ಕಟ್ಟಡದಲ್ಲಿ ಸೇರುವುದು. ಬೋರ್ಡಿನ ಆಯವ್ಯಯದ ಅಂದಾಜನ್ನು ಪರಿಶೀಲಿಸಲಾಗುವುದು

## ಚುನಾವಣಾ ಠೇವಣಿ ವಾಪಸು ಮಾಡುವ ಕ್ರಮ

### ಪೌರಸಭೆಯ ನಿಯಮಾವಳಿ

ಮೈಸೂರು ..

ನಗರದ ಪೌರಸಭೆಯ ವಿಶೇಷ [illegible] ಚುನಾವಣೆಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಿ [illegible] ಠೇವಣಿ ಹಣವನ್ನು ವಾಪಸು ಕೊಡುವಂತೆಯೂ, [illegible] ಠೇವಣಿಗಳನ್ನು ಮುಟ್ಟುಗೋಲು ಹಾಕಬಹುದೆಂದೂ [illegible] ಪೌರಸಭಾ ಚುನಾವಣಾ ನಿಯಮಗಳಿಗೆ [illegible] ಹಣವನ್ನು ವಾಪಸು [illegible]

## ಕೆ. ಹಿರಣ್ಣಯ್ಯನವರಿಗೆ ಶ್ರದ್ಧಾಂಜಲಿ

[illegible]

## ರಾಮೋತ್ಸವ ಕಾರ್ಯಕ್ರಮ

ಶ್ರೀ [illegible] ಉತ್ಸವದ ಅಂಗವಾಗಿ [illegible] ಸಂಕೇತಿ [illegible] ಮಂದಿರದಲ್ಲಿ ನಾಳೆ ಸಂಜೆ [illegible] ಗಂಟೆಗೆ [illegible] ನಡೆಯುವುದು

[illegible] ಶ್ರೀ [illegible] ದೇವಸ್ಥಾನದಲ್ಲಿ ಈ ರಾತ್ರಿ [illegible] ಗಂಟೆಗೆ ಶ್ರೀ [illegible] ಸಂಗೀತವೂ ನಾಳೆ ರಾತ್ರಿ [illegible] ಗಂಟೆಗೆ ಶ್ರೀ [illegible] ಹರಿಕಥೆಯೂ ನಡೆಯುತ್ತದೆ

[illegible]

## ಡೆಲ್ಲಿಯಲ್ಲಿ ಧೂಮಕೇತು ದರ್ಶನ

[illegible]

## ಪೂರ್ವ ಟರ್ಕಿಯಲ್ಲಿ ಭೂಕಂಪ

[illegible]

## ಲಕ್ನೋದಲ್ಲಿ ಬಳ್ಳ ಜನ ಅನಾಥಾಶ್ರಮದ ಬಂಧನ

[illegible]

### ಬ್ರಹ್ಮ ಕಲಶಾಭಿಷೇಕ

[illegible]

## ಪಾಕಿಸ್ಥಾನ್ ಪಂಜಾಬು ಸರ್ಕಾರದ ರಾಜೀನಾಮೆ

ಪಾಕಿಸ್ಥಾನದ ಪಂಜಾಬಿನಲ್ಲಿರುವ [illegible] ದೌಲತಾನಾರ ಮಂತ್ರಿ ಮಂಡಲವು ಪಾಕಿಸ್ಥಾನದ ಪ್ರಧಾನಿ [illegible] ಕೋರಿಕೆಯಂತೆ ರಾಜೀನಾಮೆಯನ್ನು ಸಲ್ಲಿಸಿತು [illegible] ಪ್ರಾಂತದಲ್ಲಿರುವ [illegible] ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ [illegible] ಗೌರ್ನರ್ ಆಗಿರುವ [illegible] ನೂನ್ ರವರು ಹೊಸ ಮಂತ್ರಿ ಮಂಡಲವನ್ನು ರಚಿಸಲಿರುವರು

## ಪೆಟ್ರೋಲ್ ಡಬ್ಬ ಸಿಡಿದು ೩ ಜನರ ಮರಣ

ಭದ್ರಾಚಲದ ಒಂದು [illegible] ಪೆಟ್ರೋಲ್ ಡಬ್ಬವೊಂದು ಸಿಡಿದುದರ ಪರಿಣಾಮವಾಗಿ ೩ ಜನರು [illegible] ಇನ್ನೂ [illegible] ಜನರಿಗೆ ತೀವ್ರವಾಗಿ ಸುಟ್ಟ ಗಾಯಗಳಾದುವೆಂದೂ ವರದಿಯಾಗಿದೆ

## ದೆಹಲಿಯಲ್ಲಿ ಸಾಧುಗಳ ದಸ್ತಗಿರಿ

ದೆಹಲಿಯಲ್ಲಿ ಜನಸಂಘ ಹಿಂದೂ ಮಹಾಸಭೆ ಮತ್ತು ರಾಮರಾಜ್ಯ ಪರಿಷತ್ತು [illegible] ನಡೆಸುತ್ತಿರುವ ಸತ್ಯಾಗ್ರಹದಲ್ಲಿ [illegible]

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಮೈಸೂರು ಪೇಟೆ ಧಾರಣೆ

| ಪದಾರ್ಥ | [illegible] | [illegible] |
|---|---|---|
| [illegible] | [illegible] | [illegible] |

Edited Printed and Published by A R Nagarajan at Sadhvi Press, D Subbaiah Road Mysore


Trade Marks Act 1940

TRADE MARK WARNING NOTICE

Know ye all men, trade and custom that we the MANGALORE GANESH BEEDI WORKS (Brothers I R M Prabhu and Bantwal Madhava Shenoi) Santhepet MYSORE, are owners of the below represented Trade Mark which we have duly registered under Registered Nos 6125 113569, 6426 and 12573 in respect of Beedies under the Trade Marks Act 1940. By virtue of the registration we done are entitled to enjoy the exclusive monopoly of these marks for use in relation to Beedis and in the entire Indian Union

MANGALORE GANESH BEEDIES

(No 6125)

GANESH BEEDIES

(No 113569)

(No 6426)

(No 12573)

Any other [illegible] mark or marks identical or similar to the above marks or trading [illegible] Beedies with [illegible] labels or wrappers [illegible] marks or [illegible] without authority [illegible] above marks [illegible] labels [illegible] wrappers will do so at their own [illegible] liable for action of INFRINGEMENT of our right and will be suitable [illegible] under the Trade Marks Act 1940 and for Code of Criminal Procedure

MANGALORE GANESH BEEDI WORKS,

*Head Office and Sales Depot*

*Santhepet Mysore*

ಫೋನ್ ನಂ. 794 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಗುರುವಾರ ೨೬-೩-೧೯೫೩ [ ಸಂಚಿಕೆ ೧೯೪

# ಫರೂಕ್ ದೊರೆಯ ಗಡೀಪಾರಿಗೆ ಸೂಚನೆ

## ಅಕ್ಟೋಬರ್ ೧ರ ಹೊತ್ತಿಗೆ ಆಂಧ್ರ ಪ್ರಾಂತ್ಯ

### ಮದರಾಸಿನಲ್ಲಿ ಹಂಗಾಮಿ ರಾಜಧಾನಿ ಇಲ್ಲ

ಬಳ್ಳಾರಿಯ ೬ ತಾಲ್ಲೂಕುಗಳು ಮೈಸೂರಿಗೆ

ದೆಹಲಿಯಲ್ಲಿ ಸಮಾವೇಶಗೊಂಡಿರುವ ಲೋಕ ಸಭೆಯ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರು ನೆನ್ನೆ ಆಂಧ್ರ ಪ್ರಾಂತ್ಯದ ರಚನೆ ಬಗ್ಗೆ ಒಂದು ವಿವರವಾದ ಹೇಳಿಕೆಯನ್ನಿತ್ತು ಜಸ್ಟಿಸ್ ವಾಂಚೂರವರು, ಈ ಸಂಬಂಧವಾಗಿ ಸಲ್ಲಿಸಿದ ವರದಿಯನ್ನು ಬಹಿರಂಗಪಡಿಸಿದರು

ಬರುವ ಅಕ್ಟೋಬರ್ ೧ ನೇ ತಾರೀಖು ಹೊಸ ಆಂಧ್ರ ಪ್ರಾಂತ್ಯದ ಆರಂಭೋತ್ಸವವನ್ನು ನೆರವೇರಿಸಲಾಗುವುದೆಂದೂ ಅದರ ರಾಜಧಾನಿಯ ಬಗ್ಗೆ ಆಂಧ್ರರೇ ನಿರ್ಧಾರ ಕೈಗೊಳ್ಳಬೇಕೆಂದೂ ಮತ್ತು ಮದರಾಸಿನಲ್ಲಿ ತಾತ್ಕಾಲಿಕವಾಗಿಯೂ ಆಂಧ್ರದ ರಾಜಧಾನಿಯನ್ನು ಸ್ಥಾಪಿಸಲಾಗುವುದಿಲ್ಲವೆಂದೂ ಶ್ರೀ ನೆಹರೂರವರು ತಿಳಿಸಿದರು ಆಂಧ್ರದ ರಾಜಧಾನಿಯ ಸ್ಥಾಪನೆಗಾಗಿ ಕೇಂದ್ರ ಸರ್ಕಾರದಿಂದ ಹಣ್ಣ ಕೋಟಿ ರೂ ಸಾಲವನ್ನು ಕೊಡಲಾಗುವುದೆಂದು ಗೊತ್ತಾಗಿದೆ. ಆಂಧ್ರದ ನ್ಯಾಯಾಂಗ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮದರಾಸು ಹೈಕೋರ್ಟಿನ ವ್ಯಾಪ್ತಿಗೆ ಒಳಪಡಿಸಲಾಗುವುದು

ಬಳ್ಳಾರಿ ಜಿಲ್ಲೆಗೆ ಸೇರಿದ ಹರಪನಹಳ್ಳಿ, ಹಡಗಲಿ ಉತ್ತರ ಮತ್ತು ದಕ್ಷಿಣ ಹೊಸಪೇಟೆ, ಸಂಡೂರು ಮತ್ತು ಸಿರಗುಪ್ಪ ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನಕ್ಕೊಡನೆಯೂ ಮತ್ತು ಆದೋನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳನ್ನು ನೂತನ ಆಂಧ್ರ ಪ್ರಾಂತ್ಯಕ್ಕೂ ಸೇರಿಸಲಾಗುವುದು ಬಳ್ಳಾರಿ ತಾಲ್ಲೂಕಿನ ಭವಿಷ್ಯವನ್ನು ಮುಂದೆ ನಿರ್ಧರಿಸಲಾಗುವುದು ತುಂಗಭದ್ರಾ ಅಣೆಕಟ್ಟಿನ ಯೋಜನೆಯು ಉತ್ತರ ಹೊಸಪೇಟೆ ತಾಲ್ಲೂಕು ಮತ್ತು ಹೈದರಾಬಾದು ಸಂಸ್ಥಾನಕ್ಕೆ ಸೇರಿರುವುದರಿಂದ, ಉತ್ತರ ಹೊಸಪೇಟೆಯ ಭಾಗದ ಯೋಜನೆಯನ್ನು ಮೈಸೂರಿಗೆ ವಹಿಸಲಾಗುವುದು

ನೂತನ ಆಂಧ್ರ ಪ್ರಾಂತ್ಯದಲ್ಲಿ ಸೇರಿಸಲಾಗುವ ೧೧ ಜಿಲ್ಲೆಗಳೆಂದರೆ:— ಶ್ರೀಕಾಕುಳಂ, ವಿಶಾಖಪಟ್ಟಣ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಕೃಷ್ಣಾ ಗುಂಟೂರು, ನೆಲ್ಲೂರು, ಕರ್ನೂಲು ಅನಂತಪುರ, ಕಡಪ ಮತ್ತು ಚಿತ್ತೂರು

### ಶ್ರೀ ಆರ್. ಎಸ್ ಅಯ್ಯಂಗಾರ್ಯರಿಗೆ ಪಿತೃ ವಿಯೋಗ

ರಾಜಧಾನಿಯ ಧನ್ವಂತರಿ ರಸ್ತೆಯ ಪ್ರಿನ್ಸಿಪಲ್ ಇನ್ಸ್ಟಿಟ್ಯೂಟಿನ ಮಾಲೀಕರಾದ ಶ್ರೀ ಆರ್ ಎಸ್ ಅಯ್ಯಂಗಾರ್ಯರ ತಂದೆ ನಿವೃತ್ತ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಆರ್ ತಿರುನಾರಾಯಣಯ್ಯಂಗಾರ್ಯರು ಈ ಬೆಳಿಗ್ಗೆ ಒಂಟಿಕೊಪ್ಪಲಿನ ತಮ್ಮ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ಪತ್ನಿಯೂ ಆರು ಜನ ಮಕ್ಕಳೂ ಇರುವರು

### ಇನಾಮುಗಳ ರದ್ದಿನ ಮಸೂದೆ

ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವ ಸಂಬಂಧವಾಗಿ ಸರ್ಕಾರದವರು ಶಾಸನ ಸಭೆಯಲ್ಲಿ ಮಂಡಿಸಲಿರುವ ಮಸೂದೆಯೊಂದನ್ನು ವಿಶೇಷ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ ಯಾವ ಕಂದಾಯ ಜಹಗೀರಿ ಇನಾಮು ಗುತ್ತಿಗೆ ಕೊಡುಗೆ ಮತ್ತು ಜೋಡಿ ಇನಾಮು ಮತ್ತು ಇತರ ವೈಯಕ್ತಿಕ ಇನಾಮು ಇವನ್ನ ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿದೆ ಗ್ರಾಮಾಧಿಕಾರಿಗಳು ಮತ್ತು ನೌಕರಿಗೆ ಸೇರಿರುವ ಮತ್ತು ದೇವಸ್ಥಾನ ಮಠಗಳ ಇನಾಂಗಳನ್ನು ರದ್ದುಗೊಳಿಸುವುದಿಲ್ಲ ಪಾಠಶಾಲೆ ಉಪಯೋಗಕ್ಕಾಗಿ ಕೊಟ್ಟಿರುವ ಇನಾಂಗಳು ಕೊಡುಗೆ ಮತ್ತು ಜೋಡಿಗಳ ಇನಾಂಗಳು ಮತ್ತು ಕಡಿ ದಾರರಿಗೆ ಕೊಟ್ಟಿರುವ ಎಕರೆ ಜಮೀನುಗಳಿಗೆ ಈ ಕಾನೂನು ಅನ್ವಯಿಸುವುದು ಇನಾಂದಾರರಿಗೆ ಪರಿಹಾರ ಕೊಡಲಾಗುವುದು

### ಬೆಕ್ಕು ಮೊಟ್ಟೆ ಇಟ್ಟ ಪ್ರಸಂಗ

ಮಾಲೂರು ತಾಲ್ಲೂಕು ಹುಲಿಕೋಟೆ ಗ್ರಾಮದಲ್ಲಿ ಶ್ರೀ ಕೃಷ್ಣಪ್ಪನವರ ಮನೆಯಲ್ಲಿ ಮುದ್ದಿನ ಸಾಕುಬೆಕ್ಕೊಂದು ಕಳೆದ ವಾರ ಒಂದು ಮೊಟ್ಟೆಯನ್ನು ಇಟ್ಟಿತೆಂದೂ, ಅದು ಚಿಕ್ಕದವರಾದ್ದರಿಂದಾಗಿ ಮೃದುವಾಗಿದ್ದಿತೆಂದೂ ೧೦ ಗಂಟೆಗಳ ನಂತರ ಅದು ಒಡೆದು ವಿಚಿತ್ರ ರೀತಿಯ ಪ್ರಾಣಿಯೊಂದು ಕಾಣಿಸಿಕೊಂಡಿತೆಂದೂ ವರದಿಯಾಗಿದೆ ಅದರ ಮುಖವು ಮನುಷ್ಯನಿಗೆ ಇರುವಂತೆ ಇದ್ದು ಹಿಂದೆ ೩ ಅಂಗುಲದ ಒಂದು ಬಾಲವಿದ್ದುದಾಗಿಯೂ, ಹಿಂದಿನ ಕಾಲುಗಳು ಮನುಷ್ಯನದರಂತೆಯೂ ಮುಂದಿನವು ಬೆಕ್ಕಿನವರಂತೆಯೂ ಉಳಿದ ಭಾಗಗಳು ಬೆಕ್ಕಿನ ವಂತೆಯೂ ಇದ್ದುವೆಂಗಿಯೂ ಹೇಳಲಾಗಿದೆ ೪ ಗಂಟೆಗಳ ನಂತರ ಅದು ಸತ್ತಿತೆಂದೂ ವರದಿಯಾಗಿದೆ

ಮೈಸೂರು ಪತ್ರಿಕೆಯ ವೇಲೆ ವಿಶ್ವಾಸದ ಮೊಕದ್ದಮೆಯನ್ನು ಹೂಡಬೇಕೆಂದು ನೆನ್ನೆ ಸರ್ಕಾರ್ ನ್ಯಾಯಾಧೀಶರ ಸಮ್ಮುಖದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರು ತಿಳಿಸಿದರು

### ಫರೂಕರನ್ನು ಗಡೀಪಾರು ಮಾಡಲು ಇಟಲಿಗೆ ಕೋರಿಕೆ

ಈಜಿಪ್ಟ್ ಸಿಂಹಾಸನವನ್ನು ಬಿಟ್ಟು ಈಗ ಇಟಲಿಯಲ್ಲಿ ನೆಲೆಸಿರುವ ಮಾಜಿ ದೊರೆ ಫರೂಕರ ರಾಜಕೀಯ ಕಾರ್ಯಚಟುವಟಿಕೆಗಳನ್ನು ತಡೆಯಬೇಕೆಂದೂ ಇಲ್ಲವಾದರೆ ಅವರನ್ನು ಅಲ್ಲಿಂದ ಹೊರಕ್ಕೆ ಕಳುಹಬೇಕೆಂದೂ ಈಜಿಪ್ಟ್ ಸರ್ಕಾರದವರು ಇಟಲಿ ಸರ್ಕಾರವನ್ನು ಕೋರಿರುವುದಾಗಿ ವರದಿಯಾಗಿದೆ ಫರೂಕರ ಕಾರ್ಯಚಟುವಟಿಕೆಗಳಿಂದ ಈಜಿಪ್ಟ್ ಸರ್ಕಾರಕ್ಕೆ ಯಾವ ಹಾನಿಯೂ ಉಂಟಾಗಲಾರದೆಂದೂ, ಅವರ ವೈಯಕ್ತಿಕ ವರ್ತನೆಗಾಗಿ ಅವರಿಗೆ ತೊಂದರೆಯಾಗಲಾರದೆಂದೂ ಇಟಲಿ ಸರ್ಕಾರವು ಈಜಿಪ್ಟಿಗೆ ತಿಳಿಸಿದ್ದಿತು

### ದ|| ಆಫ್ರಿಕದ ಘೋರ ಸ್ಥಿತಿ ಬಗ್ಗೆ ಭಾರತದ ಪ್ರತಿಭಟನೆ

ದಕ್ಷಿಣ ಆಫ್ರಿಕದಲ್ಲಿ ಭಾರತೀಯ ಮೂಲದವರನ್ನು ತಮ್ಮ ಮನೆಗಳಿಂದ ಹೊರಗಟ್ಟಿ ಬೇರೆ ಕಡೆಗಳಿಗೆ ಅಲ್ಲಿನ ಸರ್ಕಾರದವರು ಹೊಸ ಪ್ರದೇಶ ಯೋಜನೆಯ ಅಂಗವಾಗಿ ವರ್ಗ ಮಾಡುವ ಕ್ರಮದಿಂದ ಉಂಟಾಗುವ ಪರಿಸ್ಥಿತಿಯನ್ನು ಮತ್ತು ಕಷ್ಟಗಳ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಿಗೆ ಭಾರತದ ಖಾಯಂ ಪ್ರತಿನಿಧಿ ರಾಜೇಶ್ವರ ದಯಾಳರು ಪ್ರತಿಭಟನಾ ಪತ್ರವೊಂದನ್ನು ಬರೆದಿದ್ದಾರೆ ಪ್ರತ್ಯೇಕ ವಾಸ ಪದ್ಧತಿಯಿಂದ ಅಲ್ಲಿನ ನಿವಾಸಿಗಳಲ್ಲಿ ವರ್ಣ ವಿದ್ವೇಷವು ಹೆಚ್ಚಿ, ಕಿರುಕುಳಗಳು ಸಂಭವಿಸುವುದು ಅನಿವಾರ್ಯವೆಂದೂ ತಿಳಿಸಲಾಗಿದೆ ಇದರಿಂದ ೧೪೦,೦೦೦ ಭಾರತೀಯರು ತಮ್ಮ ಮನೆ, ಅಂಗಡಿ, ಮತ್ತು ಮಂದಿರಗಳನ್ನು ಬಿಡಬೇಕಾಗುವುದೆಂದೂ ಅವರು ಬಿಟ್ಟುಬರುವ ಆಸ್ತಿಯು ೩ ಕೋಟಿ ಪೌಂಡು (೪೦ ಕೋಟಿ ರೂಪಾಯಿ ) ಗಳಾಗುವುದೆಂದೂ ಹೇಳಲಾಗಿದೆ

ರಾಜಧಾನಿಯ ಚಾಮುಂಡಿ ಅಗ್ರಹಾರದಲ್ಲಿರುವ ಬಾಲಕರ ಶ್ರೀ ರಾಮಮಂದಿರದಲ್ಲಿ ಈ ದಿನ ರಾತ್ರಿ ೯-೩೦ಕ್ಕೆ ಶ್ರೀ ವಿ ಕೆ ಶ್ರೀನಿವಾಸರಾಯರಿಂದ ಶ್ರೀರಾಮ ರಾಮಾಂಜನೇಯ ಎಂಬ ಹರಿಕಥೆಯು ನಡೆಯುತ್ತದೆ

## ವಿ. ಸಂಜೀವಪ್ಪ ಮತ್ತಿತರರ ಮೇಲಿನ ಮೊಕದ್ದಮೆ

### ಕಂಟೆಂಪ್ಟ್ ಆಪಾದಿತರು ಕೋರ್ಟಿನಲ್ಲಿರಲು ಸೂಚನೆ

ಸಂ ಪ. ಪ್ರೋ|] ಬೆಂಗಳೂರು ೨೬

ಕಂಟೆಂಪ್ಟ್ ಆಫ್ ಕೋರ್ಟಿನ ಸಂಬಂಧವಾಗಿ ರಾಮನಗರದ ಶ್ರೀ ವಿ ಸಂಜೀವಪ್ಪ ಮತ್ತು ಇತರ ೫೧ ಜನರ ಮೇಲಿನ ಮೊಕದ್ದಮೆಯು ೩೦ನೇ ತಾರೀಖಿಗೆ ಮುಂದೆ ಹಾಕಿ ಪ್ರಧಾನ ನ್ಯಾಯಾಧೀಶರಾದ ಶ್ರೀ ಪಿ ಮೇದಪ್ಪ ಮತ್ತು ನ್ಯಾಯಾಧೀಶ ಶ್ರೀ ಬಿ ವಾಸುದೇವ ಮೂರ್ತಿಯವರು ಅಕ್ಷೇಪಣೆ, ಹಲವು ಆಪಾದಿತರುಗಳು ಸಲ್ಲಿಸಿರುವ ಕ್ಷಮಾಪಣೆ ಬಗ್ಗೆ ವಿವರಗಳನ್ನು ತಿಳಿಯಲು ಅವರನ್ನು ಖುದ್ದು ಹಾಜರಾಗಬೇಕಾಗಿರುವುದರಿಂದ ೩೦ ನೇ ತಾ|| ಆಪಾದಿತರೆಲ್ಲರೂ ಕೋರ್ಟಿನಲ್ಲಿ ಹಾಜರಿರಬೇಕೆಂದು ಸೂಚಿಸಿದರು

### ಸಂಸ್ಥಾನದಲ್ಲಿ ೨೫,೦೦೦ ಟನ್ ಆಹಾರ ಬೆಳೆ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ ಪ ಪ್ರೋ|] ಬೆಂಗಳೂರು ೨೬

ಈ ದಿನ ಹಿರಿಯ ಶಾಸನ ಸಭೆಯು ಪುನಃ ಸೇರಿದಾಗ, ಒಂದು ಪ್ರಶ್ನೆಗೆ ಉತ್ತರವಾಗಿ ಗೃಹಮಂತ್ರಿ ಶ್ರೀ ಎಚ್ ಸಿ ದಾಸಪ್ಪನವರ ಸಂಸ್ಥಾನದಲ್ಲಿ ೬ ಲಕ್ಷ ಜನರು ಕೈ ಮಗ್ಗಗಳಿಂದ ಜೀವನ ನಡೆಸುತ್ತಿರುವುದಾಗಿ ತಿಳಿಸಿದರು

ಹೆಚ್ಚು ಆಹಾರ ಬೆಳೆ ಯೋಜನೆಯ ಅಂಗವಾಗಿ ೨,೮೮,೦೦೦ ಎಕರೆ ಜಮೀನಿನಲ್ಲಿ ೨೫,೦೦೦ ಟನ್ ಆಹಾರವನ್ನು ಬೆಳೆಯಲಾಗಿದೆಯೆಂದೂ ತಿಳಿಸಲಾಯಿತು.

ಆಯುರ್ವೇದದಲ್ಲಿ ಡಿಗ್ರಿಗಳನ್ನು ಕೊಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಮತ್ತೊಂದು ಪ್ರಶ್ನೆಗೆ ಉತ್ತರವೀಯಲಾಯಿತು

### ಪೌರಸಭಾ ಕಾಂಗ್ರೆಸ್ ಪಕ್ಷಕ್ಕೆ ಹೊಸ ಅಧಿಕಾರಿ ವರ್ಗ

ಮೈಸೂರು ೨೬

ನಗರದ ಪೌರಸಭೆಯ ಕಾಂಗ್ರೆಸ್ ಪಕ್ಷದ ವಾರ್ಷಿಕ ಸಮಾರಂಭವು ನೆನ್ನೆ ಪಕ್ಷದ ಕಛೇರಿಯಲ್ಲಿ ನಡೆಯಿತು ಪಕ್ಷದ ಅಧಿಕಾರ ವರ್ಗದ ಚುನಾವಣೆ ನಡೆದು ಶ್ರೀ ಪಿ ಕೆ ನಾರಾಯಣಯ್ಯನವರ, ನಾಯಕರಾಗಿಯೂ, ಶ್ರೀ ಎಸ್ ಲಿಂಗಣ್ಣನವರು ಉಪನಾಯಕರಾಗಿಯೂ ಶ್ರೀ ನರಸಿಂಹಯ್ಯಂಗಾರ್ಯರು ಕಾರ್ಯದರ್ಶಿಯವರಾಗಿಯೂ ಮತ್ತು ಶ್ರೀ ಟಿ ಚೌಡಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು

ಭಾವಸಾರ ಕ್ಷತ್ರಿಯರಿಗೆ ಸಂತರ್ಪಣೆ

ನಾಳೆ ನಂಜನಗೂಡಿನಲ್ಲಿ ನಡೆಯುವ ಶ್ರೀ ಶ್ರೀಕಂಠೇಶ್ವರರಥೋತ್ಸವದ ಪ್ರಯುಕ್ತ ನಂಜನಗೂಡು ಭಾವಸಾರ ಕ್ಷತ್ರಿಯ ಮಂಡಲಿಯು ಶ್ರೀರಾಮಮಂದಿರದಲ್ಲಿ ಬೆಳಿಗ್ಗೆ ೧೧ ಘಂಟೆಗೆ ಪರಸ್ಥಳದಿಂದ ನಂಜನಗೂಡಿಗೆ ಬರುವ ಭಾವಸಾರ ಕ್ಷತ್ರಿಯ ಮಹನೀಯರಿಗೆ ಸಂತರ್ಪಣೆ ನಡೆಯಲೇರ್ಪಾಡಾಗಿದೆ

ಶ್ರವಣಬೆಳಗೊಳದ ಗೋಮಟೇಶ್ವರ ಸ್ವಾಮಿಯವರಿಗೆ ಇದೇ ೩೧ನೇ ತಾ|| ಮತ್ತು ಏಪ್ರಿಲ್ ೧ ನೇ ತಾ|| ಎರಡು ದಿನಗಳಲ್ಲೂ ಮಹಾ ಪೂಜೆಗಳನ್ನು ಏರ್ಪಾಡು ಮಾಡಲಾಗಿದೆ.

## ಅಮಾನಿಕೆರೆ ಪ್ರಕರಣದಲ್ಲಿ ಇಂಜನಿಯರಿಗೆ ನೋಟೀಸು

ಕೋಲಾರದ ಅಮಾನಿಕೆರೆಯಲ್ಲಿ ಹೋಟಲೊಂದನ್ನು ಕಟ್ಟುತ್ತಿರುವ ಸಂಬಂಧವಾಗಿ ಕೆರೆಯ ಅಚ್ಚುಕಟ್ಟುದಾರರೆಂದು ಹೇಳಲಾದ ಶ್ರೀ ಷೇಕ್ ಇಸ್ಮೇಲ್ ಎಂಬುವರು ಕೋಲಾರದ ಎಕ್ಸಿಕ್ಯೂಟಿವ್ ಇಂಜನಿಯರಿಗೆ ವಕೀಲರ ಮೂಲಕ ೩ ದಿನಗಳ ಅವಧಿಯ ನೋಟೀಸನ್ನು ಕಳಹಿಸಿ, ತಮಗೆ ಸೇರಿರುವ ಜಮೀನನ್ನು ಅಕ್ರಮವಾಗಿ ಅಕ್ರಮಿಸಿಕೊಂಡಿರುವುದಾಗಿಯೂ ಅಲ್ಲಿ ಕಲ್ಲುಗಳನ್ನು ಶೇಖರಿಸಿರುವುದಲ್ಲದೆ ಪೈಪನ್ನು ಹಾಕಿರುವುದಾಗಿಯೂ, ತಮ್ಮ ಸ್ವತ್ತನ್ನು ಮೊದಲು ಇದ್ದಂತೆಯೇ ವಾಪಸು ಮಾಡುವಂತೆಯೂ ತಿಳಿಸಿರುತ್ತಾರೆ

## ಭಾರತ, ಕಾಶ್ಮೀರಗಳ ಮೇಲೆ ಪಾಕಿಸ್ತಾನದ ಯುದ್ಧ ?

ಭಾರತ ಮತ್ತು ಕಾಶ್ಮೀರಗಳ ಮೇಲೆ ಪಾಕಿಸ್ತಾನವು ಧರ್ಮ ಯುದ್ಧ ಹೂಡುವ ಯೋಜನೆಯನ್ನು ಹೊಂದಿರುವುದೆಂದು ವರದಿಯಾಗಿರುವುದಾಗಿಯೂ ಆದ್ದರಿಂದ ಜಮ್ಮು ಪ್ರಜಾಪರಿಷತ್ತಿನವರ ಚಳುವಳಿಗೆ ಹಿಂದೂ ಮಹಾ ಸಭೆಯು ಎಷ್ಟರಮಟ್ಟಿಗೆ ಉತ್ತೇಜನ ಕೊಡಬೇಕೆಂಬುದನ್ನು ಪರಿಶೀಲಿಸಲು ಸಭೆಯು ಸೇರಬೇಕೆಂದು ಹಿಂದೂ ಮಹಾಸಭೆಯ ಅಧ್ಯಕ್ಷ ಎನ್ ಸಿ ಚಟರ್ಜಿ ಯವರು ತಿಳಿಸಿದ್ದಾರೆ

### ವಿಶ್ವವಿದ್ಯಾನಿಲಯವರಿಗೆ ಕೇಂದ್ರದಿಂದ ಹೆಚ್ಚು ಸಹಾಯಕ್ಕೆ ಬೇಡಿಕೆ

ವಿಶ್ವವಿದ್ಯಾನಿಲಯ ಸೇರ ಪಡಿಯ [illegible] ಸಂಸ್ಥಾನದಲ್ಲಿ [illegible] ಅಭಿವೃದ್ಧಿಗೊಳಿಸಲು ಕೇಂದ್ರ ಸರ್ಕಾರದವರು ಹೆಚ್ಚು ಸಹಾಯ ಮಾಡುವ [illegible] ಮೈಸೂರು ಸರ್ಕಾರದವರು ಕೋರಿರುವುದಾಗಿ [illegible] ಮಂತ್ರಿ ಸಿದ್ದವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿದರು. ಈಗ [illegible] ಲಕ್ಷ ರೂ ಅಲ್ಲದೆ [illegible] ಧನವನ್ನು ಕೊಡುವಂತೆ [illegible] ಗಿರುವುದೆಂದೂ, [illegible] ಲಕ್ಷ ರೂ [illegible] ಗಳೂರಿಗೆ [illegible] ಮೈಸೂರಿಗೆ [illegible] ಕೋಲಾರದ [illegible] ಚಿಕ್ಕಮಗಳೂರು [illegible] ಶಿವಮೊಗ್ಗ [illegible] ಲಕ್ಷಗಳಂತೆ ಹಂಚಲಾಗಿದೆಯೆಂದೂ ಅವರು ತಿಳಿಸಿದರು.

## ಪ್ರಕಟಣೆ

ಮೈಸೂರು ಚಾಮುಂಡಿಬೆಟ್ಟದ ಪಾದದಲ್ಲಿರುವ ಸಿಂಚಾಸ್ಫೋಟಿಗೆ ಸೇರಿದ ತೋಟದಲ್ಲಿರುವ ಮಾವು ಬೇಲ ಮತ್ತು ನೇರಳೆ ಫಸಲನ್ನು ೨೯ ನೇ [illegible] ತ್ರಿಗೆ ಬಹಿರಂಗವಾಗಿ [illegible] ನೇ ತಾ|| ಬೆಳಿಗ್ಗೆ [illegible] ಘಂಟೆಗೆ ಸದರಿ ಸ್ಥಳದಲ್ಲಿ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ ಭರ್ತಿ [illegible] ಗುತ್ತಿಗೆಗೆ ಪಡೆಯಬಹುದು ಹೆಚ್ಚಿನ ವಿವರ ಮೈಸೂರು ವಾಣೀವಿಲಾಸ ರೋಡಿನಲ್ಲಿರುವ ಸದರಿ ಆಫೀಸಿನಲ್ಲಿ ತಿಳಿಯಬಹುದು

ಎಂ ರಾಜುಸ್ವಾಮಿ

[illegible]

## ಟೌನ್ ಕ್ರಿಕೆಟ್ ಕ್ಲಬ್ಬಿಗೆ ಜಯ

ಚಾಮರಾಜನಗರ —[illegible]

ಇಲ್ಲಿ ನೆನ್ನೆ ನಂಜನಗೂಡು [illegible] ಲೆವೆನ್ ಟೀಮಿಗೂ ಇಲ್ಲಿನ ಟೌನ್ ಕ್ರಿಕೆಟ್ ಕ್ಲಬ್ಬಿನವರಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಟೌನ್ ಕ್ಲಬ್ಬಿನವರು [illegible] ಇನ್ನಿಂಗ್ಸ್ ಮತ್ತು ೩೦ ರನ್ನುಗಳಿಂದ ಜಯಗಳಿಸಿದರು ಟೌನ್ ಕ್ಲಬ್ಬಿನವರು ಮೊದಲನೇ ಇನ್ನಿಂಗ್ಸ್‌ನಲ್ಲಿ [illegible] ರನ್ನುಗಳನ್ನು ಮಾಡಿದರು ನಂಜನಗೂಡಿನ ಟೀಮಿನವರು ಮೊದಲನೇ ಇನ್ನಿಂಗ್ಸ್‌ನಲ್ಲಿ [illegible] ಮತ್ತು ಎರಡನೆಯದರಲ್ಲಿ [illegible] ರನ್ನುಗಳನ್ನು ಮಾಡಿದರು

### ಕ್ರಿಕೆಟ್ ಕ್ಲಬ್ಬಿಗೆ ಸಹಾಯ

ಚಾಮರಾಜನಗರದ ಟೌನ್ ಕ್ರಿಕೆಟ್ ಕ್ಲಬ್ಬಿನ ಸಹಾಯಾರ್ಥವಾಗಿ ಕಳೆದ [illegible] ನೇ ತಾ|| ಶ್ರೀ ಚನ್ನಬಸವೇಶ್ವರ ನಾಟಕ ಮಂಡಲಿಯವರು ನಾಟಕವನ್ನು ಅಭಿನಯಿಸಿದರು. ಕ್ಲಬ್ಬಿನವರು ನಾಟಕ ಮಂಡಲಿಯವರಿಗೂ ಪ್ರೋತ್ಸಾಹವಿತ್ತ ಮಹಾಜನರಿಗೂ ಕೃತಜ್ಞತೆಯನ್ನು ಸೂಚಿಸಿದ್ದಾರೆ

## ೨೫೦ ಮುಸ್ಲಿಂ ಸಂಸಾರಗಳು ಹಿಂದೂ ಮತಕ್ಕೆ

ಅಹಮದಾಬಾದು [illegible] ಜಿಲ್ಲೆಯ [illegible] ಹಳ್ಳಿಯ [illegible] ಮುಸ್ಲಿಂ ಸಂಸಾರಗಳಲ್ಲಿರುವ [illegible] ೧೦೦೦ಕ್ಕೂ ಹೆಚ್ಚು ಜನರು ಹಿಂದೂ ಮತಕ್ಕೆ ಸೇರಿರುವರೆಂದೂ, ಈ ಸಂಬಂಧವಾಗಿ ಶುದ್ಧೀಕರಣ ಸಮಾರಂಭವು ನಡೆದಿರುವುದಾಗಿಯೂ ವರದಿಯಾಗಿದೆ [illegible] ವರ್ಷಗಳಹಿಂದೆ ಅವರ ಪೂರ್ವಿಕರು ಕ್ಷತ್ರಿಯ ಕುಲಕ್ಕೆ ಸೇರಿದ್ದರೆಂದೂ ಹೇಳಲಾಗಿದೆ

## ಕಳೆದು ಹೋಗಿದೆ

ಎಸ್ ಮಹದೇವ ಸಿಂಗ್ ಎಂಬುವರ ಹೆಸರಿನಲ್ಲಿರುವ ಒಂದು ಬಾಂಡು ಕಳೆದುಹೋಗಿರುತ್ತೆ ಇದು ಯಾರಿಗಾದರೂ ಸಿಕ್ಕಿದ್ದಲ್ಲಿ ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು

ಬಾಬುಸಾಬ್ ಸೈಕಲ್ ಷಾಪ್

ಮೈಸೂರು

## ಶ್ರೀ ರಾಮೋತ್ಸವದ ಕಾರ್ಯಕ್ರಮಗಳು

ಶ್ರೀ ರಾಮೋತ್ಸವ ಕಾರ್ಯಕ್ರಮದ ಅಂಗವಾಗಿ ನಗರದ ಸಂತೆಪೇಟೆ ಕುಂಬಾರಗಿರಿ ರಾಮ ಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಗಾನ ವಿಶಾರದ ಚಿಟ್ಟಿ ಕೃಷ್ಣಯ್ಯಂಗಾರ್ಯರ ಸಂಗೀತ ಕಚೇರಿ ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು ಈ ಸಂಜೆ ಚಿಕ್ಕ ಸಂಗೀತ ವಿದ್ವಾನ್ ಆರ್ ಲಕ್ಷ್ಮಣನವರಿಂದ ಹಾಡುಗಾರಿಕೆ, ರಾತ್ರಿ ೯ ಘಂಟೆಗೆ ಶ್ರೀ [illegible] ರವರಿಂದ ಭಾರತ ವಾಚನ ಶ್ರೀ ವೆಂಕಟಸುಬ್ಬಯ್ಯನವರಿಂದ ವ್ಯಾಖ್ಯಾನಗಳು ನಡೆಯುವುವು

ಚಾಮುಂಡಿಪುರದ ಶ್ರೀ ಶಂಕರನಾರಾಯಣಸ್ವಾಮಿಯವರ ದೇವಾಲಯದಲ್ಲಿ ನಾಳೆ ರಾತ್ರಿ [illegible] ಗೆ ಶ್ರೀ ಎಲ್ ವಿಶ್ವನಾಥರವರ ಗಾಯನ [illegible] ಗಿದೆ

[illegible] ರಸ್ತೆ [illegible] ಬೃಂದಾವನದ ವೈಕುಂಠ ಶ್ರೀರಾಮ ಮಂದಿರದಲ್ಲಿ ನಾಳೆ ರಾತ್ರಿ [illegible] ಸಂಗೀತವುಂಟು

### ಸತ್ಯನಾರಾಯಣಸ್ವಾಮಿ ಪ್ರತಿಷ್ಠೆಯ ವಾರ್ಷಿಕೋತ್ಸವ

[illegible] ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿಯವರ ದೇವಾಲಯದಲ್ಲಿ ಎರಡು ವರ್ಷಗಳ ಹಿಂದೆ ಪ್ರತಿಷ್ಠೆಯಾದ ಶ್ರೀ ಸತ್ಯನಾರಾಯಣಸ್ವಾಮಿಯವರ ಎರಡನೇ ವಾರ್ಷಿಕೋತ್ಸವವು ಇದೇ [illegible] ನೇ ತಾ ನಡೆಯುವುದು ಅಂದು ಬೆಳಿಗ್ಗೆ [illegible] ಗಂಟೆಯಿಂದ [illegible] ರವರೆಗೆ ಮಹಾಭಿಷೇಕ ಪೂಜಾ ಮಂಗಳಾರತಿಗಳು ಜರುಗುವುವು ಭಕ್ತಾದಿಗಳು ಭಾಗವಹಿಸಬೇಕೆಂದು ಕೋರಲಾಗಿದೆ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು.

## ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮೇಲೆ ಕ್ರಮ

ಸರ್ಕಾರಿ ಜಾಹಿರಾತನ್ನು ಪತ್ರಿಕೆಗಳಿಗೆ ಕೊಡುವ ಬಗ್ಗೆ ಅಧಿಕಾರಿಗಳಿಗೆ ಕೊಡಲಾದ ರಹಸ್ಯ ಸೂಚನೆಯನ್ನು ಪ್ರಕಟಿಸಿದ ಸಂಬಂಧವಾಗಿ ಬೊಂಬಾಯಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮೇಲೆ ಕ್ರಮ ಕೈಗೊಳ್ಳಲು ಆಲೋಚಿಸುತ್ತಿರುವುದಾಗಿ ಅಲ್ಲಿನ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯಿಯವರು ತಿಳಿಸಿದ್ದಾರೆ ಆ ಪತ್ರಿಕೆಯೂ ಮತ್ತು ಅದಕ್ಕೆ ಸಂಬಂಧಿಸಿದ ಪತ್ರಿಕೆಗಳೂ ಸರ್ಕಾರವನ್ನು ಟೀಕಿಸುವ ಉದ್ದೇಶದಿಂದ ಕೂಡಿರುವುದಾಗಿಯೂ ಅದೆ ಕಾರಣ ಪತ್ರಿಕೆಗೆ ಸರ್ಕಾರಿ ಜಾಹಿರಾತನ್ನು ನಿಲ್ಲಿಸಲಾಯಿತೆಂದೂ ಅವರು ಹೇಳಿರುತ್ತಾರೆ

## ಮೋಟಾರಿನ ಪುಡಿ ಎರಚಿ ಹಣದ ಅಪಹಾರ

ಪೂನಾದ ಸಾಲಿಸ್‌ಬರಿ ಪಾರ್ಕ್ ಪೋಸ್ಟ್ ಆಫೀಸಿನಲ್ಲಿ ಪೋಸ್ಟ್ ಮಾಸ್ಟರ್ ಡ್ಯೂಟಿ ಇದ್ದಾಗ ಒಬ್ಬನು ಕೋಡುವಾರ ೧೦ ರೂ ನೋಟನ್ನು ಕೊಟ್ಟು ಸ್ಟಾಂಪನ್ನು ಕೇಳುವನೆಂದೂ, ಆ ಕೆಲಸದಲ್ಲಿ ತೊಡಗಿದ್ದಾಗ ಪೋಸ್ಟ್ ಮಾಸ್ಟರ ಕಣ್ಣಿಗೆ [illegible] ನುಮೆಣಸಿನಪುಡಿ ಎರಚಿ, [illegible] ರೂ ನಗದು ಮತ್ತು [illegible] ರೂ ಬೆಲೆಯ ಸ್ಟಾಂಪುಗಳನ್ನು ತೆಗೆದುಕೊಂಡು ಓಡಿಹೋದನೆಂದೂ ವರದಿಯಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಸುಬ್ಬುಲಕ್ಷ್ಮಿಯವರ ಸಂಗೀತ [illegible] ದಿಲ್ಲಿಯಿಂದ [illegible] ಗೀತೆಗಳು [illegible] ಮತ್ತು [illegible] ಸಂಗೀತ [illegible] ಗೀತೆ [illegible] ಗೀತಾ [illegible] ಸರಸ್ವತಿ, ಎಸ್ ಸುಬ್ಬಲಕ್ಷ್ಮಿಯವರ [illegible] ಗಾಯನ [illegible] ಕೃಷ್ಣಮೂರ್ತಿ [illegible] ವೀಣೆಯ

SRI GANESHA

TALKIES

From 26-3-53 For 3 days

MUTINY

(In Technicolor)

With —Mark Stevens

Special Morning Shows

On Sat 28 & Sun 29

at 10 a

For the Benefit of the

Students Sitting for

the Examination

MACBETH

ಒಲಂಪಿಯಾ ಟಾಕೀಸ್

[illegible]

[illegible]

ಆನ್

[illegible] ಪ್ರೊಡಕ್ಷನ್

[illegible]

ಬೆಳಗಿನ ಪ್ರದರ್ಶನ

[illegible]

ಸ್ವಪ್ನ ಮಹಲ್

[illegible]

[illegible]

[illegible]

* ತೀನ್ ಬತ್ತಿ ಚಾರ್ ರಸ್ತಾ *

[illegible]

[illegible]

ನಿರ್ಮಾಪಕ್, ನಿರ್ದೇಶಕರು -ವಿ ಶಾಂತಾರಾಮ್

27—3—53 ರಿಂದ ಪ್ರಾರಂಭ

ಮೈಸೂರು ಪ್ರಭಾ ಚಿತ್ರಮಂದಿರದಲ್ಲಿ

ದಿನವಹಿ ಮೂರು ಪ್ರದರ್ಶನಗಳು

[illegible] 27-3 ರಿಂದ 3 ದಿನಗಳು [illegible]

Edited, Printed and Published by A R Nagarajan at Sadhvi Press, D Subbiah Road, Mysore

ರಿಜಿ. ನಂ. 792 || ಬೆಂಗಳೂರು ನಾರಾಯಣ ಛಾಪಿಸಿ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಶುಕ್ರವಾರ ೨೬-೩-೧೯೫೩ [ ಸಂಚಿಕೆ ೦೯೩

# ಜಮ್ಮು ನ್ಯಾಯಾಧೀಶರ ಮೇಲೆ ದುಂಡಾವರ್ತಿ

## ಬಳ್ಳಾರಿಯ ವಿಭಜನ ಬಗ್ಗೆ ಪ್ರತಿಭಟನೆ

### ವಿದ್ಯಾರ್ಥಿಗಳ ಹರತಾಳ ಮತ್ತು ಪ್ರದರ್ಶನ

ಆಂಧ್ರ ಪ್ರಾಂತ್ಯದ ಸ್ಥಾಪನೆ ಬಗ್ಗೆ ಹಿಂದಿನ ಸರಕಾರದವರು ಹೊರಡಿಸಿರುವ ಘೋಷಣೆಯಲ್ಲಿ ಬಳ್ಳಾರಿ ಜಿಲ್ಲೆಯ ... ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸುವ ... ನ್ನು ಅಂಗೀಕರಿಸಿದ ... ಬಗ್ಗೆ ಪ್ರತಿಭಟಿಸಲು ... ದಿನ ಬಳ್ಳಾರಿಯ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಹರತಾಳವನ್ನಾಚರಿಸಿ ... ಬಳ್ಳಾರಿ ಜಿಲ್ಲೆಯ ... ದೀರ್ಘ ... ಘೋಷಿಸುತ್ತಾ ... ಘೋಷಣೆಗಳನ್ನು ... ಪ್ರದರ್ಶನ ... ಒಂದು ಗಂಟೆ ... ಅಧಿಕಾರಿಗಳು ... ನಂತರ ಸೈಲು ಹೊರಟಿತು.

ಬಳ್ಳಾರಿಯಲ್ಲಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳೂ ... ಸಂಸ್ಥೆಯ ಅಂಗಡಿಗಳೆಲ್ಲಾ ಮುಚ್ಚಿದ್ದುವು ... ಬಳ್ಳಾರಿ ಜಿಲ್ಲೆಯ ... ಶ್ರೀ ... ಕಾಂಗ್ರೆಸ್ಸು ... ಜಿಲ್ಲೆಯ ... ಕಾಂಗ್ರೆಸ್ ಸಮಿತಿ ... ದರಾಜೀನಾಮೆ ಕೊಟ್ಟಿದ್ದಾರೆ.

### ವೆಂಕಟಪ್ಪಯ್ಯ ಕಾರಾಗೃಹದಿಂದ ಬಿಡುಗಡೆ

ರಾಜಧಾನಿಯ ಅನ್ನ ಸತ್ಯಾಗ್ರಹದ ... ಸತ್ಯಾಗ್ರಹಿಗಳಾದ ಶ್ರೀ ವೆಂಕಟಪ್ಪಯ್ಯ ... ಶ್ರೀಯುತರು ನಿನ್ನೆ ರಾತ್ರಿ ೮ ಗಂಟೆಗೆ ... ಶ್ರೀ ... ಅವರೇ ... ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಲು ... ಶ್ರೀ ನಾರಾಯಣ ... ಶ್ರೀ ಹೆಚ್. ಕೆ. ಸಿದ್ಧಲಿಂಗಪ್ಪ ನವರು ... ಸತ್ಯಾಗ್ರಹವನ್ನು ಮುಂದುವರಿಸಿದರು.

### ಸಹಾಯಕ ರಜೆ

ರಾಜಧಾನಿಯ ಶ್ರೀ ... ಕೋ-ಆಪರೇಟಿವ್ ಸೊಸೈಟಿಯ ... ನಗರದ ... ಶ್ರೀ ಎಚ್. ಕೆ. ಕುಮಾರಸ್ವಾಮಿಯವರು ... ಕೆಲಸದಿಂದ ... ಅಸಿಸ್ಟೆಂಟ್ ರಿಜಿಸ್ಟ್ರಾರ ... ಶ್ರೀ ಜಿ ... ನವರು ... ಮಾಡಿದರು.

## ಹೆಚ್ಚು ಬೆಳೆ ಯೋಜನೆ ಬಗ್ಗೆ ಟೀಕೆ

### ಯೋಜನೆ ವಿಫಲವಲ್ಲವೆಂದು ವ್ಯವಸಾಯ ಸಚಿವರು

ಬೆಂಗಳೂರು ೨೫

ಹೆಚ್ಚು ಬೆಳೆ ಯೋಜನೆಗಾಗಿ ... ಸಂಸ್ಥಾನದಲ್ಲಿ ಸಮಿತಿಗಳನ್ನು ರಚಿಸಲಾಗುವುದೆಂದು ನಿನ್ನೆ ವಿಧಾನ ಸಭೆಯಲ್ಲಿ ... ಶ್ರೀ ... ತಿಳಿಸಿದರು.

ಹೆಚ್ಚು ಆಹಾರ ಬೆಳೆ ಯೋಜನೆಗಾಗಿ ಮೂರು ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದುದು ವ್ಯರ್ಥವಾಗಿಲ್ಲವೆಂದು, ವಿರೋಧ ಪಕ್ಷದ ನಾಯಕರಾದ ಶ್ರೀ ಜಿ. ಎಂ. ... ವರು ಮಾಡಿದ ಟೀಕೆಗೆ ವ್ಯವಸಾಯ ಶಾಖಾ ಸಚಿವ ಶ್ರೀ ... ಉತ್ತರವಿತ್ತರು.

... ವ್ಯವಸಾಯ ಅಭಿವೃದ್ಧಿಗಾಗಿ ... ರೂ. ಮತ್ತು ಗ್ರಾಮಾಭಿವೃದ್ಧಿ ಬಾಬಿಗಾಗಿ ... ರೂ. ಗಳ ಬೇಡಿಕೆಗಳಿಗೆ ಸಭೆಯು ಒಪ್ಪಿಗೆಯಿತ್ತಿತು.

### ಬಸ್ ರಾಷ್ಟ್ರೀಕರಣದ ಬಗ್ಗೆ

ಬಸ್ಸು ರಾಷ್ಟ್ರೀಕರಣದ ಬಗ್ಗೆ ನಿನ್ನೆ ವಿಧಾನ ಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಉತ್ತರವಿತ್ತು, ಈ ಶ್ರಮದಿಂದ ಮೊದಲು ಎರಡು ವರ್ಷಗಳಲ್ಲಿ ಲಾಭ ಬರಲಿಲ್ಲವೆಂದೂ, ಬಸ್ಸು ರಾಷ್ಟ್ರೀಕರಣ ಯೋಜನೆಯನ್ನು ವಿಸ್ತರಿಸುವ ಆಲೋಚನೆಯಿಲ್ಲವೆಂದೂ, ... ಆದಷ್ಟು ಬೇಗ ... ಕೆಂದೂ ಅವರು ಹೇಳಿದರು.

## ಈ ವರ್ಷಾಂತ್ಯದಲ್ಲಿ ಅಕ್ಕಿಯ ಆಮದು ನಿಲ್ಲುವುದು

ಭಾರತದಲ್ಲಿ ಭತ್ತದ ಬೆಳೆಯು ಉತ್ತಮಗೊಂಡಿರುವುದರಿಂದ ಅಕ್ಕಿಯ ಸಂಗ್ರಹಣೆಯು ತೃಪ್ತಿಕರವಾಗಿರುವುದೆಂದೂ ಈ ವರ್ಷಾಂತ್ಯದ ವೇಳೆಗೆ ನಮ್ಮ ದೇಶವು ಅಕ್ಕಿಯ ವಿಷಯದಲ್ಲಿ ಸ್ವಯಂ ಪರಿಪೂರ್ಣಗೊಂಡು ದೇಶಕ್ಕೆ ಅಕ್ಕಿಯ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದೆಂದೂ ಕೇಂದ್ರ ಆಹಾರ ಸಚಿವ ... ಯವರು ಬೊಂಬಾಯಿಯಲ್ಲಿ ತಿಳಿಸಿರುವರು.

## ಜಮ್ಮು ನ್ಯಾಯಾಧೀಶರ ಮೇಲೆ ದುಂಡಾವರ್ತಿ

### ಪ್ರಜಾ ಪರಿಷತ್ತಿನವರ ಚಳುವಳಿ

ಜಮ್ಮುವಿನ ಸರ್ಕಾರೀ ಭವನದಲ್ಲಿ ನಿನ್ನೆ ಸಮಾವೇಶಗೊಂಡಿದ್ದ ಕಾಶ್ಮೀರದ ಶಾಸನ ಸಭೆಯ ಅಧಿವೇಶನದ ವೇಳೆಯಲ್ಲಿ ಜಮ್ಮು ಪ್ರಜಾ ಪರಿಷತ್ತಿನವರು ಸಭಾ ಭವನದೊಳಕ್ಕೆ ನುಗ್ಗಲು ಪ್ರಯತ್ನಿಸಿದರೆಂದೂ, ಪರಿಸ್ಥಿತಿಯು ಉಲ್ಬಣಿಸಿದ್ದರಿಂದ ಗುಂಪಿನವರನ್ನು ಚದುರಿಸಲು ಪೋಲೀಸರು ಮೂರು ಬಾರಿ ಗುಂಡು ಹಾರಿಸಿದರೆಂದೂ ವರದಿಯಾಗಿದೆ.

ಒಬ್ಬನಿಗೆ ಗಾಯವಾಗಿದೆ. ಪ್ರದರ್ಶಕರು ಕಲ್ಲು ತೂರಿದ ಪರಿಣಾಮವಾಗಿ ೨೨ ಮಂದಿ ಪೋಲೀಸರಿಗೆ ಗಾಯಗಳಾಗಿ ನಾಲ್ಕರ ಸ್ಥಿತಿಯು ಕಳವಳಕರವಾಗಿರುವುದೆಂದು ಹೇಳಲಾಗಿದೆ. ಜಮ್ಮು ನಗರ ನ್ಯಾಯಾಧೀಶರ ಮೇಲೆ ಪ್ರದರ್ಶಕರು ದುಂಡಾವರ್ತಿ ನಡೆಸಿ ಅವರ ಬಟ್ಟೆಯನ್ನು ಹರಿದು, ಹೊಡೆದು ಮತ್ತು ಕಾಲಿನ ಮೇಲೆ ಬಲವಾಗಿ ಗಾಯಗೊಳಿಸಿದರೆಂದೂ ರಕ್ಷಣೆಗಾಗಿ ಅವರು ಅಂಗಡಿಯೊಂದರಲ್ಲಿ ಸೇರಿಕೊಳ್ಳಲು ಅಲ್ಲಿದ್ದವರೆಲ್ಲರ ಮುಖ ... ಎಲ್ಲಾ ... ಕ್ವೀಲ್ ... ಪ್ರಯತ್ನ ನಡೆದಾಗ ಗುಂಡು ಹಾರಿಸಲಾಯಿತೆಂದೂ ಸರ್ಕಾರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಶಾಸನ ಸಭಾ ಭವನದ ಸುತ್ತ ರಕ್ಷಣೆ ... ಯ ಕಾವಲು ಹಾಕಲಾಗಿದೆ.

## ಶ್ರೀಕಂಠೇಶ್ವರಸ್ವಾಮಿ ರಥದ ಕಳಸ ಮುರಿಯಿತು

ನಂಜನಗೂಡು ೨೫

ಇಲ್ಲಿ ಈ ದಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪಂಚ ರಥೋತ್ಸವದ ಸಂದರ್ಭದಲ್ಲಿ ಸ್ವಾಮಿಯವರ ತೇರು ಬೆಳಿಗ್ಗೆ ೯ ಗಂಟೆ ಹೊತ್ತಿಗೆ ... ಸ್ಟೇಷನ್ ಹತ್ತಿರ ಬಂದಾಗ ರಥದ ಒಂದು ಚಕ್ರದ ಕಡಾಣೆಯು ಮುರಿದುಹೋಯಿತು. ಮೈಸೂರು ಜಿಲ್ಲಾಧಿಕಾರಿಗಳೂ, ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರೂ ಸ್ಥಳಕ್ಕೆ ಹೋಗಿ ಅದನ್ನು ಸರಿಪಡಿಸಿ ರಥವು ಮುಂದಕ್ಕೆ ಚಲಿಸಲು ಸೂಕ್ತ ವ್ಯವಸ್ಥೆ ಮಾಡಿದರು. ... ವರ್ಷವೂ ... ರಥೋತ್ಸವ ...

## ಸ್ವ ಸ್ಥಳಗಳಿಗಾಗಿ ವರ್ಷಕ್ಕೆ ೨೫ ಲಕ್ಷ ರೂ. ಗಳು

### ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಬೆಂಗಳೂರು ೨೫

ಸಂಸ್ಥಾನದಲ್ಲಿ ಒಟ್ಟು ... ಕಟ್ಟಡಗಳಿಗಾಗಿ ಸರ್ಕಾರಕ್ಕೆ ಪ್ರತಿ ವರ್ಷವೂ ... ರೂ. ಗಳು ಖರ್ಚು ... ಶ್ರೀ ಎ. ಜಿ. ರಾಮಚಂದ್ರರಾಯರು ಈ ದಿನ ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ಸಂಸ್ಥಾನದ ... ಸರಕಾರಿ ಸಂಸ್ಥೆಗಳು ... ಇವುಗಳಿಗಾಗಿ ... ರೂ. ಗಳನ್ನು ... ಸಂಸ್ಥೆ ... ಜಿಲ್ಲಾ ... ಶ್ರೀ ... ಉತ್ತರ ... ವಿತ್ತರು.

... ೨,೫೮,೦೩,೪೩೨ ರೂ. ... ಬಂದಿರುವುದಾಗಿಯೂ ... ೧೫,೦೦೦ ... ಲಕ್ಷ ರೂ. ... ಬಂದಿರುವುದಾಗಿಯೂ ಇಂದು ವಿಧಾನ ಸಭೆಯಲ್ಲಿ ... ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

### ರಹದಾರಿ ಇಲ್ಲದೆ ರೇಡಿಯೋ ಇಟ್ಟುಕೊಂಡುದಕ್ಕೆ ಶಿಕ್ಷೆ

ರಾಜಧಾನಿಯ ಕಬ್ಬನ್‌ಪೇಟೆ ಶ್ರೀ ಟಿ. ತಿಮ್ಮಯ್ಯ ಎಂಬವರು ರಹದಾರಿ ಇಲ್ಲದೆ ರೇಡಿಯೋ ಇಟ್ಟುಕೊಂಡಿದ್ದರಿಂದ ರೇಡಿಯೋ ಇನ್ಸ್‌ಪೆಕ್ಟರ್ ಶ್ರೀ ಕೆ. ಎಲ್. ರಾಮಕೃಷ್ಣಯ್ಯನವರು ಹೂಡಿದ್ದ ಮೊಕದ್ದಮೆಯಲ್ಲಿ ನಿನ್ನೆ ನಗರ ನ್ಯಾಯಾಧೀಶರು ಆಪಾದಿತರಿಗೆ ... ರೂ. ಜುಲ್ಮಾನೆ, ತಪ್ಪಿದರೆ ಒಂದು ವಾರ ಸಾದಾ ಸಜಾ ಶಿಕ್ಷೆ ವಿಧಿಸಿದರು.

### ಎಂ. ಎಲ್. ತಿಮ್ಮಯ್ಯನವರ ಮೇಲೆ ಕ್ರಮ

ಮೈಸೂರು ಸಂಸ್ಥಾನದ ಫುಟ್‌ಬಾಲ್ ಅಸೋಸಿಯೇಷನ್ನಿನ ಮೈಸೂರಿನ ಸಮಿತಿಯ ಸಭೆಯು ನಿನ್ನೆ ಬೆಳಿಗ್ಗೆ ಸೇರಿ ಮೈಸೂರು ಬ್ಲ್ಯಾಕ್ ಫುಟ್‌ಬಾಲ್ ಕ್ಲಬ್ಬಿನ ಕಾರ್ಯದರ್ಶಿಯವರಾದ ಶ್ರೀ ಎಂ. ಎಲ್. ತಿಮ್ಮಯ್ಯನವರನ್ನು ಸಮಿತಿಯ ಸದಸ್ಯತನದಿಂದ ವಜಾ ಮಾಡತಕ್ಕದ್ದೆಂದೂ ಮತ್ತು ವರ್ತಮಾನ ಪತ್ರಿಕೆ ... ವೇಳೆ ಕೋರ್ಟಿನಲ್ಲಿ ಕ್ರಮ ಜರುಗಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು.

### ಬಳ್ಳಾರಿಯ ೬ ತಾಲ್ಲೂಕುಗಳ ಆಡಳಿತಕ್ಕೆ ಮೈಸೂರು ಅಧಿಕಾರಿ

ಮೈಸೂರಿಗೆ ಸೇರಿಸಲು ನಿರ್ಧರಿಸಲಾಗಿರುವ ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕುಗಳ ಪರಿಸ್ಥಿತಿ ಮತ್ತು ಆಡಳಿತ ಕ್ರಮಗಳನ್ನು ಪರಿಶೀಲಿಸಲು ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ. ... ಯವರನ್ನು ನೇಮಿಸಲಾಗುವುದೆಂದು ಹೇಳಲಾಗಿದೆ.

ಪವ ... ವೇಳೆಯಲ್ಲಿ ಅದೇ ಕಾರಿನ ... ಸ್ವಾಮಿಯವರ ರಥದ ... ಮುರಿದು, ... ತಿಂಗಳ ಕಾಲ ತೇರು ಅಲ್ಲೇ ನಿಂತಿತ್ತು.

## ಶೃಂಗೇರಿ ಸಮಾರಂಭದ ಕಾರ್ಯಕ್ರಮಗಳು

ಶೃಂಗೇರಿ ಕ್ಷೇತ್ರದಲ್ಲಿ ಶ್ರೀ ಶಾರದಾ ಚಂದ್ರಮೌಳೀಶ್ವರ ಮತ್ತು ಜಗದ್ಗುರು ಮಹಾ ಸ್ವಾಮಿಗಳವರ ಸನ್ನಿಧಿಯಲ್ಲಿ ಬರುವ ತಿಂಗಳು ೨ನೇ ತಾ|| ಗುರುವಾರ ಆರಂಭವಾಗುವ ಅತಿ ರುದ್ರ, ಮತ್ತು ಸಹಸ್ರ ಚಂಡಿಕಾ ಹವನಾದಿ ಸತ್ಕರ್ಮಗಳ ಕಾರ್ಯಕ್ರಮವು ಈ ರೀತಿ ಇರುತ್ತದೆ —

೨ನೇ ತಾ|| ಗಣಪತಿ ಪ್ರಾರ್ಥನೆ, ಗುರುದೇವತಾ ಸಂದರ್ಶನ, ಶಾಲಾ ಪ್ರವೇಶ, ಮಹಾ ಸಂಕಲ್ಪ ಸ್ವಸ್ತಿ ವಾಚನ ಮಾತೃಕಾ ಪೂಜೆ, ಋತ್ವಿಗ್ವರಣ, ಮಂಟಪ ಪ್ರತಿಷ್ಠಾದಿಗಳು

೩ನೇ ತಾ|| ಗಣಪತಿ ಹವನ, ನವಗ್ರಹ ಯಜ್ಞ, ಕಲಶ ಪ್ರತಿಷ್ಠೆ, ಸಹಸ್ರ ಚಂಡಿ ಪುರಶ್ಚರಣಾರಂಭ, ಅತಿರುದ್ರ ಆರಂಭ

೪ನೇ ತಾ|| ನಿಂದ ೭ ದಿನಗಳು ಸಹಸ್ರ ಚಂಡೀ ಪುರಶ್ಚರಣ ಅತಿ ರುದ್ರ ಜಪ

೭ನೇ ತಾ|| ಶ್ರೀ ಸಹಸ್ರ ಚಂಡಿಕಾ ಮಹಾ ಯಾಗ ಪೂರ್ಣಾಹುತಿ, ಅತಿರುದ್ರ ಜಪ

೮ನೇ ತಾ|| ಅತಿ ರುದ್ರ ಜಪ, ಮಹಾ ಮೃತ್ಯುಂಜಯ ಹೋಮ ಮತ್ತು ಗಾಯತ್ರೀ ಹೋಮ, ಪೂರ್ಣಾಹುತಿ

೯ನೇ ತಾ|| ಶ್ರೀ ಅತಿರುದ್ರ ಹೋಮ, ಪೂರ್ಣಾಹುತಿ ಪ್ರಸಾದ ವಿನಿಯೋಗ

ದೇವತಾ ಸೇವೆಗಳಿಗೆ ಪ್ರತ್ಯೇಕ ಸೌಕರ್ಯವನ್ನು ಏರ್ಪಡಿಸಲಾಗಿದೆ ಆದ್ದರಿಂದ ಭಕ್ತರು ಈ ಮಹಾಕಾರ್ಯಕ್ಕಾಗಿ ಉದಾರ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ

### ಸೈಕಲ್ ಕಳುವು ಪತ್ತೆ

ಚಾಮರಾಜನಗರದ ಸಮಾಚಾರ: ಮೊನ್ನೆ ಕಳೆದ ೯ ನೇ ತಾ|| ಆಲ್ಲಿನ ಬಸ್ ಸ್ಟ್ಯಾಂಡ್ ಬಳಿ ಇರುವ ಸೈಕಲ್ ಷಾಪಿನಲ್ಲಿ ಒಂದು ಬೈಸಿಕಲ್ಲನ್ನು ಅಕ್ರಮವಾಗಿ ತೆಗೆದುಕೊಂಡುಹೋಗಿ, ಅದನ್ನು ಕಳಚಿದುದಲ್ಲದೆ, ಅದರ ಭಾಗಗಳ ಸ್ವಲ್ಪ ಕೆಲವನ್ನು ಮಾರಾಟ ಮಾಡಲು ಬಂದಾಗ ಅವರಿಗೆ ಸಂದೇಹ ಬಂದು ಪೋಲೀಸರಿಗೆ ತಿಳಿಸಲಾಗಿ ಅವರು ಅತನಿಂದ ಬೈಸಿಕಲ್ಲಿನ ಭಾಗಗಳನ್ನು ಮಾಲೀಕರಿಗೆ ಕೊಡಿಸಿಕೊಟ್ಟರೆಂದು ವರದಿಯಾಗಿದೆ

## ಶ್ರೀ ರಾಮೋತ್ಸವ ಕಾರ್ಯಕ್ರಮಗಳು

ರಾಜಧಾನಿಯಲ್ಲಿ ಶ್ರೀ ರಾಮೋತ್ಸವದ ಸಂಬಂಧವಾಗಿ ಸಂತೇಪೇಟೆ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ೮|| ಟ ಪುಟ್ಟಸ್ವಾಮಯ್ಯನವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

ಚಾಮುಂಡಿಪುರದ ಶ್ರೀ ಶಂಕರನಾರಾಯಣಸ್ವಾಮಿ ದೇವಾಲಯದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ಎಂ ಎಲ್ ನಾರಾಯಣದಾಸರಿಂದ ಹರಿಕಥೆಯು ಏರ್ಪಾಡಾಗಿದೆ

ಇರ್ವಿನ್ ರಸ್ತೆಯ ಶ್ರೀ ತುಳಸೀ ಬೃಂದಾವನದ ವೈಕುಂಠ ಶ್ರೀ ರಾಮ ಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ [illegible] ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ರುಕ್ಮಿಣಿ ಕಲ್ಯಾಣ ಯಕ್ಷಗಾನವು ನಡೆಯುವುದು

ಶಿವರಾಂಪೇಟೆಯಲ್ಲಿರುವ [illegible] ವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೯-೩೦ ಘಂಟೆಗೆ ಸರಿಯಾಗಿ ಆಸ್ಥಾನ ವಿದ್ವಾನ್ ಎಸ್ ಎಂ ಮರಿಯಪ್ಪನವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

### ವಿವಾಹ ಮಹೋತ್ಸವ

ರಾಜಧಾನಿಯ ಜವಳಿ ವ್ಯಾಪಾರಿಗಳಾದ ಎಂ ಕೆ ಮಾಧವರಾವ್ ಪವಾರ್‌ರವರು ತಮ್ಮ ಹಿರಿಯ ಪುತ್ರ ಶ್ರೀ ಎಂ ಎ ಸದಾಶಿವರಾವ್ ಪವಾರ್‌ರವರಿಗೆ, [illegible] ಗಳೂರಿನ ಶ್ರೀ ಎ ರಾಮಚಂದ್ರರಾವ್ ನೋರ್ವೆಯವರ ಮಗಳು ಶ್ರೀಮತಿ ವಿಮಲಾಬಾಯಿಯವರನ್ನು ತಂದುಕೊಂಡು ಕಳೆದ ಭಾನುವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

### ಗ್ರಾಮಪಂಚಾಯಿತಿಗೆ ಮುಖಂಡರ ಭಾವ ಚಿತ್ರಗಳು

ಭಾರತ ಸರ್ಕಾರದ ಉತ್ಪನ್ನ ಶಾಖೆಯ ಮಾನ್ಯ ಸಚಿವ ಶ್ರೀ ಕೆ ಸಿ ರೆಡ್ಡಿಯವರು ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮ ಪಂಚಾಯಿತಿಗಾಗಿ ರಾಷ್ಟ್ರಪತಿ ಉಪ ರಾಷ್ಟ್ರಪತಿ ಮತ್ತು ಪ್ರಧಾನ ಸಚಿವರ ಭಾವಚಿತ್ರಗಳನ್ನು ದೆಹಲಿಯಿಂದ ಕಳುಹಿಸಿರುವರೆಂದು ಪಂಚಾಯಿತಿ ಅಧ್ಯಕ್ಷರಾದ ಶ್ರೀ ವೀರಪ್ಪಯ್ಯನವರು ತಿಳಿಸಿರುತ್ತಾರೆ

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಆಣೆ | ರೂ ಗೆ |
|---|---|---|
| ಅಕ್ಕಿ [illegible] | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೇಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | |
| ಕಡಲೆಕಾಯಿ | [illegible] | [illegible] |
| ಉದ್ದು | [illegible] | |
| ಸಾಮಾನ್ಯ [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| ಬೆಲ್ಲ | [illegible] | |
| [illegible] | [illegible] | [illegible] |

## ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕಲ್ಯಾಣ ವಿದ್ಯಾಸ್, [illegible] ಮಧ್ಯಾಹ್ನ ೧ ೪೦ ಗೋಷ್ಠಿವಾದ್ಯ [illegible] ಸಂಜೆ ೫.೪೦ [illegible] ಸಂಗೀತ [illegible] ಶ್ರೀ [illegible] ರಾತ್ರಿ ೭ ೩೦ [illegible]

### ಉಪನಯನ ಮಹೋತ್ಸವ

ಶಿವಮೊಗ್ಗದಲ್ಲಿರುವ ಜಮೀನ್ದಾರರೂ ಮತ್ತು ಬ್ಯಾಂಕರರೂ ಆದ ಶ್ರೀ [illegible] ನಾರಾಯಣಪ್ಪನವರು ತಮ್ಮ ಚತುರ್ಥ ಪುತ್ರ, ಚಿ|| ಸೀತಾರಾಮುವಿಗೆ ಮೊನ್ನೆ ಬ್ರಹ್ಮೋಪದೇಶವನ್ನು ನೆರವೇರಿಸಿದರು


# We Are Living in an Age when ALL ROADS LEAD TO COMMUNISM

READ THESE BOOKS

1) JOSEPH STALIN – A Short Biography Pages 207 Rs 0-9-0
Prepared by the Marx Engels Lenin Institute, Moscow

2) THE STATE & SOCIAL STRUCTURE OF U S S R Pages 240 Rs 0 9 0
A Brilliant exposition of the Constitution of Soviet Russia

3) HISTORY OF THE COMMUNIST PARTY OF THE SOVIET UNION Pages 563 Rs 1 2 0

4) ON COMMUNIST EDUCATION By Kalinin- Late President of U S S R Pages 418 Rs 0-12 0
A Guide to the training given to Soviet Youth

5) SELECTED WORKS OF V I LENIN In Four Volumes, over 1500 pages Rs 7 8 0

6) WHY WAR IN KOREA Is BEING DRAGGED ON by A Y Vyshinsky Pages 175 Rs 0-5-0
Read this & [illegible] why the Indian Resolution on Korea (the Menon Plan) was rejected

Also available Soviet novels in beautiful [illegible] Kannada Publications of India-China Friendship Association Stamps & Photos from Russia [illegible]

LIBERAL DISCOUNT TO TRADE AGENTS

Contact or Visit : PEOPLES BOOK HOUSE 158 Dewan's Road Mysore



# SRI GAYATHRI

TALKIES
From 27 3 53
M G M's
## RIO RITA
With Bud Abbot Lou Costello
COMING —
BELVEDERE RINGS THE BELL


Edited Printed and Published by A R Nagarajan at Sadhvi Press, D Subbiah Road Mysore

27-3 53 ರಿಂದ ರಾಜಕಮಲ್ ಚಿತ್ರ ಮಂದಿರದಲ್ಲಿ
2 ನೇ ವಾರ ::
ಅರುಣಾರವರ ತಮಿಳು ಚಿತ್ರ
★ ಗುಮಾಸ್ತ ★
# GUMASTHA
ನಾಗಯ್ಯ-ಜಯಮ್ಮ,ಪಂಡರಿಬಾಯಿ, ಮನೋಹರ್
[ A PRAKASH RELEASE

ಹೋ॥ ನಂ 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಶನಿವಾರ ೨೮-೩-೧೯೫೩ [ ಸಂಚಿಕೆ ೧೯೬

# ಮೌ ಮೌ ಜನರಿಂದ -೨೦೦ ಜನರ ಕೊಲೆ-

## ಏಪ್ರಿಲ್ ೧೩ ಕ್ಕೆ ಸಾರ್ವತ್ರಿಕ ಅನ್ನ ಸತ್ಯಾಗ್ರಹ

ಮೈಸೂರು ೨೮

ರಾಜಧಾನಿಯ ಆಹಾರ ಕ್ರಿಯಾ ಸಮಿತಿಯ ವಿಶೇಷ ಸಭೆಯು ನೆನ್ನೆ ನಡೆದು ಅನ್ನ ಸತ್ಯಾಗ್ರಹವನ್ನು ತೀವ್ರವಾಗಿ ಮುಂದುವರಿಸುವ ತೀರ್ಮಾನ, ಇದಕ್ಕಾಗಿ ಕ್ರಿಯಾ ಸಮಿತಿಯ ಸದಸ್ಯರನ್ನು ಶಿಬಿರಾಧಿಕಾರಿಗಳಾಗಿ ನೇಮಿಸಬೇಕೆಂದೂ, ಸಾರ್ವಜನಿಕರ ಸಹಾಯದಿಂದ ರಾಜಧಾನಿಯ ನಾಗರಿಕರೆಲ್ಲರೂ ಏಪ್ರಿಲ್ ೧೩ ನೇ ತಾ॥ ಬೆಳಿಗ್ಗೆಯಿಂದ ಸಂಜೆಯವರೆಗೆ ಅನ್ನ ಸತ್ಯಾಗ್ರಹ ಮತ್ತು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕೆಂದು ನಿರ್ಧರಿಸಲಾಯಿತು

ಈ ಸಂಜೆ ೬-೩೦ ಕ್ಕೆ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ ೧೪ ನೇ ತಂಡದವರ ಉಪವಾಸವು ನಾಳೆ ಪ್ರಾರಂಭವಾಗುವುದು ಅವರ ಸ್ಥಳದಲ್ಲಿ ಶ್ರೀಗಳಾದ ಜಿ. ಸ್ವಾಮಿದಾಸ್, ಅಲ್ ನಾಯಿಡು ಮತ್ತು ದಿವ್ಯಸ್ವರೂಪಿಗಳ ಉಪವಾಸವನ್ನು ಆರಂಭಿಸುವರು

### ಸಿಮೆಂಟ್ ಬ್ಲಾಕ್ ಬಾಲಕರ ಶ್ರೀ ರಾಮ ಮಂದಿರ

ರಾಜಧಾನಿಯ ಸಿಮೆಂಟ್ ಬ್ಲಾಕ್ ೩ ನೇ ರಸ್ತೆಯ ೯೨೬ ನೇ ನಂಬರ್ ಮನೆಯ ಬಳಿ ಬಾಲಕರ ಶ್ರೀ ರಾಮ ಮಂದಿರದವರಿಂದ ರಾಮೋತ್ಸವ ಕಾರ್ಯಕ್ರಮಗಳು ಇಂದಿನಿಂದ ಏರ್ಪಾಡಾಗಿವೆ ಭಕ್ತಾದಿಗಳು ಉದಾರ ಸಹಾಯ ನೀಡಬೇಕೆಂದು ವ್ಯವಸ್ಥಾಪಕರ ಕೋರಿರುತ್ತಾರೆ

### ನಾಳೆ ನೀರು ಇಲ್ಲವುದು

ನಾಳೆ ವಿವಸಸಮುದ್ರದಲ್ಲಿ ಕಾಮಗಾರಿ ನಲಕದ ಪ್ರಯುಕ್ತ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗುವುದರಿಂದ, ಆ ದಿವಸ ಬೆಳಿಗ್ಗೆ ೮ ಘಂಟೆಯಿಂದ ಮಧ್ಯಾಹ್ನ ೪ ಘಂಟೆಯವರೆವಿಗೆ ರಾಜಧಾನಿಯಲ್ಲಿ ನೀರಿನ ಸರಬರಾಜು ಇರುವುದಿಲ್ಲ ಆದ್ದರಿಂದ ನಗರ ನಿವಾಸಿಗಳು ಈ ದಿವಸವೇ ಸಾಕಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳಬೇಕಾಗಿ ವಾಟರ್ ವರ್ಕ್ಸ್‌ನವರು ತಿಳಿಯಪಡಿಸಿರುತ್ತಾರೆ

## ಮಾವೌ ಮಾವೌ ಕಾಡು ಜನರಿಂದ ೨೦೦ ಮಂದಿಯ ಕೊಲೆ

ದಕ್ಷಿಣ ಆಫ್ರಿಕದ ನೈರೋಬಿ ಬಳಿ ಆಫ್ರಿಕನ್ ಕಿಕಾಯು ಜನಾಂಗದವರು ವಾಸಿಸುವ ಪ್ರದೇಶದಲ್ಲಿ ನೆನ್ನೆ ಮಧ್ಯರಾತ್ರಿ ವೇಳೆಯಲ್ಲಿ ಮಾವೌ ಮಾವೌ ಕಾಡು ಜನರು ಅಮಾನುಷ ರೀತಿಯಲ್ಲಿ ಕೊಲೆ ಲೂಟಿ, ದೊಂಬಿಗಳನ್ನು ನಡೆಸಿದ ಪರಿಣಾಮವಾಗಿ ೨೦೦ ಜನರು ಮೃತರಾದರೆಂದು ವರದಿಯಾಗಿದೆ ಮಾವೌ ಮಾವೌ ಜನರು ಈ ಕೃತ್ಯದಲ್ಲಿ ಗುಂಡು ಹಾರಿಸಿ ಹೆಂಗಸರು ಮಕ್ಕಳೆಂಬ ತಾರತಮ್ಯವಿಲ್ಲದೆ ಹಿಂಸಿಸುತ್ತಾ ಕತ್ತರಿಸಿದರೆಂದೂ ಕೇಳಲಾಗಿದೆ ಗಲಭೆಕಾರರು ಪ್ರವಾಹಾ ಎಂ. ಪಟ್ಟಣದ ಪೋಲೀಸ್ ಠಾಣೆಯ ಮೇಲೆ ಧಾಳಿ ನಡೆಸಿ, ೨ ಮಂದಿ ಆಫ್ರಿಕನ್ ಪೋಲೀಸರನ್ನು ಕೊಂದು, ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಿದರು ಭವನವೊಂದಕ್ಕೆ ನುಗ್ಗಿ ಎಲ್ಲರನ್ನೂ ಸಂಹರಿಸಿದರು ಕಿಕಾಯುಗಳು ಅವರ ಗುಡಿಸಲುಗಳಲ್ಲೇ ಸುಟ್ಟಿಟ್ಟರು

## ಸಂಸ್ಥಾನದಲ್ಲಿ ಪೂರ್ಣವಾಗಿ ಧಾನ್ಯದ ಚೆಕ್‌ಪೋಸ್ಟ್ ರದ್ದು

ಬೆಂಗಳೂರು ೨೮

ಈಗ ಕೃಷಿ ಒಪ್ಪಂದ ಪಡಿತರವು ಜಾರಿಯಲ್ಲಿರುವ ಬೆಂಗಳೂರ ದಾವಣಗೆರೆ ಮತ್ತು ಚಿನ್ನದಗಣಿ ನಗರಗಳಲ್ಲೂ ಸಹ ಸರ್ಕಾರದವರು ಸಧ್ಯದಲ್ಲೇ ಧಾನ್ಯದ ಪಡಿತರ ಮತ್ತು ಚೆಕ್‌ಪೋಸ್ಟ್‌ಗಳನ್ನು ರದ್ದು ಮಾಡಿ ಫೇರ್ ಪ್ರೈಸ್ ಅಂಗಡಿಗಳನ್ನು ತೆರೆಯಲಿರುವರೆಂದು ವರದಿಯಾಗಿದೆ

### ವಿಶ್ವವಿದ್ಯಾಲಯದ ಲೈಬ್ರೇರಿಯನ್

ಅಸಿಸ್ಟೆಂಟ್ ರಿಜಿಸ್ಟ್ರಾರ್ ಆದ ಶ್ರೀ ಕೆ ಎಸ್ ವೆಂಕಟರಾಮಯ್ಯನವರನ್ನು ವಿಶ್ವವಿದ್ಯಾನಿಲಯದ ಲೈಬ್ರೇರಿಯನ್ನರಾಗಿ ನೇಮಿಸಲಾಗಿದೆ

### ಪಾಕಿಸ್ತಾನದ ಸಿಂಧಿನಲ್ಲಿ ಬಿಕ್ಕಟ್ಟು

ಖುರ್ರೋ ಅವರ ರಾಜೀನಾಮೆಗೆ ಒತ್ತಾಯ

ಪಾಕಿಸ್ತಾನದ ಪ್ರಾಂತೀಯ ಮಂತ್ರಿಮಂಡಲದ ಖುರ್ರೋ ರಾಜೀನಾಮೆ ಕೊಡಬೇಕೆಂದು ಸಿಂಧ್ ಪ್ರಾಂತ್ಯದ ಮುಸ್ಲಿಂ ಲೀಗಿನ ಪಾರ್ಲಿಮೆಂಟರಿ ಸಮಿತಿಯ ಅಧ್ಯಕ್ಷರಾದ ಎಂ ಎ ಖುರ್ರೋರವರನ್ನು ವಜಾ ಮಾಡಿ ಹೊರಡಿಸಿದ ಆಜ್ಞೆಯನ್ನು ಖುರ್ರೋರವರು ಉಲ್ಲಂಘಿಸಿ ಅಧ್ಯಕ್ಷ ಪದವಿಯಿಂದ ಹೊರಬರಲು ನಿರಾಕರಿಸಿ ಹೊಸದಾಗಿ ಅಧ್ಯಕ್ಷರಾಗಿ ಚುನಾಯಿತರಾಗಿರುವ ಕಾಜಿ ಫಜಲುಲ್ಲಾ ಎಂಬುವರಿಗೆ ಅಧಿಕಾರವನ್ನು ಬಿಟ್ಟುಕೊಡಲು ತಿರಸ್ಕರಿಸಿರುವರೆಂದು ವರದಿಯಾಗಿದೆ ಬರುವ ಮೇ ತಿಂಗಳು ೨ ನೇ ತಾ॥ ನಡೆಯಲಿರುವ ಸಿಂಧ್ ಪ್ರಾಂತ್ಯದ ಶಾಸನ ಸಭಾ ಚುನಾವಣೆಗೆ ಖುರ್ರೋರವರ ಉಮೇದುವಾರಿಕೆ ಅರ್ಜಿ ಮತ್ತು ಕಲ್ಪನೆಯನ್ನು ಸ್ವೀಕರಿಸುತ್ತಿರವರೆಂದೂ ಇವರಿಂದ ಪಕ್ಷದ ರಾಜಕೀಯದಲ್ಲಿ ಬಿಕ್ಕಟ್ಟು ಸಂಭವಿಸಿದ ವುದೆಂದು ಹೇಳಲಾಗಿದೆ ಈ ಪರಿಸ್ಥಿತಿಯು ಈ ಚುನಾವಣೆಯನ್ನು ಮುಂದುವರಿಸುವ ಸಂಭವವಿರುವುದಾಗಿಯೂ ಭಾವಿಸಲಾಗಿದೆ

ಸಿಂಧಿನ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯು ನೆನ್ನೆ ಬೆಳಿಗ್ಗೆ ಸಮಾವೇಶಗೊಂಡು ಖುರ್ರೋರವರನ್ನೇ ಮತ್ತೆ ಲೀಗಿನ ಅಧ್ಯಕ್ಷರನ್ನಾಗಿ ಚುನಾಯಿಸಿತು

## ಮಹಾರಾಜರ ಆಸ್ತಿಗಳ ಮೇಲೆ ತೆರಿಗೆ

### ಶಾಸನ ಸಭೆಯ ಅಂಗೀಕಾರ

ಸ್ವಂತ ವರದಿಗಾರರಿಂದ] ಬೆಂಗಳೂರು ೨೮

ಮನೆ ಬಾಡಿಗೆ ಮತ್ತು ಸ್ಥಳ ಪರಿಹಾರ ಮೊದಲಾದ ನಾನಾಸಗಳ ಶಾಸನ ಅಂಗೀಕಾರ ಶ್ಯಾಸಕ ಶಾಸನ, ಮುಂಬಯಿ ಮೈಸೂರು ಮತ್ತು ಪ್ರದೇಶಗಳ ತಿದ್ದುಪಡಿ ಮಸೂದೆಗಳಿಗೆ ಒಪ್ಪಿ ಮೈಸೂರು ಶಾಸನ ಸಭೆಯು ಈ ದಿನ ಅಂಗೀಕಾರ ನೀಡಿತು ಶ್ರೀಮನ್ಮಹಾರಾಜರವರ ಆಸ್ತಿಗಳ ಮೇಲೆ ತೆರಿಗೆ ವಿಧಿಸುವ ಶಾಸನ ಮಸೂದೆಯ ಹಲವು ತಿದ್ದುಪಡಿಗಳನ್ನು ಸೇರಿಸಲಾಗಿದೆ

ದಾವಣಗೆರೆ ಬಳಿ ರೈಲ್ವೆ ಮಾರ್ಗ ಕಡಿತದ ... ಬಳಿ ... ದಾಗುತ್ತಿದೆ ... ಅಭಿವೃದ್ಧಿ ಯೋಜನೆಗೆ ... ಮಾಡಲಾಗ ... ಪ್ರಶ್ನೆಗಳಿಗೆ ಉತ್ತರವಾಗಿ ಸರ್ಕಾರದವರು ತಿಳಿಸಿದರು

### ಹಾಸನದ ಉಪಕರಣಗಳ ಕಾರ್ಖಾನೆಯ ಅಭಿವೃದ್ಧಿ ಯೋಜನೆ

ಹಾಸನದಲ್ಲಿರುವ ಉಪಕರಣಗಳ ತಯಾರಿಕಾ ಕಾರ್ಖಾನೆಯನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿ, ವಿಸ್ತರಿಸುವ ಸಲುವಾಗಿ ಸರ್ಕಾರದವರು ಒಂದು ಯೋಜನೆಯನ್ನು ಸಿದ್ಧಗೊಳಿಸಿ ಪರಿಶೀಲಿಸುತ್ತಿರುವರೆಂದೂ ಅದಕ್ಕಾಗಿ ಐದು ಲಕ್ಷ ರೂ ವೆಚ್ಚ ತಗಲುವುದೆಂದೂ ನೆನ್ನೆ ಕೆಳಗಿನ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸಚಿವ ಶ್ರೀ ಸಿದ್ದವೀರಪ್ಪನವರು ತಿಳಿಸಿದರು

## ಬಳ್ಳಾರಿ ವಿದ್ಯಾರ್ಥಿಗಳ ಪ್ರದರ್ಶನ ಮತ್ತು ಬಂಧನ

ಬಳ್ಳಾರಿಯನ್ನು ಪೂರ್ಣವಾಗಿ ಮೈಸೂರಿಗೆ ಸೇರಿಸಬೇಕೆಂದು ಅಲ್ಲಿ ಆರಂಭವಾಗಿರುವ ಚಳುವಳಿಯ ಸಂಬಂಧದಲ್ಲಿ ನೆನ್ನೆ ಸುಮಾರು ೨೦೦ ಮಂದಿ ವಿದ್ಯಾರ್ಥಿಗಳು ಮತ್ತೆ ಪ್ರದರ್ಶನ ನಡೆಸಿ, ರೈಲು ಕಂಬಿಗಳ ಮೇಲೆ ಕುಳಿತು ಅಲ್ಲಿಂದ ಮೈಸೂರಿಗೆ ಹೊರಡುವ ರೈಲನ್ನು ಸುಮಾರು ಒಂದು ಗಂಟೆ ಕಾಲ ತಡೆದರೆಂದು ವರದಿಯಾಗಿದೆ ಪೋಲೀಸರು ಬಂದು ಐದು ಮಂದಿಯನ್ನು ದಸ್ತಗಿರಿ ಮಾಡಿ ಗುಂಪನ್ನು ಚದುರಿಸಿದ ತರುವಾಯ ರೈಲು ಹೊರಟಿತು. ಅನಂತರ ಬಂಧಿತರನ್ನು ಬಿಡುಗಡೆ ಮಾಡಲಾಯಿತು

## ಸರ್ಕಾರಿ ಬಸ್ ಸಂಚಾರ ವ್ಯವಸ್ಥೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಸ್ವಂತ ವರದಿಗಾರರಿಂದ] ಬೆಂಗಳೂರು ೨೮

ಈ ದಿನ ಬೆಳಿಗ್ಗೆ ಕೆಳಗಿನ ಶಾಸನ ಸಭೆಯಲ್ಲಿ ಸರ್ಕಾರಿ ಬಸ್ ವ್ಯವಸ್ಥೆಯ ಬಗ್ಗೆ ಪ್ರಶ್ನೆಗಳ ಸುರಿಮಳೆ ಆಯಿತು ಅವಕ್ಕೆ ಉತ್ತರ ಕೊಡುತ್ತಾ ಮುಖ್ಯ ಲಕ್ಷ ರೂ ,೭೦೦ ಜನರು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ ಬೆಂಗಳೂರಿನಲ್ಲಿರುವ ವರ್ಕ್‌ಶಾಪಿನ ಜೊತೆಗೆ ಮೈಸೂರು ಮತ್ತು ಶಿವಮೊಗ್ಗಗಳಲ್ಲೂ ವರ್ಕ್‌ಶಾಪುಗಳನ್ನು ಮಾಡುವ ಯೋಚನೆ ಇದೆ ಎಂಬುದಾಗಿ ಸರ್ಕಾರದವರು, ಪ್ರಶ್ನೆಗಳಿಗುತ್ತರವಾಗಿ ತಿಳಿಸಿದರು.

ಮಂತ್ರಿಗಳ ಸಂಬಳದ ಪ್ರಶ್ನದ ವಿಷಯವಾಗಿ ಮುಖ್ಯ ಮಂತ್ರಿ ಹನುಮಂತಯ್ಯನವರು ಉತ್ತರಿಸುತ್ತಾ ಸಚಿವರು ಸ್ವಯಂ ಪ್ರೇರಿತರಾಗಿ ತ್ಯಾಗ ಮಾಡಿ ಸರ್ಕಾರದ ಸ್ವೀಕೃತ ಕಾರ್ಯದರ್ಶಿಗಳಿಗೆ ಪರಿವಿಡಿಸುವರೆಂದೂ, ಅನಂತರ ಅದರ ಮೇಲೆ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ತಿಳಿಸಿದರು

○ ಹಾಸನ ಜಿಲ್ಲೆಯಲ್ಲಿ ಭೂಕಂಪದಿಂದ ಮನೆಗಳು ಬಿದ್ದು ಹಾನಿಯಾದವರಿಗೆ ರಿಲೀಫ್ ಕೆಲಸ ನಡೆಸಲು ಮಾಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ

## ಸ್ಟೇಷನ್ ಮಾಸ್ತರರನ್ನು ಕೈಲಿನ ಕೆಳಕ್ಕೆ ಹಾಕಲು ಪ್ರಯತ್ನ

ಉತ್ತರ ಕಲ್ಕತ್ತದ ಸೀಲ್ದಾ ಎಂಬ ನಿಲ್ದಾಣದಲ್ಲಿ ವಿದ್ಯುಚ್ಛಕ್ತಿ ರೈಲೊಂದು ನೆನ್ನೆ ಬೆಳಿಗ್ಗೆ ತಡವಾಗಿ ಹೊರಡಲು ತಡವಾದ್ದರಿಂದ ಕೋಪೋದ್ರಿಕ್ತರಾದ ಸುಮಾರು ೨೦ ಜನರು ಸ್ಟೇಷನ್ ಮಾಸ್ತರರನ್ನು ಹಿಡಿದು ಎಳೆದುಕೊಂಡು ಬಂದು ರೈಲಿನ ಕೆಳಗೆ ಹಾಕುವುದಾಗಿ ಬೆದರಿಸಿದರೆಂದೂ ಅಷ್ಟರಲ್ಲೇ ಪ್ಲಾಟ್‌ಫಾರಂ ಮೇಲಿದ್ದ ಪ್ರಯಾಣಿಕರು ಮಧ್ಯೆ ಬಂದು ರಕ್ಷಿಸಿದರೆಂದೂ ವರದಿಯಾಗಿದೆ

### ಪ್ರಭುಗಳಿಂದ ಶಿವಾನುಭವ ಸಮ್ಮೇಳನದ ಆರಂಭ

ಮೈಸೂರು ಜಿಲ್ಲಾ ಪಿರಿಯಾಪಟ್ಟಣ ತಾ॥ ಬೆಟ್ಟದಪುರದ ಶ್ರೀ ಮಠದಲ್ಲಿ ಶಿವಯೋಗಿ ಶ್ರೀ॥ ವೀ॥ ಸ್ವಾ॥ ಚನ್ನಬಸವೇಶ್ವರೇಂದ್ರ ಮಹಾಸ್ವಾಮಿಗಳವರ ಗದ್ದುಗೆ ಆರಾಧನೆಯ ರಜತ ಮಹೋತ್ಸವವು ಮುಂದಿನ ತಿಂಗಳು ೬ ಮತ್ತು ೭ ನೇ ತಾರೀಖು ನಡೆಯುತ್ತದೆ. ಈ ಮಹೋತ್ಸವದ ಅಂಗವಾಗಿ ಶಿವಾನುಭವ ಮಹಾ ಸಮ್ಮೇಳನವು ಚಿತ್ರದುರ್ಗ ಬೃಹನ್ಮಠಾಧ್ಯಕ್ಷರಾದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದಾಗಿದೆ ಶ್ರೀಮನ್ಮಹಾರಾಜರವರು ೬ ನೇ ತಾ॥ ಸಾಯಂಕಾಲ ೫ ಘಂಟೆಗೆ ಈ ಸಮಾರಂಭದ ಉದ್ಘಾಟನಾ ಮಹೋತ್ಸವವನ್ನು ನೆರವೇರಿಸುವರು

○ ಮೈಸೂರು ಸಂಸ್ಥಾನದ ವಕೀಲರ ಸಮ್ಮೇಳನವು ಬರುವ ಮೇ ೧-ಗಲು ೨ ಮತ್ತು ೩ ನೇ ತಾರೀಖುಗಳಲ್ಲಿ ಹಾಸನದಲ್ಲಿ ಸಮಾವೇಶಗೊಳ್ಳುವುದು

ಶೃಂಗೇರಿಗೆ ಆಹ್ವಾನ

[illegible]

ಬಿ. ಎ. ಪರೀಕ್ಷೆಗೆ 'ಇಂಟರ್' ಪ್ರಶ್ನೆ ಪತ್ರಿಕೆ

[illegible]

ಮೈಸೂರು ಪೇಟೆ ಧಾರಣೆ

[illegible]

ರಘುಲಾಲ್ & ಕಂ

[illegible]

Printed and Published by ... at Sadhvi Press ... Road Mysore

**HOUSE FOR SALE**
*No 1275 Krishnamurthypuram*

Terraced and Mangalore Tiled house suitable for two families on site 32X110 feet. Enquire

**JAYA & COMPANY,**
*House, Land & Finance Agents*
*Old Mysore Bank Building.*
*Sayyaji Rao Road.*
PHONE 520.

**Trade Marks Act 1940**

**TRADE MARK WARNING NOTICE**

Know ye all men trade and custom that we, the MANGALORE GANESH BEEDI WORKS (Bantwal R. M. Prabhu and Bantwal Madhava Shenoy) Santhepet, MYSORE, are owners of the below represented Trade Marks which we have duly registered under Registered Nos. 6425, 11569, 6426 and 127573 in respect of Beedies under the Trade Marks Act 1940. By virtue of this registration we alone are entitled to enjoy the exclusive monopoly of these marks for use in relation to Beedi trade in the entire Indian Union.

**MANGALORE GANESH BEEDIES**
(No 6425)

**GANESH BEEDIES**
(No 11569)



(No 6426)

(No 127573)

Any others using any mark or marks identical or similar to the above marks or trading in spurious Beedies with spurious labels or wrappers having the above marks or making without due authority from us any blocks having above marks or printing without due authority from us labels or wrappers having above marks or selling such labels or wrappers will do so at their own peril and will render themselves liable to actions of INFRINGEMENT of our rights and will be suitably dealt with under the Trade Marks Act 1940 and the Code of Criminal Procedure.

**MANGALORE GANESH BEEDI WORKS,**
*Head Office and Sales Depot*
*Santhepet Mysore*

ರೋಃ ನಂ 792 WEEKLY EDITION ಅಂಚಿನ ಪತ್ರಿಕೆ ಕಾಣು

# ಸಾಧ್ವಿ

ಸಂಪುಟ ೧೭ ] ಭಾನುವಾರ ೨೯-೩-೧೯೫೩ [ ಸಂಚಿಕೆ ೩೧

# ಸಂಸ್ಥಾನ ಹೋಟೇಲು ರಹದಾರಿ ಏರ್ಪಾಡಿಲ್ಲ

## ಹೋಟೇಲು ರಹದಾರಿ ಪದ್ಧತಿ ಏರ್ಪಾಡು ಇಲ್ಲ

### ಆರೋಗ್ಯ ಮತ್ತು ವಿದ್ಯಾ ಸಸ್ಯಗಳನ್ನು ಹೆಚ್ಚಿಸುವುದೂ ಇಲ್ಲ

ಬೆಂಗಳೂರು ೨೯

ಆಯ-ವ್ಯಯ ಪಟ್ಟಿಯನ್ನು ಕಿರಿಯ ಶಾಸನ ಸಭೆಯಲ್ಲಿ ಕಳೆದ ದಿನಗಳ ಹಿಂದೆ ಮಂಡಿಸಿದಾಗ ಆರೋಗ್ಯ ಮತ್ತು ವಿದ್ಯಾ ಸಸ್ಯಗಳನ್ನು ಹೆಚ್ಚಿಸುವುದಾಗಿ ತಿಳಿಸಲಾಗಿದ್ದಿತಷ್ಟೆ? ಅವನ್ನು ಹೆಚ್ಚಿಸುವುದಿಲ್ಲವೆಂದು ಈಚೆಗೆ ಗೊತ್ತಾಗಿದೆ. ಹೋಟೇಲುಗಳ ಬಗ್ಗೆ ರಹದಾರಿ ಪದ್ಧತಿಯನ್ನು ಏರ್ಪಡಿಸುವ ಆಲೋಚನೆಯನ್ನೂ ಸಹಾ ಸರ್ಕಾರದವರು ಕೈ ಬಿಟ್ಟಿರುವರೆಂದು ವರದಿಯಾಗಿದೆ. ಇವುಗಳಿಂದ ೬ ಲಕ್ಷ ರೂ ಉತ್ಪತ್ತಿಯು ಸರ್ಕಾರಕ್ಕೆ ಬರುವುದೆಂದು ಅಂದಾಜಾಗಿತ್ತು. ಆದರೆ ಪೆಟ್ರೋಲ್ ತೆರಿಗೆಯನ್ನು ಹೆಚ್ಚಿಸುವುದನ್ನು ಮಾತ್ರ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ.

ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ವಿದ್ಯುಚ್ಛಕ್ತಿ ಮತ್ತು ಕೈಗಾರಿಕೆಗೆ ಸಂಬಂಧಿಸಿದಂತೆ ೯,೫೫,೧೧,೦೦೦ ರೂ ಗಳ ಬೇಡಿಕೆಯು ಮಂಜೂರಾಯಿತು. ನ್ಯಾಯಾಂಗ ಮಂತ್ರಿಗಳ ಮಾತನಾಡಿ ಹೆಚ್ಚಿನ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಮಾಡಲಾಗುವುದೆಂದೂ, ಈ ಬಗ್ಗೆ ಹೊಸ ಯೋಜನೆಯನ್ನು ಪರಿಶೀಲಿಸುತ್ತಿರುವುದಾಗಿಯೂ ತಿಳಿಸಿದರು.

### ಕೈಮಗ್ಗದ ಕೈಗಾರಿಕೆಗೆ ೧೬ ಲಕ್ಷ ರೂ ಯೋಜನೆ

ಸಂಸ್ಥಾನದಲ್ಲಿ ಕೈಮಗ್ಗದ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ೧೬ ½ ಲಕ್ಷ ರೂ ಯೋಜನೆಯನ್ನು ತಯಾರಿಸಲಾಗಿದೆಯೆಂದು ತಿಳಿದುಬಂದಿದೆ.

## ೩ ರೈಲುಗಳಿಗೆ ಡಿಕ್ಕಿಯಾಗಿ ೩೨ ಜನರ ಮರಣ

ಅಮೆರಿಕದ ಓಹಿಯೋ ಪ್ರಾಂತದ ಕಾನ್ನಾಟ್ ಎಂಬಲ್ಲಿ ಒಂದು ಗೂಡ್ಸ್ ರೈಲು ಕಂಬಿ ತಪ್ಪಿ ಉರುಳಿ, ಅದಕ್ಕೆ ಎರಡು ಪ್ರಯಾಣಿಕರ ರೈಲುಗಳು ಡಿಕ್ಕಿ ಹೊಡೆದುದರ ಪರಿಣಾಮವಾಗಿ ಇದುವರೆಗೆ ೩೨ ಜನರು ಮೃತಪಟ್ಟು ಅನೇಕರು ಗಾಯಗೊಂಡಿರುವರೆಂದು ವರದಿಯಾಗಿದೆ. ಚಿಕಾಗೋವಿನಿಂದ ನ್ಯೂಯಾರ್ಕ್ ನಗರಕ್ಕೆ ಹಾಕಿರುವ ನಾಲ್ಕು ರಸ್ತೆಗಳಲ್ಲಿ ಈ ಘಟನೆಯಾಗಿದೆ. ಒಂದು ಗೂಡ್ಸ್ ರೈಲಿನಲ್ಲಿದ್ದ ಪೈಪು ಕೆಳಕ್ಕೆ ಬಿದ್ದು ಮತ್ತೊಂದನ್ನು ಕೆಡವಿತು. ನಂತರ ಪ್ರಯಾಣಿಕ ಎಕ್ಸ್‌ಪ್ರೆಸ್ ರೈಲು ಮತ್ತೊಂದು ಪ್ರಯಾಣಿಕರ ರೈಲು ಎರಡೂ ಬಿದ್ದ ರೈಲಿನ ಮೇಲೆ ಉರುಳಿದವೆಂದು ಹೇಳಲಾಗಿದೆ.

## ಹುಚ್ಚು ರೋಗದಿಂದ ೧೧೧ ಜನರಿಗೆ ಇರಿತ

ಐವೆರಿನ ಸೀಟಲ್ ಎಂಬ ನಗರದ ಕ್ಷಯದ ಆಸ್ಪತ್ರೆಯಲ್ಲಿದ್ದ ಒಬ್ಬ ರೋಗಿಗೆ ಕಳೆದ ಗುರುವಾರ ಇದ್ದಕ್ಕಿದ್ದಂತೆ ಹುಚ್ಚು ಹಿಡಿದು ಅವನು ೧೧ ಜನರನ್ನು ಚಾಕುವಿನಿಂದ ಇರಿದನೆಂದೂ, ೨ ವೈದ್ಯಕೀಯ ಸಿಬ್ಬಂದಿಯು ಚಿಂತಾಜನಕವಾಗಿರುವುದಾಗಿಯೂ ವರದಿಯಾಗಿದೆ. ಇರಿದವನು ಫಿಲಿಪೈನ್ ದ್ವೀಪದವನೆಂದು ಗುರ್ತಿಸಲಾಗಿದೆ.

## ಕಲಬೆರಿಕೆ ತಪ್ಪಿಸಲು ರಾಷ್ಟ್ರಾಧ್ಯಕ್ಷರ ಮನವಿ

ಆಹಾರ ಪದಾರ್ಥಗಳಲ್ಲಿ ಕಲಬೆರಿಕೆ ಮಾಡುವುದರಿಂದ ಸಾರ್ವಜನಿಕರ ಆರೋಗ್ಯಕ್ಕೆ ಧಕ್ಕೆಯಾಗುತ್ತಿರುವುದೆಂದೂ, ಈ ಸಮಸ್ಯೆಯನ್ನು ಪೌರಸಭೆಗಳು ಪರಿಹರಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ ರಾಷ್ಟ್ರಾಧ್ಯಕ್ಷರು ನೆನ್ನೆ ನಾಗಪುರದ ಪೌರಸಭೆಯವರು ಒಪ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ ತಿಳಿಸಿದರು. ಎಲ್ಲ ಆಹಾರ ಪದಾರ್ಥಗಳನ್ನೂ ತನಿಖೆಗೆ ಒಳಪಡಿಸುವುದು ಅಗತ್ಯವೆಂದು ಅವರು ಸೂಚಿಸಿದರು.

### ರೈಲಿನಲ್ಲೇ ಗಾರ್ಡನ ನಿಧನ

ಮದರಾಸಿನ ಎಗ್ಮೋರ್ ಸ್ಟೇಷನಿನಿಂದ ಕಳೆದ ಬುಧವಾರ ರಾತ್ರಿ ಹೊರಟ ತಿರುವನಂತಪುರದ ಎಕ್ಸ್‌ಪ್ರೆಸ್ ರೈಲು ತಿರುಚಿನಾಪಳ್ಳಿಯನ್ನು ತಲುಪಿದಾಗ ಅದರ ಚೀಫ್ ಗಾರ್ಡ್ ಆರೋಗ್ಯ ಸ್ವಾಮಿ ಎಂಬಾತನು ಗಾಡಿಯಲ್ಲೇ ಮೃತಪಟ್ಟು ಬಿದ್ದಿದ್ದುದು ಪತ್ತೆಯಾಯಿತೆಂದು ವರದಿಯಾಗಿದೆ.

## ಬಲಿ ದ್ವೀಪದಲ್ಲಿ ಭಯಂಕರ ಭೂಕಂಪ

ಪೆಸಿಫಿಕ್ ದ್ವೀಪ ಸ್ತೋಮಗಳ ಪೈಕಿ ಇರುವ ಬಾಲಿ ದ್ವೀಪದ ಒಂದು ಪ್ರದೇಶದಲ್ಲಿ ಮೊನ್ನೆ ಭಾರಿ ಭೂಕಂಪವು ಸಂಭವಿಸಿದ ಪರಿಣಾಮವಾಗಿ ಸಹಸ್ರಾರು ಮಂದಿ ಗ್ರಾಮಸ್ಥರು ಮನೆಮಠಗಳನ್ನು ಬಿಟ್ಟು ಹೊರಕ್ಕೆ ಬಂದರೆಂದೂ, ಮೃತಪಟ್ಟವರ ಮತ್ತು ಗಾಯಗೊಂಡವರ ಸಂಖ್ಯೆ ತಿಳಿದುಬಂದಿಲ್ಲವೆಂದೂ ವರದಿಯಾಗಿದೆ. ನೊಂದವರಿಗಾಗಿ ಉಪಶಮಿಸಲು ಜಕಾರ್ತದಿಂದ ಎರಡು ಹಡಗುಗಳಲ್ಲಿ ಔಷಧಿ, ಆಹಾರ ಮತ್ತು ಬಟ್ಟೆ ಬರೆಗಳನ್ನು ಕಳುಹಿಸಲಾಗಿದೆ.

## ಡ್ರೈವರನ ಅವಿವೇಕದಿಂದ ೩ ಜನರ ಮರಣ

ಪಾಟ್ನಾದಲ್ಲಿ ಒಬ್ಬ ಡ್ರೈವರನು ಕುಡಿದ ಅಮಲಿನಲ್ಲಿದ್ದಾಗ ಮೊನ್ನೆ ಬಸ್ಸನ್ನು ನಡೆಸುತ್ತಾ ಒಂದು ಪೋಲೀಸ್ ಠಾಣೆಗೆ ಡಿಕ್ಕಿ ಹೊಡೆಸಿದ ಪರಿಣಾಮವಾಗಿ ಅಲ್ಲಿ ಕುಳಿತಿದ್ದ ಮೂವರು ಮೃತಪಟ್ಟರೆಂದು ವರದಿಯಾಗಿದೆ.

## ಮೇ ತಿಂಗಳಿನಲ್ಲಿ ನೆಹರೂ ಲಂಡನ್ನಿಗೆ

ಬ್ರಿಟನ್ನಿನ ರಾಣಿಯ ಕಿರೀಟಧಾರಣೋತ್ಸವ ಮತ್ತು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ನೆಹರೂರವರು ಮೇ ಮಾಹೆ ೨೮ನೇ ತಾ|| ಲಂಡನ್ನಿಗೆ ಹೋಗುವರು. ಅವರು ಜೂನ್ ೧೮ರ ವರೆಗೂ ಬ್ರಿಟನ್ನಿನಲ್ಲಿರುವರು.

### ಮೈಸೂರು ಬ್ಯಾಂಕ್ ಜನರಲ್ ಮ್ಯಾನೇಜರಿಗೆ ಸತ್ಕಾರ

ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರ್, ಶ್ರೀ ಬಿ ವಿ ನಾರಾಯಣರೆಡ್ಡಿಯವರ ಗೌರವಾರ್ಥವಾಗಿ ಮೊನ್ನೆ ರಾಜಧಾನಿಯ ಬಟ್ಟೆ ವರ್ತಕರ ಸಂಘದವರು ಸತ್ಕಾರ ಕೂಟವೊಂದನ್ನು ಗಾಯತ್ರಿ ಭವನದಲ್ಲಿ ಏರ್ಪಡಿಸಿದ್ದರು. ಉಪಹಾರಾನಂತರ ಸಂಘದ ಅಧ್ಯಕ್ಷರಾದ ಶ್ರೀ ಕೆ ಎಸ್ ಸತ್ಯನಾರಾಯಣರಾಯರು ಭಾಷಣ ಮಾಡಿ, ಶ್ರೀ ರೆಡ್ಡಿಯವರು ಬ್ಯಾಂಕು ಮ್ಯಾನೇಜರಾಗಿ ಸಂಸ್ಥಾನ ಮತ್ತು ವರ್ತಕರುಗಳಿಗೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ, ಮಾರಾಟ ತೆರಿಗೆ ವಿಚಾರದ ಬಗ್ಗೆ ಸರ್ಕಾರದವರು ನೇಮಿಸಿರುವ ಸಮಿತಿಯಲ್ಲಿ ಸದಸ್ಯರಾಗಿರುವ ಅವರು ವರ್ತಕರಿಗೆ ಇರುವ ತೊಂದರೆಗಳನ್ನು ಹೋಗಲಾಡಿಸಲು ಪ್ರಯತ್ನ ಪಡುವರೆಂದು ಆಶಿಸಿದರು. ಶ್ರೀ ರೆಡ್ಡಿಯವರು ಉತ್ತರವಿತ್ತು, ತಮ್ಮ ಕೃತಜ್ಞತೆಯನ್ನು ಸಲ್ಲಿಸಿ ಸೂಚಿಸಿದರು. ಮಾರಾಟ ತೆರಿಗೆ ವಿಚಾರಣಾ ಸಮಿತಿಯ ವಿಷಯವಾಗಿ ಅವರು ಮಾತನಾಡಿ, ಬಹುಮುಖ ತೆರಿಗೆಯಿಂದ ವರ್ತಕರಿಗೆ ತುಂಬಾ ತೊಂದರೆಯಾಗುತ್ತಿರುವುದೆಂಬ ದೂರುಗಳು ವಿಶೇಷವಾಗಿ ಬರುತ್ತಿವೆಯೆಂದು ಹೇಳಿ, ಈಗಿನ ಪದ್ಧತಿಯ ಬದಲು ವರ್ತಕರಿಗೂ ಅನುಕೂಲವಾಗುವಂತಹ ಮಾರ್ಗವನ್ನು ವರ್ತಕರು ಸೂಚಿಸಿದರೆ ತಮಗೆ ತುಂಬಾ ಸಹಾಯವಾಗುವುದೆಂದು ಹೇಳಿದರು. ಈ ತೆರಿಗೆಯ ಕರಾಳ ಸ್ವರೂಪವಿರುವ ಅಧಿಕಾರಿಗಳಿಂದ ವ್ಯಾಪಾರಿಗಳಿಗೆ ಅಧಿಕಾರಿಯಾಗಿ ಬಂದರೂ ಅವರು ವರ್ತಕರಿಗೆ ಅನ್ಯಾಯವಾಗುವುದರಲ್ಲಿ ಸಂದೇಹವಿಲ್ಲವೆಂದು ಅವರು ಹೇಳಿದರು.

## ಮಹಾರಾಜರ ಸ್ವಂತ ಆಸ್ತಿ ಮೇಲೆ ತೆರಿಗೆ ಶಾಸನ

ಬೆಂಗಳೂರು ೨೯

ನೆನ್ನೆ ಹಿರಿಯ ಶಾಸನ ಸಭೆಯಲ್ಲಿ ಮೈಸೂರು ಪೌರಸಭಾ ಶಾಸನದ ಸಂಗಳ ತಿದ್ದುಪಡಿಯ ಮಸೂದೆಯು ಅಂಗೀಕೃತವಾಯಿತಷ್ಟೆ. ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ ಚನ್ನಯ್ಯನವರು ಮಸೂದೆಯನ್ನು ಮಂಡಿಸಿ, ಅದರ ಉದ್ದೇಶವನ್ನು ವಿವರಿಸಿದರು. ಕಳೆದ ೧೯೫೨ನೇ ಫೆಬ್ರವರಿ ೬ನೇ ತಾ|| ಮಹಾರಾಜರ ಖಾಸಗಿ ಆಸ್ತಿ ಮೇಲೆ ತೆರಿಗೆ ವಿಧಿಸಲು ಸರ್ಕಾರದವರು ಆಜ್ಞೆ ಮಾಡಿರುವುದಾಗಿಯೂ, ಅದನ್ನು ಜಾರಿಗೆ ತರಲು ನಿಬಂಧನೆಗಳನ್ನು ಮಾಡಬೇಕಾದ ಅಗತ್ಯವಿದ್ದಿತೆಂದೂ ಅವರು ಹೇಳಿದರು.

ಶ್ರೀ ಪಿ ಸೀತಾರಾಮಯ್ಯನವರು ಮಾತನಾಡಿ, ಇದರಿಂದ ಮೈಸೂರು ಪೌರಸಭೆಗೆ ೩೦ ಸಾವಿರ ರೂ ಆದಾಯ ಬರುವುದೆಂದೂ, ಶ್ರೀಮನ್ಮಹಾರಾಜರಿಗೆ ಒಟ್ಟು ೧೧ ಕಟ್ಟಡಗಳಿರುವುದೆಂದೂ "ಚಾಮುಂಡಿ ಪ್ಯಾಲೇಸ್" ಖಾಸಗಿ ಆಸ್ತಿಯೆಂದೂ ತಿಳಿಸಿದರು.

ಟಿ. ಎಸ್ ರಾಜಗೋಪಾಲಯ್ಯಂಗಾರ್ಯರು ಮಾತನಾಡಿ ಸರ್ಕಾರದ ಆಸ್ತಿಯಾದ ಮೇಲೆ ೨|| ವರ್ಷಗಳ ಕಾಲ ತೆರಿಗೆ ವಿಧಿಸದೆ, ವಿಧಾನ ಮಾಡಿದ ಬಗ್ಗೆ ಪ್ರಶ್ನಿಸಿ, ಈ ಮಸೂದೆಯ ಅಂಶಗಳನ್ನು ಹಿಂದಿನಿಂದಲೂ ಜಾರಿಗೆ ತರುವಂತಾಗಬೇಕೆಂದು ಸೂಚಿಸಿದರು. ಹಿಂದಿನಿಂದಲೂ ಕಂದಾಯವನ್ನು ಹಾಕುವುದಕ್ಕೆ ಪೌರಸಭಾ ಶಾಸನದಲ್ಲಿ ಅವಕಾಶವಿಲ್ಲವೆಂದು ಶ್ರೀ ಸಿ ಸೀತಾರಾಮಯ್ಯನವರು ತಿಳಿಸಿದರು. ಮಸೂದೆಯು ಅನಂತರ ಅಂಗೀಕೃತವಾಯಿತು.

## ರಿಜಿಸ್ಟ್ರೇಷನ್ ಮತ್ತು ಇನ್‌ಷೂರ್ ದರ ಹೆಚ್ಚಿತು

ಇದೇ ಏಪ್ರಿಲ್ ೧ರಿಂದ ರಿಜಿಸ್ಟರ್ ಮಾಡಿಸಲಾಗುವ ಪದಾರ್ಥಗಳ ಮೇಲೆ ಅದರ ರುಸುಮನ್ನು ೪|| ಆಣೆಯಿಂದ ೬ ಆಣೆಗೆ ಹೆಚ್ಚಿಸಲಾಗುವುದು. ಇದರೊಡನೆ ಸಾಮಾನ್ಯವಾಗಿ ಲಗತ್ತಿಸುವ ಸ್ಟಾಂಪಿನ ದರವು ಸೇರಿರುವುದಿಲ್ಲ. ಇನ್‌ಷೂರ್ಸ್ ರುಸುಮು ಮೊದಲಿನ ನೂರು ರೂಗಳಿಗೆ ೬ ಆಣೆಯಂತೆಯೂ, ಅನಂತರದ ಪ್ರತಿ ನೂರು ರೂಗಳಿಗೆ ೩ ಆಣೆಯಂತೆಯೂ ಹೆಚ್ಚಿಸಲಾಗುವುದು.

## ಭಾವಿ ಕುಸಿದು ಒಬ್ಬನ ಮರಣ

ಬೆಂಗಳೂರಿನ ಬಳಿ ದೇವನಹಳ್ಳಿಯಲ್ಲಿ ೫ ಮಂದಿ ಕೂಲಿಯವರು ಭಾವಿ ತೋಡುವ ಕೆಲಸದಲ್ಲಿ ನಿರತರಾಗಿದ್ದಾಗ ಮೇಲ್ಭಾಗದ ಮಣ್ಣು ಕುಸಿದು ಒಳಕ್ಕೆ ಬೀಳಲು ಒಬ್ಬನು ಅದರ ಅಡಿಯಲ್ಲಿ ಸಿಕ್ಕಿ ಮೃತಪಟ್ಟನೆಂದೂ, ಉಳಿದ ನಾಲ್ವರು ರಕ್ಷಿಸಲ್ಪಟ್ಟರೆಂದೂ ವರದಿಯಾಗಿದೆ.

### ಹರಿಕಥೆ

ರಾಜಧಾನಿಯ ಚಾಮರಾಜಪೇಟೆ ಅಗ್ರಹಾರದಲ್ಲಿರುವ ಬಾಲಕರ ಶ್ರೀ ರಾಮಮಂದಿರದಲ್ಲಿ ಈ ದಿನ ರಾತ್ರಿ ೯-೩೦ ಕ್ಕೆ ಶ್ರೀ ವೀರೇಶ್ ಶ್ರೀನಿವಾಸರಾಯರಿಂದ ಬಂಡಾರಹನುಮಂತ ಹರಿಕಥೆಯು ನಡೆಯುತ್ತದೆ.

## ವಾರ ಭವಿಷ್ಯ

೨೯-೩-೫೩ ರಿಂದ ೪-೪-೫೩ರ ವರೆಗೆ

ಮೇಷ— ಆರೋಗ್ಯ ಸಾಧಾರಣ, ಕೃಷಿ ಗೊಂಡ ಕಾರ್ಯ ವಿಘ್ನ, ವ್ಯಾಪಾರಾದಿಗಳಲ್ಲಿ ನಷ್ಟ, ಶುಭ ಕಾರ್ಯಗಳಲ್ಲಿ ಸಹಕಾರ ತಾ|| ೩೧, ೨ರ ಹಣದ ಮುಗ್ಗಟ್ಟು, ಚಿಂತೆ

ವೃಷಭ — ಆರೋಗ್ಯ ಉತ್ತಮವಿರಲಾರದು, ಪರೋಪಕಾರಿಗಳಿಂದ ತೊಂದರೆ ಸ್ತ್ರೀ ಸೌಖ್ಯ ಸಂಭವ ತಾ|| ೩೦, ೩ರ ಚಿಂತಾ ನಾಶ

ಮಿಥುನ—ಆರೋಗ್ಯ ಉತ್ತಮ ಕುಟುಂಬದ ದೇಹಾಲಸ್ಯ, ಅಪವಾದ ಸಂಭವ, ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ತಾ|| ೧, ೩ ಕಲಹ, ಗೊಂದಲ

ಕರ್ಕ — ಆರೋಗ್ಯ ಸಾಧಾರಣ, ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ದೇವತಾ ಕಾರ್ಯಗಳಲ್ಲಿ ಆಸಕ್ತಿ ತಾ|| ೨, ೩ ಆಪ್ತರ ಭೇಟಿ

ಸಿಂಹ — ಆರೋಗ್ಯ ಉತ್ತಮ, ವಸ್ತ್ರಾಭರಣಗಳ ಖರೀದಿ ಧನಾಗಮನ ಉತ್ತಮ ಪ್ರವಾಸ ಸಂಭವ ತಾ|| ೨, ೩ ಮನರಂಜನೆ, ಸ್ತ್ರೀ ನಾಶ

ಕನ್ಯಾ — ಆರೋಗ್ಯ ಉತ್ತಮ ನೌಕರಿಯಲ್ಲಿ ಉನ್ನತಿ, ವ್ಯವಹಾರಗಳ ವ್ಯವಹಾರ, ವ್ಯಾಪಾರಾದಿಗಳಲ್ಲಿ ಪ್ರಗತಿ ತಾ|| ೩೧, ೧ ಧನ ಲಾಭ, ಚಿಂತಾ ನಾಶ

ತುಲಾ — ಆರೋಗ್ಯ ಉತ್ತಮವಿರಲಾರದು ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ, ಆರ್ಥಿಕ ಬಿಕ್ಕಟ್ಟು ಹೆಚ್ಚುವ ಪ್ರವಾಸ [illegible]

ವೃಶ್ಚಿಕ — ಆರೋಗ್ಯ ಉತ್ತಮ, ಸ್ನೇಹಿತರ ಆಗಮನ, ವ್ಯಾಪಾರಾದಿಗಳಲ್ಲಿ ಪ್ರಗತಿ, ಪ್ರವಾಸ ಸಂಭವ ತಾ|| ೩, ೪ ಆಪ್ತರ ಆಗಮನ ಮನರಂಜನೆ

ಧನು —ಆರೋಗ್ಯ ಉತ್ತಮವಿರಲಾರದು, ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ, ಅಗ್ನಿ ಭಯ, ಪ್ರವಾಸ ಸಂಭವ ತಾ|| ೨, ೩ ಧನ ಲಾಭ, ಚಿಂತಾ ನಾಶ

ಮಕರ — ಆರೋಗ್ಯ ಸಾಧಾರಣ, ನೌಕರಿಯಲ್ಲಿ ತೊಂದರೆ, ವಿಘ್ನ ನಿಗ್ರಹವಾಗಿ ಖರ್ಚು ವೆಚ್ಚ ತಾ|| ೧, ೩ ಪ್ರವಾಸ ಸಂಭವ

ಕುಂಭ— ಆರೋಗ್ಯ ಉತ್ತಮ, ಆಪ್ತರ ಆಗಮನ, ಶುಭ ಕಾರ್ಯಗಳು ಜರುಗುವುವು, ಧನ ಲಾಭ ವಿನ್ಯಾಗಿದೆ

### ಶ್ರೀ ರಮಣಿ ಸಂಗೀತ ವಿದ್ಯಾಲಯ

1061-1 ನೇ ವಿವೇಕಾನಂದ ರಸ್ತೆ (ಬಾಲ ಮಂದಿರ ಎದುರು)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಲಿ ಕಾ ಬಾಲಕರಿಗೆ ಮತ್ತು ಬಾಲಿಕೆಯರಿಗೆ ಶಿಕ್ಷಣ ಕೊಡ ವ್ಯವಸ್ಥೆ ಮಾಡಲಾಗಿದೆ

ಎ. ಕೃಷ್ಣಮೂರ್ತಿ, ಉಪಾಧ್ಯಾಯ

## ಕೊಲೆಗಡುಕ ಕುಟುಂಬದವರಿಗೆ ಫಾಸಿ ಶಿಕ್ಷೆ

ನಾಗಪುರದಲ್ಲಿ ಎರಡು ಕೊಲೆಗಳನ್ನು ನಡೆಸಿದ ಆಪಾದನೆಗಾಗಿ ವಿಚಾರಣೆಗೆ ಗುರಿಯಾಗಿದ್ದ ಒಂದು ಸಂಸಾರದ ಕಂಡೆ ಮತ್ತು ಮೂವರು ಮಕ್ಕಳಿಗೆ ಮರಣ ದಂಡನೆಯನ್ನೂ, ಈ ಕಾರ್ಯದಲ್ಲಿ ಸಹಕರಿಸಿದ ತಾಯಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಗಿದೆ. ಇವರ ಕುಟುಂಬದವರು ಪುರಾತನ ಕಾಲದಿಂದಲೂ ಕೊಲೆಗಡುಕತನದಲ್ಲಿ ನಿರತರಾಗಿದ್ದರೆಂದು ಹೇಳಲಾಗಿದೆ

### ನಾಡ ಕಲೆಗಳ ಪ್ರದರ್ಶನ

ಇದೇ ಏಪ್ರಿಲ್ ಸುಮಾರಿನಲ್ಲಿ ಮೈಸೂರು ಸಂಸ್ಥಾನ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರದ ಸಂಸ್ಥಾನ ಕೆರೆ ಸ್ಟೇಡಿಯ ಒಳಲ್ಲಿ ನಾಡ ಕಲೆಗಳ ಪ್ರದರ್ಶನದ ವಿರ್ಮಾಣವನ್ನು ವ್ಯಸೂರ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯು ಏರ್ಪಡಿಸಿದೆ. ಸಂಸ್ಥಾನದ ನಾನಾ ಮೂಲೆಗಳಿಂದ ಉತ್ತಮ ಸವ ಗನೆಯ [illegible]

[illegible]

ತಾ|| ೩, ೪ ಶೀಘ್ರ ಧನ ಲಾಭ, ಆಪ್ತರ ಭೇಟಿ

ಮೀನ —ಆರೋಗ್ಯ ಸಾಧಾರಣ, ಆಪ್ತರ ಭೇಟಿ, ವ್ಯಾಪಾರಾದಿಗಳಲ್ಲಿ ತೊಂದರೆ ಪ್ರವಾಸ ಸಂಭವ ತಾ|| ೧, ೩ ಅಪವಾದ ಭಯ

### ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, ಉಬ್ಬಸ, ಪಡಿಶಾವ ಕೂಲೆ ಮತ್ತು (TONSIL) ಗಳಿಗೂ ಯಶಕ್ತಿ ಔಷಧಿ ಪ್ರಯೋಗದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್ ಎಸ್ ಪಂಡಿತರು

ರಾಮಸ್ವಾಮಿ ವೃತ್ತದ ಹತ್ತಿರ, ದಿವಾನ್ಸ್ ರಸ್ತೆ, ಮೈಸೂರು

Edited, Printed and Published by A. R. Nagarajan at Sadhvi Press D. Subbiah Road Mysore

## ಬಳ್ಳಾರಿ ತಾಲ್ಲೂಕು ಮೈಸೂರಿಗೆ

ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೆ ಸೇರಿಸುವ ವಿಷಯವಾಗಿ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳಿಗೆ ಟೆಲಿಫೋನ್ ಮೂಲಕ ಮಾತುಕತೆಗಳು ಜರುಗಿದುವೆಂದು ಹೇಳಲಾಗಿದೆ. ಬಳ್ಳಾರಿಯ ಬಹು ಭಾಗವು ಮೈಸೂರಿಗೆ ಸೇರುವುದರಿಂದ ಅಲ್ಲಿನ ಪ್ರಜಾ ಸಂಖ್ಯೆ ಮತ್ತು ವಿಸ್ತೀರ್ಣಗಳು ಹೆಚ್ಚುವುದರಿಂದ ಬಳ್ಳಾರಿಯು ಒಬ್ಬರನ್ನು ಸಂಸ್ಥಾನದ ಸಚಿವ ಮಂಡಲಿಗೆ ತೆಗೆದುಕೊಳ್ಳುವ ಸಂಭವವಿರುವುದೆಂದೂ ವರದಿಯಾಗಿದೆ

### ಎಲಿಜಬೆತ್ತರು ಸಿಪ್ಪಳದ ಅಧಿಕೃತ ರಾಣಿ

ಬ್ರಿಟನ್ನಿನ ನೂತನ ರಾಣಿ ಎಲಿಜಬೆತ್‌ರವರನ್ನು ಸಿಂಹಳದ ರಾಣಿಯನ್ನಾಗಿ ಅಂಗೀಕರಿಸಿ ಅಲ್ಲಿನ ಪ್ರತಿನಿಧಿ ಸಭೆಯು ನೆನ್ನೆ ಮಸೂದೆಯೊಂದನ್ನು ಅನುಮೋದಿಸಿತು

### ಅರ್ಧ ಕಾಸಿನ ವ್ಯತ್ಯಾಸಕ್ಕೆ ೩೦೦೦ ಜನರಿಗೆ ಸಂಬಳವಿಲ್ಲ

[illegible] ಜಿಲ್ಲಾ ಬೋರ್ಡಿಗೆ ಉತ್ತರ ಪ್ರದೇಶ ಸರ್ಕಾರದಿಂದ ಬರಬೇಕಾಗಿದ್ದ [illegible] ಮಾಡದ, ೩ ತಿಂಗಳು ಕಾಲ ತಡೆದಿದ್ದರಿಂದ ಇದರಿಂದ ಜಿಲ್ಲಾ ಬೋರ್ಡಿನ ಪ್ರೈಮರಿ ಮತ್ತು ಪ್ರೌಢ ಶಾಲೆಗಳ ೩೦೦೦ ಮಂದಿ ಉಪಾಧ್ಯಾಯರಿಗೆ ಸಂಬಳ ಕೊಡಲು ತಡವಾಯಿತೆಂದೂ ವರದಿಯಾಗಿದೆ ಅರ್ಧ ಕಾಸಿನ ವಿಲೆ ಬಗ್ಗೆ ಸರ್ಕಾರದ ಒಪ್ಪಿಗೆಯಾಗಬೇಕೆಂದು ಖಜಾನೆಯವರು ತಿಳಿಸಲು, ಕೊನೆಗೆ ಜಿಲ್ಲಾ ಬೋರ್ಡಿನವರು ಅರ್ಧ ಕಾಸನ್ನು ಬಿಟ್ಟು ಬಿಡುವುದಾಗಿ ತಿಳಿಸಿ ಬಾಕಿ ಹಣವನ್ನು ಪಡೆದ ಕೊಂಡರೆಂದು ಹೇಳಲಾಗಿದೆ


**SRI GANESHA**

TALKIES

From 29-3-53 For 3 Days

**DUEL IN THE SUN**

(Technicolor)

With - Gregory Peck Joseph Cotten Herbert Marshall Lionel Barrymore and Jennifer Jones

**SRI GAYATHRI**

TALKIES

TODAY & TOMORROW

**DEVIL MAKES THREE**

Starring — Jene Kelly and Pier Angeli

— NEXT CHANGE —

MACAO


## ಶ್ರೀ ರಾಮೋತ್ಸವ ಕಾರ್ಯಕ್ರಮ

ರಾಜಧಾನಿಯಲ್ಲಿ ಶ್ರೀ ರಾಮೋತ್ಸವದ ಅಂಗವಾಗಿ, ಸಂತೇಪೇಟೆಯಲ್ಲಿರುವ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀ ಕೆ. ವಿಶ್ವನಾಥ ಶಾಸ್ತ್ರಿಗಳವರ ಸಂಗೀತವು ಪಕ್ಕವಾದ್ಯಗಳೊಡನೆ ನಡೆಯುವುದು

ಇರ್ವಿನ್ ರಸ್ತೆ ಬಳಿ ಶ್ರೀ ತುಳಸೀ ಬೃಂದಾವನ ವೈಕುಂಠ ರಾಮ ಮಂದಿರದಲ್ಲಿ ಕೃಷ್ಣಪ್ರಸಾದ ಯಕ್ಷಗಾನ ಮಂಡಲಿಯವರಿಂದ ರಾಮ ನಾಮ ಮಹಿಮೆ ಬಗ್ಗೆ ಯಕ್ಷಗಾನವು ನಾಳೆ ರಾತ್ರಿ ೯ ಗಂಟೆಗೆ ಏರ್ಪಾಡಾಗಿದೆ

### ಪಿರಿಯಾಪಟ್ಟಣದಲ್ಲಿ ನೀರಿಗೆ ಅಭಾವ

ಮೈಸೂರು ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ತಿಳಿಸುತ್ತಾರೆ:—

ಪಿರಿಯಾಪಟ್ಟಣ ಟೌನ್ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಅಭಾವ ಸಂಭವಿಸಿ, ಜನ, ದನಗಳು ಬಾಧೆಪಡುತ್ತಿರುವುದನ್ನು [illegible] ಜನರ ಕಷ್ಟಗಳನ್ನು ನಿವಾರಿಸಲು ಕೆರೆ ಬಾವಿಗಳನ್ನು ತೆಗೆಸಿ, ನೀರಿನ ಸೌಲಭ್ಯ ಕಲ್ಪಿಸಿಕೊಡುವುದಕ್ಕಾಗಿ [illegible] ಈ ಕೆಲಸಕ್ಕೆ ಅಗತ್ಯವಾಗಿ ಬೇಕಾದ ಹಣವನ್ನು ಒದಗಿಸಿ, ಬಾವಿಗಳನ್ನು ತೆಗೆಸಿ, ನೀರಿನ ಅಭಾವವನ್ನು ನೀಗಿಸಬೇಕೆಂದು ಒತ್ತಾಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ

### ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಆ ಪೈ | ರೂ ಆ ಪೈ |
|---|---|---|
| ಕಡಲೇಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | [illegible] |
| ಹುರುಳಿ | [illegible] | [illegible] |
| ಹುರುಳಿ | [illegible] | [illegible] |
| ಅವರೆ | [illegible] | [illegible] |
| ಹಲಸಂದೆ | [illegible] | |
| ಉದ್ದು ಮೆಣಸಿನ | [illegible] | |
| ಕಾಯಿ ಮೆಣಸು | [illegible] | [illegible] |
| ಹುಣಸೇಹಣ್ಣು | [illegible] | [illegible] |
| ಬೆಲ್ಲ | [illegible] | [illegible] |
| ಬೆಳ್ಳಿ ಹೊಗೆಸೊಪ್ಪು | [illegible] | |
| [illegible] | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ಕೃಷ್ಣ [illegible] ಸಂಗೀತ ಎಂ ಬಿ ಶ್ರೀನಿವಾಸ


ಲಗ್ನದ ಜವಳಿಗಳಿಗೆ

ಸೀರೆಗಳಿಗೆ ಮತ್ತು ಬ್ಲೌಸ್ ಪೀಸುಗಳಿಗೆ

ಮೈಸೂರು ಸಿಲ್ಕ್, ಧರ್ಮಾವರಂ, ಎರ್ಲಿ ನವೀನ ಮಾದರಿ ಸಾಲಿನ (ಫೋನ್ 446)

★ M. V. ಭೋಜಯ್ಯ

ಬಿ ಎ ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಈ ದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ | ಸೋಮವಾರ ೩೦-೩-೧೯೫೩ | ಸಂಚಿಕೆ ೧೯೬

# - ಶಾಸನ ಸಭೆಯಲ್ಲಿ - ಮತ್ತೊಮ್ಮೆ ಸಭಾತ್ಯಾಗ

## ಶಾಸನ ಸಭೆಯಲ್ಲಿ ವಿರೋಧ ಪಕ್ಷದವರ ಸಭಾತ್ಯಾಗ

(ಬೆಂಗಳೂರು ೩೦

ಶಾಸನ ಸಭೆಯಲ್ಲಿ ನೆನ್ನೆ ಸಂಜೆ ವಿರೋಧ ಪಕ್ಷದ ಮುಖಂಡರಾದ ಶ್ರೀ ಜೆ ಎಂ ಇಮಾಂ ಮತ್ತು ... ಸದಸ್ಯರು ಸಭಾತ್ಯಾಗ ಮಾಡಿದರು. ಈ ಬಾರಿಯು ಅಧಿವೇಶನಕ್ಕೆ ಈ ಸಭಾತ್ಯಾಗವು ಎರಡನೆಯದು.

ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಮೊಟಾರು ವಾಹನಗಳ ತೆರಿಗೆ ಮತ್ತು ಬೋಳ್ಸುಗಳ ತಿದ್ದುಪಡಿ ಮಸೂದೆಯು ಮಂಡಿಸಲ್ಪಟ್ಟು ಅದಕ್ಕೆ ಶ್ರೀ ಇಮಾಂರವರು ಪ್ರಿಯಾ ಲೋಚನವನ್ನೆತ್ತಿ ವಿದ್ಯಾಭ್ಯಾಸದ ತೆರಿಗೆಯಿಂದ ಬರುವ ಉತ್ಪತ್ತಿಯನ್ನು ಸಾಮಾನ್ಯ ನಿಧಿಗೆ ಸೇರಿಸುವುದು ಸರಿಯಲ್ಲವೆಂದೂ, ಆ ಉದ್ದೇಶಕ್ಕಾಗಿಯೇ ಇರುವ ನಿಧಿಗೆ ಸೇರಿಸಬೇಕೆಂದೂ ತಿಳಿಸಿದರು. ಆಯವ್ಯಯದ ಆಲೋಚನೆಯನ್ನು ಸರಿದೂಗಿಸಲು ಈ ತೆರಿಗೆಯನ್ನು ಹಾಕಲಾಗುವುದೆಂದು ತಿಳಿಸಿರುವುದು ನ್ಯಾಯವಲ್ಲವೆಂದು ಅವರು ವಾದಿಸಿದರು.

ನ್ಯಾಯಾಂಗ ಮಂತ್ರಿಗಳು ಮಾತನಾಡಿ, ಶ್ರೀ ಇಮಾಂರವರ ಆಕ್ಷೇಪಣೆಗೆ ಆಧಾರವಿಲ್ಲವೆಂದೂ, ಮಸೂದೆಯ ಉದ್ದೇಶವು ರಾಷ್ಟ್ರ ನಿರ್ಮಾಣ ಕೆಲಸಗಳಿಗೆಲ್ಲ ಅನ್ವಯಿಸುವುದೆಂದೂ ತಿಳಿಸಿದರು. ಕ್ರಿಯಾಲೋಚನವನ್ನು ತಳ್ಳಿಹಾಕಲಾಯಿತು.

ಸಚಿವರ ಉತ್ತರವು ಸಮಾಧಾನಕರವಾಗಿಲ್ಲವೆಂದು ತಿಳಿಸಿ ಇಮಾಂ ಮತ್ತು ಇತರರು ಹೊರಕ್ಕೆ ಹೋದರು.

### ನೌಕರರ ವಯಸ್ಸಿನ ಮಿತಿ ಹೆಚ್ಚಿಸುವ ಯೋಚನೆ

ಸರ್ಕಾರದ ನೌಕರಿಯ ದೃಷ್ಟಿಯಿಂದ ವಯಸ್ಸಿನ ಪರಮಾವಧಿಯನ್ನು ೫೫ರಿಂದ ೫೮ ವರ್ಷಕ್ಕೆ ಹೆಚ್ಚಿಸುವ ವಿಷಯವು ಪರ್ಯಾಲೋಚನೆಯಲ್ಲಿರುವುದಾಗಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಶಾಸನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು. ೧೯೫೧ನೇ ಏಪ್ರಿಲ್ಲಿನಿಂದ ಬಡ್ತಿ ಪಡೆದಿರುವ ಮತ್ತು ನಿವೃತ್ತಿಹೊಂದಿ ಪುನಃ ನೌಕರಿಗೆ ಸೇರಿ ತೆಗೆದುಕೊಳ್ಳಲ್ಪಟ್ಟಿರುವ ... ಅಧಿಕಾರಿಗಳ ಪಟ್ಟಿಯನ್ನು ಅವರು ಒದಗಿಸಿ ಸಾರ್ವಜನಿಕ ಸೇವಾದೃಷ್ಟಿಯಿಂದ ಅವರನ್ನು ಮತ್ತೆ ತೆಗೆದುಕೊಳ್ಳಲಾಯಿತೆಂದು ಅವರು ಹೇಳಿದರು.

### ಅಗ್ನಿ ಪರ್ವತದಿಂದ ೩೦ ಲಕ್ಷ ಜನರಿಗೆ ಪ್ರಾಣಭೀತಿ

... ಅತ್ಯಂತ ದೊಡ್ಡ ... ಮೇರಾಪಿ ಎಂಬ ಜ್ವಾಲಾಮುಖಿಯು ಈಚೆಗೆ ಬಹು ಉಗ್ರವಾಗಿರುವುದರಿಂದ, ಅದರ ಸುತ್ತಮುತ್ತ ವಾಸಿಸುತ್ತಿರುವ ೩೦ ಲಕ್ಷ ಪ್ರಜೆಗಳಿಗೆ ಪ್ರಾಣಭೀತಿ ... ಎಂದಾಗಿರುವುದೆಂದೂ, ಕಳೆದ ಮೂರು ದಿನಗಳಿಂದ ಅದು ಬೆಂಕಿಯನ್ನುಗುಳುತ್ತಿರುವುದಾಗಿಯೂ, ಅನತಿಕಾಲದಲ್ಲಿ ಭಯಂಕರ ಆಸ್ಫೋಟನ ಸಂಭವಿಸಬಹುದೆಂದೂ ಭೀತಿಯುಂಟಾಗಿದೆಯೆಂದೂ ವರದಿಯಾಗಿದೆ.

## ಆಂಧ್ರದ ಬಗ್ಗೆ ನೆಹರೂ ಘೋಷಣೆ ಮತ್ತು ವಾಂಚೂ ವರದಿ

### ಪರ್ಯಾಲೋಚನೆಯಲ್ಲಿರುವುದಾಗಿ ಸಚಿವರು

ಸ್ವಂ ಸು ಸೂ (ಬೆಂಗಳೂರು ೩೦

ಈ ದಿನ ಬೆಳಿಗ್ಗೆ ಶಾಸನ ಸಭೆಯಲ್ಲಿ ಶ್ರೀ ಆರ್ ಅನಂತರಾಮ್ ರವರ ಪ್ರಶ್ನೆಗೆ ಉತ್ತರವೀಯುತ್ತಾ, ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಆಂಧ್ರ ಪ್ರಾಂತ ನಿರ್ಮಾಣದ ಬಗ್ಗೆ ಈಚೆಗೆ ನೆಹರೂರವರು ಮಾಡಿರುವ ಘೋಷಣೆ ಮತ್ತು ಜಸ್ಟಿಸ್ ವಾಂಚೂರವರ ವರದಿ ಇವುಗಳು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ತಿಳಿಸಿದರು.

ಮೂಲಭೂತ ಹಕ್ಕಿನ ... ಸೋಶಲಿಸ್ಟರನ್ನು ... ಖೈದಿಯಾಗಿ ಇಟ್ಟುಕೊಳ್ಳಲಾಗಿದೆ ... ಬೆಂಗಳೂರು ಸಿಟಿ ಪೊಲೀಸ್ ... ಶ್ರೀ ತಿಮ್ಮಪ್ಪಗೌಡರ ಪ್ರಶ್ನೆಗೆ ಉತ್ತರವಿತ್ತರು.

ಸಂಸ್ಥಾನದಲ್ಲಿ ೧೯೫೨ರಲ್ಲಿ ... ಜನರಿಗೆ ... ಸಹಾಯ ... ಇರುವುದಾಗಿ ತಿಳಿಸಲಾಯಿತು ... ಅಂಗಡಿಗಳ ಕೋಲಾರ ಜಿಲ್ಲೆಯಲ್ಲಿ ... ಏಕರೆ ಜಮೀನು ಕೊಡಲಾಗಿದೆಯೆಂದೂ ತಿಳಿಸಲಾಯಿತು.

### ಹುಣಸೂರಿನ ರೈತ ಅಮೇರಿಕಕ್ಕೆ

ಹುಣಸೂರಿನ ಶ್ರೀ ಹೆಚ್ ಬೋರೇಗೌಡ, ಬೆಂಗಳೂರು ಜಿಲ್ಲೆಯ ಹೊಸಕೋಟೆಯ ಶ್ರೀ ಎನ್ ಚಿಕ್ಕೇಗೌಡ ಮತ್ತು ಯಶವಂತಪುರದ ಶ್ರೀ ಬಿ ಕೆ ಎನ್. ರಾವ್ ಎಂಬ ಮೂವರು ರೈತರನ್ನು ಅಮೇರಿಕದಲ್ಲಿ ೬ ತಿಂಗಳ ಕಾಲ ತರಬೇತಿಗಾಗಿ ಕಳುಹಿಸಲು ಆರಿಸಲಾಗಿದೆ ... ಅವರು ಏಪ್ರಿಲ್ ... ವಿಮಾನದಲ್ಲಿ ಹೊರಡುವರು.

### ಆಸ್ಪತ್ರೆಗೆ ಬೆಂಕಿಬಿದ್ದು ೫೦ ರೋಗಿಗಳ ಮರಣ

ಅಮೇರಿಕದ ... ನಗರದಲ್ಲಿ ... ವಿವಾಸದಲ್ಲಿರುವ ಒಂದು ಚಿಕಿತ್ಸಾಲಯಕ್ಕೆ ಬೆಂಕಿಯು ಬಿದ್ದು ಅಲ್ಲಿದ್ದ ೫೦ ಮುದಿಗಳ ಪೈಕಿ ೫೦ ಜನರು ಬೆಂದು ಹೋದರೆಂದು ವರದಿಯಾಗಿದೆ.

## ಹರಿಕಥೆ

ಮೈಸೂರು ೩೦

ಹ ಪ್ಪ ... ಪ್ರಯುಕ್ತ ಈ ದಿನ ರಾತ್ರಿ ೯ ಗಂಟೆಗೆ ... ಸುಬ್ಬಯ್ಯ ರಸ್ತೆಯಲ್ಲಿ ... 'ಸಾಧ್ವಿ' ಪತ್ರಿಕೆಯ ಕಾರ್ಯಾಲಯದಲ್ಲಿ ವೇ॥ಬ್ರಂ॥ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಶ್ರೀ ರಾಮ ಪಟ್ಟಾಭಿಷೇಕ ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ.

ಈ ದಿನ ರಾತ್ರಿ ೯ ಘಂಟೆಗೆ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿ ಶ್ರೀರಾಮ ಮಂದಿರದಲ್ಲಿ ವೇ॥ ಬ್ರಂ॥ ಶ್ರೀ ... ವಾಸರಿಂದ ದಶಾವತಾರ ಎಂಬ ಕೀರ್ತನೆ ಏರ್ಪಡಿಸಿರುತ್ತೆ.

### ಹೆಚ್ ಕೆ. ಕುಮಾರಸ್ವಾಮಿಯವರು ಅಪೆಕ್ಸ್ ಬ್ಯಾಂಕ್ ಡೈರೆಕ್ಟರ್

ಮೈಸೂರು ಪ್ರಾಂತ್ಯ ಅಪೆಕ್ಸ್ ಬ್ಯಾಂಕ್ ಡೈರೆಕ್ಟರ್ ಗಳ ಚುನಾವಣೆಯು ನೆನ್ನೆ ನಡೆದು ಜಿಲ್ಲಾ ಕ್ಷೇತ್ರದಿಂದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ಚುನಾಯಿತರಾಗಿರುತ್ತಾರೆ.

### ಜೆ ಸ್ವಾಮಿದಾಸರ ಅನ್ನ ಸತ್ಯಾಗ್ರಹ ಮತ್ತು ಮೌನವ್ರತ

ರಾಜಧಾನಿಯ ಟೌನ್ ಹಾಲ್ ಮೈದಾನದಲ್ಲಿ ಈ ಬೆಳಿಗ್ಗೆಯಿಂದ ೧೫ನೇ ಕಂಪನಿಗೆ ಸೇರಿರುವ ಶ್ರೀ ಜೆ ಸ್ವಾಮಿದಾಸ್ ಮತ್ತು ತಿವಾಯರನು ಮಠದ ಶ್ರೀ ರುದ್ರಪ್ಪಯ್ಯ ಶಾಸ್ತ್ರಿಯವರು ೩ ದಿನಗಳ ಸತ್ಯಾಗ್ರಹವನ್ನು ಆರಂಭಿಸಿರುತ್ತಾರೆ. ಶ್ರೀ ಸ್ವಾಮಿದಾಸರು ಮೌನವ್ರತವನ್ನೂ ಕೈಗೊಂಡು, ತಮ್ಮ ಕಷ್ಟನಷ್ಟ ಕುರಿತು ಹಲವು ವಿಷಯಗಳನ್ನು ಸೂಚಿಸುವ ಪಟ್ಟಿಯೊಂದನ್ನು ತಗುಲು ಹಾಕಿಕೊಂಡಿರುವರು.

### ಅಸ್ಸಾಂ ಗಡಿ ಪ್ರದೇಶಕ್ಕೆ ನೆಹರೂ ಪ್ರಯಾಣ

ಅಸ್ಸಾಮಿನ ಗಡಿ ಪ್ರದೇಶದಲ್ಲಿರುವ ಸ್ಥಳಗಳಿಗೆ ಭೇಟಿ ಕೊಡಲು ಪ್ರಧಾನಿ ನೆಹರೂರವರು ಮಣಿಪುರದ ರಾಜಧಾನಿ ಇಂಫಾಲಿಗೆ ಪ್ರಯಾಣ ಮಾಡಿರುತ್ತಾರೆ. ಅವರೊಡನೆ ಬರ್ಮಾದ ಪ್ರಧಾನಿ ನೂರರವರೂ ಸೇರಿರುವರು. ಇಂಫಾಲಿಗೆ ಜೀಪು ಕಾರಿನಲ್ಲಿ ಅವರು ಹೋಗುತ್ತಿದ್ದಾಗ ದಾರಿಯಲ್ಲಿ ... ಬಳಿ ಜನರು ನೆಹರೂರವರಿಗೆ ಜಯಘೋಷ ಮಾಡಿದರು.

## ಚಿನ್ನದ ಗಣಿಯ ಒಪ್ಪಂದ

### ಶಾಸನಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಸೂ (ಬೆಂಗಳೂರು ೩೦

ಸರ್ಕಾರಿ ಒಪ್ಪಂದಗಳಿಗೆ ಸಂಸ್ಥಾನದಲ್ಲಿ ಒಟ್ಟು ೪೭ ಜನ ಏಜೆಂಟರುಗಳನ್ನು ಕಮಿಷನ್ ಆಧಾರದ ಮೇಲೆ ನೇಮಿಸಲಾಗಿದೆಯೆಂದೂ ಅವರುಗಳಿಗೆ ಒಟ್ಟು ೨೫,೦೦೦ ರೂ ಗಳ ಕಮಿಷನ್ ಕೊಡಲಾಗಿದೆಯೆಂದೂ ಈ ದಿನ ಶಾಸನಸಭೆಯಲ್ಲಿ ಸಚಿವ ಶ್ರೀ ಎಚ್ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ಚಿನ್ನದ ಗಣಿ ಒಪ್ಪಂದವನ್ನು ೧೯೪೪ರಲ್ಲಿ ಪುನರ್ ಮಾಡಿಕೊಳ್ಳಲಾಯಿತೆಂದೂ ಚಿನ್ನದ ಗಣಿ ಕಂಪನಿಗಳಿಂದ ೧೯೫೨ರಲ್ಲಿ ... ಲಕ್ಷ ಮತ್ತು ೧೯೫೧ರಲ್ಲಿ ೧೯,೫೦,೦೦೦ ಲಕ್ಷ ರೂ ವರಮಾನ ಬಂದಿರುವುದಾಗಿಯೂ, ಚಿನ್ನದ ಗಣಿಗಳ ಮೇಲ್ವಿಚಾರಣೆಗಾಗಿ ಸರ್ಕಾರದವರು ಒಬ್ಬ ಸೈರಕ್ಟರರನ್ನು ನೇಮಿಸುವ ಬಗ್ಗೆ ೪ ವರ್ಷಗಳ ಹಿಂದೆಯೇ ಒಪ್ಪಂದವಾಗಿರುವುದಾಗಿಯೂ ಆದರೆ ಅಗತ್ಯ ಕಂಡುಬಂದಾಗ ನೇಮಿಸಬಹುದೆಂದು ಆ ವಿಷಯವನ್ನು ಪರಿಶೀಲಿಸಲಾಗುತ್ತಿದೆಯೆಂದೂ ಇನ್ನೊಂದು ಪ್ರಶ್ನೆಗೆ ಉತ್ತರವೀಯುತ್ತ ವರಮಾನ ತೆರಿಗೆಯನ್ನು ಕಂಪೆನಿಯವರಿಂದ ವಸೂಲು ಮಾಡಲಾಗುತ್ತಿರುವುದರಿಂದ ಚಿನ್ನದ ಮೇಲಿನ ಸುಂಕವನ್ನು ವಜಾ ಮಾಡಲಾಯಿತೆಂದೂ ವರಮಾನವು ಕಡಿಮೆಯಾಗುವುದಕ್ಕೆ ಇದೂ ಒಂದು ಕಾರಣವೆಂದೂ ತಿಳಿಸಲಾಯಿತು.

---

## ಮೈಸೂರು ಜಿಲ್ಲಾ ಬೋರ್ಡ್ ಆಯವ್ಯಯ

### ಲೋಕಲ್ ಸೆಸ್ಸನ್ನು ಹೆಚ್ಚಿಸುವ ಸೂಚನೆ

ಮೈಸೂರು ೩

ಮೈ॥ಜಿಲ್ಲಾ ಬೋರ್ಡು ವಿಶೇಷ ಅಧಿವೇಶನವು ಈ ಮಧ್ಯಾಹ್ನ ೧ ಗಂಟೆಗೆ ಶ್ರೀ ಹೆಚ್ ಎಂ ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ, ೧೯೫೩-೫೪ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಪರಿಶೀಲಿಸಿತು. ಅಧ್ಯಕ್ಷರು ಪೀಠಿಕಾ ಭಾಷಣ ಮಾಡಿ, ಹೊಸ ಆಂದಾಜು ಪಟ್ಟಿಯು ಬೋರ್ಡಿನ ಆಠನೇ ಆಯವ್ಯಯ ಪಟ್ಟಿಯೆಂದೂ, ಮುಂದಿನ ಅಕ್ಟೋಬರಿನಲ್ಲಿ ಚುನಾವಣೆಗಳು ನಡೆದು ಹೊಸ ಬೋರ್ಡ್ ಸ್ಥಾಪನೆಯಾಗಲಿರುವುದಾಗಿಯೂ ತಿಳಿಸಿದರು.

ಜಿಲ್ಲಾ ಬೋರ್ಡಿನ ಹಣಕಾಸಿನ ಪರಿಸ್ಥಿತಿಯು ತೃಪ್ತಿಕರವಾಗಿರುವುದೆಂದು ಅವರು ಹೇಳಿ, ಗ್ರಾಮಗಳಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಲೋಕಲ್ ಸೆಸ್ಸನ್ನು ೧॥ ಆಣೆಯಿಂದ ೨॥ ಆಣೆಗೆ ಹೆಚ್ಚಿಸುವ ಬಗ್ಗೆ ಸದಸ್ಯರು ಪರ್ಯಾಲೋಚಿಸಬೇಕೆಂದು ತಿಳಿಸಿದರು.

ಈ ವರ್ಷದಲ್ಲಿ ಒಟ್ಟು ರೂ ೨೦, ೧೧,೦೦೦ ರೂ ಆದಾಯವೂ, ೧೯,೫೫, ೬೦೦ ರೂ ವೆಚ್ಚವೂ, ಆಗುವುದೆಂದು ಅಂದಾಜಾಗಿದೆ. ಪ್ರಾರಂಭದ ಶಿಲ್ಕು ೫೦,೦೦೦ ಇರುತ್ತದೆ. ವರ್ಷಾಂತ್ಯದಲ್ಲಿ ೧,೧೯,೬೦೦ ರೂ ಉಳಿಯುವ ಸಂಭವವಿದೆ.

## ಕೃಷ್ಣರಾಜನಗರದ ಖೂನಿ ಮೊಕದ್ದಮೆ

### ಆಪಾದಿತ ಸಣ್ಣಪ್ಪ ಸೆಷನ್ಸ್ ವಿಚಾರಣೆಗೆ ಗುರಿ

ಮೈಸೂರು ೩೦

ಕೃಷ್ಣರಾಜನಗರದ ರೈಲ್ವೆ ನಿಲ್ದಾಣದ ಬಳಿ ಹಲವು ಕೊಲೆಗಳಾದ ಸಂಬಂಧವಾಗಿ ಸಣ್ಣಪ್ಪ ಎಂಬುವನನ್ನು ಅಲ್ಲಿನ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಶ್ರೀ ಎಂ ಎಲ್ ರಾಮಸ್ವಾಮಿಯವರು ನೆನ್ನೆ ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು.

ಹೊಳೇನರಸೀಪುರ ತಾಲ್ಲೂಕು ಮಾಕವಳ್ಳಿ ಹಳ್ಳಿಯ ನಿವಾಸಿಯೂ, ಮಾಜಿ ಸಿಪಾಯಿಯೂ ಆದ ಸಣ್ಣಪ್ಪ ಎಂಬುವನು ಕಳೆದ ಸೆಪ್ಟೆಂಬರ್ ೧೧ನೇ ತಾ|| ಚಿಕ್ಕ ಎಂಬುವನ ಮನೆಗೆ ಹೋಗಿ ೩ ವರ್ಷದ ಜಯಮ್ಮ ಎಂಬ ಹುಡುಗಿಯನ್ನು ಮಚ್ಚಿನಿಂದ ಹೊಡೆದು ಕೊಂದು, ಮಗುವಿನ ತಾಯಿ ಸಣ್ಣಮ್ಮ, ಪೋಲೀಸು ಕಾನ್‌ಸ್ಟೇಬಲ್ ಸುಬ್ಬಣ್ಣ, ಜಾವಿದ್ ಮೊಹಿದ್ದೀನ್ ಮತ್ತು ಟ್ರಾಲಿರ್ಸ್ ರಂಗನಾಯಕರವರುಗಳನ್ನು ಘಾಸಿಪಡಿಸಿದನೆಂದೂ, ಅನಂತರ ಅವನೂ ಗುಂಡಿನಿಂದ ... ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು. ಇವರಲ್ಲದೆ ರತ್ನಮ್ಮ, ಹನುಮಮ್ಮ, ಲಿಂಗಣ್ಣ ಮತ್ತು ವೆಂಕಟಪ್ಪ ಎಂಬುವರನ್ನೂ ಅವನು ಗಾಯಗೊಳಿಸಿದನೆಂದೂ ಆಪಾದಿಸಲಾಗಿದ್ದಿತು.

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ಈ ಘಟನೆಯು ನಾನಾ ಜನರಲ್ಲಿ ಕೋಲಾಹಲವನ್ನುಂಟು ಮಾಡಿರುವುದಾಗಿ ತಿಳಿಸಿರುತ್ತಾರೆ. ಆಸ್ಪತ್ರೆಯಲ್ಲಿ ಏಳು ಜನರು ಸತ್ತಿರುವುದೇ ಈ ಕೋಲಾಹಲಕ್ಕೆ ಕಾರಣವಾಯಿತೆಂದೂ ಅವರು ಹೇಳಿರುತ್ತಾರೆ.

ಆಪಾದಿತನು ಘಟನೆಗಳೆಲ್ಲವನ್ನೂ ನಿರಾಕರಿಸಿರುವುದಾಗಿಯೂ ಆ ದಿನ ಚಿಕ್ಕನ ಮನೆಗೆ ಹೋದುದು ನಿಜವಲ್ಲವೆಂದೂ ಹೇಳಿರುವುದಾಗಿ ನ್ಯಾಯಾಧೀಶರು ತಿಳಿಸಿ, ತನಗೆ ಬುದ್ಧಿಸ್ಥಿಮಿತ ತಿಳಿದುಬಂದಿಲ್ಲವೆಂದು ಹೇಳಿರುತ್ತಾರೆ. ಪ್ರಾಸಿಕ್ಯೂಷನ್ ಪರವಾಗಿ ಹೇಳಲಾದಂತೆ ಚಿಕ್ಕನ ಮೇಲೆ ಆಪಾದಿತನಿಗೆ ದ್ವೇಷವಿದ್ದಿತೆಂದೂ, ಅದರಿಂದ ಜಯಮ್ಮನ ಜೀವವನ್ನು ತೆಗೆದನೆಂದೂ ಗೊತ್ತಾಗುವುದಾಗಿ ನ್ಯಾಯಾಧೀಶರು ಭಾವಿಸಿರುತ್ತಾರೆ.

ಆಪಾದಿತನ ತಂದೆ ರಾಮಪ್ಪನವನ್ನು ಸಾಕ್ಷಿಯಾಗಿ ವಿಚಾರಿಸಲಾಗಿ, ಅವನು ೧೦ ವರ್ಷಗಳ ಹಿಂದೆ ಮನೆಯನ್ನು ಬಿಟ್ಟು ಹೋದವನು ... ಆ ದಿನ ಚಿಕ್ಕನು ತನ್ನನ್ನು ... ಕರೆದಿದ್ದನೆಂದೂ, ಇದು ಆಪಾದಿತನನ್ನು ರೊಚ್ಚಿಗೆಬ್ಬಿಸಿದ್ದಿತೆಂದೂ ತೀರ್ಪಿನಲ್ಲಿ ಹೇಳಲಾಗಿದೆ. ಆಪಾದಿತನಿಗೆ ಮತ್ತೊಬ್ಬ ಹೆಂಡತಿ ಜಯಮ್ಮ ಎಂಬುವಳು ಇದ್ದಾಳೆಂದೂ ಗೊತ್ತಾಗಿದೆ.

ಈ ವಿಷಯಗಳನ್ನು ಮನಗಂಡ ನ್ಯಾಯಾಧೀಶರು ಕೊಲೆಯ ಉದ್ದೇಶವು ಯಾವುದೇ ಇದ್ದರೂ, ಅವನ ವಿರುದ್ಧವಾಗಿ ಸಾಕಾದಷ್ಟು ಸಾಕ್ಷ್ಯವು ದೊರೆತಿರುವುದಾಗಿ ತಿಳಿಸಿ ಅವನನ್ನು ಸೆಷನ್ಸಿಗೆ ಗುರಿಪಡಿಸಿರುತ್ತಾರೆ.

## ರಷ್ಯದಲ್ಲಿ ಖೈದಿಗಳ ಸಾಮೂಹಿಕ ಖುಲಾಸೆ

ರಷ್ಯದಲ್ಲಿ ಖೈದಿಗಳ ಸಾಮೂಹಿಕ ಬಂಧವಿಮೋಚನೆಗೆ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಐದು ವರ್ಷಗಳಿಗೆ ಕಡಿಮೆ ಅವಧಿ ಶಿಕ್ಷೆ ಹೊಂದಿದವರೆಲ್ಲರನ್ನೂ ಖುಲಾಸೆ ಮಾಡುವಂತೆಯೂ, ಆ ಅವಧಿಗಿಂತ ಹೆಚ್ಚಿನ ಶಿಕ್ಷೆ ಅನುಭವಿಸುತ್ತಿರುವವರ ಸಜಾವನ್ನು ಅರ್ಧಕ್ಕೆ ಇಳಿಸುವಂತೆಯೂ ರಷ್ಯದ ಅಧ್ಯಕ್ಷ ವೊರೋಷಿಲಾವ್ ಮತ್ತು ಸುಪ್ರೀಂ ಸೋವಿಯಟ್ ಮಂಡಲಿಯ ಕಾರ್ಯದರ್ಶಿ ಪೆಗೋವ್ ರವರು ಆಜ್ಞಾಪಿಸಿರುತ್ತಾರೆ. ಆರ್ಥಿಕವಾದ ಮತ್ತು ಮಿಲಿಟರಿಗೆ ಸಂಬಂಧಪಟ್ಟ ಅಪರಾಧಗಳನ್ನು ಮಾಡಿದವರನ್ನೂ, ಹತ್ತು ವರ್ಷಕ್ಕೆ ಕಡಿಮೆ ಇರುವ ಬಾಲಕಿಯರನ್ನೂ, ಗರ್ಭಿಣಿ ಸ್ತ್ರೀಯರನ್ನೂ ಮತ್ತು ೫೫ ವರ್ಷದ ಗಂಡಸರು, ೫೦ ವರ್ಷದ ಸ್ತ್ರೀಯರನ್ನೂ, ಗುಣವಾಗದೇ ಇರುವ ರೋಗಿಗಳನ್ನೂ ಅವರುಗಳ ಶಿಕ್ಷೆಯ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಖುಲಾಸೆ ಮಾಡಲು ಆಜ್ಞೆಯಾಗಿದೆ.

## ಶೃಂಗೇರಿ ಸಮಾರಂಭಗಳಿಗೆ ಆಹ್ವಾನ

೨೦ ನೇ ಏಪ್ರಿಲ್ ತಾರೀಖಿನಿಂದ ಶೃಂಗೇರಿಯಲ್ಲಿ ನಡೆಯುವ ... ಗಳಿಗೆ ... ಧನ ಸಹಾಯವನ್ನು ... ಇದಕ್ಕೆ ... ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

## ಬ್ರಿಟನ್ನಿನಲ್ಲಿ ರಸ್ತೆ ಸಂಚಾರದ ರಾಷ್ಟ್ರೀಕರಣ ರದ್ದು

ಬ್ರಿಟನ್ನಿನ ಲೇಬರ್ ಸರ್ಕಾರದ ಅಧಿಕಾರಾವಧಿಯಲ್ಲಿ ಬ್ರಿಟನ್ನಿನ ರಸ್ತೆ ಸಂಚಾರ ವ್ಯವಸ್ಥೆಯನ್ನು ರಾಷ್ಟ್ರೀಕರಿಸಲಾಗಿತ್ತಷ್ಟೆ. ಈಗ ಅಲ್ಲಿ ಅಧಿಕಾರದಲ್ಲಿರುವ ಟೋರಿ ಸರ್ಕಾರದವರು ಅದನ್ನು ಮತ್ತೆ ಖಾಸಗಿ ಮಾಲೀಕತ್ವಕ್ಕೆ ವಹಿಸುವ ಬಗ್ಗೆ ಮಸೂದೆಯನ್ನು ಅಂಗೀಕರಿಸಿರುವರು.

### ಮಾರಾಟ ತೆರಿಗೆ ತೆಗೆಯಲು ಸಾರ್ವಜನಿಕರ ರುಜು ಸಂಗ್ರಹ

ಮೈಸೂರಿನ ಜನರಲ್ ಮರ್ಚೆಂಟ್ಸ್ ಅಸೋಸಿಯೇಷನ್ನಿನವರು ಮನವಿಯೊಂದನ್ನು ಹೊರಡಿಸಿ, ಮಾರಾಟ ತೆರಿಗೆಯ ವಿರುದ್ಧವಾಗಿ ಜನಾಭಿಪ್ರಾಯವನ್ನು ಸರ್ಕಾರಕ್ಕೆ ಕಳುಹಿಸುವ ವಿಚಾರದಲ್ಲಿ ತಾವು ತೊಡಗಿರುವುದಾಗಿಯೂ ಈ ಬಗ್ಗೆ ಸಾರ್ವಜನಿಕರ ಹಸ್ತಾಕ್ಷರ ಪಡೆಯುವ ಕಾರ್ಯವು ಆರಂಭವಾಗಿರುವುದೆಂದೂ, ಈ ಕಾರ್ಯದಲ್ಲಿ ಸಾರ್ವಜನಿಕರು, ಸಹಕರಿಸಬೇಕೆಂದೂ ಕೋರಿರುತ್ತಾರೆ. ಸಂಘದ ಕಾರ್ಯದರ್ಶಿ ಶ್ರೀ ಬಿ ಶ್ರೀಯುಪ್ಪನವರು ಸರ್ಕಾರಕ್ಕೆ ಬೇರೊಂದು ಪ್ರಾರ್ಥನೆಯನ್ನು ಮಾಡಿಕೊಂಡು ತೆರಿಗೆ ವಿರುದ್ಧವಾಗಿ ತಮ್ಮ ಪ್ರತಿಭಟನಾ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಸೂಚಿಸಿರುತ್ತಾರೆ.

## ಶ್ರೀ ರಾಮೋತ್ಸವ ಕಾರ್ಯಕ್ರಮ

ರಾಜಧಾನಿಯಲ್ಲಿ ಶ್ರೀ ರಾಮೋತ್ಸವದ ಅಂಗವಾಗಿ ಸಂತೇಪೇಟೆಯ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೭|| ಗಂಟೆಗೆ ವಿದ್ವಾನ್ ಟಿ ಆರ್ ಶ್ರೀನಿವಾಸರವರ ಸಂಗೀತವು ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುದು.

ಚಾಮುಂಡಿ ಪುರದ ಶ್ರೀ ಶಂಕರನಾರಾಯಣ ಸ್ವಾಮಿ ದೇವಾಲಯದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಬ್ರಂ|| ಶ್ರೀ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಹರಿಕಥೆಯು ಏರ್ಪಾಡಾಗಿದೆ.

ಇರ್ವಿನ್ ರಸ್ತೆ ಬಳಿ ಶ್ರೀ ತುಳಸಿ ಬೃಂದಾವನ ವೈಕುಂಠ ಶ್ರೀ ರಾಮ ಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ವಿ|| ಎಂ ಆರ್ ರಾಮಕೃಷ್ಣ ಭಾಗವತರ್ ಮತ್ತು ಪಾರ್ಟಿಯವರಿಂದ ಸಂಗೀತವು ಉಂಟು.

## ಚಾಲ್ಕೀರದ ಮಾಜಿ ಅರಸರಿಗೆ ರಾಜಧನ

ಚಾಲ್ಕೀರದ ಮಾಜಿ ಅರಸರಾದ ... ಕೇಂದ್ರ ಸರ್ಕಾರದಿಂದ ... ರಾಜಧನವನ್ನು ... ಶ್ರೀ ... ರವರ ... ತಿಳಿಸಿದರು.

### ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಅಮೋಘ ಗ್ರಂಥಗಳ ದಾನ

ಭಾರತದಲ್ಲಿರುವ ಅಮೆರಿಕಾ ಉಪರಾಯಭಾರಿಯು ಮೈಸೂರಿನ ಸಾರ್ವಜನಿಕ ಪುಸ್ತಕಭಂಡಾರಕ್ಕೆ ವಿವಿಧ ವಿಷಯಗಳ ಮೇಲೆ ಬರೆಯಲಾಗಿರುವ ೨೦೦ ಗ್ರಂಥಗಳನ್ನು ದಾನಮಾಡಿರುತ್ತಾರೆ. ಅವನ್ನು ಓದುಗರಿಗೆ ಕೊಡಲು ಏರ್ಪಾಡಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿ ನಾರಾಯಣ ಅಯ್ಯರ್, ವೀಣೆ. ಮಧ್ಯಾಹ್ನ ೧ ೪೦ ಕೊಳಲು ೨ ಎಂ ಪಿ ನಾಗಮುತ್ತು. ಹಿಂದೂಸ್ಥಾನಿ ಸಂಗೀತ ೪ ೪೦ ಎಂ ವಿ ಪಂಚಾಪಕೇಶನ್ ಗೋಟು ವಾದ್ಯ. ೬ ೧೦ ಗಾನ ವಿಹಾರ ೭ ಎಂ ... ನಾಗಮುತ್ತು, ಹಿಂದೂಸ್ಥಾನಿ ಸಂಗೀತ ೯ ೪೦ ವಿಶ್ವಕರ್ಮ ವಿಮರ್ಶೆ ಎಸ್ ಭದ್ರಯ್ಯ ೮ ವಿ ವೆಂಕಟಸುಬ್ಬರಾವ್, ವೀಣೆ ೮ ೩೦ ಎಂ ಎಸ್ ಕಲ್ಪವಲ್ಲಿ ಅಯ್ಯಂಗಾರ್, ಸಂಗೀತ ೯ ೧೫ ಆಟಪಾಟಗಳ ವಿಮರ್ಶೆ ೯ ೩೦ ಗ್ರಾಮಸ್ಥರಿಗೆ

ಶ್ರೀ ರಮಣಿ ಸಂಗೀತ ವಿದ್ಯಾಲಯ

1061 I ಚಾಮರಾಜ ಅಗ್ರಹಾರ (ಹನುಮಂತನ ಗುಡಿ ಹತ್ತಿರ)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ, ಸಂಚಾಲಕ

Edited, Printed and Published by A R Nagarajan at Sadhvi Press, D. Subbiah Road, Mysore

## ಬಳ್ಳಾರಿ ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿಂದ ರೈಲುಗಳ ತಡೆ

ಬಳ್ಳಾರಿ ಜಿಲ್ಲೆಯ ಭವಿಷ್ಯದ ಸಂಬಂಧವಾಗಿ ನೆಹರೂರವರು ಇತ್ತೀಚೆಗೆ ಮಾಡಿದ ಹೇಳಿಕೆಯಿಂದ ಅಸಮಾಧಾನಗೊಂಡ ವಿದ್ಯಾರ್ಥಿಗಳು ರೈಲುಗಳನ್ನು ತಡೆಯುವುದೇ ಮುಂತಾದ ಉಗ್ರ ಪ್ರದರ್ಶನ ನಡೆಸಿ ಪ್ರತಿಭಟನೆಯನ್ನು ಸೂಚಿಸುವ ಕಾರ್ಯದಲ್ಲಿ ತೊಡಗಿರುತ್ತಾರೆ. ಆ ಜಿಲ್ಲೆಯ ಮುಖ್ಯ ವ್ಯಾಪಾರಕ್ಷೇತ್ರವಾದ ಹೊಸಪೇಟೆಗೆಂದು ಹೊರಟ ರೈಲನ್ನು ನೆನ್ನೆ ಪ್ರದರ್ಶನಕಾರರು ತಡೆದರು. ರೈಲು ನಿಲ್ದಾಣವನ್ನು ಬಿಟ್ಟು ಕದಲಲಿಲ್ಲ. ಆಗ್ಗೆ ಸಶಸ್ತ್ರ ಪೋಲೀಸು ಪಡೆಯನ್ನು ಕಳುಹಲಾಗಿದೆ. ಬಳ್ಳಾರಿಯಲ್ಲಿ ೩೦೦ ಮಂದಿ ವಿದ್ಯಾರ್ಥಿಗಳು ನೆನ್ನೆ ರೈಲಿಗೆ ಅಡ್ಡಲಾಗಿ ಕುಳಿತಿದ್ದರು. ... ಮಂದಿಯನ್ನು ಬಂಧಿಸಿ ಉಳಿದವರನ್ನು ಚದುರಿಸಲಾಯಿತು. ಅಲ್ಲಿ ನೆನ್ನೆ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಭಾರತ ಸರ್ಕಾರದ ನಿರ್ಧಾರವನ್ನು ಖಂಡಿಸುವ ನಿರ್ಣಯವನ್ನು ಮಾಡಲಾಯಿತು.

## ಮದ್ರಾಸಿನಲ್ಲಿ ೬೦ ವರ್ಷದಿಂದ ಇಲ್ಲದಷ್ಟು ಶಖೆ

ಮದ್ರಾಸು ನಗರದಲ್ಲಿ ೬೦ ವರ್ಷದಿಂದ ಇಲ್ಲದಷ್ಟು ಶಖೆ ಈಗ ಇರುತ್ತದೆ. ಕಳೆದ ಶುಕ್ರವಾರ ಅಲ್ಲಿ ೧೦೬ ಡಿಗ್ರಿ ಉಷ್ಣ ದಾಖಲಾಯಿತು. ವಿಮಾನಂಬಾಕಂನಲ್ಲಿ ೧೦೫ ೧ ಮತ್ತು ನುಂಗಂಬಾಕಂನಲ್ಲಿ ೧೦೫ ೬ ರಷ್ಟು ಉಷ್ಣಾಂಶವಿದ್ದುದಾಗಿ ಹೇಳಲಾಗಿದೆ.

## ನಿಜಾಮರ ಭೂಮಿ ವಶಕ್ಕಾಗಿ ೪೦ ಲಕ್ಷ ರೂ ಪರಿಹಾರ

ಹೈದರಾಬಾದು. ನಿಜಾಮರಿಂದ ಅಲ್ಲಿನ ಸರ್ಕಾರದವರು ಜಮೀನುಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ೪೦ ಲಕ್ಷ ರೂ ಪರಿಹಾರ ಕೊಡಲು ಶಾಸನ ಸಭಾ ಕಾಂಗ್ರೆಸ್ ಪಕ್ಷವು ನಿರ್ಧರಿಸಿರುತ್ತದೆ.

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY.)

ಗೂರ್ಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಲಾಯಿಲಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್ ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು.

ರಿಜಿ ನಂ. 792 [illegible] ಬೆಲೆ [illegible] 3 ಕಾಸು

# ಸಾಧ್ವಿ

ಸಂಪುಟ ೧೧ ] ಮಂಗಳವಾರ ೩೧-೩-೧೯೫೩ [ ಸಂಚಿಕೆ [illegible]

# — ಯುದ್ಧ ಸಮಾಪ್ತಿಗೆ — ಚೀಣಾದ ಹೊಸ ಸಲಹೆ

## ಜಿಲ್ಲಾ ಬೋರ್ಡಿನ ಆಯವ್ಯಯ

### ಆದಾಯ ಮತ್ತು ವೆಚ್ಚದ ಬಾಬುಗಳ ಪಟ್ಟಿ ವಿವರ

ಮೈಸೂರು ೩೧

ಮೈಸೂರು ಜಿಲ್ಲಾ ಬೋರ್ಡಿನ ವಿಶೇಷ ಅಧಿವೇಶನದಲ್ಲಿ ನೆನ್ನೆ ಮಂಡಿಸಲಾದ ಆಯವ್ಯಯ ಪಟ್ಟಿಯ ಮುಖ್ಯ ವಿಷಯಗಳು ಹೀಗಿವೆ —

**ಆದಾಯ**

ಮುಖ್ಯ ವರಮಾನದ ಬಾಬುಗಳು— ರೂ [illegible],೦೦೦ ಭೂಕಂದಾಯದ ಮೇಲಿನ ಸೆಸ್ಸು ರೂ [illegible],೦೦೦, ಅರಣ್ಯ ಮತ್ತು ಅಬ್ಕಾರಿ ವರಮಾನದ ಲೋಕಲ್ ಸೆಸ್ಸು ರೂ [illegible],೦೦೦ [illegible] ಮತ್ತು [illegible] ಬಾಬತು ರೂ [illegible],೦೦೦ [illegible], [illegible] ರೂ [illegible],೦೦೦, ಸರ್ಕಾರದ [illegible] ಸಹಾಯ ಮತ್ತು [illegible] ಗ್ರಾಂಟು ರೂ [illegible], [illegible] ಬಾಬು [illegible] ೦೦೦, ಸಾರ್ವಜನಿಕ ಸಾಲ ರೂ [illegible],೦೦೦

**ವೆಚ್ಚದ ಬಾಬುಗಳು**

[illegible] ಕೆಲಸಗಳಿಗಾಗಿ ರೂ. [illegible], ಬೋರ್ಡಿನ [illegible] ರಿಂದ [illegible] ರೂ [illegible], [illegible] ಮತ್ತು [illegible] ರೂ [illegible], ಸಾರ್ವಜನಿಕ ಆರೋಗ್ಯ ಮತ್ತು [illegible] ರೂ [illegible], ಇತರ ಬಾಬು ರೂ [illegible], ಸಾರ್ವಜನಿಕ ಸಾಲ ರೂ [illegible],೦೦೦

ಒಟ್ಟು ಆದಾಯ ರೂ [illegible] ವೆಚ್ಚ ರೂ [illegible]

ಆಯವ್ಯಯ ಪಟ್ಟಿಯ ಪರಿಶೀಲನೆಗೆ [illegible] ಶ್ರೀಗಳಾದ [illegible] ಮತ್ತು [illegible] ಸಲಹೆ [illegible] ಅಭಿಪ್ರಾಯ [illegible] ಕಾಲಾವಕಾಶ [illegible] ಹೇಳಿದರು

ಅಧ್ಯಕ್ಷರು [illegible] ಪಟ್ಟಿಗಳನ್ನು ಒದಗಿಸುವುದಾಗಿ [illegible]

[illegible] ಶ್ರೀಗಳಾದ [illegible] ಸಲಹೆ [illegible] ಮಂಜೂರು ಮಾಡಲಾಯಿತು

## ಕೊಟ್ಟ ಭೂಮಿ ಹಿಂತೆಗೆದುಕೊಳ್ಳುವ ಸರ್ಕಾರದ ಹಕ್ಕಿಲ್ಲ

### ಹೈಕೋರ್ಟಿನ ತೀರ್ಪು

ಬೆಂಗಳೂರು ೩೧

[illegible] ಕೊಡುವ ಪ್ರಕಾರ ಒಪ್ಪಂದ [illegible] ಜಮೀನನ್ನು ಕೊಟ್ಟನಂತರ ಆ ಬಗ್ಗೆ [illegible] ಪುನಃ [illegible] ಹಿಂತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲವೆಂದು ಹೈಕೋರ್ಟಿನ [illegible] ತೀರ್ಪಿತ್ತರು

[illegible]

ಹಾಸ್ಟೆಲ್ [illegible] ಬಗ್ಗೆ ಹೈಕೋರ್ಟಿಗೆ ಅರ್ಜಿ

ಮೈಸೂರು ಸರ್ಕಾರ, [illegible] ಹೈಕೋರ್ಟಿನಲ್ಲಿ [illegible] ಬೆಂಗಳೂರಿನ [illegible] ಶ್ರೀ ಎಂ. [illegible] ಅರ್ಜಿ [illegible]

[illegible] ಬೇಕೆಂದು ಕೋರಿರುತ್ತಾರೆ

ಬೆಂಗಳೂರಿನ [illegible] ವರೆಂದು ತಿಳಿದುಬಂದಿದೆ

## ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಪ್ರತಿನಿಧಿಗಳು

### ಪೌರಸಭೆಯಲ್ಲಿ ನಿರ್ಣಯ

ಮೈಸೂರು ೩೧

ನಗರದ ಪೌರಸಭೆಯ [illegible] ಅಧಿವೇಶನವು ನೆನ್ನೆ ನಡೆದು [illegible]

[illegible]

ಅಧ್ಯಕ್ಷರು [illegible]

[illegible]

ಮುಂದಿನ ತಿಂಗಳು [illegible] ರಾಷ್ಟ್ರಗಳ [illegible] ಗೊತ್ತಾಗಿದೆ

## ಗಾಣಿಗಯವರಿಗೆ [illegible] ಲಕ್ಷ ರೂ. ಕೈಗಾರಿಕಾ ಸಾಲ

### ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ.ವ.ಪ್ರ. ಬೆಂಗಳೂರು ೩೧

[illegible] ಶಾಸನ ಸಭೆಯಲ್ಲಿ [illegible] ಶ್ರೀ [illegible] ಪ್ರಶ್ನೆಗೆ ಉತ್ತರ [illegible], ಕೈಗಾರಿಕಾ ಉದ್ಯಮಗಳಿಗೆ [illegible] ರೂ ಗಳನ್ನು ಸಾಲವಾಗಿ ಕೊಟ್ಟಿರುವುದಾಗಿ [illegible]

[illegible]

ರೈತರುಗಳಿಗೆ [illegible] ಸಾಲ [illegible] ಲಕ್ಷ ರೂ [illegible] ತಿಳಿಸಲಾಯಿತು

[illegible] ಸಭೆಯಲ್ಲಿ ಶ್ರೀ [illegible] ಪ್ರಶ್ನೆಗೆ ಉತ್ತರವಾಗಿ, [illegible] ಮೈಸೂರು [illegible]

## ಕೊರಿಯಾ ಯುದ್ಧ ಸಮಾಪ್ತಿಗೆ ಚೀಣಾಪ್ರಧಾನಿ ಸಲಹೆ

ಕೊರಿಯಾ ಯುದ್ಧವನ್ನು ಮುಕ್ತಾಯ ಮಾಡಿ ಶಾಂತಿಯನ್ನು [illegible] ಚೀಣಾದ ಪ್ರಧಾನಿ [illegible] ಸಲಹೆಯನ್ನು [illegible]

## ಶೆರಂಗಿ [illegible] ಹಾವಿನ [illegible]

[illegible]

ಏಪ್ರಿಲ್ ೬ ನೇ ತಾ॥ ನಿಂದ [illegible] ಬೇಕೆಂದು [illegible] ಹೊರಡಿಸಿರುತ್ತಾರೆ.

## ಕೊರಿಯಾ ಯುದ್ಧ ಖೈದಿಗಳ ವಿನಿಮಯಕ್ಕೆ ಚೀಣಾ ಸಮ್ಮತಿ.

ತೀವ್ರ ಗಾಯಾಳುಗಳಿಂದ ಕೂಡಿರುವ ಮತ್ತು ಗಾಯಗೊಂಡಿರುವ ಕೊರಿಯದ ಖೈದಿಗಳ ವಿನಿಮಯವಾಗಬೇಕೆಂದು ವಿಶ್ವ ಸಂಸ್ಥೆಯ ಪ್ರಧಾನ ಸೇನಾನಿ, ಜ|| ಮಾರ್ಕ್ ಕ್ಲಾರ್ಕರವರು ಕೇಳಿದುದನ್ನು ಚೀಣ ಮತ್ತು ಕೊರಿಯಾಗಳ ಕಮ್ಯೂನಿಸ್ಟ್ ನಾಯಕರು ಒಪ್ಪಿರುತ್ತಾರೆ

## ಸ್ಟಾಲಿನ್ ಬಗ್ಗೆ ರಕ್ತದಲ್ಲಿ ಕವನ

ಹೈದರಾಬಾದಿನ ಮಹ್ದಿ ಅಬೀದಿ ಎಂಬುವನು ತನ್ನ ರಕ್ತದಲ್ಲಿ ಮಾರ್ಷಲ್ ಸ್ಟಾಲಿನ್ನರ ಜೀವನ ಚರಿತ್ರೆಯನ್ನು ೧೪ ಪುಟಗಳಲ್ಲಿ ಕವನದ ರೂಪವಾಗಿ ಬರೆದಿರುತ್ತಾನೆ ಅವನ್ನು ದೆಹಲಿಯಲ್ಲಿರುವ ರಷ್ಯದ ರಾಯಭಾರಿ ಕಛೇರಿಗೆ ಕಳುಹಿಸಲಾಗುವುದು

## ೩ ಲಕ್ಷ ರೂ. ಮೋಸಕ್ಕಾಗಿ ಅಮೆರಿಕದವನ ಬಂಧನ

ಕಲ್ಕತ್ತೆಯ ಅಂಗಡಿಯೊಂದಕ್ಕೆ ೨ ಲಕ್ಷ ೫೦ ಸಾವಿರ ರೂ ಮೋಸ ಮಾಡಿದನೆಂದು ಅಮೆರಿಕದ ವ್ಯಾಪಾರಿ, ಗಾರ್ಡನ್ ಲೀಸ್ ಎಂಬಾತನನ್ನು ದಸ್ತಗಿರಿ ಮಾಡಲಾಗಿದೆ. ಅವನು ಅಮೆರಿಕಕ್ಕೆ ವಿಮಾನದಲ್ಲಿ ಹೊರಡಲು ಏರ್ಪಾಡು ಮಾಡಿಕೊಂಡಿದ್ದನು ೩೦ ಸಾವಿರ ರೂ ಜಾಮೀನಿನ ಮೇಲೆ ಅವನನ್ನು ಬಿಡಲಾಗಿದೆ

## ೨೬ ವರ್ಷಗಳ ನಂತರ ಕಣ್ಣು ಬಂದ ಪ್ರಸಂಗ

೧ ವರ್ಷದ ಮಗುವಿನ ಆಗಿನಿಂದ ೨೭ ವರ್ಷದವರೆಗೆ ಅಂಧನಾಗಿದ್ದ ಚಿಕಾಗೋದ ವಿಲಿಯಂ ಓರ್ಕ ಎಂಬ ಉಪಾಧ್ಯಾಯನಿಗೆ ಈಗ ಕಣ್ಣು ಕಾಣತೊಡಗಿದೆ. ಕಣ್ಣು ಕಾಣಿಸಿದ ಕೂಡಲೇ ಅವನು ತನ್ನ ಹೆಂಡತಿಯನ್ನು ಮೊದಲು ನೋಡಿ, ತಾನು ಭಾವಿಸಿದ್ದುದಕ್ಕಿಂತಲೂ ಅವಳ ಮುಖವು ಸುಂದರವಾಗಿರುವುದಾಗಿ ತಿಳಿಸಿದ್ದಾನೆ

## ಗುಂಡ್ಲುಪೇಟೆ ರೈತರಿಗೆ ತೊಂದರೆ

ಗುಂಡ್ಲುಪೇಟೆ ತಾಲ್ಲೂಕಿನ ಪರಸ್ಪರ ಸಹಕಾರ ಸಂಘಗಳ ಡಿಪೋಗಳಲ್ಲಿ ಈಗ ಆರೇಳು ತಿಂಗಳುಗಳಿಂದ ರೈತರಿಗೆ ಬೇಕಾಗುವ ಗಾಡಿ ಪಟ್ಟಿ, ಬಂಡಿ ಪಟ್ಟಿ, ಜೋಕದ ಗುಳುವ ದಬ್ಬೆ ಇವುಗಳು ದೊರೆಯದೆ ವ್ಯವಸಾಯವನ್ನು ಗೊಬ್ಬರ ಗೋಡು. ಮಾಡಲು ಇದಕ್ಕೂ ತುಂಬಾ ತೊಂದರೆಯಾಗಿ ರೈತರು. ಪ್ರಮುಖರು ತಮ್ಮ ತಾಲ್ಲೂಕು ಆಫೀಸರುಗಳಿಗೆ ಎಷ್ಟು ಬಾರಿ ತಿಳಿಸಿದ್ದಾಗ್ಯೂ, ಇದುವರೆಗೆ ಸದರಿ ಸಾಮಾನುಗಳು ತಾಲ್ಲೂಕಿಗೆ ಬಂದಿರುವುದಿಲ್ಲ ವ್ಯವಸಾಯ ಇಲಾಖೆಯವರಾದರೂ ಮೇಲ್ಕಂಡ ಸಾಮಾನುಗಳನ್ನು ಕೂಡಲೇ ತರಿಸಿ, ರೈತರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಬೇಕು ಎಂಬುದಾಗಿ ಗುಂಡ್ಲುಪೇಟೆ ತಾಲ್ಲೂಕಿನ ಸಹಕಾರ ಸಂಘಗಳ ಮಾಜಿ ಅಧ್ಯಕ್ಷರಾದ ಶ್ರೀ ಬಿ ದೊಡ್ಡಯ್ಯನವರು ತಿಳಿಸಿರುತ್ತಾರೆ.

## ಶ್ರೀ ರಾಮೋತ್ಸವ ಕಾರ್ಯಕ್ರಮ

ರಾಜಧಾನಿಯಲ್ಲಿ ಶ್ರೀ ರಾಮೋತ್ಸವದ ಅಂಗವಾಗಿ ಸಂತೆಪೇಟೆ ಕುಂಚಿಟಿಗರ ಶ್ರೀ ರಾಮಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀಮತಿ ಚೊಕ್ಕಮ್ಮನವರ ಸಂಗೀತವು ನಡೆಯುವುದು.

ಚಾಮುಂಡಿಪುರದ ಶ್ರೀ ಶಂಕರನಾರಾಯಣಸ್ವಾಮಿ ದೇವಾಲಯದಲ್ಲಿ ಶ್ರೀ ರಾಮ ಪಟ್ಟಾಭಿಷೇಕವು ಇದೆ

ಇರ್ವಿನ್ ರಸ್ತೆಯ ಬಳಿ ಶ್ರೀ ತುಳಸೀ ಬೃಂದಾವನ ವೈಕುಂಠ ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ೧ ಗಂಟೆಗೆ ಪಟ್ಟಾಭಿಷೇಕ ಮತ್ತು ರಾತ್ರಿ ೮ ಗಂಟೆಗೆ ಭಾವಸಾರ ಕ್ಷತ್ರಿಯ ಮಂಡಲಿಯವರಿಂದ ಪಂಡರಿ ಭಜನೆ ಏರ್ಪಾಡಾಗಿದೆ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೯-೩೦ ಘಂಟೆಗೆ ಸಂಗೀತ ವಿದುಷಿ ಟಿ. ಜಲಜಾಕ್ಷಮ್ಮನವರ ಗಾಯನವನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಲಾಗಿದೆ ಮತ್ತು ನಾಳೆ ಮಧ್ಯಾಹ್ನ ೧೨-೩೦ ಕ್ಕೆ ಶ್ರೀ ರಾಮ ಪಟ್ಟಾಭಿಷೇಕವನ್ನು ಏರ್ಪಡಿಸಿರುತ್ತೆ

## ಬ್ರಿಟಿಷ್ ರಾಣಿಗೆ ೫ ಲಕ್ಷ ಪೌಂಡ್ ವಜ್ರದ ಬಹುಮಾನ

ಪ್ರಸಿದ್ಧ ವಜ್ರ ವ್ಯಾಪಾರಿಗಳ ಪರವಾಗಿ ದಕ್ಷಿಣ ಆಫ್ರಿಕದ ವಜ್ರ ವರ್ತಕರ ಕಂಪನಿಯೊಂದು ಬ್ರಿಟಿಷ್ ರಾಣಿ ಎಲಿಜಬೆತ್ತರಿಗೆ ಕಿರೀಟಧಾರಣೋತ್ಸವ ಕಾಲದಲ್ಲಿ ಅತ್ಯಂತ ಉತ್ತಮವೂ ಮತ್ತು ದೊಡ್ಡದೂ ೫ ಲಕ್ಷ ಪೌಂಡು ಬೆಲೆಯುಳ್ಳದ್ದೂ ಆದ ಒಂದು ವಜ್ರವನ್ನು ಬಹುಮಾನವಾಗಿ ಕೊಡಲಿರುವರು ಅದು ದಕ್ಷಿಣ ಆಫ್ರಿಕದ ಒಂದು ಗಣಿಯಲ್ಲಿ ೧೯೪೫ ರಲ್ಲಿ ಸಿಕ್ಕಿತು ಅದರ ತೂಕ ೭೭೦ ಕ್ಯಾರೆಟ್

## ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳಿಗೆ ನೇಮಕ

ಪಬ್ಲಿಕ್ ಸರ್ವಿಸ್ ಕಮಿಷನ್ ಸ್ಥಾಪನೆಯಾದಾಗಿನಿಂದ ಇದುವರೆಗೆ ಒಟ್ಟು ೧೯೯ ನೌಕರರನ್ನು ಸೇರಿಸಿಕೊಳ್ಳಲಾಗಿದೆಯೆಂದೂ ಹಾಗೆ ಆರಿಸಲ್ಪಟ್ಟವರಲ್ಲಿ ಗೆಜೆಟೆಡ್ ಹುದ್ದೆಗಳಿಗೆ ೧ ಬ್ರಾಹ್ಮಣ, ೨ ಒಕ್ಕಲಿಗರು, ೪ ಲಿಂಗಾಯತರು ೩ ಕುರುಬರು, ಇತರರು ಒಟ್ಟು ೬ ಜನಗೆ ಇರುವರೆಂದೂ, ನಾನ್ ಗೆಜೆಟೆಡ್ ಹುದ್ದೆಗಳಿಗೆ ೮೩ ಬ್ರಾಹ್ಮಣರು ೩೯ ಒಕ್ಕಲಿಗರು, ೧೬ ಲಿಂಗಾಯತರು, ೨೩ ಸವರ್ಣ ಹಿಂದುಗಳನ್ನುಳಿದ ಹಿಂದುಳಿದ ವರ್ಗದವರು, ೩೮ ಮುಸಲ್ಮಾನರು, ೧೬ ಕ್ಷತ್ರಿಯರು ೧೬ ಕ್ರಿಸ್ತರು ೧೧ ಬಣಜಿಗರು, ಮತ್ತು ೩೮ ಇತರರು ಇರುವರೆಂದೂ ಶಾಸನ ಸಭೆಯಲ್ಲಿ ತಿಳಿಸಲಾಗಿದೆ

○ ಪ್ರಪಂಚದ ಶಾಂತಿ ಚಳುವಳಿಯ ಮಂತ್ರಾಲೋಚನಾ ಮಂಡಲಿಯಲ್ಲಿರುವ ಕೆನಡಾ ಪ್ರತಿನಿಧಿ ರೆವರೆಂಡ್ ಜೇಮ್ಸ್ ಎಂಡಿಕಾಟ್‌ರವರಿಗೆ ಈ ವರ್ಷದ ಸ್ಟಾಲಿನ್ನರ ಶಾಂತಿ ಬಹುಮಾನವು ದೊರೆತಿರುತ್ತದೆ ಅವರು ಕೆನಡಾ ಶಾಂತಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವರು

## ಬ್ರಿಟಿಷ್ ರಾಣಿಯ ಕಿರೀಟ

ಬರುವ ಜೂನ್ ೨ನೇ ತಾ|| ಕಿರೀಟಧಾರಣೋತ್ಸವ ಕಾಲದಲ್ಲಿ ಬ್ರಿಟನ್ನಿನ ರಾಣಿ ಎಲಿಜಬೆತ್ತರು ಧರಿಸುವ ಕಿರೀಟವನ್ನು ಸಿದ್ಧಗೊಳಿಸುವ ಕೆಲಸವು ನಡೆಯುತ್ತಿದೆ ಈ ಕಿರೀಟವನ್ನು ಹಿಂದೆ ವಿಕ್ಟೋರಿಯಾ ರಾಣಿಯವರು ಧರಿಸಿದ್ದರು. ಬೆಳ್ಳಿಯಿಂದ ಮಾಡಲ್ಪಟ್ಟ ಇದು ವಜ್ರ, ಮುತ್ತು, ಕೆಂಪು ಮತ್ತು ಪಚ್ಚೆಗಳಿಂದ ಕೂಡಿರುತ್ತದೆ ಮೇಲ್ಭಾಗದಲ್ಲಿ ಕ್ರಿಶ್ಚಿಯನ್ ಚಿಹ್ನೆಯಾದ ೪ ಕ್ರಾಸುಗಳೂ, ಫ್ಲೂರ್ ಡಿ ಲಿಸ್ ಎಂಬ ರಾಜ್ಯದ ಗುರುತಿನ ೪ ಚಿಹ್ನೆಗಳೂ ಇವೆ ಅವುಗಳಿಗೆಲ್ಲಾ ಅನರ್ಘ್ಯವಾದ ರತ್ನಗಳನ್ನು ಜೋಡಿಸಲಾಗುವುದು ಕಿರೀಟದಲ್ಲಿ ೭೮೩ ವಜ್ರಗಳು, ೨೭೭ ಮುತ್ತುಗಳು, ೧೭ ಪಚ್ಚೆ, ೧೧ ಗೋಮೇಧಿಕಗಳೂ ೫ ಕೆಂಪುಗಳೂ ಇರುವುವು

## ಹಣದ ಪೆಟ್ಟಿಗೆ ಉಳಿಸಲು ಹೋಗಿ ಬೆಂಕಿಗೆ ತುತ್ತು

ಹಿರಿಯೂರು ಬಳಿ ಎಲ್ಲದಕೆರೆ ಮುಜರೆ ನಾಯಕರ ಕೊಟ್ಟಿಗೆ ಎಂಬ ಗ್ರಾಮಕ್ಕೆ ಕಳೆದ ೨೪ನೇ ತಾ|| ಬೆಂಕಿ ಬಿದ್ದು ೧೨ ಮನೆಗಳು ಸುಟ್ಟುಹೋದುವೆಂದೂ, ಆ ಗ್ರಾಮದ ನಿವಾಸಿ ರಂಗಪ್ಪ ಎಂಬ ೪೫ ವರ್ಷದವನೊಬ್ಬನು ಉರಿ ತಗುಲಿದ ತನ್ನ ಮನೆಯೊಳಗೆ ಇದ್ದ ಹಣದ ಪೆಟ್ಟಿಗೆಯನ್ನು ತರಲು ಒಳಕ್ಕೆ ನುಗ್ಗಿದನೆಂದೂ ಪೆಟ್ಟಿಗೆಯನ್ನು ಹೊರಗೆ ತರುವುದರೊಳಗೆ ಗೋಡೆಯಿಂದ ಹಠಾತ್ತಾಗಿ ಜ್ವಾಲೆಯು ಮನೆಯನ್ನಾವರಿಸಿದ ಕಾರಣ ಅವನು ಸುಟ್ಟು ಭಸ್ಮವಾದನೆಂದೂ ವರದಿಯಾಗಿದೆ

## ಉರಿಗದ ಗಣಿ ಮುಚ್ಚುವ ಬಗ್ಗೆ ಕೇಂದ್ರದ ತನಿಖೆ

ಉರಿಗದಲ್ಲಿರುವ ಚಿನ್ನದ ಗಣಿಯನ್ನು ಮುಚ್ಚುವ ವಿಷಯವನ್ನು ಕೇಂದ್ರ ಸರ್ಕಾರದವರು ತನಿಖೆಗೆ ಒಳಪಡಿಸುವರೆಂದು ತಿಳಿದುಬಂದಿದೆ ಈ ಮಧ್ಯೆ ಈಗ ಇರುವಂತೆಯೇ ವ್ಯವಸ್ಥೆಯು ಮುಂದುವರಿಯುತ್ತಿರಬೇಕೆಂದು ಕೇಂದ್ರದ ಕಾರ್ಮಿಕ ಮಂತ್ರಿಗಳು ಗಣಿ ಅಧಿಕಾರಿಗಳಿಗೆ ಸೂಚನೆಯಿತ್ತಿರುವರೆಂದು ಹೇಳಲಾಗಿದೆ

## ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ನಾಗಸ್ವರ ಮಧ್ಯಾಹ್ನ ೧-೪೦ ಪಿಟೀಲು ೨ ವನಿತಾ ವಿಹಾರ ಸಂಜೆ ೫-೪೨ ನಾಗಸ್ವರ ೬-೧೫ ಬಾಲ ಜಗತ್, ೭ ಸಮೂಹ ದೇಶ, ೭-೨೫ ಗೀತೆ ೭-೩೦ ಜನರಂಜನಿ ೮ ... ಕೃಷ್ಣಸ್ವಾಮಿ, ಸಂಗೀತ ೮-೪೦ ಕಮಲಾದೇವಿ ಚಟ್ಟೋಪಾಧ್ಯಾಯ, ಭಾಷಣ (ದೆಹಲಿಯ ಪ್ರಸಾರ) ೯-೧೫ ಕನ್ನಡ ಪದ್ಯಗಳು ೯-೪೦ ಭಾರತದ ವಿಮಾನ ಬಲದ ೨೦ ನೇ ವಾರ್ಷಿಕೋತ್ಸವದ ಸಂಬಂಧವಾದ ಪರೇಡಿನ ವರದಿ


### ಶ್ರೀ ರಮಣಿ ಸಂಗೀತ ವಿದ್ಯಾಲಯ

1064—1 ಚಾಮರಾಜ ಅಗ್ರಹಾರ

(ವಾಸು ಮನೆ ಎದುರು)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ. ಕೃಷ್ಣಮೂರ್ತಿ,
ಸಂಚಾಲಕ.


## ಬೊಂಬಾಯಿ ಮಾರಾಟ ತೆರಿಗೆ ಕಾನೂನು ಕ್ರಮಬದ್ಧ

ಬೊಂಬಾಯಿ ಮಾರಾಟ ತೆರಿಗೆ ಕಾನೂನು ರಾಜ್ಯಾಂಗ ಬದ್ಧವಾಗಿರುವುದೆಂದು ನೆನ್ನೆ ಸುಪ್ರೀಂ ಕೋರ್ಟು ಬಹುಮತದಿಂದ ತೀರ್ಪು ಕೊಟ್ಟಿತು ಬೊಂಬಾಯಿ ಹೈಕೋರ್ಟಿನವರು ಈ ಕಾನೂನು ರಾಜ್ಯಾಂಗ ಬದ್ಧವಾಗಿಲ್ಲವೆಂದು ತೀರ್ಪಿತ್ತಿದ್ದರ ಮೇಲೆ ಸರ್ಕಾರದವರು ಅಪೀಲು ಹೂಡಿದ್ದರು. ಅವರ ಮಾರಾಟ ತೆರಿಗೆ ಕಾನೂನಿನ ೫ನೇ ಕಲಂ (೧ ಎ) ವಿಧಿಯು ಕ್ರಮಬದ್ಧವಲ್ಲವೆಂದು ಹೈಕೋರ್ಟು ಕೊಟ್ಟಿದ್ದ ರಿಟ್ ಆಜ್ಞೆಯನ್ನು ಸುಪ್ರೀಂ ಕೋರ್ಟು ಎತ್ತಿ ಹಿಡಿಯಿತು

## ಮೈಸೂರು ಪೇಟೆ ಧಾರಣೆ

| | ಪಲ್ಲಕ್ಕೆ ರೂ ಆಣೆ | ರೂ ಆ |
|---|---|---|
| ಕಡಲೆಕಾಯಿ | ೨೩-೬-೨ | ೫೮-೧೨-೦ |
| ಎಳ್ಳು | ೬೮-೩-೦ | |
| ಕಡಲೆಬೇಳೆ | ೪೩-೮-೦ | ೬೯-೧೩-೦ |
| ಹುಚ್ಚೆಳ್ಳು | ೫೦-೪-೦ | [illegible] |
| ತೊಗರಿಬೇಳೆ | ೧೬-೮-೦ | ೫೫-೧೦-೦ |
| ಹುರುಳಿ | ೪೦-೦-೦ | ೪೭-೬-೯ |
| ಹೆಸರು | ೫೬-೨-೦ | ೬೬-೧೩-೨ |
| ಅವರೆ | ೪೨-೬-೦ | ೪೭-೩-೦ |
| ಕಲಸಂದೆ | ೫೦-೮-೦ | ೫೪-೧೫-೦ |
| ಉದ್ದು ಮುಡಿಸಿದ | ೬೩-೯-೦ | |
| ಒಣ ಮೆಣಸು | ೧೯-೨-೨ | ೧೯-೪-೦ |
| ಹುಣಸೇಹಣ್ಣು | ೩-೨-೦ | ೩-೧೧-೦ |
| ತೆಂಗಿನಕಾಯಿ | ೪-೧-೦ | ೪-೧೩-೦ |
| ಚಿಕ್ಕ ತೆಂಗಿನಕಾಯಿ | ೬-೦-೦ | |
| ಕೊಬ್ಬರಿ | ೧೨೦-೦-೦ | ೩೯೬-೨-೦ |

## ಚಿಕ್ಕಮಗಳೂರಿನ ಹೊಸ ಜಿಲ್ಲಾಧಿಕಾರಿಗಳು

ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮತ್ತು ವರಮಾನ ತೆರಿಗೆ ವಿಶೇಷಾಧಿಕಾರಿಯಾಗಿರುವ ಶ್ರೀ ಎಂ ಎಸ್ ಶಂಕರರಾಯರನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ

## ನೀಲಗಿರಿಗೆ ಪ್ರಭುಗಳು

ಶ್ರೀಮನ್ಮಹಾರಾಜರು ಸದ್ಯದಲ್ಲೇ ಉದಕಮಂಡಲಕ್ಕೆ ಪ್ರಯಾಣಮಾಡಿ ಅಲ್ಲಿ ಕೆಲವು ದಿನಗಳವರೆಗೆ ಇರುವರೆಂದು ಗೊತ್ತಾಗಿದೆ.

## ಶಿವಕಥೆ

ಈ ದಿನ ರಾತ್ರಿ ೯ ಘಂಟೆಗೆ ಕನ್ನೇಗೌಡನ ಕೊಪ್ಪಲಿನ ಗರಡಿ ಬೀದಿಯಲ್ಲಿರುವ ಮಾದೇಗೌಡರ ಮನೆ ಮುಂಭಾಗದಲ್ಲಿ ಶಿವಕಥಾ ವಿದ್ವಾನ್ ಎಸ್ ಕೃಷ್ಣಪ್ಪಶಾಸ್ತ್ರಿಗಳಿಂದ ರಾಜಶೇಖರ ವಿಲಾಸ ಎಂಬ ಶಿವಕಥೆಯು ನಡೆಯುತ್ತದೆ.


SRI GAYATHRI

IALKIES

From 31-3-53

R. K. O's

MACAO

With — Robert Mitchem

Iane Russel


Edited, Printed and Published by A. R. Nagarajan at Sadhvi Press, D. Subbiah Road, Mysore

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧, ಬುಧವಾರ ೧-೪-೧೯೫೩ [ಸಂಚಿಕೆ ೧೯೯

# ರಾಜಪ್ರಮುಖರ ಹುದ್ದೆ, ರಾಜಧನಗಳ ರದ್ದಿಲ್ಲ

## ರಾಜಪ್ರಮುಖರ ಸ್ಥಾನಗಳ ರದ್ದಿಲ್ಲ

ಪಾರ್ಲಿಮೆಂಟಿನ ಕೆಳ ಸಭೆಯಲ್ಲಿ ರಾಜಪ್ರಮುಖ ಸ್ಥಾನಗಳ ಸದಸ್ಯರೂ ರಾಜಪ್ರಮುಖರ ಸ್ಥಾನಗಳು ಅಥವಾ ಅವರಿಗೆ ಸಲ್ಲುವ ರಾಜಧನದ ರದ್ದಿಯಾಗಲಾಗುವುದಿಲ್ಲವೆಂದೂ, ರಾಜಪ್ರಮುಖರುಗಳಿಗೆ ಕೇಂದ್ರ ಸರ್ಕಾರದವರು ಕೊಟ್ಟಿರುವ ಭರವಸೆ ಪ್ರಕಾರ ಅವರನ್ನು ಬಲವಂತವಾಗಿ ನಿವೃತ್ತಿಗೊಳಿಸಲಾಗುವುದಿಲ್ಲವೆಂದೂ ಗೃಹ ಮಂತ್ರಿ ಕಚ್ಚರವರು ತಿಳಿಸಿರುತ್ತಾರೆಂದು ವರದಿಯಾಗಿದೆ.

## ಪಾಟಿಯಾಲಾ ಮಾಜಿ ವಿದ್ಯಾ ಮಂತ್ರಿಯ ದಸ್ತಗಿರಿ

ಹೈದರಾಬಾದಿನ ಪೋಲೀಸರು ಕಳೆದ ಮಂಗಳವಾರ ಪಾಟಿಯಾಲಾ ಸಂಸ್ಥಾನದ ಮಾಜಿ ವಿದ್ಯಾಮಂತ್ರಿ ಸರ್ದಾರ್ ಮಹಬೂಬ್ ಖಲೀಲುಲ್ಲಾರವರನ್ನು ದಸ್ತಗಿರಿ ಮಾಡಿದರು. ದೆಹಲಿ ನ್ಯಾಯಾಧೀಶರು ಹೊರಡಿಸಿದ ವಾರಂಟಿನ ಪ್ರಕಾರ ದಸ್ತಗಿರಿಯಾಗಿರುವ ಮಾಜಿ ಮಂತ್ರಿಗಳನ್ನು ಹೈದರಾಬಾದು ನ್ಯಾಯಾಧೀಶರ ಮುಂದೆ ಹಾಜರು ಮಾಡಿದಾಗ ಅವರು ೫೦೦೦೦ ರೂಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ದೆಹಲಿಯ ನ್ಯಾಯಾಧೀಶರು ಜಾಮೀನು ಕೊಡಲು ಅವಕಾಶವಿಲ್ಲದ ವಾರಂಟನ್ನು ಹೊರಡಿಸಿದ್ದರೂ ಸಹ, ಅಪಾದಿತರ ಅಂತಸ್ತನ್ನು ಗಮನಿಸಿ ಅವರನ್ನು ಬಿಡಲಾಗಿದೆ. (ಪಿ ಟಿ ಐ)

## ನಾಟಕವನ್ನು ತಿರಸ್ಕರಿಸಿದ್ದಕ್ಕಾಗಿ ಆತ್ಮಹತ್ಯೆ

ಲಂಡನ್ನಿನ ರಕ್ಷಣಾ ಶಾಖೆಯ ಡೆಪ್ಯುಟಿ ಕಾರ್ಯದರ್ಶಿಯಾಗಿದ್ದ ಮೇಜರ್ ಜನರಲ್ ನೆವಿಲ್ಲಿ ಗಾಡ್ಫ್ರೇ ಹಿಂದ್ ಮತ್ತು ಅವರ ಪತ್ನಿಯವರು ತಮ್ಮ ಸ್ವಗೃಹದ ಅಡಿಗೆ ಮನೆಯಲ್ಲಿ ಒಂದು ವರ್ಷ ಕಾಲ ಶ್ರಮವಹಿಸಿ ತಯಾರಿಸಿದ ನಾಟಕ ಗ್ರಂಥವನ್ನು ಬ್ರಿಟಿಷ್ ಬ್ರಾಡ್ ಕ್ಯಾಸ್ಟಿಂಗ್ ಕಾರ್ಪೊರೇಷನ್ನಿನವರು ಪ್ರಸಾರ ಮಾಡಲು ನಿರಾಕರಿಸಿದ ಕಾರಣಕ್ಕಾಗಿ ಅತೀವ ಕೋಪ ಹಾಗೂ ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ.

## ಕೂಡ್ಲಿ ಜಗದ್ಗುರುಗಳ ಪಾದಪೂಜಾ ಸಮಾರಾಧನೆ

ಬಸವನಗುಡಿಯ ಶ್ರೀಮನ್ ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆ ಆವರಣದಲ್ಲಿರುವ ಶ್ರೀ ಕೂಡಲಿ ಶೃಂಗೇರಿ ಮಠದ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮಿಗಳವರ ಸನ್ನಿಧಿಯಲ್ಲಿ ಶ್ರೀ ಗುರುಗಳ ನವರಾತ್ರಿ ಮಹೋತ್ಸವದ ಸಮಾರಂಭದ ಪೂರ್ವಭಾವಿಯಾಗಿ ನಡೆಯುತ್ತಿರುವ ಶಾಸ್ತ್ರ ಸಭೆಯ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಬಿ ಎಸ್. ವೆಂಕಟರಾಮಯ್ಯ ಮತ್ತು ಶ್ರೀ ವಿ ಲಕ್ಷ್ಮೀ ಸುಬ್ರಹ್ಮಣ್ಯ ಶಾಸ್ತ್ರಿ ಗಳಿಂದ ವಾಚನವಿದೆ. ನಾಳಿದ್ದು ಆ||ವಿ|| ಪಿ ಅಂದ್ರ ಕೇಸರ ಭಟ್ಟರಿಂದ ಉಪನ್ಯಾಸ ಮತ್ತು ಆನೇಕಲ್ ಆ||ವಿ|| ಕೆ ಪುಟ್ಟಸ್ವಾಮಿ ಭಾಗವತರಿಂದ ಯೋಗಾಸನ ಪ್ರದರ್ಶನವೂ ರಾತ್ರಿ ೭ ಗಂಟೆಗೆ ನಡೆಯುವುದು.

## ಬಳ್ಳಾರಿ ಜಿಲ್ಲೆ ಬಗ್ಗೆ ಕೇಂದ್ರಕ್ಕೆ ಮನವಿ

ಬೆಂಗಳೂರು ೧

ಬಳ್ಳಾರಿ ಜಿಲ್ಲೆಯ ಭವಿಷ್ಯವನ್ನು ಆ ಪ್ರದೇಶದ ಜನರ ಅಭಿಮತದ ಪ್ರಕಾರ ತೀರ್ಮಾನಿಸಬೇಕೆನ್ನುವುದು ಸಹಜವೆಂದು ಮೈಸೂರು ಶಾಸನಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿ, ೧೫ ದಿನಗಳಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೈಸೂರು ಸರ್ಕಾರದವರು ಪತ್ರ ಬರೆಯಲಿರುವುದಾಗಿ ತಿಳಿಸಿದರು. ಜ|| ವಾಂಚೂರವರ ವರದಿಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಒಡೆಯಬೇಕೆಂದು ಸೂಚಿಸಿರುತ್ತದಿಲ್ಲವೆಂದೂ ಸಹ ಅವರು ಹೇಳಿದರು.

ಅನಗಾನಿಕರ ವಿಷಯ ಹೈಕೋರ್ಟಿಗೆ

ಕನ್ನಂಬಾಡಿ ಎನರ್ಜಿ ಕಟ್ಟೆಯ ಬಳಿ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾರ್ಯವನ್ನು ಸರ್ಕಾರದವರು ಸಲ್ಲಿಸುವಂತೆ ಕನೆಯೂಕ್ತ ಮಾಡಬೇಕೆಂದು ಹೈಕೋರ್ಟಿಗೆ ಕೋರಿಕಾರದ ಸಂಘ ಶ್ರೀ ಕೃಷ್ಣಪ್ಪ ಎಂಬುವರು ಅರ್ಜಿ ಸಲ್ಲಿಸಿರುತ್ತಾರೆ.

ನ್ಯಾಯಮೂರ್ತಿ ಮಾಧವರಾಯರು ಗಡಿ ವಿಚಾರಣಾ ಸಮಿತಿ ಅಧ್ಯಕ್ಷರು

ಕೇರಳ-ಕಾರವಾರ ಜಿಲ್ಲೆಯ ಗಡಿ ಪ್ರದೇಶದ ಮಟ್ಟಿಗೆ ಚಿಕ್ಕದಾದ ಗಡಿಯನ್ನು ಮುಚ್ಚುವ ಸಂಬಂಧವಾಗಿ ರಚಿಸಿದ ಸಮಿತಿಗೆ ಕೇಂದ್ರ ಸರ್ಕಾರದವರು ಹಾಲಿ ದಿವಾನರಾದ ಶ್ರೀ ಎನ್ ಮಾಧವರಾಯರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಪ್ರತಿ ಮಾಸಿಕ ಒಂದನ್ನು ಆರಿಸಲಿರುವರೆಂದು ಗೊತ್ತಾಗಿದೆ.

ಆರತಿ ಎತ್ತರದ ಮುಖ್ಯೋಪಾಧ್ಯಾಯರು

ವಡ್ಡಿ ಕೊಡಗಿನ ಭದ್ರ ಗೋಳ ಎಂಬ ಗ್ರಾಮದ ದಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ೬ ಅಡಿ ಎತ್ತರದ ೩೦ ವರುಷದ ಮುಖ್ಯೋಪಾಧ್ಯಾಯರಿರುವರು. ಆದರಿಂ ಶಾಲಾ ವಿದ್ಯಾರ್ಥಿಗಳ ಪೈಕಿ ಕೆಲವರು ಎತ್ತರವಾದವರಿರುವರು. ಅವರ ಸಂಸಾರದಲ್ಲಿ ಎಲ್ಲರೊಬ್ಬರೇ ಸಂಪಾದಿಸುವವರು. ೧೫ ವರ್ಷಗಳಿಂದ ಉಪಾಧ್ಯಾಯರಾಗಿರುತ್ತಾರೆ. ಇವರು ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತುಕೊಳ್ಳ ಬೇಕಾಗಿದೆ ಆದರೆ ೫ ರೂ ಫೀಸು ಕಟ್ಟಲು ಅವರ ಬಳಿ ಹಣವಿಲ್ಲ.

## ಇಂಜನಿಯರಿಂಗ್ ಶಾಲಾ ವಿದ್ಯಾರ್ಥಿಗಳಿಂದ ಮುಷ್ಕರ

ಬೆಂಗಳೂರು ೧

ಈ ದಿನ ಕೆಳಸು ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿ, ಎ ಜಿ ರಾಮಚಂದ್ರರಾಯರು ಶ್ರೀ ವಿ ಆರ್ ನಾಯ್ಡುರವರ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರಿನ ಇಂಜನಿಯರಿಂಗ್ ಶಾಲೆಗೆ ಇನ್ನು ಮುಂದೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಅವರಿಂದಾಗಲೀ, ಅವರ ತಂದೆ ತಾಯಂದಿರಿಂದಾಗಲೀ ಅವಧಿ ಪೂರ್ತಿಗೊಳಿಸುವುದಕ್ಕೆ ಮುಂಚೆ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟು ಹೋಗವುದಿಲ್ಲವೆಂಬ ಬಗ್ಗೆ ಮುಚ್ಚಳಿಕೆಯನ್ನು ಬರೆಸಿಕೊಳ್ಳಲಾಗುವುದೆಂದು ತಿಳಿಸಿದರು.

### ರೈಲಿನಿಂದ ಹಾರಿ ವಿದ್ಯಾರ್ಥಿಯ ಮರಣ

ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಹೋಗುತ್ತಿದ್ದ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಅಬ್ದುಲ್ ದಯಾಳ್ ಎಂಬ ೨೦ ವರ್ಷದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯು ಆಕಸ್ಮಿಕವಾಗಿ ಬೆಂಗಳೂರು ಪೂರ್ವದ ಸ್ಟೇಷನ್ ಬಳಿ ಮದ್ರಾಸ್ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಹೋಗಿ, ಅಲ್ಲಿ ರೈಲು ನಿಲ್ಲಿಸಿದಾಗ ಇಳಿದು ಅವನು ಕೆಳಕ್ಕೆ ಧುಮುಕಿದನೆಂದೂ, ಇಳಿದು ಹೋಗುತ್ತಿದ್ದ ರೈಲು ತಂದು ಆತನ ಮೇಲೆ ರೈಲು ಹರಿಯಲು ಗಾಯಗೊಂಡು ಆತನನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಮೃತಪಟ್ಟನೆಂದೂ ವರದಿಯಾಗಿದೆ.

## ಕರ್ನಾಟಕ ಕಾಂಗ್ರೆಸ್ಸಿಗೆ ನೂತನ ಉಪಾಧ್ಯಕ್ಷರು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ, ನಿಜಲಿಂಗಪ್ಪನವರು ೧೫ ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಿರುತ್ತಾರೆ. ಅದರಲ್ಲಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ, ಶ್ರೀನಿವಾಸಮಲ್ಯರು ಉಪಾಧ್ಯಕ್ಷರಾಗಿರುವರು.

### ಅರಮನೆ ನೌಕರರಿಗೆ ಹೆಚ್ಚಿಗೆ ಸಂಬಳ

ಶ್ರೀಮನ್ಮಹಾರಾಜರಿಗೆ ಪ್ರತ್ಯೇಕ್ಷವಾದ ಸಂತೋಷ ಕಾರ್ಯವಾಗಿ ಈ ದಿನ ಅರಮನೆಯ ಎಲ್ಲ ನೌಕರರಿಗೂ ಅರ್ಧ ತಿಂಗಳ ಸಂಬಳವನ್ನು ಹೆಚ್ಚಾಗಿ ಕೊಡಲಾಯಿತು.

## ಸಿದ್ಧಲಿಂಗಯ್ಯನವರ ಸದಸ್ಯತನ ಪ್ರಶ್ನಿಸಿ ಸವಾಲು

### ನಾಳೆ ದಿನ ಶಾಸನ ಸಭೆಯಲ್ಲಿ ಚರ್ಚೆ

ಬೆಂಗಳೂರು ೧

ತಾಲ್ಲೂಕಿನ ಹಂಚಿ ಸರಬರಾಜಿನ ಬಗ್ಗೆ ಸರ್ಕಾರದವರು ಶಂಕರ್ ಮತ್ತು ಕಂಪನಿಯವರಿಗೆ ಪತ್ರ ಆಜ್ಞೆಯು ವಿಷಯವನ್ನು ಪ್ರಸ್ತಾಪಿಸಿ, ಇದರಲ್ಲಿ ಕಂಪನಿಯ ಪಾಲುದಾರರು ಅವಿಭಕ್ತ ಕುಟುಂಬಕ್ಕೆ ಸೇರಿದವರಾಗಿ, ಇವರಲ್ಲಿ ಮಾಜಿ ಮಂತ್ರಿ ಶ್ರೀ ಟಿ ಸಿದ್ಧಲಿಂಗಯ್ಯನವರೂ ಒಬ್ಬರೆಂದೂ, ಆದರಿಂದ ರಾಜ್ಯಾಂಗದ ವಿಧಿಯ ಪ್ರಕಾರ ಅವರು ಸದಸ್ಯರಾಗಿರಲು ಅನರ್ಹರೆಂದೂ ಸೂಚಿಸಿ ಶ್ರೀ ಬಿ ವಿ ನಾರಾಯಣ ರೆಡ್ಡಿಯವರು ತಮಗೆ ಅರ್ಜಿಯೊಂದನ್ನು ಸಲ್ಲಿಸಿರುವುದಾಗಿ ನೆನ್ನೆ ಕೆಳಸು ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸಭಾಧ್ಯಕ್ಷರಾದ ಶ್ರೀ ಹೆಚ್. ಸಿದ್ಧಯ್ಯನವರು ತಿಳಿಸಿದರು.

ಅವರು ರಾಜ್ಯಾಂಗದ ನಿಯಮವನ್ನು ಓದಿ ಹೇಳಿ ಅಧಿಕಾರ ರಹಿತ ಆಪಾದನೆಯ ತೀರ್ಮಾನವನ್ನಿಟ್ಟು ರಾಜಪ್ರಮುಖರಿಗೆ ಆ ವಿಷಯವನ್ನು ತಿಳಿಸುವುದು ಸರಿಯಲ್ಲವೆಂದೂ, ಆದರೆ ಅದರಲ್ಲಿ ಸಂಶಯಕ್ಕೆ ಅವಕಾಶವೇ ಇದ್ದರೆ ರಾಜಪ್ರಮುಖರ ಗಮನಕ್ಕೆ ತರುವ ಸಮಸ್ಯೆ ನಿರ್ಧಾರವೇ ದೂ ಹೇಳಿದರು.

ನಂತರ ಇವರು ಆಪಾದನೆಗಳು ಸತ್ಯವೇ ಎಂಬುದಾಗಿ ಶ್ರೀ ಸಿದ್ಧಲಿಂಗಯ್ಯನವರನ್ನು ಪ್ರಶ್ನಿಸಿದರು.

ಶ್ರೀ ಸಿದ್ಧಲಿಂಗಯ್ಯನವರು ಉತ್ತರಿಸುತ್ತಾ, 'ಅನರ್ಹತೆಗೆ ನಾನು ಗುರಿಯಾಗುವುದಿಲ್ಲವೆಂದು ನನ್ನ ಭಾವನೆ" ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಶ್ರೀ ಬಿ. ವಿ ನಾರಾಯಣ ರೆಡ್ಡಿ ಮತ್ತು ಶ್ರೀ ಸಿದ್ಧಲಿಂಗಯ್ಯನವರೂ ಈ ವಿಷಯದ ಬಗ್ಗೆ ಹೇಳಿಕೆ, ಕಾಗದ ಪತ್ರಗಳನ್ನು ನಾಳೆ ಕಳುಹಿಸುವಂತೆ ಸೂಚಿಸಿದರು. ಸರ್ಕಾರದ ನಿಲುವನ್ನು ತಿಳಿಸಲು ಮಂತ್ರಿಗಳಿಗೂ ಅವಕಾಶವಿರುವುದೆಂದು ಅವರು ಹೇಳಿದರು.

ಅಲ್ಲದೆ ಈ ಬಗ್ಗೆ ತಾವು ಯಾವುದೇ ಕ್ರಮವನ್ನು ಅನುಸರಿಸಿರಲಿ, ರಾಜಪ್ರಮುಖರು ಕೈಗೊಳ್ಳುವ ನಿರ್ಧಾರದ ಪರಿಣಾಮವಾಗಿ ಈ ವಿಷಯಕ್ಕೆ ಸಂಬಂಧಿಸಿದ ಸದಸ್ಯರು ಸಭೆಯಲ್ಲಿ ಭಾಗವಹಿಸಿದಾಗಲೆಲ್ಲಾ ಓಟು ಮಾಡಿದರಾಗಲಿ, ರಾಜ್ಯಾಂಗದ ಪ್ರಕಾರ ಶಿಕ್ಷೆಗೆ ಒಳಪಡಬೇಕಾಗಬಹುದೆಂಬುದನ್ನು ಗಮನಿಸಬೇಕೆಂದು ಅಧ್ಯಕ್ಷರು ತಿಳಿಸಿದರು.

### ಅಶ್ಲೀಲ ಬರವಣಿಗೆಗಾಗಿ ಪತ್ರಿಕಾ ಸಂಪಾದಕರಿಗೆ ಶಿಕ್ಷೆ

ಬೆಂಗಳೂರಿನ ವಾರಪತ್ರಿಕೆಯೊಂದರಲ್ಲಿ ಅಶ್ಲೀಲವಾದ ಲೇಖನಗಳನ್ನು ಪ್ರಕಟಿಸಿದುದಕ್ಕಾಗಿ ಪತ್ರಿಕೆಯ ಸಂಪಾದಕರೂ ಮತ್ತು ಪ್ರಕಾಶಕರೂ ಆದ ಶ್ರೀ ಎಂ. ರಾಮನ್ ರವರಿಗೆ ಮೂರನೆಯ ಅಡಿಷನಲ್ ನ್ಯಾಯಾಧೀಶರು ೩ ತಿಂಗಳು ಕಠಿಣ ಸಜಾ ಮತ್ತು ೨೦೦ ರೂ ದಂಡವನ್ನು ವಿಧಿಸಿದರು. ಅಪೀಲು ಮಾಡಲು ಆರೋಪಿಗೆ ೧೫ ದಿನಗಳ ಅವಕಾಶ ಕೊಡಲಾಗಿದೆ. ಹಲವು ಆಪಾದನೆಗಳಿಗಾಗಿ ಕೊಟ್ಟ ವಿವಿಧ ಶಿಕ್ಷೆಯನ್ನು ಒಟ್ಟಿಗೆ ಅನುಭವಿಸುವಂತೆ ಸೂಚಿಸಲಾಗಿದೆ.

## ಗಾಡಿಗಳಿಗೆ ಆಣೆ ಸುಂಕ ವಿಧಿಸಬೇಕು

**ಪೌರಸಭೆಯಲ್ಲಿ ನಿರ್ಣಯ**

ಮೈಸೂರು ಖ

ನೆನ್ನೆ ನಡೆದ ಪೌರಸಭಾ ದಿವೇಶನ ದಲ್ಲಿ ನಗರದ ರಸ್ತೆಯ ಮೇಲೆ ಬರುವ ಲಾರಿ ಗಾಡಿಗಳಿಗೆ ಸುಂಕವನ್ನು ಆಣೆ ಯಿಂದ ಆಣೆಗೆ ಹೆಚ್ಚಿಸುವ ಮತ್ತು ಎಲ್ಲಾ ಬಸ್ಸುಗಳಿಗೆ ದಿನಕ್ಕೆ ಆಣೆಯಂತೆ [illegible] ಹಾಕುವ ಬಗ್ಗೆ ಪೌರಸಭಾ ನಿಯಮಗಳಲ್ಲಿ [illegible] ಹಾಕಲು [illegible] ವನ್ನು [illegible] ಅಂಗೀಕರಿಸಲಾಯಿತ [illegible] ಸದಸ್ಯರು [illegible] ಪೌರ [illegible] ವಾಗ [illegible] ನರಂಜನೆ [illegible] ಪೌರಸಭೆಗೆ [illegible] ರವನ್ನು [illegible]

ವ್ಯವಸ್ಥೆ [illegible] ವಿಧಿಸಲು [illegible] ಮೈಸೂರ [illegible] ಹುದಂತೆ [illegible]

[illegible]

### ಪಶ್ಚಿಮ ಬ್ರಿಟನ್ನಿಗೆ ರಾಜಕೀಯ ಪ್ರಯತ್ನ

[illegible]

ಕೆ ಪಿ ರಾಮುನ ಥಯ್ಯನವರಿಗೆ ಪತ್ನಿ ವಿಯೋಗ

ಸಂಸ್ಥಾನದ [illegible] ಶ್ರೀ ಕೆ ಪಿ ರಾಮುನಾ ಥಯ್ಯನವರ ಪತ್ನಿಯವರಾದ ಶ್ರೀಮತಿ [illegible] ನೆನ್ನೆ [illegible] ವರಿಗೆ ಹಲವು ದಿನಗಳಿಂದಲೂ [illegible] ಖಾಯಿಲೆಯಾಗಿದ್ದಿತು

## ಇಟಲಿ ಶಾಸನ ಸಭೆಯಲ್ಲಿ ಸದಸ್ಯರ ಗುದ್ದಾಟ

ಇಟಲಿಯ [illegible] ಂದಿನ ಪಾರ್ಲಿಮೆಂಟಿನಲ್ಲಿ ಕ್ರಿಸ್ತ ಡೆಮೋಕ್ರಾಟುಗಳು ಮತ್ತು ಅವರ ಸಹಕಾರಿಗಳಿಗೆ ಬಹು [illegible] ತ್ವವನ್ನು ಕೊಡುವ ಚುನಾವಣಾ ಮಸೂದೆಯನ್ನು ಅಲ್ಲಿನ ಸೆನೆಟ್ ಸಭೆಯಲ್ಲಿ ನೆನ್ನೆ ರಾತ್ರಿ ಚರ್ಚೆ ಮಾಡುತ್ತಿದ್ದಾಗ ಕಮ್ಯೂನಿಸ್ಟರು ಮತ್ತು ಇತರರಿಗೂ ಆಳುವ ಪಕ್ಷದವರಿಗೂ ಅತ್ಯಂತ ಬಲವಾದ ಗುದ್ದಾಟಗಳಾದುವೆಂದು ವರದಿಯಾಗಿದೆ ಸೆನೆಟ್ ಮಸೂದೆಯ [illegible] ಅಂಗೀಕೃತವಾಯಿತ

### ಏಕರೆಗೆ [illegible] ಪೌಂಡ್ ಭತ್ತ

[illegible]

### ಚೀಣಾ [illegible] ಗಳಿಂದ [illegible] ಅಭ್ಯಾಸ

[illegible]

ಜನಸಾಮಾನ್ಯರ ಸ್ವರಾಜ್ಯದ ಬಗ್ಗೆ ಕಾಂಗ್ರೆಸ್ ತಕರಾರು

[illegible]

ಸಭೆಯಲ್ಲಿ ಸರ್ಕಾರಿ ಸದಸ್ಯರು [illegible]

[illegible] ಸದಸ್ಯರು [illegible] ಮಂತ್ರಿಗಳು [illegible] ಶಿವರು

## ನಾಡಿಗ ಕೃಷ್ಣಮೂರ್ತಿಯವರಿಂದ ಅಧಿಕಾರ ಸ್ವೀಕಾರ

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಪತ್ರಿಕೋದ್ಯಮದ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಕವಾಗಿರುವ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಕಳೆದ ೨೮ ನೇ ತಾ|| ಅಧಿಕಾರವನ್ನು ಸ್ವೀಕರಿಸಿದರು ಇದುವರೆಗೆ ಅವರು ಅನೇಕ [illegible] ಸಂಸ್ಥೆಯವರ ಕನ್ನಡ ಪತ್ರಿಕೆಯ ಸಂಪಾದಕರಾಗಿದ್ದರು [illegible] ಸೇವೆ [illegible] ಬಗ್ಗೆ ಅವರನ್ನು ಅಭಿನಂದಿಸಿ [illegible] ಗೌರ್ನರ್ ಆರ್ ಆರ್ ದಿವಾಕರ್, ಕೇಂದ್ರ ಉತ್ಪಾದನಾ ಮಂತ್ರಿ, ಕೆ ಸಿ ರೆಡ್ಡಿ, ಕೇಂದ್ರದ ಉಪ ಮಂತ್ರಿಗಳಾದ ಡಿ ಪಿ ಕರ ಮರ್ಕರ್ ಮತ್ತು ಬಿ ಎಸ್ ದಾತಾರ್ ರಾಜ್ಯ ಕರಿಪತ್ರಿನ ಉಪಾಧ್ಯಕ್ಷರಾದ ಶ್ರೀ ಎಸ್ ವಿ ಕೃಷ್ಣಮೂರ್ತಿರಾವ್, ಬೊಂಬಾಯಿ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಅಧ್ಯಕ್ಷ ಆರ್ ಎಸ್ ಹುಕ್ಕೇರಿಕರ್ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎಸ್ ನಿಜಲಿಂಗಪ್ಪ ಇವರುಗಳು ಸಂದೇಶಗಳನ್ನು ಕಳುಹಿಸಿದರು


ಎಲ್ಲಾ ಬಗೆಯ

**ಅಲೋಪೆಥಿಕ್ ಔಷಧಿಗಳೂ**

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

# ರಘುಲಾಲ್ ಅಂಡ್ ಕೋ

ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್, ಮೈಸೂರು



ಶ್ರೀ ರಮಣ ಶ್ರೀ

## ಸಂಗೀತ ವಿದ್ಯಾಲಯ

1064 1 ನೇ ಮೇನ್ ರೋಡ್ ಅಗ್ರಹಾರ (ವಾಣಿ ವಿಲಾಸ ಎದುರು)

ನೇ [illegible] ದ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ, ಸಂಚಾಲಕ


## ಕರ್ನಾಟಕದಲ್ಲಿ ಹರತಾಳ

ಪ್ರಧಾನಿ ನೆಹರೂರವರು ಆಕ್ಷೇಪಿಸಿದ ಭಾಷಾವಾರು ಪ್ರಾಂತ್ಯದ ಬಗ್ಗೆ ಕೇಳದ [illegible] ಪ್ರತಿಭಟಿಸಲು [illegible] ಹರತಾಳವನ್ನು ಆಚರಿಸುವಂತೆ ಏಕೀಕರಣ ಸಂಘದ ಅಧ್ಯಕ್ಷರಾದ ಕಾಂತಪ್ಪನವರು ಕರೆಯಿತ್ತು ಪ್ರಾರ್ಥಿಸಿರುತ್ತಾರೆ

### ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ ಆ ಪೈ | ರೂ ಆ ಪೈ |
| --- | --- | --- |
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಕೊಂಗೇಬೀಜ | [illegible] | [illegible] |
| ಹುರುಳಿ | [illegible] | [illegible] |
| ಜೋಳ | [illegible] | |
| ಅವರೆ | [illegible] | [illegible] |
| ಹಲಸಂದೆ | [illegible] | [illegible] |
| ಉದ್ದು | [illegible] | |
| ಮೆಣಸಿನ | | |
| ಕಾಯಿ ಹುಣಸೆ | [illegible] | [illegible] |
| ಹುಣಸೇಹಣ್ಣು | [illegible] | [illegible] |
| ತೆಂಗಿನಕಾಯಿ | [illegible] | [illegible] |
| ಬೆಲ್ಲ | [illegible] | |
| ಕೊಬ್ಬರಿ | [illegible] | |
| [illegible] | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]


## ಒಲಿಂಪಿಯಾ ಟಾಕೀಸ್

ತಾ|| 3 4 53 ರಿಂದ

ನೋಷಕ [illegible] ರವರ ಸಂಗೀತ, ಸ್ವರ ಮತ್ತು ಹಾಸ್ಯಗಳಿಂದೊಡಗೂಡಿದ ಹಿಂದಿ ಚಿತ್ರ

# ಚಂ ಚಮಾ ಚಂ

[illegible] ಮತ್ತು [illegible]

ದಿನಗಳ ಪ್ರದರ್ಶನ —

[illegible] ದಾ ದಾ



# ಮನೆ ಮಾರಾಟಕ್ಕಿದೆ

ಮೈಸೂರು, ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನನ್ನು [illegible] ಮಾರಾಟ [illegible] ಬೆಲೆ ಸುಮಾರು 5,000 ರೂ

**ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ**



# ಚಾಮುಂಡೇಶ್ವರಿ ಟಾಕೀಸ್

3—4—53 ರಿಂದ : ಅನೋಘ ಪ್ರದರ್ಶನಾರಂಭ

ದಿನವೂ ಮೂರು ಆಟಗಳು

[illegible] ರವರ [illegible] ತೆಲುಗು ಚಿತ್ರ

# ✱ ಅಮ್ಮಲಕ್ಕಲು ✱

[illegible]

ಮುಖ್ಯಾಭಿಕರಣದ ದ ಖ್ಯಾತಿ [illegible] ದಿನಗಳು ಮಾತ್ರ


Edited, Printed and Published by A R Nagarajan at Sadhvi Press, D Subbaiah Road, Mysore

ಫೋನ್ ನಂ. 752 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಗುರುವಾರ [illegible] [ ಸಂಚಿಕೆ ೨೦೦

# ಸಿದ್ದಲಿಂಗಯ್ಯನವರ ಪ್ರಶ್ನೆ ಪ್ರಭುಗಳ ತೀರ್ಪಿಗೆ

## ಆಹಾರ ಸತ್ಯಾಗ್ರಹಿಗಳಿಗೆ ದೇವರು ಬುದ್ಧಿ ಕೊಡಲಿ

ಸಭೆಯಲ್ಲಿ [illegible] ಹೇಳಿಕೆ

[illegible] ಸಭೆಯಲ್ಲಿ [illegible] ಶ್ರೀ [illegible] ಪ್ರಶ್ನೆ [illegible] ಶ್ರೀ [illegible] ಸಿದ್ದವೀರಪ್ಪನವರು ಉತ್ತರವಿತ್ತು, ಮೈ [illegible] ನಗರದಲ್ಲಿ [illegible] ಸತ್ಯಾಗ್ರಹ [illegible] ಮೈಸೂರಿನಲ್ಲಿ ಆಹಾರ ಬೆಳೆ [illegible] ಸತ್ಯಾಗ್ರಹ ಹೊಂದು ನಡೆಯುತ್ತಿರುವುದು ತಮಗೆ ಗೊತ್ತಿಂದು ಹೇಳಿ ಸತ್ಯಾಗ್ರಹಿಗಳು ಸರ್ಕಾರದ [illegible] ಪ್ರತಿಭಟಿಸಬೇಕೆಂದೂ, ಅವರಿಗೆ ಒಳ್ಳೆಯ ಬುದ್ಧಿಯನ್ನು ದೇವರು ದಯಪಾಲಿಸಬೇಕೆಂದೂ ತಿಳಿಸಿದರು.

ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬರಲೆಂದು ಸತ್ಯಾಗ್ರಹಿಗಳ [illegible] ವಾವೆಂದೂ, ತಮ್ಮ ಬೇಡಿಕೆಗಳ ಬಗ್ಗೆ [illegible] ಯುತವಾಗಿ [illegible] ಅವರ [illegible] ಶ್ರೀ ನಾರಾಯಣಸ್ವಾಮಿ [illegible] ಮೈಸೂರು [illegible] ನಗರ ಕಾಂಗ್ರೆಸ್ ಸಮಿತಿ [illegible] ಬೆಲೆ [illegible] ಕ್ರಮ [illegible] ನಿರ್ಣಯ [illegible] ಸರ್ಕಾರಕ್ಕೆ ಗೊತ್ತಿರುವುದಿಲ್ಲ [illegible] ಪ್ರಶ್ನಿಸಿದರು.

ಸಚಿವರು ಉತ್ತರವಿತ್ತು [illegible] ನಿರ್ಣಯವು ಸರ್ಕಾರದ ದೃಷ್ಟಿಯಲ್ಲಿ [illegible] ಸಮ್ಮತವಲ್ಲವೆಂದೂ, [illegible] ನಿರ್ಣಯದ ಬಗ್ಗೆ [illegible] ಸರ್ಕಾರದ [illegible] ಪೂರ್ಣ [illegible] ಜನ ಬೆಂಬಲವಿಲ್ಲವೆಂದೂ ಸಿದರು.

ಗೋಪಾಲಗೌಡರು ಸತ್ಯಾಗ್ರಹಕ್ಕೆ ಜನ ಬೆಂಬಲವಿಲ್ಲವೆಂಬುದು ಸರ್ಕಾರಕ್ಕೆ ಹೇಗೆ ಗೊತ್ತು.

ಶ್ರೀ ಸಿದ್ದವೀರಪ್ಪ [illegible] ನಮಗೆ ಜನರ ನಾಡಿಯು ಹೇಗೆ ಮಿಡಿಯುತ್ತಿರುವುದೆಂಬುದು ಗೊತ್ತು.

## ವಿಶ್ವ ಸಂಸ್ಥೆ ಕಾರ್ಯದರ್ಶಿ ಸ್ಥಾನಕ್ಕೆ ಸ್ಪೀಡನ್ನಿನವರು

[illegible] ಹಮಾರ್ಸ್ಕ್ಜೋಲ್ಡ್‌ರವರ [illegible] ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯ [illegible] ಬದಲು [illegible]

### ಅಪೆಕ್ಸ್ ಬ್ಯಾಂಕಿಗೆ

[illegible] ಕೋ-ಆಪರೇಟಿವ್ [illegible] ಆಗಿರುವ [illegible] ಕ್ಷೇತ್ರದಿಂದ ಶ್ರೀ [illegible] ಮೊಟಿಸ್ವಾಮಿಯವರನ್ನು ಆರಿಸ [illegible] ಲಾಗಿದೆ

## ಕೇಂದ್ರ ಮತ್ತು ಸಂಸ್ಥಾನಗಳ ನೌಕರರ ಸಂಬಳ

ವ್ಯತ್ಯಾಸದ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ಸಂಸ್ಥಾನದ [illegible] ಮನವಿ

ಬೆಂಗಳೂರು [illegible]

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ [illegible] ನಿನ್ನೆ ಇಲ್ಲಿ ನಡೆದ ಸಂಸ್ಥಾನ ಮತ್ತು ಕೇಂದ್ರ ಸರ್ಕಾರಗಳ ನೌಕರರ ಸಂಬಳ [illegible] ವ್ಯತ್ಯಾಸವನ್ನು [illegible] ರಾಷ್ಟ್ರಾಧ್ಯಕ್ಷರ ಪ್ರಧಾನಿ ಮತ್ತು ಕೇಂದ್ರದ [illegible] ನಿರ್ಧರಿಸಲಾಯಿತು.

[illegible] ನೌಕರರ [illegible] ಕಡಿಮೆ ಸಂಬಳ ಮತ್ತು ತುಟ್ಟಿ ಭತ್ಯೆ [illegible] ನೌಕರರ ಜೀವನ [illegible] ಸಂಬಂಧಿಸಿದ ಇತರ ಪ್ರಶ್ನೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದೂ ಸಂಸ್ಥಾನದ ಸರ್ಕಾರವನ್ನು ಪ್ರಾರ್ಥಿಸಲಾಯಿತು.

## ಭಾರತದ ವಿಮಾನ ಬಲದ ನಾಲ್ಕನೆ [illegible]

ಭಾರತದ ವಿಮಾನ ಬಲದ [illegible] ನಿನ್ನೆ [illegible] ನಗರಗಳಲ್ಲಿ ನಡೆಯಿತು. ರಾಷ್ಟ್ರಾಧ್ಯಕ್ಷರು ಪ್ರಧಾನಿ ನೆಹರೂರವರು [illegible] ಸಮಾರಂಭಕ್ಕೆ ಶುಭ ಸಂದೇಶಗಳನ್ನು [illegible] ವಿಮಾನ ಬಲದ ಸೇವೆಯನ್ನು ಕೊಂಡಾಡಿರುತ್ತಾರೆ. ಮೈಸೂರು ಮಹಾರಾಜರೂ ಸಂದೇಶ [illegible] ವಿಮಾನ ಬಲದವರು [illegible]

ಬೆಂಗಳೂರಿನ [illegible] ವಿಮಾನ [illegible] ಕೊಳ್ಳುವ [illegible] ಮಾಡಿದ್ದು [illegible] ವರು [illegible] ಬಂದಿದೆ

## ಅತಿರುದ್ರ ಮತ್ತು ಸಹಸ್ರ ಚಂಡಿಕಾ ಹೋಮಗಳು

ಸಮಾರಂಭದಲ್ಲಿ ಶಿರಿಯ ಗುರುಗಳ ಸಂದೇಶ

[illegible] ಶೃಂಗೇರಿ [illegible]

[illegible] ರುದ್ರ ಸಹಸ್ರ ಚಂಡಿಕೆ [illegible] ಹೋಮಗಳ ಸಮಾರಂಭವ [illegible] ಇಲ್ಲಿ ಪ್ರಾರಂಭವಾಯಿತು. [illegible] ಸ್ವಾಮಿಗಳವರಾದ ಶ್ರೀ ಶ್ರೀ [illegible] ಭಾಷಣ ಮಾಡಿ, ಹೋಮಗಳು [illegible] ಸಮಾರಂಭಗಳನ್ನು [illegible] ಮತ್ತು [illegible] ಬೆಳೆಸಬೇಕಾಗಿರುವುದೆಂದೂ ಅವರ [illegible] ಒಳ್ಳೆಯದೆಂದೂ [illegible] ಇರುವುದೆಂದೂ ಹೇಳಿದರು.

[illegible] ಭಾಗವಹಿಸಿದ್ದಾರೆ. ಇಲ್ಲಿನ [illegible] ಶ್ರೀ ಶಂಕರ ನಾರಾಯಣ ಶಾಸ್ತ್ರಿಗಳವರು ಚಂಡೀ ಹೋಮದ [illegible] ಶ್ರೀ ವೆಂಕಟಸುಬ್ಬ ವಧಾನಿಯವರು [illegible] ಸಾವಿರ ಮಂದಿ ಪ್ರೇಕ್ಷಕರು [illegible] ಬಂದಿರುವರು. ಇನ್ನೂ ಹೆಚ್ಚು ಜನ [illegible] ಸಮಾರಂಭವು ನಾಳೆಯಿಂದ ಪ್ರಾರಂಭವಾಗುವುದು.

[illegible] ಸೌಕರ್ಯಗಳ [illegible] ಮಾಡಲಾಗಿದೆ

## ಗಡಿಯಾರದ ಕಳ್ಳರಿಗೆ ೧೦ ದಿಂದ ೩೦ ವರ್ಷ ಶಿಕ್ಷೆ

[illegible] ಗಡಿಯಾರ [illegible] ಗಡಿಯಾರದ ಭಾಗಗಳನ್ನು ಕಳವು ಮಾಡಿದ [illegible] ೧೦ ದಿಂದ ೩೦ ವರ್ಷಗಳವರೆಗೆ ಕಠಿಣ ಶಿಕ್ಷೆಯನ್ನು ವಾಷಿಂಗ್ಟನ್ನಿನ ನ್ಯಾಯಾಧೀಶರು ವಿಧಿಸಿರುತ್ತಾರೆ.

## ಸಿದ್ದಲಿಂಗಯ್ಯನವರ ಶಾಸನಸಭಾ ಸದಸ್ಯತ್ವ

ರಾಜಪ್ರಮುಖರ ತೀರ್ಮಾನಕ್ಕೆ ಒಪ್ಪಿಸಲು ನಿರ್ಧಾರ

[illegible] ಶಾಸನಸಭೆಯ [illegible] ಶ್ರೀ [illegible] ಸಿದ್ದಲಿಂಗಯ್ಯನವರು [illegible] ಬಾಧ್ಯತೆಗಳ [illegible] ಸಿದ್ದಲಿಂಗಯ್ಯನವರ [illegible] ಪಕ್ಷದ [illegible] ಶ್ರೀ [illegible] ಸಿದ್ದಲಿಂಗಯ್ಯನವರು [illegible]

ಇವತ್ತು [illegible] ಶ್ರೀ ಸಿದ್ದಲಿಂಗಯ್ಯನವರು ತಮ್ಮ ಸಮರ್ಥನೆ [illegible] ತಮ್ಮ [illegible] ಸದಸ್ಯತನದ [illegible] ಸಿದರು.

ಸಭಾಧ್ಯಕ್ಷರು ಮಾತನಾಡಿ, ಅನರ್ಹತೆಯುಂಟಾಗಿರುವುದೆಂದು ಹೇಳಲಾಗುತ್ತಿರುವ [illegible] ಎಂಬುದನ್ನು ತೀರ್ಮಾನಿಸಲು ತಮಗೆ ಅಧಿಕಾರವಿಲ್ಲವೆಂದೂ [illegible] ಈ ವಿಷಯವನ್ನು ರಾಜ್ಯಾಂಗದವಿಧಿ [illegible] ಯಮಗಳ ಪ್ರಕಾರ ರಾಜಪ್ರಮುಖರ ತೀರ್ಮಾನಕ್ಕೆ ತಾವು ಒಪ್ಪಿಸಲಿರುವುದಾಗಿಯೂ, ಅವರ ತೀರ್ಮಾನ ಅಂತಿಮವಾದುದೆಂದೂ ಹೇಳಿದರು.

ಮೈಸೂರು ನಗರದ [illegible] ಸರಬರಾಜನ್ನು [illegible] ಮೈಸೂರು [illegible] ಸರ್ಕಾರದವರು ಮೈಸೂರು [illegible] ಸಲಹೆ ಮಾಡಿಯೂವಾಗಿ [illegible] ಶ್ರೀ ಕೆ. ಹನುಮಂತಯ್ಯನವರು ನಿನ್ನೆ [illegible] ಸ್ಥಿತಿ [illegible] ಬಗ್ಗೆ [illegible] ಬಂದಿಲ್ಲವೆಂದೂ, ಅದು ಬಂದನಂತರ ಸೂಕ್ತಕ್ರಮ ಕೈಗೊಳ್ಳಲಾಗುವುದೆಂದೂ [illegible]

## ಆಸ್ಪತ್ರೆ ಕೆಲಸಗಾರರಿಗೆ ರಕ್ಷಣಾ ಸೌಲಭ್ಯ ಬೇಕು

ಮೈಸೂರು ೧

ಮೈಸೂರು ನಗರದ ಸರ್ಕಾರಿ ಆಸ್ಪತ್ರೆಗಳ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆ ಶ್ರೀ ಎ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ, ಕೆಲಸಗಾರರಿಗೆ ಇತರ ಸರ್ಕಾರಿ ನೌಕರರುಗಳಿಗೆ ದೊರೆಯುತ್ತಿರುವ, ಕಾರಣಕ್ಕಾಂದು ಬಿಡುವ ರಜಾ ಮತ್ತು ಇತರ ಹಕ್ಕಿನ ರಜಾ ಸೌಲಭ್ಯಗಳನ್ನು ಕಲ್ಪಿಸುವಂತೆ ಕೋರುವ ನಿರ್ಣಯವನ್ನು ಮಾಡಲಾಯಿತು. ಚೆಲುವಾಂಬಾ ಆಸ್ಪತ್ರೆಯ ಅ[illegible] ವರ್ಗದವರು ನೌಕರರುಗಳ ಬ[illegible] ಸೌಲಭ್ಯವುಳ್ಳವರಾಗಿ ವರ್ತಿಸುವಂತೆ ಅವರಿಗೆ ವಿನಂತಿ ಮಾಡಲಾಯಿತು.

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಹಿಂದೆ ಗೈರುಹಾಜರಿಯಾದ ಬಗ್ಗೆಗಳ ಬಗ್ಗೆ ಸಂಬಂಧಪಟ್ಟ ನೌಕರರಿಂದ ಅವುಗಳ ಬಾಬತು [illegible] ವಸೂಲು ಮಾಡಬಂತೆಯೂ, [illegible] ವಸೂಲು ಮಾಡಿರುವುದನ್ನು [illegible] ಕೊಡಬೇಕೆಂದೂ [illegible]

ಆಸ್ಪತ್ರೆ ಕೆಲಸಗಾರರಿಗೆ [illegible]

[illegible]

### ಉಪನ್ಯಾಸ

[illegible] ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿಯ [illegible] ಶ್ರೀ ಬಿ ರಾಮಕೃಷ್ಣ [illegible] ಪುತ್ರ [illegible] ಜನಯುಗವನ್ನು [illegible] ಗಾಯತ್ರಿ ಪಂಚಾಯತನ ಪ್ರತಿಷ್ಠೆ

ರಾಜಧಾನಿಯ [illegible] ಯೊಳಗೆ [illegible] ದೇವಸ್ಥಾನದ ಬಳಿ ದೇವಾಲಯದಲ್ಲಿ ನೆನ್ನೆ ಶ್ರೀ ಗಾಯತ್ರಿ ಪಂಚಾಯತನ ಪ್ರತಿಷ್ಠಾಪನಾ ಕಾರ್ಯವು [illegible] ನೆರವೇರಿಸಲ್ಪಟ್ಟಿತು.

## ಸಿದ್ಧಲಿಂಗಯ್ಯನವರ ರಾಜೀನಾಮೆ ಪ್ರಕರಣ

### ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೧

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಎಂ. ಟಿ. ಎಲ್ ಶಾಸ್ತ್ರಿಯವರು ಕೇಳಿದ ಪ್ರಶ್ನೆ, ಶಾಮಣ್ಣರ ಸಂಕಿ ಪ್ರಕರಣವು ಇನ್ನೂ ನಿಗೂಢ ಸಮಸ್ಯೆಯಾಗಿರುವುದೆಂದೂ, ಅದರ ತನಿಖೆಗಾಗಿ ಒಂದು ಸಮಿತಿಯನ್ನು ನೇಮಿಸಬೇಕೆಂದೂ ತಿಳಿಸಿದರು.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ, ತಮಗೂ ಶ್ರೀ ಸಿದ್ಧಲಿಂಗಯ್ಯನವರಿಗೂ ಆದ ಪತ್ರ ವ್ಯವಹಾರದಲ್ಲಿ ಎಲ್ಲ ವಿಷಯಗಳೂ ಬಹಿರಂಗವಾಗಿರುವುವೆಂದೂ, ಪಕ್ಷದ ನಾಯಕರೊಡನೆ ಭಿನ್ನಾಭಿಪ್ರಾಯ ಬಂದಾಗಲಿ ಅಥವಾ ಅಪಾದನೆಗಳು ಸ್ಥಿರಪಟ್ಟಾಗಲಿ ಒಪ್ಪುವ ಮಂತ್ರಿಯು ರಾಜೀನಾಮೆ ಕೊಡಬಹುದೆಂದೂ ತಿಳಿಸಿ, ಸಿದ್ಧಲಿಂಗಯ್ಯನವರಿಗೂ ತಮಗೂ ಯಾವ ಭಿನ್ನಾಭಿಪ್ರಾಯವಿರಲಿಲ್ಲವೆಂದೂ, ವಿವಾದಸ್ಪದವಾದ [illegible] ಅವರು ರಾಜೀನಾಮೆ [illegible]

[illegible]

## ಸಿಕ್ಕಿಂ ಸಂಸ್ಥಾನದಲ್ಲಿ ಮೊಟ್ಟ ಮೊದಲ ಚುನಾವಣೆ

ಹಿಮಾಲಯದ ತಪ್ಪಲಿನಲ್ಲಿರುವ ಚಿಕ್ಕ ಸಂಸ್ಥಾನವಾದ ಸಿಕ್ಕಿಂ ದೇಶದಲ್ಲಿ ಇದೇ ಮೊದಲಬಾರಿ ಮೊನ್ನೆ ಚುನಾವಣೆಗಳು ನಡೆದುವು. ಅಲ್ಲಿನ ೧೭ ಜನರುಳ್ಳ ಶಾಸನ ಸಭೆಗೆ ೧೨ ಜನಗಳ ಆಯ್ಕೆಯಾಗಬೇಕಾಗಿದೆ. ಶಾಸನ ಸಭಾಧ್ಯಕ್ಷರನ್ನು ಸಿಕ್ಕಿಂ ಮಹಾರಾಜರು ನೇಮಿಸುವರು. [illegible] ಜನರನ್ನು ಕೌನ್ಸಿಲ್ಲಿಗೆ ನಾಮಕರಣ ಮಾಡಲಾಗುವುದು.

### ಮಂಡ್ಯಕ್ಕೆ ವ್ಯವಸಾಯ ಕಾಲೇಜಿನ ವರ್ಗ

ಬೆಂಗಳೂರು ಬಳಿ ಹೆಬ್ಬಾಳದಲ್ಲಿರುವ ವ್ಯವಸಾಯ ಕಾಲೇಜನ್ನು ಮಂಡ್ಯದ ಹತ್ತಿರ ವಿಶ್ವೇಶ್ವರಯ್ಯನವರ ನಾಲಾ ಸಮೀಪದ ಪ್ರದೇಶಕ್ಕೆ ವರ್ಗಾಯಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಕಾಲೇಜಿಗೆ ಕಟ್ಟಡಗಳನ್ನು ಕಟ್ಟಲು ಕಂಪು ನಿಯಮವನ್ನು ಒದಗಿಸಲಿರುವರು.

### ಸೇಲ್ಸ್ ಟ್ಯಾಕ್ಸ್ ಕೊಡದಿದ್ದುದಕ್ಕೆ ದಂಡನೆ

[illegible]

GALA OPENING

On 3-1-53

AT SRI GANESHA TALKIES




*The Only Ideal Picture House Of the City*

## ಮೈಸೂರು ಪೇಟೆ ಧಾರಣೆ

| ಪದಾರ್ಥ | ರೂ. ಆಣೆ | ರೂ. ಆ |
|---|---|---|
| ಕಡಲೇಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | |
| ಹೊಂಗೇಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | |
| ಅವರೆ | [illegible] | |
| ಹುಣಸೆ | [illegible] | [illegible] |
| ಉದ್ದು | [illegible] | |
| ಬೆಂಡು | | |
| [illegible] | [illegible] | [illegible] |
| [illegible] | [illegible] | [illegible] |
| [illegible] | [illegible] | [illegible] |
| ಬೆಲ್ಲ | [illegible] | |
| [illegible] | | |
| [illegible] | [illegible] | [illegible] |

### ಹಕೋಟೆ ಬಗ್ಗೆ ೧೫ ದಿನಗಳಲ್ಲಿ ಅಂತಿಮ ನಿರ್ಧಾರ

ಹಕೋಟೆಗಳ ಸಂಬಂಧ ಅಥವಾ ಹೋಗಬೇಕೆ ಎಂಬ ಬಗ್ಗೆ ಸರ್ಕಾರದವರು ೧೫ ದಿನಗಳಲ್ಲಿ ಅಂತಿಮವಾದ ನಿರ್ಧಾರವನ್ನು ಕೈಗೊಳ್ಳಲಿರುವುದಾಗಿ ಗೊತ್ತಾಗಿದೆ.

[illegible]


## ಲಕ್ಷಣ ಮಾರಾಟಕ್ಕಿದೆ

[illegible]

1. 12 5 H P [illegible]
2. 10" [illegible]
3. [illegible]
4. [illegible]

[illegible]

ಸ್ಟೇಟ್ ಮಾರ್ಟ್,

[illegible] ಮೈಸೂರು

ಒಲಂಪಿಯಾ ಟಾಕೀಸ್

ತಾ॥ 3—4—53 ರಿಂದ

[illegible]

ಚಂ ಚಮಾ ಚಂ

[illegible]

[illegible]

1953 EDITION

A GUIDE TO

ACCOUNTS HIGHER EXAMINATION

*Also Useful to Answer*

EDUCATION PROFICIENCY EXAMN PAPERS — PART I

SRI RAMACHANDRA BOOK DEPOT,

*Devaraj Market Mysore*

SRI GAYATHRI TALKIES

From 2-4-53 [illegible] Valiants

SHADOW OF THE EAGLE

Starring Richard Greene and Valentina Cortese


Edited Printed and Published by A R Nagarajan at Sadhvi Press, D Subbiah Road Mysore


ಪ್ರಭಾತ್ — 4 — 53 ರಿಂದ [illegible]

ದಿನವಹಿ 3 ಪ್ರದರ್ಶನಗಳು

[illegible]

ತೀನ್ ಬತ್ತಿ ಚಾರ್ ರಾಸ್ತಾ

[illegible]

ಬೆಳಗಿನ ಪ್ರದರ್ಶನ | 3-4-53 ರಿಂದ | 3 ದಿನಗಳು

[illegible] ಶಿರ್-ಧಿ-ಬಿಚ್ಚಿ

ಚಾಮುಂಡೇಶ್ವರಿ ಟಾಕೀಸ್

3—4—53 ರಿಂದ [illegible] ಅಪೋಲೋ ಪ್ರದರ್ಶನಾರಂಭ

ದಿನವಹಿ ಮೂರು ಆಟಗಳು

[illegible] ತೆಲುಗು ಚಿತ್ರ

ಅಮ್ಮಲಕ್ಕಲು

[illegible]

[illegible] ಸಾಧ್ವಿ [illegible]

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಶುಕ್ರವಾರ ೩-೪-೧೯೫೩ [ ಸಂಚಿಕೆ ೨೦೦

# ಚೀಣರಿಂದ ಪಾಕಿಸ್ತಾನ್ ಗಡಿ ಉಲ್ಲಂಘನೆಯೇ?

## ತಾವರೆಕೆರೆ ತಂತಿ ಕಾಂಟ್ರಾಕ್ಟ್ ಬಗ್ಗೆ ಅರ್ಜಿಯ ತಿರಸ್ಕಾರ

ಬೆಂಗಳೂರು ೩

ತಾವರೆಕೆರೆ ತಂತಿಗಳ ಕರಬಂದಾಜಿನ ಸಂಬಂಧವಾಗಿ ಕರ್ನಾಟಕದವರು ಬೆಂಗಳೂರಿನ ಕಿಸ್ಟನ್ ಡ್ ಕಂಪೆನಿ ಮತ್ತು ... ಕಂಪೆನಿಯವರೊಡನೆ ಮಾಡಿಕೊಂಡಿರುವ ಕಾಂಟ್ರಾಕ್ಟಿಗೆ ಸಂಬಂಧಿಸಿದ ಎಲ್ಲಾ ಕಾಗದಪತ್ರಗಳನ್ನು ಹಾಜರು ಪಡಿಸುವಂತೆ ಆಜ್ಞೆಯಾಗಬೇಕೆಂದು ಚಿಕ್ಕಮಗಳೂರಿನ ವಕೀಲ ಶ್ರೀ ಎಂ. ರಾಮಸ್ವಾಮಿ ರೆಡ್ಡಿಯವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟಿನವರು ತಿರಸ್ಕರಿಸಿದ್ದಾರೆ. ಈ ರೀತಿ ಕಾಂಟ್ರಾಕ್ಟ್ ಕೊಟ್ಟಿರುವುದು ಕ್ರಮ ವಿರುದ್ಧವೆಂದು ಅರ್ಜಿದಾರರು ತಿಳಿಸಿದ್ದರು. ತಾವರೆಕೆರೆ ತಂತಿ ಸಾಗಾಣಿಕೆ ಸಂಬಂಧವಾಗಿ ಬೆಂಗಳೂರ್ ... ಕಂಪೆನಿಗೆ ವಹಿಸಿದ್ದ ಕಾಂಟ್ರಾಕ್ಟ್ ಬಗ್ಗೆಯೂ ಇದೇ ರೀತಿ ಆಜ್ಞೆಯಾಗಬೇಕೆಂದು ಸದರಿ ವಕೀಲರು ಕೇಳಿದ್ದ ಅರ್ಜಿಯೂ ತಿರಸ್ಕೃತವಾಯಿತು. ಅರ್ಜಿಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಶಾಸನ ಸಭೆಯಲ್ಲಿ ಚರ್ಚೆಗೆ ಬಂದಿರುವುದರಿಂದ ಅಲ್ಲಿ ಅದರ ಇತ್ಯರ್ಥವಾಗುವವರೆಗೂ ಅರ್ಜಿಗಳನ್ನು ವಜಾ ಮಾಡುವುದು ವಿಹಿತವೆಂದೂ, ಮುಂದೆ ಬೇಕಾದರೆ ಅರ್ಜಿದಾರರು ಪುನಃ ಈ ಅರ್ಜಿಗಳನ್ನು ತರಬಹುದೆಂದೂ ನ್ಯಾಯಾಧೀಶರುಗಳು ತಿಳಿಸಿರುತ್ತಾರೆ.

## ಅನಸೂಯಕೆರೆ ರಸ್ತೆ ವಿವಾದದ ಅರ್ಜಿ ಪರಿಶೀಲನೆ

ಕೋಲಾರದ ಅನಸೂಯಕೆರೆ ಒಳ ರಸ್ತೆ ಮತ್ತು ನೀರು ವೇಗದ ... ಸಂಬಂಧವಾಗಿ ಕೋಲಾರದ ಶ್ರೀ ಕೃಷ್ಣಪ್ಪ ಮತ್ತು ಇತರ ... ಜನರು ರಾಜ್ಯಾಂಗದ ಪ್ರಕಾರ ಸಲ್ಲಿಸಿದ ಅರ್ಜಿಯು ನೆನ್ನೆ ಹೈಕೋರ್ಟಿನಲ್ಲಿ ದಾಖಲಾತಿಗಾಗಿ ಬಂದಿತು. ಅರ್ಜಿದಾರರ ಪರ ಶ್ರೀ ವಿ. ಕೃಷ್ಣಮೂರ್ತಿಯವರು ವಕಾಲತ್ತು ವಹಿಸಿದ್ದರು. ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಕೆರೆ ಅಚ್ಚುಕಟ್ಟಿನ ಕೇಸಿನ ಸಂಬಂಧವಾದ ಜವಾಬು ... ನಡೆಯುತ್ತಿರುವ ಕೆಲಸವನ್ನು ನಿಲ್ಲಿಸುವಂತೆ ಸೂಚಿಸಿ, ಈ ಸಂಬಂಧವಾಗಿ ಸರ್ಕಾರಕ್ಕೂ ಕೋಲಾರದ ಎಕ್ಸಿಕ್ಯೂಟಿವ್ ಇಂಜಿನಿಯರಿಗೂ ನೋಟೀಸು ಕೊಡುವಂತೆ ಆಜ್ಞೆ ಮಾಡಲಾಯಿತು. ನಾಳೆ ದಿನ ಅರ್ಜಿಯನ್ನು ಪರಿಶೀಲಿಸಲಾಗುವುದು.

## ಚೀಣದಿಂದ ಪಾಕಿಸ್ತಾನ್ ಗಡಿ ಉಲ್ಲಂಘನೆಯೇ?

ಕಾಶ್ಮೀರದ ಉತ್ತರಭಾಗದ ಬಳಿ ಇರುವ ಪಾಕಿಸ್ತಾನದ ಗಡಿ ಪ್ರದೇಶವನ್ನು ಚೀಣಾ ಸೈನ್ಯಗಳು ಉಲ್ಲಂಘಿಸಿ ... ದವೆಂದು ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ನೆನ್ನೆ ವಿದೇಶಾಂಗ ಮಂತ್ರಿ ಜಫ್ರುಲ್ಲಾ ಖಾನರವರು ಪ್ರಕಟಪಡಿಸಿದ ದಾಗಿ ವರದಿಯಾಗಿದೆ. ಈ ಬಗ್ಗೆ ಮುನ್ನೆಚ್ಚರಿಕೆ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದೂ, ಸಾರ್ವಜನಿಕ ಹಿತದೃಷ್ಟಿಯಿಂದ ಹೆಚ್ಚಿನ ವಿವರಗಳನ್ನು ಪ್ರಕಟಿಸುತ್ತಿಲ್ಲವೆಂದೂ ಅವರು ಹೇಳಿದ್ದಾರೆ.

## ಸರಾಫ್ ಪತ್ರಿಕೆ ಕಛೇರಿಯ ಶೋಧನೆ

### ಪೋಲೀಸರಿಂದ ಚಕ್ರಬಂಧ ಸ್ಪರ್ಧೆಗೆ ಸಂಬಂಧಪಟ್ಟ ಪತ್ರಗಳ ವಶ

ಮೈಸೂರು ೩

ರಾಜಧಾನಿಯ ಅವಿನಾಶಿ ಪಲ್ಲಿರುವ ಸರಾಫ್ ಎಂಬ ಉರ್ದು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಚಕ್ರಬಂಧ ಸ್ಪರ್ಧೆಗಳ ಬಗ್ಗೆ ದೂರುಗಳು ಬಂದು ಕ್ರೈಂ ಬ್ರಾಂಚ್ ಪೋಲೀಸರು ಪತ್ರಿಕಾ ಕಛೇರಿಯ ಸ್ಪರ್ಧೆಗಳಿಗೆ ಸಂಬಂಧಿಸಿದ ಹಲವು ಕಾಗದ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಮದೀನ್ ಗಾರ್ಡನ್ ... ಎಂಬ ಹೆಸರಿನಲ್ಲಿ ಸ್ಪರ್ಧೆಗಳನ್ನು ನಡೆಸಲಾಗುತ್ತಿತ್ತು. ಈ ಸ್ಪರ್ಧೆಗಳಲ್ಲಿ ಭಾಗವಹಿಸಿದವರು ಮತ್ತು ಬಹುಮಾನ ಪಡೆದವರು ಹೆಚ್ಚಿನ ವಿವರಗಳನ್ನು ಪೋಲೀಸರಿಗೆ ಒದಗಿಸಬೇಕೆಂದು ಕೋರಲಾಗಿದೆ.

### ಫುಟ್‌ಬಾಲ್ ಸಮಿತಿಯ ಮೇಲೆ ಮೊಕದ್ದಮೆ

ಮೈಸೂರು ಸಂಸ್ಥಾನದ ಫುಟ್‌ಬಾಲ್ ಅಸೋಸಿಯೇಷನ್ನಿನ ಮೈಸೂರು ಸಮಿತಿಯು ತನ್ನನ್ನು ಅಸೋಸಿಯೇಷನ್ನಿನ ಸದಸ್ಯತ್ವದಿಂದ ತೆಗೆದುಹಾಕಿರುವುದಾಗಿ ತೀರ್ಮಾನ ಮಾಡಿರುವುದರ ಬಗ್ಗೆ ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ಕಾರ್ಯದರ್ಶಿಯವರಾದ ಎಂ. ಎಸ್. ತಿಮ್ಮಯ್ಯನವರು ಸಮಿತಿಯ ಮೇಲೆ ಪ್ರತಿ ಕೈಗೊಂಡು ನಷ್ಟ ಪರಿಹಾರಕ್ಕಾಗಿ ರಾಜಧಾನಿಯ ಸಬ್ ಆರ್ಡಿನೇಟ್ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ.

### ನೆಹರೂರವರಿಗೆ ಕನ್ನಡ ಶಾಸನಸಭಾಸದರ ಎಚ್ಚರಿಕೆ!

ಹೈದರಾಬಾದು ಶಾಸನ ಸಭೆಗೆ ಕನ್ನಡ ಪ್ರದೇಶಗಳಿಂದ ಆಯ್ಕೆಯಾಗಿ ಬಂದಿರುವ ೭ ಜನ ವಿರೋಧ ಪಂಗಡ ಮತ್ತು ಸ್ವತಂತ್ರ ಸದಸ್ಯರು, ಸಭೆಯ ಉಪಾಧ್ಯಕ್ಷ ... ನ ... ಸೇರಿ ಪ್ರಧಾನಿ ನೆಹರೂರವರಿಗೆ ಪತ್ರವೊಂದನ್ನು ಬರೆದು, ಕರ್ನಾಟಕ ಪ್ರಾಂತ್ಯದ ರಚನೆ ವಿಷಯದಲ್ಲಿ ಭಾರತ ಸರ್ಕಾರದವರು ತಮ್ಮ ನಿರ್ಧಾರವನ್ನು ಮುಂದಿನ ತಿಂಗಳು ೧ ನೇ ತಾ|| ನೊಳಗೆ ಘೋಷಿಸಿ, ಬಳ್ಳಾರಿ ಜಿಲ್ಲೆಯನ್ನು ಪೂರ್ಣವಾಗಿ ಮೈಸೂರಿನೊಡನೆ ಸೇರಿಸದಿದ್ದರೆ, ನೇರವಾದ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಪೂರ್ವ, ಮೊದಲನೆಯ ಹೆಜ್ಜೆಯಾಗಿ ತಮ್ಮ ಸದಸ್ಯ ಸ್ಥಾನಗಳಿಗೆ ರಾಜೀನಾಮೆ ಕೊಡಲು ಆಲೋಚಿಸಿರುವುದಾಗಿ ತಿಳಿಸಿರುವರು.

## ಕಂಟೆಂಪ್ಟ್ ಮೊಕದ್ದಮೆ ತೀರ್ಪು

### ಹಲವು ಅಪರಾಧಿಗಳಿಗೆ ಸಜಾ ಮತ್ತು ದಂಡ

ನಂಜಪ್ಪನವರ ಮೇಲಿನ ಆಪಾದನೆ ವಿಚಾರಣೆ ಇನ್ನೂ ಇದೆ

ಸ್ವಂ ಸು. ಪ್ರೋ॥] ಬೆಂಗಳೂರು ೩

ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪ, ನ್ಯಾಯಾಧೀಶರುಗಳಾದ ಶ್ರೀ ಆರ್. ವೆಂಕಟರಾಮಯ್ಯ ಮತ್ತು ಬಿ. ವಾಸುದೇವಮೂರ್ತಿಯವರುಗಳು ಈ ದಿನ ರಾಮನಗರದ ಕಂಟೆಂಪ್ಟ್ ಮೊಕದ್ದಮೆಯಲ್ಲಿ ತೀರ್ಪಿತ್ತು, ನಂಜಪ್ಪನವರನ್ನು ಬಿಟ್ಟು, ಮಿಕ್ಕ ಅಪರಾಧಿಗಳುಗಳನ್ನು ಶಿಕ್ಷೆಗೆ ಗುರಿಪಡಿಸಿದರು.

ಶ್ರೀ ವಿ. ನಂಜಪ್ಪನವರ ಮೇಲಿನ ಮೊಕದ್ದಮೆಯನ್ನು ರಜಾ ದಿನಗಳಲ್ಲಿ ಪರಿಶೀಲಿಸಲಾಗುವುದು. ಉಳಿದವರಿಗೆ ಈ ರೀತಿ ಶಿಕ್ಷೆ ಕೊಡಲಾಗಿದೆ:—

೧೨ ನೇ ಅಪರಾಧಿ ಚಿಕ್ಕೇಗೌಡರಿಗೆ ಎರಡು ತಿಂಗಳು ಸಾದಾ ಸಜಾ ಮತ್ತು ೫೦೦ ರೂ. ದಂಡ, ತಪ್ಪಿದರೆ ೩ ವಾರ ಸಾದಾ ಸಜಾ, ೧೧ ನೇ ಅಪರಾಧಿ ... ರೀ ಮತ್ತು ೧೪ ನೇ ವೀರಣ್ಣನವರಿಗೆ ೧ ತಿಂಗಳ ಸಜಾ, ಪಟೇಲ್ ಸಿದ್ದೇಗೌಡ, ಸೈಯ್ಯದ್ ... ಬ್ರಾಹಿಂ, ಗೌಸ್ ಅಲಿ ಮತ್ತು ಉಗ್ರೇಗೌಡರಿಗೆ ತಲಾ ೩೫೦ ರೂ. ದಂಡ. ಉಳಿದವರೆಲ್ಲರಿಗೂ ೫೦ ರೂಗಳಿಂದ ೫೦೦ ರೂ. ವರೆಗೆ ದಂಡ.

## ಆಸಫ್ ಅಲಿಯವರ ನಿಧನ

ಸ್ವಿಟ್ಸರ್‌ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿದ್ದ ಆಸಫ್ ಅಲಿಯವರು ಮೊನ್ನೆ ಹೃದಯ ರೋಗದಿಂದ ಬರ್ನ್ ನಗರದಲ್ಲಿ ವಿಧಿವಶರಾದರು. ಅವರ ಪತ್ನಿ ಅರುಣಾ ಅವರು ಮೊನ್ನೆ ತಾನೆ ಭಾರತದಿಂದ ಅಲ್ಲಿಗೆ ತೆರಳಿದ್ದರು. ಹಿಂದೆ ಅಲ್ಲಿ ರಾಯಭಾರಿಯಾಗಿದ್ದ ಧೀರೂಭಾಯಿ ದೇಸಾಯಿಯವರೂ ಅಧಿಕಾರ ಸ್ಥಾನದಲ್ಲಿದ್ದಾಗಲೇ ಮೃತರಾಗಿದ್ದರು. ದೆಹಲಿ ಪಾರ್ಲಿಮೆಂಟಿನಲ್ಲಿ ಆಸಫ್ ಅಲಿಯವರ ಬಗ್ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಉಪಮಾರಾ ಪ್ರೆಸ್ ಮುದ್ರಕರ ಮೇಲೆ ಮೊಕದ್ದಮೆ

ಮೈಸೂರು ೩

ರಾಜಧಾನಿಯ ಸೊರಡಿ ರಸ್ತೆಯಲ್ಲಿರುವ ಉಪಮಾರಾ ಪ್ರೆಸ್ಸಿನ ಶ್ರೀಗಳು ಜೆ. ಕೆ. ಕುಮಾರಸ್ವಾಮಿ ಮತ್ತು ಸುಬ್ಬಣ್ಣ ಇವರುಗಳ ಮೇಲೆ ನಗರದ ೧ ನೇ ನ್ಯಾಯಾಧೀಶರ ಕೋರ್ಟಿನಲ್ಲಿ ಪೋಲೀಸರು ನೆನ್ನೆ ಮೊಕದ್ದಮೆ ಹೂಡಿದರು. ಮಹಾರಾಜ ಕಾಲೇಜಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕಳೆದ ಡಿಸೆಂಬರ್ ೨ನೇ ತಾ|| ಭಾಷಣ ಮಾಡಿದ ಸಂಬಂಧವಾಗಿ ಅವರಿಗೆ ಕಪ್ಪು ಬಾವುಟಗಳ ಪ್ರದರ್ಶನ ಮಾಡಲಾಗುವುದೆಂದು ಸೂಚಿಸಿ, ಮುದ್ರಿಸಲಾಗಿದ್ದ ಹಸ್ತಪತ್ರಿಕೆಗಳಲ್ಲಿ ಸದರಿಯವರು ಮುದ್ರಣಾಲಯದ ಹೆಸರನ್ನು ಹಾಕದೆ ಇದ್ದುದೇ ಮೊಕದ್ದಮೆಗೆ ಕಾರಣವಾಗಿದೆ.

## ಆಲದ ಬಿಳಿಲೆಂದು ಹೆಬ್ಬಾವಿನ ಬಾಲ ಹಿಡಿದ

ಆಲದ ಮರದ ಬಿಳಿಲೆಂದು ಹೆಬ್ಬಾವೊಂದರ ಬಾಲವನ್ನು ಹಿಡಿದ ... ದ ಪ್ರಸಂಗವೊಂದು ... ಬಳಿ ... ಕಳೆದ ಭಾನುವಾರ ನಡೆಯಿತು. ತಂಗಸ್ವಾಮಿ ಎಂಬುವನು ಕೆಲಸವನ್ನು ಹುಡುಕಿಕೊಂಡು ಅಲ್ಲಿಗೆ ಹೋಗಿ ಆಲದ ಮರದ ... ವನ್ನು ಕಂಡಾಗ ಅದನ್ನು ಹಿಡಿದು ತೂಗಾಡಬೇಕೆಂದು ಆಸೆಪಟ್ಟು ಒಂದು 'ಬಿಳಿಲ'ನ್ನು ಹಿಡಿದನೆಂದೂ, ಸ್ವಲ್ಪ ಹೊತ್ತಿನ ಮೇಲೆ ಹಾವು ಅವನನ್ನು ಸುತ್ತಿಕೊಳ್ಳಲು, ತಾನು ಹಿಡಿದದ್ದು ಹೆಬ್ಬಾವಿನ ಬಾಲವೆಂದು ಗೊತ್ತಾಗಿ ಅವನಿಗೆ ಭಯ ಪ್ರಾರಂಭವಾಗಿ ಕೂಗಿಕೊಂಡನೆಂದೂ ಆ ಸಮಯದಲ್ಲಿ ಆ ಮಾರ್ಗದಲ್ಲೇ ದಾರಿಯಲ್ಲಿ ಹೋಗುತ್ತಿದ್ದ ಪೋಲೀಸನು ಹಾವನ್ನು ಗುಂಡಿನಿಂದ ಹೊಡೆದು ಕೊಂದನೆಂದೂ ವರದಿಯಾಗಿದೆ.

## ಆಟೋ ರಿಕ್ಷಾ ಸ್ಪರ್ಧೆ ಬಗ್ಗೆ ಜಟಕಾದವರ ಆಕ್ಷೇಪ

ಬೆಂಗಳೂರಿನಲ್ಲಿ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರ ಬಳಿ ನೆನ್ನೆ ಜಟಕಾ ಗಾಡಿ ಹೊಡೆಯುವವರ ೪ ಜನ ಪ್ರತಿನಿಧಿಗಳು ನಿಯೋಗ ಹೋಗಿ ಆಟೋ ರಿಕ್ಷಾಗಳ ಸ್ಪರ್ಧೆಯಿಂದ ತಮಗೆ ಆಗಿರುವ ಅನಾನುಕೂಲವನ್ನು ವಿವರಿಸಿದರು. ಮುಖ್ಯವಾಗಿ ೪ ಜನರು ಕುದುರೆ ರಿಕ್ಷಾಗಳಿಂದ ತಮ್ಮ ಜೀವನಕ್ಕೆ ಕುಂದು ಬರುತ್ತಿರುವುದಾಗಿ ಅವರು ಆರೋಪ ಮಾಡಿ, ನಗರದಲ್ಲಿರುವ ೫,೦೦೦ ರಿಕ್ಷಾಗಳನ್ನು ಬಾಡಿಗೆ ಹೊಡೆಯದಂತೆ ತಡೆಯಬೇಕೆಂದು ಪ್ರಾರ್ಥಿಸಿದರು. ಸಚಿವರು ಉತ್ತರವಿತ್ತು, ತಮಗೆ ಬೇರಾವ ಯಾವ ಉದ್ಯೋಗವನ್ನಾದರೂ ಅವಲಂಬಿಸುವ ಹಕ್ಕು ಪ್ರತಿಯೊಬ್ಬರಿಗೂ ಇರುವುದರಿಂದ ಅವನ್ನು ನಿಷೇಧಿಸಲು ಸಾಧ್ಯವಿಲ್ಲವೆಂದೂ, ಜಟಕಾ ಗಾಡಿಗಳವರಿಗೆ ಸೂಕ್ತ ಪರಿಹಾರ ಕಲ್ಪಿಸುವ ಬಗ್ಗೆ ಸರ್ಕಾರ ಆಲೋಚಿಸುವುದಾಗಿಯೂ ತಿಳಿಸಿದರು. ನೆನ್ನೆ ಆಂತರಿಕ ಕಛೇರಿ ಬಳಿ ೩೦೦ ಜಟಕಾಗಳನ್ನು ನಿಲ್ಲಿಸಲಾಗಿದ್ದಿತು.

★ ಭತ್ತದ ಸಾಗಾಣಿಕೆ ಬಗ್ಗೆ ಇದ್ದ ನಿರ್ಬಂಧವನ್ನು ಕೃಷ್ಣರಾಜನಗರ ತಾಲ್ಲೂಕಿನಲ್ಲಿ ತೆಗೆಯಲಾಗಿದೆ.

## ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಸಹ ವಿದ್ಯಾಭ್ಯಾಸ

### ಹಿರಿಯ ಶಾಸನ ಸಭೆಯಲ್ಲಿ ಸದಸ್ಯರ ಸಲಹೆ

ಸ್ಟಂ ನು ಪೋ[ಸ್] ಬೆಂಗಳೂರು ೩ ವಿದ್ಯಾಭ್ಯಾಸ ಸುಧಾರಣಾ ಸಮಿತಿ ಯವರು ಇತ್ತ ವರದಿ ಬಗ್ಗೆ ಹಿರಿಯ ಶಾಸನ ಸಭೆಯಲ್ಲಿ ಇಂದು ಚರ್ಚೆಯು ನಡೆಯಿತು. ಸದಸ್ಯರು ಭಾಷಣ ಮಾಡಿ ಪ್ರಾಥಮಿಕ ತರಗತಿಗಳಲ್ಲಿ ಬಾಲಕ ಬಾಲಿಕೆಯರ ವಿದ್ಯಾಭ್ಯಾಸವು ಒಟ್ಟಿಗೆ ಆಗಬಹುದೆಂದೂ, ಮಾಧ್ಯಮಿಕ ಮತ್ತು ಪ್ರೌಢಶಾಲಾ ವರ್ಗಗಳಲ್ಲಿ ಸಹವಿದ್ಯಾಭ್ಯಾಸವು ಇರಬಾರದೆಂದೂ ಸಲಹೆ ಮಾಡಿದರು.

ಸಂಸ್ಥಾನದ ಹಲವು ಮುಖ್ಯ ನಗರಗಳಲ್ಲಿ ರಾತ್ರಿ ೧೧ ರಿಂದ ಬೆಳಗ್ಗೆ ೬ ಗಂಟೆಯವರೆಗೆ ಲೌಡ್ ಸ್ಪೀಕರುಗಳ ಉಪಯೋಗವನ್ನು ತಪ್ಪಿಸುವುದಕ್ಕಾಗಿ ಪ್ರೊ [illegible] ಶಾಸನಕ್ಕೆ ತರಬಾದ [illegible] ಸಭೆಯಲ್ಲಿ [illegible] ವಾಗಿರುತ್ತದೆ

### ವಿದ್ಯಾರ್ಥಿಗಳಿಂದ ಪಿಕಾ ಟಿಂಗ್ ಯುವಿಗೆ ಆಲಿಸಿದ ಕುಂಕುಮ'

ಬೆಂಗಳೂರಿನ ಸೆಂಟ್ರಲ್ [illegible] ವಿದ್ಯಾರ್ಥಿ [illegible] [illegible]

[illegible] ಪ್ರಸಂಗವು ನಡೆಯಿತು ಹಲವು ವಿದ್ಯಾರ್ಥಿನಿಯರು [illegible] ಯನ್ನು [illegible] ಕುಂಕುಮ [illegible] ವಿದ್ಯಾರ್ಥಿಗಳಿಗಾಯಿತೇ [illegible] ಹಾಸ್ಯ ಮಾಡಿದರು [illegible] ಹೇಳಕೊಳ್ಳಲಾಯಿತು

## ಸಹಗಮನದ ತಪ್ಪಿಸಲು ಸಂಸ್ಥಾನಗಳಿಗೆ ಸೂಚನೆ

ಸಹಗಮನಗಳ [illegible] [illegible] ತಿಳಿಸಿರುತ್ತಾರೆ

## ಸಿರಿಯಾಪಟ್ಟಣದಲ್ಲಿ ಕೆರೆಗಳ ಜೀರ್ಣೋದ್ಧಾರ ಅಗತ್ಯ

ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ತಿಳಿಸಿರುತ್ತಾರೆ

ಪಿರಿಯಾಪಟ್ಟಣದ ತಾಲ್ಲೂಕಿನ ಅನೇಕ ಕೆರೆಗಳಲ್ಲಿ ಹೂಳ ತುಂಬಿ ಬೆಳೆ ತೆಗೆಯಲು ಸಾಧ್ಯವಾಗುವಷ್ಟು ನೀರ ನಿಲ್ಲುತ್ತಿಲ್ಲವೆಂದೂ, ಹೂಳು ತೆಗೆಯುವ ಕಾರ್ಯವನ್ನು ನಡೆಸಬೇಕೆಂದೂ [illegible] ತಿಳಿಯುತ್ತಲೇ [illegible] ನಡೆದ ಜಿಲ್ಲಾ [illegible] ಅಧ್ಯಕ್ಷತೆ ವಹಿಸಿದ್ದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರೂ ಸಹ ಇದನ್ನು ಅನುಮೋದಿಸಿದ್ದರು ಆ ದರೆ ಇದುವರೆಗೂ ಯಾವ ಕೆಲಸವೂ ಹೂಳನ್ನು ತೆಗೆಸದೇ ಇದ್ದ [illegible] ನೀಯ

[illegible]

[illegible] ಸಲಹೆ ಮಾಡುತ್ತೇನೆ

[illegible]

## ಕರಾಂಜಿಯಾ ನಿರ್ದೋಷಿ ಎಂದು ತೀರ್ಪು

[illegible] ಮಾಜಿ ರಾಯಭಾರಿ [illegible] ಬೌಲ್ಸ್‌ರವರು ತಮಗೆ ಬರೆದ ರೆಂದು ಹೇಳಲಾದ ಪತ್ರವೊಂದನ್ನು ಪ್ರಕಟಿಸಿ ಮಾನನಷ್ಟಕ್ಕೆ ಸಹಾಯಕರಾಗಿದ್ದರೆಂದು ಬಂದ ಆಪಾದನೆಗಳಿಂದ ಬೊಂಬಾಯಿ [illegible] ಬ್ಲಿಟ್ಸ್ ಪತ್ರಿಕೆ ಸಂಪಾದಕ ಆರ್ ಕೆ ಕರಾಂಜಿಯಾರವರನ್ನು ಮುಕ್ತಗೊಳಿಸಿ, ಅಲ್ಲಿನ ನ್ಯಾಯಾಧೀಶರ [illegible]

### ಉಪನ್ಯಾಸ

ಮೈಸೂರಿನ [illegible] ಶ್ರೀ [illegible] ಎಸ್ ಎಸ್ [illegible] ವರು ತಮ್ಮ ದ್ವಿತೀಯ [illegible] [illegible]

### ಹೊರೆಸ್ಸ್ ಅಲೆಕ್ಸಾಂಡರ್ [illegible] ಮಾಜಿ ನೌಕರರ ಸಭೆ

[illegible]

ನ ವಿರ್ಸಹಿಸಿ ಒಂದರಿಂದ ಮತ್ತೊಂ ಮ ಕರೆಗೆ [illegible] ಬರುವಂತೆ ಮಾಡಬೇಕು

GALA OPENING
On 3—4—53
AT SRI GANESHA
TALKIES

The Only Ideal Picture House
Of the City

## ಆಂಧ್ರಕ್ಕೆ ಪ್ರತ್ಯೇಕ ಹೈಕೋರ್ಟ್ ಬೇಕು

ಆಂಧ್ರ ಪ್ರಾಂತಕ್ಕೆ ಪ್ರತ್ಯೇಕ ಹೈಕೋರ್ಟನ್ನು ಏಕವಾಗಬೇಕೆಂದೂ ಪ್ರಾರಂಭದಿಂದಲೇ ಆಂಧ್ರ ಪ್ರಾಂತದಲ್ಲೇ ಅದು ಇರಬೇಕೆಂದೂ ಆಂಧ್ರ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯ ಮಾಡಿರುತ್ತದೆ

### ಸಂತಾಪ ಸೂಚನೆ

ರಾಜಧಾನಿಯ ಶ್ರೀ [illegible] ನಾರಾಯಣ ಶೆಟ್ಟರ ನಿಧನಕ್ಕಾಗಿ ಶ್ರೀ ರಾಮಪೇಟೆ [illegible] ಕೃಷ್ಣ ಶೆಟ್ಟಿಯವರ ವಿದ್ಯಾರ್ಥಿ ನಿಲಯದಲ್ಲಿರುವ ಶ್ರೀ [illegible] ಮಂದಿರದ [illegible] ಸಂತಾಪ ಸೂಚಕ ಸಭೆಯನ್ನು ನಡೆಸಿ, [illegible] ಶಾಂತಿಯನ್ನು ಕೋರಿರುತ್ತಾರೆ

### ಗ್ರಾಮಕಲಾ ಪ್ರದರ್ಶನ

ಮೈಸೂರು [illegible] ಶಿಕ್ಷಣ ಸಮಿತಿಯವರು [illegible] ಪ್ರದರ್ಶನವ [illegible] [illegible] ಕಾರ್ಯಕ್ರಮಗಳು ಜರುಗಿದುವು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

Edited, Printed and Published by A R Nagarajan at Sadhvi Press, D Subbiah Road Mysore

ಚಾಮುಂಡೇಶ್ವರಿ ಟಾಕೀಸ್
3 4—53 ರಿಂದ :: ಅಪೂರ್ವ ಪ್ರದರ್ಶನಾರಂಭ
[illegible]
[illegible]
* ಅಮ್ಮಲಕ್ಕಲು *
[illegible]
[illegible]

ಪ್ರಭುದೇವಾ ಟಾಕೀಸ್
4 4—53ರ :: ರವಿವಾರದಿಂದ :: ಪ್ರತಿ ದಿನ 3 ಆಟಗಳು
• ಲವಕುಶ •
( ತೆಲುಗು,
[illegible]
[A] CHAMARIA RELEASE

ಫೋನ್ ನಂ. 792 ||ವಂದೇ ಮಾತರಂ|| ಬಿಡಿ ಪ್ರತಿಗೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಶನಿವಾರ ೪-೪-೧೯೫೩ [ ಸಂಚಿಕೆ ೨೦೨

# ಕೋಲಾರದಹಳ್ಳಿಯಲ್ಲಿ ಪೋಲೀಸರ ಗುಂಡು

## ೧೯೫೩ರೊಳಗೆ ಬರಿ ಕಾಲಿನ ಫುಟ್‌ಬಾಲ್ ಪಂದ್ಯ ತಪ್ಪಲಿ

### ಅ. ಭಾ. ಸಂಘದವರ ನಿರ್ಣಯ

ಮೈಸೂರು ೪

ಅಖಿಲ ಭಾರತ ಫುಟ್‌ಬಾಲ್ ಸಂಘದ ಸಾಮಾನ್ಯ ಸಭೆಯು ನೆನ್ನೆ ಇಲ್ಲಿ ನಡೆಯಿತು. ಎಲ್ಲಾ ಪ್ರಾಂತಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಬಂಗಾಳದ ಶ್ರೀ ಪಂಕಜ ಗುಪ್ತರವರು ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಒಟ್ಟು ೨೮ ನಿರ್ಣಯಗಳನ್ನು ಅಂಗೀಕರಿಸಿತು. ಸಂತೋಷ್ ಫುಟ್‌ಬಾಲ್ ಪಂದ್ಯವನ್ನು ಇನ್ನು ಮೂರು ವರ್ಷಗಳಲ್ಲಿ ಬೊಂಬಾಯಿ, ಮೈಸೂರು ಮತ್ತು ಮದರಾಸುಗಳಲ್ಲಿ ಅನುಕ್ರಮವಾಗಿಯೂ, ೧೯೫೩ರ ಕೊನೆಗೆ ಬರೀ ಕಾಲಿನಲ್ಲಿ ಆಡುವ ಪಂದ್ಯಗಳನ್ನು ನಿಲ್ಲಿಸುವಂತೆಯೂ, ಸ್ವಿಟ್ಜರ್‌ಲೆಂಡಿನಲ್ಲಿ ಈ ವರ್ಷ ನಡೆಯುವ ಅಂತರ ರಾಷ್ಟ್ರೀಯ ಛಾಂಪಿಯನ್‌ಷಿಪ್ ಪಂದ್ಯದಲ್ಲಿ ಭಾರತವು ಭಾಗವಹಿಸಬೇಕೆಂತಲೂ ನಿರ್ಣಯಗಳನ್ನು ಮಾಡಲಾಯಿತು.

ಫುಟ್‌ಬಾಲ್ ಪಂದ್ಯಗಳ ಮೈದಾನವು ೧೨೦ ಗಜ ಉದ್ದವೂ, ೮೦ ಗಜ ಅಗಲವೂ ಇರಬೇಕೆಂದು ಗೊತ್ತು ಮಾಡಲಾಯಿತು.

ಅಧಿಕಾರ ವರ್ಗದ ಚುನಾವಣೆಯು ನಂತರ ನಡೆದು ಶ್ರೀ ಪಂಕಜ್ ಗುಪ್ತರವರು ಅಧ್ಯಕ್ಷರಾಗಿಯೂ, ಶ್ರೀ ಬೆಸ್ತ್ರಾ ರಾಯ್ ಮತ್ತು ಶ್ರೀ ಡಿ. ರಾಮಯ್ಯನವರುಗಳು ಉಪಾಧ್ಯಕ್ಷರುಗಳಾಗಿಯೂ, ಜಿಯಾ ಉದ್ದೀನ್ ರವರು ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

### ಅನ್ನ ಸತ್ಯಾಗ್ರಹದ ೧೭ ನೇ ತಂಡ

೧೭ ನೇ ತಂಡದ ಸತ್ಯಾಗ್ರಹಿಗಳಾದ ಶ್ರೀ ಕೃಷ್ಣ, ಕೃಷ್ಣಕುಮಾರ್, ಎಸ್. ಶಂಕರಮೂರ್ತಿ, ಕೆಲ್ಲಪಿಳ್ಳೆ ಮತ್ತು ಮನ್ನಾಜಿರಾವ್ ಮಷ್ಕೆ ಇವರ ಉಪವಾಸ ವ್ರತವು ಈ ದಿನ ಪ್ರಾತಃಕಾಲ ೬ ಗಂಟೆಗೆ ಮುಕ್ತಾಯವಾಗಿ ಜನರ ಸ್ಥಳದಲ್ಲಿ ಶ್ರೀ ಬಿ. ಖಾಲಿದ್ ಅಹಮದ್ ಮತ್ತು ಜಿವರ ಮಗ ಅಬ್ದುಲ್ ಬಷೀರ್ ರವರು ೭೨ ಗಂಟೆಗಳ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿರುತ್ತಾರೆ.

### ಹನುಮಜ್ಜಯಂತ್ಯುತ್ಸವ

ಕಾಲೇಜ್ ರೋಡಿನಲ್ಲಿರುವ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ನೆನ್ನೆ ಶ್ರೀ ರಾಮ ಪಟ್ಟಾಭಿಷೇಕವು ವಿಜೃಂಭಣೆಯಿಂದ ನಡೆಯಿತು. ಈ ದಿವಸ ಹನುಮಂತೋತ್ಸವದ ಪ್ರಯುಕ್ತ ರಾತ್ರಿ ೮ ಗಂಟೆಗೆ ಆ|| ವಿ|| ಎಂ. ಬಿ. ಶಿವಪ್ಪನವರ ಹಾರ್ಮೋನಿಯಂ ಆ|| ವಿ|| ಜೆಸ್ ಎ. ರಾಮರಾವ್‌ರವರ ಪಿಟೀಲು ಮತ್ತು ಆ|| ವಿ|| ಎಸ್. ಎಲ್. ಸೀತಾರಾಮಶಾಸ್ತ್ರಿಗಳವರ ಮೃದಂಗದೊಡನೆ ನಡೆಯುತ್ತದೆ.

### ಸ್ವಾಮಿಜ್ ವಾರ

ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದವರು ಕಳೆದ ೩೦ ನೇ ತಾ|| ನಿಂದ ಸ್ಟಾಲಿನ್ ವಾರವನ್ನು ಆಚರಿಸುತ್ತಿರುವರು. ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಮಾರ್ಕ್ಸವಾದಿ ಗ್ರಂಥಗಳನ್ನು ಮಾರಾಟ ಮಾಡಲಾಗುತ್ತಿದೆ. ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

### ಲಾವಣಿ ಗೀತೆ

ರಾಜಧಾನಿಯ ಮಂಡಿ ಮೊಹಲ್ಲೆಯ ಸನ್ನಿಯ ಬೀದಿಯಲ್ಲಿರುವ ಮಹಾವಿಷ್ಣುವಿನ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೯ ಘಂಟೆಗೆ ನಂಜನಗೂಡಿನ ಶ್ರೀ ಗುರುದೇವಪ್ಪ ಮತ್ತು ಶ್ರೀ ರಾಚಪ್ಪನವರುಗಳ ಲಾವಣಿ ಏರ್ಪಾಡಾಗಿದೆ.

## ಕೋಲಾರದ ಹಳ್ಳಿಯಲ್ಲಿ ದೊಂಬಿ

### ಪೋಲೀಸರ ಗುಂಡಿನೇಟಿಗೆ ಒಬ್ಬನ ಮರಣ

ಬೆಂಗಳೂರು ೪

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಬಳಿ ಹಳ್ಳಿಯಲ್ಲಿ ನೆನ್ನೆ ಎರಡು ಕೋಮುಗಳವರಿಗೆ ಹೊಡೆದಾಟವಾಗಿ, ಪೋಲೀಸರು ಗುಂಡು ಹಾರಿಸಬೇಕಾಗಿಬಂದು ಮೂವರು ಗಾಯಗೊಂಡರೆಂದೂ, ಆ ವ್ಯಕ್ತಿ ಖಾದರ್ ಎಂಬುವನು ಮಡಿದನೆಂದೂ ವರದಿಯಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ೧೨ ಜನರ ವಸ್ತಗಿರಿಯಾಗಿದೆ.

### ಶ್ರೀ ಶೇಷಗಿರಿರಾಯರು ಮದ್ರಾಸಿಗೆ

ಬಳ್ಳಾರಿಯ ಆರು ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸುವ ಸಂಬಂಧದಲ್ಲಿ ವಿವರಗಳನ್ನು ಸಂಗ್ರಹಿಸಲು ಮೈಸೂರು ಸರ್ಕಾರದಿಂದ ನೇಮಿತರಾಗಿರುವ ವಿಶೇಷಾಧಿಕಾರಿಗಳಾದ ಶ್ರೀ ಕೆ. ಶೇಷಗಿರಿ ರಾಯರು ಮದ್ರಾಸಿಗೆ ತೆರಳಿರುತ್ತಾರೆ.

## ಮದ್ರಾಸು-ಬೆಂಗಳೂರುಗಳ ನಡುವೆ ವಿದ್ಯುಚ್ಛಕ್ತಿ ರೈಲು

ಭಾರತದ ರೈಲ್ವೆಗಳ ಕಲ್ಲಿದ್ದಲು ಕಮಿಟಿ ಸಮಿತಿಯವರು ಸರ್ಕಾರಕ್ಕೆ ಶಿಫಾರಸನ್ನು ಕಳುಹಿಸಿ ಒಟ್ಟು ೧೧ ಮಾರ್ಗಗಳಲ್ಲಿ ವಿದ್ಯುಚ್ಛಕ್ತಿಯಿಂದ ರೈಲು ನಡೆಸುವ ವ್ಯವಸ್ಥೆ ಮಾಡಲು ಸೂಚಿಸಿರುವರೆಂದು ಗೊತ್ತಾಗಿದೆ. ಆ ಪೈಕಿ ದಕ್ಷಿಣ ಭಾರತದ ಮದ್ರಾಸು-ವಿಜಯವಾಡ, ಮದ್ರಾಸು-ತಿರುಚಿನಾಪಳ್ಳಿ, ಮದ್ರಾಸು-ಬೆಂಗಳೂರು ಮತ್ತು ಕ್ವಿಲಾನ್-ಎರ್ನಾಕುಲಂ ರಸ್ತೆಗಳೂ ಸೇರಿವೆ. ಕಲ್ಲಿದ್ದಲಿನ ಉಳಿತಾಯದ ದೃಷ್ಟಿಯಿಂದ ಈ ಸಲಹೆಯನ್ನು ಮಾಡಲಾಗಿದೆಯೆಂದೂ, ಮೇಲ್ಕಂಡ ೧೧ ರೈಲು ಮಾರ್ಗಗಳ ಒಟ್ಟು ವೆಚ್ಚವು ೬೯ ಕೋಟಿ ರೂಪಾಯಿ ಆಗುವುದೆಂದೂ ಹೇಳಲಾಗಿದೆ.

### ಗೋಮಟೇಶ್ವರ ಸ್ವಾಮಿಗೆ ಪಂಚಾಮೃತಾಭಿಷೇಕ

ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ಮೊನ್ನೆ ನಡೆಯಬೇಕಾಗಿದ್ದ ಪಂಚಾಮೃತ ಅಭಿಷೇಕವು ನಾಳೆಗೆ ಮುಂದುವರಿಸಲ್ಪಟ್ಟಿದೆ.

## ಮೈಸೂರು ಮಂತ್ರಿ ಮಂಡಲದ ಅಸ್ತಿತ್ವದ ಪ್ರಶ್ನೆ

### ಹೈಕೋರ್ಟಿಗೆ ಶಾಸನಸಭಾ ಸದಸ್ಯರೊಬ್ಬರ ಅರ್ಜಿ

ಬೆಂಗಳೂರು ೪

ಕಳೆದ ಶಾಸನ ಸಭೆಯಲ್ಲಿ ಸಾಗರ ತಾಲ್ಲೂಕಿನ ಸದಸ್ಯರಾದ ಶ್ರೀ ಎಸ್. ಗೋಪಾಲಗೌಡರು ನೆನ್ನೆ ಹೈಕೋರ್ಟಿನಲ್ಲಿ ಅರ್ಜಿಯೊಂದನ್ನು ಸಲ್ಲಿಸಿ ಮೈಸೂರಿನ ಈಗಿನ ಮಂತ್ರಿಮಂಡಲವು ಅಧಿಕಾರಾರೂಢವಾಗಿರಲು ಅಥವಾ ಅಧಿಕಾರದಲ್ಲಿ ಮುಂದುವರಿಯಲು ಯಾವ ಆಧಾರದ ಬಲವಿದೆ ಎಂಬುದಕ್ಕೆ ಕಾರಣವನ್ನು ತೋರಿಸುವಂತೆ ಮಂತ್ರಿಮಂಡಲದ ಸದಸ್ಯರುಗಳಾದ ಶ್ರೀಗಳು ಕೆ. ಹನುಮಂತಯ್ಯ, ಎ. ಜಿ. ರಾಮಚಂದ್ರರಾವ್, ಹೆಚ್. ಸಿದ್ದವೀರಪ್ಪ, ಕೆ. ಮಂಜಪ್ಪ ಮತ್ತು ಟಿ. ಚನ್ನಯ್ಯನವರುಗಳಿಗೆ ಆದೇಶವನ್ನೀಯಬೇಕೆಂದು ಕೋರಿರುತ್ತಾರೆ. ಪ್ರತಿವಾದಿಗಳು ಅಧಿಕಾರದಲ್ಲಿ ಮುಂದುವರಿಯಲು ಶ್ರೀ ಟಿ. ಸಿದ್ದಲಿಂಗಯ್ಯನವರ ರಾಜೀನಾಮೆಯು ಅಡ್ಡಿ ತಂದಿರುವುದಾಗಿಯೂ ಅವರು ತಿಳಿಸಿ, ಈ ಬಗ್ಗೆ ಶೀಘ್ರ ನ್ಯಾಯಾಸ್ಥಾನದ ನೆರವು ಬೇಕೆಂದು ತಿಳಿಸಿರುತ್ತಾರೆ. ಮಂತ್ರಿಗಳಿಗೆ ನೋಟೀಸನ್ನು ಕೊಡುವಂತೆ ಕೋರಲಾಗಿದೆ.

### ಮೈಸೂರು ಸರ್ಕಾರದೊಡನೆ ಮದ್ರಾಸ್ ಮಂತ್ರಿಗಳ ಮಾತುಕತೆ

ಮದ್ರಾಸು ಸರ್ಕಾರದ ವ್ಯವಸಾಯ ಮಂತ್ರಿ ಡಾ|| ನಾಗನಗೌಡರು ನೆನ್ನೆ ಬೆಂಗಳೂರಿಗೆ ಆಗಮಿಸಿ ರೆಸಿಡೆನ್ಸಿ ಭವನದಲ್ಲಿ ತಂಗಿರುವರು. ಮೈಸೂರು ಸಂಸ್ಥಾನಕ್ಕೆ ಸೇರಲಿರುವ ಬಳ್ಳಾರಿಯ ೬ ತಾಲ್ಲೂಕುಗಳ ಸಂಬಂಧವಾಗಿ ಅವರು ಮುಖ್ಯ ಮಂತ್ರಿ, ಶ್ರೀ ಕೆ. ಹನುಮಂತಯ್ಯನವರೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ.

## ಚೀಣಾ ಪ್ರಧಾನಿ ಸಲಹೆಗೆ ಚರ್ಚಿಲ್ಲರ ಸ್ವಾಗತ

ಕೊರಿಯಾ ಯುದ್ಧ ಕೈದಿಗಳ ಸಮಸ್ಯೆಯ ನಿವಾರಣೆ ಬಗ್ಗೆ ಚೀಣಾದ ಪ್ರಧಾನಿ ಚೌ ಎನ್ ಲೈಯವರು ಮಾಡಿರುವ ಸಲಹೆಯನ್ನು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಸ್ವಾಗತಿಸಿರುತ್ತಾರೆ.

## ಕೊಳಲು ಕಛೇರಿಯಲ್ಲಿ ಪಿಟೀಲಿನವರ ಸಭಾತ್ಯಾಗ !

ಬೆಂಗಳೂರು ೪

ಚಾಮರಾಜಪೇಟೆ ರಾಮ ಸೇವಾ ಮಂಡಲಿಯಲ್ಲಿ ನೆನ್ನೆ ಶ್ರೀ ಮಹಾಲಿಂಗಂರವರ ಕೊಳಲು ಕಛೇರಿಯು ನಡೆಯುತ್ತಿದ್ದಾಗ ಅವರಿಗೂ ಪಿಟೀಲು ವಿದ್ವಾಂಸರಾದ ಶ್ರೀ ಆರ್. ಆರ್. ಕೇಶವಮೂರ್ತಿಯವರಿಗೂ ಸಂಗೀತಕ್ಕೆ ಸಂಬಂಧಿಸಿದ ವಾಗ್ವಾದವು ನಡೆದು ಕೊನೆಗೆ ಕೇಶವಮೂರ್ತಿಯವರು ಪಿಟೀಲನ್ನು ಕೆಳಗಿಳಿಸಿ, ಕಛೇರಿಯಿಂದ ಹೊರಕ್ಕೆ ಹೋದರೆಂದು ವರದಿಯಾಗಿದೆ. ಶಂಕರಾಭರಣ ರಾಗದಲ್ಲಿ ಸಂಗೀತವು ನಡೆಯುತ್ತಿದ್ದಾಗ, ಕೆಲವು ಕಡೆ ಇತರ ರಾಗಗಳಲ್ಲಿ ಕೊಳಲು ಬಾರಿಸಿದುದನ್ನು ಪಿಟೀಲಿನಲ್ಲಿ ಅನುಕರಿಸದಿದ್ದುದಕ್ಕಾಗಿ ಶ್ರೀ ಮಹಾಲಿಂಗಂರವರು ಆಕ್ಷೇಪಿಸಲು, ರಾಗ ಬಾರಿಸಿದಂತೆ ತಾವು ಬಾರಿಸಿದುದಾಗಿ ಶ್ರೀ ಕೇಶವಮೂರ್ತಿಯವರು ತಿಳಿಸಿದರು. ಮಹಾಲಿಂಗಂರವರು ಪಿಟೀಲನ್ನು ನೀವೇ ಬಾರಿಸುವುದಾಗಿ ಹೇಳಲಿಕ್ಕೆ ಬಂದು, ಶ್ರೀ ಕೇಶವಮೂರ್ತಿಯವರು ಅದನ್ನು ಕೆಳಗಿಟ್ಟು ಸಭೆಯಿಂದ ಹೋದರು.

## ಬೆಂಕಿಯಿಂದ ಆರು ಗೋಡೌನ್‌ಗಳು ಭಸ್ಮ

ದೆಹಲಿಯ ಸಬ್ಜಿಮಂಡಿ ಎಂಬ ಬಡಾವಣೆಯಲ್ಲಿ ಮೊನ್ನೆ ದಿನ ರಾತ್ರಿ ಒಂದು ಸಾಗುವಾನಿ ಗೋಡೌನಿನಲ್ಲಿ ಬೆಂಕಿಯುಂಟಾಗಿ ಅದು ಗಾಳಿಯಿಂದ ಅಕ್ಕಪಕ್ಕದ ಇತರ ಮರ ಮುಟ್ಟುಗಳ ಐದು ಗೋಡೌನುಗಳಿಗೂ ಹರಡಲ್ಪಟ್ಟು ಅಲ್ಲಿದ್ದವೂ ನಾಶವಾದುವೆಂದೂ ಮತ್ತು ೩ ಅಂತಸ್ತಿನ ಎರಡು ಕಟ್ಟಡಗಳು ಸುಟ್ಟುಹೋದುವೆಂದೂ ವರದಿಯಾಗಿದೆ. ೪|| ಘಂಟೆಗಳ ನಂತರ ಬೆಂಕಿಯನ್ನು ಆರಿಸಲಾಯಿತು.

### ಶಿವಾನುಭವ ಸಮ್ಮೇಳನ

ಪಿರಿಯಾಪಟ್ಟಣದ ತಾಲ್ಲೂಕು ಬೆಟ್ಟದಪುರದಲ್ಲಿ ನಾಳಿದ್ದು ಅಂದರೆ ೬ನೇ ತಾರೀಕು ಶ್ರೀ ನಿರಂಜನ ಪ್ರಣವ ಸ್ವರೂಪಿ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳವರ ಆರಾಧನೆಯ ರಜತ ಮಹೋತ್ಸವವೂ ಮತ್ತು ಶಿವಾನುಭವ ಮಹಾಸಮ್ಮೇಳನವೂ ನಡೆಯುವುವು. ಚಿತ್ರದುರ್ಗದ ಜಗದ್ಗುರು ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರು ಅಧ್ಯಕ್ಷತೆ ವಹಿಸುವರು. ಶ್ರೀಮನ್ ಮಹಾರಾಜರವರು ಅವುಗಳ ಆರಂಭೋತ್ಸವವನ್ನು ನಾಳಿದ್ದು ಸಂಜೆ ೬ ಘಂಟೆಗೆ ನೆರವೇರಿಸುವರು. ೭ನೇ ತಾ|| ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಗುವುದು.

### ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೆ ಸೇರಿಸಲು ಸಂಸ್ಥಾನದ ಮನವಿ

ಈಗ ಮೈಸೂರಿಗೆ ಸೇರಿಸಬೇಕಾಗಿರುವ ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕುಗಳ ಜೊತೆಗೆ ಬಳ್ಳಾರಿ ಟೌನ್ ಮತ್ತು ತಾಲ್ಲೂಕನ್ನು ಸಂಸ್ಥಾನಕ್ಕೆ ಸೇರಿಸುವಲ್ಲಿ ಆಡಳಿತ ದೃಷ್ಟಿಯಿಂದ ಅನುಕೂಲವಾಗುವುದೆಂದು ಮೈಸೂರು ಸರ್ಕಾರದವರು ಕೇಂದ್ರಕ್ಕೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

## ಡಾ॥ ಮೋದಿಯವರ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೆ

### ವಿದ್ಯಾ ಸುಧಾರಣಾ ವರದಿ ಬಗ್ಗೆ ಸದಸ್ಯರ ಸಲಹೆಗಳು

ಬೆಂಗಳೂರು ೩

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ಶ್ರೀ ಎಸ್.ಆರ್ ಗುರುರವರ ಪ್ರಶ್ನೆಗೆ ಉತ್ತರವಿತ್ತು, ಕಣ್ಣಿನ ವೈದ್ಯರಾದ ಡಾ॥ ಎಂ. ಸಿ ಮೋದಿಯವರ ವಿದ್ಯಾರ್ಹತೆ ಏನೆಂಬುದು ಸರ್ಕಾರಕ್ಕೆ ತಿಳಿಯದೆಂದೂ, ಅವರು ನಡೆಸಿರುವ ಶಸ್ತ್ರ ಚಿಕಿತ್ಸೆಗಳ ಬಗ್ಗೆ ಸರ್ಕಾರಕ್ಕೆ ಯಾವ ದೂರುಗಳೂ ಬಂದಿಲ್ಲವಾಗಿಯೂ ತಿಳಿಸಿದರು. ಶಸ್ತ್ರ ಚಿಕಿತ್ಸೆ ನಡೆಸಲು ಸದರಿ ವೈದ್ಯರು ಸರ್ಕಾರದವರ ಸಹಾಯವನ್ನು ಬೇಡಿದ್ದರೆಂದೂ, ಬೆಂಗಳೂರು ಪೌರ ಸಭೆಯವರ ಅವರಿಗೆ ಒಂದು ಸ್ಥಳ [illegible] ಕೊಟ್ಟಿದ್ದರೆಂದೂ [illegible] ಅವರ ಚಿಕಿತ್ಸೆ [illegible] ದಾಗಿಯೂ ಅವರು ಹೇಳಿದರು. ಈ ಸ್ಥಾನದಲ್ಲಿ ನೇತ್ರ ಚಿಕಿತ್ಸೆ ನಡೆಸುವಾಗ ಅವರಿಗೆ [illegible] ಮತ್ತು [illegible] ಯರ ಸಹಾಯವನ್ನು [illegible] ತೆಂದೂ ಹೇಳಿದರು.

ಡಾ॥ ಮೋದಿಯವರು ನಡೆಸುವ ಶಸ್ತ್ರ ಚಿಕಿತ್ಸೆಗೆ [illegible] ವಕೂಲು ಮಾಡಿ [illegible] ಗಳೂ [illegible] ಶ್ರೀಯನ್ನು [illegible] ನ್ನು ಕಲ್ಪಿಸುವಂತೆ ಸರ್ಕಾರವನ್ನು [illegible] ರು ಪ್ರಾರ್ಥಿಸಿದರೆಂದೂ ಈ ಬಗ್ಗೆ ಸರ್ಕಾರಕ್ಕೆ ಹಲವು [illegible] ಗಳಿರುವುದಾಗಿಯೂ, ಡಾ॥ ಮೋದಿಯವರ ಅರ್ಹತೆಗೆ ಸರ್ಕಾರದವರು ಉತ್ತರವಿತ್ತಿಲ್ಲವೆಂದೂ ಸಚಿವರು ತಿಳಿಸಿದರು. ವೈದ್ಯಗಣ್ಣಿನ ಚಿಕಿತ್ಸೆಯನ್ನು ಅವರು [illegible] ಯಾಗಿ ನಡೆಸುವುದು ಸರ್ಕಾರದ ಗಮನಕ್ಕೆ ಬಂದಿರುವುದಾಗಿಯೂ ಈ ಚಿಕಿತ್ಸೆಗಳನ್ನು ಸರ್ಕಾರದ ಆಸ್ಪತ್ರೆಗಳಲ್ಲಿರುವ ವೈದ್ಯರೂ ನಡಸಿರುವರೆಂದೂ [illegible] ಸಮಸ್ಯೆಗಳನ್ನು ಪರಿಹಾರ ಮಾಡಲು [illegible] ತಿಯುಳ್ಳವರಾಗಿದ್ದರೆಂದೂ [illegible] ತಕ್ಕ [illegible] ಗುತ್ತಿದೆಯೆಂದೂ ಅವರು ಹೇಳಿದರು.

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು [illegible] ಶ್ರೀ ಟಿ ಪಿ ಬ್ರಹ್ಮಯ್ಯನವರಿಗೆ ಉತ್ತರವಿತ್ತು ಪ್ರಾಥಮಿಕ ಶಾಲೆಗಳಲ್ಲಿ [illegible] ಯಲ್ಲಿ ಸರ್ಕಾರದವರು [illegible] ದಿರುವ [illegible] ಗಳನ್ನು [illegible] ಸಲು ವಾಡಲೆ. [illegible] ಕ್ಕೆ [illegible] ವಾಗಿದೆಯೆಂದೂ ಈ ಬಗ್ಗೆ [illegible] ವದ ಜಿಲ್ಲಾಧಿಕಾರಿಗಳು [illegible] ಕ [illegible]

## ಗೂಡ್ಸ್ ರೈಲಿಗೆ ಡಿಕ್ಕಿಯಾಗಿ ೫ ಜನರ ಮರಣ

ಗಯಾಕ್ಕೆ ೩೨ ಮೈಲಿ ದೂರದಲ್ಲಿ ಎರಡು ಗೂಡ್ಸ್ ರೈಲುಗಳಿಗೆ ೧ ನೇ ತಾ॥ ಡಿಕ್ಕಿಯಾಗಿ, ಸ್ಟೇಷನ್ನುಗಳು ಮತ್ತು ಒಬ್ಬ ಶಂಟಿಂಗ್ ಪೋರ್ಟರ್ ಇಷ್ಟು ಮಂದಿ ಸಾವಿದುತ್ತಾರೆ. ಗಾಯಗೊಂಡ ಇತರರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

### ಕನ್ನ ಹಾಕಿದ ಮಹಿಳೆಗೆ ೯ ತಿಂಗಳ ಸಜಾ

ಬಂಗಾರದ ಆಭರಣಗಳನ್ನು [illegible] ಒಂದು ಮನೆಗೆ ಕನ್ನ ಹಾಕಿ [illegible] ಬೆಲೆ ಬಾಳುವ ವಸ್ತುವನ್ನು ಅಪಹರಿಸಿದಳೆಂದು [illegible] ಗಳ ಕಠಿಣ ಸಜಾ ವಿಧಿಸಲಾಗಿದೆ

### ಪತ್ರಿಕೆ ಕಛೇರಿ ಶೋಧನೆ

ರಾಜಧಾನಿಯ [illegible] ಪತ್ರಿಕಾ ಕಛೇರಿಯೊಂದರಲ್ಲಿ ಪೊಲೀಸರು ಶೋಧನೆ ನಡೆಸಿದರೆಂದು ನೆನ್ನೆ ಪ್ರಕಟವಾಗಿತ್ತು. ಪತ್ರಿಕೆಯು [illegible] ಎಂಬ [illegible] ಇಟ್ಟುಕೊಳ್ಳಬೇಕಾಗಿ [illegible]

---

[illegible]

ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ [illegible] ರವರ ಪ್ರಶ್ನೆಗೆ ಉತ್ತರವಿತ್ತು [illegible] ನದಿ [illegible] ಯೋಜನೆಗಳ ಬಗ್ಗೆ [illegible] ಜನರಿಗೆ [illegible] ಎಷ್ಟು [illegible] ಪರಿಹಾರದ ಹಣವು [illegible] ಜಿಲ್ಲೆಗಳ [illegible] ಕೊಡಲು [illegible] ನದಿ [illegible] ನದಿ [illegible] ತಿಳಿಸಿದರು.

ವಿದ್ಯಾಭ್ಯಾಸ ಸುಧಾರಣಾ [illegible] ಯನ್ನು ಚರ್ಚೆಗೆ ತೆಗೆದುಕೊಂಡಾಗ, ಶ್ರೀ ಸಿ [illegible] ರವರು ಮಾತನಾಡಿ [illegible] ವಿದ್ಯಾರ್ಥಿಗಳನ್ನು [illegible] ಮಕ್ಕಳ [illegible] ದ ತಿಳಿಸಿದರು.

ಶ್ರೀ ಡಿ ವೆಂಕಟರಮಣಯ್ಯನವರು ಮಾತನಾಡಿ, [illegible] ಮಕ್ಕಳ [illegible] ಶಾಲೆಗಳಲ್ಲಿ [illegible] ಕಿಂಡಿರುವುದು. [illegible] ಬೇಕೆಂದು ಹೇಳಿದರು.

ಶ್ರೀ ಟಿ ಎಸ್ [illegible] ವಿದ್ಯಾ [illegible] ವಿದ್ಯಾರ್ಥಿಗಳು [illegible] ದೇಶಕ್ಕೂ [illegible] ದರು.

## ಕಂಟೆಂಪ್ಟ್ ಮೊಕದ್ದಮೆ ತೀರ್ಪಿನ ವಿವರ

ಬೆಂಗಳೂರು ೪

ಕೋರ್ಟಿಗೆ ಅಪಮಾನವಾಡಿದರೆಂಬ ಆಪಾದನೆಯ ಸಂಬಂಧವಾಗಿ ರಾಮನಗರದ ೨೨ ಜನರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಹೈಕೋರ್ಟಿನ ಫುಲ್ ಬೆಂಚಿನವರು ನೆನ್ನೆ ತೀರ್ಪಿತ್ತರಷ್ಟೆ? ಮೊದಲನೇ ಆಪಾದಿತ ಶ್ರೀ ವಿ ವೆಂಕಟೇಶನವರು ಆಪಾದನೆಗಳನ್ನು ನಿರಾಕರಿಸಿರುವುದರಿಂದ ಅವರ ಬಗ್ಗೆಯೂ, ಶ್ರೀಗಳಾದ ಭದ್ರಯ್ಯ ಚಿಕ್ಕೇಗೌಡ, ಭೈರಪ್ಪ ಮತ್ತು ಕೆ. ಎಸ್ ರೆಡ್ಡಿಯವರು ಕೋರ್ಟಿನ ಕ್ಷಮಾಪಣೆ ಕೇಳಿ ಸರ್ಕಾರಕ್ಕೆ ಬರೆದ ಪತ್ರಕ್ಕೆ ತಪ್ಪು ತಿಳುವಳಿಕೆ ಮತ್ತು ಒತ್ತಾಯದಿಂದ ತಾವು ರುಜು ಮಾಡಿರುವುದಾಗಿ ತಿಳಿಸಿದ್ದರಿಂದ ಅವರುಗಳ ಬಗ್ಗೆಯೂ, ಸಂದರ್ಭಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಲು ಹೈಕೋರ್ಟಿನ ರಜಾ ಕಳೆದ ನಂತರ ತೆಗೆದುಕೊಳ್ಳಲಾಗುವುದೆಂದ ನ್ಯಾಯಾಧೀಶರು ತಿಳಿಸಿದರು

ಉಳಿದ ಜನ [illegible] ಈ ರೀತಿ ಶಿಕ್ಷೆಗೆ [illegible] ಶ್ರೀ ಚಿಕ್ಕ [illegible] ತಿಂಗಳು ಸಾದಾ ಸಜಾ ಮತ್ತು [illegible] ರೂ. ದಂಡ, ತಪ್ಪಿದರೆ [illegible] ಸಾದಾ ಸಜಾ [illegible] ಮತ್ತು [illegible] ಇವರಿಗೆ ತಲಾ ೧ ತಿಂಗಳು ಸಾದಾ [illegible] ರೂ. ದಂಡ ತಪ್ಪಿದರೆ ೨ ವಾರ ಸಾದಾ ಸಜಾ

ಪಟೇಲ್ ತಿಪ್ಪೇಗೌಡ, ಯೂಸುಫ್ ಅಲಿ, ಸೈಯದ್ ಇಬ್ರಾಹಿಂ, ಎಂ. ಜಿ ಚಿಕ್ಕತಿಮ್ಮಯ್ಯ, ಲಿಂಗೇಗೌಡ, ಕೆ ಎಸ್. ನಿಂಗೇಗೌಡ, ಬಿ ಎ ರಾಮಕೃಷ್ಣಯ್ಯ, ಚನ್ನಬಸವೇಗೌಡ, ಸೈಯದ್ ಹಾಸಿಂ, ಹನುಮೇಗೌಡ, ಚಿಕ್ಕ ಭದ್ರೇಗೌಡ, ಕೆ ಆರ್ ರಾಮಯ್ಯ, ಎಂ ತಿಮ್ಮಯ್ಯ ಈ ಹದಿನಾಲ್ಕು ಮಂದಿಗೆ ತಲಾ ೫೦ ರೂ. ದಂಡ, ತಪ್ಪಿದರೆ ೧೦ ದಿನಗಳ ಸಾದಾ ಸಜಾ [illegible] ಕ್ಷಮೆಯಾಚಿಸಿದವರೆಲ್ಲರಿಗೂ, ದಂಡ ಕೊಡಲು ೨ ವಾರ ಅವಕಾಶ ಕೊಡಲಾಯಿತು

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಆಪಾದಿತರು ಅತ್ಯಂತ ಹೀನಾಯವೂ, ಗುರುತರವೂ ಆದ ಆರೋಪಣೆಗಳನ್ನು ಮಾಡಿರುವುದಾಗಿಯೂ, ಇದರಿಂದ ಜನರು [illegible] ನ್ಯಾಯಾಲಯಗಳಿಗೆ ಧಕ್ಕೆ ಬರುವುದೆಂದೂ, ಈ ಬಗ್ಗೆ ಉಗ್ರ ಶಿಕ್ಷೆಯು ಅವಶ್ಯಕವೆಂದೂ ತಿಳಿಸಿರುತ್ತಾರೆ

### ಶನಿ ಮಹಾತ್ಮೆ

ರಾಜಧಾನಿಯ ಅನೆಸಾರೋಟು ಬೀದಿ ಹೆಸ್ಸಿನ ಚೌಕದಲ್ಲಿರುವ ಕಡ್ಲಿ ಫಿಟ್ಟಿ ಶ್ರೀ ಎ ನಾಗಣ್ಣನವರ ಅಂಗಡಿ ಮುಂಭಾಗದಲ್ಲಿ ಈ ರಾತ್ರಿ ೯ ಗಂಟೆಗೆ ಶನಿ ಮಹಾತ್ಮೆ ಬಗ್ಗೆ ಶ್ರೀಗಳು ಮಾಯಿಗಗೌಡರಿಂದ ವಾಚನವೂ, ಹಿರಣ್ಣಯ್ಯನವರಿಂದ ವ್ಯಾಖ್ಯಾನವೂ ನಡೆಯುವುವು

## ಮಹಿಳಾ ಪೊಲೀಸು ಪಡೆಯ ವಿಸರ್ಜನೆ

ಸ್ತ್ರೀಯರು ಮತ್ತು ಮಕ್ಕಳ ಅಕ್ರಮ ವ್ಯಾಪಾರವನ್ನು ತಪ್ಪಿಸುವ ಸಂಬಂಧವಾಗಿ ಏರ್ಪಾಡಾಗಿದ್ದ ಮಹಿಳಾ ಪೊಲೀಸು ಪಡೆಯನ್ನು ಉತ್ತರ ಪ್ರದೇಶ ಸರ್ಕಾರದವರು ರದ್ದುಗೊಳಿಸಿರುತ್ತಾರೆ.

### ಭಾರತ ವಾಚನ

ಶ್ರೀ ರಾಮೋತ್ಸವದ ವಿಶೇಷ ಕಾರ್ಯಕ್ರಮಗಳ ಸಲುವಾಗಿ, ಸಂತೇಪೇಟೆಯ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ಶ್ರೀಗಳಾದ ಬಿ ಎಸ್ ಎಸ್. ಕೌಶಿಕ್ ಮತ್ತು ಕೆ. ವೆಂಕಟಸುಬ್ಬಯ್ಯನವರಿಂದ ಏರ್ಪಾಡಾಗಿದ್ದ ಭಾರತ ವಾಚನವು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿದ್ದಿತು. ಸದರಿ ಕಾರ್ಯಕ್ರಮವನ್ನು ಮತ್ತೆ ನಾಳೆಯಿಂದ ಪ್ರತಿ ದಿನ ಸಂಜೆ ೭-೩೦ ರಿಂದ ೮-೩೦ ರ ವರೆಗೆ ಏರ್ಪಡಿಸಲಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಎಂ ಎಲ್. ವಸಂತ ಕುಮಾರಿ, [illegible] ಸಂಗೀತ. [illegible] ಮತ್ತು [illegible] ವೆಂಕಟರಾಮಯ್ಯ [illegible] ಕನ್ನಡದಲ್ಲಿ ಭಾಷಣ [illegible] ಮತ್ತು [illegible] ಇಂಗ್ಲಿಷ್ ಭಾಷಣ.

### "ಕವಿ ಕಿರಣ"ರ ಕಲಾಕೃತಿಗೆ ಶ್ರೀಮನ್ಮಹಾರಾಜರವರ ಮೆಚ್ಚಿಗೆ

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೂ [illegible] ಕನ್ನಡ ಸಾಹಿತಿಗಳೂ ಆದ "ಕವಿ ಕಿರಣ" ಶ್ರೀ ಎಂ ವಿ. ಕೃಷ್ಣಸ್ವಾಮಿಯವರು ಶ್ರೀಮನ್ಮಹಾರಾಜರವರ ಸ್ತುತಿ ಸ್ತೃದ ಮೇಲೆ ವಿವಿಧ ಭಂಗಿಯುಳ್ಳ ಚಿತ್ರಬರೆದಿದ್ದ ಮನೋಹರ 'ಕಾವ್ಯ ಮಾಲಿಕೆ'ಯನ್ನು ಪ್ರಭುಗಳು ಅವರಿಂದ ಸ್ವೀಕರಿಸಿ, ಅವರಿಗೆ ಪ್ರಶಸ್ತಿ ಪತ್ರದ ಮೂಲಕ ತಮ್ಮ ಮೆಚ್ಚಿಗೆಯನ್ನು ತೋರಿಸಿದ್ದಾರೆ

SRI GAYATHRI TALKIES
LAST DAY
SHADOW OF THE EAGLE
From 5-4-53 For 2 Days
M.G.M's
WESTWARD — THE WOMAN
With: Robert Taylor Denis Darcel

Edited, Printed and Published by A R Nagarajan at Sadhvi Press, D. Subbiah Road, Mysore.

ಲಗ್ನದ ಜವಳಿಗಳಿಗೆ ಮೈಸೂರು ಸಿಲ್ಕು, ಧರ್ಮಾವರಂ, ಆರ್ನಿ ನವೀನ ಮಾದರಿ ಸಾರಿಗಳ
ಸೀರೆಗಳಿಗೆ ಮತ್ತು ಕಾಶ್ಮೀರ್ ಶಾಲುಗಳಿಗೆ (ಫೋನ್ 446)
★ M. V. ಭೋಜಯ್ಯ ಬಿ ಎ. ಇಂಡಿಯ ಬ್ಯಾಂಕ್ ಎದುರು, ಮೈಸೂರು

ರೋ. ನಂ. 792 WEEKLY EDITION ಇಂದಿನ ಪತ್ರಿಕೆ 6 ಪುಟ

# ಸಾಧ್ವಿ

ಸಂಪುಟ ೧೭ ] ಭಾನುವಾರ ೫-೪-೧೯೫೩ [ ಸಂಚಿಕೆ ೬೨

# ನಾಜಿಮುದ್ದೀನ್ ಮೇಲೆ ಖುರ್ರೋರ ಮೊಕದ್ದಮೆ

## ಅನಾಮಧೇಯ ಪ್ರಕರಣದಲ್ಲಿ ಸರ್ಕಾರದ ಅಫಿಡವಿಟ್

### ಆರ್ಜಿ ಜಮೀನುಗಳಿಗೂ ರಸ್ತೆಗೂ ಸಂಬಂಧವಿಲ್ಲ

ಬೆಂಗಳೂರು ೫

ಕೋಲಾರದ ಬಳಿ ಅನಧಿಕೃತವಾ
ಗಿ ನಿರ್ಮಾಣವಾಗುತ್ತಿರುವ ರಸ್ತೆ ಮತ್ತು
ಸೇತುವೆ ಬಗ್ಗೆ ಹೈಕೋರ್ಟಿನಲ್ಲಿ ಬಂ
ದಿದ್ದ ಅರ್ಜಿಯ ವಿಚಾರಣೆಯನ್ನು ನೆನ್ನೆ
ತೆಗೆದುಕೊಂಡಾಗ, ಸರ್ಕಾರದ ಪರವಾ
ಗಿ ಅಡ್ವೊಕೇಟ್ ಜನರಲ್‌ರವರು ಪ್ರ
ಮಾಣ ಪತ್ರವೊಂದನ್ನು ಸಲ್ಲಿಸಿ, ಅರ್ಜಿ
ಯಲ್ಲಿ ಮಾಡಲಾಗಿರುವ ಆಪಾದನೆಗಳು
ನಿಜವಲ್ಲವೆಂದೂ, ಅವುಗಳನ್ನು ಖರ್ಚು
ಸಮೇತ ವಜಾ ಮಾಡಬೇಕೆಂದೂ ಪ್ರಾ
ರ್ಥಿಸಿರುತ್ತಾರೆ. ಸೇರಾವರಿ ರಸ್ತೆಗೆ ಬೇ
ಕಾಗುವ ಜಮೀನುಗಳನ್ನು, ಜಮೀನು
ವಶದ ಕಾನೂನು ಪ್ರಕಾರ ನಡವಳಿಕೆ
ಕ್ರಮಗಳನ್ನು ಕೈಗೊಳ್ಳದೆ ರಸ್ತೆ ಕಾಮ
ಗಾರಿಯನ್ನು ಮುಂದುವರಿಸುವುದಿಲ್ಲವೆಂ
ದು ಸರ್ಕಾರದವರು ಕೋರ್ಟಿಗೆ ತಿಳಿಸಿ
ರುತ್ತಾರೆ. ಅರ್ಜಿಯಲ್ಲಿ ಕಾಣಬರುವ ೬
ಜಮೀನುಗಳ ಪೈಕಿ ಕೇವಲ ೩ಕ್ಕೆ ಗುಂ
ಟೆಯಷ್ಟು ಜಮೀನು ಸರ್ಕಾರಕ್ಕೆ ಬೇ
ಕಾಗಿರುವುದೆಂದೂ, ಅವುಗಳ ಮಾಲೀಕ
ರು ತಾವಾಗಿಯೇ ಸಣ್ಣಪುಟ್ಟ ಭಾಗಗ
ಳನ್ನು ಇಲಾಖೆಗೆ ಬಿಟ್ಟುಕೊಟ್ಟಿರುವ
ರೆಂದೂ ತಿಳಿಸಲಾಗಿದೆ. ಉಳಿದ ನಾಲ್ಕು
ಸರ್ವೆ ನಂಬರುಗಳಿಗೂ, ರಸ್ತೆಗೂ ಸಂ
ಬಂಧವಿಲ್ಲವೆಂದೂ ಹೇಳಲಾಗಿದೆ. ತಾ
ವಾಗಿಯೇ ಒಪ್ಪಿಸಿದ ಜಮೀನಿನ ಬಗ್ಗೆ
ಕ್ರಮವಾದ ವಶದ ನಡವಳಿಕೆ ಕೈಗೊಂ
ಡಿರುವುದಿಲ್ಲ-ಎಂದೂ ತಿಳಿಸಲಾಯಿತು.

ಅರ್ಜಿದಾರರು ಇದಕ್ಕೆ ಉತ್ತರವೀ
ಯುವಂತೆ ಸಾಧಕವಾಗಲು ವಿಚಾರಣೆ
ಯನ್ನು ಮುಂದಕ್ಕೆ ಹಾಕಲಾಯಿತು.

## ಪಾಕಿಸ್ತಾನದ ಸೈನ್ಯ ಚಟುವಟಿಕೆ

ಪಶ್ಚಿಮ ಪಂಜಾಬಿನಲ್ಲಿ ಪಾಕಿಸ್ತಾನ
ದ ಸೈನ್ಯಗಳ ಚಲನವಲನಗಳು ಬಿರು
ಸಾಗಿ ಸಾಗುತ್ತಿರುವುವೆಂದೂ, ಕೆಂಪು
ಟೇಣದ ಕಾಶ್ಮೀರದ ಮಾರ್ಗವಾಗಿ ಪಾಕಿ
ಸ್ತಾನಕ್ಕೆ ಅಕ್ರಮವಾಗಿ ಬರುವುದನ್ನು
ತಡೆಗಟ್ಟಲು ಈ ಕಾರ್ಯಾಚರಣೆ ನಡು
ಗುತ್ತಿರುವುದೆಂದೂ ಪಾಕಿಸ್ತಾನದ ರೇಡಿ
ಯೋ ತಿಳಿಸಿದೆ. ಆದರೆ ಕಾಶ್ಮೀರದಲ್ಲಿ
ಪಾಕಿಸ್ತಾನವು ಧರ್ಮ ಯುದ್ಧವನ್ನು
ಹೂಡುವ ಸಲುವಾಗಿ ಈ ಚಟುವಟಿಕೆ
ಗಳು ಸಾಗುತ್ತಿರುವುವೆಂದು ಕಾಶ್ಮೀರದಲ್ಲಿ
ಹೇಳಲಾಗುತ್ತಿದೆ.

## ಶಾಸನ ಸಭಾಧ್ಯಕ್ಷರಿಂದ ಸಂಬಳದ ಘೋಷಣಾ

ಒರಿಸ್ಸಾ ಶಾಸನ ಸಭಾಧ್ಯಕ್ಷರಾದ
ಶ್ರೀ ನಂದಕಿಶೋರ್ ದಾಸರವರು ಶಾ
ಪ ನಡೆಯುತ್ತಿರುವ ಮಾಹೆಯಾನಾ
ಸಾವಿರ ರೂ ಸಂಬಳದಲ್ಲಿ ಕೈಕಡ ರೇ
ಕಡ ೧೫ ರಷ್ಟನ್ನು ಘೋಷಣಾ ಹಾಕಿ
ಕೊಂಡಿರುವರೆಂದು ತಿಳಿದುಬಂದಿದೆ

## ನಗರದಲ್ಲಿ ೨೦ ಸೆಂಟು ಮಳೆ

ರಾಜಧಾನಿಯಲ್ಲಿ ನೆನ್ನೆ ಮಧ್ಯಾಹ್ನ
೩॥ ಗಂಟೆ ಮೇಲೆ ಸ್ವಲ್ಪ ಮಳೆಯಾಯಿ
ತು. ಹವಾಗುಣವು ಸ್ವಲ್ಪ ಹಿತವಾಗಿದೆ.
೨೦ ಸೆಂಟು ಮಳೆಯಾಗಿರುವುದಾಗಿ ರಿ
ಪೋರ್ಟ್ ಆಗಿದೆ

## ಮೈಸೂರು ಪತ್ರಿಕೆ ಮೇಲೆ ಮತ್ತೊಂದು ಮೊಕದ್ದಮೆ

ಮೈಸೂರು ೫

ರಾಜಧಾನಿಯಲ್ಲಿ ಪ್ರಕಟವಾಗುತ್ತಲಿ
ರುವ ಮೈಸೂರು ಪತ್ರಿಕೆಯ ಪ್ರಕಟಣ
ಕಾರರಾದ ಶ್ರೀ ಟಿ. ನಾರಾಯಣರವರ
ಮೇಲೆ ಆಕ್ಷೇಪಣೀಯ ಲೇಖನಗಳಿಗೆ
ಸಂಬಂಧಿಸಿದಂತೆ ಇರುವ ಪತ್ರಿಕಾ ಶಾ
ಸನದ ೪ ಮತ್ತು ೬ನೇ ನಿಬಂಧನೆಗಳ
ಪ್ರಕಾರ ಇಲ್ಲಿನ ಸೆಷನ್ಸ್ ನ್ಯಾಯಾಧೀ
ಶರ ಕೋರ್ಟಿನಲ್ಲಿ ವಿಶೇಷ ಪಬ್ಲಿಕ್ ಪ್ರಾ
ಸಿಕ್ಯೂಟರ್‌ರವರು ಎರಡನೆಯ ದೂರ
ನ್ನು ನೆನ್ನೆ ಕೊಟ್ಟರು. ಕಳೆದ ಫೆಬ್ರವರಿ
೫ನೇ ತಾ॥ ಹೂವಿನ ಹಾರ ಎಂಬ ವಿ
ಶೇಷನಾಮದಲ್ಲಿ ಪತ್ರಿಕೆಯಲ್ಲಿ ಬಂದಿ
ರುವ ಲೇಖನವು ಆಕ್ಷೇಪಣೀಯವಾದು
ದೆಂದೂ, ಮೈಸೂರಿನ ಮುಖ್ಯ ಮಂತ್ರಿ
ಯವರನ್ನು ಅಶ್ಲೀಲವಾಗಿ ನಿಂದಿ
ಸುವ ಶೈಲಿಯಿಂದ ಅದು ಕೂ
ಡಿರುವುದೆಂದೂ ತಿಳಿಸಿ, ಶ್ರೀ ಟಿ.
ನಾರಾಯಣರವರಿಂದ ೩,೦೦೦ ರೂ.ಗ
ಳ ಠೇವಣಿಯನ್ನು ಏತಕ್ಕಾಗಿ ಕೇಳಬಾ
ರದೆಂಬುದಕ್ಕೆ ಅವರ ಸಮಜಾಯಿಷಿಯ
ನ್ನು ಪಡೆಯಬೇಕೆಂದೂ ದೂರಿನಲ್ಲಿ ತಿ
ಳಿಸಲಾಗಿದೆ. ೧೫ನೇ ತಾ॥ ಒಳಗೆ ಹಾ
ಜರಿಯಾಗಿ ಜವಾಬು ಬರುವಂತೆ ಸೂಚಿ
ಸುವ ನೋಟೀಸನ್ನು ಪ್ರಕಟಣಕಾರರಿಗೆ
ಕಳುಹಲು ನ್ಯಾಯಾಧೀಶರು ಆಜ್ಞೆ ಮಾ
ಡಿರುತ್ತಾರೆ

## ಕ್ಯಾಲನೂರಿನಲ್ಲಿ ಪ್ರತಿಬಂಧಕಾಜ್ಞೆ

ಕೋಲಾರದ ಜಿಲ್ಲೆಯ ಕ್ಯಾಲನೂರು
ಹಳ್ಳಿಯಲ್ಲಿ ಮೊನ್ನೆ ನಡೆದ ಕೋಮು
ವಾರು ಗಲಭೆ ಸಂಬಂಧವಾಗಿ ಒಂದು
ತಿಂಗಳ ಕಾಲ ಸಭೆ ಮೆರವಣಿಗೆ ಮುಂ
ತಾದವುಗಳಾವುವೂ ನಡೆಯದಂತೆ ಪ್ರತಿ
ಬಂಧಕಾಜ್ಞೆಯನ್ನು ಹಾಕಲಾಗಿದೆ. ಏ
ಪ್ರಿಲ್ ೧ನೇ ತಾ॥ ಮಸೀದಿಯ ಮುಂ
ದೆ ರಥೋತ್ಸವವು ಬಂದಾಗ ಕಲ್ಲುಗಳ
ನ್ನು ಬೀರಲಾಯಿತೆಂದೂ, ಆದರೆ ಪೊ
ಲೀಸರು ಮಧ್ಯ ಪ್ರವೇಶಿಸಿದುದರಿಂದ
ಅಂದು ಗಲಭೆ ನಡೆಯಲಿಲ್ಲವೆಂದೂ
ಮೊನ್ನೆ ಬಲವಾದ ಘರ್ಷಣೆಯಾಗಿ, ಒ
ಟ್ಟು ಸಬ್ ಇನ್ಸ್‌ಪೆಕ್ಟರೂ ಸೇರಿ ಆರು
ಮಂದಿಗೆ ಗಾಯಗಳಾದುವು

## ಇಂಜನಿಯರಿಂಗ್ ಪರೀಕ್ಷೆ ತಡೆಗಾಗಿ ಕೋರ್ಟಿಗೆ ಅರ್ಜಿ

ಬೆಂಗಳೂರು ೫

ಇಲ್ಲಿನ ಇಂಜನಿಯರಿಂಗ್ ಶಾಲೆಯ
ವಿದ್ಯುಚ್ಛಕ್ತಿ ವಿಭಾಗದ ದ್ವಿತೀಯ ತರ
ಗತಿಯ ವಿದ್ಯಾರ್ಥಿ ಶ್ರೀ ಎ. ಎನ್. ಕೃ
ಷ್ಣಮೂರ್ತಿಯವರು ಹೈಕೋರ್ಟಿನಲ್ಲಿ
ಅರ್ಜಿಯೊಂದನ್ನು ಸಲ್ಲಿಸಿ, ವಿದ್ಯುಚ್ಛಕ್ತಿ
ವಿಭಾಗದ ಎರಡನೇ ತರಗತಿಯ ಪರೀ
ಕ್ಷೆಗಳು ನಡೆಯದಂತೆ ತಡೆ ಆಜ್ಞೆಯಾಗ
ಬೇಕೆಂದು ಕೋರಿರುತ್ತಾರೆ. ವಿದ್ಯಾರ್ಥಿ
ಯನ್ನು ಶಾಲೆಗೆ ಸೇರಿಸಿಕೊಂಡಾಗ
ಯಾವ ನಿಯಮಗಳಿದ್ದುವೋ ಅವುಗಳಂತೆ
ಯೇ ಪರೀಕ್ಷೆಯೂ ನಡೆಯುವಂತೆ ಆ
ಜ್ಞೆಯಾಗಬೇಕೆಂದು ಕೋರಲಾಗಿದೆ.
ಈ ಅರ್ಜಿಯು ಇತ್ಯರ್ಥವಾಗುವವರೆ
ಗೂ ಪರೀಕ್ಷೆಯ ತಾತ್ಕಾಲಿಕ ತಡೆಗಾ
ಕೋರಲಾಗಿದೆ

## ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ಡಿಸೋಜಾ

ಮೈಸೂರು ೫

ಅಖಿಲ ಭಾರತ ಬ್ಯಾಂಕಿಂಗ್ ನ್ಯಾ
ಯಾಲಯದ ಸದಸ್ಯರಾಗಿ ನೇಮಕರಾ
ದ ಪ್ರೊಫೆಸರ್ ವಿ. ಎಲ್. ಡಿಸೋಜಾರ
ವರು ನೆನ್ನೆ ಶ್ರೀ ಎಸ್. ವಿ. ರಂಗಣ್ಣನ
ವರಿಂದ ಮಹಾರಾಜಾ ಕಾಲೇಜಿನ ಪ್ರಿ
ನ್ಸಿಪಾಲರ ಅಧಿಕಾರವನ್ನು ವಹಿಸಿಕೊಂ
ಡರು

ಬೆಂಗಳೂರು ಸೆಂಟ್ರಲ್ ಕಾಲೇಜಿನ
ಪ್ರಿನ್ಸಿಪಾಲ್ ಶ್ರೀ ಎಲ್. ರಾಮರಾಯ
ರು ನಿವೃತ್ತರಾಗಿ ಅವರ ಸ್ಥಾನಕ್ಕೆ ಗಣಿ
ತಶಾಸ್ತ್ರದ ಪ್ರೊಫೆಸರ್ ಶ್ರೀ ಬಿ. ಎಸ್.
ಮಾಧವರಾಯರು ಬಂದಿರುತ್ತಾರೆ.

## ನಾಜಿಮುದ್ದೀನ್ ಮೇಲೆ ಕೋರ್ಟಿಗೆ ಖುರ್ರೋ ಅರ್ಜಿ

ಪಾಕಿಸ್ತಾನದ ಪ್ರಧಾನಿಯಾಗಿರುವ
ಖ್ವಾಜಾ ನಾಜಿಮುದ್ದೀನರವರು ಅಕ್ರಮ
ವಾಗಿ ಪಾಕಿಸ್ತಾನದ ಮುಸ್ಲಿಂ ಲೀಗ್ ಅ
ಧ್ಯಕ್ಷರಾಗಿ ಕಾಡಲ್ಪಟ್ಟಿರುವರೆಂದೂ, ಅ
ವರು ಆ ಸ್ಥಾನದಿಂದ ಆಜ್ಞೆಗಳನ್ನು ಕೊ
ಡದಂತೆ ಇಂಜಂಕ್ಷನ್ ಆಜ್ಞೆಯಾಗಬೇಕೆಂ
ದೂ ಪ್ರಾರ್ಥಿಸಿ, ಸಿಂಧಿನ ಪ್ರಾಂತ್ಯ ನ್ಯಾ
ಯಾಸ್ಥಾನದಲ್ಲಿ ಅಲ್ಲಿನ ಮಾಜಿ ಲೀಗ್
ಅಧ್ಯಕ್ಷ ಮಹಮದ್ ಖುರ್ರೋರವರು
ಮೊಕದ್ದಮೆ ಹೂಡಿರುತ್ತಾರೆ

## ರಷ್ಯದಲ್ಲಿ ೧೫ ಜನ ವೈದ್ಯ ಬಿಡುಗಡೆ

ಜನರಲ್ ಮುಂತಾದ ಹಲವು
ಪ್ರಮುಖ ನಾಯಕರುಗಳ ಮರಣಕ್ಕೆ ಕಾ
ರಣರಾದರೆಂದು ಕಳೆದ ಜನವರಿಯಲ್ಲಿ ದ
ಸ್ತಗಿರಿಯಾದ ೧೫ ಮಂದಿ ವೈದ್ಯರನ್ನು
ಬಿಡುಗಡೆ ಮಾಡಲಾಗಿದೆ. ಅವರುಗಳ
ನ್ನು ಅಕ್ರಮವಾಗಿ ಬಂಧನದಲ್ಲಿಡಲಾಗಿ
ತ್ತೆಂದು ಪ್ರಕಟಣೆಯೊಂದು ತಿಳಿಸುತ್ತ
ದೆ. ದಸ್ತಗಿರಿಗಳ ಸಂಬಂಧವಾಗಿ ವೈ
ದ್ಯರುಗಳ ಮೇಲೆ ಆಪಾದನೆ ಹೊರಿಸಿದ್ದ
ಮಹಿಳಾ ವೈದ್ಯ ಡಾ॥ ಎಲ್. ಎಫ್. ಟಿ
ಮಾಷಿಕ್ ಎಂಬುವರಿಗೆ ಕೊಡಲಾಗಿದ್ದ
ರಷ್ಯದ ಅತ್ಯುನ್ನತ ಬಹುಮಾನವಾದ
ಆರ್ಡರ್ ಆಫ್ ಲೆನಿನ್ ಪ್ರಶಸ್ತಿಯನ್ನು
ಈಗ ರದ್ದುಪಡಿಸಲಾಗಿದೆ. ಬಿಡುಗಡೆ
ಯಾದ ೧೫ ಮಂದಿಯ ಪೈಕಿ ೬ ಜನರ
ನ್ನು ಯಾವ ಕಾರಣಕ್ಕಾಗಿ ಹಿಡಿಯಲಾ
ಗಿತ್ತೆಂದು ತಿಳಿಸಲ್ಪಟ್ಟಿಲ್ಲವೆಂದೂ ಅಕ್ರ
ಮವಾದ ತನಿಖೆ ನಡೆಸಿದ ಅಧಿಕಾರಿಗಳ
ನ್ನು ಈಗ ದಸ್ತಗಿರಿ ಮಾಡಲಾಗಿದೆಯೆಂ
ದೂ ಹೇಳಲಾಗಿದೆ

## ಇಟಲಿ ಪಾರ್ಲಿಮೆಂಟಿನ ವಿಸರ್ಜನೆ

ಇಟಲಿಯ ಪಾರ್ಲಿಮೆಂಟನ್ನು ವಿ
ಸರ್ಜಿಸಿ ಹೊಸ ಪಾರ್ಲಿಮೆಂಟಿಗೆ ಚುನಾ
ವಣೆಗಳು ಜೂನ್ ೭ನೇ ತಾ॥ ನಡೆಯು
ವಂತೆ ಅಲ್ಲಿನ ಪ್ರಧಾನಿ ಡಿ ಗ್ಯಾಸ್ಪರಿ
ಯವರು ಆಜ್ಞೆ ಮಾಡಿರುತ್ತಾರೆ

## ತುರ್ಕಿಯ ಸಬ್‌ಮೆರೀನ್ ಮುಳುಗಿತು

ಡಾರ್ಡನೆಲ್ಸ್ ಜಲಸಂಧಿಯಲ್ಲಿ ಸ್ವೀ
ಡನ್ನಿನ ಹಡಗೊಂದಕ್ಕೆ ತುರ್ಕಿಯ ಸ
ಬ್‌ಮೆರೀನು ಡಿಕ್ಕಿ ಹೊಡೆದು ೮೧ ಜ
ನ ನಾವಿಕರೊಡನೆ ಮುಳುಗಿರುವುದಾಗಿ
ವರದಿಯಾಗಿದೆ

## ರುಮೇನಿಯದ ಮಾಜಿ ದೊರೆಯ ನಿಧನ

ರುಮೇನಿಯದ ಮಾಜಿ ದೊರೆ ಕೆರಾ
ಲ್‌ರವರು ನೆನ್ನೆ ಪೋರ್ಚುಗಲ್ ರಾಜ
ಧಾನಿ ಲಿಸ್ಬನ್ ನಗರದಲ್ಲಿ ಹೃದ್ರೋಗ
ದಿಂದ ಮೃತರಾದರು. ಅವರಿಗೆ ೫೯ ವ
ರ್ಷ ವಯಸ್ಸಾಗಿದ್ದಿತು

## ರಾಷ್ಟ್ರೀಯ ವಾರಾಚರಣೆಗಾಗಿ ಮನವಿ

ಮೈಸೂರು ಪ್ರದೇಶ ಕಾಂಗ್ರೆಸ್ ಸ
ಮಿತಿ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀ
ರಣ್ಣಗೌಡರು ಹೇಳಿಕೆಯೊಂದನ್ನಿತ್ತು,
ನಾಳೆಯಿಂದ ೧೩ನೇ ತಾ॥ ವರೆಗೆ ಸಂ
ಸ್ಥಾನದಲ್ಲಿ ರಾಷ್ಟ್ರೀಯ ವಾರವನ್ನು ಆ
ಚರಿಸಿ, ಸಭೆಗಳನ್ನು ನಡೆಸಿ, ಜನತೆಗೆ
ಪಂಚ ವಾರ್ಷಿಕ ಯೋಜನೆಯ ಮಹ
ತ್ವವನ್ನು ವಿವರಿಸುವಂತೆ ಸೂಚಿಸಿರು
ತ್ತಾರೆ. ರಚನಾತ್ಮಕ ಕಾರ್ಯಕ್ರಮವ
ನ್ನು ಕೈಗೊಳ್ಳಬೇಕೆಂದೂ ಅವರು
ಕೋರಿರುತ್ತಾರೆ

## ಮೈಸೂರಿನವರು ಫುಟ್‌ಬಾಲ್ ರೆಫರಿ ಸಮಿತಿ ಕಾರ್ಯದರ್ಶಿ

ಮೈಸೂರಿನ ಶ್ರೀ ಬಿ. ಶ್ರೀನಿವಾಸ
ಯ್ಯಂಗಾರ್ಯರನ್ನು ಅ॥ ಭಾ॥ ರೆಫರಿ
ಬೋರ್ಡಿನ ಕಾರ್ಯದರ್ಶಿಯಾಗಿ ಫುಟ್
ಬಾಲ್ ಅಸೋಸಿಯೇಷನ್ನಿನವರು ಆರಿ
ಸಿರುತ್ತಾರೆ.

# ವಾರ ಭವಿಷ್ಯ

[illegible] ರಿಂದ [illegible] ರ ವರೆಗೆ

ಮೇಷ— ಲಾಭದಾಯಕ ಪತ್ರ ವ್ಯವಹಾರ, ಗೃಹದಲ್ಲಿ ಸುಖ, ವಿವಾಹ ನಿಶ್ಚಯ, ಜಮೀನು ಕ್ರಯ, ವ್ಯಾಪಾರಸ್ಥರಿಗೆ ಅನುಕೂಲ, ವಾರದ ಕೊನೆಯಲ್ಲಿ ಆರೋಗ್ಯಕ್ಕೆ ಭಕ್ತ

ವೃಷಭ — ವಾರ ಪ್ರಾರಂಭ ಹಣದ ಅಡಚಣೆ ಮತ್ತು ತೊಂದರೆ, ಖಂಡಿತ ಆಗಮನ, ನೌಕರಿಯಲ್ಲಿ ತ್ರಾಸ [illegible], ಗೃಹಕೃತ್ಯ ನೆಟ್ಟಗಿರದು ವ್ಯಾಪಾರಸ್ಥರಿಗೆ ಲಾಭ, ವಾರದ ಕೊನೆಯಲ್ಲಿ ಹಣಾಭಾವ ನೀಗುವುದು

ಮಿಥುನ — ಉತ್ತಮ ಘಟನೆಗಳು, ಬಾಕಿ ವಸೂಲಿ, ಅನಿರೀಕ್ಷಿತ [illegible] ದ ಹಣದ ಆಗಮನ, ಕೋರ್ಟ್ ವ್ಯವಹಾರದಲ್ಲಿ ಜಯ, ಒಡವೆಗಳ ಖರೀದಿ ಹೆಂಡತಿ ಮಕ್ಕಳ ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಸಂಬಳ ಸ್ವಲ್ಪ [illegible], ಸ್ವಲ್ಪ ಕೆಲಸದಿಂದ ಭಾರಿ ಲಾಭ

ಕರ್ಕ — ಆದಾಯ ಕಡಿಮೆ [illegible] ಗೃಹ ಬದಲಾವಣೆ [illegible] ವ್ಯಾಪಾರಿಗಳಿಗೆ [illegible] ಪುತ್ರನಿಂದ ಶುಭವಾರ್ತೆ

[illegible] ಆದಾಯ [illegible] ವ್ಯಾಪಾರಿಗಳಿಗೆ [illegible]

ಕನ್ಯೆ — [illegible] ಪುತ್ರರ [illegible] ಕಾರ್ಯದಲ್ಲಿ [illegible]

ತುಲಾ — [illegible] ಸತ್ಯ [illegible] ನೌಕರಿಯಲ್ಲಿ [illegible] ಇಲಾಖೆಯವರಿಂದ [illegible] ವ್ಯಾಪಾರಿಗಳಿಗೆ [illegible] ಲಾಭ

ವೃಶ್ಚಿಕ — ಬಾಕಿ ವಸೂಲಿ ಸಟ್ಟಾ ವ್ಯಾಪಾರದಲ್ಲಿ ಜಯ. ಮನೆ ಒಡವೆ ಖರೀದಿ, ಪತ್ನಿ ಪುತ್ರರ ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಸುಖ, ವ್ಯಾಪಾರಸ್ಥರಿಗೆ ಪಾಲುಗಾರರಿಂದ ಭಕ್ತ

ಧನು — ಪತ್ನಿ ಪುತ್ರರ ಆರೋಗ್ಯಕ್ಕೆ ಭಕ್ತ ಪ್ರವಾಸ, ಪಿತ್ರಾರ್ಜಿತ ಸ್ವತ್ತು ಕಳೆದುಕೊಳ್ಳುವ ಸ್ಥಿತಿ [illegible] ಒಡವೆಗಳ ಕಳವು

ಮಕರ — ಹೊಸ ಪರಿಚಯದಿಂದ ಹಣ ಸಹಾಯ ನೌಕರ [illegible] ಮತ್ತು [illegible] ವ್ಯಾಪಾರದಲ್ಲಿ [illegible]

ಕುಂಭ — ವ್ಯಾಪಾರಿಗಳಿಗೆ [illegible] ವೈದ್ಯರ ಸಲಹೆ, ವ್ಯಾಪಾರ [illegible] ಪ್ರಸಂಗ ನೌಕರರ [illegible] ಗೃಹಕೃತ್ಯದಲ್ಲಿ [illegible]

ಮೀನ — [illegible] ಗೆ ಹರ್ಷ, [illegible] ಪತ್ನಿ ಪುತ್ರರ ಆರೋಗ್ಯ [illegible] ನೆಟ್ಟಗೆ, [illegible] ವ್ಯಾಪಾರಿಗಳಿಗೆ [illegible] ಗೆ ಗಾಯ, ಹೊಟ್ಟೆ ನೋವು

## ಪಶ್ಚಿಮ ಪಂಜಾಬಿನಲ್ಲಿ ಹೊಸ ಮಂತ್ರಿಮಂಡಲ

ಪಾಕಿಸ್ತಾನದ ಪಂಜಾಬಿನಲ್ಲಿ [illegible] ಮುಮ್ತಾಜ್ ದೌಲತಾನಾ ಮಂತ್ರಿಮಂಡಲ [illegible] ರಾಜೀನಾಮೆಯಿತ್ತ ನಂತರ ಮೊನ್ನೆ ಮಲ್ಲಿಕ್ ಫಿರೋಜ್ ಖಾನ್ ನೂನ್‌ರವರ ನೇತೃತ್ವದಲ್ಲಿ ಏಳು ಜನರ [illegible] ಹೊಸ ಮಂತ್ರಿಮಂಡಲವು ಅಧಿಕಾರ ಸ್ವೀಕರಿಸಿತು. ದೌಲತಾನಾ ಮಂತ್ರಿಮಂಡಲದ ಇಬ್ಬರು ಸಚಿವರೂ [illegible] ಸಂಪುಟಕ್ಕೆ ಸೇರಿರುವರು

## ಪ್ರಪಂಚದಲ್ಲಿ ಈ ವರ್ಷ ಅತ್ಯಂತ ಹೆಚ್ಚು ಭತ್ತದಬೆಳೆ

[illegible] ಪ್ರಪಂಚದಲ್ಲಿ ಭತ್ತದ [illegible] ಕೋಟಿ [illegible] ಬೆಳೆಯುವುದೆಂದು ಅಂದಾಜಾಗಿದೆ [illegible] ಮತ್ತು [illegible] ಇದಕ್ಕೆ ಕಾರಣವೆಂದು ಹೇಳಲಾಗಿದೆ

## ಕಿರುಬನಿಂದ ೬ ಜನರಿಗೆ ಗಾಯ

[illegible]

ಸತ್ಯಾಗ್ರಹ ಕೂಟ

ಅಖಿಲ ಭಾರತ [illegible]

ತಮಿಳು ಸಂಗೀತ ಸ್ಪರ್ಧೆಯಲ್ಲಿ ೭ ನೇ ಸ್ಥಾನ

[illegible] ಸಂಗೀತ ಸ್ಪರ್ಧೆಯಲ್ಲಿ [illegible] ವಿದ್ಯಾರ್ಥಿ [illegible] ಸ್ವಾಮಿಯವರು [illegible] ರೂಗಳ [illegible] ಬಹುಮಾನ [illegible]

## ಮಾರ್ಷಲ್‌ಲಾ ಉಲ್ಲಂಘಿಸಿದ ಪ್ರಿನ್ಸಿಪಾಲರ ಬಂಧನ

ಲಾಹೋರಿನಲ್ಲಿ ಜಾರಿ ಮಾಡಲಾಗಿದ್ದ ಮಾರ್ಷಲ್ ಲಾವನ್ನು ಉಲ್ಲಂಘಿಸಿದ ಅಲ್ಲಿನ ತಾಲಿಂ ಉಲ್ ಇಸ್ಲಾಂ ಕಾಲೇಜಿನ ಪ್ರಿನ್ಸಿಪಾಲರನ್ನೂ ಮತ್ತು ಇತರ ೮ ಮಂದಿಯನ್ನೂ ಪಾಕಿಸ್ತಾನ ಪಂಜಾಬ್ ಸರ್ಕಾರದವರು ಗುರುವಾರ ಬಂಧಿಸಿದರು ಸಿನಿಮಾ ಪ್ರದರ್ಶನದಲ್ಲಿ ಪಾಕಿಸ್ತಾನದ ಧ್ವಜವನ್ನು ಪ್ರದರ್ಶಿಸದೆಯೂ ಮತ್ತು, ಪ್ರದರ್ಶನವು ಮುಗಿದು ಪ್ರೇಕ್ಷಕರೆಲ್ಲರೂ ಹೊರಟು ಹೋದ ನಂತರ ಜಿನ್ನಾರವರ ಚಿತ್ರವನ್ನು ತೋರಿಸಿದ ಅಪರಾಧಕ್ಕಾಗಿಯೂ ಅಲ್ಲಿನ [illegible] ಥಿಯೇಟರಿನ ವ್ಯವಸ್ಥಾಪಕರಿಗೆ ೫೦೦ ರೂ ದಂಡ ವಿಧಿಸಿದುದಲ್ಲದೆ ಸಿನಿಮಾವನ್ನು ಮೂರು ದಿನಗಳ ಕಾಲ ಮುಚ್ಚಬೇಕೆಂದು ಆಜ್ಞೆ ಮಾಡಲಾಗಿದೆ

### ಬೆಂಕಿಯಿಂದ ೫೦ ಸಹಸ್ರ ರೂ. ಆಸ್ತಿ ನಷ್ಟ

ಕೋಲಾರ ಜಿಲ್ಲೆಯ ರಾಬರ್ಟ್‌ಸನ್ ಪೇಟೆ ಮಾರ್ಕೆಟ್ಟಿನಲ್ಲಿ ಮೊನ್ನೆ ಬೆಂಕಿಯುಂಟಾಗಿ [illegible] ಅಂಗಡಿಗಳು ಭಸ್ಮವಾದುವು [illegible] ರೂ ನಷ್ಟವಾಗಿರುವುದಾಗಿ ವರದಿಯಾಗಿದೆ

ಸಾರ್ವಜನಿಕ [illegible]

### ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿ ಸರಸ್ವತಿಪುರಂನಲ್ಲಿ ಕಟ್ಟಿಸಿರುವ 14 ಮಾದರಿ ಮನೆಗಳ ವಿಲೆ [illegible] ಮನೆಯ ಬೆಲೆಯ ನಾಲ್ಕನೇ ಒಂದು ಭಾಗ, ಅಂದರೆ 1762-8-0 ರೂಪಾಯಿ ಅಡ್ವಾನ್ಸಾಗಿ ಡಿಪಾಜಿಟ್ ಮಾಡಿ ಆಫೀಸಿನಲ್ಲಿ ದೊರೆಯುವ ನಿಬಂಧನೆ [illegible] ದ ನಮೂನೆಯಲ್ಲಿ ಅರ್ಜಿ ಹಾಕಿಕೊಳ್ಳುವ ಕಾಲಾವಧಿಯನ್ನು ತಾರೀಖು 27-4-1953ರ ವರೆಗೆ ಮುಂದುವರಿಸಲಾಗಿದೆ

(ರುಜು) ಎಸ್ ಲಿಂಗಣ್ಣ, ಅಧ್ಯಕ್ಷ

Edited, Printed and Published by A R Nagarajan at Sadhvi Press, D Subbiah Road, Mysore

## ಮೈಸೂರು ಪೇಟೆ ಧಾರಣೆ

| ಸರಕು | [illegible] | [illegible] |
| --- | --- | --- |
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಕೊಬ್ಬರಿ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | [illegible] |
| ಹಲಸಂದೆ | [illegible] | [illegible] |
| ಉದ್ದು | [illegible] | |
| ತೊಗರಿ | | |
| ರಾಗಿ [illegible] | [illegible] | [illegible] |
| ಹುಣಿಸೇಹಣ್ಣು | [illegible] | [illegible] |
| ಹುರಿಗಡಲೆ | [illegible] | [illegible] |
| ಬೆಲ್ಲ | [illegible] | |
| ಕೊಬ್ಬರಿಕಾಯಿ | | |
| [illegible] | [illegible] | [illegible] |

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ಮತ್ತು [illegible] ಪಿಟೀಲು [illegible] ವಿಚಾರ [illegible] ಭಾಷಣ [illegible]


### ಶ್ರೀ ರಮಣ ಸಂಗೀತ ವಿದ್ಯಾಲಯ

1004 [illegible] ಅಗ್ರಹಾರ (ಮಾರು ವಿಗ ಎದುರು)

ಈ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ, ಸಂಚಾಲಕ

### ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲು, [illegible] ಸರಿಸಾಮಾನ್ಯ ಮತ್ತು [illegible] ಗಳಿಗೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್ ಎಸ್ ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು

# ಪ್ರಭುದೇವಾ ಟಾಕೀಸ್

6—4—53ನೇ ಸೋಮವಾರದಿಂದ : ಪ್ರತಿದಿನ 3 ಆಟಗಳು

# ★ ಲವಕುಶ ★

(ತೆಲುಗು)

ಶಾಸ್ತ್ರ - ಶ್ರೀರಂಜನಿ ಪುಷ್ಪವಲ್ಲಿ [illegible] ಪಾತ್ರದಲ್ಲಿ ಸಹೋದರರು ಮುಂತಾದವರು

A CHAMARIA RELEASE

# ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜ ರಸ್ತೆಯಲ್ಲಿರುವ 65ನೇ ನಂಬರಿನ ಮಹಡಿ [illegible] ಮಾದರಿ ಮನೆ ನಲ್ಲಿ, ದೀಪ, ಪ್ಲಂಬಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಫೋನ್ ನಂ. 794, ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಸೋಮವಾರ ೬-೪-೧೯೫೩ [ ಸಂಚಿಕೆ ೨೦೩

# ಈಜಿಪ್ಟಿನಲ್ಲಿ ಮತ್ತೆ ಒಂದು ವರ್ಷ ಕಾಲ ಮಾರ್ಷಲ್ ಲಾ

## ಸ್ಟಾಲಿನ್ ದಿನಾಚರಣೆ

ಮೈಸೂರು ೬

ಸ್ಟಾಲಿನ್ ದಿನಾಚರಣೆಯು ಪ್ರಯುಕ್ತ ನೆನ್ನೆ ಸಂಜೆ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ಶ್ರೀ ಬಿ ಎ ಚೆಲ್ಪರಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಸೋಮಸುಂದರ ಶರ್ಮ, ಪ್ರಭಾಕರ ಶರ್ಮ, ಕೆ ಎಸ್ ನಾರಾಯಣಸ್ವಾಮಿ, ಕುಂಜು ವರ್ಗೀಸ್ ಮತ್ತು ಪಿ ಎಸ್ ರಾಮಚಂದ್ರಗಳು ಮಾತನಾಡಿ, ಸ್ಟಾಲಿನ್ನರ ಜೀವನ, ತತ್ವಗಳು ಮತ್ತು ಆದರ್ಶಗಳ ಬಗ್ಗೆ ಭಾಷಣ ಮಾಡಿದರು

### ಅನ್ನ ಸತ್ಯಾಗ್ರಹ

೧೩ ನೇ ತಂಡದ ಸತ್ಯಾಗ್ರಹಿಗಳಾದ ಶ್ರೀ ಬಿ ಚಾಂದ್ ಅಹಮದ್ ಮತ್ತು ಇವರ ಮಗ ಅಬ್ದುಲ್ ಬಾಷೀದ್‌ರವರ ಮೂರು ದಿನಗಳ ಉಪವಾಸ ವ್ರತವು ನಾಳೆ ಬೆಳಗ್ಗೆ ೬ ಗಂಟೆಗೆ ಮುಕ್ತಾಯವಾಗಿ, ಇವರ ಸ್ಥಳದಲ್ಲಿ ಕಾವೇರಿ ಸ್ಟ್ಯಾಲಿ ಪೇಪರ್ ಮಿಲ್ಲಿನ ಪ್ರಮುಖ ಕಾರ್ಮಿಕರಾದ ಶ್ರೀ ಬಾಬೂರಾವ್ ಮತ್ತು ಶ್ರೀ ಗುಂಡೂರಾವ್‌ರವರು ೭೨ ಗಂಟೆಗಳ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸುವರು. ಇವರು ಅನ್ನ ಸತ್ಯಾಗ್ರಹದ ೧೪ ನೇ ತಂಡದವರಾಗಿರುತ್ತಾರೆ

### ಹರಿಕಥೆ

ಮೈಸೂರು ವಾಣಿ ಮೊಹಲ್ಲಾ ಉಪ್ಪಿನ ಕೇರಿ ಶ್ರೀ ಜಾನಕೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಘಂಟೆಗೆ ಭಜನಾಮಣಿ ಶ್ರೀ ವೆಂಕಟೇಶ್ ದಾಸರವರಿಂದ ಭಕ್ತ ಸಿರಿಯಾಳ ಎಂಬ ಹರಿಕಥೆಯೂ, ೮ನೇ ತಾ|| ಬುಧವಾರ ಹೇಮರೆಡ್ಡಿ ಮಲ್ಲಮ್ಮ ಮತ್ತು ೧೧ನೇ ತಾ|| ಶನಿವಾರ ಸತಿ ಅನುಸೂಯಾ ಎಂಬ ಹರಿಕಥೆಗಳೂ ನಡೆಯುವುವು.

### ಜಿಲ್ಲಾ ಸಹಕಾರ ಸಂಘದ ವಾರ್ಷಿಕ ಸಭೆ

ಮೈಸೂರು ಜಿಲ್ಲಾ ಸಹಕಾರ ಸಂಘದ ೪೯-೫೦, ೫೦-೫೧, ೫೧-೫೨ನೇ ವರ್ಷಗಳ ಜನರಲ್ ಬಾಡಿ ಸಭೆಯು ನೆನ್ನೆ ಸಂಸ್ಥಾನದ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್, ಶ್ರೀ ಕೆ ಆರ್ ಮಹದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಸ್ ರಂಗರಾಮಯ್ಯನವರು ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ, ವ್ಯವಸಾಯದ ಬೆಳೆಯ ಮಾರಾಟಕ್ಕೆ ಹೆಚ್ಚು ಗಮನಕೊಡಬೇಕೆಂದು ತಿಳಿಸಿದರು. ಶ್ರೀ ಸ್ ಕೆ ಕುಮಾರಸ್ವಾಮಿಯವರು ವಂದನಾರ್ಪಣೆ ಮಾಡಿದರು. ಹೊಸ ಅಧಿಕಾರ ವರ್ಗದ ಚುನಾವಣೆಯು ಅನಂತರ ನಡೆಯಿತು

### ಯೂರೋಪಿನಲ್ಲಿ ರಾಧಾಕೃಷ್ಣನ್ ಪ್ರವಾಸ

ಹಾಲೆಂಡ್, ಬೆಲ್ಜಿಯಂ, ಆಸ್ಟ್ರಿಯಾ ಮತ್ತು ಗ್ರೇಟ್ ಬ್ರಿಟನ್ ವಿಯನ್ನಾ ಮುಂತಾದ ಯೂರೋಪಿನ ರಾಷ್ಟ್ರಗಳಲ್ಲಿ ಭಾರತದ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು, ಪ್ರಧಾನಿ ನೆಹರೂರವರ ಪ್ರಾರ್ಥನೆಯನ್ನು ಮನ್ನಿಸಿ, ಸದ್ಯದಲ್ಲೇ ಪ್ರವಾಸ ಕೈಗೊಳ್ಳಲಿರುವರು. ಅವರು ಪ್ಯಾರಿಸ್ ನಗರಕ್ಕೆ ಬರುವ ತಿಂಗಳು ೧೩ ನೇ ತಾ|| ಹೋಗುವರು

## ಈಜಿಪ್ಟಿನಲ್ಲಿ ಇನ್ನೂ ಒಂದು ವರ್ಷ ಮಾರ್ಷಲ್ ಲಾ

ಈಜಿಪ್ಟಿನ ಮಿಲಿಟರಿ ಗೌರ್ನರ್ ಅಧಿಕಾರವನ್ನು ಉಪಯೋಗಿಸಿ, ಅಲ್ಲಿನ ಪ್ರಧಾನಿ ಮಹಮದ್ ನಗೀಬ್‌ರವರು ಆ ದೇಶದಲ್ಲಿ ಮೇ ೧ ರಿಂದ ಇನ್ನು ೧೨ ತಿಂಗಳ ಕಾಲ ಮಾರ್ಷಲ್ ಲಾವು ಮುಂದುವರಿಯುವಂತೆ ಆಜ್ಞೆ ಮಾಡಿರುತ್ತಾರೆ. ೧೯೫೨ರ ಜನವರಿ ೨೬ ರಿಂದಲೂ ಅಲ್ಲಿ ಮಾರ್ಷಲ್ ಲಾ ಕಾನೂನು ಇದ್ದು ಇದೆ. ಫರೂಕರು ಸಿಂಹಾಸನ ತ್ಯಾಗ ಮಾಡಿದ ನಂತರವೂ ಸಹ ಈ ಆಜ್ಞೆಯನ್ನು ಮುಂದುವರಿಸಿಕೊಂಡು ಬರಲಾಗಿದ್ದಿತು.

## ಕೊರಿಯಾ ಸಂಧಾನ ಇಂದಿನಿಂದ ಪುನರಾರಂಭ

ಕೊರಿಯಾ ಯುದ್ಧದಲ್ಲಿ ಗಾಯಗೊಂಡ ಮತ್ತು ಖಾಯಿಲೆಯಾಗಿರುವ ಖೈದಿಗಳ ವಿನಿಮಯದ ಸಂಬಂಧವಾಗಿ ಪಾನ್ ಮುನ್ ಜಾನ್ ಎಂಬಲ್ಲಿ ಕಮ್ಯೂನಿಸ್ಟರಿಗೂ, ವಿಶ್ವ ಸಂಸ್ಥೆಯ ಅಧಿಕಾರಿಗಳಿಗೂ ಇಂದು ಪುನಃ ಸಂಧಾನವು ಆರಂಭವಾಗುವುದು. ಕೊರಿಯಾ ಶಾಂತಿ ಸ್ಥಾಪನೆಗೆ ಅಡ್ಡಿಯಾಗಿರುವ, ಇತರ ಯುದ್ಧ ಖೈದಿಗಳೆಲ್ಲರ ಭವಿಷ್ಯವೇನೆಂಬುದರ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುವಂತೆ ವಿಶ್ವ ಸಂಸ್ಥೆ ಸೈನ್ಯಾಧಿಕಾರಿಗಳು ಕಮ್ಯೂನಿಸ್ಟರನ್ನು ಕೋರಿದ್ದಾರೆ. ಶಾಂತಿ ಮಾತುಕತೆ ನಡೆಯುವ ಪೂರ್ವಭಾವಿಯಾಗಿ ಯುದ್ಧ ಗಾಯಗೊಂಡವರು ಮತ್ತು ಖಾಯಿಲೆಯಾದವರ ಭವಿಷ್ಯವು ನಿಶ್ಚಯವಾಗಬೇಕೆಂದು ವಿಶ್ವ ಸಂಸ್ಥೆಯು ಕಮ್ಯೂನಿಸ್ಟರಿಗೆ ಕಡೆಯ ಎಚ್ಚರಿಕೆ ಸೂಚನೆ ಕೊಟ್ಟಿರುವಂತೆ ಭಾವಿಸಲಾಗಿದೆ

## ರಾಜರೊಬ್ಬರಿಂದ ೧ ಲಕ್ಷ ಎಕರೆ ಜಮೀನು ದಾನ

ಭೂದಾನ ಯಜ್ಞಕ್ಕಾಗಿ ಬಿಹಾರಿನ ಹಜಾರಿಬಾಗ್ ಜಿಲ್ಲೆಯಲ್ಲಿ ಇದುವರೆಗೆ ೩೬,೫೦೦೦ ಎಕರೆ ಜಮೀನು ದೊರೆತಿದೆ. ಆ ಜಿಲ್ಲೆಯ ಧನವಾರ್ ರಾಜರು ೧ ಲಕ್ಷದ ೧ ಎಕರೆ ಜಮೀನನ್ನು ಒಪ್ಪಿಸಿರುತ್ತಾರೆ. ಒಬ್ಬನೇ ಮನುಷ್ಯನಿಂದ ಇಷ್ಟೊಂದು ಭಾರಿ ಪ್ರಮಾಣದ ಭೂದಾನ ಎಂದೂ ಆಗಿರಲಿಲ್ಲ

## ಬಳ್ಳಾರಿ ಭವಿಷ್ಯದ ಬಗ್ಗೆ ನೆಹರೂ ಘೋಷಣೆ

ಶಾಸನ ಸಭೆಯಲ್ಲಿ ನಾಳೆ ಚರ್ಚೆ

ಸ್ವಂ ವ ವರದಿ] ಬೆಂಗಳೂರು ೬

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಗೃಹ ಮಂತ್ರಿ ಶ್ರೀ ಎಚ್ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಸಂಸ್ಥಾನದಲ್ಲಿ ಆಹಾರ ಸ್ಥಿತಿಯು ಹೆಚ್ಚು ದೂರ ಸಿಮೆಂಟ್ ರಸ್ತೆಯನ್ನು ತಾಳಲಾಗಿರುವುದೆಂದು ತಿಳಿಸಿದರು.

ಹಿಂದುಳಿದ ವರ್ಗದವರು ವಿದ್ಯೆ ಕಲ್ಪಿಸಿಕೊಳ್ಳಲು ಅವರಿಗೆ ಈ ವರೆಗೆ ೯,೧೩,೬೫೦ ರೂ ಕೊಡಲಾಗಿದೆ ಎಂದೂ, ಸಂಸ್ಥಾನದಲ್ಲಿರುವ ೧೯೭ ವಿದ್ಯಾರ್ಥಿನಿಲಯಗಳಿಗೆ ಸರ್ಕಾರವು ಧನ ಸಹಾಯವನ್ನೊದಗಿಸುತ್ತಿರವುದೆಂದೂ ತಿಳಿಸಲಾಯಿತು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು, ಬಳ್ಳಾರಿ ಜಿಲ್ಲೆಯ ಬಗ್ಗೆ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಮಾಡಿದ ಘೋಷಣೆಯ ಪ್ರತಿಗಳನ್ನು ಸಭೆಯಲ್ಲಿ ಹಂಚಿದರು. ನಾಳೆ ಅದರ ಬಗ್ಗೆ ಚರ್ಚೆ ನಡೆಯಲಿದೆ. ಸಂಸ್ಥಾನದ ಆಹಾರ ಪರಿಸ್ಥಿತಿ ಬಗ್ಗೆಯೂ ಒಂದು ದಿನ ಚರ್ಚೆ ನಡೆಯಲಿದೆ

## ರೈಲು ತಡೆಯದಂತೆ ನಿಜಲಿಂಗಪ್ಪನವರ ಮನವಿ

ಬಳ್ಳಾರಿ ಜಿಲ್ಲೆಯ ಭವಿಷ್ಯದ ಸಂಬಂಧವಾಗಿ ಪ್ರಧಾನಿ ನೆಹರೂರವರು ಹೊರಡಿಸಿದ ಘೋಷಣೆಯನ್ನು ಪ್ರತಿಭಟಿಸಲು ಕರ್ನಾಟಕದ ಹಲವು ಕಡೆಗಳಲ್ಲಿ ರೈಲು ನಿಲ್ಲಿಸುವುದು ಮುಂತಾದ ಅಕ್ರಮ ಕಾರ್ಯಗಳನ್ನು ಕಂಡು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ವಿಷಾದವನ್ನು ಸೂಚಿಸಿ, ಶಮಾಜ ವಿರುದ್ಧವಾದ ಕಾರ್ಯಕ್ರಮ ಕೈಗೊಳ್ಳದಂತೆ ಪ್ರಾರ್ಥಿಸಿರುತ್ತಾರೆ

## ಸುಳ್ಳು ಕಂಡುಹಿಡಿಯುವ ಯಂತ್ರ ವಿಫಲ

ಸುಳ್ಳು ಹೇಳುವುದನ್ನು ಕಂಡುಹಿಡಿಯುವ ಬಗ್ಗೆ ತಯಾರಿಸಲ್ಪಟ್ಟ ಯಂತ್ರವು ಕೆಲಸವನ್ನು ಮಾಡುವುದರಲ್ಲಿ ವಿಫಲವಾಯಿತೆಂದು ಅನೇಕರು ವಿಜ್ಞಾನಿಗಳು ಹೇಳುತ್ತಾರೆ. ಈ ಬಗ್ಗೆ ಪರೀಕ್ಷೆ ಕ್ರಮಗಳನ್ನು ನಿಲ್ಲಿಸಲಾಗುವುದು

## ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಕರ್ತವ್ಯ

ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಸಮ್ಮೇಳನದಲ್ಲಿ ಭಾಷಣ

ಬೆಂಗಳೂರು ೬

ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಮುಖ್ಯ ಮತ್ತು ಕಾರ್ಯದರ್ಶಿ ನಿರ್ವಹಿಸುವ ಅಧಿಕಾರಿಗಳ ಸಮ್ಮೇಳನದ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಎ ಜಿ ರಾಮಚಂದ್ರಯ್ಯನವರು ಭಾಷಣ ಮಾಡಿ, ಪಂಚ ವಾರ್ಷಿಕ ಯೋಜನೆಯಲ್ಲಿ ಗ್ರಾಮಾಂತರಗಳಲ್ಲಿರುವ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಸೂಕ್ತ ಸ್ಥಾನವಿರುವುದೆಂದೂ, ಸರ್ಕಾರ ಪೌರ ಸಭೆಗಳ ಅಭಿವೃದ್ಧಿಗೆ ಹೆಚ್ಚು ಮಹತ್ವವಿರುವುದೆಂದೂ ತಿಳಿಸಿದರು. ಗ್ರಾಮ ಪಂಚಾಯಿತಿ, ಪೌರ ಸಭೆ ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಸಮಾನ ಪ್ರತಿನಿಧಿತ್ವವಿರಬೇಕೆಂದೂ, ಎಲ್ಲ ಸಂಸ್ಥೆಗಳೂ ಸಾಮುದಾಯಿಕ ಹಿತಕ್ಕಾಗಿ ದುಡಿಯಬೇಕೆಂದೂ ಅವರು ತಿಳಿಸಿದರು

ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿ ಕೆಡುವುದು ಅನಿವಾರ್ಯವೆಂದು ಅವರು ಎಚ್ಚರಿಸಿ, ಇದು ಸಿಬ್ಬಂದಿ ವೇತನಕ್ಕೆ ಸೀಮಿತವಾಗುವುದೆಂದು ತಿಳಿಸಿದರು. ಸ್ಥಳೀಯ ಸಂಸ್ಥೆಗಳು ತಮ್ಮ ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸಲು 'ಆಭದಾಯಕವಾದ ಹೊಸ ಮಾರ್ಗ'ಗಳನ್ನು ಕಂಡುಹಿಡಿಯುವಂತೆಯೂ, ಸ್ಥಳೀಯ ಸಂಸ್ಥೆಗಳಲ್ಲಿ ತೆರಿಗೆಯನ್ನು ಅಭಿವೃದ್ಧಿಗೊಳಿಸಲು ಇನ್ನೂ ಅವಕಾಶವಿರುವುದೆಂದೂ ಅವರು ಸೂಚಿಸಿದರು.

## ಒರಿಸ್ಸಾದಲ್ಲಿ ಅಧಿಕ ಭತ್ತದ ಬೆಳೆ

ಒರಿಸ್ಸಾ ಪ್ರಾಂತದಲ್ಲಿ ಈ ವರ್ಷ ಅಧಿಕ ಭತ್ತದ ಬೆಳೆಯಾಗಿರುತ್ತದೆ. ಇದುವರೆಗೆ ೩ ಲಕ್ಷ ಟನ್ ಭತ್ತವು ವಸೂಲಾಗಿದೆ. ಇನ್ನೂ ಒಂದು ಲಕ್ಷ ಟನ್ ಬರಲಿದೆ. ಇದರಿಂದ ಇತರ ಕೊರತಾ ಪ್ರಾಂತಗಳಿಗೆ ಹೆಚ್ಚು ಧಾನ್ಯ ಒದಗಿಸಲು ಅನುಕೂಲವಾಗಿರುತ್ತದೆ. ಮೈಸೂರು ಸಂಸ್ಥಾನಕ್ಕೆ ಬೇಕಾಗುವ ಧಾನ್ಯವನ್ನು ಆ ಸಂಸ್ಥಾನವೊಂದರಿಂದಲೇ ಒದಗಿಸಲು ಕೇಂದ್ರ ಉಪ ಆಹಾರ ಮಂತ್ರಿ ಎಂ. ವಿ. ಕೃಷ್ಣಪ್ಪನವರು ಪ್ರಯತ್ನ ಪಡುತ್ತಿರುವರು

### ರಾಜಾಜಿಯವರೊಡನೆ ಮೈಸೂರು ಅಧಿಕಾರಿಗಳ ಮಾತುಕತೆ

ಬಳ್ಳಾರಿಯ ೭ ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸುವ ಸಂಬಂಧವಾಗಿ ಮೈಸೂರಿನ ವಿಶೇಷಾಧಿಕಾರಿಗಳಾದ ಶ್ರೀ ಕೆ ಶೇಷಗಿರಿ ರಾಯರು ನೆನ್ನೆ ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರನ್ನು ಭೇಟಿ ಮಾಡಿ, ಅನಂತರ ಅಲ್ಲಿನ ಅಕೌಂಟ್ ಕಛೇರಿಗೆ ತೆರಳಿ ಹಣಕಾಸಿನ ಕಾರ್ಯದರ್ಶಿಯವರೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ. ಆ ತಾಲ್ಲೂಕುಗಳ ಹಣಕಾಸಿನ ಸ್ಥಿತಿ ಬಗ್ಗೆ ಅವರು ವಿವರಗಳನ್ನು ತಿಳಿಯಲಿರುವರು. ಇನ್ನೂ ಹಲವು ದಿನಗಳ ಕಾಲ ಅವರು ಮದ್ರಾಸಿನಲ್ಲಿರುವರು

○ ಬಿಹಾರಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಳೆದ ವಾರ ಉಂಟಾದ ಬೆಂಕಿ ಪ್ರಕರಣಗಳಿಂದ ಒಟ್ಟು ೧,೫೦೦ ಮನೆಗಳು ಭಸ್ಮವಾಗಿ, ೧೦ ಮಂದಿ ಸತ್ತರು.

## ಶೃಂಗೇರಿ ಸಮಾರಂಭಗಳ ಪ್ರಾರಂಭ

ಸ್ವಂ ಸಂ] ಶೃಂಗೇರಿ ೪

ಇಲ್ಲಿನ ತುಂಗಾತೀರದ ಬಲ ದಡದಲ್ಲಿರುವ ಶ್ರೀ ನೃಸಿಂಹ ವನದಲ್ಲಿ ನಿರ್ಮಿಸಲಾಗಿರುವ ಭವ್ಯವಾದ ಪರ್ಣಶಾಲೆಗಳಲ್ಲಿ ಕರ್ಮನಿಷ್ಠರಾದ ೩೦೦ ಮಂದಿ ಬ್ರಾಹ್ಮಣೋತ್ತಮರಿಂದ ನೆನ್ನೆ ದಿನ ಶ್ರೀ ಅತಿರುದ್ರ ಸ್ವಾಹಾಕಾರ ಮತ್ತು ಶ್ರೀ ಸಹಸ್ರ ಚಂಡಿಕಾ ಯಾಗಗಳೂ, ಶ್ರೀ ಗಣಪತಿ ಮತ್ತು ನವಗ್ರಹ ಹೋಮಗಳೂ ಕ್ರಮ ಪ್ರಕಾರವಾಗಿಯೂ, ಶಾಸ್ತ್ರೋಕ್ತವಾಗಿಯೂ ಆರಂಭವಾಗಿ ನಡೆಯುತ್ತಿವೆ ಶ್ರೀ ಶ್ರೀಧರ ಸ್ವಾಮಿಗಳವರೂ ಸಧ್ಯದಲ್ಲೇ ಇಲ್ಲಿಗೆ ಆಗಮಿಸಿ ಸಮಾರಂಭಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಸಂಸ್ಥಾನದ ಹಲವು ಸಚಿವರೂ, ಹೈಕೋರ್ಟ್ ನ್ಯಾಯಾಧೀಶರುಗಳೂ ಮತ್ತು ಅನೇಕ ಉನ್ನತಾಧಿಕಾರಿಗಳೂ ಬರುವರೆಂದು ತಿಳಿದುಬಂದಿದೆ

ಪ್ರತಿ ದಿನ ಸಂಜೆ ವಿದ್ವಾಂಸರುಗಳಿಂದ ಉಪನ್ಯಾಸವೂ, ರಾತ್ರಿ ಶಾರದಾ ಅಮ್ಮನವರ ದಿವ್ಯಾಲಂಕಾರಪೂಜಾ ಉತ್ಸವಗಳೂ ನಡೆಯುತ್ತಿವೆ. ಎಲ್ಲಾ ಮತಸ್ಥರಿಗೂ ಸಮಿತಿಯವರು ಊಟ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸುತ್ತಾರೆ. ಚಿಕ್ಕಮಗಳೂರಿನ ನೂತನ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಶಂಕರರಾಯರು ನೆನ್ನೆ ಇಲ್ಲಿಗೆ ಆಗಮಿಸಿ ಎಲ್ಲ ವ್ಯವಸ್ಥೆಗಳನ್ನೂ ಪರಿಶೀಲಿಸಿದರು. ೩೦೦ ಕ್ಕೂ ಮೇಲ್ಪಟ್ಟು ಸ್ವಯಂಸೇವಕರು ಸೇವೆಯಲ್ಲಿ ನಿರತರಾಗಿರುವರು

ಮೈಸೂರು ಅಭಿನವ ಶಂಕರಾಲಯದ ವೇ|| ಬ್ರ|| ಶ್ರೀ|| ಪಾಲಘಾಟ್ ನಾರಾಯಣ ಶಾಸ್ತ್ರಿಗಳವರು "ಮಾನವ ಜನ್ಮ" ಎಂಬ ವಿಷಯವಾಗಿ ಉಪನ್ಯಾಸ ಮಾಡಿ, ಬ್ರಹ್ಮ ಸೃಷ್ಟಿಯಲ್ಲಿ ಮನುಷ್ಯ ಶರೀರವು ಎಷ್ಟು ಅಮೂಲ್ಯವಾದುದು ಎಂಬುದನ್ನೂ, ಜೀವನು ಪರಮಾತ್ಮನನ್ನು ಸೇರಲು ನರಜನ್ಮದಲ್ಲಿ ಹೇಗೆ ಅವಕಾಶವಿರುವುದೆಂಬುದನ್ನೂ ವಿವರಿಸಿ, ಇಂತಹ ಅಪೂರ್ವ ಜನ್ಮವನ್ನು ಪಡೆದವರು ಸಾರ್ಥಕಪಡಿಸಿಕೊಂಡು ಪರಮ ಪುರುಷಾರ್ಥವನ್ನು ಗಳಿಸಬೇಕೆಂದು ತಿಳಿಸಿದರು

## ಭಾರತದ ಸಂಸ್ಕೃತಿ ೩|| ಲಕ್ಷ ವರ್ಷಗಳದು

ನರ್ಮದಾ ತೀರದಲ್ಲಿ ಒಂದು ಕಡೆ ಭೂಮಿಯನ್ನು ಅಗೆಯುತ್ತಿದ್ದಾಗ ನಾನಾ ಶಿಲ್ಪದ ಕುರುಹುಗಳು ದೊರೆತು ಭಾರತದ ಸಂಸ್ಕೃತಿಯು ೩|| ಲಕ್ಷ ವರ್ಷದ್ದೆಂದು ಸೂಚಿಸುವ ವಸ್ತುಗಳು ದೊರೆತಿರುವುದು ವರದಿಯಾಗಿದೆ

## ಬರ್ಮಾದಲ್ಲಿರುವ ಚೀಣಾ ಸೈನಿಕರಿಗೆ ಕ್ಷಮೆಯೇ?

ಬರ್ಮಾದಲ್ಲಿರುವ ರಾಷ್ಟ್ರೀಯ ಚೀಣಾ ಸೈನಿಕರು ಶರಣು ಬಂದರೆ ಅವರಿಗೆ ಕ್ಷಮೆ ತೋರುವುದಾಗಿ ಕೆಂಪು ಚೀಣಾ ಸರ್ಕಾರವು ತಿಳಿಸಿ, ಈ ಬಗ್ಗೆ ಕರಪತ್ರಗಳನ್ನು ಮುದ್ರಿಸಿ ಹಂಚುತ್ತಾರೆ. ಯಾವ ಕಾರಣಕ್ಕೂ ಇಲ್ಲಿನ ಸೈನಿಕರುಗಳಿಗೆ ಕ್ಷಮೆ ಕೊಡಲಾಗುವುದೆಂದೂ, ಬಹುಮಾನಗಳನ್ನೀಯಲಾಗುವುದೆಂದೂ ತಿಳಿಸಲಾಗಿದೆ

## ಜಮ್ಮುಬಳಿ ಭೂಮಿಯೊಳಗೆ ಗುಡುಗಿನ ಶಬ್ದ

ಜಮ್ಮುವಿಗೆ ೧೩೦ ಮೈಲಿ ದೂರದಲ್ಲಿರುವ ಭದ್ರವಾಹ್ ಕಣಿವೆಯಲ್ಲಿ ಕಳೆದ ಒಂದು ವಾರದಿಂದ ನಿತ್ಯವೂ ಬೆಳಗ್ಗೆ ಹೊತ್ತು ಭೂಮಿಯೊಳಗೆ ಗುಡುಗಿನ ಶಬ್ದವು ಕೇಳಿಬರುತ್ತಿರುವುದಾಗಿ ತಿಳಿದುಬಂದಿದೆ. ಹಿಮಾಲಯದ ಒಳ ಭಾಗದಲ್ಲಿ ಯಾವುದೋ ಜ್ವಾಲಾಮುಖಿಯು ಏಳುತ್ತಿರುವುದೆಂದೂ ಆದರಿಂದ ಈ ಶಬ್ದವು ಆಗುತ್ತಿರಬೇಕೆಂದೂ ಊಹಿಸಲಾಗಿದೆ

## ಪಶ್ಚಿಮ ಪಂಜಾಬಿನ ಮಾಜಿ ಮುಖ್ಯ ಮಂತ್ರಿ ಉಚ್ಚಾಟನೆ

ಪಶ್ಚಿಮ ಪಂಜಾಬಿನ ಮುಖ್ಯ ಮಂತ್ರಿಯಾಗಿದ್ದು ಇತ್ತೀಚೆಗೆ ರಾಜಿನಾಮೆ ಕೊಟ್ಟ ಮಿಯಾನ್ ಮಮ್ದೂಟ್ ರವರ ಕಾಲತಾಸಾರವನ್ನು ಆ ಪ್ರಾಂತದಿಂದ ಹೊರಹೊಡಿಸಲು ಪಾಕಿಸ್ತಾನ ಮಂತ್ರಿ ಮಂಡಲವು ಆಲೋಚಿಸುತ್ತಿರುವುದೆಂದು ಹೇಳಲಾಗಿದೆ

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

## ಶ್ರೀ ರಮಣಿ ಸಂಗೀತ ವಿದ್ಯಾಲಯ

[illegible] ) ಚಾಮರಾಜ ಅಗ್ರಹಾರ (ಹೊಸ ಬಸದಿ ಎದುರು)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಕಲಿಸಿ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ,

ಸಂಚಾಲಕ

## ಕಂದಾಯ ಏರಿಸಿರುವುದಕ್ಕೆ ಪ್ರತಿಭಟನೆ

ಮುನಿಸಿಪಲ್ ಕೌನ್ಸಿಲರುಗಳೇ ಮತ್ತು ಅಧ್ಯಕ್ಷರವರೇ ಈ ಏರಿಕೆಯು ಸರಿಯಾಗಿ ಕಂಡಿತೆ?

ರಾಜಧಾನಿಯ ಪೌರ ಸಭೆಯವರು ಕಂದಾಯವನ್ನು ಏರಿಸಿರುವುದನ್ನು ಪ್ರತಿಭಟಿಸಿ ಶ್ರೀ ನಗರದ ರಾಮಚಂದ್ರ ರಾಯರು ಪ್ರಕಟಣೆ ಹೊರಡಿಸಿ ಕೆಳಗೆ ಕಂಡಂತೆ ತಿಳಿಸಿರುತ್ತಾರೆ.—

ಮೈಸೂರು ಪೌರಸಭೆಯು ಕಂದಾಯ ಏರಿಸುತ್ತಿರುವ ರೀತಿಯು ನ್ಯಾಯಬಾಹಿರವಾಗಿದೆ. ಜನ ಸಾಮಾನ್ಯರ ಶಕ್ತಿಯನ್ನು ಮೀರುವಂಥಾದ್ದಾಗಿದೆ ಬಲಾತ್ಕಾರದ ಪರಮಾವಧಿಯಾಗಿದೆ ಪ್ರತಿಯೊಂದಕ್ಕೂ ಮಿತಿಯುಂಟು. ಮಿತಿಮೀರಿದರೆ ತಿರಸ್ಕಾರವು ಪ್ರಾಪ್ತಿಯಾಗುತ್ತದೆ. ಕೌನ್ಸಿಲರುಗಳೇ 'ನೀವು ಸರಳತೆ, ಸತ್ಯಸಂಧತೆ, ಸೇವಾತತ್ಪರತೆಯನ್ನು (ಮಹಾತ್ಮಾ ಗಾಂಧಿಯವರ ಪರಮ ಪವಿತ್ರವಾದ ಈ ಮೂರು ಮಾರ್ಗಗಳನ್ನು) ನಿರ್ಮೂಲ ಮಾಡಿದ್ದೀರಿ. ಅದಕ್ಕೆ ಪ್ರತಿಯಾಗಿ ದುಂದುಗಾರಿಕೆ, ದರ್ಪ, ಸ್ವೇಚ್ಛಾಚಾರಕ್ಕೆ ಕೈ ಹಾಕಿದ್ದೀರಿ ಪ್ರಜೆಗಳಿಗೆ ಸವಾಲು ಹಾಕುತ್ತಿದ್ದೀರಿ ಇದು ಸರಿಯಲ್ಲ

ನೀವು ನಿಮ್ಮ ವೊಹಲ್ಲಾಗಳಲ್ಲಿ ವಾಸಿಸುವ ಪ್ರಜೆಗಳ ಸಂಪಾದನಾ ಶಕ್ತಿಯನ್ನು ತಿಳಿದುಕೊಂಡಿದ್ದೀರಾ? ಲೇಬರ್ ಪೇಟೆಗಳು – ಇನ್ನಿತರ ಮನೆಗಳನ್ನು ಉಳಿಸಿಕೊಂಡು ಜೀವನ ಮಾಡುವುದೇ ಅಸಾಧ್ಯವಾಗಿರುವಾಗ ಇದನ್ನು ತಿಳಿದುಕೊಳ್ಳುವ ಯೋಗ್ಯತೆಯೇ ಇಲ್ಲದೆ ಹೂರಕ್ಕೆ ಹನ್ನೆರಡೂವರೆಯಷ್ಟು ಮನೆ ಕಂದಾಯವನ್ನೂ, ನೀರಿಗೆ ಐದರಷ್ಟು ನೀರಿನ ಕಂದಾಯವನ್ನು ಹಾಕುವ ಮತ್ತು ಬಾಡಿಗೆ ಅಂದಾಜು ಮಾಡುವ ರೀತಿಯು ನಿಮ್ಮ ಬೇಜವಾಬ್ದಾರಿಯನ್ನು ವ್ಯಕ್ತಪಡಿಸುತ್ತದೆ ಕಂದಾಯ ಏರಿಸಿರುವುದನ್ನು ರದ್ದು ಮಾಡಿರಿ! ಇಲ್ಲವೇ ಪ್ರಜೆಗ

## ನಾಯಿ ಕೆಮ್ಮಿಗೆ ಔಷಧ

(WHOOPING COUGH REMEDY)

ಗೂರ್ಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಳಾಯಕ್ಕೆ ಖಾತರಿಯಾದ ಔಷಧ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್. ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು

Edited, Printed and Published by A R. Nagarajan at Sadhvi Press, D Subbiah Road. Mysore

## ಹೈದ್ರಾಬಾದಿನಲ್ಲಿ ಆಂಧ್ರದ ರಾಜಧಾನಿ

ಭಾಷಾವಾರು ಪ್ರಾಂತಗಳ ಪ್ರಶ್ನೆಯು ಅಖೈರಾಗಿ ಇತ್ಯರ್ಥವಾಗುವ ಸಂದರ್ಭದಲ್ಲಿ ಹೈದರಾಬಾದನ್ನು ವಿಭಜಿಸಬೇಕಾಗುವುದೆಂದೂ, ಆಗ ಆಂಧ್ರದ ರಾಜಧಾನಿಯನ್ನು ಅಲ್ಲಿಗೆ ವರ್ಗಾಯಿಸಬಹುದಾದ್ದರಿಂದ, ಆಂಧ್ರ ರಾಜ್ಯಕ್ಕೆ ಪ್ರತ್ಯೇಕ ರಾಜಧಾನಿಯನ್ನು ನಿರ್ಮಿಸುವ ಅಗತ್ಯವು ಇಲ್ಲವೆಂದೂ ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಸಂಜೀವರೆಡ್ಡಿಯವರು ತಿಳಿಸಿರುವರು

### ಶೋಚನೀಯ

ರಾಜಧಾನಿಯ ಖ್ಯಾತ ವಕೀಲರಾದ ಶ್ರೀ ಎಂ ಕೆ ಮಹಮದ್ ಹುಸೇನ್ ಖಾನ್ ರವರು ತಮ್ಮ ಹಿರಿಯ ಪುತ್ರ ಮತ್ತು ಸೊಸೆಯವರುಗಳು ಇವರುಗಳ ವಿವಾಹದ ಸಂಬಂಧದಲ್ಲಿ ನೆನ್ನೆ ರಾತ್ರಿ ತಮ್ಮ ಮನೆಯಲ್ಲಿ ಭೋಜನ ಕೂಟವೊಂದನ್ನು ಏರ್ಪಡಿಸಿ, ಅನೇಕ ಇಷ್ಟ ಮಿತ್ರರನ್ನು ಕರೆದು ಸತ್ಕರಿಸಿದರು

"ದ್ವೇಷವನ್ನು ಸಂಪಾದಿಸಿರಿ"

ದುಂದುಗಾರಿಕೆಯು ಬಡಜನರನ್ನು [illegible] ಅಭ್ಯಾಸ ಮಾಡಿ ಬಡವರ ರಾಜ್ಯದಲ್ಲಿ [illegible] ಇದನ್ನು ಅಭ್ಯಾಸ ಮಾಡಿರಿ. ನಾಯಕರುಗಳೇ, ನೀವು ಹಾಗೆ ಮಾಡದಿದ್ದರೆ ಪ್ರಜೆಗಳಿಗೆ ನೀವು ಸವಾಲು ಹಾಕಿದಂತೆಯೇ ಸರಿ. ಪ್ರಜೆಗಳು ಇದು ಇಲ್ಲದೆ ನಿಮ್ಮ ಸವಾಲನ್ನು ಸ್ವೀಕರಿಸುತ್ತಾರೆ. ಈ ಶಕ್ತಿ ನಿಮ್ಮದೇ ಹೊರತು ಪ್ರಜೆಗಳದಲ್ಲ.

ಟೌನ್ ಹಾಲ್ ಕಮಿಟಿ ಚೇರ್ಮನ್ನರ ಆಫೀಸು, ತಾ|| 3-4-53

## ಪ್ರಕಟಣೆ

ಮೈಸೂರು ಸಿಟಿ ರಂಗಾಚಾರ್ಲು ಮೆಮೋರಿಯಲ್ ಹಾಲ್ (ಟೌನ್ ಹಾಲ್) ನಲ್ಲಿ ನಾಟಕಾಭಿನಯಕ್ಕೆ ಬೇಕಾಗುವ ಪರದೆ, ಸೆಟ್ ಇವುಗಳನ್ನು ಸರಬರಾಜು ಮಾಡುವ ಬಗ್ಗೆ ಈ ಮೂಲಕ ಕೊಟೇಷನ್ ಕರೆಯಲಾಗಿದೆ ಸದರಿ ಕೊಟೇಷನ್ 15-4-53 ನೇ ಬುಧವಾರ 4 ಘಂಟೆ ಒಳಗಾಗಿ ಮುನಿಸಿಪಲ್ ಪ್ರೆಸಿಡೆಂಟ್ ಮತ್ತು ಚೇರ್ಮನ್, ಟೌನ್ ಹಾಲ್ ಕಮಿಟಿಯವರ ಆಫೀಸಿಗೆ ತಲುಪತಕ್ಕದ್ದು

ಈ ಕೆಲಸವನ್ನು ತೆಗೆದುಕೊಳ್ಳಲು ಇಷ್ಟಪಡುವವರು 10-4-53 ನೇ ತಾರೀಖಿನ ವರೆಗೆ (ರಜಾ ದಿವಸವು ಸೇರಿ) ಆಫೀಸು ಕಾಲಗಳಲ್ಲಿ ಮುನಿಸಿಪಲ್ ಇಂಜನಿಯರ್ ರವರಿಂದ ಹೆಚ್ಚಿನ ವಿಷಯಗಳನ್ನು ತಿಳಿಯಬಹುದು

ಬಿ ವೆಂಕಟರಮಣಯ್ಯ,

ಅಧ್ಯಕ್ಷರು

ಟೌನ್ ಹಾಲ್ ಕಮಿಟಿ, ಮೈಸೂರು.


# ಪ್ರಭುದೇವಾ ಟಾಕೀಸ್

6—4—53ನೇ : ಸೋಮವಾರದಿಂದ : ಪ್ರತಿದಿನ 3 ಆಟಗಳು

# • ಲವಕುಶ •

(ತೆಲುಗು)

ಪಾತ್ರ: -ಶ್ರೀರಂಜನಿ ಮುಕ್ಕಾಮಲ ನಾಗೇಶ್ವರರಾವ್ ಮೊದಲಾದವರು

[ A CHAMARIA RELEASE

# ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ೯೫ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇದೆ. ಬೆಲೆ ಸುಮಾರು 5,000 ರೂ.

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಫೋನ್ ನಂ. 792 ||ವಂದೇ ಮಾತರಂ|| ಅಧಿಕ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಮಂಗಳವಾರ ೬-೪-೧೯೫೬ [ ಸಂಚಿಕೆ ೨೦೪

# ಟ್ರೈಪೆಯಲ್ಲಿ ಆಸ್ಫೋಟನೆ - ೪೦ ಜನರ ಮರಣ -

## ಹಿಂದೂ ದರ್ಶನಕ್ಕೆ ಶಿವಾನುಭವ ಶಾಸ್ತ್ರದ ನೆರವು

### ಶ್ರೀಗಳಿಂದ ಶಿವಾನುಭವ ಸಮ್ಮೇಳನದ ಪ್ರಾರಂಭೋತ್ಸವ

... ಚಿತ್ರದುರ್ಗ ೬

ಶ್ರೀಮನ್ಮಹಾರಾಜರು ನೆನ್ನೆ ಇಲ್ಲಿ ನಡೆದ ತ್ರಿಪಂಚಾಶತ್ ಶಿವಾನುಭವ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿ, ಶಿವಾನುಭವ ಶಾಸ್ತ್ರವು ಭಾರತೀಯ ದರ್ಶನ ಪ್ರಪಂಚದಲ್ಲಿ ಕ್ರಾಂತಿಯನ್ನೇ ಮಾಡಿದೆಯೆಂದೂ, ನಮ್ಮ ಹಿಂದೂ ದರ್ಶನ ಶಾಸ್ತ್ರಕ್ಕೆ ನೆರವಾಗಿರುವುದೆಂದೂ ಹೇಳಿದರು.

ಸಮ್ಮೇಳನದ ಜೊತೆಗೆ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಚಿಕ್ಕ ವೀರದೇಶಿಕೇಂದ್ರ ಮಹಾಸ್ವಾಮಿಗಳವರ ಆರಾಧನೆಯ ರಜತ ಮಹೋತ್ಸವವೂ ನಡೆಯಿತು. ಚಿತ್ರದುರ್ಗದ ಜಗದ್ಗುರುಗಳಾದ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು.

ಬೆಳಗ್ಗೆ ಶ್ರೀ ಮ ನಿ ಪ್ರ, ಮ ವೀರಸಿಂಹಾಸನಾಧೀಶರಾದ ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣ ಮಾಡಿದರು. ಮಹಾ ರುದ್ರಾಭಿಷೇಕ, ಏಕಾದಶ ರುದ್ರ ಪೂಜೆ, ಶ್ರೀ ಚಿಕ್ಕ ವೀರದೇಶಿಕೇಂದ್ರ ಸ್ವಾಮಿಗಳ ಭಾವಚಿತ್ರದ ಮೆರವಣಿಗೆಗಳು ನಡೆದುವು.

ಸಂಜೆ ಸಮ್ಮೇಳನವು ನಡೆದಾಗ ನಾಟ್ಯ ವಿಶಾರದ ಎಂ. ಸಿ. ಮಹದೇವಸ್ವಾಮಿಯವರಿಂದ ದೇವತಾ ಪ್ರಾರ್ಥನೆಯಾದನಂತರ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಪಿ ಎಲ್ ಸಂಗಪ್ಪನವರು ಶ್ರೀಮನ್ಮಹಾರಾಜರಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳವರೂ, ಶಿವಾನುಭವದ ಬಗ್ಗೆ ಸಂಸ್ಥಾನದ ವಿದ್ಯಾಧಿಕಾರಿಗಳಾದ ಶ್ರೀ ಜೆ ಬಿ ಮಲ್ಲಾರಾಧ್ಯರೂ ಭಾಷಣ ಮಾಡಿದರು. ನಮ್ಮ ಪ್ರಭುಗಳು ಕರ್ನಾಟಕದ ಅರಸರಾಗಲೆಂದೂ, ಮತ್ತು ರಾಜಪುತ್ರರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರವರು ಯುವರಾಜರಾಗಲೆಂದೂ ಶ್ರೀ ಸ್ವಾಮಿಗಳವರು ಆಶಿಸಿದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು —

ಜನಸೇವೆಯೇ ಎಂದು ಧರ್ಮ, ನೀತಿಗಳ ನೆಲಗಟ್ಟನ್ನು ಬಿಟ್ಟು ಜನಬಂಧುತೆ ನಡೆಯಲು ಪ್ರಾರಂಭಿಸುವುದೋ ಅಂದು ಮಾನವನ ಪ್ರಗತಿ ಚಕ್ರವು ಹಿಂದಕ್ಕೆ ಉರುಳಿ ಬೀಳುತ್ತದೆ, ಎಂಬುದು ಎಲ್ಲರ ಅನುಭವಸಿದ್ಧವಾದ ವಿಷಯವಾಗಿದೆ. ಆದುದರಿಂದಲೇ ನಮ್ಮ ಪ್ರಾಚೀನ ಕಾಲದ ಮಹರ್ಷಿಗಳೂ, ಆಚಾರ್ಯರೂ, ಧರ್ಮ, ನೀತಿ, ಭಕ್ತಿ, ಸತ್ಯ, ತ್ಯಾಗ ಮೊದಲಾದ ಮೌಲ್ಯಗಳು ಸಮಾಜದ ಸುವ್ಯವಸ್ಥೆಗೆ ಅತ್ಯಗತ್ಯವೆಂದು ಮೊದಲಿಂದಲೂ ಉಪದೇಶಿಸುತ್ತಾ ಬಂದಿದ್ದಾರೆ. ನಮ್ಮ ವೇದಗಳು, ಆಗಮಗಳು, ಶಾಸ್ತ್ರಗಳು, ಪುರಾಣಗಳು, ಮೊದಲಾದುವುಗಳೂ ನಮಗೆ ಈ ಸತ್ಯನಿತ್ಯವಾದ ಸಿದ್ಧಾಂತವನ್ನು ಬೋಧಿಸುವ ಸಲುವಾಗಿಯೇ ಏರ್ಪಡಿಸಲ್ಪಟ್ಟಿವೆ. ಆದುದರಿಂದ ಇಂತಹ ಧಾರ್ಮಿಕ ಸಮ್ಮೇಳನಗಳು ಮೇಲಿಂದ ಮೇಲೆ ನೆರೆದು ಜನರಿಗೆ ಧರ್ಮ

## ಮಿಡತೆ ಹಾವಳಿ ನಿವಾರಣಾ ಸಮ್ಮೇಳನ

ದೇಶದಲ್ಲಿ ಮಿಡತೆಗಳ ಹಾವಳಿಯನ್ನು ನಿವಾರಿಸುವ ಸಲುವಾಗಿ ಇದೇ ೧೧ನೇ ತಾರೀಕು ದೆಹಲಿಯಲ್ಲಿ ಸೇರಲಿರುವ ಅಂತರ ಪ್ರಾಂತೀಯ ಮಿಡತೆ ನಿವಾರಣಾ ಸಮ್ಮೇಳನವನ್ನು ಆಹಾರ ಸಚಿವ ರಫಿ ಅಹಮದ್ ಕಿದ್ವಾಯಿಯವರು ಉದ್ಘಾಟಿಸುವರು.

---

ನೀತಿಗಳ ಬೋಧೆಯಾಗಿ ಕಾರಣವಾದರೆ ಈ ನೆಲೆಗಟ್ಟಿನ ಮೇಲೆ ತಮ್ಮ ಜೀವನ ಭವನವನ್ನು ಜನರು ಕಟ್ಟಿಕೊಳ್ಳುವಂತೆ ಮಾಡುವುದು ಎಲ್ಲರ ಕರ್ತವ್ಯ. ಉದಾತ್ತವಾದ ಧ್ಯೇಯದಿಂದ ಕೂಡಿದ ಈ ಸಮ್ಮೇಳನದ ಕಾಲದಲ್ಲಿ ಪುಣ್ಯಭೂಮಿಯಾದ ನಮ್ಮ ಭರತಖಂಡದಲ್ಲಿ ಅನೇಕ ಸಾವಿರ ವರ್ಷಗಳಿಂದ ಬೆಳೆದು ಬಂದಿರುವ ಉಪನಿಷತ್ತುಗಳು, ವೇದಾಂತ ಸೂತ್ರಗಳು, ಗೀತಾದಿ ಗ್ರಂಥಗಳು, ವಿವಿಧ ದರ್ಶನಗಳು, ದ್ವೈತ–ಅದ್ವೈತ, ಶಕ್ತಿವಿಶಿಷ್ಟಾದ್ವೈತ, ಮೊದಲಾದ ಮತ ಸಿದ್ಧಾಂತಗಳು, ಜೈನ ಬೌದ್ಧಾದಿ ಧರ್ಮಗಳು, ನಾನಾ ಭಕ್ತಿ ಸಂಘಗಳು, ಮೊದಲಾದುವುಗಳೆಲ್ಲವೂ ಸಕಲ ಮಾನವರ ಕಲ್ಯಾಣಕ್ಕಾಗಿ ಮಾನವ ಜಾತಿಯ ಐಹಿಕ ಮತ್ತು ಆಮುಷ್ಮಿಕ ಪ್ರಗತಿ ಮತ್ತು ಶಾಂತಿಗಾಗಿ ನಿರ್ಮಾಣವಾಗಿವೆ.

ಶಿವಾನುಭವ ಎಂಬ ಮಾತು ಸಂಸ್ಕೃತ ಸಾಹಿತ್ಯದ ಪಾರಿಭಾಷಿಕ ಶಬ್ದವಾಗಿದೆ. ಶಿವನ ಸಂಬಂಧವಾದ ಅನುಭವ [ ಶಿವಸ್ಯ ಅನುಭವಃ = ಶಿವಾನುಭವಃ ] ಎಂಬುದು ಈ ಮಾತಿನ ತಿರುಳು.

ಸರ್ವೋತ್ಕೃಷ್ಟವಾದ ಸಿದ್ಧಾಂತ, ಮನಸ್ಸನ್ನು ಒಪ್ಪಿಕೊಳ್ಳುವ ಶಿವಾನುಭವ, ಈ ಉಭಯ ಮಾರ್ಗಗಳಿಂದ ವೀರಶೈವ ಧರ್ಮವು ಒಂದು ಪರಿಪೂರ್ಣವಾದ ಧರ್ಮವಾಗಿದೆಯೆಂದು ತತ್ವಶಾಸ್ತ್ರ ಸಂಶೋಧಕರು ಅಭಿಪ್ರಾಯಪಟ್ಟಿರುತ್ತಾರೆ.

ಶಿವಾನುಭವ ಶಾಸ್ತ್ರವು ಪ್ರಕಾಶಾಧೀನವಾದ ಸರ್ವ ಮಾನವ ಹಿತಕರವಾದ ವಿಶ್ವಧರ್ಮಕ್ಕೆ ಸಾಧಕವಾದ, ಮೂಲಭೂತವಾದ ತತ್ವಗಳಿಂದ ಕೂಡಿರುವುದು. ಈ ಶಾಸ್ತ್ರದ ಹಿರಿಮೆಗೆ ಮತ್ತು ಸರ್ವೋತ್ಕರ್ಷಕ್ಕೆ ನಿದರ್ಶನವಾಗಿ ಇಂತಹ ಅಮೋಘವಾದ ಸಿದ್ಧಾಂತ ಮತ್ತು ಶಾಸ್ತ್ರಗಳ ವಿಚಾರವನ್ನು ಕುರಿತು ಚರ್ಚಿಸಲು ಇಂದು ಇಲ್ಲಿ ಶಿವಾನುಭವ ಸಮ್ಮೇಳನದ ಕೂಡಿರುವುದರಿಂದ ನನ್ನ ಮನಸ್ಸಿಗೆ ಸಂತೋಷವನ್ನೂ ನೆಮ್ಮದಿಯನ್ನೂ ಉಂಟುಮಾಡಿದೆ ಎಂದು ಹೇಳಲು ಹರ್ಷಿಸುತ್ತೇನೆ.

## ರಾಮನಗರದ ಕಂಟೆಂಪ್ಟ್ ಮೊಕದ್ದಮೆ

### ಶಾಸನ ಸಭೆಯಲ್ಲಿ ನಿಲುವಳಿ ಸೂಚನೆಗೆ ತಿರಸ್ಕಾರ

ಸ್ವಂ ಸು ಫೋನ್ ] ಬೆಂಗಳೂರು ೬

ಈ ದಿನ ಹಿರಿಯ ಶಾಸನ ಸಭೆಯಲ್ಲಿ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರ ರಾಮನಗರದ ಕಂಟೆಂಪ್ಟ್ ಮೊಕದ್ದಮೆಗೆ ಸಂಬಂಧಿಸಿದ ವಿಷಯವನ್ನು ಚರ್ಚಿಸುವ ಬಗ್ಗೆ ತಂದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು. ಈ ವಿಷಯವನ್ನು ಪರಿಶೀಲಿಸುವುದು ಸಬ್ ಜುಡಿಸ್ ಆಗುವುದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು.

## ಶಸ್ತ್ರಾಸ್ತ್ರ ಗಿಡಂಗಿನ ಸಿಡಿತದಿಂದ ೪೦ ಮರಣ

ಫಾರ್ಮೋಸಾ ರಾಜಧಾನಿಯಾದ ಟ್ರೈಪೆ ನಗರದ ದಕ್ಷಿಣದಲ್ಲಿ ನೆನ್ನೆ ಒಂದು ಶಸ್ತ್ರ ಸಂಗ್ರಹಣಾ ಕೇಂದ್ರದಲ್ಲಿ ಭಾರಿ ಆಸ್ಫೋಟನೆಯುಂಟಾಗಿ, ಅಲ್ಲಿ ಕೆಲಸ ಮಾಡುತ್ತಿದ್ದ ೪೦ ಜನರು ಮೃತಪಟ್ಟು, ಸುಮಾರು ೫೦ ಮಂದಿ ಗಾಯಗೊಂಡರೆಂದು ವರದಿಯಾಗಿದೆ. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಆ ಪ್ರದೇಶದಲ್ಲಿ ಬಚ್ಚಿಡಲಾಗಿದ್ದಿತೆಂದು ಹೇಳಲಾದ ಬಾಂಬುಗಳನ್ನು ಹುಡುಕುವ ಸಂದರ್ಭದಲ್ಲಿ ಈ ಘಟನೆ ನಡೆಯಿತೆಂದು ವರದಿಯಾಗಿದೆ.

## ಯುದ್ಧ ಖೈದಿಗಳ ವಿನಿಮಯದ ಬಗ್ಗೆ ಸಂಧಾನ

ಖಾಯಿಲೆಯಾಗಿರುವ ಮತ್ತು ಪೆಟ್ಟು ಬಿದ್ದ ಕೊರಿಯಾ ಯುದ್ಧ ಖೈದಿಗಳ ವಿನಿಮಯದ ಬಗ್ಗೆ ಮಿತ್ರ ಪಕ್ಷದವರ ಸಲಹೆಗಳನ್ನು ಪರಿಶೀಲಿಸಲು ಕಮ್ಯೂನಿಸ್ಟ್ ನಾಯಕರು ಒಪ್ಪಿಗೆಯಿತ್ತರೆಂದು ಗೊತ್ತಾಗಿದೆ. ಪಾನ್ ಮುನ್ ಜಾನ್ ತಟಸ್ಥ ಪ್ರದೇಶದ ಮೂಲಕ ಪ್ರತಿ ದಿನ ೫೦೦ ಮಂದಿ ಯುದ್ಧ ಖೈದಿಗಳನ್ನು ವಿನಿಮಯ ಮಾಡುವ ಬಗ್ಗೆ ಸಲಹೆ ಮಾಡಲಾಗಿತ್ತೆಂದು ವರದಿಯಾಗಿದೆ.

ದೆಹಲಿಯಲ್ಲಿ ಸಕಲ ಭಾರತ ... ನಡೆದ ಗೋ ಸೇವಕ ಕೂಟದಲ್ಲಿ ಭಾರತಾದ್ಯಂತ ಗೋ ವಧೆಯನ್ನು ತಪ್ಪಿಸುವ ನಿಷೇಧಾಜ್ಞೆಯಾಗಬೇಕೆಂದು ನಿರ್ಣಯ ಮಾಡಲಾಗಿದೆ.

## ಅಮಾನಿಕೆರೆ ಪ್ರಕರಣದ ಬಗ್ಗೆ ಪ್ರಶ್ನೆ

### ಕಿರಿಯ ಶಾಸನ ಸಭೆಯಲ್ಲಿ ಅವಕಾಶವಿಲ್ಲ

ಸ್ವಂ ಸು ಫೋನ್ ] ಬೆಂಗಳೂರು ೬

ಕಿರಿಯ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಇಂದು ಅಮಾನಿಕೆರೆಯ ವಿಷಯವಾಗಿ ಶ್ರೀ ಕೆ ಎಚ್ ಪಾಟೀಲರವರು ಅಧಿಕೃತ ಸಚಿವರಿಗೆ ಎಷ್ಟು ಹಣ ... ಎಂಬ ಬಗ್ಗೆ ಪ್ರಶ್ನೆ ಕೇಳಲು ಪ್ರಯತ್ನಿಸಿದರು ಅದಕ್ಕೆ ಅವಕಾಶವೀಯಲಿಲ್ಲ. ಈ ವಿಷಯವು ಕೋರ್ಟಿನ ಪರಿಶೀಲನೆಯಲ್ಲಿರುವುದರಿಂದ ಅಧ್ಯಕ್ಷರು ತಿಳಿಸಿದರು.

... ಸರ್ಕಾರ ಹೊಸ ... ನಿರ್ಮಾಣವಾಗಿರುವುದೆಂದು ಸಚಿವ ಶ್ರೀ ಸಿದ್ದವೀರಪ್ಪನವರು ಶ್ರೀ ... ಯವರ ಪ್ರಶ್ನೆಗೆ ಉತ್ತರವಿತ್ತರು.

... ಸಮಿತಿಯನ್ನು ... ನಡೆಸಲಾಗುವುದೆಂದೂ ತಿಳಿಸಲಾಯಿತು.

... ನಿರ್ಣಯಗಳನ್ನು ... ತಿಳಿಸಲಾಯಿತು. ... ತಾಲ್ಲೂಕಿನಲ್ಲಿ ಈ ವರ್ಷ ... ವಸೂಲು ಮಾಡಲಾಗುವುದೆಂದು ಶ್ರೀ ... ಯವರು ... ವರದಿ ... ತಿಳಿಸಲಾಯಿತು.

## ರಷ್ಯದ ಏಳು ವಿಭಾಗದ ಮಾಜಿ ಮಂತ್ರಿಯ ದಸ್ತಗಿರಿ

ರಷ್ಯದ ಹಲವು ವೈದ್ಯರುಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿದ ಸಂಬಂಧವಾಗಿ ಈಗ ಅಲ್ಲಿನ ಮಾಜಿ ಒಳಾಡಳಿತ ಮಂತ್ರಿ ರಿಯೂಮಿ ನ್ ರವರನ್ನು ದಸ್ತಗಿರಿ ಮಾಡಲಾಗಿದೆ. ರಷ್ಯಾ ನಾಯಕರ ಮರಣಕ್ಕೆ ವೈದ್ಯರುಗಳು ಕಾರಣವೆಂಬ ಆಪಾದನೆಯನ್ನು ಸದರಿ ಮಂತ್ರಿಗಳು ಕಲ್ಪಿಸಿ ನಡೆಸಿದ್ದರೆಂದೂ, ಅವರು ದೇಶದ ಆಂತರಿಕ ಶತ್ರುಗಳಂತೆ ವರ್ತಿಸಿದವರೆಂದೂ ವರದಿಯಾಗಿದೆ.

## ಪಾಟ್ನಾದಲ್ಲಿ ೩೦ ಸಾವಿರ ರೈತರ ಪ್ರದರ್ಶನ

ಜಮೀನುಗಳ ಹಂಚಿಕೆ ಬಗ್ಗೆ ತಮ್ಮ ಬೇಡಿಕೆಗಳನ್ನು ಒತ್ತಾಯಪಡಿಸಲು ನೆನ್ನೆ ಪಾಟ್ನಾ ನಗರದಲ್ಲಿ ೩೦ ಸಾವಿರ ರೈತರ ಪ್ರಚಂಡ ಮೆರವಣಿಗೆಯು ನಡೆಯಿತು. ರೈತರು ಕೆಂಬಾವುಟಗಳನ್ನು ಹಿಡಿದು, ನಗಾರಿಯನ್ನು ಬಾರಿಸುತ್ತಾ ಇದ್ದರು. ಅವರು ಬಿಹಾರ್ ಶಾಸನ ಸಭೆಯ ಮುಂದೆ ಪ್ರದರ್ಶನಗಳನ್ನು ನಡೆಸಿದರು. ಪ್ರದರ್ಶನದ ಮುಂದಾಳುತನವನ್ನು ಜಯಪ್ರಕಾಶ್ ನಾರಾಯಣ್ ಮತ್ತು ಲೋಹಿಯಾರವರು ವಹಿಸಿದ್ದರು.

## ನೆಹರೂರವರೊಡನೆ ನಿಜಲಿಂಗಪ್ಪನವರ ಭೇಟಿ

ಬಳ್ಳಾರಿ ಜಿಲ್ಲೆಯ ಭವಿಷ್ಯ ಮತ್ತು ಅದಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಕುರಿತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನಿ ನೆಹರೂರವರ ಆಹ್ವಾನದಂತೆ ಅವರನ್ನು ಈ ದಿನ ಭೇಟಿ ಮಾಡುವರು. ನಿಜಲಿಂಗಪ್ಪನವರು ನೆಹರೂರವರೊಡನೆ ನಡೆಸುತ್ತಿರುವ ಪತ್ರವ್ಯವಹಾರದಲ್ಲಿ ಬಳ್ಳಾರಿ ತಾಲ್ಲೂಕು ಕರ್ನಾಟಕ ಪ್ರದೇಶದಲ್ಲಿ ಸೇರಬೇಕೆಂದೂ, ಮಲ್ಲಾಪುರ, ರಾಯದುರ್ಗ, ಆದವಾನಿ ಮತ್ತು ಆಲೂರು ತಾಲ್ಲೂಕುಗಳ ಬಗ್ಗೆ ಗಡಿ ನಿರ್ಧಾರದ ಸಮಿತಿಯನ್ನು ರಚಿಸಬೇಕೆಂದೂ ಒತ್ತಾಯಪಡಿಸುತ್ತಾರೆ.

## ಮಾರ್ಷಲ್. ಲಾ ಉಲ್ಲಂಘಿಸಿದ ಪ್ರಿನ್ಸಿಪಾಲರಿಗೆ ಸಜಾ

ಲಾಹೋರಿನ ಆಹಮ್ಮದೀಯ ಪಂಗಡದ ನಾಯಕರೂ ಮತ್ತು ಒಂದು ಕಾಲೇಜಿನ ಪ್ರಿನ್ಸಿಪಾಲರೂ ಆದ ಮಿರ್ಜಾ ನಾಸೀರ್ ಅಹಮದ್ ಎಂಬುವರು ಮಾರ್ಷಲ್ ಲಾವನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ೫ ವರ್ಷ ಕಠಿಣ ಸಜಾ ಮತ್ತು ೫ ಸಾವಿರ ರೂ ಜುಲ್ಮಾನೆ, ತಪ್ಪಿದರೆ ಮತ್ತೆ ೨ ವರ್ಷ ಕಠಿಣ ಸಜಾ ಶಿಕ್ಷೆಗೆ ಗುರಿಯಾಗಿರುವರು.

## ಕೊರಿಯಾ ಗೆರಿಲ್ಲಾಗಳಿಂದ ಪೋಲೀಸು ಠಾಣೆ ನಾಶ

ದಕ್ಷಿಣ ಕೊರಿಯದಲ್ಲಿ ವಿಶ್ವ ಸಂಸ್ಥೆ ಸೈನ್ಯಗಳ ಹಿಂಭಾಗದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಕಮ್ಯೂನಿಸ್ಟರ ಗೆರಿಲ್ಲಾ ಪಡೆಗಳು ಒಂದು ಪೋಲೀಸು ಠಾಣೆಯನ್ನು ನಾಶಪಡಿಸಿರುತ್ತವೆ. ಅದಕ್ಕೆ ಮುಂಚೆ ಅಲ್ಲಿದ್ದ ರಸ್ತ್ರಾಸ್ತ್ರ, ರೇಡಿಯೋ, ಟೆಲಿಫೋನ್ ಮುಂತಾದುವನ್ನು ಅವರ ಹಾಗಿದ್ದರು.

## ಶಾಂತಿ ಸಾಗರದಲ್ಲಿ ಹೊಸ ದ್ವೀಪಗಳ ಉದ್ಭವ

ಶಾಂತಿ ಸಾಗರದಲ್ಲಿ ಕಳೆದ ೧ ವಾರದಲ್ಲಿ ನಾಲ್ಕು ದ್ವೀಪಗಳು ಉದ್ಭವಿಸಿವೆ. ಈ ದ್ವೀಪಗಳು ಟೋಕಿಯೋವಿಗೆ ಸುಮಾರು ೩೦೦ ಮೈಲಿ ಪೂರ್ವಕ್ಕಿವೆ.

## ಉಪಾಧ್ಯಾಯರ ಸಂಘಕ್ಕೆ ಮನ್ನಣೆ ರದ್ದು

ಉತ್ತರ ಪ್ರದೇಶದ ಉಪಾಧ್ಯಾಯರುಗಳು ಸಂಬಳ ಮತ್ತು ತುಟ್ಟಿ ಭತ್ಯಗಳನ್ನು ಹೆಚ್ಚಿಸಬೇಕೆಂದು ಕೋರಿ ಕಳೆದ ತಿಂಗಳು ೨ನೇ ತಾರೀಖಿನಿಂದ ಸತ್ಯಾಗ್ರಹ ಹೂಡಿರುವ ಸಂದರ್ಭದಲ್ಲಿ ಅವರುಗಳ ಸಂಘದ ಸದಸ್ಯರ ಪೈಕಿ ೫೦೦ ಮಂದಿ ಜೈಲುಗಳನ್ನು ಸೇರಿರುವರು. ಸರ್ಕಾರದವರು ಸಂಘಕ್ಕೆ ಕೊಟ್ಟಿದ್ದ ಮನ್ನಣೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ.

### ಸಚಿವರ ಆರೋಗ್ಯದ ಬಗ್ಗೆ ವಿಶೇಷ ವ್ಯವಸ್ಥೆ

ಸಂಸ್ಥಾನದ ಮಂತ್ರಿಗಳ ಮತ್ತು ಅವರ ಕುಟುಂಬದ ಆರೋಗ್ಯಕ್ಕಾಗಿ ಸರ್ಕಾರದವರು ಏಕೆ ಪ ವ್ಯವಸ್ಥೆಯನ್ನು ಕಲ್ಪಿಸಿ, ಎಲ್ಲ ಸಚಿವರ ಆರೋಗ್ಯಪರಿಪಾಲನೆಗಾಗಿ ಒಬ್ಬ ಎರಡನೇ ಗ್ರೇಡ್ ಅಸಿಸ್ಟೆಂಟ್ ಸರ್ಜನರು ಅವರುಗಳ ಮನೆಗಳಿಗೆ ಭೇಟಿ ಕೊಡುವಂತೆ ಏರ್ಪಾಡು ಮಾಡಲಾಗಿದೆ. ಮತ್ತೆ ವಿಕ್ಟೋರಿಯಾ ಆಸ್ಪತ್ರೆಯ ಸೀನಿಯರ್ ಫಿಸಿಷಿಯನ್ನರು ವಾರಕ್ಕೊಮ್ಮೆ ಮತ್ತೆ ಅಗತ್ಯ ಬಿದ್ದಾಗಲೆಲ್ಲಾ ಸಚಿವರುಗಳ ಮನೆಗೆ ಹೋಗಿ ಚಿಕಿತ್ಸೆಯನ್ನು ಸೂಚಿಸಬೇಕೆಂದೂ ಈ ಕಾರ್ಯಕ್ಕಾಗಿ ಅಗತ್ಯಬಿದ್ದರೆ, ಮತ್ತೊಬ್ಬ ಅಸಿಸ್ಟೆಂಟ್ ವೈದ್ಯರನ್ನು ನೇಮಿಸಿಕೊಳ್ಳಬಹುದೆಂದೂ ತಿಳಿಸಲಾಗಿದೆ. ಅಲ್ಲದೆ ಮಂತ್ರಿಗಳು ಮತ್ತು ಅವರ ಕುಟುಂಬಗಳವರಿಗೆ ಆಸ್ಪತ್ರೆಯಲ್ಲಿ ಒದಗಿಸಬಹುದಾದ ವಸತಿ ಮತ್ತು ಔಷಧೋಪಚಾರಗಳಿಗೆ ಹಣವನ್ನು ಕೊಡಬೇಕಾಗಿಲ್ಲವೆಂದು ವಿನಾಯಿತಿ ಕೊಡಲಾಗಿದೆ.

## ಪಾಕ್ ಮುಂಜಾನ್ ಬಳಿ ೩೫ ಚೀಣೀಯರ ಹತ

ಕೊರಿಯಾದ ಶಾಂತಿ ಸಂಧಾನ ಕ್ಷೇತ್ರವಾದ ಪಾನ್ ಮುಂಜಾನ್ ಎಂಬಲ್ಲಿಗೆ ಎಂಟು ಮೈಲಿ ದೂರದಲ್ಲಿ ಮೊನ್ನೆ ರಾತ್ರಿ ಅಮೆರಿಕಾ ಮತ್ತು ಕೆಂಪು ಚೀನಾ ಸೈನಿಕರಿಗೆ ಸುಮಾರು ಒಂದೂವರೆ ಗಂಟೆ ಕಾಲ ಕಾಳಗ ನಡೆದು ೩೫ ಮಂದಿ ಚೀಣೀಯರು ಮಡಿದು, ೨೮ ಜನರು ಗಾಯಗೊಂಡರೆಂದು ವರದಿಯಾಗಿದೆ.

## ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷದ ರದ್ದು

ರಷ್ಯಾ ಸರ್ಕಾರದವರು ಪಶ್ಚಿಮ ರಾಷ್ಟ್ರಗಳನ್ನು ಸಂತೈಸುವ ಹೆಚ್ಚಿನ ಕಲಸಗಳನ್ನು ಕೈಗೊಳ್ಳಲಿರುವರೆಂದೂ ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷವನ್ನು ರದ್ದು ಮಾಡಲಿರುವರೆಂದೂ, ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ಆಕ್ರಮಣ ವಿರುದ್ಧದ ಒಪ್ಪಂದ ಮಾಡಿಕೊಳ್ಳುವರೆಂದೂ ವದಂತಿಯಾಗಿದೆ.

## ಹಿಟ್ಟಿನ ಗಿರಣಿ ರಹದಾರಿ ರಿನ್ಯೂ ಮಾಡಿಸಲು ಸೂಚನೆ

[illegible] ಪಟ್ಟಿನ ಗಿ[illegible] ಮಾಲೀಕರ ಸಂಘದ ಕಾರ್ಯದರ್ಶಿ ಶ್ರೀ ಎಚ್. ಕೆ. ಕೃಷ್ಣಮೂರ್ತಿ ಅವರು [illegible] ದ ಮನವಿಯನ್ನು ಹೊರಡಿಸಿ ಎಲ್ಲಾ ಮಾಲೀಕರುಗಳೂ ತಮ್ಮ ರಹದಾರಿಗಳನ್ನು ವಿಧಾಯಿಸಿದ ವ್ಯಿಕ್ಷ ಕೊಟ್ಟು ಕೂಡಲೇ ಸ್ಥೇದಪಟ್ಟು ರಿನ್ಯೂ ಮಾಡಿಸಬೇಕೆಂದು ಕೋರಿರುತ್ತಾರೆ. [illegible] ಕ್ಕೆ ಸಂಬಂಧಪಟ್ಟ ವಿವರಗಳನ್ನು ಚಾಮುಂಡೇಶ್ವರಿ ರಸ್ತೆಯ [illegible] ನೆಂಬರಿನ ಮನೆಯಲ್ಲಿರುವ ಸಂಘದ ಕಛೇರಿಯಲ್ಲಿ ತಿಳಿಯಬಹುದೆಂದೂ ಸೂಚಿಸಲಾಗಿದೆ ಮತ್ತು ಹಿಟ್ಟಿನಗಿರಣಿ ಮಾಲೀಕರೆಲ್ಲರೂ ಅವಶ್ಯ ಬೇಗ ಸಂಘದ ಸದಸ್ಯರಾಗಿ ಸೇರಬೇಕೆಂದೂ ಪ್ರಾರ್ಥಿಸಲಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ [illegible] ೧-೪೦ ಪಿಟೀಲು [illegible] ಸಂಜೆ ೫-೪೦ ನಾಗಸ್ವರ [illegible] ಗಳ [illegible] ಬಿ ಗೀತ [illegible] ಹೆಚ್ ದೇಶಪಾಂಡೆ ಕನ್ನಡದಲ್ಲಿ ಭಾಷಣ [illegible] ಶ್ರೀಕಂಠ [illegible] ಕಿಲ್ಪಪ್ಪ [illegible] ದೇವರನಾಮ [illegible] ಗೀತೆಗಳು

ಮಾಲೆ ದಿನ ತಿಂಗಳ [illegible] ನೇ ತಾ|| [illegible] ಕಾಂಗ್ರೆಸ್ ಸಮಿತಿ ಸಭೆಯು [illegible] ಲಿದೆ

---

ಶ್ರೀ ರಮಣ

ಸಂಗೀತ ವಿದ್ಯಾಲಯ

1064 [illegible] ಮುಂಚಿ ಅಗ್ರಹಾರ (ಮಾರು ಮನ ಬಳ ೫.)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ. ಕೃಷ್ಣಮೂರ್ತಿ,

ಸಂಚಾಲಕ

## ದಕ್ಷಿಣ ಕನ್ನಡ ಜಿಲ್ಲೆಯು ಮೈಸೂರಿಗೆ ಸೇರಲಿ

### ನೆಹರೂರವರಿಗೆ ಮದ್ರಾಸಿನ ಕನ್ನಡ ಶಾಸನ ಸಭಾಸದರ ಮನವಿ

ಮದರಾಸು ಶಾಸನ ಸಭೆಯ ಹಲವು ಕನ್ನಡ ಸದಸ್ಯರೂ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸದಸ್ಯರೂ ಪ್ರಧಾನಿ ಪಂಡಿತ ನೆಹರೂರವರಿಗೆ ಒಂದು ಮನವಿಯನ್ನು ಸಲ್ಲಿಸಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮದರಾಸು ಸರ್ಕಾರದವರು ಬಹಳ ಉದಾಸೀನದಿಂದಿರುವರೆಂದೂ, ಅಲ್ಲಿಗೆ ಯಾವ ಸೌಲಭ್ಯಗಳನ್ನೂ ಒದಗಿಸದೆ ಅವರ ಕೋರಿಕೆಗಳೆಲ್ಲವೂ ವ್ಯರ್ಥವಾಗುತ್ತಿರುವುವೆಂದೂ ತಿಳಿಸಿ, ಆದ ಕಾರಣ ಆ ಜಿಲ್ಲೆಯನ್ನು ಆಡಳಿತ ದೃಷ್ಟಿಯಿಂದಲೂ ಮತ್ತು ಕರ್ನಾಟಕ ಪ್ರಾಂತ್ಯ ರಚನೆಯು ಸುಲಭವಾಗಬೇಕೆಂಬ ಗುರಿಯಿಂದಲೂ, ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಕೋರಿರುವರು. ಮೈಸೂರಿನ ಗಡಿಯಲ್ಲಿರುವ ಕನ್ನಡ ಪ್ರದೇಶಗಳಾದ ಕೊಳ್ಳೇಗಾಲ ತಾಲ್ಲೂಕು, ಕೊಡಗು ಸಂಸ್ಥಾನ, ದಕ್ಷಿಣ ಕನ್ನಡ ಜಿಲ್ಲೆ, ನೀಲಗಿರಿ ಮತ್ತು ಮದರಾಸಿನ ಉತ್ತರ ಕನ್ನಡದ ಭಾಗಗಳನ್ನು ಮೈಸೂರಿಗೆ ಸೇರಿಸಬೇಕೆಂದು ವಿಶಾಲ ಮೈಸೂರು ಸಮಿತಿಯವರು ಕೋರಿರುವರು. ಇದರ ಪ್ರತಿಗಳನ್ನು ಮುದ್ರಿಸಿದ ಮುಖ್ಯಮಂತ್ರಿ ರಾಜಾಜಿ ಹಾಗೂ ಕೇಂದ್ರ ಸರ್ಕಾರದ ಗೃಹಮಂತ್ರಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ.

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|
| ಕಡಲೆಕಾಯಿ | [illegible] | [illegible] |
| ಎಳ್ಳು | [illegible] | |
| ಹರಳುಬೀಜ | [illegible] | [illegible] |
| ಹುಚ್ಚೆಳ್ಳು | [illegible] | [illegible] |
| ಹೊಂಗೇಬೀಜ | [illegible] | [illegible] |
| ಹುರುಳಿ | [illegible] | [illegible] |
| ಹೆಸರು | [illegible] | [illegible] |
| ಅವರೆ | [illegible] | |
| ಹಲಸಂದೆ | [illegible] | |
| ಉದ್ದು | [illegible] | |
| ಮೆಣಸಿನ | | |
| ಕಾಯಿ ಮೆಣಸು | [illegible] | [illegible] |
| ಸುಣ್ಣಕಲ್ಲು | [illegible] | [illegible] |
| ಸೀಗೇಕಾಯಿ | [illegible] | [illegible] |
| ಬೆಲ್ಲ | [illegible] | |
| ತೆಂಗಿನಕಾಯಿ | | |
| ೧,೦೦೦ಕ್ಕೆ | [illegible] | [illegible] |

SHRI GAYATHRI

TALKIES

From 7-4-53 For 2 Days

M G M's

THE UNKNOWN MAN

With Walter Pidgeon

Ann Harding

## ಹೆಚ್ಚು ಬೆಲೆ ಸಿಗರೇಟು, ಸಿಗಾರ್ ಮೇಲೆ ತೆರಿಗೆ

ಒಂದಕ್ಕೆ [illegible] ಕಾಸಿಗಿಂತಲೂ ಹೆಚ್ಚಿನ ಬೆಲೆಯುಳ್ಳ ಸಿಗರೇಟು ಮತ್ತು ೩ ಆಣೆಗೂ ಹೆಚ್ಚು ಬೆಲೆಯುಳ್ಳ ಸಿಗಾರುಗಳು ಮತ್ತು ಪೈಪು ಹೊಗೆಸೊಪ್ಪುಗಳ ಮೇಲೆ ಶೇ|| ೩೦ ರಷ್ಟು ವ್ಯಾಪಾರದ ತೆರಿಗೆಯನ್ನು ವಿಧಿಸಲಾಗುವುದೆಂದು ಮದ್ರಾಸು ಸರ್ಕಾರದವರು ತಿಳಿಸಿರುತ್ತಾರೆ. ಅಗಿಯುವ ಹೊಗೆಸೊಪ್ಪು, ಬೀಡಿ ಮತ್ತು ನಶ್ಯಗಳಿಗೆ ಯಾವ ತೆರಿಗೆಯೂ ಇರುವುದಿಲ್ಲ.

## ಸಾಗರದಾಚೆ

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮದ ಅ|| ಪ್ರೊಫೆಸರ್ ಶ್ರೀ ನಾಡಿಗ ಕೃಷ್ಣಮೂರ್ತಿಯವರಿಂದ ರಚಿಸಲ್ಪಟ್ಟು ಬೆಂಗಳೂರಿನ ಗೀತಾ ಸಾಹಿತ್ಯ ಮಂದಿರದವರಿಂದ ಪ್ರಕಟಿಸಲ್ಪಟ್ಟಿರುವ ಮೌಲ್ಯದ ಗ್ರಂಥವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಅಮೆರಿಕದಲ್ಲಿ ಪತ್ರಿಕೋದ್ಯಮದ ಶಿಕ್ಷಣಕ್ಕಾಗಿ ತಾವು ಮಾಡಿದ ಪ್ರವಾಸವನ್ನು ಅವರು ಅದರಲ್ಲಿ ಚಿತ್ರಿಸಿದ್ದಾರೆ. ಜೊತೆ ಬಾಯಿ ಸಿಂಪ ಹಡಗಿನಲ್ಲಿ ತಾವು ಮಾಡಿದ ಪ್ರಯಾಣ, ಮಾರ್ಗದ ಮಧ್ಯೆ ಅನೇಕ ದೇಶಗಳು ಅವುಗಳ ಸಂಸ್ಕೃತಿಯ ಸ್ಥೂಲ ವಿಮರ್ಶೆ, ಜನ ಜೀವನ ಪ್ರಕೃತಿ ಸೌಂದರ್ಯಗಳ ವಿವರಣೆ ವನಮೋಹಕವಾಗಿದೆ ಮತ್ತು ವಿದೇಶ ಪ್ರವಾಸ ಮಾಡಬೇಕೆಂಬ ಆಕಾಂಕ್ಷೆಯುಳ್ಳವರಿಗೆ ಮಾರ್ಗದರ್ಶಕವಾಗಿದೆ. ಅಮೆರಿಕದಲ್ಲಿ ತಮ್ಮ ವ್ಯಾಸಂಗ, ಅಲ್ಲಿನ ಜನ ಜೀವನ ಸಾಹಿತ್ಯ ಪ್ರಕಟಣೆಗಳ ಬಗ್ಗೆಯೂ ಮತ್ತು ಅಲ್ಲಿ ನೀಗ್ರೋ ಜನರ ಬಗ್ಗೆ ಬಿಳಿಯರು ತೋರುವ ತಾತ್ಸಾರ ಮನೋಭಾವವನ್ನೂ ವರ್ಣಿಸಿದ್ದಾರೆ. ಲೇಖಕರ ಸರಳ ಶೈಲಿಯು ಪುಸ್ತಕಕ್ಕೆ ಮೆರುಗು ಕೊಟ್ಟಿದೆ. ಪ್ರವಾಸಾನುಭವಗಳನ್ನು ತಿಳಿಯಬಯಸುವ ಪ್ರತಿಯೊಬ್ಬರೂ ಅಗತ್ಯವಾಗಿ ಓದಬೇಕಾದ ಪುಸ್ತಕ. ಸುಮಾರು ೩೦೦ ಪುಟಗಳ ಈ ಗ್ರಂಥದ ಬೆಲೆ ರೂ ೨-೮-೦.

## ನಾಯಿ ಕೆಮ್ಮಿಗೆ ಔಷಧ

(WHOOPING COUGH REMEDY)

ಗೂರಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಲಗ್ರಂಥಿಗಳಿಗೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು

Edited Printed and Published by S. R. Nagarajan at Sadhvi Press, D. Subbiah Road, Mysore

ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ೧೧೦ನೇ ನಂಬರಿನ ಮುನಿಸಿಪಲ್ ಮಾದರಿ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇವೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ಪೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಆಣೆ

# ಸಾಧ್ವಿ

ಸಂಪುಟ ೧೧ ] ಬುಧವಾರ ೮-೪-೧೯೫೩ [ ಸಂಚಿಕೆ ೨೮೪

# ಕಂಟೆಂಪ್ಟ್ ಮೊಕದ್ದಮೆ – ೩ ಶಿಕ್ಷಿತರ ಪರಾರಿ –

## ಕಂಟೆಂಪ್ಟ್ ಮೊಕದ್ದಮೆಯ ೩ ಅಪರಾಧಿಗಳ ಪರಾರಿ

ಬೆಂಗಳೂರು ೮

ರಾಮನಗರದ ಕಂಟೆಂಪ್ಟ್ ಆಫ್ ಕೋರ್ಟ್ ಪ್ರಕರಣದಲ್ಲಿ ೧ ತಿಂಗಳು ಸಾದಾ ಸಜಾ ಮತ್ತು ೨೫೦ ರೂ ಜುಲ್ಮಾನೆಗೆ ಗುರಿಯಾಗಿದ್ದ ೧೧ ನೇ ಅಪಾದಿತರಾದ ಅಬ್ದುಲ್ ಕರೀಂ ಮತ್ತು ಆದೇ ಶಿಕ್ಷೆ ವಿಧಿಸಲ್ಪಟ್ಟಿದ್ದ ೧೪ ನೇ ಆಪಾದಿತ ಶಿವಣ್ಣ ಮತ್ತು ೨ ತಿಂಗಳು ಸಾದಾ ಸಜಾ ಮತ್ತು ೩೦೦ ರೂ ಜುಲ್ಮಾನೆಗೆ ಗುರಿಯಾಗಿರುವ ೧೨ ನೇ ಆಪಾದಿತ ಚಿಕ್ಕನರಸಿಂಹಯ್ಯ ರೆಡ್ಡಿ ಎಂಬುವರುಗಳು ಈಗ ತಲೆ ತಪ್ಪಿಸಿಕೊಂಡು ಸಂಸ್ಥಾನದಿಂದ ಹೊರಕ್ಕೆ ಹೊರಟು ಹೋಗಿರುವರೆಂದು ಹೇಳಲಾಗಿದೆ

## ಉರಿಗಾಂ ಗಣಿ ಮೇಷ್ಠರಿಂದ ಮುಚ್ಚುವುದು

ಕೋಲಾರದಲ್ಲಿರುವ ಉರಿಗದ ಚಿನ್ನದ ಗಣಿಯನ್ನು ಇದೇ ೨೩ನೇ ತಾ॥ನಿಂದ ಮುಚ್ಚಲು ನಿರ್ಧರಿಸಲಾಗಿದ್ದರೂ ಅದರ ಬಗ್ಗೆ ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸಿರುವುದರಿಂದ ಆದರ ವರದಿಯು ಬರುವವರೆಗೆ ಮುಂದುವರಿಸಬೇಕೆಂದು ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸಿದ್ದರಿಂದ,ಒದಿವ ಮೇ ೩೧ನೇ ತಾರೀಕಿನವರೆಗೆ ಮುಚ್ಚಲು ನಿರ್ಧರಿಸಲಾಗಿದೆ ಇದರಿಂದ ೨,೬೦೦ ಜನ ಕಾರ್ಮಿಕರು ನಿರುದ್ಯೋಗಿಗಳಾಗುವರೆಂದು ಗೊತ್ತಾಗಿದೆ

## ಅಸಫ್ ಅಲಿಯವರ ಶವದ ಅಂತ್ಯ ಕ್ರಿಯೆ

ಸ್ವಿಟ್ಜರ್‌ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿದ್ದ ದಿವಂಗತ ಅಸಫ್ ಅಲಿಯವರ ಕಳೇಬರವನ್ನು ಮೊನ್ನೆ ದೆಹಲಿಗೆ ತಂದು ನೆನ್ನೆ ಸಮುಚಿತ ಗೌರವಗಳೊಡನೆ, ಅವರ ತಾಯಿಯ ಸಮಾಧಿ ಬಳಿ, ಅಂತ್ಯ ಕ್ರಿಯೆ ನಡೆಸಲಾಯಿತು

## ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸಲು ತಾಲ್ಲೂಕು ಜನರ ಮನವಿ

ಕೊಳ್ಳೇಗಾಲದ ತಾಲ್ಲೂಕು ಪ್ರಮುಖರ ಸಭೆಯು ಕಳೆದ ಭಾನುವಾರ ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೃಷ್ಣಯ್ಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಕೊಯಮತ್ತೂರು ಜಿಲ್ಲೆಯ ಏಕಮಾತ್ರ ಕನ್ನಡ ತಾಲ್ಲೂಕಾದ ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸಬೇಕೆಂದು ಸರ್ವಾನುಮತದ ನಿರ್ಣಯ ಮಾಡಲಾಯಿತು

## ರೇಷ್ಮೆ ಕಾರ್ಖಾನೆ ಕೆಲಸಗಾರರಿಂದ ಸಂಬಳದ ನಿರಾಕರಣೆ

ರಾಜಧಾನಿಯ ಸರ್ಕಾರಿ ರೇಷ್ಮೆ ಕಾರ್ಖಾನೆಯ ಅ ಡ ಳಿ ತ ವರ್ಗದವರು ಕೆಲವು ಕೆಲಸಗಾರರ ಪೂರ್ಣ ಸಂಬಳವನ್ನು ಹಿಡಿದಿರುವುದನ್ನು ಪ್ರತಿಭಟಿಸಲು ಕಾರ್ಖಾನೆಯ ಎಲ್ಲಾ ಕೆಲಸಗಾರರೂ ಈ ದಿನ ಸಂಬಳವನ್ನು ತೆಗೆದುಕೊಳ್ಳಲು ನಿರಾಕರಿಸಿ ಜನರಲ್ ಮ್ಯಾನೇಜರರ ವರ್ತನೆಯ ಬಗ್ಗೆ ಸತ್ಯಾಗ್ರಹ ಮುಂತಾದ ಕಾರ್ಯಕ್ರಮ ಕೈಗೊಳ್ಳಲು ನಿರ್ಧರಿಸಿರುವರೆಂದು ಗೊತ್ತಾಗಿದೆ

## ಬಳ್ಳಾರಿ ನಗರ ಆಂಧ್ರಕ್ಕೆ ಸೇರುವುದೇ ?

ಬೊಂಬಾಯಿ ರಾಜ್ಯ ವಿಧಾನ ಸಭೆಯ ೨೨ ಜನ ಕರ್ಣಾಟಕದ ಸದಸ್ಯರು ಕಾಂಗ್ರೆಸ್ ಅಧ್ಯಕ್ಷರಾದ ಪಂ ಡಿತ ನೆಹರೂರವರಿಗೆ ಪತ್ರವೊಂದನ್ನು ಬರೆದು ಆಂಧ್ರ ಪ್ರಾಂತದ ನಿರ್ಮಾಣದ ಬಗ್ಗೆ ಪ್ರಧಾನಿಯವರು ಮಾಡಿರುವ ಘೋಷಣೆಯು ಜೆ ವಿ ಪಿ ವರದಿಯ ಮುಖ್ಯ ತತ್ವಕ್ಕೆ ವಿರೋಧವಾಗಿರುವುದೆಂದು ತಿಳಿಸಿರುವರು

ಕನ್ನಡ ಭಾಗದ ಹಿರಿಯರುಗಳ ಮಧ್ಯೆ ವಿಚಾರಣೆಯೊಂದನ್ನು ಏರ್ಪಡಿಸಿ ಆ ಮೂಲಕ ಆಂಧ್ರ ಪ್ರಾಂತಕ್ಕೆ ಬಳ್ಳಾರಿ ನಗರವನ್ನು ಸೇರಿಸುವ ಪ್ರಯತ್ನಗಳಾಗುತ್ತಿರುವುವೆಂದೂ, ಮದ್ರಾಸು ನಗರವು ಆಂಧ್ರದ ಕೈಬಿಟ್ಟುಹೋದಮೇಲೆ ಅವರನ್ನು ಸಂತೈಸಲು ಈ ರೀತಿ ಮಾಡಲಾಗುತ್ತಿರುವುದೆಂದೂ ಅವರುಗಳು ಹೇಳಿರುತ್ತಾರೆ ರಾಯದುರ್ಗ ಆದವಾನಿ ಮತ್ತು ಆಲೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಿರುವ ಬಗ್ಗೆಯೂ ಅವರು ಆಕ್ಷೇಪಿಸಿರುತ್ತಾರೆ ಬಳ್ಳಾರಿ, ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳ ಭವಿಷ್ಯವನ್ನು ನಿರ್ಧರಿಸಲು ಒಂದು ಗಡಿ ಸಮಿತಿಯನ್ನು ರಚಿಸಬೇಕೆಂದೂ, ಅದರ ತೀರ್ಮಾನಕ್ಕೆ ಕನ್ನಡಿಗರು ಬದ್ಧರಾಗುವರೆಂದೂ ಅವರು ತಿಳಿಸಿರುತ್ತಾರೆ

ಬಳ್ಳಾರಿ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಅವರು ಪ್ರಾರ್ಥಿಸಿದ್ದಾರೆ

## ಮದ್ರಾಸು ಶಾಸನ ಸಭೆಗೆ ಟಿ. ಪ್ರಕಾಶಂ

ಆಂಧ್ರ ಪ್ರಾಂತ್ಯದ ರಚನೆ ಸಂಬಂಧವಾಗಿ ಕಳೆದ ಡಿಸೆಂಬರಿನಲ್ಲಿ ಮದರಾಸು ಶಾಸನ ಸಭೆಗೆ ರಾಜೀನಾಮೆಯಿತ್ತು ವಿರಾಮವಾಗಿದ್ದ ೫ ಸದಸ್ಯರ ಸ್ಥಾನಗಳಿಗೆ ಮರುಚುನಾವಣೆ ನಡೆಯಲು ಏರ್ಪಾಡಾಗಿ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಪರವಾಗಿ ಶ್ರೀ ಟಿ ಪ್ರಕಾಶಂ ಮತ್ತು ಇತರ ೪ ಜನರು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿದ್ದರು ಅವರ ವಿರೋಧವಾಗಿ ಬೇರೆ ಸ್ವತಂತ್ರರು ಮಾತ್ರ ಅರ್ಜಿ ಸಲ್ಲಿಸಿದ್ದರಿಂದ ಶ್ರೀ ಟಿ ಪ್ರಕಾಶಂ ಮತ್ತು ಇತರ ೪ ಜನರು ಚುನಾಯಿತರಾಗಿ ಉಳಿದ ಒಂದು ಸ್ಥಾನಕ್ಕೆ ಸ್ಪರ್ಧೆ ನಡೆಯಲಿರುವುದೆಂದು ಗೊತ್ತಾಗಿದೆ

## ರಾಮನಗರದ ಜಡ್ಜರ ಬಗ್ಗೆ ದೂರು

### ಶಾಸನ ಸಭೆಯಲ್ಲಿ ಪ್ರಶ್ನೋತ್ತರಕ್ಕೆ ಅವಕಾಶವಿಲ್ಲ

ಸ್ವಂ ಸು ಫೋ॥] [ಬೆಂಗಳೂರು ೮

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಎಂ ವಿ ರಾಮರಾಯರು ರಾಮನಗರದ ನ್ಯಾಯಾಧೀಶರ ಬಗ್ಗೆ ಸರ್ಕಾರಕ್ಕೆ ದೂರು ಬಂದಿರುವುದೇ ಎಂದು ಕೇಳಲು ಸಭಾಧ್ಯಕ್ಷರು ಆ ವಿಷಯಕ್ಕೆ ಸಂಬಂಧಿಸಿದಂತೆ ಹೈಕೋರ್ಟಿನಲ್ಲಿ ಮೊಕದ್ದಮೆಯಿರುವುದಾಗಿ ತಿಳಿಸಿ, ಆರ್ಜಿಗೆ ಅವಕಾಶ ಕೊಡಲಿಲ್ಲ

ಮಾಸಿಗ ಶಾಲೆಗಳಿಂದ ಶಿಕ್ಷಕರು ಪಡೆದು ತೆಗೆದುಕೊಳ್ಳುವ ಹಣದ ಬಗ್ಗೆ ಕೂಡಲಾಗುತ್ತಿರುವ ೧೯೫೩ ಬಡ್ತಿ ವರವನ್ನು ಹೆಚ್ಚಿಸುವ ವಿಷಯವನ್ನು ಪರ್ಯಾಲೋಚಿಸಲಾಗುವುದೆಂದು ತಿಳಿಸಲಾಯಿತು

## ನೆಹರೂ ಕರಾಚಿಗೆ ಹೊರಟರೆ ಕಪ್ಪು ಬಾವುಟದ ಪ್ರದರ್ಶನ

ಭಾರತ ಪಾಕಿಸ್ತಾನದ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರು ಪಂಡಿತ ನೆಹರೂರವರಿಗೆ ಇತ್ತಿರುವ ಆಹ್ವಾನದ ಬಗ್ಗೆ ಅಖಿಲ ಭಾರತ ಹಿಂದೂ ರಾಷ್ಟ್ರ ಪಕ್ಷದ ನಾಯಕರಾದ ಶ್ರೀ ಎಲ್ ಬಿ ಭೋಪಟ್ಕರ್‌ರವರು ಹೇಳಿಕೆಯೊಂದನ್ನಿತ್ತು ನಾಜಿಮುದ್ದೀನರು ಸ್ನೇಹಭಾವದಿಂದ ಮಾತುಕತೆ ನಡೆಸುವುದಾಗಿ ಭರವಸೆ ಕೊಟ್ಟರ ನೆಹರೂರವರು ಅವರ ಆಹ್ವಾನವನ್ನು ಅಂಗೀಕರಿಸಬಹುದೆಂದೂ ಇಲ್ಲವಾದರೆ ಅವರು ಹೋಗಬಾರದೆಂದೂ ತಿಳಿಸಿರುವರು ಮೇಲ್ಕಂಡ ಭರವಸೆಯನ್ನು ಪಡೆಯದೆ ನೆಹರೂರವರು ಕರಾಚಿಗೆ ತೆರಳಿದರೆ ತಾವು ಕಪ್ಪು ಬಾವುಟ ಪ್ರದರ್ಶಿಸುವುದಾಗಿಯೂ ಅವರು ಹೇಳಿರುತ್ತಾರೆ

○ ಕಾಶ್ಮೀರದಲ್ಲಿ ಅಧಿಕಾರಿಗಳು ಹೊಂದಿರುವ ಚರ ಮತ್ತು ಸ್ಥಿರ ಆಸ್ತಿಗಳ ಪಟ್ಟಿಯನ್ನು ಒದಗಿಸುವಂತೆ ಅಲ್ಲಿನ ಎಲ್ಲ ಗೆಜೆಟೆಡ್ ನೌಕರರಿಗೂ ಸೂಚಿಸಿದ್ದ ಪ್ರಕಾರ ಅವರು ಪಟ್ಟಿಗಳನ್ನು ಕೊಟ್ಟಿರುತ್ತಾರೆ ಲಂಚ ನಿರೋಧದ ಕ್ರಮದ ಅಂಗವಾಗಿ ಈ ರೀತಿ ಆಜ್ಞೆ ಮಾಡಲಾಗಿತ್ತು ಅವನ್ನು ಪರಿಶೀಲಿಸಲಾಗುತ್ತಿದೆ

## ಬಳ್ಳಾರಿ ಭವಿಷ್ಯದ ಬಗ್ಗೆ ಮಾಸಾಂತ್ಯದಲ್ಲಿ ನಿರ್ಧಾರ

### ಶಾಸನ ಸಭೆಯಲ್ಲಿ ನ್ಯಾಯಾಂಗ ಸಚಿವರ ಹೇಳಿಕೆ

ಸ್ವಂ ಸು ಫೋ॥ ] ಬೆಂಗಳೂರು ೮

ಈ ದಿನ ಕಿರಿಯ ಶಾಸನ ಸಭೆಯಲ್ಲಿ ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಬಳ್ಳಾರಿ ಜಿಲ್ಲೆಯ ಬಗ್ಗೆ ಭಾರತ ಸರ್ಕಾರದವರು ಈ ತಿಂಗಳು ಅಂತ್ಯದೊಳಗೆ ಅಂತ್ಯ ನಿರ್ಧಾರವನ್ನು ಕೈಗೊಳ್ಳುತ್ತಿರುವರೆಂದು ತಿಳಿಸಿದರು

ಪಾನ ನಿರೋಧವನ್ನು ರದ್ದುಗೊಳಿಸಬೇಕೆಂದು ಶ್ರೀ ಸ್ವಾಮಿಗೌಡರು ತಂದ ನಿರ್ಣಯವು ಈ ದಿನ ಚರ್ಚೆಗೆ ಬಂದು ಕೊನೆಗೆ ಬಿದ್ದುಹೋಯಿತು ಆ ವ್ಯಾಪ್ತಿ ಸಚಿವ ಶ್ರೀ ಚನ್ನಪ್ಪನವರು ಉತ್ತರವಿತ್ತು, ಪಾನ ನಿರೋಧವನ್ನು ಉಳಿದ ಜಿಲ್ಲೆಗಳಿಗೆ ವಿಸ್ತರಿಸುವುದಿಲ್ಲವೆಂದೂ, ಇದರಿಂದ ಸರ್ಕಾರಕ್ಕೆ ೨೫೦ ಲಕ್ಷ ರೂ ನಷ್ಟವಾಗುವುದೆಂದೂ, ಹಾಗೆ ಜಾರಿಗೆ ಕೊಡುವುದಕ್ಕೆ ಮುಂಚೆ ಜನರ ಬೆಂಬಲ ಬೇಕೆಂದೂ ತಿಳಿಸಿ, ಬೊಂಬಾಯಿಯಲ್ಲಿ ಈಚೆಗೆ ಈ ಬಗ್ಗೆ ಬಲವಾದ ಶಾಸನವನ್ನು ಮಾಡಿ, ಅಪರಾಧಿಗಳನ್ನು ಕ್ರೂರ ದಂಡನೆಗೆ ಗುರಿಮಾಡಿರುವಂತೆ ಇಲ್ಲಿಯೂ ಶಾಸನ ಮಾಡಿ, ಪಾನ ನಿರೋಧದ ಅಧಿಕಾರಿಗಳಿಗೆ ಬಹುಮಾನವೀಯುವ ಏರ್ಪಾಡು ಮಾಡಲಾಗುವುದೆಂದು ತಿಳಿಸಿದರು

## ಕ್ಯಾಲನೂರು ಗಲಭೆ ಬಗ್ಗೆ ೩೦ ಜನರ ದಸ್ತಗಿರಿ

ಕೋಲಾರದ ಕ್ಯಾಲನೂರು ಹಳ್ಳಿಯಲ್ಲಿ ಕಳೆದ ಶುಕ್ರವಾರ ನಡೆದ ಕೋಮುವಾರು ಗಲಭೆ ಸಂಬಂಧವಾಗಿ ಅಲ್ಲಿನ ತಾಲ್ಲೂಕು ಪೋಲೀಸರು ೩೦ ಜನರನ್ನು ದಸ್ತಗಿರಿ ಮಾಡಿರುತ್ತಾರೆ ಅವರನ್ನು ಜಾಮೀನಿನ ಮೇಲೆ ಬಿಡಲಾಗಿದೆ ಅವರುಗಳ ಮೇಲೆ ಮೊಕದ್ದಮೆ ಹೂಡಲಾಗುವುದು ಅಲ್ಲಿ ಶಾಂತಿ ಕಾಪಾಡಲು ಒಂದಿಬ್ಬರು ೨೦ ಜನರುಳ್ಳ ಶಾಂತಿ ಸಮಿತಿಯೊಂದನ್ನು ಏರ್ಪಡಿಸಲಾಗಿದೆ

○ ಹಳೇ ದೆಹಲಿಯ ಸರ್ದಾರ್ ಬಜಾರ್ ಪೋಲೀಸ್ ಸ್ಟೇಷನ್ ಬಳಿ ಒಂದು ರಸ್ತೆಯಲ್ಲಿ ಮೊನ್ನೆ ಸಂಜೆ ಒಂದು ಅಂಗಡಿಯಲ್ಲಿ ಬೆಂಕಿಯುಂಟಾಗಿ ಅದು ಅಕ್ಕಪಕ್ಕದ ೧೧ ಅಂಗಡಿಗಳಿಗೆ ಹರಡಿ ಎಲ್ಲವೂ ಸುಟ್ಟು ಭಸ್ಮವಾಯಿತು

## ಆರ್. ಎಂ. ಡಿ. ಸಿ. ಯವರ ಮೇಲೆ ದೂರು

### ತನಿಖೆ ನಡೆಯುತ್ತಿರುವುದಾಗಿ ಮಂತ್ರಿಗಳ ಹೇಳಿಕೆ

ಸ್ವಂ ಸು. ಫೋ॥] ಬೆಂಗಳೂರು ೮

ಹಿರಿಯ ಶಾಸನ ಸಭೆಯಲ್ಲಿ ಶ್ರೀ ಎಸ್ ಆರ್ ಗುರುರವರ ಪ್ರಶ್ನೆಗೆ ಉತ್ತರವಾಗಿ ಶ್ರೀ ಸಿದ್ದವೀರಪ್ಪನವರು ಆರ್ ಎಂ ಡಿ ಸಿ ಸ್ಪರ್ಧೆಯಿಂದ ಸರ್ಕಾರಕ್ಕೆ ೪೦ ಸಾವಿರ ರೂ ಹಣ ಬಂದಿರುವುದಾಗಿಯೂ, ಈ ಸಂಸ್ಥೆ ವಿಷಯವಾಗಿ ಸರ್ಕಾರಕ್ಕೆ ಹಲವಾರು ದೂರುಗಳು ಬಂದು ಅವುಗಳನ್ನು ಪೋಲೀಸರು ತನಿಖೆ ನಡೆಸುತ್ತಿರುವರೆಂದೂ ತಿಳಿಸಿದರು

## ಮರಗಳ ಇನಾಂಗಳೂ ರದ್ದಾಗಲಿ

### ಶಾಸನ ಸಭೆಯಲ್ಲಿ ಸದಸ್ಯರ ಒತ್ತಾಯ

ಬೆಂಗಳೂರು — ನೆನ್ನೆ ಕಿರಿಯ ಶಾಸನ ಸಭೆಯಲ್ಲಿ ಇನಾಂಗಳ ರದ್ದಿನ ಮಸೂದೆಯ ಮೇಲೆ ಚರ್ಚೆ ನಡೆದಾಗ ಹಲವು ಸದಸ್ಯರು ಮಠ ಮತ್ತು ಧಾರ್ಮಿಕ ಇನಾಂಗಳನ್ನು ಮಸೂದೆಯಲ್ಲಿ ಅಡಕಗೊಳಿಸಬೇಕೆಂದು ಒತ್ತಾಯ ಪಡಿಸಿದರು. ಸಭಾಧ್ಯಕ್ಷರು ಮಾತನಾಡಿ, ಈ ಬಗ್ಗೆ ತಪ್ಪು ಸೂಕ್ಷ್ಮವಾಗಿ ಪರ್ಯಾಲೋಚಿಸಿ ಅವನ್ನು ಧಾರ್ಮಿಕ ಇನಾಂಗಳಿಗೆ ಅನ್ವಯಿಸುವುದರ ಬಗ್ಗೆ ಮಸೂದೆಗೆ ಸೂಕ್ತ ನಿಬಂಧನೆಗಳನ್ನು ಈಗ ಸೇರಿಸಲು ಅವಕಾಶವಿರುವುದೇ ಎಂಬುದನ್ನು ಕುರಿತು ಸಧ್ಯದಲ್ಲೇ ರೂಲಿಂಗ್ ಕೊಡುವುದಾಗಿ ತಿಳಿಸಿದರು.

### ಮಂತ್ರಿಗಳ ಸಂಬಳ ಮತ್ತು ತುಟ್ಟಿ ಭತ್ಯದ ಬಗ್ಗೆ ಪ್ರಶ್ನೋತ್ತರ

[illegible]

## ಪಾಕಿಸ್ಥಾನದಲ್ಲಿ ಬಟ್ಟೆ ರೇಷನಿಂಗ್ ಜಾರಿ

ಪಾಕಿಸ್ಥಾನದಲ್ಲಿ ಬಟ್ಟೆಯ ರೇಷನಿಂಗ್ ಕ್ರಮವನ್ನು ಜಾರಿ ತರಲು ಅಲ್ಲಿನ ಸರ್ಕಾರದವರು ಆಲೋಚಿಸುತ್ತಿರುವರೆಂದು ಗೊತ್ತಾಗಿದೆ.

### ವಕೀಲರ ಸಂಘದ ಅಧಿಕಾರ ವರ್ಗ

ಮೈಸೂರು ವಕೀಲರ ಸಂಘದ [illegible] ನೇ ವಾರ್ಷಿಕ ಅಧಿವೇಶನವು ಕಳೆದ ವಾರ ನಡೆದು [illegible] ಶ್ರೀ [illegible]

[illegible]

## ಮಧ್ಯ ಚೀಣಾದಲ್ಲಿ ನೀರಿನ ಕ್ಷಾಮ

ಮಧ್ಯ ಚೀಣಾದ [illegible] ಯಂಥ ಪ್ರದೇಶದಲ್ಲಿ ನೀರಿನ ಕ್ಷಾಮವು ಭಯಂಕರ ಪರಿಸ್ಥಿತಿಯು ಏರ್ಪಡುಗೊಂಡಿರುವುದೆಂದು ವರದಿಯಾಗಿದೆ. ಕಳೆದ ಸೆಪ್ಟೆಂಬರ್ ನಿಂದ ಮಾರ್ಚಿ ಮಧ್ಯದವರೆಗೆ [illegible] ಅಂಗುಲವಷ್ಟು ಮಳೆಯಾಗಿರುವುದು. ಇದರಿಂದ ಬೆಳೆಯ ಬೆಳೆಗೆ ತೊಂದರೆಯಾಗಿದೆ.

## ಚೀಣಾ ಕೋಟ್ಯಾಧೀಶನ ಅಪಹಾರ

ಬರ್ಮಾ ದಂಗೆಕೋರರು ರಂಗೂನಿಗೆ [illegible]೦೦ ಮೈಲಿ ದೂರದಲ್ಲಿರುವ ಒಂದು ಊರಿನಲ್ಲಿ ಚೀಣದ ಕೋಟ್ಯಾಧೀಶನನ್ನು ಅಪಹರಿಸಿ ಅವನನ್ನು ಬಿಡುಗಡೆ ಮಾಡಲು [illegible] ಲಕ್ಷ ರೂ. ಕೊಡುವಂತೆ ಕೇಳುತ್ತಿದ್ದಾರೆ.

## ಭಾರತೀಯ ರಾಯಭಾರಿಗೆ ಚೀಣಾ ಮನ್ನಣೆಯಿಲ್ಲ

[illegible]

### ಕ್ವಾಲಿಟಿ ನಿನ ಗುಂಡಿನೇಟಿನ ಬಗ್ಗೆ ನಿಲುವಳಿ ಸೂಚನೆ

ಕೋಲಾರದ ಕ್ವಾಲಿಟಿನಲ್ಲಿ ನಡೆದ ಪೋಲೀಸ್ ಗೋಲೀಬಾರಿನ ಬಗ್ಗೆ ಕಿರಿಯ ಶಾಸನ ಸಭೆಯಲ್ಲಿ ಶ್ರೀ [illegible] ಅವರು ನಿಲುವಳಿ ಸೂಚನೆಯೊಂದನ್ನು ತಂದಾಗ ಗೃಹ ಸಚಿವರು ವಿವರಣೆ [illegible]

[illegible]

## ನಾಯಿ ಕಚ್ಚಿಗೆ ಔಷಧ

(RELIEVES ... OF ... REMEDY)

[illegible] ಮತ್ತು (TONSIL) [illegible] ಪ್ರಖ್ಯಾತ ವಿದ್ಯೆಯ ಔಷಧಿ ದೊರೆಯುತ್ತದೆ. ಅನೇಕ ಜನರು ಮುನಿಸಿಪಲ್ ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ. ಒಳಿ [illegible] 8-0

ಆರ್ ಎಸ್ ಗಂಡಿತರು
ರಾಮಚಂದ್ರ [illegible] ವೈದ್ಯಶಾಲೆ
ದಿವಾನರ ರಸ್ತೆ, ಮೈಸೂರು

## ಭಾರತದ ಬಗ್ಗೆ ಅಪಪ್ರಚಾರ

ಭಾರತ ಮತ್ತು ಪಾಕಿಸ್ಥಾನಗಳ ಕಾಲುವೆ ನೀರಿನ ವಿವಾದವನ್ನು ಕುರಿತ ಅಮೆರಿಕದಲ್ಲಿ ಭಾರತದ ಬಗ್ಗೆ ತಪ್ಪು ಭಾವನೆಗಳನ್ನುಂಟುಮಾಡಲು ಅಲ್ಲಿ ಪಾಕಿಸ್ತಾನವು ನಡೆಸುತ್ತಿರುವ ಅಪ ಪ್ರಚಾರಕ್ಕೆ ಅಮೆರಿಕದ ಪತ್ರಿಕೆಗಳು ಬೆಂಬಲ ಕೊಡುತ್ತಿರುವುವೆಂದೂ, ಈ ಬಗ್ಗೆ ನಿಜವಾದ ಸ್ಥಿತಿಯನ್ನು ಭಾರತವು ತಿಳಿಸುತ್ತಿದ್ದರೂ ಅದು ಪ್ರಚಾರವನ್ನು ಪಡೆಯುತ್ತಿಲ್ಲವೆಂದೂ ಕೇಳಲಾಗಿದೆ.

### ಮಾಧ್ಯಮಿಕ ತರಗತಿಗಳಲ್ಲಿ ಸಹ ವಿದ್ಯಾಭ್ಯಾಸಕ್ಕೆ ವಿರೋಧ

ಮಾಧ್ಯಮಿಕ ತರಗತಿಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಟ್ಟಿಗೆ ಅಭ್ಯಾಸ ಮಾಡುವುದು ಕೂಡದೆಂದು [illegible] ರನ್ನು ಶ್ರೀ [illegible] ಅಭಿಪ್ರಾಯ ಪಟ್ಟಿರುವುದಾಗಿ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ನೊನ್ನೆ ಕಿರಿಯ ಶಾಸನ ಸಭೆಯಲ್ಲಿ ವಿದ್ಯಾ ಸುಧಾರಣಾ ಸಮಿತಿಯ ವರದಿಯ ಚರ್ಚೆ ಸಂಬಂಧದಲ್ಲಿ ಮಾತನಾಡುತ್ತಾ ತಿಳಿಸಿದರು. [illegible]

ಶ್ರೀ ಎಂ. ಶಂಕರಯ್ಯನವರು ಮಾತನಾಡಿ ಸಂಸ್ಕೃತ ಪಾಠಶಾಲೆಗಳನ್ನು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಡಿಸಬೇಕೆಂದು ಸಲಹೆ ಮಾಡಿದರು.

### ಉಪನಯನ

ರಾಜವೈದ್ಯರ ದಿವಾನರ ರಸ್ತೆಯಲ್ಲಿ ಇರುವ ವೆಲ್‌ಕಂ ಏಜೆನ್ಸಿ ನ ಮಾಲೀಕರಾದ ಶ್ರೀ ಕೆ. ಮಂಜುನಾಥಯ್ಯನವರು ತಮ್ಮ ಪುತ್ರ ಚಿ|| ಶಂಕರನಾರಾಯಣನ ಉಪನಯನ ಮಹೋತ್ಸವವನ್ನು ಈ ದಿನ ಗೊಲ್ಲಗೇರಿಯಲ್ಲಿರುವ ತಮ್ಮ ಗೃಹದಲ್ಲಿ ನೆರವೇರಿಸಿದರು.

## ಶ್ರೀ ರಮಣ ಸಂಗೀತ ವಿದ್ಯಾಲಯ

1064—1 ಆ ಮಾರ್ಕೆಟ್ ರಸ್ತೆ
(ಚಿ [illegible] ಎದುರು)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು [illegible] ವ್ಯವಸ್ಥೆ ಮಾಡಲಾಗಿದೆ.

ಎ. ಕೃಷ್ಣಮೂರ್ತಿ,
ಸಂಚಾಲಕ

Edited Printed and Published by A R Nagarajan at Sadhvi Press, D Subbaiah Road Mysore

## ಮೈಸೂರು ಪೇಟೆ ಧಾರಣೆ

| ಪಲ್ಲಕ್ಕೆ | ರೂ ಆಣೆ | ರೂ ಆ |
|---|---|---|
| ಕಡಲೆಕಾಯಿ | [illegible] | [illegible] |
| ಕಡಲೆಕಾಯಿ ಬೀಜ | [illegible] | |
| ಎಳ್ಳು | [illegible] | |
| ಹರಳುಬೀಜ | [illegible] | |
| ಹುಚ್ಚೆಳ್ಳು | [illegible] | [illegible] |
| ಹೊಂಗೆಬೀಜ | [illegible] | [illegible] |
| ಹುರುಳಿ | [illegible] | [illegible] |
| ಅವರೆ | [illegible] | [illegible] |
| ಅವರೆ | [illegible] | |
| ಹಲಸಂದೆ | [illegible] | |
| ಉದ್ದು | [illegible] | |
| ಮೆಣಸಿನ | | |
| ಕಾಯಿ ಮಂಡಕ್ಕೆ | [illegible] | [illegible] |
| [illegible] | [illegible] | [illegible] |
| ಬೆಳ್ಳುಳ್ಳಿ | [illegible] | [illegible] |
| ಬೆಲ್ಲ | [illegible] | |
| ತೆಂಗಿನಕಾಯಿ | | |
| ಸಾವಿರಕ್ಕೆ | [illegible] | [illegible] |

Saradavilas Intermediate College Mysore

**SARADA VILAS COLLEGE, MYSORE**

# TENDER NOTIFICATION

No 413 Dated 7th April 1953

Sealed tenders will be received at the office of the Hon Secretary Sarada Vilas College Mysore, upto 3 P M on 20th April 1953 for the work of constructing the Laboratories and class rooms of the B Sc class of Sarada Vilas College Mysore, at an estimated cost of Rs 70,000/- for which earnest money deposit of Rs [illegible],000/- is required to be credited to the current account of Sarada Vilas Intermediate College at the Bank of Mysore Ltd Market Sub branch, Mysore and the challan presented with the tender.

The plan and estimate are kept in the office for inspection and copies thereof would be supplied on payment of their cost on all working days between 11 A M and 5 P M

Hon Secretary,
Sarada Vilas College Mysore

## ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ 65ನೇ ನಂಬರಿನ ಮುಖಿಸಿ ಪಲ್ ನಾರದರ ಮನೆ ನಲ್ಲಿ, ದೀಪ, ಫ್ಲಷಿಂಗ್ ಮತ್ತು ಕಾಂಪೌಂಡು ಇದೆ ಬೆಲೆ ಸುಮಾರು 5,000 ರೂ

ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

ರಿ।। ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಗುರುವಾರ ೯-೪-೧೯೫೩ [ ಸಂಚಿಕೆ ೨೦೮

# ಕೆನ್ಯಾ ನಾಯಕರಿಗೆ ೭ ವರ್ಷ ಕಠಿಣ ಸಜಾ

## ಆರ್.ಎಂ.ಡಿ.ಸಿ. ಯವರಿಗೆ ತೆರಿಗೆ ರಿಯಾಯಿತಿ

### ಪ್ರಶ್ನೆಗಳಿಗೆ ಸಚಿವರ ಉತ್ತರ

ಬೆಂಗಳೂರು ೯

[illegible] ಆರ್. ಎಂ. ಡಿ. ಸಿ. ಸ್ಪರ್ಧೆ ವಿಷಯ [illegible] ಉತ್ತರವಿತ್ತರು [illegible]

ಶ್ರೀ [illegible] ಪ್ರಶ್ನೆಗೆ ಉತ್ತರವಾಗಿ, ಸ್ಪರ್ಧೆಯ [illegible] ತೆರಿಗೆ ರಿಯಾಯಿತಿಯನ್ನು [illegible]

ಸಂಸ್ಥೆಯ ಉದ್ಯೋಗಿಗಳ ವಿಷಯದಲ್ಲಿ [illegible] ಪ್ರಶ್ನೆಗೆ ಉತ್ತರ ಬಂದಿತು

[illegible] ಸ್ಪರ್ಧೆಗಳಿಗೆ [illegible]

ಪ್ರ – [illegible]

ಉ – [illegible]

ಪ್ರ – [illegible] ತೆರಿಗೆ [illegible]?

ಉ – ನೋಡಬೇಕು

ಪ್ರ – [illegible] ಆರ್. ಎಂ. ಡಿ. ಸಿ. ಸ್ಪರ್ಧೆ [illegible]

ಉ – [illegible]

ಸ್ಪರ್ಧೆ [illegible]

ಪ್ರ – ಈ ಸ್ಪರ್ಧೆಗಳ ಬಗ್ಗೆ [illegible]

ಉ – [illegible]

## [illegible] ದಿಂದ ಪುನಃ ಕಿರಿಯ ಶಾಸನ ಸಭೆ

ಮೈಸೂರಿನ ಕಿರಿಯ ಶಾಸನ ಸಭೆ [illegible] ಪುನಃ [illegible] ಸೇರಲಿದೆ. [illegible] ಬಳ್ಳಾರಿಯ ತಾಲ್ಲೂಕುಗಳ [illegible] ವಿಷಯಗಳನ್ನು ಚರ್ಚಿಸಲಾಗುವುದು

## ಸಂಬಳದ ಮೇಲೆ ಗ್ರಾಮಾಧಿಕಾರಿಗಳ ನೇಮಕ

[illegible] ನೌಕರರಿಗೆ [illegible] ಸಂಬಳದ ವ್ಯವಸ್ಥೆಯನ್ನು ಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಕಿರಿಯ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ

## ಡಿ. ಪುಟ್ಟಯ್ಯನವರ ನಿಧನ

ಮೈಸೂರು ೯

ರಾಜಧಾನಿಯ ಪ್ರಸಿದ್ಧ ವರ್ತಕರೂ ಸಂಸ್ಥಾನದ ಲೆಜಿಸ್ಲೆಟಿವ್ ಕೌನ್ಸಿಲಿನ ಮಾಜಿ ಸದಸ್ಯರೂ ಆದ ಶ್ರೀ ಡಿ. ಪುಟ್ಟಯ್ಯನವರು ಈ ದಿನ ಬೆಳಿಗ್ಗೆ ಹೃದಯ ರೋಗದಿಂದ ನಿಧನರಾದರೆಂದು ತಿಳಿಯಲು ವಿಷಾದಿಸುತ್ತೇವೆ. ಅವರು ಹಲವು ದಿನಗಳಿಂದಲೂ ರೋಗಪೀಡಿತರಾಗಿದ್ದರು. ಅವರಿಗೆ ೫೬ ವರ್ಷ ವಯಸ್ಸಾಗಿದ್ದಿತು. ಮೃತರು ಹಲವಾರು ಧರ್ಮಕಾರ್ಯಗಳನ್ನು ನಡೆಸಿದ್ದರು. ಅವರಿಗೆ ಧರ್ಮಪ್ರವರ್ತಕರೆಂಬ ಬಿರುದು ಬಂದಿದ್ದಿತು

## ಉಪಾಧ್ಯಾಯರುಗಳ ಕಾಲೇಜಿನ ಪ್ರಿನ್ಸಿಪಾಲ್

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎ. ಸಿ. ದೇವೇಗೌಡರು ವಿದೇಶಕ್ಕೆ ಪ್ರಯಾಣ ಹೊರಟಿರುವದರಿಂದ ಅವರ ಸ್ಥಾನಕ್ಕೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀ ಸಿ. ರಂಗಾಚಾರ್ಯರನ್ನು ನೇಮಿಸುವ ಸಂಭವವಿರುವುದಾಗಿ ತಿಳಿದುಬಂದಿದೆ. ಶ್ರೀ ಕೆ. ಎ. ದೊರೆಸ್ವಾಮಿಯವರು ತಾತ್ಕಾಲಿಕವಾಗಿ ಪ್ರಿನ್ಸಿಪಾಲರಾಗಿರುವರು

## ಕೆನ್ಯಾ ಮುಖಂಡರಿಗೆ ೭ ವರ್ಷ ಶಿಕ್ಷೆ

ಕೆನ್ಯಾ ನೀಗ್ರೋ ಮುಖಂಡರಾದ ಜೊಮೊ ಕೆನ್ಯಾಟರವರು ಅಲ್ಲಿನ ಮೌಮೌ ದಂಗೆಕೋರರ ಗುಂಪಿನಲ್ಲಿ ಒಬ್ಬರಾಗಿದ್ದುಕೊಂಡು ಅವರ ಚಳವಳಿಯನ್ನು ವ್ಯವಸ್ಥೆ ಮಾಡುತ್ತಿದ್ದರೆಂದು ಅವರಿಗೆ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಅವರ ಐದು ಜನ ಸಹೋದ್ಯೋಗಿಗಳಿಗೂ ಅದೇ ರೀತಿ ಶಿಕ್ಷೆ ವಿಧಿಸಲಾಗಿದೆ

## ಬಳ್ಳಾರಿ ಜಿಲ್ಲಾ ಬೋರ್ಡಿನ ೧೯ ಸದಸ್ಯರ ರಾಜೀನಾಮೆ

ಬಳ್ಳಾರಿ ಜಿಲ್ಲೆಯನ್ನು ವಿಭಾಗ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಲು ಅಲ್ಲಿನ ಜಿಲ್ಲಾ ಬೋರ್ಡಿನ ೧೯ ಸದಸ್ಯರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಮೊನ್ನೆ ನಡೆದ ಬೋರ್ಡಿನ ಸಭೆಯಲ್ಲಿ ಜಿಲ್ಲೆಯನ್ನು ವಿಭಾಗಿಸುವ ಬಗ್ಗೆ ಪ್ರತಿಭಟನಾ ನಿರ್ಣಯ ಮಾಡಲಾಯಿತು

## ೧೮೦ ಎಕರೆ ಜಮೀನು ಹೊಂದಲವಕಾಶ

### ಪರಮಾವಧಿ ನಿಗದಿಗೆ ಸರ್ಕಾರದ ಆಲೋಚನೆ

ಬೆಂಗಳೂರು ೯

ಕಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ನೆನ್ನೆ [illegible] ಒಬ್ಬ ಮನುಷ್ಯನು ಹೊಂದಬಹುದಾದ ಜಮೀನಿನ ಪರಮಾವಧಿಯನ್ನು ಗೊತ್ತುಪಡಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿಯೂ, ೧೮೦ ಎಕರೆಗೆ ಮಿತಿಯನ್ನು ಒಬ್ಬನು ಹೊಂದುವ ಅವಕಾಶ ಕೊಡಬಹುದೆಂದೂ ತಿಳಿಸಿದರು. ಈ ವಿಷಯವು ತೊಡಕಿನದೆಂದು ಅವರು ಅಭಿಪ್ರಾಯಪಟ್ಟರು. ಸಂಸ್ಥಾನದ ವಿವಿಧ ಕಡೆಗಳಲ್ಲಿ ಭೂಮಿಯ ಸಾರ ಬೆಳೆ ಮುಂತಾದವುಗಳ ಬಗ್ಗೆ ವಿಧವಿಧವಾದ ಸ್ಥಿತಿಗತಿಗಳಿರುವುವೆಂದೂ ಆದ್ದರಿಂದ ಯಾವಯಾವ ಕಡೆ ಎಷ್ಟು ಬೇಕಾಗಿರಬಹುದೆಂಬುದಕ್ಕಾಗಿ ಪರೀಕ್ಷಾ ಪ್ರಯೋಗವೊಂದನ್ನು ಮಾಡಲಾಗುವುದೆಂದೂ ಅವರು ತಿಳಿಸಿದರು

## ಶ್ರೀ ಎಂ. ಎಸ್. ರಾಮಚಂದ್ರ ಶಿವಮೊಗ್ಗಾ ಜಿಲ್ಲಾಧಿಕಾರಿ

ಸ್ವಂ ಸು ಪ್ರೋ।] ಬೆಂಗಳೂರು ೯

ಶ್ರೀ ಎಂ. ಎಸ್. ರಾಮಚಂದ್ರರವರನ್ನು ಶಿವಮೊಗ್ಗಾ ಜಿಲ್ಲಾಧಿಕಾರಿಯಾಗಿಯೂ, [illegible] ಕಾರ್ಯದರ್ಶಿಯಾಗಿಯೂ, [illegible] ಶ್ರೀ ಕೃಷ್ಣಸ್ವಾಮಿ ಮೊದಲಿಯಾರರನ್ನು ಬೆಂಗಳೂರು [illegible] ಅಧಿಕಾರಿಯಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ

## ಮುಖ್ಯ ಮಂತ್ರಿಗಳಲ್ಲಿ ಕೊಳ್ಳೇಗಾಲದವರ ನಿಯೋಗ

ಕೊಳ್ಳೇಗಾಲ ತಾಲ್ಲೂಕು ಪ್ರತಿನಿಧಿಗಳು ಈ ದಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರಲ್ಲಿ ನಿಯೋಗ ಬಂದು, ತಮ್ಮ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಳ್ಳಲು ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿದರು. ಅದನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಮುಂದೆ ಇಡುವುದಾಗಿ ಅವರು ಭರವಸೆಯಿತ್ತರು

## ಶ್ಯಾಲನೂರು ಗಲಭೆ ಬಗ್ಗೆ ನಿಲುವಳಿ ನಿರಾಕರಣೆ

### ಕಿರಿಯ ಶಾಸನ ಸಭೆಯಲ್ಲಿ ಅಧ್ಯಕ್ಷರು ತಳ್ಳಿಹಾಕಿದರು

ಸ್ವಂ ಸು ಪ್ರೋ।] ಬೆಂಗಳೂರು

ಈ ದಿನ ಕಿರಿಯ ಶಾಸನ ಸಭೆಯ [illegible] ಶ್ರೀ [illegible] ಶ್ಯಾಲನೂರು ಗಲಭೆ ಬಗ್ಗೆ [illegible] ನಿಲುವಳಿ ಸೂಚನೆಯನ್ನು [illegible] ಅಧ್ಯಕ್ಷರು ತಳ್ಳಿಹಾಕಿದರು. [illegible] ಮಂತ್ರಿ ಶ್ರೀ ಸಿದ್ಧವೀರಪ್ಪನವರು [illegible] ವಿಷಯವಾಗಿ [illegible] ಹೇಳಿದರು

ಶ್ರೀ ಎಂ. [illegible] ಪ್ರಶ್ನೆಗೆ ರೆವಿನ್ಯೂ ಮಂತ್ರಿ ಶ್ರೀ [illegible] ಮಂಜಪ್ಪನವರು ಉತ್ತರಕೊಟ್ಟು, [illegible] ೧೦೦೦ ರೂ [illegible] ವಸೂಲಾಗಿರುವುದೆಂದೂ ಹೇಳಿದರು

ಮುಖ್ಯ ಮಂತ್ರಿಯವರು [illegible] ತೆರಿಗೆಯನ್ನು [illegible] ವಿಷಯವಾಗಿ [illegible] ಮುಂದಿನ ಸದಸ್ಯರ [illegible] ಅವರು ಸೂಚಿಸಿದರು

### ಇನಾಂ ಮಸೂದೆ ಜಂಟಿ ಸಮಿತಿಗೆ

ಜೋಡಿ ಮತ್ತು ಇನಾಂ ರದ್ದಿಯಾ ಮಸೂದೆಯನ್ನು ಈ [illegible] ಹಿರಿಯ ಮತ್ತು ಕಿರಿಯ ಶಾಸನ ಸಭಾ ಸದಸ್ಯರ ಜಂಟಿ ಸಮಿತಿಗೆ ಒಪ್ಪಿಸಲಾಗಿದೆ — ಶ್ರೀಗಳಾದ [illegible], [illegible], [illegible], [illegible], ಎಚ್. ಎಂ. [illegible], [illegible], [illegible], ಎಚ್. [illegible], ಎಚ್. ಸಿದ್ದಪ್ಪ, [illegible] ಮತ್ತು ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು [illegible] ರಾಗುವರು

## ರೋಗಗ್ರಸ್ತ ಯುದ್ಧ ಖೈದಿಗಳ ಬಿಡುಗಡೆ

ಕೊರಿಯಾ ಯುದ್ಧದ ಸಂಬಂಧದಲ್ಲಿ ಸೆರೆಸಿಕ್ಕಿದ ರೋಗಗ್ರಸ್ತರೂ, [illegible] ಗಾಯಗೊಂಡವರೂ ಆದ ೬೦೦ ಮಂ[illegible] ಮಿತ್ರ ರಾಷ್ಟ್ರಗಳ ಖೈದಿಗಳನ್ನು ಬಿಡುಗಡೆ ಮಾಡಲು ಕಮ್ಯೂನಿಸ್ಟರೂ, [illegible] ಮಂದಿ ಕಮ್ಯೂನಿಸ್ಟ್ ಬಂದಿಗಳನ್ನು ಬಿಡುಗಡೆ ಮಾಡಲು ಮಿತ್ರರಾಷ್ಟ್ರಗಳವರೂ ಒಪ್ಪಿರುವುದಾಗಿ ತಿಳಿದುಬಂದಿದೆ

○ ಅರ್ಜಂಟೈನಾದಲ್ಲಿ [illegible] ಹಣದ ಉಬ್ಬರದ [illegible] ಪ್ರತಿಭಟಿಸಿ ಅಲ್ಲಿನ [illegible], ಕೈಗಾರಿಕೆ ಮತ್ತು ಆರ್ಥಿಕ ಖಾತೆಗಳ ಮಂತ್ರಿಗಳು [illegible] ರಾಜೀನಾಮೆಯ[illegible]

## ಶೃಂಗೇರಿ ಗುರುಗಳಿಂದ ಭಾಷಣ

ಶೃಂಗೇರಿ ೭

ಶತರುದ್ರ ಮತ್ತು ಸಹಸ್ರ ಚಂಡಿ ಹೋಮಕ್ಕಾಗಿ ಸೇರಿರುವ ಶಿಷ್ಯ ವೃಂದವನ್ನುದ್ದೇಶಿಸಿ ನೆನ್ನೆ ಶ್ರೀ ಶ್ರೀ ಅಭಿನವ ತೀರ್ಥ ಶ್ರೀ ಭಾರತಿಯವರು ಸಮಾರಂಭದಲ್ಲಿ ಭಾಷಣ ಮಾಡಿ, ಸ್ಮೃತಿಯೊ ಪ್ಪಿರುವ ಧರ್ಮದ ಅರ್ಥವನ್ನು ಅರಿತು, ಅದರಂತೆ ವರ್ತಿಸಬೇಕೆಂದು ಬುಧಿಸಿ ಸಿದರು. ಶತರುದ್ರ ಹೋಮವು ಸರಿಯಾಗಿ ಈಗ ನಡೆಯುತ್ತಿರುವಂತೆ ನಡೆಸಲ್ಪಟ್ಟರೆ ರುದ್ರನ ಆಶೀರ್ವಾದವು ದೊರಕುವುದರಲ್ಲಿ ಸಂಶಯವಿಲ್ಲವೆಂದು ಅವರು ತಿಳಿಸಿದರು.

## ಆಟೋಕನ ಕೈಯ್ಯಿಂದ ತಪ್ಪಿಸಿಕೊಂಡ ಗೂಳಿ

ಕೊಟ್ಟಾಯಂ ಬಳಿ ತಿರುವಲ್ಲ ಎಂಬಲ್ಲಿ ಆಟೋಕನೊಬ್ಬನು ಒಂದು ಗೂಳಿಯನ್ನು ಕೊಲ್ಲುವ ಸಮಯದಲ್ಲಿ ಅದು ದೋಣಿಯಿಂದ ಹಗ್ಗವನ್ನು ಕಡಿದು ಕೊಂಡು ಓಡಿಹೋಯಿತೆಂದೂ, ಆ ರಭಸಕ್ಕೆ ಹಲವರು ರಸ್ತೆ ಪ್ರಯಾಣಿಕರಿಗೆ ಗಾಯಗಳಾದುವೆಂದೂ ಕೊನೆಗೆ ಅದನ್ನು ಹಿಡಿಯಲಾಯಿತೆಂದೂ ವರದಿಯಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿರುವುದರಿಂದ ಸಧ್ಯದಲ್ಲಿ ಏನು ಬಹುಶಃ ತಿಳಿ...

## ಅಣು ಸಿಡಿತದ ಪರೀಕ್ಷೆ

ಅಮೆರಿಕದಲ್ಲಿ ನಾಲ್ಕನೇ ಬಾರಿಯ ಅಣುವಿನ ಸಿಡಿತವು ಸೋಮವಾರ ಲಾಸ್‌ವೇಗಾಸ್ ಬಳಿ ನಡೆಯಿತೆಂದು ಹೇಳಲಾಗಿದೆ. ಸಿಡಿಸಿದ ಅಸ್ತ್ರವೇನೆಂಬುದನ್ನು ಮಾತ್ರ ಅಣು ಶಕ್ತಿ ಸಮಿತಿಯು ಬಹಿರಂಗಪಡಿಸಲಿಲ್ಲ. ಆದರೆ ಪರೀಕ್ಷೆಗಾಗಿ ಸಿಡಿತದ ಸಮಯದಲ್ಲಿ ೬೦ ಇಲಿಗಳು ಮತ್ತು ೨ ಕೋತಿಗಳನ್ನು ಚಾಲಕನಿಲ್ಲದ ವಿಮಾನದಲ್ಲಿ ಅಲ್ಲಿಗೆ ಕಳುಹಲಾಗಿದ್ದಿತು.

### ರಾಮೋತ್ಸವ

ರಾಜಧಾನಿಯ ಹೊಸಕೇರಿ ಲಕ್ಷ್ಮೀಪುರದಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ಈ ಸಾರಿ ನಡೆಯಬೇಕಾಗಿದ್ದ ರಾಮೋತ್ಸವವನ್ನು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಸಂಬಂಧವಾಗಿ ಮುಂದೂಡಲ್ಪಟ್ಟಿದ್ದು ಇದೇ ೧೭ನೇ ತಾರೀಖಿನಿಂದ ಕಾರ್ಯಕ್ರಮಗಳು ಆರಂಭವಾಗಲಿವೆ. ಭಕ್ತಾದಿಗಳು ಉದಾರವಾಗಿ ತನು, ಮನ, ಧನಗಳಿಂದ ಸಹಾಯ ನೀಡಬೇಕೆಂದು ಪ್ರಾರ್ಥಿಸಲಾಗಿದೆ.

### ನಗರದಲ್ಲಿ ಎರಡು ಬಸ್ ಸಂಚಾರದ ವ್ಯವಸ್ಥೆಯಿಂದ ಅನುಕೂಲ

ಬಹಳ ವರ್ಷಗಳಿಂದಲೂ ನಗರದಲ್ಲಿ ಸಿ ಪಿ ಸಿ ಯವರ ಸರ್ವೀಸಿನ ಬಸ್ಸುಗಳು ಮಾತ್ರ ಓಡಾಡುತ್ತಿದ್ದವು. ಈಗ ಕೆಲವು ದಿನಗಳಿಂದ ಶ್ರೀ ಕೃಷ್ಣ ರಾಜೇಂದ್ರ ಸರ್ವೀಸಿನವರಿಗೂ ಅವಕಾಶವಿತ್ತಿರುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗಿರುವುದೆಂದೂ ಕಾಲ ನಿಯಮ ಮತ್ತು ದರಗಳಲ್ಲೂ ಜನರಿಗೆ ಸೌಕರ್ಯವಾಗಿರುವುದೆಂದೂ, ಇದಕ್ಕಾಗಿ ಅಧಿಕಾರಿಗಳು ಅಭಿನಂದನಾರ್ಹರೆಂದೂ ಕೆಲವು ನಗರದ ಬಸ್ಸು ಪ್ರಯಾಣಿಕರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

## ಒರಿಸ್ಸದ ಛತ್ರದ ರವಾನೆಗೆ ವಿಶೇಷ ರೈಲು ವ್ಯವಸ್ಥೆ

ಒರಿಸ್ಸದ ಪಟ್ಟಿನ ಚಿಕ್ಕಿಯನ್ನು ಪಶ್ಚಿಮ ಬಂಗಾಳಕ್ಕೂ ಮದರಾಸು, ಮೈಸೂರು ಮತ್ತು ತಿರುವಾಂಕೂರು-ಕೊಚ್ಚಿ ಸಂಸ್ಥಾನಗಳಿಗೆ ಸರಬರಾಜು ಮಾಡುವ ಸಲುವಾಗಿ ಬರುವ ತಿಂಗಳಲ್ಲಿ ೪೦ ವಿಶೇಷ ರೈಲುಗಳನ್ನು ಏರ್ಪಡಿಸಲಾಗುವುದೆಂದೂ, ಪ್ರತಿಯೊಂದರಲ್ಲೂ ಸಾವಿರ ಟನ್ನುಗಳಷ್ಟು ಚಿಕ್ಕಿಯನ್ನು ರವಾನಿಸಲಾಗುವುದೆಂದೂ ವರದಿಯಾಗಿದೆ.

## ೫೫ನೇ ವಯಸ್ಸಿನಲ್ಲಿ ಕೇಂದ್ರ ನೌಕರರ ನಿವೃತ್ತಿ

ಕೇಂದ್ರ ಸರ್ಕಾರದ ನೌಕರರು ಐವತ್ತೈದನೆಯ ವರ್ಷದಲ್ಲಿ ನಿವೃತ್ತರಾಗುವಂತೆ ಸರ್ಕಾರದವರು ನಿರ್ಧರಿಸಿರುತ್ತಾರೆ. ಗಜೆಟೆಡ್ ಶ್ರೇಣಿಯ ಮೇಲಿನ ನೌಕರರಿಗೆ ಸೇರಿದವರಿಗೂ ಈ ಆಜ್ಞೆಯು ಅನ್ವಯಿಸುತ್ತದೆ.

## ಧ್ವನಿ ವೇಗಕ್ಕಿಂತಲೂ ೪ ರಷ್ಟು ವೇಗದ ರಾಕೆಟ್

ಶಬ್ದದ ವೇಗಕ್ಕಿಂತಲೂ ೪ ರಷ್ಟು ಜಾಸ್ತಿ ಹೋಗಬಲ್ಲ ರಾಕೆಟ್ ಸಾಧನವನ್ನು ತಯಾರಿಸಲಾಗುತ್ತದೆಂದು ಅಮೆರಿಕಾ ಕಾಂಗ್ರೆಸ್ ಸಭೆಯಲ್ಲಿ ತಿಳಿಸಲಾಗಿದೆ. ಜನರಲ್ ಎಲೆಕ್ಟ್ರಿಕ್ ಸಂಸ್ಥೆ ಇದೇ ರೀತಿಯಲ್ಲಿ ಹೋಗುತ್ತಿದೆ... ಗಂಟೆಗೆ ... ಮೈಲಿ ಹಾರಬಲ್ಲ ವಿಮಾನಗಳಲ್ಲಿ ಉಪಯೋಗಿಸಬಹುದೆಂದೂ ಹೇಳಲಾಗಿದೆ.

### ಪೌರಸಭೆ ಮತ್ತು ಟ್ರಸ್ಟ್ ಬೋರ್ಡ್ ಕಛೇರಿಗಳ ಸಹಕಾರ ಸಂಘ

ರಾಜಧಾನಿಯ ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯ ಕಛೇರಿಗಳ ಸಹಕಾರ ಸಂಘದ ಸಾಮಾನ್ಯ ಸದಸ್ಯರ ಸಭೆಯು ಕಳೆದ ೫ನೇ ತಾ॥ ನಡೆಯಿತು. ಪ್ರಸಕ್ತ ಸಾಲಿಗೆ ಶ್ರೀಗಳಾದ ಬಿ. ಕೆ. ಗುರಪ್ಪ, ಎಂ. ಬಸಪ್ಪ, ಚನ್ನಯ್ಯ, ಎಂ. ಸಿ. ರಾಜು, ನಾರಾಯಣ ಶೆಟ್ಟಿ, ಎಂ. ಮಾಯ, ಕೆ. ಅಪ್ಪಾಜಿಯ, ಜಿ. ಬಿ. ದಾಸ್, ಎಸ್. ಲಿಂಗಯ್ಯ, ಟಿ. ಎಸ್. ಸಿದ್ಧಲಿಂಗಪ್ಪ, ಎಲ್. ರಾಮಣ್ಣ, ಬಿ. ಲಿಂಗಯ್ಯ ಮತ್ತು ಎಸ್. ಕೃಷ್ಣಸ್ವಾಮಿಯವರುಗಳು ಸಂಘದ ಡೈರೆಕ್ಟರುಗಳಾಗಿ ಆರಿಸಲ್ಪಟ್ಟರು.

### ನೌಕರರ ಸಂಬಳದ ವ್ಯತ್ಯಾಸದ ಬಗ್ಗೆ ಕೇಂದ್ರದೊಡನೆ ವ್ಯವಹಾರ

ಕೇಂದ್ರ ಮತ್ತು ಸಂಸ್ಥಾನ ನೌಕರರುಗಳ ಸಂಬಳ ಸಾರಿಗೆಗಳಲ್ಲಿನ ವ್ಯತ್ಯಾಸಗಳನ್ನು ಎಷ್ಟರಮಟ್ಟಿಗೆ ಸಮಾನ ಮಾಡಬಹುದೆಂಬ ಬಗ್ಗೆ ಮೈಸೂರು ಸರ್ಕಾರದವರು ಕೇಂದ್ರದವರೊಡನೆ ಪತ್ರ ವ್ಯವಹಾರ ನಡೆಸುತ್ತಲಿರುವರೆಂದು ವರದಿಯಾಗಿದೆ.

### ಭಾವಸಾರ ಕ್ಷತ್ರಿಯ ಸಂಘದಲ್ಲಿಯ ವಾರ್ಷಿಕೋತ್ಸವ

ಭಾವಸಾರ ಕ್ಷತ್ರಿಯ ಸಂಘದ ಹತ್ತೊಂಬತ್ತನೇ ವಾರ್ಷಿಕೋತ್ಸವವು ಕಳೆದ ಭಾನುವಾರ ದಸರಾ ವಸ್ತುಪ್ರದರ್ಶನದಲ್ಲಿ ನಡೆಯಿತು. ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಯು. ಎಲ್. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು.

## ನಾಜಿಮುದ್ದೀನರಿಗೆ ನೆಹರೂರವರ ಉತ್ತರ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಯವರ ಭೇಟಿ ಸಂಬಂಧವಾಗಿ ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರು ಬರೆದ ಪತ್ರಕ್ಕೆ ನೆಹರೂರವರು ಉತ್ತರ ಬರೆದಿರುವರೆಂದು ವರದಿಯಾಗಿದೆ. ಈ ಬಗ್ಗೆ ಎರಡು ಸರ್ಕಾರಗಳ ಅಧಿಕಾರಿಗಳ ಸಭೆಯು ದೆಹಲಿಯಲ್ಲಿ ನಡೆಯಲಿದೆ.

## ಈ ತಿಂಗಳು ಕೊರಿಯಾ ಯುದ್ಧದ ಅಂತ್ಯವೇ?

ಈ ತಿಂಗಳಲ್ಲಿ ಕೊರಿಯಾ ಯುದ್ಧವು ಪರಿಸಮಾಪ್ತಿಯಾಗುವುದೆಂದು ಲಂಡನ್ನಿನಲ್ಲಿ ಊಹಿಸಲಾಗಿದೆ. ಪಾನ್ ಮುಂಜಾನ್ ಮಾತುಕತೆಗಳು ಸಫಲವಾಗುತ್ತಿರುವುದೇ ಈ ಊಹೆಗೆ ಆಧಾರವಾಗಿದೆ.

## ವಾಲ್‌ಚಂದ್ ಹೀರಾಚಂದ್‌ರವರ ಮರಣ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಸಂಸ್ಥಾಪಕರೂ ಮತ್ತು ಭಾರತದ ಹಡಗು ಕೈಗಾರಿಕೋದ್ಯಮಿಯೂ ಆದ ಶ್ರೀ ವಾಲ್‌ಚಂದ್ ಹೀರಾಚಂದ್ ರವರು ನೆನ್ನೆ ಬೆಳಗ್ಗೆ ಗುಜರಾತಿನ ಸಿದ್ಧಪುರದಲ್ಲಿ ಮೃತಪಟ್ಟರು. ಅವರಿಗೆ ೭೧ ವರ್ಷ ವಯಸ್ಸಾಗಿದ್ದಿತು. ಹಲವು ದಿನಗಳಿಂದ ಅವರು ರೋಗಗ್ರಸ್ತರಾಗಿ, ಯಾತ್ರೆಯಲ್ಲಿ ನಿರತರಾಗಿದ್ದರೆಂದು ಗೊತ್ತಾಗಿದೆ. ಅವರಿಗೆ ಏಕಮಾತ್ರ ಪುತ್ರಿಯಿರುವರು. ಮೃತರ ಕಳೇಬರವನ್ನು ಇಂದು ಬೊಂಬಾಯಿಗೆ ತಂದು ನಾಳೆ ಅಂತ್ಯ ಸಂಸ್ಕಾರ ನಡೆಸಲಾಗುತ್ತದೆ.

### ನಗರದಲ್ಲಿ ೭೪ ಸೆಂಟು ಮಳೆ

ರಾಜಧಾನಿಯಲ್ಲಿ ನೆನ್ನೆಯ ದಿನ ೬೦ ದು ಹದ ಮಳೆಯಾಯಿತು. ಸಿಡಿಲು ಗುಡುಗುಗಳ ಆರ್ಭಟ ಹೆಚ್ಚಾಗಿರಲಿಲ್ಲ. ೭೪ ಸೆಂಟ್ ಮಳೆಯು ರಿಕಾರ್ಡಾಗಿದೆ. ಈ ದಿನ ಹವಾ ಹಿತಕರವಾಗಿದೆ. ಸುತ್ತ ಮುತ್ತಲ ಪ್ರದೇಶಗಳಲ್ಲೂ ಮಳೆಯಾಗಿರುವುದಾಗಿ ಗೊತ್ತಾಗಿದೆ.

### ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಅರ್. ವಾಸುದೇವ ಮೂರ್ತಿ, ಸಂಗೀತ. ಮಧ್ಯಾಹ್ನ ೧ ೪೦ ದಿಲ್ಲಾ ... ೨ ತಿಮ್ಮ ಮಕ್ಕಳ ಕಾರ್ಯಕ್ರಮ ... ಸಂಜೆ ೫.೪೦ ಆರ್. ವಾಸುದೇವ ಮೂರ್ತಿ, ಸಂಗೀತ ೬.೧೦ ಗಾನ ವಿಹಾರ ೭ ... ಗಳು, ಹಿಂದಿ ಗೀತೆ, ೭.೩೦ ಎಸ್. ಬಿ. ಕೇಶವ ಮೂರ್ತಿ, ಸಂಗೀತ ... ೯. ... ೯ ೧೫ ... ೯ ೪೦ ಗಾನ ... 


SRI GANESHA TALKIES

from 10.4.53 · 2 Days Only

FOUR IN A JEEP

With Viveo Lindfors

10—DAY MAGIC CARPET LAST DAY


## ಕಾಶ್ಮೀರ ಹೈಕೋರ್ಟಿನಿಂದ ಜಮ್ಮು ಮುಖಂಡರ ಬಿಡುಗಡೆ

ಜಮ್ಮು ನಗರದ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ॥ ಓಂ ಪ್ರಕಾಶ್ ಮೆಂಗಿಯವರು ಕಳೆದ ನವೆಂಬರಿನಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆ ಮತ್ತು ಮೆರವಣಿಗೆಯನ್ನು ನಡೆಸಿದುದಕ್ಕಾಗಿ ಬಂಧಿಸಲ್ಪಟ್ಟಿದ್ದರು. ಈ ಬಂಧನವು ಅಕ್ರಮವೆಂದು ತಿಳಿಸಿ ಅವರು ಕಾಶ್ಮೀರದ ಶ್ರೇಷ್ಠ ನ್ಯಾಯಾಲಯದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸಲ್ಲಿಸಿದ್ದರು. ಮೊನ್ನೆ ಹೈಕೋರ್ಟಿನವರು ಅತ್ತ ತೀರ್ಮಾನಿಸಿ ಅವರು ಬಿಡುಗಡೆಯಾದರು.

### ಶ್ರೀ ರಾಮ ಪಟ್ಟಾಭಿಷೇಕ

ರಾಜಧಾನಿಯ ಶಿವರಾಂಪೇಟೆ ಮನ್ನಾರ್ ಕೃಷ್ಣ ಶೆಟ್ಟರ ವಿದ್ಯಾರ್ಥಿ ನಿಲಯದ ಕಟ್ಟಡದಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಶ್ರೀರಾಮ ಪಟ್ಟಾಭಿಷೇಕವೂ ರಾತ್ರಿ ೮॥ ಗಂಟೆಗೆ ಮಂಗಳಾರತಿಯೂ, ೧೫ ನೇ ತಾ॥ ಸಂಜೆ ೬ ಗಂಟೆಗೆ ಶಯನೋತ್ಸವವೂ ನಡೆಯುವುವು.

### ಉಪನಯನ

ರಾಜಧಾನಿಯ ಎಂ. ಎಲ್. ಬಿ. ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಎಸ್ ಅನಂತರಾಮಯ್ಯನವರು ತಮ್ಮ ಕಿರಿಯ ಸಹೋದರ ಶ್ರೀ ಬಿ ಎಸ್ ಆದಿನಾರಾಯಣ ಶರ್ಮರವರ ಮಗ ಚಿ॥ ಬಿ ಎಸ್. ಶಿವಪ್ರಸಾದ ಶರ್ಮನಿಗೆ ನೆನ್ನೆ ಉಪನಯನವನ್ನು ನೆರವೇರಿಸಿದರು.

### ಮೈಸೂರು ಪೇಟೆ ಧಾರಣೆ

| | ಪಲ್ಲಕ್ಕೆ | ರೂ ಇಂದ | ರೂ ಗೆ |
|---|---|---|---|
| ಕಡಲೆಕಾಯಿ | | ೨೩ ೮-೦ | ೨೫ ೪ ೦ |
| ಎಳ್ಳು | | ೭೩ ೦ ೦ | |
| ಹರಳುಬೀಜ | | ೩೫ ೦ ೦ | ೩೭-೦-೦ |
| ಹುಚ್ಚೆಳ್ಳು | | ೩೨-೧೪-೦ | ೩೫ ೪ ೦ |
| ಹೊಂಗೆಬೀಜ | | ೧೨ ೧೨ ೦ | ೨೨.೮ ೦ |
| ಹುರುಳಿ | | ೩೯ ೫ ೦ | ೪೩.೦ ೦ |
| ಹೆಸರು | | ೩೬.೪ ೦ | |
| ಅವರೆ | | ೫೮.೧೨ ೦ | |
| ಕಡಲೆಬೇಳೆ | | ೫೪.೧೪ ೪ | ೫೭-೦ ೦ |
| ಉದ್ದು | | ೩೪.೦.೦ | |
| ಬೆಲ್ಲ (ಹೊಸತು) | | | |
| ಕಾಫಿ ಹುರಳಿ | | ೧೭ ೯ ೦ | ೧೯ ೧೫ ೦ |
| ಜೋಳ ... | | ೩ ೩ ೦ | ೩.೧೦ |
| ... | | ೪ ೬ ೦ | ೪ ೫ ೦ |
| ಬೆಲ್ಲ | | ೬-೦-೦ | |
| ತೆಂಗಿನಕಾಯಿ | | | |
| | ೧,೧೦೦ಕ್ಕೆ | ೧೪೧ ೦ ೦ | ೧೫೭ ೦ ೦ |


SRI GAYATHRI TALKIES

from 9 4—53

Paramount's

CARRIE

With — Laurence Olivier, Jennifer Jones


Edited, Printed and Published by A R Nagarajan at Sadhvi Press, D Subbiah Road, Mysore.

ರೋ. ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೧೧ ] ಶುಕ್ರವಾರ ೧೦-೪-೧೯೫೩ [ ಸಂಚಿಕೆ ೨೦೬

# ಕ್ರಿಮಿ ಯುದ್ಧದ ಬಗ್ಗೆ ರಷ್ಯಕ್ಕೆ ಸವಾಲು

## ಆಸಫ್ ಅಲಿ ನಿಧನದ ಬಗ್ಗೆ ಸಂತಾಪ

### ಪೌರಸಭೆಯ ನಿರ್ಣಯ

ಮೈಸೂರು ೧೦

ನಿನ್ನೆ ಸಂಜೆ ನಗರದ ಪೌರಸಭಾ ಭವನದಲ್ಲಿ ಪೌರಸಭೆಯ ಸಭೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಸ್ವಿಟ್ಸರ್ಲೆಂಡಿನಲ್ಲಿ ಭಾರತ ರಾಯಭಾರಿಯಾಗಿದ್ದ ಆಸಫ್ ಅಲಿಯವರ ಮತ್ತು ಸಂಸ್ಥಾನದ ವರ್ತಕರಾದ ಶ್ರೀ ಕೆ. ಪುಟ್ಟಯ್ಯನವರುಗಳ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಜೀವನರಾಯನಕಟ್ಟೆ ಪ್ರದೇಶವನ್ನು ದಸರಾ ವಸ್ತು ಪ್ರದರ್ಶನದ ಸಮಿತಿಯವರ ವಶಕ್ಕೆ ಒಪ್ಪಿಸುವಂತೆ ಸೂಚಿಸಿ ಬಂದಿದ್ದ ಪತ್ರದ ಸಂಬಂಧವಾಗಿ ಶ್ರೀ ಟಿ. ನರಸಿಂಹ ಅಯ್ಯಂಗಾರ್ಯರು ನಿರ್ಣಯವೊಂದನ್ನು ಮಂಡಿಸಿ, ಆ ರೀತಿ ವಹಿಸುವುದು ಉಚಿತವಲ್ಲವೆಂದು, ಅಭಿವೃದ್ಧಿ ಯ ಅಟ್ಟರು ನಿವೇಶನವು ನಗರಾಭಿವೃದ್ಧಿ ಸಮಿತಿಯವರದೆಂದೂ ಜಿಲ್ಲೆ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಮತ್ತು ಇತರರು ಆಟಗಳನ್ನು ಆಡುತ್ತಿರುವರೆಂದೂ, ವಸ್ತು ಪ್ರದರ್ಶನದ ಕಾಲದಲ್ಲಿ ಮಾತ್ರ ಅದನ್ನು ಪ್ರದರ್ಶನ ಸಮಿತಿಯವರಿಗೆ ವಹಿಸಿಕೊಡಬಹುದೆಂದೂ ಸದಸ್ಯರು ತಿಳಿಸಿದರು. ನಿರ್ಣಯವು ಅಂಗೀಕೃತವಾಯಿತು.

ಹೊಟೇಲುಗಳಲ್ಲಿ ಪದಾರ್ಥಗಳನ್ನು ತಯಾರಿಸುವವರು ಮತ್ತು ಅವನ್ನು ಹಂಚುವವರ ಬಗ್ಗೆ ಪೌರಸಭೆಯ ಆರೋಗ್ಯಾಧಿಕಾರಿಗಳು ನಡೆಸುವ ಪರೀಕ್ಷೆ ಸಂಬಂಧವಾಗಿ, ಹೊಟೇಲಿನಲ್ಲಿ ಕೆಲಸ ಮಾಡುವವರಿಂದ ೨ ರೂ ಶುಲ್ಕವನ್ನು ವಸೂಲು ಮಾಡುವಂತೆ ನಿರ್ಧರಿಸಲಾಯಿತು.

ಅಡಿಕೆಮಾರ್ಕೆಟ್ ಪುರವನ್ನು ಅಶೋಕ ನಗರವೆಂದು ಕರೆಯುವಂತೆ ಶ್ರೀ ಬಿ. ಲಿಂಗಯ್ಯನವರು ಕಳುಹಿಸಿದ್ದ ನಿರ್ಣಯವನ್ನು ಅಂಗೀಕರಿಸಲಾಯಿತು.

ಪೌರಸಭೆಯ ವಿಶೇಷ ಅಧಿವೇಶನ ಇದೇ ಸಂದರ್ಭದಲ್ಲಿ ನಡೆದು ನಗರದಲ್ಲಿರುವ ರಸ್ತೆಗಳಿಗೆ ಡಾಂಬರು ಹಾಕುವ ಯೋಜನೆಗಾಗಿ ಮೈಸೂರು ಬ್ಯಾಂಕಿನಿಂದ ೫ ಲಕ್ಷ ರೂ. ಗಳನ್ನು ಸಾಲ ಪಡೆಯಬೇಕೆಂಬ ನಿರ್ಧಾರವನ್ನು ಕೈಗೊಳ್ಳಲಾಯಿತು.

### ಪೌರಸಭೆಗೆ ಹೊಸ ಕಮಿಷನರ್

ನಗರದ ಪೌರಸಭೆಯ ಕಮಿಷನರಾದ ಶ್ರೀ ಎಫ್. ಎಂ. ಅಬ್ದುಲ್ ರಹೀಂರವರಿಗೆ ನಿವೃತ್ತರಾಗುವ ಪೂರ್ವ ರಜವನ್ನು ಮಂಜೂರು ಮಾಡಲಾಗಿದೆ. ಅವರ ಸ್ಥಾನಕ್ಕೆ ಸ್ಪೋರ್ಟ್ಸ್ ಕೌನ್ಸಿಲ್ ನ ಕಾರ್ಯದರ್ಶಿ ಶ್ರೀ ಎನ್. ಲಕ್ಷ್ಮಣರಾಯರನ್ನು ನೇಮಿಸಲಾಗಿದೆ.

## ಲಂಡನ್ನಿನಲ್ಲಿ ರೈಲುಗಳ ಡಿಕ್ಕಿ

ಪೂರ್ವ ಲಂಡನ್ನಿನ ಬಳಿ ಒಂದು ಸುರಂಗ ಮಾರ್ಗದೊಳಗೆ ಹೋಗುವ ಎರಡು ವಿದ್ಯುತ್ ರೈಲುಗಳಿಗೆ ನಿನ್ನೆ ಡಿಕ್ಕಿಯಾಗಿ ೫೦ ಮಂದಿ ಪ್ರಯಾಣಿಕರು ಸತ್ತಿದ್ದಾರೆ. ಅನೇಕರಿಗೆ ತೀವ್ರ ಗಾಯಗಳಾಗಿವೆ. ಲಂಡನ್ ನಗರದಲ್ಲಿ ಕೆಲಸಗಳನ್ನು ಮುಗಿಸಿಕೊಂಡು ಹೋಗುತ್ತಿದ್ದ ಕಾರ್ಮಿಕರು ಈ ಅಪಘಾತಕ್ಕೆ ಈಡಾಗಿದ್ದಾರೆ.

## ಶ್ರೀ ಸಹಸ್ರ ಚಂಡಿಕಾ ಹೋಮದ ಪೂರ್ಣಾಹುತಿ

ವೈಸೂರು

ಇದೇ ತಿಂಗಳು ೩ ನೇ ತಾರೀಖಿನಿಂದ ಆರಂಭವಾದ ಶ್ರೀ ಸಹಸ್ರ ಚಂಡಿಕಾ ಹೋಮದ ಪೂರ್ಣಾಹುತಿಯು ನಿನ್ನೆ ಸಾಂಗವಾಯಿತು. ೧೫೦ ವರ್ಷಗಳ ಹಿಂದೆ ಈ ರೀತಿಯ ಹೋಮವು ನಡೆದಿತ್ತೆಂದು ಹೇಳಲಾಗಿದೆ. ಹೋಮ ಮುಕ್ತಾಯವಾದ ಬಳಿಕ ಅನ್ನಸಂತರ್ಪಣೆ ನಡೆಯಿತು. ಸಾವಿರಾರು ಜನರು ಈ ಭವ್ಯ ಸಮಾರಂಭವನ್ನು ನೋಡಿ ಆನಂದಿಸಿದರು. ರಾತ್ರಿ ಶ್ರೀ ಆಧೀನದ ಪೀಠಾಧಿಪತಿಗಳು ಭಕ್ತರಿಗೆ ಉಪದೇಶ ಮಾಡಿದರು.

ಶ್ರೀ ... ಸಂಗೀತ ... ಜರುಗಿತು.

## ಕ್ರಿಮಿ ಯುದ್ಧದ ಬಗ್ಗೆ ರಷ್ಯಕ್ಕೆ ಅಮೆರಿಕದ ಸವಾಲು

ಕೊರಿಯದಲ್ಲಿ ಅಮೆರಿಕವು ಕ್ರಿಮಿ ಯುದ್ಧ ನಡೆಸಿರುವುದಾಗಿ ರಷ್ಯ ಆಪಾದಿಸಿರುವ ಬಗ್ಗೆ ತನಿಖೆ ನಡೆಸಲು ವಿಶ್ವ ಸಂಸ್ಥೆಯ ರಾಜಕೀಯ ಸಮಿತಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಲು ಒಪ್ಪಿ ನಿರ್ಣಯ ಮಾಡಿರುವುದಾಗಿ ಗೊತ್ತಾಗಿದೆ. ತನಿಖೆ ಸಮಿತಿಯಲ್ಲಿ ಬ್ರೆಜಿಲ್, ಈಜಿಪ್ಟ್, ಪಾಕಿಸ್ತಾನ, ಸ್ವೀಡನ್ ಮತ್ತು ಉರುಗ್ವೆ ರಾಷ್ಟ್ರಗಳ ಪ್ರತಿನಿಧಿಗಳಿರತಕ್ಕದ್ದೆಂದೂ ಗೊತ್ತುಮಾಡಲಾಯಿತು. ನಿಷ್ಪಕ್ಷಪಾತವಾದ ತನಿಖೆ ನಡೆಸಲು ಸಮಿತಿಯವರಿಗೆ ರಷ್ಯವು ಬೆಂಬಲ ನೀಡಲು ಸಿದ್ಧವಿದೆಯೇ ಎಂದು ಅಮೆರಿಕಾದ ಪ್ರತಿನಿಧಿಯು ರಷ್ಯಕ್ಕೆ ಸವಾಲು ಹಾಕಿರುತ್ತಾರೆ.

### ಸುಪ್ರೀಂ ಕೋರ್ಟಿಗೆ ಕಂಟೆಂಪ್ಟ್ ನೊಳಗಾದವನ ಅಪೀಲು

ರಾಮನಗರದ ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆಯಲ್ಲಿ ಕಳೆದ ವಾರ ಶಿಕ್ಷೆಗೆ ಗುರಿಯಾದ ... ಇವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅವಕಾಶ ಬೇಡಿ ಅರ್ಜಿ ಹಾಕಿಕೊಂಡಿರುತ್ತಾರೆಂದು ವರದಿಯಾಗಿದೆ. ಸುಪ್ರೀಂ ಕೋರ್ಟಿನಿಂದ ತಡೆ ಆಜ್ಞೆ ಬರುವವರೆಗೆ ತಮ್ಮನ್ನು ಜಾಮೀನಿನ ಮೇಲೆ ಬಿಡುವಂತೆ ಸೂಚಿಸಿ, ಇವರುಗಳು ಹೈಕೋರ್ಟಿಗೆ ಮತ್ತೊಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

## ಸಿಗರೇಟು, ಸಿಗಾರ್‌ಗಳ ಮೇಲೆ ರೂ॥ ೧೦ರ ತೆರಿಗೆ

### ಶಾಸನ ಸಭೆಯಲ್ಲಿ ಮಸೂದೆಯ ಮಂಡನೆ

ಸ್ವಂ ಸು ಪೂರೈ] ಬೆಂಗಳೂರು ೧೦

ಕೆಳಗಿನ ಶಾಸನ ಸಭೆಯಲ್ಲಿ ಈ ದಿನ ರೆವಿನ್ಯೂ ಮಂತ್ರಿ ಶ್ರೀ ಕೆ. ಮಂಜಪ್ಪನವರು ಮಸೂದೆಯೊಂದನ್ನು ಮಂಡಿಸಿ ಮಸೂದೆಯಲ್ಲಿ ತಿಳಿಸಲಾಗಿರುವಂತೆ ಸಿಗರೇಟ್, ಸಿಗಾರ್ ಮುಂತಾದ ಹೊಗೆ ಸೊಪ್ಪಿನ ಪದಾರ್ಥಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿಯನ್ನು ಸಂಸ್ಥಾನದಲ್ಲಿ ಜಾರಿಗೆ ತರುವ ಉದ್ದೇಶವನ್ನು ತಿಳಿಸಿದರು. ಅಗ್ಗವಾದ ಮತ್ತು ಕಡಿಮೆ ಬೆಲೆಯ ಸಿಗರೇಟಿಗೆ ರೂ॥ ೩೦, ಮತ್ತು ೧ ಆಣೆ, ಅದಕ್ಕೂ ಹೆಚ್ಚು ಬೆಲೆಯ ಸಿಗರೇಟು ಮತ್ತು ಸಿಗಾರ್‌ಗಳ ಮೇಲೆ ರೂ॥ ೬೦ ರಷ್ಟು ತೆರಿಗೆ ವಿಧಿಸಲಾಗುವುದೆಂದೂ, ಇದರಿಂದ ಸರ್ಕಾರಕ್ಕೆ ೨೫ ಲಕ್ಷ ರೂ. ಆದಾಯ ಬರುವ ನಿರೀಕ್ಷೆ ಇರುವುದಾಗಿಯೂ ಅವರು ಹೇಳಿ ಸಂಸ್ಥಾನದಲ್ಲಿ ಈ ಕಾನೂನನ್ನು ಜಾರಿಗೆ ತರದಿದ್ದರೆ ಕಳ್ಳತನದ ವ್ಯಾಪಾರ ಮತ್ತು ಅಕ್ರಮ ಸಾಗಾಣಿಕೆಗೆ ಅವಕಾಶವಾಗುವುದೆಂದು ಅಭಿಪ್ರಾಯಪಟ್ಟರು. ಬೇಗನೆ ಇದು ಅನ್ವಯಿಸುವುದೆಂದು ಹೇಳಿದರು.

ಮಸೂದೆಯನ್ನು ಚರ್ಚೆಗೆ ತಂದಿರುವುದಾಗಿ ಸಭೆಯ ವಿರೋಧ ಪಂಗಡದ ಸದಸ್ಯರಾದ ಶ್ರೀಗಳು ಗೋವಿಂದ ರೆಡ್ಡಿ, ಇಮಾಂ ಮತ್ತು ಮುದ್ದೇಗೌಡರವರು ಕ್ರಿಯಾಲೋಪ ಗಳನ್ನು ತಂದರು. ಅವನ್ನು ಸಭಾಧ್ಯಕ್ಷರು ತಳ್ಳಿಹಾಕಿದರು. ತೆರಿಗೆ ವಿಧಿಸಲು ಮಸೂದೆಗೆ ಕೇಂದ್ರದವರ ಪೂರ್ವಭಾವಿ ಅನುಮತಿ ಅವಶ್ಯಕವೆಂದು ಶ್ರೀ ರೆಡ್ಡಿಯವರು ಕೇಳಿದ್ದರು.

ಪ್ರಶ್ನೋತ್ತರದ ಕಾಲದಲ್ಲಿ ಮಂತ್ರಿ ಶ್ರೀ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ, ಕಳೆದ ಜುಲೈ ತಿಂಗಳಿಂದ ಇದೇ ಜನವರಿ ವರೆಗೆ ಸರ್ಕಾರಿ ಬಸ್ಸುಗಳಿಂದ ೨೪॥ ಲಕ್ಷ ರೂಪಾಯಿ ವರಮಾನ ಬಂದಿರುವುದಾಗಿ ತಿಳಿಸಿದರು. ಸಂಸ್ಥಾನದಲ್ಲಿ ಒಟ್ಟು ೨॥ ಲಕ್ಷ ನಿವ್ವಳ ವರಮಾನ ಸಂಸ್ಥೆಗಳಿಗಿರುವುದಾಗಿ ತಿಳಿಸಲಾಯಿತು.

## ಧಾರವಾಡಕ್ಕೆ ವ್ಯವಸಾಯದ ಕಾಲೇಜು ವರ್ಗ ?

### ಪ್ರಶ್ನೆಗೆ ಸರ್ಕಾರದ ಉತ್ತರ

ಸ್ವಂ ಸು ಪೂರೈ] ಬೆಂಗಳೂರು ೧೦

ಈ ದಿನ ಕೆಳಗಿನ ಶಾಸನ ಸಭೆಯಲ್ಲಿ ಹೆಬ್ಬಾಳದ ವ್ಯವಸಾಯ ಕಾಲೇಜನ್ನು ಧಾರವಾಡಕ್ಕೆ ವರ್ಗಾಯಿಸುವ ನಿರ್ಧಾರ ಮಾಡಿಲ್ಲವೆಂದೂ, ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಸಾಕಷ್ಟು ಇಲ್ಲದಿರುವುದರಿಂದ ಅದನ್ನು ಮುಚ್ಚಿ ಬಿಡುವುದು ಉಪಯುಕ್ತವಲ್ಲವೇ ಎಂಬುದನ್ನು, ಮುಂಬಯಿ ಬಳಿ ವಿಶ್ವವಿದ್ಯಾನಿಲಯ ಪ್ರದೇಶಕ್ಕೆ ವರ್ಗಾಯಿಸುವ ವಿಷಯವನ್ನು ಪರಿಶೀಲಿಸಲಾಗುತ್ತಿರುವುದೆಂದೂ ಶ್ರೀ ಸಚಿವ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

"ಸತ್ಯ" ಪತ್ರಿಕೆಯಲ್ಲಿ ಸಭೆಯ ಸದಸ್ಯರೊಬ್ಬರಿಗೆ ಸಂಬಂಧಿಸಿದಂತೆ ಬಂದಿರುವ ಒಂದು ಲೇಖನದ ಬಗ್ಗೆ ಶ್ರೀ ಎಂ. ಪಿ. ರಾಮುರವರಿಗೆ ಹಕ್ಕು ಬಾಧ್ಯತೆಯ ನಿರ್ಣಯವನ್ನು ತರಬಹುದೆಂದು ಸಭಾಧ್ಯಕ್ಷರು ತಿಳಿಸಿದರು.

### ತೆಲುಗು ಪ್ರದೇಶ ಆಂಧ್ರಕ್ಕೆ ಸೇರಿಸುವ ನಿರ್ಣಯ ವಾಪಸ್

ಆಂಧ್ರದ ಪಕ್ಕದಲ್ಲಿರುವ ಸಂಸ್ಥಾನದ ತೆಲುಗು ಪ್ರದೇಶಗಳನ್ನು ವಿಶಾಲ ಆಂಧ್ರ ಪ್ರಾಂತಕ್ಕೆ ಸೇರಿಸಬೇಕೆಂದು ಸೂಚಿಸುವ ನಿರ್ಣಯವೊಂದನ್ನು ಕೋಲಾರದ ಶ್ರೀ ಬಿ. ನಾರಾಯಣರೆಡ್ಡಿಯವರು ಕೆಳಗಿನ ಶಾಸನ ಸಭೆಯಲ್ಲಿ ಸೂಚಿಸಿದಾಗ, ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು, ಕೋಲಾರ ಮತ್ತು ಇತರ ಭಾಗದ ಜನರು ಮೈಸೂರಿನಲ್ಲಿರಲು ಆಸಕ್ತಿ ಹೊಂದಿರುವರೆಂದೂ, ನಿರ್ಣಯವು ರಾಜ್ಯಾಂಗದ ನಿಯಮಗಳಿಗೆ ವಿರುದ್ಧವಾಗಿರುವುದೆಂದೂ ಹೇಳಿದರು. ಸೂಚಕರು ನಿರ್ಣಯವನ್ನು ವಾಪಸು ಪಡೆದರು.

### ಜನಾನಿಗೆ ಮಹಿಳೆಯರ ನಿಯೋಗ?

ಹಿರಿಯ ಶಾಸನ ಸಭೆಯಲ್ಲಿ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ನಿರ್ಣಯವೊಂದನ್ನು ತಂದು ಒಬ್ಬ ಗ್ರಂಥಕರ್ತೆ, ಒಬ್ಬ ಕಲೆಗಾರ್ತಿ, ಒಬ್ಬ ವಿಜ್ಞಾನ ಶಾಸ್ತ್ರಜ್ಞೆ, ಒಬ್ಬ ಗೃಹಕೃತ್ಯ ನಡೆಸುತ್ತಿರುವ ಸ್ತ್ರೀ, ಒಬ್ಬ ಉಪಾಧ್ಯಾಯಿನಿ ಮತ್ತು ಒಬ್ಬ ಶಾಸನಸಭಾ ಸದಸ್ಯೆ ಇವರನ್ನೊಳಗೊಂಡ ಮಹಿಳೆಯರುಳ್ಳ ಒಂದು ನಿಯೋಗವನ್ನು ಜಪಾನಿಗೆ ಕಳುಹಿಸಿ ಅಲ್ಲಿನ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳನ್ನು ಅರಿಯಲು ಅವಕಾಶ ಕಲ್ಪಿಸುವಂತೆ ಕೋರಿದರು. ಅನೇಕ ಸದಸ್ಯರು ಮಾತನಾಡಿ, ಮಹಿಳೆಯರಿಗಾಗಿಯೇ ನಿರ್ದಿಷ್ಟ ಈ ನಿರ್ಣಯ ಪಕ್ಷಪಾತ ತೋರಿಸುವುದಾಗಿದೆಯೆಂದು ತಿಳಿಸಿದರು.

ವಿದ್ಯಾ ಮಂತ್ರಿಗಳು ನಿರ್ಣಯದ ತತ್ವವನ್ನು ಒಪ್ಪಿದರೂ, ಈಗ ಇರುವ ರೀತಿಯಲ್ಲಿ ನಿರ್ಣಯವನ್ನು ಒಪ್ಪಲು ಸಾಧ್ಯವಿಲ್ಲವೆಂದು ಹೇಳಿದರು. ನಿರ್ಣಯವು ವಾಪಸ್ ತೆಗೆದುಕೊಳ್ಳಲ್ಪಟ್ಟಿತು.

★ ಚಳ್ಳಕೆರೆಯಲ್ಲಿ ಮಿಡಲ್ ಸ್ಕೂಲ್ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ಪೈಕಿ ... ಸರಿಗ ನಿನ್ನೆ ... ಪ್ರಶ್ನೆ ಪತ್ರಿಕೆಗಳಿಗೆ ಬದಲು ... ವಿಜ್ಞಾನದ ಪತ್ರಿಕೆಗಳನ್ನು ಕೊಡಲಾಯಿತೆಂದು ದೂರಲಾಗಿದೆ

## ಮೈಸೂರು ನಗರದಿಂದ ಕೊಡಗಿಗೆ ರೈಲು ರಸ್ತೆ

### ಕಿರಿಯ ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು ೯

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ಮೈಸೂರು ನಗರ ಅಥವಾ ಕೃಷ್ಣರಾಜ ನಗರದಿಂದ ಕೊಡಗಿಗೆ ರೈಲು ರಸ್ತೆ ಹಾಕುವಂತೆ ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರು ಶಿಫಾರಸು ಮಾಡಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಶ್ರೀ ಡಿ. ದೇವರಾಜ ಅರಸಿನವರು ಮಾತನಾಡಿ ಮೈಸೂರು ಮತ್ತು ಕೊಡಗುಗಳ ನಡುವೆ ಜನ ಸಂಚಾರವು ಹೆಚ್ಚಿರುವುದರಿಂದ ರೈಲು ರಸ್ತೆಯು ಅವಶ್ಯಕವೆಂದು ತಿಳಿಸಿದರು. ರೆವಿನ್ಯೂ ಮಂತ್ರಿಗಳು ಮಾತನಾಡಿ ಸಧ್ಯದಲ್ಲೇ ಕೇಂದ್ರದವರು ಈ ರಸ್ತೆ ಹಾಕಲಾರರೆಂದು ಅಭಿಪ್ರಾಯಪಟ್ಟ [illegible] ರು

### ಚಕ್ರಬಂಧ ಪ್ರದೇಶಗಳಲ್ಲಿ ೩೦,೦೦೦ ರೂ ಪ್ರಥಮ ಬಹುಮಾನ ನಿಗದಿ

ಚಕ್ರಬಂಧ ಪ್ರದೇಶಗಳ [illegible] ಬಹುಮಾನದ [illegible] ಶಾಸನ ಸಭೆಯಲ್ಲಿ [illegible] ಮಂತ್ರಿಗಳು ತಿಳಿಸಿದರು

### ವಿದ್ಯಾ ಸುಧಾರಣಾ ಸಮಿತಿ ವರದಿ ತಡೆಯುವಂತೆ ಸೂಚನೆ

ಕೇಂದ್ರ ಸರ್ಕಾರದವರು [illegible] ಮಾಧ್ಯಮಿಕ ವಿದ್ಯಾಭ್ಯಾಸ ಸಮಿತಿಯ ವರದಿಯ [illegible] ಮೈಸೂರು ಸಂಸ್ಥಾನದ ವಿದ್ಯಾ ಸಭೆಯ ಸಮಿತಿಯ ವರದಿಯನ್ನು ಜಾರಿಗೆ ಕೊಡದಂತೆ ತಡೆಯಬೇಕೆಂದು ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರಕ್ಕೆ ಸೂಚಿಸಿರುವರೆಂದು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿರುತ್ತಾರೆ

### ಸರ್ಕಾರಿ ಅತಿಥಿ ಭವನಗಳ ಸೋಲ್ಪಿಚಾರಣೆ

ಮೈಸೂರು ಮತ್ತು ಬೆಂಗಳೂರಿನ ನಗರಗಳಲ್ಲಿರುವ ಸರ್ಕಾರಿ ಅತಿಥಿ ಭವನಗಳ ಜವಾಬ್ದಾರಿ ಮತ್ತು ನೋಲ್ವಿಚಾರಣೆಯನ್ನು [illegible]

### ಕಾಂಗ್ರೆಸಿನಲ್ಲಿ ಮುಖ್ಯವಾದ [illegible]

[illegible] ವನ್ನು [illegible] ಮಂತ್ರಿಯವರು [illegible] ಸ್ಥಾನಕ್ಕೆ ಪ್ರಮಾಣದ [illegible] ಹಳೆ ಮಟ್ಟದ ವರಮಾನ ಬರುವುದರಿಂದಲೂ ಮತ್ತು ಪ್ರವಾಸಿಗರಿಗೆ ಸೌಕರ್ಯದ ಅವಶ್ಯಕತೆಯಿರುವುದರಿಂದಲೂ ಈ ವಿಚಾರಕ್ಕೆ ಬರಲಾಗಿದೆಯೆಂದು ಅವರು ಹೇಳಿದರು

## ಕೊರಿಯಾ ಯುದ್ಧದಲ್ಲಿ ೫ ಲಕ್ಷ ಜನರ ಸಾವುನೋವು

೧೯೫೧ನೇ ಜುಲೈನಲ್ಲಿ ಕೊರಿಯಾ ಶಾಂತಿ ಮಾತುಕತೆಯು ಪ್ರಾರಂಭವಾದಾಗಿನಿಂದ ಇದುವರೆಗೆ ಎರಡು ಕಡೆಗಳಲ್ಲೂ ೫ ಲಕ್ಷ ಜನರು ಸಾವುನೋವಿಗೆ ಈಡಾಗಿರುವರೆಂದು ವರದಿಯಾಗಿದೆ

## ಬಳ್ಳಾರಿ ತಾಲ್ಲೂಕು ಆಂಧ್ರಕ್ಕೆ ಸೇರಲಿ

ಮದರಾಸಿನ ಮಾಜಿ ರೆವಿನ್ಯೂ ಮಂತ್ರಿ ಶ್ರೀ ಹೆಚ್. ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದಲ್ಲಿ ಕಳೆದ ೭ನೇ ತಾರೀ ಆಂಧ್ರರ ಸಭೆ ನಡೆದ [illegible] ಆ ತಾಲ್ಲೂಕನ್ನು ಆಂಧ್ರ ಸಂಸ್ಥಾನಕ್ಕೆ ಸೇರಿಸಬೇಕೆಂದು ಭಾರತ ಸರ್ಕಾರವನ್ನು ಕೋರಲಾಯಿತ

ಪರಿಕ್ಷಣೆ

[illegible]

## ಈಜಿಪ್ಟಿನ ಪ್ರಧಾನಿಗೆ ಸೈನ್ಯ ಶಿಕ್ಷಣ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಅವರ ಮಂತ್ರಿಮಂಡಲದ ಬಹು ಮಂದಿ ಸದಸ್ಯರು ಅಂಗ ಸಾಧನೆ, ಬಂದೂಕವನ್ನು ಹಾರಿಸುವುದು, ಮತ್ತು ಗ್ರನೇಡು ಮತ್ತು ಸಿಡಿತದ ವಸ್ತುಗಳನ್ನು ಪ್ರಯೋಗಿಸುವುದು ಇವೇ ಮುಂತಾದ ಸೈನ್ಯ ಶಿಕ್ಷಣವನ್ನು ಪಡೆಯುತಿರುವರು

### ವಸಂತ ಸಾಹಿತ್ಯೋತ್ಸವ

ಮೈಸೂರು ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ಬರುವ ತಿಂಗಳು ೩, ೪, ಮತ್ತು ೫ನೇ ತಾರೀಕುಗಳಲ್ಲಿ ವಸಂತ ಸಾಹಿತ್ಯೋತ್ಸವವನ್ನು ನಡೆಸಲು ವ್ಯವಸ್ಥೆಗಳಾಗುತ್ತಿವೆ ಆ ಸಂದರ್ಭದಲ್ಲಿ ಪ್ರಮುಖ ಸಾಹಿತಿಗಳಾದ ಶ್ರೀಗಳು ಕೆ. ವಿ. ಪುಟ್ಟಪ್ಪ, ಡಿ. ವಿ. ಗುಂಡಪ್ಪ, ಮಾಸ್ತಿ ವೆಂಕಟೇಶಯ್ಯಂಗಾರ್, ವರದಾ ಬೇಂದ್ರೆ, ಶಿವರಾಮ ಕಾರಂತ ಮತ್ತು ಗೋವಿಂದಪೈರವರು ಭಾಷಣಗಳನ್ನು ಮಾಡುವ ನಿರೀಕ್ಷೆಯಿದೆ. ಪುಸ್ತಕಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗುವುದು


[illegible]

ಅ ಮೋ ಘ ಹ ರಾ ಜು ಮಾ ರಾ ಟ

12- 4 53 ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ

[illegible]

123 [illegible]

ಅ ಜಿ [illegible] ದ್ಸ್,

[illegible] — — ಮೈಸೂರು

ಮೋತೀಲಾಲ್ ಟಾಕೀಸ್

( [illegible] ಮೈಸೂರು )

ತಾ|| 10.4 53 ರಿಂದ

[illegible]

ಪರಂಪವಳ್

(ಹೆಣ್ಣಿನ ಬಾಳು)

[illegible] — ಶ್ರೀರಾಮ್, ಟಿ ಆರ್ ರಾಜಕುಮಾರಿ, [illegible]

( [illegible]

ಪಣಕ್ಕಾರಿ [illegible] ರಾಜಕುಮಾರಿ


## ಮೈಸೂರು ಪೇಟೆ ಧಾರಣೆ

| | | | |
|---|---|---|---|
| [illegible] | [illegible] | [illegible] | [illegible] |

[illegible]

ಕಳೆದ ವಾರ [illegible] ಫ್ರೆಂಚ್ [illegible] ಕಾರ್ಖಾನೆಯಲ್ಲಿ [illegible] ಬೆಂಕಿ ತಗುಲಿ, ಅವುಗಳು [illegible] ಪರಿಣಾಮವಾಗಿ ೧೦ ಜನರು ಮೃತಪಟ್ಟು [illegible] ಜನರು ತೀವ್ರ ಗಾಯಗೊಂಡರು

### ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]


ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರ ಕ ಟ ಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿ [illegible] 14 ಮನೆಗಳ [illegible] ಒಂದು ಭಾಗ, ಅಂದರೆ 1762-8-0 [illegible] 1953 ರ ವರೆಗೆ [illegible]

( [illegible] ) ಎಸ್ [illegible]

ಅಧ್ಯಕ್ಷ

ಪ್ರಭಾ ★ [illegible] ವಾರ

[illegible] 10-4-53 [illegible] 4 ದಿನಗಳು ಮಾತ್ರ

[illegible]


Edited, Printed and Published by A R Nagarajan at Sadhvi Press, D Subbiah Road, Mysore

[illegible] ನಂ. ೨೫೨ ಪ್ರತಿ ಶನಿವಾರ [illegible] ಬಿಡಿ ಪ್ರತಿ 3 ಕಾಸು

# ಸಾಧ್ವಿ

ಸಂಪುಟ ೧೧ ] ಶನಿವಾರ ೧೧-೪-೧೯೫೩ [ ಸಂಚಿಕೆ ೨೦೬

# ಪ್ರಭುಗಳ ಆಸ್ತಿ ತೆರಿಗೆ ಮಸೂದೆ ಮುಂದಕ್ಕೆ

## ಅತಿ ರುದ್ರ ಹೋಮದ ಪೂರ್ಣಾಹುತಿ ಸಮಾರಂಭ

### ಒಂದನೆಯ ಅಲೆಕ್ಲಿನಿಂದ [illegible]

ಶೃಂಗೇರಿ ೧೦

೮-ನೆ ತಾರೀಖಿನಿಂದಲೂ ನಡೆಯುತ್ತಿದ್ದ ಅತಿ ರುದ್ರ ಮಹಾ ಯಾಗದ ಪೂರ್ಣಾಹುತಿ ಸಮಾರಂಭವು ನೆನ್ನೆ ಮಧ್ಯಾಹ್ನ ಎರಡೂವರೆ ಗಂಟೆಗೆ ಅತ್ಯಂತ ವೈಭವದಿಂದ ನೆರವೇರಿತು. ಶ್ರೀಮದ್ ಜಗದ್ಗುರುಗಳಾದ ಶ್ರೀ ವಿದ್ಯಾ ತೀರ್ಥ ಪ್ರಸನ್ನ ಸ್ವಾಮಿಗಳು ಸ್ವತಃ ನಿಂತು ಈ ಕಾರ್ಯವನ್ನು ನೆರವೇರಿಸಿದರು. ಇವರಲ್ಲದೆ ಶ್ರೀ ಶ್ರೀಧರ ಸ್ವಾಮಿಗಳೂ, ಶಿವ[illegible] ಸ್ವಾಮಿಗಳೂ ಮೊದಲಾದ ಅನೇಕ ಸನ್ಯಾಸಿಗಳೂ ಬಂದಿದ್ದರು. ಸುಮಾರು ೨೫ ಸಾವಿರ ಜನ ಆಸ್ತಿಕ ಮಹಾಜನರೂ, ಮಹಿಳೆಯರೂ ಸೇರಿದ್ದರು. ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ. ಮೇದಪ್ಪ, ಮದ್ರಾಸಿನ ಡಾ|| ಅಲಗಪ್ಪ ಚೆಟ್ಟಿಯಾರ್ ಮೊದಲಾದವರೂ ಇದ್ದರು.

ಶ್ರೀ ರುದ್ರ ಸ್ವಾಹಾಕಾರವು ನಭೋಮಂಡಲವನ್ನು ಭೇದಿಸುವಂತೆ ಘೋಷವಾಗುತ್ತಿದ್ದಿತು. ಪೂರ್ಣಾಹುತಿಗೆ ಅನರ್ಘ್ಯವಾದ ವಸ್ತ್ರಾಭರಣಗಳೂ, ಧನ ಕನಕ ವಸ್ತುಗಳೂ ರತ್ನಗಳೂ ಪಂಚ ಲೋಹಗಳೂ ವಿವಿಧವಾದ ಫಲಗಳೂ ಸಮರ್ಪಿಸಲ್ಪಟ್ಟವು.

ಯಜ್ಞವು ಆರಂಭವಾದಂದಿನಿಂದಲೂ ಆಗದಿದ್ದ ಮಳೆಯು ಗುಡುಗು, ಮಿಂಚು, ಆಲಿಕಲ್ಲುಗಳೊಡನೆ ಪೂರ್ಣಾಹುತಿಯಾದ ಐದು ನಿಮಿಷಗಳೊಳಗೆ ಪ್ರತ್ಯಕ್ಷವಾಗಿ ಬಂದು ನಗರದಲ್ಲೆಲ್ಲಾ ಇದ್ದ ವಿಪರೀತವಾದ ಕಾವನ್ನು ನಿವಾರಿಸಿ ತಂಪಿನ ವಾತಾವರಣವನ್ನುಂಟುಮಾಡಿತು. ಇಷ್ಟು ಶ್ರದ್ಧಾ ಭಕ್ತಿಗಳಿಂದ ನಡೆದಿರುವ ಈ ಮಹಾ ಕಾರ್ಯದಿಂದ ದೇವತೆಗಳೂ ಸಹ ಸುಪ್ರೀತರಾಗಿರುವುದೆಂಬುದಕ್ಕೆ ಈ ಅಪೂರ್ವ ಸಿರಿನಾದ ಮಳೆಯೇ ಗುರುತೆಂದು ಎಲ್ಲರೂ ಹೇಳುತ್ತಿದ್ದರು.

ನೆನ್ನೆ ರಾತ್ರಿ ಶ್ರೀ ಶಾರದಮ್ಮನವರ ರಥೋತ್ಸವವನ್ನು ವಿಶೇಷ ವೈಭವದಿಂದ ನಡೆಸಲಾಯಿತು. ಇದೇ ಮೊಟ್ಟ ಮೊದಲನೆಯದಾಗಿ ರಥವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದ್ದಿತು.

ಇದರ ಮುಂಭಾಗದಲ್ಲಿ ಶ್ರೀ ಶ್ರೀಗಳವರು ಅಷ್ಟ ಪಲ್ಲಕ್ಕಿಯಲ್ಲಿ ಬಿಜಯ ಮಾಡಿ, ಎಲ್ಲರಿಗೂ ದರ್ಶನವನ್ನೀಯುತ್ತಿದ್ದ ದೃಶ್ಯವು ನಯನಮನೋಹರವಾಗಿದ್ದಿತು. ನವರತ್ನ ಖಚಿತವಾದ ಕಿರೀಟವನ್ನೂ ಅಮೂಲ್ಯವಾದ ಪೀತಾಂಬರವನ್ನೂ ಅವರು ಧರಿಸಿದ್ದರು. ಬಂದಿದ್ದ ವೈದಿಕ ಶಿರೋಮಣಿಗಳು ವೇದ ಘೋಷಗಳನ್ನು ಮಾಡುತ್ತಿದ್ದರು.

## ಗಂಡನನ್ನು ಕಟ್ಟಿಹಾಕಿ ಪತ್ನಿಯ ಮಾನಭಂಗ

ಪಾವಗಡ ತಾಲ್ಲೂಕು [illegible]ಯ ಒಬ್ಬ ಪೋಲೀಸ್ ಕಾನ್ಸ್ಟೇಬಲನು [illegible] ಗ್ರಾಮಕ್ಕೆ ಹೋಗಿ ಗಂಡ ಹೆಂಡಿರನ್ನು ಅಲ್ಲಿನ ಆಂಜನೇಯ ದೇವಸ್ಥಾನಕ್ಕೆ ಕರೆದೊಯ್ದು ಗಂಡನನ್ನು ಕಟ್ಟಿಹಾಕಿ ಅವನ ಎದುರಿನಲ್ಲಿಯೇ ಪತ್ನಿಯ ಮೇಲೆ ಅತ್ಯಾಚಾರ ಮಾಡಿರುವುದಾಗಿ ತಿಳಿದುಬಂದಿದೆ.

## ನಗರದ ರೇಷನಿಂಗ್ ಸಿಬ್ಬಂದಿಯಲ್ಲಿ ಖೋತಾ

ಮೈಸೂರು ೧೧

ರಾಜಧಾನಿಯ ರೇಷನಿಂಗ್ ಕಛೇರಿ ಸಿಬ್ಬಂದಿಯಲ್ಲಿ ರೂ|| ೫೦ ಲಕ್ಷವನ್ನು ಈ ಕೂಡಲೇ ಖೋತಾ ಮಾಡಬೇಕೆಂದು ಸರ್ಕಾರದವರು ಮೈಸೂರು ಜಿಲ್ಲಾಧಿಕಾರಿಗಳಿಗೆ ಸೂಚಿಸಿರುವರೆಂದು ವರದಿಯಾಗಿದೆ.

## ಬಳ್ಳಾರಿಯಲ್ಲಿ ಕನ್ನಡಿಗರ ಅಸಹಕಾರ ಚಳುವಳಿ

ಬಳ್ಳಾರಿ ಜಿಲ್ಲೆಯ ವಿಭಜನೆ ಮತ್ತು ಬಳ್ಳಾರಿ ತಾಲ್ಲೂಕನ್ನು ಆಂಧ್ರಕ್ಕೆ ಸೇರಿಸುವ ಯೋಜನೆಗಳನ್ನು ಪ್ರತಿಭಟಿಸಲು ಅಸಹಕಾರ ಚಳುವಳಿಯನ್ನು ನಡೆಸುವುದೇ ಉಳಿದ ಮಾರ್ಗವೆಂದು ಬಳ್ಳಾರಿ ಕನ್ನಡಿಗರು ತೀರ್ಮಾನಿಸುವುದಾಗಿ ವರದಿಯಾಗಿದೆ. ಕಾರ್ಪೊರೇಷನ್ ಚುನಾವಣೆಗಳಲ್ಲಿ ಅಧಿಕಾರಿಗಳಿಗೆ ಸಹಕಾರ ನೀಡದಿರುವುದು, ಈ ಪ್ರದೇಶದ ಸುತ್ತಮುತ್ತಲೂ [illegible] [illegible] ಕಾರ್ಯಕ್ರಮವೆಂದು ತಿಳಿದುಬಂದಿದೆ.

ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ ತಾಲ್ಲೂಕುಗಳ [illegible] ಸ್ಥಾನಗಳನ್ನು [illegible] ನಗರ ಪ್ರದೇಶಗಳ ನಡುವೆ ರೈಲು ಕಂಬಿಗಳ ಫಿಷ್ ಪ್ಲೇಟುಗಳನ್ನು ತೆಗೆದು ರೈಲು [illegible] ಮಾಡಬೇಕೆಂದು ಹೇಳಲಾಗಿದೆ.

ಬಳ್ಳಾರಿಯ ಭವಿಷ್ಯದ ಬಗ್ಗೆ ಭಾರತ ಸರ್ಕಾರದ ತೀರ್ಮಾನವನ್ನು ಪ್ರತಿಭಟಿಸಿ ಬಂದ್ [illegible] ಸಭೆಯಲ್ಲಿ [illegible] ಮಾಡಲಾಗಿದೆ.

## ಲಂಡನ್ನಿನಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ಭೇಟಿ

ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿ ಮಂತ್ರಿಗಳ ಭೇಟಿಯು ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ನಡೆಯುವ ಸಂಭವವಿರುವುದೆಂದು ವರದಿಯಾಗಿದೆ.

## ಮೈಸೂರು ಶಾಸನ ಸಭೆಗಳಿಗೆ ಪ್ರೈವೇಟ್ ಸೆಕ್ರೆಟರಿ ಮೇಲೆ ನ್ಯಾಸ್ತಿ [illegible]

